M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೪ | ಉಡುಪಿ, 4—11—1954 | ಸಂಚಿಕೆ ೧೦

VOL. 34 | NO. 10

ಸಂಪಾದಕೀಯ

ನಮ್ಮ ನ್ಯಾಯಸ್ಥಾನಗಳ ಮುಂದೆ ಶಾಸನಾಂಗಗಳಿಂದ ಮನ್ನಿಸಲ್ಪಟ್ಟ ಕಾಯಿದೆಗಳ ಘಟನಾತ್ಮಕ ಕ್ರಮಬದ್ಧತೆಯ ಪ್ರಶ್ನೆಯೂ ಕಾರ್ಯಾಂಗದ ಆಜ್ಞೆಯ ನ್ಯಾಯಾನ್ಯಾಯ ವ ಪಜ್ಞಾರವೂ ಪ್ರಜೆಯ ಹಕ್ಕು ಬಾಧ್ಯತೆಗಳ ರಕ್ಷಣೆಯ ವಿಷಯವೂ ಬಂದಾಗ ಸರಕಾರದ ವಿರುದ್ಧವಾಗಿಯಾದರೂ ನ್ಯಾಯಸಮ್ಮತವಾದ ತೀರ್ಪನ್ನು ಹೇಳಲು ನ್ಯಾಯಾಧೀಶರು ಹಿಂಜರಿದಿಲ್ಲ; ಹಾಗೆಯೇ ಈ ತೀರ್ಪುಗಳು ತಮ್ಮ ಉದ್ದೇಶಕ್ಕೆ ಭಂಗ ತರುವಂತಿದ್ದರೂ ಕೇಂದ್ರ ಹಾಗು ರಾಜ್ಯಸರಕಾರಗಳೂ ಉಳಿದವರೂ ಅವನ್ನು ಸ್ವೀಕರಿಸುವುದಕ್ಕೆ ತಪ್ಪಿಲ್ಲ.

—ರಾಜೇಂದ್ರ ಪ್ರಸಾದ.

ವರಿಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾದ ನೆಹರೂಜಿಂದ ಮಹಾಜನರು ಕೇಂದ್ರ ಗೃಹ ಶಾಖೆಗೆ ಬರೆದಿದ್ದೂಂದು ಪತ್ರದಲ್ಲಿ ಇಂದಿನ ಶಾಸನ ಸಭೆಗಳು ಬಹಳ ಸಂಕೀರ್ಣವಾದ ಕಾಯಿದೆಗಳನ್ನು ಮಾಡುತ್ತಿವೆಯೆಂದೂ ಅವುಗಳನ್ನು ಅರ್ಥ ಮಾಡಿಕೊಳ್ಳಲು ಜನ ಸಾಮಾನ್ಯರಿಗೆ ಕಷ್ಟವಾಗುವುದೆಂದೂ ಹೇಳಿದ್ದರು. ಪ್ರಜೆಗಳ ಕಲ್ಯಾಣವನ್ನು ಮಾಡಬೇಕೆಂಬ ಹೆಬ್ಬಯಕೆಯಿಂದ ನಮ್ಮ ಶಾಸನಾಂಗಗಳು ದಿನವೂ ಹೊಸ ಕಾಯಿದೆಗಳನ್ನು ಮಾಡುತ್ತಿದ್ದು, ಪರಿಣಾಮದಲ್ಲಿ ವ್ಯಕ್ತಿಯ ಪ್ರತಿಯೊಂದು ನಡವಳಿಕೆಯ ಮೇಲೆ ರಾಜ್ಯದ ನಿಯಂತ್ರಣಗಳನ್ನು ಹೇರಿದಂತಾಗಿದೆಯೆಂದರೆ ಅತಿಶಯೋಕ್ತಿಯಾಗದು. ತಾವು ಏನು ಮಾಡಬಹುದು, ಮಾಡಬಾರದು ಎಂಬ ವಿಚಾರವನ್ನು ನಾಗರಿಕರು ಸುಲಭದಲ್ಲಿ ತಿಳಿದಿರಲಾರದಷ್ಟು ಕಾಯಿದೆಗಳ ವ್ಯಾಪ್ತಿಯು ಹೆಚ್ಚಿರುತ್ತದೆ. ಜನರ ಒಳಿತಿಗಾಗಿ ರೂಪಿಸಲಾದ ಈ ಕಾಯಿದೆಗಳು ಅನೇಕ ವೇಳೆ ಅವರನ್ನು ಕ್ರೂರ ನಿಯಂತ್ರಣದಲ್ಲಿ ಇಡುತ್ತವೆ, ಮತ್ತು ಅನೇಕ ಅಡಚಣಿಗಳನ್ನು ತಂದೊಡ್ಡುತ್ತವೆ. ಶಾಂತ ರೀತಿಯಲ್ಲಿ ಭದ್ರ ವ್ಯವಹಾರವನ್ನು ಮಾಡುತ್ತಿರುವ ದಕ್ಕೂ ನಮ್ಮ ಕಾಯಿದೆಗಳಿಂದ ತೊಂದರೆಯಾಗುತ್ತಿರುವುದೂ ವಿರಳವಲ್ಲ

ಕಾಯಿದೆಗಳ ಬಂಧನವು ಅನಿವಾರ್ಯವೆಂದೂ ರಾಜ್ಯದ ಆಜ್ಞೆಯು ಅನಾವಶ್ಯವೆಂದೂ ಪ್ರತೀತವಾದ ಸಂದರ್ಭಗಳಲ್ಲಿಲ್ಲ ನ್ಯಾಯಸ್ಥಾನಗಳ ಮುಂದಿ ಪ್ರಶ್ನೆಯನ್ನೊಯ್ಯಲು ಭಾರತದ ಘಟನೆಯ ಪ್ರಕಾರ ಪ್ರಜೆಗಳಿಗೆ ಅಧಿಕಾರ ಕೊಡಲ್ಪಟ್ಟಿರದಿರುತ್ತಿದ್ದರೆ, ನಾವು ಎಷ್ಟು ತೊಂದರೆಗಳನ್ನು ಅನುಭವಿಸಬೇಕಾಗಿ ಬರುತ್ತಿತ್ತೋ, ಹೇಳಲು ಬಾರದು. ಸುಯೋಗದಿಂದ ನ್ಯಾಯಾಂಗ ವ್ಯವಸ್ಥೆಯನ್ನು ಇತರ ವರ್ಚಸ್ಸಿನಿಂದ ಕೆಡದಂತೆ ಸ್ವತಂತ್ರವಾಗಿ ಇರಗೊಳಿಸಿದ್ದರಿಂದ ಸಾಕಷ್ಟು ಅನುಕೂಲವಂತರಾದ ಭಲವಾದಿಗಳೂ ನ್ಯಾಯ ನಿಷ್ಠುರರೂ ಆನ್ಯಾಯವನ್ನು ಪ್ರತಿಭಟಿಸುವುದು ಸಾಧ್ಯವಾಯಿತು. ಆದರೆ ಎಲ್ಲ ಪ್ರಜೆಗಳಿಗೆ ಶ್ರೇಷ್ಠ ನ್ಯಾಯ ಸ್ಥಾನದ ಮೆಟ್ಟಲನ್ನೇರುವಷ್ಟು ಹಣದ ಸೌಕರ್ಯವಿರುವುದು ಕಷ್ಟ. ಹೀಗಾಗಿ ಕೆಚ್ಚಿನ ಪ್ರಜೆಗಳು ಕಾಯಿದೆಯ ನ್ಯಾಯಬದ್ಧತೆಯನ್ನು ವಿಚಾರಿಸದೆ, ಆದಕ್ಕೆ ವಿಧೇಯತೆಯನ್ನು ತೋರಿಸಿಯೇ ಸುಮ್ಮನಿರಬೇಕಾಗುತ್ತದೆ. ಆದುದರಿಂದ " ನಾವು ತಪ್ಪಿ ಬಿದ್ದಿದ್ದರೆ ನ್ಯಾಯಸ್ಥಾನಗಳ ಮುಂದೆಹೋಗಿ ಳುಇದು ಸರಿ–ಆದು ಸರಿಯಲ್ಲ ಎಂದು ಒಮ್ಮೆ ಹೇಳಿದರೆ, ಆ ಮೇಲೆ ಆದರ ವಿರುದ್ಧ ನಾವು ಯಾರೂ ಆಕ್ಷೇಪಣೆಯನ್ನು ಎತ್ತುವುದೇ ಸಾಧ್ಯವಿಲ್ಲ ಇಂಥ ನ್ಯಾಯ ಸ್ಥಾನವು ಅನೇಕ ಶಾಸನಗಳ ವಿಷಯದಲ್ಲಿ ಅವು ಕ್ರಮಬದ್ಧವಾಗಿಲ್ಲವೆಂದು ತೀರ್ಪುಕೊಟ್ಟು ದನ್ನು ನೋಡಿದರೆ, ಜನರಿಂದ ಚುನಾಯಿತರಾದ ಪ್ರತಿನಿಧಿಗಳು ಸಾಕಷ್ಟು ದಕ್ಷತೆಯನ್ನು ವಹಿಸುತ್ತಿಲ್ಲವೆಂದೂ ವಿಷಯದ ಪೂರ್ವಾಪರ ವಿವೇಚನೆಯನ್ನು ಕೂಲಂಕುಷವಾಗಿಮಾಡುತ್ತಿಲ್ಲವೆಂದೂ ಮನವರಿಕೆಯಾಗುತ್ತದೆ.

ಶಾಸನಗಳನ್ನು ಮಾಡುವಾಗ ಮಂತ್ರಿ ಮಹೋದಯರುಗಳು ಕಾಯಿದೆ ತಜ್ಞರ

ಲೋಪ ದೋಷಗಳ ಕಂತೆ

ಯೂರು ಸರಿಎಂಬ ನಿರ್ಣಯವನ್ನು ಮಾಡಿರಿ "ಎಂದು ಶಾಸನ ಕರ್ತರು ಹೇಳಿದ ಮಾತ್ರಕ್ಕೆ ನ್ಯಾಯವನ್ನು ಎತ್ತಿ ಹಿಡಿದಂತಾಗಲಾರದು.

ಈಚೆಗೆ ನಮ್ಮ ನ್ಯಾಯ ಸ್ಥಾನಗಳ ಮುಂದೆ ಕೊಂಡು ಹೋದ ವಿವಾದಾಸ್ಪದ ವಿಷಯಗಳಲ್ಲಿ ಹೆಚ್ಚು ಕಡಿಮೆ ಅರೆವಾಸಿಯಷ್ಟಾದರೂ ಪ್ರಸಂಗಗಳಲ್ಲಿ ತೀರ್ಪುಗಳು ಸರಕಾರದ ವಿರುದ್ಧ ಕೊಡಲ್ಪಟ್ಟಿರುವುದನ್ನು ಗಮನಿಸಿದರೆ, ನಮ್ಮ ಶಾಸನ ಕರ್ತರು ಬಹಳ ಎಚ್ಚರಿಕೆಯಿಂದ ತಮ್ಮ ಹೊಣೆಗಾರಿಕೆಗಳನ್ನು ನಿರ್ವಹಿಸಬೇಕೆಂದು ಸಿದ್ಧವಾಗಿತ್ತದೆ ಸವಿತ್ರವಾದ ಘಟನೆಯ ಆಶಯಗಳಿಗೆ ವಿರುದ್ಧವಾದ ಕಾಯಿದೆಗಳನ್ನು ನಮ್ಮ ಶಾಸನಾಂಗಗಳು ಮಾಡುತ್ತಿವೆಯೆಂಬುದು ನ್ಯಾಯ ಸ್ಥಾನಗಳು ಅಭಿಪ್ರಾಯಪಟ್ಟ ಸಂದರ್ಭಗಳು ಅನೇಕ ವಿರುತ್ತವೆ. ವರಿಷ್ಠ ನ್ಯಾಯ ಸ್ಥಾನ ಸಲಹೆಗಳನ್ನು ತೆಗೆದುಕೊಳ್ಳುವುದು ಸಂಪ್ರದಾಯ: ಹಾಗೆ ವಿಧೇಯಕಗಳನ್ನು ಸಿದ್ಧಪಡಿಸುವುದು ಕಾಯಿದೆ ತಜ್ಞರೂ ಅವುಗಳನ್ನು ಪರಿಶೀಲಿಸುವ ಶಾಸನ ಕರ್ತರೂ ಅವುಗಳ ಕ್ರಮಬದ್ಧತೆಯ ವಿಷಯದಲ್ಲಿ ಸಾಕಷ್ಟು ಪೂರ್ವಾಲೋಚನೆಯನ್ನು ಮಾಡುತ್ತಿಲ್ಲವೇ ಏನೆಂದು ನಾಗರಿಕರು ಸಂಶಯಪಟ್ಟರೆ ಅದರಲ್ಲಿ ತಪ್ಪೇನೂ ಇರಲಾರದು ಸಾಮಾನ್ಯವಾಗಿ ಶಾಸನ ಸಭೆಗಳ ಮುಂದೆ ವಿಧೇಯಕಗಳನ್ನು ಮಂಡಿಸುವವರು ಒಂದು ನಿಶ್ಚಿತ ಧ್ಯೇಯವನ್ನು ಇಟ್ಟುಕೊಂಡಿದ್ದು ಅದಕ್ಕೆ ತಡೆಯಾಗಿರುವ ಯಾವ ಅಂಶವನ್ನೂ ಲೆಕ್ಕಿಸದಷ್ಟು ದುಡುಕುತ್ತಾರೆ. ಶಾಸೇರಿದೆ ವಾತಾವರಣದಲ್ಲಿ, ಪಕ್ಷ ಪಂಗಡಗಳ ರಾಜಕೀಯ ವಿಚಾರ ಸ್ಪರ್ಧೆಯಿಂದ ತುಮುಲದಲ್ಲಿ, ಬಹಳ ಅವಸರದಲ್ಲಿ ಶಾಸನ ಕರ್ತರು ವಿಧೇಯಕದ ಬೇರೆ ಬೇರೆ ವಿಚಾರಗಳನ್ನು ಚರ್ಚಿಸುತ್ತಾರೆ. ಒಟ್ಟಾರೆ ಸಮಗ್ರತೂಕದ ದೃಷ್ಟಿಯನ್ನು ಅವರಾರೂ ಪಡೆದಿಲ್ಲ; ನ್ಯಾಯದ ತಕ್ಕಡಿಯನ್ನು ಎತ್ತಿ ಹಿಡಿಯಬೇಕೆಂಬ ಅಪೇಕ್ಷೆಯೂ ಅಲ್ಲಿ ಅಷ್ಟು ತೀವ್ರವಾಗಿರುವುದಿಲ್ಲ. ಕ್ಷಣಿಕ ಸ್ಫೂರ್ತಿಯೂ ಪಕ್ಷ ನಿಷ್ಠೆಯೂ ರಾಜಕೀಯ ವಿಚಾರಗಳೂ ವಿಧೇಯಕದ ಮೇಲೆ ಪರಿಣಾಮ ಮಾಡುತ್ತವೆಯೇ ಹೊರತು, ನ್ಯಾಯದ ಪ್ರಶ್ನೆಯನ್ನು ಆಲೋಚಿಸಲು ಹೋಗುವವರು ಬಹಳ ವಿರಳ.

ಇದೇ ಮಾತನ್ನು ಕಾರ್ಯಾಂಗದ ಅಧಿಕಾರಿಗಳ ಆಜ್ಞೆಗೂ ಅನ್ವಯಿಸಬಹುದು. ಸಂಕೀರ್ಣವಾದ ಕಾಯಿದೆಗಳ ಆರ್ಥವನ್ನು ತಿಳಿಯುವುದು ಜನರಿಗೆಷ್ಟು ಕಷ್ಟವೆನಿಸುತ್ತದೋ ಸರಕಾರದ ಅಧಿಕಾರಿ ವರ್ಗಕ್ಕೂ ಅವುಗಳು ಕಾಸದಾಯಕವಾಗಿತೋರುತ್ತವೆ. ಆದುದರಿಂದ ತಮಗೆ ತಿಳಿದಂತೆ, ಅಥವಾ ಹೊಳೆದಂತೆ, ಅವರು ಶಾಸನವನ್ನು ಜ್ಯಾರಿಗೆ ತರಲು ನೋಡುತ್ತಾರೆ. ಅಂಥ ಸಂದರ್ಭಗಳಲ್ಲಿ ಶಾಸನಕರ್ತರ ಉದ್ದೇಶವೂ ನ್ಯಾಯದ ಮುಖವೂ ಹಿನ್ನೆಲೆಗೆ ಸರಿಯುವುದೇ ಹೆಚ್ಚಿಂದು ನಮ್ಮ ಅನುಭವದಿಂದ ಹೇಳಬಹುದು. ಆದರೆ ನ್ಯಾಯ ಸ್ಥಾನಗಳ ಮಟ್ಟಿಗೆ ಇಂಥ ಅರೋಪವನ್ನು ಮಾಡುವಂತಿಲ್ಲ—ಏಕೆಂದರೆ ಅವುಗಳು ಬಹಳ ಶಾಂತವಾದ ವಾತಾವರಣದಲ್ಲಿ ಅಬಾಧಿತವಾಗಿ ತಮ್ಮ ಕೆಲಸವನ್ನು ನಡೆಸುತ್ತವೆ; ಇಕ್ಕಡೆಯವರ ಹೇಳಿಕೆಯನ್ನೂ ಕೇಳಿಕೊಂಡು ಯಾವದೇ ದಾಕ್ಷಿಣ್ಯ, ಪಕ್ಷಪಾತ, ಒತ್ತಾಯ ಮತ್ತು ಹೆದರಿಕೆಗಳಿಲ್ಲದೆ ತೀರ್ಮ ಹೇಳುವಷ್ಟು ಅವು ಸ್ವಾತಂತ್ರ್ಯವನ್ನು ಹೊಂದಿರುತ್ತವೆ. ಆದುದರಿಂದ ನ್ಯಾಯಸ್ಥಾನವೇ ತಪ್ಪಿದೆಯೆಂಬ ತಿರುಬೊಬ್ಬೆಯನ್ನು ಹೊಡೆದ ಪಕ್ಷದಲ್ಲಿ ಅದು ಹಾಸ್ಯಾಸ್ಪದವೆನಿಸುತ್ತದೆ.

ಪರಿಸ್ಥಿತಿ ಹೀಗಿರುವಾಗ ಶಾಸನಗಳನ್ನು ರಚಿಸುವವರು ಘಟನೆಯ ಆಶಯ—ಆ ದೇಶಗಳಿಗೆ ತಾವು ನ್ಯಕರಿಕ್ತವಾಗಿ ಹೋ

(ಬೇರೆ ಪುಟ ನೋಡಿರಿ)

ಸಾಮಾನ್ಯ ಜ್ಞಾನ

ಒಬ್ಬರು ರಾಜಕೀಯ ಧುರೀಣರು ಆರ್ಥಿಕ ಆದಾರ ಬೆಳೆಸುವ ವಿಷಯದಲ್ಲಿ ದೀರ್ಘವಾದ ಉಪನ್ಯಾಸವನ್ನು ಮಾಡುತ್ತಿದ್ದರು. ಸಿರಿವಂತರ ಮುಂದೆ ಕೃಷಿಯ ಸಮಸ್ಯೆಯ ದಲ್ಲಿ ತಮಗೇನೂ ಹೆಚ್ಚಿನ ಅನುಭವವಾಗಲೀ ಜ್ಞಾನವಾಗಲೀ ಇಲ್ಲವೆಂದು ಅವರು ಒಪ್ಪಿಕೊಂಡರು. ಅದೂ ಜನರ ತಿಳಿವಳಿಕೆಗಾಗಿ ತಾವು ಧುರೀಣರಾಗಿರುವ ಪುಟ್ಟವನ್ನು ವಿವರಿಸುವುದಾಗಿ ಹೇಳುತ್ತಾ "ಪ್ರತಿಯೊಬ್ಬನೂ ಪ್ರತಿಯೊಂದೂ ಎಕ್ಕೆ ಭೂಮಿಯಲ್ಲಿ, ಅದು ಎಷ್ಟೇ ಚಿಕ್ಕದಾಗಿರಲಿ, ಆಹಾರ ಧಾನ್ಯಗಳನ್ನು ಬೆಳೆಸುವುದು ಆಗತ್ಯ" ಎಂದು ಸಾರಿದರು.

THE CANARA INDUSTRIAL & BANKING SYNDICATE LTD.
Estd: 1925 H. O: UDIPI, S. India

ಖರ್ಚಿಲ್ಲದೆ ಪಡಣ ಕಳುಹಿಸಬೇಕೆ?

ಮುಂಬಯಿಯ ನಾಗರಿಕರು ಈ ಕಡೆ ಗಮನಿಸಿರಿ.

ರತ್ನಗಿರಿ, ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಮಲಬಾರು ಜಿಲ್ಲೆಗಳ ಪ್ರಾಮುಖ್ಯ ನಗರಗಳಲ್ಲಿರುವ ತಮ್ಮ ಒಂಭತ್ತು ಮಿತ್ರರಿಗೆ ಕಾಲಕಾಲಕ್ಕೆ ಹಣ ಕಳುಹಿಸುವ ಮುಂಬಯಿಯ ನಮ್ಮ "ಸೇರಿಂಗ್ಸ್ ಬ್ಯಾಂಕ್ ಡೆಪಾಜಿಟ್"ದಾರರ ಅನುಕೂಲತೆಗಾಗಿ ಖರ್ಚಿಲ್ಲದೆ ಹಣ ಕಳುಹಿಸುವ ವ್ಯವಸ್ಥೆ ವಾಡಲಾಗಿರುವುದೆಂಬುದನ್ನು ಬಲ್ಲಿರಾ? ಹಣ ಕಳುಹಿಸುವ ಕಷ್ಟನಷ್ಟಗಳನ್ನು ನಮ್ಮ ಗಿರಾಕಿಗಳಿಗೆ ತಪ್ಪಿಸಬೇಕೆಂಬುದೇ ಈ ಏರ್ಪಾಡಿನ ಉದ್ದೇಶ ಕುಟುಂಬದ ದಾನ ಸ್ವಂತ ಉಪಯೋಗಕ್ಕಾಗಿ ಮಾತ್ರ ಈ ಧರ್ಮಾರ್ಥ ಸೌಲತ್ತನ್ನು ಪಡಕೊಳ್ಳಬೇಕಾಗಿ ವಿನಂತಿ. ಹೆಚ್ಚಿನ ಮಾಹಿತಿಯನ್ನು ಸಮೀಪದ ನಮ್ಮ ಯಾವುದೇ ಕಾಯಿಲಿಂದ ಪಡೆದುಕೊಳ್ಳಿರಿ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್,
[ಪ್ರಧಾನ ಕಛೇರಿ: ಉಡುಪಿ, ದ. ಭಾರತ.
ಸ್ಥಾಪನೆ: ೧೯೨೫]

ಗಣಿ ಹಾಗು ಲೋಹ ಸಂಶೋಧನ ಕಾರ್ಯ

ನಮ್ಮಲ್ಲಿಯ ಖನಿಜ ಸಂಪತ್ತಿನ ಪ್ರಮಾಣ ಮತ್ತು ಪ್ರಯೋಜನ

ರಾಷ್ಟ್ರದ ಮುನ್ನಡೆಯ ಕುರಿತು ಯೋಜನೆ ಕೈಗೊಳ್ಳುವಾಗ ನಾವು ಮೊತ್ತಮೊದಲಾಗಿ ಲಭ್ಯವಿರುವ ಖನಿಜ ಸಂಪತ್ತುಗಳ ಅಂದಾಜನ್ನು ಮಾಡಿಕೊಳ್ಳಬೇಕಾಗುತ್ತದೆ. ಆಧುನಿಕ ಕಾಲದಲ್ಲಿ ರಾಷ್ಟ್ರದಲ್ಲಿ ಬಳಸಲಾಗುವ ಲೋಹಗಳ ವೈವಿಧ್ಯ ಮತ್ತು ಪ್ರಮಾಣವನ್ನೆ ಆಲ್ಲಿಯ ಪ್ರಗತಿಯ ಮಾನದಂಡನಾಗಿ ಉಪಯೋಗಿಸಲಾಗುತ್ತದೆ. ಪ್ರಾಚೀನ ಕಾಲದಲ್ಲಿ ಭಾರತೀಯರು ಬಗೆ ಬಗೆಯ ಲೋಹಗಳಿಂದ ನಾನಾ ತೆರನಾದ ವಸ್ತುಗಳನ್ನು ಉಪಯೋಗಿಸುತ್ತಿದ್ದರೆಂಬ ವಿಷಯವು ಉತ್ಖನನ ಕಾಲದಲ್ಲಿ ನಮಗೆ ದೊರೆತ ಅನೇಕ ಲೋಹ ಸಾಮಾಗ್ರಿಗಳಿಂದ ತಿಳಿದು ಬರುತ್ತದೆ. ನಮ್ಮ ಪುರಾತನ ನಾಗರಿಕತೆಯ ದ್ಯೋತಕವೆಂಬ ಈ ವಸ್ತುಗಳನ್ನು ಕರೆದರೂ ತಪ್ಪಲ್ಲ. ಇವುಗಳಲ್ಲದೆ ಹಿಂದಿನವರು ಕೆಲಸ ಮಾಡಿ ಬಿಟ್ಟ ಅನೇಕ ಹಳೆಯ ಗಣಿಗಳೂ ನೋಡಸಿಕ್ಕೆದ್ದು, ಭಾರತೀಯರಿಗೆ ಲೋಹ ಕೈಗಾರಿಕೆಯ ಮೇಲೆ ಒಳ್ಳೆಯ ಪ್ರಭುತ್ವವಿತ್ತೆಂಬುದನ್ನು ಪುಷ್ಟೀಕರಿಸುವುದಕ್ಕೆ ಇವೂ ನೆರವಾಗುತ್ತವೆ.

ಆದರೆ ಕಾರಣಾಂತರಗಳಿಂದ ಇತರ ಕೈಗಾರಿಕೆಗಳಲ್ಲಿ ಹೇಗೋ ಲೋಹ ವಿದ್ಯೆಯಲ್ಲೂ ಪಾಶ್ಚಾತ್ಯ ರಾಷ್ಟ್ರಗಳಿಗಿಂತ ನಾವು ಹಿಂದೆ ಬಿದ್ದದು ಶೋಚನೀಯವಾದ ವಿಷಯ. ನಾನೇನಾದರೂ ಪ್ರಗತಿಯನ್ನು ಸಾಧಿಸಿದ್ದರೆ, ಅದು ಈ ಗತಮಾನದ ಮೊದಲಿನಿಂದ ಎಂದು ಹೇಳಬಹುದು. ಆಧುನಿಕ ರೀತಿಯ ಗಣಿ ಹಾಗು ಸಂಶೋಧನಾ ಕಾರ್ಯದಲ್ಲಿ ಆಗ ಮಾಡಿದ ಪ್ರಯತ್ನವನ್ನು ತೊಡಗಲಾಯಿತು. ಅಂದಿನಿಂದ ಇಂದಿನ ವರೆಗೆ ಸಾಧಿಸಿದ ಪ್ರಗತಿಯು ಸ್ಪೃಹಣೀಯವಾಗಿದ್ದರೂ ದೇಶದ ವೈಶಾಲ್ಯವನ್ನು ನೋಡಿದರೆ, ಮತ್ತು ಪಾಶ್ಚಾತ್ಯ ರಾಷ್ಟ್ರಗಳ ಸ್ಥಿತಿಯನ್ನು ಅವಲೋಕಿಸಿದರೆ, ನಮ್ಮ ಗುರಿಯು ಇನ್ನೂ ಎಷ್ಟೋ ದೂರವಿರುವಂತೆ ಭಾಸವಾಗುತ್ತದೆ. ಇದು ನಿರಾಶೆಯ ಮಾತೆಂದು ತೋರಬಹುದು—ಆದರೆ, ಹಾಗೆ ತಿಳಿದುಕೊಳ್ಳದೆ, ಲೋಹ ಉತ್ಪಾದನೆಯಲ್ಲಿ ಹೆಚ್ಚಿನ ನೈಪುಣ್ಯ ಪಡೆಯುವ ಮುತ್ತು ಲೋಹ ಕೈಗಾರಿಕೆಯನ್ನು ಅಭಿವೃದ್ಧಿಪಡಿಸುವ ಕಡೆಗೆ ಗಮನವನ್ನು ಹರಿಯಿಸಬೇಕಾದದ್ದೇ ನಮ್ಮ ಈಗಿನ ಮುಖ್ಯ ಕರ್ತವ್ಯ.

ಕೈಗಾರಿಕಾ ಕ್ಷೇತ್ರದಲ್ಲಿ ಮುಂದುವರಿದ ರಾಷ್ಟ್ರಗಳು ಉಪಯೋಗಿಸುವ ಅನೇಕ ಬಗೆಯ ಲೋಹಗಳಲ್ಲಿ ಕೆಲವು ನಮ್ಮ ದೇಶದಲ್ಲಿ ಧಾರಾಳವಾಗಿದ್ದು ಸದ್ಯದ ಕೈಗಾರಿಕೆಗಳನ್ನು ನಡೆಸಲೂ ಮುಂಬರುವ ಅನೇಕ ವರ್ಷಗಳವರೆಗೆ ಬಳಸಲೂ ಸಾಕಾಗುತ್ತದೆ; ಇನ್ನು ಕೆಲವು ಖನಿಜಗಳು ಅಲ್ಪ ಪ್ರಮಾಣದಲ್ಲಿ ಮಾತ್ರ ದೊರಕುತ್ತಿದ್ದು, ನಮ್ಮ ಆವಶ್ಯಕತೆಯನ್ನು ಅವು ಸಂಪೂರ್ಣವಾಗಿ ಪೂರೈಸುವುದಿಲ್ಲ ಬೇರೆ ಕೆಲವು ಲೋಹಗಳಂತೂ ನಮ್ಮಲ್ಲಿ ದೊರಕುವುದೇ ಇಲ್ಲ; ಅವುಗಳನ್ನು ಹೊರ ದೇಶಗಳಿಂದ ತರಿಸಬೇಕಾಗುತ್ತದೆ. ನಮ್ಮಲ್ಲಿ ಸಿಗುವ ಲೋಹಗಳನ್ನೂ ನಾವು ಬಳಕೆಯ ವಸ್ತುಗಳ ತಯಾರಿಕೆಗಾಗಿ ಉಪಯೋಗಿಸ ತೊಡಗಿದ್ದು ಈಚೆಗೆಂದು ಹೇಳಬಹುದು. ಅದುರುಗಳ ಸ್ವರೂಪದಲ್ಲೇ ಖನಿಜಗಳನ್ನು ನಿರ್ಯಾತ ಮಾಡುತ್ತಿದ್ದವರು ನಾವು. ರಾಷ್ಟ್ರದ ಅಭಿವೃದ್ಧಿಯಲ್ಲಿ ಲೋಹ ಕೈಗಾರಿಕೆಗಳು ವಹಿಸುವ ಪಾತ್ರವನ್ನು ಇತ್ತೀಚೆಗಷ್ಟೇ ಗಮನಿಸಲಾಯಿತು.

ಪಂಚವಾರ್ಷಿಕ ಯೋಜನೆಯಲ್ಲಿ ದೇಶದ ಬೇರೆ ಬೇರೆ ಕಡೆಗಳಲ್ಲಿರುವ ಖನಿಜ ಸಂಪತ್ತಿನ ಪ್ರಮಾಣ ಮತ್ತು ವೈವಿಧ್ಯವನ್ನು ಕುರಿತು ಅಂದಾಜನ್ನು ಕಟ್ಟಬೇಕೆಂದೂ ಯೋಗ್ಯ ತಾಂತ್ರಿಕ ವಿಧಾನಗಳನ್ನು ಅನುಸರಿಸಿ ಗಣಿಗಳಲ್ಲಿ ಅಗೆಯುವ ಕೆಲಸವನ್ನು ಲಾಭದಾಯಕ ಮಾಡಬೇಕೆಂದೂ ಹೊಸ ಹೊಸ ಖನಿಜ ಭಂಡಾರಗಳನ್ನು ಪತ್ತೆ ಹಚ್ಚಬೇಕೆಂದೂ ಹೇಳಿದ್ದು ಕೇಂದ್ರ ಹಾಗು ರಾಜ್ಯ ಸರಕಾರಗಳು ಇತ್ತ ಗಮನವನ್ನು ಹೂರೈಸುತ್ತಿವೆ. ಇದಲ್ಲದೆ, ಗಣಿ ಹಾಗು ಲೋಹ ಕೈಗಾರಿಕೆಗಳಲ್ಲಿ ತೊಡಗಿರುವವರಿಗೆ ಸಾಲ ರೂಪದಲ್ಲಿ ನಾಕಷ್ಟು ಧನಸಹಾಯ, ತೆರಿಗೆಗಳಲ್ಲಿ ಕೆಲ ಮಟ್ಟಿನ ರಿಯಾಯಿತಿ, ಅಗ್ಗದರದಲ್ಲಿ ವಿದ್ಯುಚ್ಛಕ್ತಿಯ ಪೂರೈಕೆ, ದೇಶೀಯ ಕೈಗಾರಿಕೆಗಳಿಗೆ ಪ್ರೋತ್ಸಾಹಕರವಾದ ಆಯಾತ—ನಿರ್ಯಾತ ಧೋರಣೆ ಮುಂತಾದ ರೀತಿಯನ್ನು ಅಳವಡಿಸಿಕೊಳ್ಳುವ ಮೂಲಕವೂ ಸರಕಾರಗಳು ಲೋಹ ಕೈಗಾರಿಕೆಗಳ ಅಭಿವೃದ್ಧಿಗೆ ಸಹಾಯ ಮಾಡಬಹುದು.

ನಮ್ಮ ದೇಶದಲ್ಲಿನ ಖನಿಜ ಸಂಪತ್ತುಗಳಲ್ಲಿ ಕಲ್ಲಿದ್ದಲಿಗೆ ವಿಶೇಷವಾದ ಸ್ಥಾನವು ಸಿಗುತ್ತದೆ. ಮಧ್ಯ ಪ್ರದೇಶ, ಒರಿಸ್ಸಾ, ಹೈದರಾಬಾದು, ಆಸ್ಸಾಮುಗಳಲ್ಲಿ ಅಲ್ಪ ಪ್ರಮಾಣದಲ್ಲಿಯೂ ಬಿಹಾರ ಹಾಗು ಬಂಗಾಳಗಳಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಕಲ್ಲಿದ್ದಲು ಅಗೆಯಲ್ಪಡುತ್ತದೆ. ಖನಿಜ ನಿಕ್ಷೇಪಗಳ ಕುರಿತು ನಡೆಸಿದ ಸಂಶೋಧನೆಯಿಂದ ನಮ್ಮಲ್ಲಿ ೨೦೦೦ ಕೋಟಿ ಟನ್ನುಗಳಷ್ಟು ಕಲ್ಲಿದ್ದಲಿನ ಸಂಗ್ರಹವಿದೆಯೆಂದೂ ಇವುಗಳಲ್ಲಿ ೫೦೦ ಕೋಟಿ ಅತ್ಯುತ್ತಮ ಶ್ರೇಣಿಯದೆಂದೂ ತಿಳಿದು ಬರುತ್ತದೆ. ಈಚೆಗಿನ ಮೂರು ದಶಕಗಳಲ್ಲಿ ಭಾರತದಲ್ಲಿ ಕಲ್ಲಿದ್ದಲಿನ ಬಳಕೆಯು ಇಮ್ಮಡಿಯಾಗಿದ್ದು ಸುಮಾರು ಮೂರೂವರೆ ಕೋಟಿ ಟನ್ನುಗಳ ಮಿತಿಗೆ ಏರಿರುತ್ತದೆ. ಇದರಲ್ಲಿ ಹೆಚ್ಚಿನ ಅಂಶವನ್ನು ರೈಲ್ವೆಗಳಿಗೂ ಲೋಹ ಕೈಗಾರಿಕೆಗಳಿಗೂ ಹಿತ್ತು ಉಷ್ಣದ ಉಣ್ಣೆಯ ಗಿರಣಿಗಳಿಗೂ ಇಂಧನವಾಗಿ ಉಪಯೋಗಿಸಲಾಯಿತು.

ಪ್ರಪಂಚದಲ್ಲಿಯೇ ಶ್ರೇಷ್ಠ ದರ್ಜೆಯ ಮತ್ತು ವಿಸ್ತೃತ ಪ್ರಮಾಣದ ಕಬ್ಬಿಣದ ಅದುರುಗಳು ನಮ್ಮ ದೇಶದಲ್ಲಿ ಸಿಗುತ್ತವೆ. ಇಲ್ಲಿಯ ಹೆಮಟೈಟ್ ಎಂಬ ಅದುರಿನ ಜಾತಿಯು ಸುಪ್ರಸಿದ್ಧವಾಗಿದ್ದು ಜೇರಳವಾಗಿ ದೊರಕುತ್ತದೆ. ನೂರಕ್ಕೆ ಅರುವತ್ತಕ್ಕಿಂತಲೂ ಹೆಚ್ಚು ಲೋಹಾಂಶವನ್ನು ಎಪೆದಿರುವ ಈ ಅದುರು ೧೦೦೦ ಕೋಟಿ ಟನ್ನುಗಳಷ್ಟು ಸಿಗಬಹುದೆಂದು ಸಂಶೋಧಕರ ಅಭಿಪ್ರಾಯ. ಬಿಹಾರ, ಒರಿಸ್ಸಾ, ಮಧ್ಯಪ್ರದೇಶ, ಮುಂಬಯಿ, ಮೈಸೂರುಗಳಲ್ಲಿ ಕಬ್ಬಿಣದ ಅದುರುಗಳು ಕಾಣಸಿಗುತ್ತವೆ. ೧೯೫೧ ರಿಂದ ನಮ್ಮ ದೇಶದಲ್ಲಿ ಅಗೆದು ತಂದ ಕಬ್ಬಿಣದ ಅದುರುಗಳನ್ನು ಇಲ್ಲಿಯೇ ಶುದ್ಧಮಾಡಲಾಗುತ್ತದೆ; ಮತ್ತು ಅವುಗಳಿಂದ ಯೋಗ್ಯ ವಸ್ತುಗಳನ್ನು ಸಿದ್ಧಪಡಿಸಲಾಗುತ್ತದೆ. ಅದರ ಬೆಳೆಯುತ್ತಿರುವ ನಮ್ಮ ಬೇಡಿಕೆಯನ್ನು ಪೂರೈಸುವ ಮಟ್ಟಿಗೆ ಕಬ್ಬಿಣ ಮತ್ತು ಉಕ್ಕಿನ ಉತ್ಪಾದನೆ ಏಚ್ಚಿರುವುದಿಲ್ಲ. ಈಗಿನ ಬೇಡಿಕೆಯ ಅರೆವಾಸಿ ಉಷ್ಣನ್ನು ಮಾತ್ರ ನಮ್ಮ ಕೈಗಾರಿಕೆ ಪೂರೈಸುತ್ತಿದ್ದು, ಜರ್ಮನ್ ಹಾಗು ಬೆಲ್ಜಿಯನ್ ತಂತ್ರಜ್ಞರ ನೆರವಿನಿಂದ ಸ್ಥಾಪಿಸಲ್ಪಡುವ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳಿಂದ ಪರಿಸ್ಥಿತಿ ಸುಧಾರಿಸಲ್ಪಡುವ ಆಶೆ ಇದೆ.

ಉತ್ಕೃಷ್ಟವಾದ ಲೋಹ ಮಂಡೂರದ ಅದುರುಗಳು ನಮ್ಮ ದೇಶದಲ್ಲಿ ಹೇರಳವಾಗಿದ್ದು ಮಧ್ಯ ಪ್ರದೇಶದಲ್ಲಿ ನಮ್ಮ ಪ್ರಮುಖ ಗಣಿಗಳು ನೆಲಸಿರತ್ತವೆ. ಲೋಹ ಸಂಶೋಧಕರ ಅಭಿಸ್ರಾಯದಂತೆ ಒಳ್ಳೆಯ ಜಾತಿಯ ಅದುರಿನ ನಿಕ್ಷೇಪವು ಎರಡು ಕೋಟಿ ಟನ್ನುಗಳಷ್ಟಿರಬಹುದು; ಸಾಮಾನ್ಯ ಜಾತಿಯದು ಇದರ ಮೂರು ಪಾಲಿದ್ದೀತು. ಲೋಹ ಮಂಡೂರನ್ನು ಕೆಲವು ಮಿಶ್ರ ಲೋಹಗಳ ತಯಾರಿಕೆಯಲ್ಲಿ ಉಪಯೋಗಿಸಲಾಗುತ್ತದೆ. ಕಳೆದ ನಲ್ವತ್ತು ವರ್ಷಗಳಲ್ಲಿ ಸರಾಸರಿ ಆರು ಲಕ್ಷ ಟನ್ನುಗಳಷ್ಟು ಲೋಹ ಮಂಡೂರನ್ನು ಆಗೆಯಲಾಯಿತು; ಇದರಲ್ಲಿ ನಿರ್ಯಾತವಾದ ಪ್ರಮಾಣವೇ ಅತ್ಯಧಿಕ. ನಾವು ಉಕ್ಕಿನ ಮತ್ತು "ಫೆರ್ರೊ ಮ್ಯಾಂಗನೀಸ್" ಮಿಶ್ರ ಲೋಹದ ತಯಾರಿಕೆಯಲ್ಲಿ ಉಪಯೋಗಿಸಿದ್ದು ನೂರಕ್ಕೆ ಹತ್ತು ಅಂಶವನ್ನು ಮಾತ್ರ. ಉಕ್ಕಿನ ಕೈಗಾರಿಕ ಅಭಿವೃದ್ಧಿ ಹೊಂದಿದಂತೆಲ್ಲ ಲೋಹ ಮಂಡೂರದ ಬಳಕೆಯೂ ಹೆಚ್ಚಾಗದಿರದು. ಕೇಂದ್ರ ಸರಕಾರವು ಈಗ ವರ್ಷಕ್ಕೆ ೯೦,೦೦೦ ಟನ್ನು ಮಿಶ್ರ ಲೋಹವನ್ನು ತಯಾರಿಸಬಲ್ಲ ಕಾರ್ಖಾನೆಯನ್ನು ಸ್ಥಾಪಿಸುವ ವಿಚಾರವನ್ನು ಪರ್ಯಾಲೋಚಿಸುತ್ತಿದೆಯಲ್ಲದೆ, ಒರಿಸ್ಸಾ, ಮಧ್ಯ ಪ್ರದೇಶ, ಮುಂಬಯಿ, ಮೈಸೂರು ಮತ್ತು ಮದ್ರಾಸು ಸುಗಳಲ್ಲಿ ವ್ಯಾಪಕ ಸಂಶೋಧನೆ ನಡೆಸಲೂ ಉದ್ದೇಶಿಸಿದೆ.

ಬಿಹಾರ ಮೈಸೂರು, ಮುಂಬಯಿ, ಮದ್ರಾಸು ಮತ್ತು ಒರಿಸ್ಸಾ ರಾಜ್ಯಗಳಲ್ಲಿ

(೧೧ನೇ ಪುಟ ನೋಡಿರಿ)

THE CANARA MUTUAL ASSURANCE COMPANY, LTD.,
Managing Director: T. R. A. PAI
Head Office: **UDIPI**, S. INDIA.] [Estd: 1935
ಅತ್ಯುತ್ತಮ ಬೋನಸ್
ಲಾಭಸಹಿತ ಪೋಲಿಸಿಗಳಿಗೆ ವಿಮಾ ಹಣಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ
ರೂ. 18/- ಹೋಲ್ ಲೈಫ್ ಎಶ್ಯೂರೆನ್ಸಿಗೆ
ರೂ. 15/- ಎಂಡೋಮೆಂಟ್ ಎಶ್ಯೂರೆನ್ಸಿಗೆ
31-12-1955ನೇ ತಾರೀಕಿಗಾದ 1951ರಿಂದ 1955ರ ವರೆಗಿನ ಆಪಥಿಯ ವಿಮಾಗಣನೆಯ ಫಲಿತಾಂಶ.
ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫.
ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಪಂಚಿದ ಕಂಪೆನಿ.
CHIEF AGENTS:
THE COMMERCIAL CORPORATION OF INDIA, LTD.,
UDIPI, S. India

ರಾಮತೀರ್ಥ ಬ್ರಾಹ್ಮೀ ತೈಲ
ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್
ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.
ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. ೪—೪—೦
ಸಣ್ಣ ಬಾಟ್ಲಿಗೆ ರೂ. ೨—೦—೦
ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ತುಳಸಿ - ಭಾರತದ ರೋಗ ನಿವಾರಕ ಗಿಡ

ಪೂಜೆಯ ಸಂಪ್ರದಾಯದ ಹಿಂದಿರುವ ಪವಿತ್ರ ಮನೋಭಾವ

ಹಿಂದುಗಳ ಪಂಚಾಂಗದಲ್ಲಿ ಮುಂದಿನ ಸೋಮವಾರವನ್ನು ಉತ್ಥಾನ ದ್ವಾದಶಿ ಎಂದು ಬರೆದಿದೆ ಅಂದು ತುಳಸಿಯ ಪೂಜೆಯನ್ನು ಅತ್ಯಂತ ವಿಜೃಂಭಣೆಯಿಂದ ಮಾಡಲಾಗುತ್ತದೆ ದೀಪಾವಳಿ ಹಬ್ಬದ ಶುಭ ಸಂದರ್ಭದಲ್ಲಿ ಕೊಡಗಿನ ಸೂಜಿಗು ಸಂಪ್ರದಾಯವು ಉತ್ಥಾನ ದ್ವಾದಶಿಯ ದಿನ ಚಂದ್ರ ಸೀಮೆಯನ್ನು ಪಟ್ಟುತ್ತದೆ. ಹಣತೆಗಳಲ್ಲಿ ದೀಪವನ್ನು ಹಚ್ಚಿ ಭಕ್ತಿಯಿಂದ ನಾಳೆ ಆರತಿಯನ್ನು ಎತ್ತುತ್ತೇವೆ ಭಜನೆಯ ಪದ್ಯಗಳನ್ನು ಹಾಡಿ, ಸಂಕೀರ್ತನೆಯನ್ನು ನಡೆಸುತ್ತೇವೆ.

ತುಳಸಿಯ ಪೂಜೆಗೆ ಭಾರತದಲ್ಲಿ ವಿಶಿಷ್ಟವಾದ ಸ್ಥಾನವನ್ನು ಪ್ರಾಚೀನ ಆರ್ಯ ಋಷಿಗಳು ಕಲ್ಪಿಸಿ ಕೊಟ್ಟರು. ನಮ್ಮ ಪೂರ್ವಜರು ಭಾರತಕ್ಕೆ ಅನುಗ್ರಹಿಸಿದ ಸಸ್ಯ ಸಂಪತ್ತಿನಲ್ಲಿ ತುಳಸಿ, ಬೇವು, ಬಿಲ್ವ ಆಶ್ವತ್ಥ ಮುಂತಾದವುಗಳು ಮಹತ್ವವನ್ನು ಪಡೆಯುತ್ತವೆ. ಇವುಗಳನ್ನು ತಕ್ಕ ರೀತಿಯಲ್ಲಿ ಉಪಯೋಗಿಸುವುದರಿಂದ ಶಾರೀರಿಕ ಹಾಗು ಮಾನಸಿಕ ಆರೋಗ್ಯ ರಕ್ಷಿಸಲ್ಪಡುವುದೆಂದೂ ತನ್ಮೂಲಕ ಆಧ್ಯಾತ್ಮಿಕ ಶ್ರೇಯಸ್ಸನ್ನು ಸೊಂದುವುದೆಕ್ಕೆ ಸಾಧ್ಯವಾಗುವುದೆಂದೂ ಮನಗಂಡ ಪ್ರಾಚೀನ ಋಷಿ ಪುಂಗವರು, ಭಾರತೀಯರ ದೈನಂದಿನ ಜೀವನದಲ್ಲಿ ತುಳಸಿ ಮುಂತಾದವುಗಳ ಪೂಜೆಯ ಕಾರ್ಯಕ್ರಮವನ್ನು ಜ್ಯಾರಿಗೆ ತಂದರು.

ಭಾರತದಲ್ಲಿ ನಾವು ಎಲ್ಲಿ ಬೇಕಾದರೆ ಸಂಚರಿಸೋಣ--ಪ್ರತಿಯೊಂದೂ ಹಿಂದೂ ಮನೆಯ ಮುಂದೆ ನಮಗೆ ತುಳಸಿಯ ಕಟ್ಟೆಯು ನೋಡಸಿಗುತ್ತದೆ. ಅದನ್ನು ಸುಂದರವಾಗಿ ಶೃಂಗರಿಸಿ, ರಂಗೋಲೆಗಳನ್ನು ಬರೆದು ನೀರನ್ನು ಹೊಯ್ದು, ದೀಪವನ್ನು ಉರಿಸಿ ಮುಂಜಾನೆ ಹಾಗು ಸಾಯಂಕಾಲ ಗೃಹಿಣಿಯರು ಪೂಜೆಯನ್ನು ಒಪ್ಪಿಸುತ್ತಾರೆ, ಕರ ಜೋಡಿಸಿ, ಮನೆಯ ಮಕ್ಕಳೊಂದಿಗೆ ಮಂಗಲ ಗೀತವನ್ನು ಹಾಡುತ್ತಾ ಪ್ರದಕ್ಷಿಣೆ ಬರುತ್ತಿರುತ್ತಾರೆ. ತನ್ನ ನೈಸರ್ಗಿಕ ಸ್ಥಾನವನ್ನು ಬಿಟ್ಟು ಕಟ್ಟೆಯಲ್ಲಿ ಕುಳಿತಿರಬೇಕಾಗಿ ಬಂದ ತುಳಸಿಯಬ್ಬುಡಕ್ಕೆ ಒಳ್ಳೆಯ ಕೆಮ್ಮಣ್ಣನ್ನು ತಂದುಹಾಕಿ ಅದನ್ನು ಆವರು ನೋಡಿಸುತ್ತಾರೆ.

ಮನೆಯ ಮುದುಕರಿಗೆ ತುಳಸಿಯ ಮಾಲೆಯೇ ನೋಪ್ಪ ಮಾಗ್ಯವಾಗಿದೆ ಹರಿನಾಮ ಮಂತ್ರವನ್ನು ಜಪಿಸುವುದಕ್ಕೂ ಪಾವಿತ್ರ್ಯ ರಕ್ಷಣೆಗಾಗಿಯೂ ತುಳಸೀ ಮಣಿಯ ಮಾಲೆಯನ್ನು ಒವರು ಉಪಯೋಗಿಸುತ್ತಾರೆ. ದೇವತಾರ್ಚನೆಯಲ್ಲಿ ತುಳಸಿಯ ಚಿಗುರಿಲ್ಲದಿದ್ದರೆ ನಡೆಯುವುದೇ ಇಲ್ಲ—ವಿಷ್ಣುವಿಗಂತೂ ತುಳಸಿಯೆಂದರೆ ಬಹಳ ಇಷ್ಟ. ಅವನು ತುಳಸಿವೃಂದೆಯು ಕೈಹಿಡಿದ ದಿನವನ್ನು ಪಶ್ಚಿಮ ಭಂಗಡದಲ್ಲಿ ಒಳ್ಳೆಯ ಸಂಭ್ರಮದಿಂದ ಆಚರಿಸಲ ಗುತ್ತದೆ. ನಮ್ಮ ದೇವ ಮಂದಿರಗಳಲ್ಲಿ ತೀರ್ಥ ಪ್ರಸಾದವನ್ನು ಹಂಚುವಾಗ, ತುಳಸಿಯ ಎಲೆ ತೇಲುತ್ತಿರುವ ಲಭಿಸೇಕದ ನೀರನ್ನೂ ತುಳಸಿಯ ಚಿಗುರನ್ನೂ ಗಂಧದೊಂದಿಗೆ ಕೊಡುವುದು ಸಂಪ್ರದಾಯ ಶತ ದಶಕ ಸಂಸ್ಕಾರ ಕಾಲದಲ್ಲಿ ತುಳಸಿಯ ಒಣಗಿದ ಕಡ್ಡಿಗಳನ್ನು ಉಪಯೋಗಿಸುವ ಪದ್ಧತಿಯೂ ಗುಜರಾಥಿಗಳಲ್ಲಿ ಕಂಡು ಬರುತ್ತದೆ.

ನಮ್ಮ ಜೀವನದಲ್ಲಿ ತುಳಸಿಗೆ ಇಷ್ಟು ಮಹತ್ವವು ಬರುವುದಕ್ಕೆ ಅದರ ರೋಗ ನಿವಾರಕ ಗುಣವೇ ಕಾರಣವೆಂದು ಕೇಳಿದರೆ ತಪ್ಪಾಗದು ತುಳಸಿಯ ರುಚಿಯು ತೀಕ್ಷ್ಣವಾಗಿದ್ದು ನಾಲಿಗೆಯನ್ನು ಅದು ಚುರುಕು ಮಾಡುತ್ತದೆ. ಆದರೆ ತುಳಸಿಯ ವನದೊಳಗಿಂದ ಬೀಸುವ ಗಾಳಿಯು ತಂಪಾಗಿದ್ದು ಆಹ್ಲಾದವನ್ನುಂಟುಮಾಡುತ್ತದೆ. ಲಕ್ಷ್ಮಿತ್ಯ ವೈಕ್ಷಿಕ್ಯ ಸುತ್ತು ಬರುವುದರಿಂದ, ಅಲ್ಲಿ ಬೀಸುವ ತಂಗಾಳಿಯಿಂದ ಮನಸ್ಸು ಎಷ್ಟು ಪ್ರಸನ್ನವಾಗುತ್ತದೋ ತುಳಸಿಯ ವನದ ಸುತ್ತಲೂ ಒಡ್ಡಾಡುವುದರಿಂದ ಆಷ್ಟೇ ಉಲ್ಲಾಸವ ಗುತ್ತದೆ. ತುಳಸಿಯ ವನವನ್ನು ಮನೆಯ ಹತ್ತಿರ ಬೆಳೆಸಿದರೆ, ನುಸಿಗಳ ಕಾಟ ಸಂಪೂರ್ಣ ತಪ್ಪುವುದಲ್ಲದೆ ಹಾವುಗಳ ಸುಳಿದಾಟ ಪೂ ನಿಲ್ಲುತ್ತದೆ ತುಳಸಿಯ ಕಡು ವಾಸನೆಯಲ್ಲಿ ಎಂಥ ಜಂತುಗಳಾದರೂ ಕಂಡು ಬರುತ್ತದೆ

ನಮ್ಮ ಹಳ್ಳಿಗಳಲ್ಲಿ ತುಳಸಿ ಪ್ರಿಯರು ರಾತ್ರಿಯಾನ್ನು ತುಳಸಿಯ ವನದ ಒಳಗಲ್ಲಿ ಹಾಸಿಗೆ ಹಾಕಿ ನಿದ್ರಿಸುವುದರಲ್ಲಿ ಕಳೆಯುವ ಒಳ್ಳೆಯ ಅಭ್ಯಾಸವನ್ನು ಇಟ್ಟುಕೊಳ್ಳುತ್ತಾರೆ. ಪೇಟೆಯ ಜನರಿಗೆ ಸುಸಿಪರದೆಯ ಅಗತ್ಯ ಬೀಳುವಾಗ ಹಳ್ಳಿಗರು ತುಳಸಿಯ ಮನೆಯಲ್ಲಿದ್ದುಕೊಂಡು ಪರಿಪೂರ್ಣ ಆರೋಗ್ಯಕರವಾಗಿಯೇ ಮರಳಿ ಹೋಗುತ್ತಾರೆ. ತುಳಸಿಯ ನಾಲ್ಕಾರು ಎಲೆಗಳನ್ನು ನಿತ್ಯವೂ ತಿನ್ನುವ ಅಭ್ಯಾಸ ಮಾಡಿಕೊಂಡರೆ, ಅಜೀರ್ಣದ ಹೆಸರೇ ಉಳಿಯಲಾರದು. ತೀರ್ಥರೂಪದಲ್ಲಿ ತುಳಸಿಯ ಎಲೆಯನ್ನು ಅದ್ದಿದ ನೀರನ್ನು ಉಪಯೋಗಿಸುವ ಸಂಪ್ರದಾಯವು ಜೊಟ್ಟೆಯನ್ನು ಶುದ್ಧವಾಗಿಡುವಲ್ಲಿ ಹೆಚ್ಚಿನ ಸಹಾಯವನ್ನು ಮಾಡುತ್ತದೆ. ತುಳಸಿಯಿಂದ ಕಾಸು ಸೀರೋಧ ಶಕ್ತಿಯೂ ಲಭ್ಯವಾಗುವುದೆಂದು ತಿಳಿಯುತ್ತಾರೆ— ಮನೋವಿಕಾರಗಳನ್ನು ಸಂಯಮಿಸುವುದರಲ್ಲಿ ತುಳಸಿಯ ಸೇವನೆ ಮುಂತಾದವುಗಳ ಪಾತ್ರವನ್ನು ಆಧುನಿಕ ವಿಜ್ಞಾನಿಗಳೂ ಮನಗಂಡಿದ್ದಾರೆ.

ನೆಗಡಿ, ಜ್ವರ, ಉಬ್ಬಸ ಮುಂತಾದ ಸಾಮಾನ್ಯ ಕಾಯಿಲೆಗಳನ್ನೂ ಮಲೇರಿಯಾ, ನ್ಯುಮೋನಿಯಾ, ಇನ್‌ಫ್ಲುಯೆಂಜಾ ಮುಂತಾದ ಉಗ್ರರೋಗಗಳನ್ನೂ ಬೊಜ್ಜು ಮುಂತಾದ ದೈಹಿಕ ಅಕ್ರಮಗಳನ್ನೂ ನಿವಾರಿಸುವ ಔಷಧವಾಗಿ ತುಳಸಿಯನ್ನು ಹಳ್ಳಿಯ ಸಂತತಿರು ಉಪಯೋಗಿಸುತ್ತಾರೆ ತುಳಸಿಯ ಎಲೆಯನ್ನು ಬಿಸಿನೀರಿನ್ನ ಹಾಕಿ ಅದನ್ನು ಕುಡಿದರೆ ಶೀತ ಮುಂತಾದವು ಬಲು ಬೇಗನೆ ದೂರವಾಗುತ್ತವೆ. ಕರಿಮೆಣಸು, ಜೀರಿಗೆ ತುಪ್ಪ, ಗೋಮಾತ್ರ ಮುಂತಾದ ಸುಲಭವಾಗಿ ಸಿಗುವ ದ್ರವ್ಯಗಳನ್ನೂ ತುಳಸಿಯನ್ನೂ ಯೋಗ್ಯ ಪ್ರಮಾಣದಲ್ಲಿ ಬೆರೆಸಿ, ಕುಡಿಸುವುದರಿಂದ ಬೇರೆ ರೀತಿ ಕಾಯಿಲೆಗಳಲ್ಲಿ ತುಂಬ ಸ್ಪಯೋಜನ ಸಿಗುತ್ತದೆ

ಶರೀರದ ಸೌಂದರ್ಯವನ್ನು ಕೆಡಿಸುವ ಗಜಕರ್ಣ ಮುಂತಾದ ಚರ್ಮವ್ಯಾಧಿಗಳನ್ನು ನಿವಾರಿಸುವುದಕ್ಕೋಸ್ಕರ ತುಳಸಿಯ ರಸವನ್ನು ಉಪಯೋಗಿಸಿದರೆ ಅದರಿಂದ ಲಾಭವಾದಿಯೆಂದು ಪಡಿತರ ಅಭಿಪ್ರಾಯ. ಕಿವಿ ನೋವು ಮುಂತಾದ ಕಿರುಕುಳಗಳನ್ನು ನಿವಾರಿಸುವುದಕ್ಕೂ ತುಳಸಿಯ ರಸವನ್ನು ಉಪಯೋಗಿಸಬಹುದು. ಒಟ್ಟಿನ ಸಂಬಂಧವಾದ ಎಲ್ಲ ರೋಗಗಳಿಗೂ ತುಳಸಿಯು ರಾಮಬಾಣ ಸ್ವರೂಪದ ಔಷಧವೆಂದು ಹೇಳಿದರೆ ಅತಿಶಯೋಕ್ತಿಯಾಗದು. ಇಷ್ಟು ಹೆಚ್ಚು ಪ್ರಯೋಜನವನ್ನು ಮಾಡುವ ತುಳಸಿಯ ಪೂಜೆಯನ್ನು ಪ್ರಾಚೀನ ಋಷಿಗಳು ಒಂದು ಸಂಪ್ರದಾಯವಾಗಿ, ಹಬ್ಬವಾಗಿ ರೂಢಿಸಿಕೊಂಡು ಹೋಗಲು ನೋಡಿದುದರಿಂದ ನಾವಲ್ಲೂ ಜಾಗ್ರತರಾಗಿ, ನಿರೋಗಿಯಾಗಿ ಬಾಳುವ ಉಪಾಯವನ್ನು ಅವಲಂಬಿಸುವುದು ಸಾಧ್ಯವಾಯಿತು.

ಪುರ್ವಜರಿಂದ ತುಳಸಿಯೇ ಮುಂತಾದ ಅತ್ಯಮೂಲ್ಯ ಗಿಡ ಮೂಲಿಕೆಗಳಂಥ ನೂತನ ಜನಾಂಗಕ್ಕೆ ಲಭಿಸುವ ಲಾಭವ ಉಪೇಕ್ಷಿಸಲ್ಪಟ್ಟಿದ್ದು, "ಹಿತ್ತಿಲ ಗಿಡ ಮದ್ದಲ್ಲ ಎಂಬ ಮಾತಿನ ಪ್ರಕಾರ, ಸುಲಭದಲ್ಲಿ ಬಳಸಲಾಗುವ ತುಳಸಿ ಮುಂತಾದ ಸಸ್ಯ ಸಂಪತ್ತಿನ ವಿಷಯದಲ್ಲಿ ನಾವು ಅಸ್ಥೆಯನ್ನೇನ್ನೂ ತೋರಿಸುತ್ತಿರುವುದಿಲ್ಲ ವಾರ್ಷಾತ್ಯ ಔಷಧ ದ್ರವ್ಯಗಳ ಕುರಿತಾದ ವ್ಯಾಪಾರವನ್ನು ತಿತಯಾಗಿ ಪ್ರಕಟಿಸುತ್ತಿರುವ ನಮಗೆ ಇಲ್ಲಿಯ ಗಿಡ ಮೂಲಿಕೆಗಳ ಮಹತ್ವವನ್ನು ಯಾರಾದರೂ ತಿಳಿದವರು ಪ್ರಸ್ತಾವಿಸಿದರೆ. ಅದಕ್ಕೆ ಕವಿಗೊಡುವುದಕ್ಕೂ ಇಷ್ಟವಿಲ್ಲ ತುಳಸಿಯ ಪೂಜೆಯನ್ನೆ ಬಬ್ಬವಾಗಿ ಆಚರಿಸುವಾಗಲಾದರೂ ನಾವು ನಮ್ಮ ಕಾಲಬುಡದಲ್ಲಿ ಬಿದ್ದಿರುವ ಅಮೂಲ್ಯ ಭಂಡಾರವನ್ನು ಗುರುತಿಸೋಣ! ಪ್ರಾಚೀನ ಸಂಪ್ರದಾಯಗಳನ್ನು ಅಂಧಶ್ರದ್ಧೆ ಎಂಬುದಾಗಿ ಹೀಗಳೆಯುವುದಕ್ಕೆ ಸಾಂಜೆ, ಅವುಗಳು ವ್ಯಕ್ತಪಡಿಸಿದ ಸತ್ಯವನ್ನೆಗಳನ್ನು ಅರಿತುಕೊಳ್ಳಲು ಪ್ರಯತ್ನಿಸೋಣ!

ಚೆಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

ನಂಬಿಕೆಗೆ ಅರ್ಹತೆ!

ಅತ್ಯುತ್ತಮ ಟಾಯಲೆಟ್ ಸಾಬೂನಿನಲ್ಲಿ ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ ಅವೆಲ್ಲಾ

ಮೈಸೂರು ಸ್ಯಾಂಡಲ್ ಸೋಪಿನಲ್ಲಿ

ಇರುವವು ಎಂದು ಖಚಿತವಾಗಿ ಹೇಳುತ್ತೇವೆ.

* * *

— ಎಲ್ಲಾ ಕಡೆಗಳಲ್ಲೂ ದೊರಕುವುದು —

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ

ಬೆಂಗಳೂರು.

Member: I. S. T. M. A

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್

ರಾಜಮಹೇಂದ್ರಿ — ಇವರ

ಆನಂದ ಸುಧ

ನಮ್ಮ "ಆನಂದ ಸುಧ" ಸಮಸ್ತ ಜನಗಳಿಗೆ ಒಲವನ್ನು ಐಂದ ಪುಷ್ಟಿಯನ್ನು ಹೆಚ್ಚಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ಗಿ ನೀಗಳಿಗೆ ಸದೃಶೋಗುನ ಆ ಟಾನ್ಸ್ ಸೀಸೆ ಕ್ಕೆ ರೂ ೩—೦—೦.

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ಸೈದ್ಧಾ[illegible]—ಬೆಂಗಳೂರು ೭.
(2) ಈ ಕಂಪೆನಿ—ಮಂಗಳೂರು 1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ

ಪ್ರಧಾನ ಮಂತ್ರಿಗಳ ಚೀನ ಪ್ರವಾಸದ ಮುಕ್ತಾಯ

ಪ್ರಧಾನ ಮಂತ್ರಿ ನೆಹರೂರವರು ಸ್ವತಃ ಮಹತ್ವದ ಐತಿಹಾಸಿಕ ಘಟನೆ ಎಂಬುದಾಗಿ ವರ್ಣಿಸಿದ ತಮ್ಮ ಚೀನದ ಸಂದರ್ಶನವನ್ನು ಮುಗಿಸಿ ಇದೀಗ ಸ್ವದೇಶಕ್ಕೆ ಮರಳಿದ್ದಾರೆ. ಚೀನದಲ್ಲಿ ಅವರು ಹನ್ನೆರಡು ದಿನಗಳನ್ನು ಕಳೆದರು. ಅನೇಕ ಚಾರಿತ್ರಿಕ ಕ್ಷೇತ್ರಗಳನ್ನೂ ರಾಷ್ಟ್ರೀಯ ಪುನರ್ನಿರ್ಮಾಣದ ಕೇಂದ್ರಗಳನ್ನೂ ಅವರು ಸಂದರ್ಶಿಸದಿರಲ್ಲಪ್ಪ, ಚೀನದ ರಾಜಕಾರಣಿಗಳೊಡನೆ ಬಿಚ್ಚು ಮನಸ್ಸಿನ ಸಮಾಲೋಚನೆಗಳನ್ನೂ ನಡೆಸಿದರು. ಸಮರ್ಥವೂ ಕಾರ್ಯಕ್ಷಮತೆಯುಳ್ಳದ್ದೂ ಆದ ಚೀನದ ಪ್ರಜಾ ಪರ್ಗವು ಪ್ರಧಾನ ಮಂತ್ರಿಗಳನ್ನು ಬಹಳ ಆದರದಿಂದ ಕಂಡು. ಹಾರ್ದಿಕ ಸ್ವಾಗತವನ್ನು ಅವರು ಹೋದಲ್ಲೆಲ್ಲ ನೀಡಿತು. ತಪ್ಸ್ಮಾ ಭೇಟಿಯಿಂದ ನೆಹರುಗಳು ಥಾರತದಂತೆ ಚೀನವೂ ಏಶಿಯಕ್ಕೆ ಯುದ್ಧವಲ್ಲ, ಶಾಂತಿ ಬೇಕಾಗಿದೆ ಎಂಬ ಅಭಿಪ್ರಾಯವನ್ನು ಹೊಂದಿರುವು ದೆಂಬ ಮಹತ್ವದ ಅಂಶವನ್ನು ತಿಳಿದು ಕೊಂಡರು.

ಚೀನೀಯರ ಆತುರ

ಫ್ಲೊರೊಸಾದ ಕುರಿತಾಗಿ ಚೀನೀಯರಲ್ಲಿ ಉದ್ವೇಗದ ಮನೋಭಾವವು ಕಂಡು ಬರುತ್ತಿದ್ದರೂ—ಸರಕಾರವು ಭೀಕರ ಪ್ರಚಾರವನ್ನೆ ಆರಂಭಿಸಿದ್ದರೂ- ನೆಹರೂರ ಸಂದರ್ಶನವು ಆತುರವನ್ನು ಕೆಲ ಮಟ್ಟಿಗೆ ಕಡಿಮೆ ಮಾಡಿರುವುದಾಗಿ ನಿರೀಕ್ಷಕರ ಅಭಿಪ್ರಾಯ. ಕೇವಲ ಯುದ್ಧವಿಲ್ಲದಿರುವುದು ಶಾಂತಿಯಲ್ಲ; ನಿಜವಾದ ಶಾಂತಿಯು ಯುದ್ಧದ ಕಾರಣಗಳನ್ನೆ ನಿರ್ಮೂಲಿಸುವುದರಲ್ಲಿ ಇರುತ್ತದೆಂಬ ನೆಹರೂರ ವಿಚಾರವನ್ನು ಚೀನೀಯರೂ ಒಪ್ಪಿರುವರು. ಈ ವಿಚಾರವು ಕೊರಿಯ, ಇಂಡೋ ಚೀನಗಳಂತೆ ಫ್ಲೊರೊಸಾದ ಪ್ರಶ್ನೆಗೂ ಸರಿಯಾಗಿ ಅನ್ವಯಿಸುತ್ತದೆ. ಆದುದರಿಂದ ಭಾರತವು ಗೋವೆಯ ವಿಷಯದಲ್ಲಿ ಹೇಗೆ ಕಾದು ಕುಳಿತಿರಲು ಒಪ್ಪಿದೆಯೋ ಆವಾಗ್ಯೂ ಭಾರತೀಯರ ಮನಸ್ಸಿನಲ್ಲಿ ಗೋವೆಯ ಸೇರ್ಪಡೆಯ ಹೊರತು ಕಳವಳವು ದೂರಾಗಲಾರದೊ—ಚೀನವೂ ಫ್ಲೊರೊಸಾದ ಕುರಿತು ತನಗೆ ಅನುಕೂಲವಾದ ಕಾಲ ಒದಗಿ ಬರುವುದನ್ನೆ ನಿರೀಕ್ಷಿಸುತ್ತಾ ಕುಳಿತಿರುವುದೆಂದು ಹೇಳ ಬಹುದು.

ಶಾಂತಿಗಾಗಿ ಚೀನವು ದುಡಿಯುವುದೆಂದು ನೆಹರು

ಪ್ರಜೆಗಳ ಕಾರ್ಯೋತ್ಸಾಹ

ಏಶಿಯದಲ್ಲಿ ಶಾಂತಿ ವಲಯದ ವಿಸ್ತರಣಾ ಕಾರ್ಯದಲ್ಲಿ ಭಾರತದೊಡನೆ ಚೀನ ನಿಶ್ಚಯವಾಗಿಯೂ ಸಹಕರಿಸುವು ದೆಂದು ನೆಹರುಗಳ ಅಭಿಪ್ರಾಯ ಅವರು ತಮ್ಮ ಸಂಚಾರ ಕಾಲದಲ್ಲ ಕಮ್ಯೂನಿಸಮ್ಮನ್ನು ಅಪ್ಪಿಕೊಂಡಿರುವ ಚೀನದ ಆರ್ಥಿಕ ವ್ಯವಸ್ಥೆಯ ಕುರಿತಾಗಲೀ ಅಲ್ಲಿಯ ಸಾಮಾಜಿಕ ಜೀವನದ ಸಮಸ್ಯೆಗಳ ಕುರಿತಾಗಲೀ ಏನನ್ನೂ ಹೇಳಿಲ್ಲ. ಆದರೆ ಉಭಯ ರಾಷ್ಟ್ರಗಳ ನಡುವೆ ಸಂಪರ್ಕ ಅಧಿಕವಾಗಬೇಕೆಂದೂ ಇದರಿಂದ ಪರಸ್ಪರ ತಿಳಿವಳಿಕೆ ಹೆಚ್ಚುವುದೆಂದೂ ಅವರು ಪ್ರತಿಪಾದಿಸಿದರು. ಚೀನಾದ ಪುನರ್ನಿರ್ಮಾಣದಲ್ಲಿ ತರುಣ ತರುಣಿಯರೂ ಸಾಮಾನ್ಯ ಪ್ರಜೆಗಳೂ ವಹಿಸುತ್ತಿರುವ ಆಸಕ್ತಿಯು ನೆಹರುಗಳ ಧಾವನೆಯನ್ನು ಬಹಳವಾಗಿ ಉದ್ರೇಕಿಸಿತು. ಇದುವೆಗಂತೆ ಸದಾ ಕಾರ್ಯತತ್ಪರರಾದ ಜನರನ್ನು ಕಂಡ ನೆಹರುಗಳು ರಾಷ್ಟ್ರವನ್ನು ಕಟ್ಟುವಲ್ಲಿ ಪರಿಶ್ರಮಪೂರ್ವಕವಾದ ದುಡಿಮೆಯ ಪಾತ್ರವೇನೆಂಬುದನ್ನು ಭಾರತೀಯರಿಗೆ ತಿಳಿಸಿ ಹೇಳುವಷ್ಟು ಅನುಭವವನ್ನು ಹೊಂದಿದರು.

ಪತ್ರಿಕಾ ಪರಿಷತ್ತಿನಲ್ಲಿ

ಸದ್ಯದ ಪಂಚವಾರ್ಷಿಕ ಯೋಜನೆಯ ಆವಧಿಯಲ್ಲಾಗಲೀ ಆ ನೇಲಿನ ನಾಲ್ಕಾರು ಯೋಜನೆಗಳ ಕಾಲದಲ್ಲಾಗಲೀ ಯಾವುದೇ ವಿಘ್ನೆ ಬರಬಾರದೆಂದು ಚೀನದ ಜನತೆಯೂ ಸರಕಾರವೂ ಪ್ರಾರ್ಥಿಸುತ್ತದೆ ಎಂಬುದಾಗಿ ನೆಹರುಗಳು ಹೇಳುತ್ತಾರೆ ಅವರು ಕ್ಯಾಂಟನ್‌ನದಿಂದ ಭಾರತಕ್ಕೆ ಮರಳಿ ಹೊರಡುವ ಮೊದಲು ಚೀನದ ಅಧ್ಯಕ್ಷ ಮಾವೊ, ಪ್ರಧಾನ ಮಂತ್ರಿ ಚೌನ್ ಲ್ಯಾಯ್ ಹಾಗು ಜನತೆಯ ಆದರ ಸತ್ಕಾರಗಳಿಗಾಗಿ ತಮ್ಮ ಕೃತಜ್ಞತೆಯನ್ನು ಅರ್ಪಿಸಿದರು ಸೈಗಾನಿನ ಪತ್ರಿಕಾ ಪರಿಷತ್ತಿನಲ್ಲಿ ಅವರು ಮಾತನಾಡುತ್ತಾ "ನಾನು ರಾಜಕಾರಣದಿಂದ ನಿವೃತ್ತನಾಗುವುದಿಲ್ಲ. ಕಾಂಗ್ರೆಸಿನ ಅಧ್ಯಕ್ಷ ಹಾಗು ಭಾರತದ ಪ್ರಧಾನ ಮಂತ್ರಿಯಾಗಿರುವ ಇಚ್ಛೆ ನನಗಿಲ್ಲವೆಂದು ಹೇಳಿದ್ದ ಹೊಸ ಆಂತರಿಕ ವ್ಯವಸ್ಥೆಯನ್ನು ಮಾಡಿಕೊಳ್ಳುವ ಉದ್ದೇಶದಿಂದ; ಈ ಬಗ್ಗೆ ನನ್ನ ಸಹೋದ್ಯೋಗಿಗಳೊಂದಿಗೆ ಸಂಪೂರ್ಣ ವಿಚಾರ ಮಾಡದೆ ಕೊನೆಯ ನಿರ್ಣಯಕ್ಕೆ ನಾನು ಬರುವುದಿಲ್ಲ" ಎಂದರು. ಕಂಬೋಡಿಯಕ್ಕೂ ನೆಹರುಗಳು ಭೇಟಿ ಕೊಟ್ಟರು. ಇದರಿಂದ ಇಂಡೋ ಚೀನದ ಎಲ್ಲ ರಾಜ್ಯಗಳ ಧೋರಣೆಗಳನ್ನೂ ಕಂಡಂತಾಯಿತಲ್ಲದೆ, ಬಾರತದ ಪ್ರತಿನಿಧಿಯು ಅಧ್ಯಕ್ಷನಾಗಿರುವ ತಟಸ್ಥ ರಾಷ್ಟ್ರಗಳ ಮಂಡಲದ ಕಾರ್ಯಕಲಾಪಗಳನ್ನು ನಿರೀಕ್ಷಿಸುವ ಸಂದರ್ಭವೂ ಪ್ರಾಪ್ತವಾಯಿತು

ದೇಶಮುಖರೂ ಮರಳಿದರು

ಪುನರ್ನಿರ್ಮಾಣದಲ್ಲಿ ನೆಹರು ಎಷ್ಟು ಉತ್ಸಾಹವನ್ನು ತೋರಿಸುತ್ತಿರುವರೋ, ಅರ್ಥಸಚಿವ ದೇಶಮುಖರೂ ಅಷ್ಟೇ ಆಸಕ್ತಿಯನ್ನು ಹೊಂದಿದ್ದಾರೆ. ಇವರು ಕೊಲೊಂಬೋ ರಾಷ್ಟ್ರಗಳ ಸಂಸತ್ತಿನಲ್ಲಲ್ಲಿ ಭಾಗವಹಿಸಲೆಂದು ಕೆನಡಾಕ್ಕೆ ಹೋಗಿದ್ದವರು ಇದೀಗ ಭಾರತಕ್ಕೆ ಮರಳಿದ್ದಾರೆ. ಕೊಲೊಂಬೋ ಯೋಜನೆಯಲ್ಲಿ ಆರೆವಾಸಿಯಷ್ಟು ಭಾರತಕ್ಕೆಯೇ ಅನ್ವಯಿಸುವ ಚಟುವಟಿಕೆಗಳಿರುವುದರಿಂದ ದೇಶಮುಖರು ನಿರ್ವಹಿಸಿದ ಪಾತ್ರವು ಮಹತ್ವಪೂರ್ಣವಾಗಿತ್ತೆಂದು ಹೇಳಬಹುದು. ಅವರು ತಮ್ಮ ಸಂಚಾರ ಕಾಲದಲ್ಲಿ ನ್ಯೂಯಾರ್ಕಿನ ಬೇಂಕರುಗಳು, ಉದ್ದಿಮೆದಾರರು ಮುಂತಾದವರನ್ನು ಕಂಡು ಭಾರತ ಸರಕಾರದ ಆರ್ಥಿಕ ಪುನರ್ನಿರ್ಮಾಣದ ಧೋರಣೆಯನ್ನು ವಿವರಿಸಿ ಮಾತನಾಡಿದರು ಲಂಡನ್, ಪ್ಯಾರಿಸ್, ಜ್ಯೂರಿಚ್, ಬರ್ನ್, ರೋಮ್, ಕೈರೋ ಮುಂತಾದ ರಾಜಧಾನಿಗಳಲ್ಲಿ ಇವರು ಭಾರತದ ಪಂಚವಾರ್ಷಿಕ ಯೋಜನೆಯ ಪ್ರಗತಿಯನ್ನು ಉಲ್ಲೇಖಿಸಿ, ಪರದೇಶಗಳವರ ಸದ್ಭಾವನೆಯನ್ನು ಜಾಗೃತಿಗೊಳಿಸಿದರು. 'ಹೊರ ದೇಶಗಳಿಂದ ಹೆಚ್ಚು ಸಹಾಯ ದೊರಕಿಸುವುದು ನನ್ನ ಉದ್ದೇಶವಾಗಿರಲಿಲ್ಲ; ಅಲ್ಲಿಯ ಜನರಲ್ಲಿರಬಹುದಾದ ತಪ್ಪು ತಿಳಿವಳಿಕೆಯನ್ನು ಹೋಗಲಾಡಿಸುವುದೇ ನನ್ನ ಆಶಯ" ಎಂದವರು ಮುಂಬಯಿಯಲ್ಲಿ ಹೇಳಿದರು. ಭಾರತವು ಬಯಸಿದರೆ ಸಾಕಷ್ಟು ಅಧಿಕ ಪ್ರಮಾಣದಲ್ಲಿ ತಾಂತ್ರಿಕ ಸಹಾಯ ದೊರಕುವ ಭರವಸೆ ಇದೆ ಎಂದವರು ತಿಳಿಸಿದರು.

ಆಂಧ್ರದಲ್ಲಿ ಅಭಿವೃದ್ಧಿ ಪ್ರಯತ್ನ

ಅಭಿವೃದ್ಧಿ ಪ್ರಯತ್ನಗಳಲ್ಲಿ ಅತಿಯಾದ ಉತ್ಸಾಹವನ್ನು ತೋರಿಸುವುದೂ ನಮ್ಮಲ್ಲಿ ಶಕ್ತಿಯಿಂದ ರಾಷ್ಟ್ರದ ಪುನರ್ನಿರ್ಮಾಣದಲ್ಲಿ ನಿರಂತರಾಸಕ್ತಿಯನ್ನು ತೋರಿಸುವುದೂ ಅದಕ್ಕಾಗಿ ತ್ಯಾಗ ಹಾಗು ಪರಿಶ್ರಮಕ್ಕೆ ಸಿದ್ಧರಾಗುವುದೂ ಇಂದಿನ ಪ್ರಥಮ ಆವಶ್ಯಕತೆಯಾಗಿದೆ ಎಂಬ ವಿಚಾರವನ್ನು ಆಂಧ್ರದ ಶಾಸನ ಸಭೆಯ ದ್ವಿತೀಯ ಅಧಿವೇಶನದ ಉದ್ಘಾಟನೆಯನ್ನು ಮಾಡುತ್ತಾ ಗವರ್ನರ ಶ್ರೀ ಪ್ರಕಾಶ್ ಅವರು ವ್ಯಕ್ತಪಡಿಸಿದರು. ಪ್ರಜಾಪ್ರಭುತ್ವಪದ್ಧತಿಯನ್ನು ನಮ್ಮ ಅಭಿವೃದ್ಧಿಗಾಗಿ ಸ್ವೀಕರಿಸಿದ ಬಳಿಕ, ಆದು ಬಹಳ ಕಠಿಣವಾದ ರೀತಿಯಾಗಿದ್ದರೂ, ಸೂತ್ರಬದ್ಧರಾಗಿ ನಡೆಯಬೇಕಾಗುತ್ತದೆ ಎಂದವರು ಹೇಳಿದರು. ಆಂಧ್ರದ ಸರಕಾರವು ಸಾಧಿಸಿದ ಪ್ರಗತಿಯ ಚಿತ್ರವನ್ನೂ ಮುಂದೆ ಕೈಗೊಳ್ಳಬೇಕೆಂದಿರುವ ಕೆಲಸಗಳ ವಿಚಾರವನ್ನೂ ಅವರು ಸಭೆಯ ಮುಂದಿಟ್ಟರು. ಇವುಗಳಲ್ಲಿ ಜಿಲ್ಲಾ ಬೋರ್ಡುಗಳ ಬದಲು ಜಿಲ್ಲಾ ಪಂಚಾಯಿತು ಮಂಡಳಗಳನ್ನು ರಚಿಸುವುದು, ಕೃಷಿಕರ ಹಾಗು ಕೂಲಿ ಕಾರರ ಪ್ರಯೋಜನಾರ್ಥವಾಗಿ ಸಹಕಾರ ಸಂಘಗಳನ್ನು ಸ್ಥಾಪಿಸುವುದು, ಪೌಷ್ಟಿಕ ಆಹಾರ ಪದಾರ್ಥಗಳನ್ನು ಒದಗಿಸುವಂತೆ ತಾಳೆ ಮರವನ್ನು ಉಪಯೋಗಿಸುವುದು ಮುಂತಾದವುಗಳ. ಉಲ್ಲೇಖನೀಯ ಮುಂಗಡ ಪತ್ರದ ಕೊರತೆಯನ್ನು ತುಂಬಿ ಕೊಳ್ಳುವುದಕ್ಕೆ ಹೊರಿಸಬೇಕೆಂದಿರುವ ಹೊಸ ಕರಗಳ ಉಲ್ಲೇಖನವನ್ನು ಗವರ್ನರು ತಮ್ಮ ಭಾಷಣದಲ್ಲಿ ಮಾಡದಿರಲಿಲ್ಲ.

THE JUPITER GENERAL INSURANCE CO., LTD.
ದಿ ಜುಪಿಟರ್ ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

1919ರಲ್ಲಿ ಸ್ಥಾಪಿತ] [ಪ್ರಧಾನ ಕಾರ್ಯಾಲಯ: ಬೇಂಕ್ ಸ್ಟ್ರೀಟ್, ಬೊಂಬಾಯಿ 1.
ಸಮರ್ಥ ಸೇವೆ ಮತ್ತು ಸುಭದ್ರತೆಯನ್ನು ಕೊಡುತ್ತದೆ.

ತೆತ್ತ ಪಾಲು ಬಂಡವಾಳ...	...	ರೂ. 23,71,800
ಒಟ್ಟು ಆಸ್ತಿ ಬಡುಕು ...	...	(ಮಿಕ್ಕಿದೆ) ರೂ. 3,50,53,178
ಊರ್ಜಿತದಲ್ಲಿರುವ ವಿಮಾವ್ಯವಹಾರ	...	,, ರೂ. 7.50,00,000
1953ರಲ್ಲಿ ಪೂರ್ಣಾವಾದ ವಿಮಾವ್ಯವಹಾರ...		,, ರೂ. 1,06,00,000

ಜೀವ, ಬೆಂಕಿ, ಜಲಯಾನ, ಮೋಟಾರ್, ವಾಯುಯಾನ, ನೈಕ್ತಿಗತ ಕಾಯಿಲೆ, ಆಕಸ್ಮಿಕ ಘಟನೆ, ವಿಶ್ವಾಸಾರ್ಹ ಗ್ಯಾರಂಟಿ ಭದ್ರತೆ● ಕೆಲಸಗಾರರ ಪರಿಹಾರ ಪ್ರತ್ಯಾನುಕೂಲತೆ, ಕಳ್ಳಕಾಕರ ಪಾಲಾಗುವಿಕೆ, ಪ್ರಾಣಿಜಂತುಗಳು ಇತ್ಯಾದಿ ಸಂಬಂಧಗಳಲ್ಲಿ ವಿಮೆ ಇಳಿಸಲಾಗುವುದು. ಹಿಂದೂಸ್ಥಾನ, ಪಾಕಿಸ್ತಾನ, ಬರ್ಮಾ, ಸಿರೋನ್, ಬ್ರಿಟಿಷ್ ಪೂರ್ವ ಆಫ್ರಿಕ ಮತ್ತು ಏಡನ್‌ಗಳಲ್ಲಿ ಶಾಖೆಗಳೂ ಏಜನ್ಸಿಗಳೂ ಇವೆ.

ತಾ. 27—4—54ರಿಂದ ಜೀವವಿಮಾ ಪ್ರೀಮಿಯಂ ದರಗಳನ್ನು ಸಮೃದ್ಧಿಯಾಗಿ ಇಳಿಸಲಾಗಿದೆ ಎಂಬುದನ್ನು ಸಾರ್ವಜನಿಕರಿಗೆ ತಿಳಿಸಲು ತುಂಬಾ ಸಂತೋಷಪಡುತ್ತೇವೆ.

ಹೆಚ್ಚಿನ ಮಾಹಿತಿಗೂ ಸ್ಥಾನಿಕಧ್ಯಕ್ಕೂ ಬರೆಯಿರಿ:—

ಶ್ರೀ. ಎಸ್.ಎ. ಹೆಗ್ಡೆ, ಸುಪರಿಂಟೆಂಡೆಂಟ್ ಆಫ್ ಏಜನ್ಸೀಸ್,
ದಿ ಜುಪಿಟರ್ ಜನರಲ್ ಇನ್ಶೂರೆನ್ಸ್ ಕೊ. ಲಿಮಿಟೆಡ್, ಶಿರ್ವ (ದಕ್ಷಿಣ ಕನ್ನಡ).

ZANDU'S THREE GEMS of AYURVEDIC MEDICINES

ಝಂಡೂರವರ ಮಕರಧ್ವಜ ಪಿಲ್ಸ್ (ಸುವರ್ಣ ಮಿಶ್ರಿತ)
ದೀರ್ಘಾವಧಿಯ ಕೆಮ್ಮು, ನರಗಳ ನಿಸ್ಸತ್ವ ಮತ್ತು ಸರ್ವಸಾಮಾನ್ಯ ಆಶಕ್ತತೆ ಹಾಗೂ ಇತರ ಎಡೆಯ ವೀನಗಳಿಗೆ ಅತ್ಯಧಿಕ ಗುಣಕಾರಿ. ಬೆಲೆ: 1 ತೊಲೆಗೆ ರೂ. 9—0—0.

ಝಂಡೂರವರ ವಸಂತ ಕುಸುಮಾಕರ ರಸ—ಮೂತ್ರಾತಿಸಾರ
ಸಿಹಿಮೂತ್ರ, ನಿಸ್ಸತ್ವ ಇತ್ಯಾದಿ ಬಹುಕಾಲದ ಮೂತ್ರ ದೋಷಗಳಿಗೆ ಡಾಕ್ಟರುಗಳಿಂದ ವಿಶಿಷ್ಟ ತರದಲ್ಲಿ ಶಿಫಾರಸು ಮಾಡಲ್ಪಟ್ಟಿದೆ. ಬೆಲೆ: ಕಾಲು ತೊಲೆಗೆ ರೂ. 6—0—0.

ಝಂಡೂರವರ ಸುವರ್ಣ ಮಿಶ್ರಿತ ಚ್ಯವನಪ್ರಾಶ—
ಸರ್ವರಿಗೂ ರುಚಿಕರವಾದ ಟಾನಿಕ್ ಆಹಾರ. ಬಂಗಾರ ಮತ್ತು ಇತರ ಭಸ್ಮಗಳ ಮಿಶ್ರಣ ವಿರುವುದರಿಂದ ಶೀತ, ಕಫ, ಕೆಮ್ಮುವಿಗೆ ಅತ್ಯಂತ ಪರಿಣಾಮಕಾರಿ.
ಬೆಲೆ: 1 ರಾತ್ತಿಲ್‌ಗೆ ರೂ. 7—8—0. ಕಾಲು ರಾತ್ತಿಲ್‌ಗೆ ರೂ. 2—0—0.

ಝಂಡೂರವರ ಔಷಧಿಗಳು ದ.ಕ.ಜಿಲ್ಲೆಯ ಅಧಿಕೃತ ಏಜಂಟರಲ್ಲಿ ದೊರೆಯುವುವು

ಕ್ಯಾಟಲಾಗಿಗೆ ಕೆಳಗಿನ ಸೋಲ್ ಏಜಂಟರಿಗೆ ಬರೆಯಿರಿ.

DAMODAR & CO.,
113 Nainiappa Naicken Street, P. T.-MADRAS-3.

ಫ್ರೆಂಚ ಸ್ವಾಸ್ಥ್ಯಗಳ ಮೇಲೆ ಭಾರತದ ಪ್ರಭುತ್ವ

ಪಾಂಡಿಚೆರಿಯಲ್ಲಿ ಅಧಿಕಾರ ಪಸ್ತಾಂತರದ ಸಂಭ್ರಮ

ಭಾರತದ ಸ್ವಾತಂತ್ರ್ಯ ಆಂದೋಲನದ ಇತಿಹಾಸದಲ್ಲಿ ಇದೇ ನವೆಂಬರ ಒಂದರಂದು ಇನ್ನೊಂದು ಮಹತ್ವ ಪೂರ್ಣವಾದ ಅಧ್ಯಾಯವನ್ನು ಬರೆಯಲಾಯಿತು. ಅಂದು ಪಾಂಡಿಚೆರಿಯ ಗವರ್ನರರ ಅರಮನೆಯಲ್ಲಿ ಫ್ರೆಂಚರ ಕೈಯಲ್ಲಿದ್ದ ಪಾಂಡಿಚೆರಿ, ಕಛೈಕಲ್, ಮಾಹೆ ಮತ್ತು ಯಾನಂ ಎಂಬ ನಾಲ್ಕು ವಸಾಹತು ಪ್ರದೇಶಗಳ ಆಡಳಿತೆಯನ್ನು ಭಾರತಕ್ಕೆ ಬಿಟ್ಟು ಕೊಡುವ ಸಮಾರಂಭವು ಜರಗಿತು. ಬಹಳ ಗಂಭೀರವಾದ ರೀತಿಯಲ್ಲಿ ಆನಂದದಿಂದ ತುಂಬಿದ ವಾತಾವರಣದಲ್ಲಿ ನೆರೆದ ಜನರ ಮುಂದೆ ಫ್ರೆಂಚ ಅಧಿಕಾರಿಗಳಾದ ಮಾನ್ಸಿಯರ್ ಪೆರಿ ಲ್ಯಾಂಡಿಯವರು ಭಾರತದ ಶ್ರೀ. ಕೇವಲ ಸಿಂಗರ ಕೈಗೆ ಅಧಿಕಾರ ಮುದ್ರೆಯನ್ನು ನೀಡಿದರು. ಭಾರತದ ವಿದೇಶಾಂಗ ಸಚಿವಾಲಯದ ಕಾರ್ಯದರ್ಶಿ ಶ್ರೀ. ಆರ್. ಕೆ. ನೆಹರುಗಳು ರಾಷ್ಟ್ರ ಧ್ವಜವನ್ನು ಅರಳಿಸಿ, ಒಂದು ಘೋಷಣೆಯನ್ನು ಹೊರಡಿಸಿದರು. ಆದರಲ್ಲಿ ಎಲ್ಲ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಲಾಗಿದೆಯೆಂದೂ ಭಾರತದ ರಾಜ್ಯಾಂಗ ಘಟನೆಯ ಮೂಲಭೂತ ಹಕ್ಕುಗಳನ್ನು ಸ್ವಾಸ್ಥ್ಯದ ಪ್ರದೇಶಕ್ಕೆ ಅನ್ವಯಿಸುವ ಹಾಗು ಇಲ್ಲಿಗೆ ಪಂಚವಾರ್ಷಿಕ ಯೋಜನೆಯನ್ನು ವಿಸ್ತರಿಸುವ ವಿಚಾರವನ್ನು ಭಾರತ ಸರಕಾರ ಮಾಡುತ್ತಿದೆಯೆಂದೂ ಹೇಳಿದ್ದರು.

ಹಾರ್ದಿಕ ಶುಭಾಶಯ

ತನ್ನ ಮಾತೃಭೂಮಿಯಾದ ಭಾರತದೊಡನೆ ಸೇರ್ಪಡೆ ಹೊಂದಿದ ಸ್ವಾಸ್ಥ್ಯದ ಮೂರು ಲಕ್ಷ ನಾಗರಿಕರನ್ನು ಸ್ವಾಗತಿಸುತ್ತಾ ರಾಷ್ಟ್ರಪತಿಗಳೂ ಪ್ರಧಾನ ಮಂತ್ರಿ ನೆಹರುಗಳೂ ಸಂದೇಶವನ್ನು ಕಳಿಸಿದ್ದರು. ಸ್ವಾಸ್ಥ್ಯದ ಪ್ರಜೆಗಳು ತಮ್ಮ ಸ್ವಂತ ಇಚ್ಛೆಯಿಂದಲೇ ಭಾರತದೊಡನೆ ಸೇರಿಕೊಳ್ಳುತ್ತಿರುವುದಕ್ಕೆ ಇವರು ಹರ್ಷವನ್ನು ಸೂಚಿಸಿದ್ದಲ್ಲದೆ, ಫ್ರೆಂಚ ಸರಕಾರವೊಡನೆ ನಡೆಸಿದ ಸಂಧಾನದಲ್ಲಿ ವ್ಯಕ್ತವಾದ ಸಹಾನುಭೂತಿಯನ್ನೂ ಪ್ರಶಂಸಿಸಿದರು. ವ್ಯವಸಾಯಜನ್ಯವಸ್ತು, ಸಾಧ್ಯವ ಮತ್ತು ವಿನೋದಗಳನ್ನು ಅನುಸರಿಸಿ ಭಿನ್ನತೆಯಿಂದಲೂ ಸೌಹಾರ್ದಯುತವಾಗಿಯೂ ಫ್ರೆಂಚರು ಪತಿಸಿದ ರೀತಿಯನ್ನು ವಿಶ್ವದ ಇತರ ಸಮಸ್ಯೆಗಳಿಗೂ ಜೀನ್ನಾಗಿ ಅನ್ವಯಿಸಬಹುದೆಂಬ ಅಭಿಪ್ರಾಯವನ್ನು ಅವರು ವ್ಯಕ್ತಗೊಳಿಸಿದರು. ವಸಾಹತು ಆಳಿಕೆಯನ್ನು ಇದಿರಿಸಬೇಕಾದ ಇತರೆಡೆಯ ನಾಗರಿಕರಿಗೆ ಫ್ರೆಂಚ ಭಾರತದ ಪ್ರಜೆಗಳ ವರ್ತನೆಯು ಆದರ್ಶಪ್ರಾಯವಾಗಿದೆಯೆಂದು ಅವರು ಹೊಗಳಿದರು. ಜನರು ತಮ್ಮ ನಿಶ್ಚಿತ ಗುರಿಯನ್ನು ಶಾಂತಿಯ ನೂರಾರನು ಸರಣಿಯಿಂದ ಮುಟ್ಟಿದುದಕ್ಕೆ ಶ್ಲಾಘಿಸಿದರು. ಅವರು ಅಭಿನಂದನೆಯನ್ನು ಸಲ್ಲಿಸಿದರು.

ಶಾಸನಗಳ ಅನ್ವಯ

ಜನತೆಯ ಸಲಹೆಯನ್ನು ಕೇಳಿದೆ ಭಾರತವು ಫ್ರೆಂಚರ ಕೈಯಲ್ಲಿದ್ದ ಸ್ವದೇಶಗಳಲ್ಲಿ ಘಟನಾತ್ಮಕವಾದ ಪರಿವರ್ತನೆಗಳನ್ನೇನೂ ಮಾಡಲು ಬಯಸುತ್ತಿಲ್ಲ ಆದಾಗ್ಯೂ ದೈನಂದಿನ ಆಡಳಿತದ ಮಟ್ಟಿಗೆ ಇದು ವರೆಗೆ ಅಸ್ತಿತ್ವದಲ್ಲಿದ್ದ ಫ್ರೆಂಚ್ ಕಾಯಿದೆಗಳ ಸ್ಥಾನದಲ್ಲಿ ಕೆಲವು ಭಾರತೀಯ ಶಾಸನಗಳನ್ನು ಅನ್ವಯಿಸಲು ಅದು ನಿರ್ಧರಿಸಿದ್ದು, ಇವು ನಾಣ್ಯ, ಸುಂಕ, ವಿದೇಶ ವಿನಿಮಯ ಮತ್ತು ಆಯಾತ ನಿರ್ಯಾತಗಳಿಗೆ ಸಂಬಂಧಿಸಿರುತ್ತವೆ. ಇಲ್ಲಿಯ ಆಡಳಿತ ಅಧಿಕಾರಿಗಳಾಗಿ ಫ್ರೆಂಚರ ಸ್ಥಾನದಲ್ಲಿ ಭಾರತೀಯರನ್ನು ನೇಮಿಸಿದ್ದು, ಇವರೊಡನೆ ಜನರು ಅತ್ಯುತ್ಸಾಹದಿಂದ ಸಹಕರಿಸುವ ಲಕ್ಷಣಗಳು ಕಂಡು ಬರುತ್ತವೆ. ಹಣಕಾಸಿನ ದೃಷ್ಟಿಯಿಂದ ನೋಡಿದರೆ ಭಾರತಕ್ಕೆ ಫ್ರೆಂಚರ ಕೈಯಲ್ಲಿದ್ದ ಸ್ವದೇಶಗಳ ದೆಸೆಯಿಂದ ಸುಮಾರು ೫೦ ಲಕ್ಷ ರೂಪಾಯಿಗಳ ನಷ್ಟವೇ ಸಂಭವಿಸುತ್ತದೆ. ಆದರೆ ಪ್ರಶ್ನೆಯನ್ನು ರಾಷ್ಟ್ರದ ಐಕ್ಯ, ಭದ್ರತೆ ಮತ್ತು ಸ್ವಾತಂತ್ರ್ಯದ ದೃಷ್ಟಿಯಿಂದ ವಿಚಾರಿಸಿದರೆ ನಾವು ದುಃಖಪಡಬೇಕಾದ ಪ್ರಮೇಯ ವೇನೂ ಇಲ್ಲವೆಂದು ಮನವರಿಕೆಯಾದೀತು. ನಮಗೆ ನಿಜವಾಗಿಯೂ ಶೋಕವಾಗುವುದಾದರೆ, ಅದು ಫ್ರೆಂಚ ಭಾರತದ ಶಾಸನ ಸಭೆಯು ಅನ್ಯಕ್ಷರಾದ ಶ್ರೀ ಎಸ್. ಬಾಲಸುಬ್ರಹ್ಮಣ್ಯಮರ ಆಕಸ್ಮಿಕ ನಿಧನದಿಂದ ಎಂದೆನ್ನಬಹುದು.

ಕರ್ನಾಟಕ ಏಕೀಕರಣ

ರಾಷ್ಟ್ರದ ಐಕ್ಯ ಮತ್ತು ಆಡಳಿತ ಅನುಕೂಲತೆಯ ದೃಷ್ಟಿಯಿಂದ ಭಾಷಾನುಗುಣ ಪ್ರಾಂತಗಳ ನಿರ್ಮಾಣದ ವಿಷಯದಲ್ಲಿ ಭಿನ್ನಾಭಿಪ್ರಾಯಗಳು ಆಗಿಂದಾಗ್ಗೆ ವ್ಯಕ್ತಗೊಳ್ಳುತ್ತಿವೆ. ಕರ್ನಾಟಕ ಏಕೀಕರಣದ ಪ್ರಶ್ನೆಯೂ ಇದಕ್ಕೆ ಹೊರತಾಗಿಲ್ಲ —ಪರಿಣಾಮವಾಗಿ, ಮೈಸೂರು ಸರಕಾರವು ತನ್ನ ನಿಲುವಿನ ಪ್ರಕಟಿಸುವುದಕ್ಕೆ ಮಂಜೆ ಶ್ರೀ ಎಂ. ವೀಷಾದ್ರಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿ, ತನ್ಮೂಲಕ ಸಂಬಂಧಿಸಿದ ಎಲ್ಲ ಅಂಶಗಳನ್ನೂ ಸಂಗ್ರಹಿಸಲು ನಿರ್ಧರಿಸಿದ್ದಿತು. ಸಮಿತಿಯು ತನ್ನ ವರದಿ ಪುಟಗಳ ಪರಿಶೀಲನೆಯನ್ನು ಇದೇ ತಿಂಗಳೇ ತಾರೀಕಿನಂದು ಸರಕಾರಕ್ಕೆ ಒಪ್ಪಿಸಿದೆ. ಅದು ಏಕೀಕರಣದ ವಿಷಯದಲ್ಲಿ ಯಾವ ಸಿಫಾರಸ್ಸನ್ನೂ ಮಾಡಿಲ್ಲ—ಆದಾಗ್ಯೂ ಹನ್ನೆರಡು ಅಧ್ಯಾಯಗಳಲ್ಲಿ ಜನ ಸಂಖ್ಯೆ ಮತ್ತು ಭಾಷೆ ಸೈಸರ್ಗಿಕ ಸ್ವರೂಪ ಮತ್ತು ಇತಿಹಾಸ, ಸಾರಿಗೆ ಸಂಪರ್ಕ, ಶಿಕ್ಷಣ, ಆದಾಯ-ಗ್ಯ ಮತ್ತು ವೈದ್ಯಕೀಯ ಸೌಕರ್ಯ, ಕೃಷಿ ಮತ್ತು ಜಾನುವಾರು ಅಭಿವೃದ್ಧಿ, ಗ್ರಾಮಾಭಿವೃದ್ಧಿ ಪ್ರಯತ್ನ, ನೀರಾವರಿ ವಿದ್ಯುಚ್ಛಕ್ತಿ ಮತ್ತು ಕೈಗಾರಿಕೆಗಳು, ಕಂದಾಯ, ಉತ್ಪನ್ನ ಮತ್ತು ವೆಚ್ಚ, ಆಡಳಿತದ ಸಮಸ್ಯೆ ಮುಂತಾನವಿಷಯಗಳನ್ನು ಸಾಕಷ್ಟುವಿಸ್ತಾರವಾಗಿ ಚರ್ಚಿಸಿರುತ್ತದೆ. ಮೈಸೂರಿನ ಮುಖ್ಯ ಮಂತ್ರಿ ಕುಮುಮಂತಯ್ಯನವರು ಸರಕಾರದಂತೆ ಪ್ರಜೆಗಳೂ ಈ ವರದಿಯನ್ನು ಅಧ್ಯಸಿಸಬೇಕೆಂದು ಹೇಳಿರುವರು.

ಅಪ್ರಿಯ ಘಟನೆ

ಭಾಷೆಯ ಮೇಲಿನ ಅತಿರೇಕ ವ್ಯಾಮೋಹದ ಪರಿಣಾಮವಾಗಿ ಒಡಿಸಾ ಮತ್ತು ಆಂಧ್ರ ರಾಜ್ಯಗಳ ಗಡಿಯಲ್ಲಿರುವ ವಾರ್ಲಕೆಮೇಡಿ ಎಂಬಲ್ಲಿ ಕಳೆದ ವಾರ ಗಲಭೆ ಸಂಭವಿಸಿತು. ಶಾಲೆಯ ಹೈಸ್ಕೂಲೊಂದರಲ್ಲಿ ಒರಿಯಾ ಮತ್ತು ತೆಲುಗು ಭಾಷೆಗಳ ನಾಟಕಗಳನ್ನು ಆಡಿದ್ದರಿಂದ ಜನರಲ್ಲಿ ದ್ವೇಷ ಉದ್ಭವಿಸಿತೆಂದೂ ಕೆಲವು ಪುಂಡರು ಕೈಯಲ್ಲಿ ಕೋಲು ಮೊಣ್ಣೆಗಳನ್ನು ಹಿಡಿದು ಕೊಂಡು ಅಡ್ಡಾಡುತ್ತಾ ಲೂಟಿಯನ್ನು ಪ್ರಾರಂಭಿಸಿದರೆಂದೂ ಇದನ್ನು ತಡೆಯಲು ಪೋಲೀಸರನ್ನು ಕಳಿಸಬೇಕಾಯಿತೆಂದೂ ತಿಳಿಯುತ್ತದೆ. ಪ್ರಯಾಣಿಕರ ರೈಲೊಂದು ಪಾರ್ಲಕಿಮೇಡಿಗೆ ಹೋಗುತ್ತಿದ್ದಾಗ ೩೦೦ ಮಂದಿ ಶಸ್ತ್ರಧಾರಿಗಳು ಅದನ್ನು ತಡೆದು ಹಿಡಿದರೆಂದೂ ಇದರಿಂದ ರೈಲನ್ನು ಹಿಂದೆ ಕೊಂಡೊಯ್ಯಬೇಕಾಯಿತೆಂದೂ ಇನ್ನೊಂದು ವರದಿ ಹೇಳುತ್ತದೆ. ಪೋಲೀಸರ ಪ್ರಯತ್ನದಿಂದ ಪರಿಸ್ಥಿತಿಯನ್ನು ಹತೋಟಿಗೆ ತರಲಾಯಿತು

ವರ್ಣಪದ್ಧತಿ ಅಳಿಯಲಿ

ನಮ್ಮ ದೇಶಕ್ಕೆ ಕಳಂಕ ಪ್ರಾಯವಾದ ಇನ್ನೊಂದು ವಿಷಯವೆಂದರೆ ಅಸ್ಪೃಶ್ಯತೆಯ ಪದ್ಧತಿ. ಬೆಂಗಳೂರಿನಲ್ಲಿ ಮೈಸೂರು ರಾಜ್ಯದ ಹರಿಜನ ಸೇವಕ ಸಂಘದ ವತಿಯಿಂದ ಜರಗಿದಾಗ ಕೇಂದ್ರ ಸರಕಾರದ ಸಂಪರ್ಕ ಮಂತ್ರಿ ಶ್ರೀ ಜಗಜೀವನರಾಮರು ವರ್ಣ ಪದ್ಧತಿಯು ಅಳಿಯುವ ವರೆಗೆ ಅಸ್ಪೃಶ್ಯತೆಯ ಕಳಂಕವನ್ನು ತೊಡೆಯುವುದು ಅಸಾಧ್ಯವೆಂದು ಹೇಳಿದರು. ವರ್ಣ ಪದ್ಧತಿಯಿಂದ ಭಾರತಕ್ಕೆ ಅತ್ಯಂತ ಹಾನಿಯಾಗಿದ್ದು ಅದನ್ನು ಇಲ್ಲದಂತೆ ಮಾಡುವುದೇ ನಮ್ಮ ಧ್ಯೇಯವಾಗಲಿ ಎಂದನರು ನುಡಿದರು. ಸರಕಾರವು ಕಾಯಿದೆಗಳನ್ನು ಮಾಡಿದ್ದರೂ ಅವುಗಳನ್ನು ಕೃತಿಯಲ್ಲಿ ಅಕ್ಷರಶಃ ಇಳಿಸುವುದಕ್ಕೆ ಪ್ರಯತ್ನಗಳು ನಡೆದಿಲ್ಲ. ಸಮಾಜದ ಕೆಲವು ವಿಶಿಷ್ಟ ವರ್ಗಗಳ ಪ್ರಭಾವ, ಲೋಕಸ್ಪಂಯತೆ ಕುಂದೀ ತೆಂಬ ಭಯ ಮುಂತಾದವುಗಳು ಅಧಿಕಾರಿಗಳ ನಿಷ್ಕ್ರಿಯತೆಗೆ ಕಾರಣವಾಗಿರಬಹುದೆಂದು ಅವರು ಅಭಿಪ್ರಾಯಪಟ್ಟರು.

(೭ನೇ ಪುಟ ನೋಡಿರಿ)

ನೆನಪಿಗಾಗಿ—

ಉಡುಪಿಯ ತಮ್ಮ ಸ್ವಗೃಹದಲ್ಲಿ ಆಕ್ಟೋಬರ ತಿಂಗಳ ೩೧ನೇ ದಿನಾಂಕ ರಾತ್ರಿ ೨ ಗಂಟೆಗೆ ತಮ್ಮ ೭೨ನೇ ವಯಸ್ಸಿನಲ್ಲಿ ದೈವಾಧೀನರಾದ

ಶ್ರೀ ಎಮ್. ವಿಟ್ಠಲ ಕಾಮತರ ಸವಿ ನೆನಪಿಗಾಗಿ ..

1883ನೆಲ್ಲಿ ಜನಿಸಿ, 1919ರಿಂದ 1952ರ ವರೆಗೆ ಬ್ಯಾಂಕಿನ 'ಲೀಗಲ್ ಅಡ್ವೈಸರ್' ರಾಗಿಯೂ, 1953ರಿಂದ ಆಡಳಿತ ಮಂಡಳಿಯ ಸದಸ್ಯರಾಗಿಯೂ, ಅವಿಶ್ರಾಂತ ಶ್ರಮದಿಂದ ಬ್ಯಾಂಕಿನ ಏಳಿಗೆಗಾಗಿ ದುಡಿದು, ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಯಲ್ಲಿ ನೆರವಾದರು.

ನೆನಹಿದವರು—

ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್ ಉಡುಪಿ.

THE CANARA BANKING CORPORATION LIMITED UDIPI.

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policy-holders and Representatives. At whatever stage we welcome your association with the POPULAR.

THE
POPULAR INSURANCE CO.,LTD.
"POPULAR BUILDINGS" MANGALORE-1

ಜಿಲ್ಲೆಯ ವ್ಯಕಟಣೆಗಳಲ್ಲದೆ ಕರ್ನಾಟಕದ ಎಲ್ಲ ಕಡೆಗಳ ಪುಸ್ತಕಗಳೂ
ನಮ್ಮಲ್ಲಿ ದೊರೆಯುತ್ತವೆ.
ಸಂಚಾಯತು ಬೋರ್ಡುಗಳಿಗೂ ಹೈಸ್ಕೂಲುಗಳಿಗೂ ನಾವು ಕೊಡುವ ವಿಶೇಷ ಸವಲತ್ತನ್ನು ವಿಚಾರಿಸಿ ತಿಳಿಯಿರಿ.
ನವಭಾರತ ಪುಸ್ತಕ ಭಂಡಾರ,
ರಿಜಿಸ್ಟರ್ಡ್ ಪಬ್ಲಿಪರ್ಸ್, ಉಡುಪಿ.

೭೦ವರ್ಷಕ್ಕೆ ಜಗತ್ಪ್ರಸಿದ್ಧ ಮೀರ ವಿಜಯಿ ಹೋನೇವಾಲಾ।

ಪ್ರತ್ಯೇಕ ಸ್ಟೋರ ಮೇ ಮೀರ ರಾಜ ಸ್ಥಾನಿ ಪರ ವಿರಾಜತಾ ಹೈ

ಬಾದ್ಶಾಹ ಫ್ಯೂಮಿಗೇಟರ್

ಮೀರ ಮೋರಿಯೋಂ

ಮಲೇರಿಯಾ ಇನ್ಫ್ಲುಯೆಂಜಾ ಮೀರ ಪ್ರತ್ಯೇಕ ಪ್ರಕಾರಕೆ ಬುಖಾರ ಕೆ ಲಿಯೆ।

ಸೋಲ ಮೆನ್ಯುಫೆಕ್ಚರರ: ಡಾ. ಎಚ್. ಎಲ್. ಬಾಟಲೀವಾಲಾ ಸನ್ಸ ಎಂಡ್ ಕಂ. ಲಿ.
೨ ಬಾಟಲೀವಾಲಾ ಬಿಲ್ಡಿಂಗ, ೬೩ ಬಿ, ಪೋರ್ತುಗೀಜ ಚರ್ಚ ಸ್ಟ್ರೀಟ, ದಾದರ, ಬಾಂಬೆ ೨೮.
Tele. Add. "CAWASHABAD"

NAVAYUGA
Popular Kannada Weekly
Founder:—
Sri A. B. SHETTY, *M.L.A.*
Minister for Public Health, Govt. of Madras.

ನ ವ ಯು ಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೪	೪-೧೧-೨೫೪	೧೦

ಇಷ್ಟವಲ್ಲದ ಬಿಕ್ಕಟ್ಟು

ರಾಷ್ಟ್ರದ ಆಡಳಿತ ನಿರ್ವಹಣೆಯಲ್ಲಿ ಯೂ ರಾಜಕೀಯ ರಂಗದಲ್ಲಿಯೂ ಕ್ರಿಯಾತ್ಮಕ ಪ್ರತಿಪಕ್ಷವಾಗಿ ಕೆಲಸ ನಿರ್ವಹಿಸಬಹುದೆಂದು ಭಾವಿಸಲಾಗಿದ್ದ ಪ್ರಜಾ ಸಮಾಜವಾದಿ ಪಕ್ಷವು ಬಹಳ ಕಷ್ಟದ ದಿನಗಳನ್ನು ಎದುರಿಸುತ್ತಿರುವುದೆಂಬ ವರದಿಗಳು ಈಚೆಗೆ ಬರುತ್ತಿರುತ್ತವೆ. ಅಧಿಕಾರಾರೂಢವಾದ ಕಾಂಗ್ರೆಸು ಪಕ್ಷದ ಧ್ಯೇಯ ಧೋರಣೆಗಳಿಗೆ ಹೆಚ್ಚಿನ ವ್ಯತ್ಯಾಸವನ್ನು ಹೊಂದಿರದ ಈ ಪಕ್ಷದ ಧುರೀಣರು ಕಾಂಗ್ರೆಸಿನ ಧುರೀಣರ ಹಂಗು ಅಥವಾ ದಾಕ್ಷಿಣ್ಯಗಳಿಗೊಳಗಾಗದೆ, ರಾಷ್ಟ್ರದ ಸಮಗ್ರ ಹಿತ ದೃಷ್ಟಿಯಿಂದ ವಿಧಾಯಕ ಸೂಚನೆಗಳನ್ನು ಮಾಡುತ್ತಾ ಪ್ರತಿಪಕ್ಷದ ಹೊಣೆಗಾರಿಕೆಯನ್ನು ಚೊಕ್ಕರೀತಿಯಲ್ಲಿ ನಿರ್ವಹಿಸಿಯಾರೆಂದು ಎಲ್ಲರೂ ನಂಬಿದ್ದರು. ಈ ವಿಶ್ವಾಸವು ಸಂಪೂರ್ಣ ಹುಸಿ ಹೋಗಲಿಲ್ಲವಾದರೂ ಕಮ್ಯುನಿಸ್ಟ್ ಪಕ್ಷದವರಿಗಿಂತಲೂ ಪ್ರಜಾಸಮಾಜವಾದಿ ಪಕ್ಷದ ನಾಯಕರ ಸ್ವರವು ಕ್ಷೀಣವಾಗುತ್ತಾ ನಡೆದಿರುವುದು ದುರ್ದೈವದ ವಿಷಯ. ಪ್ರಬಲ ಪ್ರತಿಪಕ್ಷವಾಗಿ ನಿಲ್ಲುವಂತೆಯೂ —ಅಗತ್ಯ ಬಿದ್ದರೆ ಆಡಳಿತದ ಹೊಣೆ ಹೊತ್ತು ಕೊಳ್ಳುವುದಕ್ಕೆ ಸಿದ್ಧವಿರುವಂತೆಯೂ—ಆಗಲು ಪ್ರಜಾ ಪಕ್ಷದ ಸಂಘಟನೆಯನ್ನು ವಿಸ್ತರಿಸುವ, ಬಲಗೊಳಿಸುವ ಹಾಗು ಒಕ್ಕಟ್ಟನ್ನು ಕಾಯ್ದುಕೊಳ್ಳುವ ಅಗತ್ಯವಿದ್ದಿತು. ಆದರೆ ಇವಾವ ಕೆಲಸಗಳೂ ಸಾಕಷ್ಟು ತೃಪ್ತಿಕರವಾಗಿ ನೆರವೇರಿರುವಂತೆ ಕಂಡು ಬರುವುದಿಲ್ಲ. ಪಕ್ಷದ ನಾಯಕರಲ್ಲಿ ತೀವ್ರ ಭಿನ್ನಾಭಿಪ್ರಾಯಗಳು ಮೂಡಿಕೊಂಡು ಒಡಕಿನ ಭಾವನೆ ಬಲಿಯುತ್ತಿರುವ ಪ್ರತ್ಯಕ್ಷ ನಿದರ್ಶನಗಳು ನೋಡ ಸಿಗುತ್ತವೆ. ಲೋಹಿಯಾರು ತಿರುಕೊಚ್ಚಿಯ ಪ್ರಜಾ ಸಮಾಜವಾದಿ ಸರಕಾರ ರಾಜೀನಾಮೆಯನ್ನು ಕೊಡಬೇಕೆಂದು ಹೇಳಿ, ಅದಕ್ಕೊಪ್ಪದ ಪಕ್ಷದ ಕಾರ್ಯದರ್ಶಿಸ್ಥಾನ ತನಗೆ ಬೇಡವೆಂದು ತಾವೇ ರಾಜೀನಾಮೆ ಕೊಟ್ಟರು. ಶ್ರೀ ಮಧು ಲಿಮಯೆ ಮತ್ತಿತರ ಹೊಣೆಗಾರ ವ್ಯಕ್ತಿಗಳೂ ಪಕ್ಷದ ಚಟುವಟಿಕೆಗಳ ಬಗ್ಗೆ ಅತೃಪ್ತಿಯನ್ನು ಹೊಂದಿದ್ದಾರೆ ಶ್ರೀ ಜಯಪ್ರಕಾಶ ನಾರಾಯಣರು ಬುದ್ಧಗಯಾ ಸಮ್ಮೇಳನದಲ್ಲಿ ಭೂದಾನದ ಚಳವಳಿಕ್ಕೋಸ್ಕರ ಜೀವನವನ್ನೆ ಮುಡುಪಾಗಿಟ್ಟು ಕೊಂಡ ಬಳಿಕ ಪ್ರಜಾ ಸಮಾಜವಾದಿ ಪಕ್ಷದಲ್ಲಿ ಏನೂ ಆಸಕ್ತಿಯನ್ನು ವಹಿಸುತ್ತಿಲ್ಲ. ಇದನ್ನೆಲ್ಲ ಗಮನಿಸಿದರೆ, ಎರಡು ಪಕ್ಷಗಳ ಸಂಯುಕ್ತ ರೂಪದ ಪ್ರಜಾ ಸಮಾಜವಾದಿ ಪಕ್ಷವೆಲ್ಲಿ ನಿಜವಾದ ಸಮಾಜವಾದಿ ಕಾರ್ಯಕರ್ತರಿಗೆ ವಿಶ್ವಾಸ ಉಳಿದಿಲ್ಲವೆಂದು ಸ್ಪಷ್ಟವಾಗುತ್ತದೆ. ಆಚಾರ್ಯ ಕೃಪಲಾನಿಯವರು ನಾಯಕರಾಗಿರುವ ಕಿಸಾನ್ ಮಜದೂರ ಪ್ರಜಾಪಕ್ಷವೊಂದೇ ಹೇಗಾದರೂ ಜೀವ ಹಿಡಿದುಕೊಂಡಿದೆ ಎಂದರೆ ತಪ್ಪಾಗಲಾರದು ಸಮಾಜವಾದಿ ಕಾರ್ಯಕರ್ತರು ಕೃಪಲಾನಿಯವರೊಡನೆ ಸಹಕರಿಸಲು ಇಷ್ಟಪಡದೆ ಜುಗುಪ್ಸೆಯನ್ನು ತೋರಿಸುತ್ತಿರುವುದಕ್ಕೆ, ಸಮಾಜವಾದಿಗಳ ಉದ್ದೇಶದ ಕುರಿತು ಕೃಪಲಾನಿಯವರ ಅನುಯಾಯಿಗಳು ನಡೆಸಿದ ಅಪಪ್ರಚಾರ ಕಾರಣವಾಗಿರಬಹುದು: ಶ್ರೀ ಜಯಪ್ರಕಾಶರಿಗೆ ಭಾರತದ ಉಪಪ್ರಧಾನ ಮಂತ್ರಿಯಾಗುವ ಹಂಬಲ ಉಂಟಾಗಿದೆ ಎಂಬುದೇ ಈ ಅಪಪ್ರಚಾರ. ನೆಹರುಗಳು ಕೆಲ ಸಮಯದ ಹಿಂದೆ ಸರಕಾರದೊಡನೆ ಸಹಕರಿಸಲು ಪ್ರಜಾಸಮಾಜವಾದಿಗಳನ್ನು ಕೇಳಿದ್ದರು. ಆಗಿನ ಸಂಧಾನವು ಮುರಿದು ಬಿದ್ದರೂ, ಆದರಲ್ಲಿ ಕ್ರಿಯಾತ್ಮಕ ಪಾತ್ರವನ್ನು ವಹಿಸಿದ್ದ ಜಯಪ್ರಕಾಶರು ಕೃಪಲಾನಿಯವರ ಅನುಯಾಯಿಗಳ ಕೈಯಲ್ಲಿ ಅವಹೇಳನಕ್ಕೆ ಗುರಿಯಾದರು. ಇಂಥ ಒಡಕು ಹೆಚ್ಚುತ್ತಾ ಕಾಲದ ವರೆಗೆ ಪಕ್ಷವನ್ನು ಸಬಲವಾಗಿ ಇಡಲಾರದು—ಇದನ್ನು ಮನಗಂಡೇ ಈ ತಿಂಗಳ ಕೊನೆಯಲ್ಲಿ ನಾಗಪುರದಲ್ಲಿ ಪಕ್ಷದ ವಿಶೇಷ ಅಧಿವೇಶನವನ್ನು ಜರಗಿಸುವರೆಂದು ತಿಳಿದು ಬರುತ್ತದೆ. ಇಲ್ಲಿ ಈಗಿನ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರೆಲ್ಲರೂ ರಾಜೀನಾಮೆ ಕೊಡುವರೆಂದೂ ಪಕ್ಷದ ಧ್ಯೇಯ ಧೋರಣೆಗಳಲ್ಲಿರುವ ಭಿನ್ನಾಭಿಪ್ರಾಯಗಳನ್ನು ಪರಿಹರಿಸಿ ಹೊಸ ಕಾರ್ಯ ನಿರ್ವಾಹಕ ಸಮಿತಿಯನ್ನು ಆರಿಸಲಾಗುವುದೆಂದೂ ಕೃಪಲಾನಿಯವರ ಹೇಳಿಕೆ ತಿಳಿಸುತ್ತದೆ. ನಾಗಪುರದ ಈ ಅಧಿವೇಶನ ಎಷ್ಟರ ಮಟ್ಟಿಗೆ ಸಫಲವಾದೀತೆಂಬ ವಿಷಯದಲ್ಲಿ ಹೆಚ್ಚಿನ ಆಶಾವಾದಕ್ಕೆ ಎಡೆಯೇನೂ ಉಳಿದಿಲ್ಲ—ಸಮಾಜವಾದಿಗಳೊಡನೆ ಕಿಸಾನ ಮಜದೂರರು ಬೆಳಿಸಿಕೊಂಡ ಸೈಮನಸ್ಯ ಸುಲಭದಲ್ಲಿ ನಿವಾರಣೆ ಹೊಂದಲಾರದಷ್ಟು ಬೆಳೆದಿರುತ್ತದೆ. ಆದಾಗ್ಯೂ ಪರಸ್ಪರ ತಿಳಿವಳಿಕೆಯೂ ಸದಭಿಪ್ರಾಯವೂ ಹುಟ್ಟಿಕೊಂಡು ಪಕ್ಷದ ಅಸ್ತಿತ್ವವನ್ನು ಕಾಯ್ದುಕೊಳ್ಳುವ ಹಾಗು ದೃಢಗೊಳಿಸುವ ಕಾರ್ಯ ನೆರವೇರಲೆಂದು ಹಾರೈಸುವುದೇ ಪ್ರಜಾಪ್ರಭುತ್ವದ ಹಿತೈಷಿಗಳ ಕರ್ತವ್ಯ. ಸರಕಾರದ ಟೀಕೆಯಲ್ಲಿ ತೋರಿಸುವ ಉತ್ಸಾಹದ ಸ್ವಲ್ಪಾಂಶವನ್ನಾದರೂ ಪಕ್ಷದ ನಾಯಕರೂ ಸದಸ್ಯರೂ ವಿಧಾಯಕ ಚಟುವಟಿಕೆಗಳಲ್ಲಿ ಉಪಯೋಗಿಸಿದರೆ ಅದರಿಂದ ಹೆಚ್ಚಿನ ಲಾಭವಾದೀತು.

ವಿಕೇಂದ್ರೀಕರಣ

ಮೈಸೂರು ಸರಕಾರವು ಕರ್ನಾಟಕ ವಿಕೇಂದ್ರೀಕರಣಕ್ಕೆ ಅನುಕೂಲವಾದ ನಿಲುವಿನಲ್ಲಿ ಮೈಸೂರು ಸರಕಾರ ಪರಿಶೀಲಿಸುತ್ತಿದೆಯೆಂದು ಮುಖ್ಯಮಂತ್ರಿಗಳ ಹೇಳಿಕೆಯಿಂದ ಗೊತ್ತಾಗುತ್ತದೆ. ವಿಕೇಂದ್ರೀಕರಣದ ವಿಷಯದಲ್ಲಿ ಮೈಸೂರು ಸರಕಾರವು ಏಕಂಬವಾದ ಹೆಜ್ಜೆಗಳನ್ನಿಡುತ್ತಿರುವುದರ ಕಾರಣಗಳೇನೆ ಇರಲಿ—ಪ್ರಜಾ ವರ್ಗಕ್ಕೆ ಒದು ಪ್ರಿಯವೆನಿಸುತ್ತಿಲ್ಲ. ಕರ್ನಾಟಕ ವಿಕೇಂದ್ರೀಕರಣವಾಗಬಾರದು ಎಂಬ ವಾದದಲ್ಲಿ ಈಗ ಏನೂ ಸ್ವಾರಸ್ಯ ಉಳಿದಿಲ್ಲ; ಕನ್ನಡ ಪ್ರದೇಶಗಳ ಆರ್ಥಿಕ ಸಾಂಸ್ಕೃತಿಕ ಅಭಿವೃದ್ಧಿಗಳು ಕೈಗೂಡುವುದಕ್ಕೆ ವಿಕೇಂದ್ರೀಕರಣದಿಂದ ಬಹಳ ಪ್ರಯೋಜನವಾಗುವುದೆಂಬ ವಿಷಯ ಬಹು ಸಂಖ್ಯಾಕರು ಒಪ್ಪಿದ ಮಾತಾಗಿರುತ್ತದೆ. ಆದಾಗ್ಯೂ ಮೈಸೂರು ಸರಕಾರ ಮಿಶ್ರ ವೇಷ ಮಾಡುತ್ತಿರುವುದನ್ನು ಕಂಡು ಕನ್ನಡಿಗರ ಮನಸ್ಸು ವಿಮರ್ಶಿಸುತ್ತಿದೆ. ಆದರೆ ಇದು ನೋಡಲು ಮೂಲೆ ಸೇರುವ ಕಾಲವಲ್ಲ ಎಂಬುದನ್ನು ಮರೆಯಬಾರದು. ಸರಕಾರವೆ ಮೇಲೆ ಜನರು ತಮ್ಮ ಸ್ವಭಾವವನ್ನು ಬೀರಿ, ಕರ್ನಾಟಕ ವಿಕೇಕರಣದ ಲಾಭಗಳನ್ನು ತಮ್ಮ ವಿವೇಚನಾ ಸಾಮರ್ಥ್ಯದ ಬಲದಿಂದ ಮನಗಾಣಿಸಿಕೊಡುವುದು ಅಗತ್ಯ. ಮೈಸೂರಿನ ಪ್ರಜೆಗಳು ಇದನ್ನು ಉತ್ಸಾಹದಿಂದ ನಡೆಸಲೆಂದು ಹಾರೈಸುತ್ತೇವೆ. ಆದರಂತೆ, ದಕ್ಷಿಣ ಕನ್ನಡದ ನಾಗರಿಕರು, ಕೇರಳದ ನಾಯಕರ ನ್ಯಾಯಸಮ್ಮತವಲ್ಲದ ವಾದವನ್ನು ಪ್ರತಿಭಟಿಸಬೇಕಾಗಿದೆ ಎಂದು ಸೂಚಿಸುತ್ತೇವೆ. ಕೇರಳದ ಪ್ರಭೃತಿಗಳು ದಕ್ಷಿಣ ಕನ್ನಡ, ಕೊಡಗು, ನೀಲಗಿರಿ ಜಾಗೆಯನ್ನು ಕೊಯ್ದು ಮುತ್ತೂರು ಜಿಲ್ಲೆಯ ಕೆಲ ಭಾಗಗಳನ್ನು ಬೆಲಬಾರು ಹಾಗು ತಿರುಕೊಚ್ಚಿಯನ್ನೊಳಗೊಂಡ ಕೇರಳದ ಮೂಲ ನೆಲಕ್ಕೆ ಸೇರಿಸಿ, ಪ್ರಾಂತ ನಿರ್ಮಿಸಬೇಕೆಂದು ಪದೇ ಪದೇ ಹೇಳಿದ್ದುಂಟು. ತಿರುಕೊಚ್ಚಿಯ ಕಾಂಗ್ರೆಸು ಸಮಿತಿಯವರು ಕಳೆದ ವಾರ ಒಪ್ಪಿಸಿದ ಮನವಿಯೂ ಇದನ್ನೆ ಧ್ವನಿಸುತ್ತದೆ. ದಕ್ಷಿಣ ಕನ್ನಡ, ನೀಲಗಿರಿ, ಕೊಡಗು ಗಳಂಥ ಶುದ್ಧ ಕನ್ನಡ ಪ್ರದೇಶಗಳ ಮೇಲೆ ಸ್ವಾಮ್ಯವನ್ನು ಬಯಸುವ ಕೇರಳೀಯರ ವಾದವಲ್ಲಿ ಹುರುಳೇ ಇಲ್ಲವೆಂದು ನಾವು ಇನ್ನೊಮ್ಮೆ ಶ್ರುತಪಡಿಸಬಿದ್ದರೆ, ನಮ್ಮ ಪಕ್ಷವೂ ವಾದವೂ ಬಲಗುಂದಬಹುದು. ಪ್ರಜಾರವೇ ವೈಶಿಷ್ಟ್ಯವಾಗಿರುವ ಈಗಿನ ಕಾಲದಲ್ಲಿ ನ್ಯಾಯವಾದುದನ್ನಾದರೂ ಪಡೆಯ ಬೇಕಿದ್ದರೆ, ಯೋಗ್ಯ ಆಂದೋಲನ ಜಾಗೃತಿಯನ್ನಿಸುತ್ತದೆ. ಕರ್ನಾಟಕದ ಧುರೀಣರು ಇತ್ತ ಗಮನ ಕೊಡುವರೆಂದು ಆಶಿಸುತ್ತೇವೆ.

ಶಸ್ತ್ರ ಸಂಗ್ರಹ ಸ್ಪರ್ಧೆ ತಗಿಸುವ ತತ್ತ್ವ

ರಾಷ್ಟ್ರಸಂಘದ ಬಣಗಳಲ್ಲಿ ಒಮ್ಮತ

ಸಂಯುಕ್ತ ರಾಷ್ಟ್ರಸಂಘದ ಪ್ರಸಕ್ತ ಅಧಿವೇಶನದಲ್ಲಿ ಮಹತ್ವಪೂರ್ಣವಾದ ನಿರ್ಣಯವೊಂದನ್ನು ಕಳೆದ ವಾರ ಕೈಗೊಳ್ಳಲಾಯಿತು: ಅದು ನಿಶ್ಶಸ್ತ್ರೀಕರಣಕ್ಕೆ ಸಂಬಂಧಿಸಿರುತ್ತದೆ. ಕಳೆದ ಎಂಟು ವರ್ಷಗಳಿಂದ ಪಾಶ್ಚಾತ್ಯ ರಾಷ್ಟ್ರಗಳಿಗೂ ರಶಿಯಕ್ಕೂ ಇದ್ದ ಭಿನ್ನಾಭಿಪ್ರಾಯಗಳನ್ನು ಕೆಲಮಟ್ಟಿಗಾದರೂ ಪರಿಹರಿಸಿ, ನುಮಂದಿನ ಸಮಾಲೋಚನೆಗಳನ್ನು ನಡೆಸುವುದಕ್ಕೆ ದಾರಿಯನ್ನು ಸುಗಮಮಾಡಿಕೊಟ್ಟು, ಈ ಗೊತ್ತುವಳಿಯನ್ನು ಭಾರತವು ಮಂಡಿಸಿತು. ಕೆಲಸಮಯದ ಹಿಂದೆ ರಶಿಯದ ಪ್ರತಿನಿಧಿ ವಿಶಿಂಸ್ಕಿಯವರು ತಮ್ಮ ಸರಕಾರದ ಪರವರ್ತಿತ ಧೋರಣೆಯನ್ನು ಸಂಯುಕ್ತ ರಾಷ್ಟ್ರಕ್ಕೆ ಮನಗಾಣಿಸಿಕೊಡುತ್ತಾ, ನಿಶ್ಶಸ್ತ್ರೀಕರಣಕ್ಕೆ ಕೆಲವು ಸೂಚನೆಗಳನ್ನು ಮಾಡಿದರು. ಇವುಗಳಿಗೂ ಪಾಶ್ಚಾತ್ಯ ರಾಷ್ಟ್ರಗಳ ತತ್ವಗಳಿಗೂ ಹೆಚ್ಚಿನ ವ್ಯತ್ಯಾಸವಿರಲಿಲ್ಲ. ಇದನ್ನು ಶುಭಲಕ್ಷಣವೆಂದು ಗ್ರಹಿಸಿದ್ದವರಿಗೆ, ಭಾರತದ ಗೊತ್ತುವಳಿಗೆ ದೊರೆತಿರುವ ನುನ್ನಣೆಯು ಹೆಚ್ಚಿನ ಸಂತೋಷವನ್ನುಂಟು ಮಾಡಿರುತ್ತದೆ.

ಅಣುಶಸ್ತ್ರಗಳಿಗೆ ಪ್ರತಿಬಂಧ

ಇಷ್ಟರ ವರೆಗೆ ರಾಷ್ಟ್ರಸಂಘದ ಎರಡೂ ಬಣಗಳವರೂ ಪರಸ್ಪರ ವಿರೋಧವನ್ನಾಡುವುದರಲ್ಲಿಯೇ ಸಮಯಕಳೆದುನಿರಾಶೆಯನ್ನು ಮಾಡಿದ್ದರು. ಈ ಸಲ ರಶಿಯವು ವ್ಯಾವಹಾರಿಕ ಬುದ್ಧಿಯನ್ನು ಪ್ರದರ್ಶಿಸಿ ಪಶ್ಚಿಮದ ರಾಷ್ಟ್ರಗಳ ಸಿಲುಮೆಯನ್ನು ಹೆಚ್ಚು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿತು. ಪರಿಣಾಮದಲ್ಲಿ ತನ್ನ ಮೂಲ ನಿಲುಮೆಯಲ್ಲಿ ಕೆಲಮಟ್ಟಿನ ರಿಯಾಯಿತಿಯನ್ನೂ ಔದಾರ್ಯವನ್ನೂ ತೋರಿಸಿತು. ಭಾರತವು ಈ ಸಂದರ್ಭದ ಸದುಪಯೋಗ ಮಾಡಲೆಳಸಿ, ಇಬ್ಬಣಗಳೂ ಒಪ್ಪಿಕೊಂಡ ತತ್ವಗಳನ್ನು ಹೆಚ್ಚಿನ ಪರಿಶೀಲನೆಗೋಸ್ಕರ ನಿಶ್ಶಸ್ತ್ರೀಕರಣ ಸಮಿತಿಗೆ ಒಪ್ಪಿಸಿಕೊಡಬೇಕೆಂದು ಹೇಳಿತ. ನಿಷ್ಕ್ರಿಯವಾಗಿದ್ದ ನಿಶ್ಶಸ್ತ್ರೀಕರಣ ಸಮಿತಿಯು ಪುನಃ ಕಾರ್ಯವನ್ನು ತೊಡಗುವುದಕ್ಕೆ ಇದರಿಂದ ಚಾಲನೆ ದೊರಕಿತು. ಎಲ್ಲ ಬಗೆಯ ಸೈನ್ಯ ಮತ್ತು ಶಸ್ತ್ರಾಸ್ತ್ರಗಳ ಪ್ರಮಾಣವನ್ನು ಕಡಿಮೆ ಮಾಡಬೇಕೆಂದೂ ಅಣು ಶಸ್ತ್ರಾಸ್ತ್ರಗಳ ಉತ್ಪಾದನೆ ಮತ್ತು ಪ್ರಯೋಗವನ್ನು ಪ್ರತಿ

ಪ್ರಬಂಧ ಸ್ಪರ್ಧೆ

"ಪುಸ್ತಕ ಮಾಸ"ದ ಶುಭ ಪ್ರಸಂಗದಲ್ಲಿ "ನವಯುಗ" ವಾರಪತ್ರಿಕೆಯ ಪರವಾಗಿ ಒಂದು ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲು ನಿರ್ಧರಿಸಿದ್ದೇನೆ. ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನವನ್ನು ಹೊಂದಿದ (೧) "ಮಧುವನ" (ವಿವಿಧ ಕತೆಗಾರರು) (೨) "ಕವಿತಾಕಾಮಿನಿ" (ಎಸ್. ವೆಂಕಟರಾಜ) (೩) "ಕಾವ್ಯ ಸಾಮ್ರಾಜ್ಯ" (ವಿವಿಧ ಕವಿಗಳು) (೪) "ವಿಶಿಯದ ಸಂಪತ್ತು" (ಕು. ಶಿ. ಹರಿದಾಸ ಭಟ್ಟ) ಮತ್ತು (೫) ಬದುಕು ಬಂಗಾರ (ಕುವೆಂಪು ಸ್ವಾಮಿ)— ಈ ಐದು ಗ್ರಂಥಗಳಲ್ಲಿ ಯಾವುದಾದರೂ ಒಂದರ ಕುರಿತು ವಿಮರ್ಶಾತ್ಮಕ ಪ್ರಬಂಧವನ್ನು ಇದೇ ನವಂಬರ ೨೦ನೇ ತಾರೀಕಿನೊಳಗೆ ನಮ್ಮ ಕೈ ಸೇರುವಂತೆ ಬರೆದು ಕಳುಹಿಸಬೇಕು. ಪ್ರಬಂಧವು ಫೂಲ್‌ಸ್ಕ್ಯಾಪ್ ೪ ಹಾಳೆಗಳನ್ನು ಮೀರಬಾರದು.

ಪರಿಶೀಲನ ಸಮಿತಿಯವರು ನಿರ್ಣಯಿಸಿದ ಯೋಗ್ಯ ಪ್ರಬಂಧಗಳಿಗೆ ಕೆಳಗಿನಂತೆ ಬಹುಮಾನಗಳನ್ನು ಕೊಡಲಾಗುವುದು:—

ಪ್ರಥಮ ಬಹುಮಾನ: ೨೫ ರೂಪಾಯಿ.
ದ್ವಿತೀಯ ಬಹುಮಾನ: ೧೫ ರೂಪಾಯಿ.
ತೃತೀಯ ಬಹುಮಾನ: ೧೦ ರೂಪಾಯಿ.
(ಬಹುಮಾನಗಳು ಗ್ರಂಥ ರೂಪದಲ್ಲಿ ಕೊಡಲ್ಪಡುತ್ತವೆ.)

"ನವಯುಗ" ವಾರಪತ್ರಿಕೆ,
ಉಡುಪಿ, ದ. ಕನ್ನಡ.

ಬಂಧಿಸಬೇಕೆಂದೂ ಈಗ ಸಂಗ್ರಹದಲ್ಲಿರುವ ಅಣುಶಕ್ತಿಗಳ ಶಕ್ತಿಯನ್ನು ವಿಧಾಯಕ ಕಾರ್ಯಗಳಿಗೆ ಬಳಸಬೇಕೆಂದೂ ಸಾಮಾನ್ಯವಾಗಿ ಒಪ್ಪಿಕೊಂಡಿದ್ದು, ಇತ್ತಗಳನ್ನು ಜ್ಯಾರಿಗೆ ತರುವ ಬಗೆಯನ್ನು ನಿರ್ಧರಿಸಿದರೆ, ಆಗ ಉದ್ದೇಶ ಪೂರ್ತಿಯಾಗುತ್ತದೆ. ಅಣುಶಕ್ತಿಗಳ ಉಟೋಪಯನ್ನೇಸಲ್ಲಿಸಬೇಕೆಂದು ನೆಹರೂಗಳು ಪ್ರತಿಪಾದಿಸುತ್ತಿರುವುದಕ್ಕೆ ದೊರೆತ ಸಮ್ಮತಿ ಮುದ್ರೆಯನ್ನು ಮಹತ್ವಾಧನೆಯೆಂದೂ ಪರಿಗಣಿಸಿದರೆ ತಪ್ಪಾಗಲಾರದು.

ವರ್ಣ ಭೇದ ನೀತಿ

ದಕ್ಷಿಣ ಆಫ್ರಿಕದಲ್ಲಿರುವ ಭಾರತೀಯ ವಂಶಜರ ಪ್ರಶ್ನೆಯನ್ನು ಭಾರತ, ಪಾಕಿಸ್ತಾನ ಹಾಗು ದಕ್ಷಿಣ ಆಫ್ರಿಕಗಳು ನೇರವಾದ ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳುವ ಪ್ರಯತ್ನ ಮಾಡಬೇಕೆಂಬ ಗೊತ್ತುವಳಿಗೆ ಭಾರತ ಮತ್ತು ಪಾಕಿಸ್ತಾನಗಳು ಒಪ್ಪಿಗೆಯನ್ನು ಸೂಚಿಸಿದ್ದು, ಅದನ್ನು ರಾಷ್ಟ್ರಸಂಘವು ಬಹುಮತದಿಂದ ಅಂಗೀಕರಿಸಿತು. ಆರು ತಿಂಗಳ ಒಳಗಾಗಿ ಇಂಥದೊಂದು ವಿಚಾರವು ನಡೆಯಲಿಲ್ಲವಾದರೆ, ರಾಷ್ಟ್ರಸಂಘದ ಕಾರ್ಯದರ್ಶಿಗಳು ತಮ್ಮ ವರ್ಚಸ್ಸನ್ನು ಉಪಯೋಗಿಸಬಲ್ಲದು. ಭಾರತವು ಗೊತ್ತುವಳಿಗೆ ಸಮ್ಮತಿಸುತ್ತಾ ಕೆಲವು ಸ್ಪಷ್ಟೀಕರಣಗಳನ್ನು ನೀಡಿತು—ಮಾತುಕತೆಗಳನ್ನು ತೊಡಗಿದ ಸೂತ್ರಕ್ಕೆ ಪ್ರಶ್ನೆಯನ್ನು ರಾಷ್ಟ್ರ ಸಂಘದ ಆಶ್ರಯದಿಂದ ಹೊರಗೊಯ್ಯಲಾಯಿತೆಂದು ಭಾವಿಸಬಾರದೆಂದು ಹೇಳಿದ್ದಲ್ಲದೆ, ಕಳೆದ ಎಂಟು ವರ್ಷಗಳಿಂದ ಆಗಿಂದಾಗ್ಗೆ ರಾಷ್ಟ್ರ ಸಂಘವು ಸ್ವೀಕರಿಸುತ್ತಾ ಬಂದ ನಿರ್ಣಯಗಳ ತಳಹದಿಯ ಮೇಲೆಯೇ ಹೊಸ ಪ್ರಯತ್ನವೂ ಮುಂದುವರಿಸಲ್ಪಡುವುದೆಂದು ತಿಳಿಸಿತು ದಕ್ಷಿಣ ಆಫ್ರಿಕದ ಪ್ರತಿನಿಧಿಗಳು ರಾಷ್ಟ್ರ ಸಂಘದ ಹೊರಗೆ ಬೇಕಾದರೆ ನೇರವಾದ ಮಾತುಕತೆಗಳನ್ನು ತೊಡಗಬಹುದೆಂದು ಹೇಳಿದುದರ ಲಾಭ ಪಡೆಯಲು ಲ್ಯಾಟೀನು ಅಮೇರಿಕದ ಎಂಟು ರಾಷ್ಟ್ರಗಳವರು ಈ ಸಂಯುಕ್ತ ಗೊತ್ತುವಳಿಯನ್ನು ನುಂಡಿಸಿದರು. ಆದರೆ, ರಾಷ್ಟ್ರ ಸಂಘದ ವರ್ಚಸ್ಸಿನಿಂದ ಮುಕ್ತವಾಗಿರದ ಈ ಗೊತ್ತುವಳಿಯನ್ನು ದಕ್ಷಿಣ ಆಫ್ರಿಕದ ಸರಕಾರ ಪುರಸ್ಕರಿಸಿಲ್ಲ. ಕಾರಣ, ಅದರ ಮುಂದಿನ ನಿಲುವು ಆಶಾದಾಯಕವಾಗಿಲ್ಲ.

ಆಮಂತ್ರಣ

ನವಯುಗ ವಾರಪತ್ರಿಕೆಯ
ನೇತೃತ್ವದಲ್ಲಿ ಉಪಕ್ರಮಿಸಿದ
ಪುಸ್ತಕ ಮಾಸದ ಅಂಗವಾಗಿ

ಇದೇ ತಾ. 7—11—1954ನೇ
ಆದಿತ್ಯವಾರ ಬೆಳಿಗ್ಗೆ ಗಂಟೆ 9-30ಕ್ಕೆ
ನವಯುಗ ಪ್ರೆಸ್ಸಿನ ಮಾಳಿಗೆಯಲ್ಲಿ
ಕನ್ನಡದ ಪ್ರಸಿದ್ಧ ಸಾಹಿತಿಗಳಾದ
ಶ್ರೀ. ಕೆ. ಶಿವರಾಮ ಕಾರಂತ
ಮತ್ತು
ಶ್ರೀ. ವಿ. ಸೀತಾರಾಮಯ್ಯ, ಎಂ. ಎ.
ಅವರ ಭಾಷಣಗಳನ್ನು ಏರ್ಪಡಿಸಲಾಗಿದೆ.
ಸರ್ವರಿಗೂ ಸ್ವಾಗತವಿದೆ.

ಸಂಪಾದಕ,
ನವಯುಗ, ಉಡುಪಿ.

ಸಮ್ಮಿಶ್ರ ವ್ಯವಸ್ಥೆ

ಪಾಕಿಸ್ತಾನದಲ್ಲಿ ಗವರ್ನರ ಜನರಲ್ಲರು ಸ್ರಕ್ಷುಬ್ಧ ಪರಿಸ್ಥಿತಿಯನ್ನು ಸಾರಿ, ಮಂತ್ರಿ ಮಂಡಳದ ಪುನಾರಚನೆಗೆ ಆದೇಶ ನೀಡಿ ಘಟನಾ ಸಮಿತಿಯನ್ನು ವಿಸರ್ಜಿಸಿ, ಹೊಸ ಅಧ್ಯಾಯವನ್ನೆ ತೆರೆದರು. ಸಾರ್ವ ಭೌಮಾಧಿಕಾರವುಳ್ಳ ಘಟನಾ ಸಮಿತಿಯನ್ನು ವಿಸರ್ಜಿಸಲು ಗವರ್ನರ ಜನರಲರಿಗೆ ಅಧಿಕಾರವಿದೆಯೇ ಎಂಬ ಪ್ರಶ್ನೆಯನ್ನು ವಿಸರ್ಜಿತ ಘಟನಾ ಸಮಿತಿಯ ಅಧ್ಯಕ್ಷೆ ತಾಜುಮುದ್ದೀನರು ನ್ಯಾಯಸ್ಥಾನಕ್ಕೆ ಕೊಂಡೊಯ್ಯುವರೆಂದು ತಿಳಿದು ಬರುತ್ತದೆ. ಇಂಗ್ಲೆಂಡಿನ ಪರಂಪರೆಯನ್ನು ನೋಡಿದರೆ, ಗವರ್ನರ ಜನರಲ್ಲರ ಕೈವಾದಲ್ಲಿ ತಪ್ಪೇನೂ ಇಲ್ಲವೆಂದು ಸರಕಾರಿ ವಲಯಗಳು ಅಭಿಪ್ರಾಯ ಪಡುತ್ತವೆ. ಪಾಕಿಸ್ತಾನದಲ್ಲಿನ ಬಿಕ್ಕಟ್ಟಿನಿಂದ ಮಹಮ್ಮದಾಲಿಯವರ ಸ್ಥಿತಿಗೆ ಬಹಳ ಮಟ್ಟಿಗೆ ಕುಂದಿದ್ದರೂ ಅದನ್ನವರು ತೋರಿಸಿಕೊಳ್ಳುತ್ತಿಲ್ಲ—ತನ್ನ ಮಂತ್ರಿ ಮಂಡಳವು ಗವರ್ನರ ಜನರಲರಿಗಲ್ಲ—ರಾಷ್ಟ್ರಕ್ಕೆ ಹೊಣೆಯಾಗಿದೆ ಎಂಬುದಾಗಿ ಅವರು ಬೆಂಕಿಂದ ಪತ್ರಿಕಾ ಪರಿಷತ್ತಿನಲ್ಲಿ ಹೇಳಿದನು. ಆದರೆ, ಗವರ್ನರ ಜನರಲ್ಲರ ಗೃಷ್ಟಿಗೆ ಜನಪ್ರಿಯತೆಯನ್ನು ಸಂಪೂರ್ಣ ಕಳೆದುಕೊಂಡ ಮುಸ್ಲಿಂ ಲೀಗಿನ ಧುರೀಣರ ಬದಲು ಎಲ್ಲ ಪಕ್ಷಗಳ ಸಮ್ಮಿಶ್ರ ಆಡಳಿತ ವ್ಯವಸ್ಥೆಯೇ ರಾಷ್ಟ್ರಕ್ಕೆ ಹಿತವೆಂದು ಕಾಣುತ್ತಿದ್ದು, ಮಂತ್ರಿ ಮಂಡಳದ ಪುನಾರಚನೆಗೆ ಅವರು ನೀಡಿದ ಆದೇಶಕ್ಕೆ ಮೂಲ ಕಾರಣವಾಗಿ ಇದನ್ನು ಉಲ್ಲೇಖಿಸಬಹುದು.

ಲೀಗಿನಲ್ಲಿ ವಿಶ್ವಾಸವಿಲ್ಲ

ಪರಿಣಾಮವಾಗಿ, ಮಹಮ್ಮದಾಲಿಯವರು ಮುಸ್ಲಿಂ ಲೀಗಿನ ಕೆಲ ಸದಸ್ಯರನ್ನು ಬಿಟ್ಟುಗೊಟ್ಟು, ದಕ್ಷ ಆಡಳಿತಗಾರರಿಂದ ಕೂಡಿದ ಹೊಸ ಮಂತ್ರಿ ಮಂಡಳವನ್ನು ರಚಿಸುವುದು ಅಗತ್ಯವಾಯಿತು. ಮುಸ್ಲಿಂ ಲೀಗಿನ ಸದಸ್ಯರ ವ್ಯಾಬಲ್ಯವಿರುವ ಘಟನಾ ಸಮಿತಿಯ ವಿಸರ್ಜನೆಯನ್ನೂ ಮೂಕ ಪ್ರೇಕ್ಷಕನಂತೆ ನೋಡುತ್ತಿರಬೇಕಾಯಿತು. ತೀರ ಶಿಥಿಲಗೊಂಡ ಆಡಳಿತವನ್ನು ಸರಿಪಡಿಸುವುದಕ್ಕೂ, ಜನರ ವಿಶ್ವಾಸವನ್ನು ಕಳೆದುಕೊಂಡು ಸರಕಾರದಲ್ಲಿ ನವ ಚೇತನ ತುಂಬುವುದಕ್ಕೂ ಅವರು ಇಬ್ಬರು ಸೈನ್ಯಾಧಿಕಾರಿಗಳನ್ನೂ ಡಾ. ಖಾನ್ ಸಾಹೆಬರಂಥ ಪ್ರಬಲ ಕಾಂಗ್ರೆಸಿಗರನ್ನೂ ಮಂತ್ರಿ ಮಂಡಳದಲ್ಲಿ ಸೇರಿಸಿಕೊಂಡರು. ಪೂರ್ವ ಬಂಗಾಲವ ಜನರ ಪ್ರೀತಿ ಪಾತ್ರರಾದ ಗಳಿಸುವ ಉದ್ದೇಶದಿಂದಲೇ ಇರಬೇಕು—ಆಲ್ಲಿಯ ಚುನಾವಣೆಗಳಲ್ಲಿ ಮಹತ್ವದ ಪಾತ್ರ ಸಹಿಸಿದ ಅವಾಮಿ ಲೀಗಿನ ನಾಮಕ ಸುಹ್ರವರ್ದಿಯವರೊಡನೆಯೂ ಗಂಭೀರ ಸಮಾಲೋಚನೆಗಳು ನಡೆಯುತ್ತವೆ. ಅವರಾಗಲೀ ಅವರು ಹೆಸರಿಸಿದ ಬೇರೆ ಯಾರೇ ಆಗಲೀ ಮಂತ್ರಿ ಮಂಡಳದ ಉಳಿದ ಸ್ಥಾನಗಳನ್ನು ತುಂಬುವರೆಂದು ಹೇಳಲಾಗುತ್ತಿದೆ. ಇದರಿಂದ ಮುಸ್ಲಿಂ ಲೀಗಿನ ಸಮಾಧಿಯನ್ನು ಕಟ್ಟಿದಂತಾಯಿತೆಂದು ತೋರಿದರೂ ರಾಷ್ಟ್ರದ ಇಂದಿನ ಹದಗೆಟ್ಟ ಪರಿಸ್ಥಿತಿಯಲ್ಲಿ ರಾಂತಿಯನ್ನೂ ಸುವ್ಯವಸ್ಥೆಯನ್ನೂ ಕಾಪಾಡಲು ಪಕ್ಷಾತೀತವಾದ ಜನಸ್ವೀಯ ಮುಂದಾಳುತ್ವಕ್ಕೆ ಅವಕಾಶ ಕೊಡುವ ಗವರ್ನರ ಜನರಲ್ಲರು ಪ್ರಯತ್ನಿಸಿದರೆಂಬುದನ್ನು ಮುಂದಿನ ಬೆಳವಣಿಗೆಗಳು ಸ್ಪಷ್ಟಪಡಿಸಬೇಕು.

ಉಡುಪಿ

ಮುನಿಸಿಪಲ್ ಅಧ್ಯಕ್ಷರ ಚುನಾವಣೆ—ಕಳೆದ ತಾ. 26ರಲ್ಲು ಮುನಿಸಿಪಲ್ ಕೌನ್ಸಿಲಿನ ವಿಶೇಷ ಸಭೆಯು ಡಾ| ಕೆ. ಎಲ್. ಐತಾಳರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಯು. ಎಸ್. ನಾಯ್ಕರು ರಾಜೀನಾಮೆ ಕೊಟ್ಟ ಸ್ಥಾನಕ್ಕೆ ಉಪಾಧ್ಯಕ್ಷರಾದ ಡಾ| ಸಿ. ವಿ ವ್ಯಾಸರಾಯರು ಕಾಂಗ್ರೆಸ್ ಪಕ್ಷದವರ ಬೆಂಬಲದಿಂದ ಬಹುಮತ ಪಡೆದು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಇವರಿಗೆ ಒಂಭತ್ತು ಮತಗಳೂ ಇವರ ಪ್ರತಿ ಸ್ಪರ್ಧಿ ಶ್ರೀ ಎ. ಮಂಜುನಾಥ ಶಾನುಭೋಗರಿಗೆ ಐದು ಮತಗಳೂ ದೊರೆತವು. ನೂತನ ಸಭಾಪತಿಗಳು ಆಡಳಿತವನ್ನು ಚೆನ್ನಾಗಿ ನಡೆಸಿಕೊಂಡು ಹೋಗುವರೆಂಬ ನಂಬಿಕೆ ಸಾರ್ವಜನಿಕರಲ್ಲಿದೆ.

ವ್ಯಾಸಂಗ ಗೋಷ್ಠಿಯ ಉದ್ಘಾಟನೆ—ಕಳೆದ ತಾ. 26ರಲ್ಲು ಇಲ್ಲಿಯ ಕರ್ನಾಟಕ ಸಂಘದ ವ್ಯಾಸಂಗ ಗೋಷ್ಠಿಯನ್ನು 'ನವಯುಗ' ಭಾಷಣಾಲಯದಲ್ಲಿ ಶ್ರೀ ಡಿ. ರಾ. ಬೇಂದ್ರೆಯವರು ಪ್ರಾರಂಭಿಸಿದರು. ಶ್ರೀ ಕೆ. ಎಚ್. ಸಿಪ್ಪರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಕು. ಶಿ. ಹರಿದಾಸ ಭಟ್ಟರು ಗೋಷ್ಠಿಯ ಗೊತ್ತು ಗುರಿಗಳನ್ನು ವಿವರಿಸಿದರು. ಎಸ್. ಜಿ. ಎಸ್. ಕಾಲೇಜಿನ ಪ್ರಾಧ್ಯಾಪಕ ಶ್ರೀ ಕೆ. ಬಿ. ರಾಮಕೃಷ್ಣ ರಾಯರು ತಾವು ಬರೆದ "ಕಲಾಧರ್ಮ" ಎಂಬ ಪ್ರಬಂಧವನ್ನೆ ಓದಿದರು.

ಕಲಾವೃಂದದಲ್ಲಿ ತಾ. 26ರಲ್ಲು ಶ್ರೀ ಪರಿಮಾರು ಮಠದ ಸ್ವಾಮಿಗಳವರ ಆಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಶ್ರೀ ಬೇಂದ್ರೆಯವರು 'ಕಾಕುಂತಲ' ಕಾವ್ಯದ ಕುರಿತು ಉಪನ್ಯಾಸನಿತ್ತರು. ವೃಂದದ ಉಪಕಾರ್ಯದರ್ಶಿ ಶ್ರೀ ಪಿ. ಆರ್. ಐತಾಳರು ಧನ್ಯವಾದಗಳನ್ನರ್ಪಿಸಿದರು.

ಧನಲಕ್ಷ್ಮಿ ಪೂಜಾ ಸಮಾರಂಭ—ಸ್ಥಳೀಯ ದೈವಜ್ಞ ಬ್ರಾಹ್ಮಣ ಸಂಘದವರು ತಾ. 27ರಲ್ಲು ಧನಲಕ್ಷ್ಮಿ ಪೂಜಾಸಮಾರಂಭವನ್ನು ಶ್ರೀ. ಎ. ಜೆ. ಆಳ್ವಿಯವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಶ್ರೀ ಪದ್ಮನಾಭ ಶೇಟರು ಸ್ವಾಗತ ಮಾತುಗಳನ್ನಾಡಿದರು. ಶ್ರೀಗಳಾದ ವರದಾಚಾರ್ಯ, ಯು. ಲಕ್ಷ್ಮೀನಾರಾಯಣ ಕಿಣಿ, ಕೆ. ಸುಬ್ರಾಯ ಶೆಣೈ, ಡಾ| ಯು. ಸುಂದರ ಶೇಟ್ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು.

ಯಕ್ಷಗಾನ ಕೂಟ—ಶ್ರೀ ಪೀರೂರು ಮಠದ ಶ್ರೀ ಲಕ್ಷ್ಮೀಂದ್ರತೀರ್ಥ ಸ್ವಾಮಿಗಳವರ ಪರಮಾರಾಧ್ಯರಾಯವನ್ನಲ್ಲಿ ಉಡುಪಿ ಯಕ್ಷಗಾನ ಕಲಾ ಮಂಡಲಿಯವರು ಕಳೆದ ತಾ. 25ರಲ್ಲು ಕೀರ್ತಿಶೇಷ ಶ್ರೀ ರಾಜಗೋಪಾಲಾಚಾರ್ಯರಿಂದ ವಿರಚಿತವಾದ 'ಶ್ರೀ ಕೃಷ್ಣವಿನಾಪ್ತವೇಧ' ಎಂಬ ಯಕ್ಷಗಾನ ಕೂಟವನ್ನು ಯಶಸ್ವಿಯಾಗಿ ನೆರವೇರಿಸಿದರು. ಶ್ರೀಗಳಾದ ಕೆ. ನಾರಾಯಣ ಸೆಟ್ಟರ ಹಾಡುಗಾರಿಕೆ, ಹಿರಿಯ ಪ್ರಸಂಗಕರ್ತರಾದ ವೈಕುಂಠ ಬಾಡಿಗ, ಪುಟ್ಟು ಸುಬ್ಬರಾಯ, ಪೂಡುಬಿದ್ರಿ ಶೀನ ಸೆಟ್ಟಿ ಮೊದಲಾದವರ ಪಾತ್ರಗಾರಿಕೆ ಆಕರ್ಷಕವಾಗಿತ್ತು.

ನಗರ ಸಭೆಯ—ತಾ. 30ರಲ್ಲು ಸಂಜೆ ನೂತನ ಚೇರ್‌ಮನ್ ಡಾ| ಸಿ. ವಿ. ವ್ಯಾಸರಾಯರ ಅಧ್ಯಕ್ಷತೆಯಲ್ಲಿ ಜರಿಗಿದಾಗ ಇಂದಿರಾ ಸರಕಾರದ ಆಹಾರ ಮಂತ್ರಿ ಶ್ರೀ ಆರ್. ಎ. ಕಿದ್ವಾಯಿಯವರ ನಿಧನದ ಬಗ್ಗೆ ಸಂತಾಪ ಸೂಚಕ ನಿರ್ಣಯವನ್ನು ಮಾಡಿತು.

ಶ್ರೀ ಎಮ್. ವಿಠಲ ಕಾಮತರ ನಿಧನ—ಉಡುಪಿಯ ಅಭಿವೃದ್ಧಿಗಾಗಿ ಮಡಿದ ಹಿರಿಯರಲ್ಲೊಬ್ಬರೂ ನಗರ ಸಭೆಯ ಕಾಂಗ್ರೆಸ್ ಸಂಸ್ಥಾಗ್ರೇಸರರೂ ಮಾಜಿ ತಾಲೂಕು ಬೋರ್ಡ್ ಅಧ್ಯಕ್ಷರೂ ಸಾರ್ವಜನಿಕ ಸೇವಾನಿರತರೂ ಆಗಿದ್ದ ವಕೀಲ್ ಶ್ರೀ ಎಮ್. ವಿಠಲ ಕಾಮತರು ತಮ್ಮ 72ನೇ ವಯಸ್ಸಿನಲ್ಲಿ ತಾ. 31ರಲ್ಲು ರಾತ್ರಿ ಹೃದಯಸ್ತಂಭನದಿಂದ ವಿಧಿವಶರಾದರೆನ್ನಲು ವಿಷಾದವೆನಿಸುತ್ತದೆ. ರಾತ್ರಿಯಾದರೂ ಸ್ಮಶಾನ ಯಾತ್ರೆಯಲ್ಲಿ ತುಂಬಾ ಜನರು ನೆರೆದಿದ್ದರು. ಡಿ| ಮುನ್ಸಿಫ್ ಇ. ಗೋನ್ಸಾಲ್ವಿಸ್, ಡಾ| ಟಿ. ಎಂ. ಎ. ಪೈ, ಟಿ. ಎ. ಪೈ, ಎಂ. ಎಲ್. ಎ, ಡಾ| ಕೆ. ಎಲ್. ಐತಾಳ್, ಕೆ. ನರಹರಿ ಕಾಮತ್, ಕೆ. ರಾಮಚಂದ್ರ ನಾಯಕ್ ಮೊದಲಾದವರು ಕಳೇಬರಕ್ಕೆ ಪುಷ್ಪಮಾಲೆ ಹಾಕಿ ಕೊನೆಯ ಗೌರವ ಸಲ್ಲಿಸಿದರು. ಇವರ ನಿಧನದ ಸಲುವಾಗಿ ತಾ. 1ರಲ್ಲು ಮುನ್ಸಿಪಲ್ ಕಾಚೇರಿಗಳು ಮುಚ್ಚಲ್ಪಟ್ಟಿದ್ದವು. ಮುನ್ಸಿಫ್ ಕೋರ್ಟಿನಲ್ಲಿ ಕಾರ್ಯಾರಂಭವಾಗುವ ಕಾಲಕ್ಕೆ ದಿವಂಗತರ ಸ್ಮರಣೆ ಮಾಡಲ್ಪಟ್ಟು ಕೆಲವು ನಿಮಿಷ ಕೋರ್ಟು ಕೆಲಸವನ್ನು ನಿಲ್ಲಿಸಿಡಲಾಯಿತು. ಸಂಜೆ ರಥವೀದಿಯಲ್ಲಿ ಸಾರ್ವಜನಿಕ ಸಭೆಯು ಡಾ| ಕೆ. ಎಲ್. ಐತಾಳರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀಗಳಾದ ಟಿ. ಎ. ಪೈ, ಎಮ್. ಎಲ್. ಎ; ಎ. ಜೆ. ಆಳ್ವಿ, ಸಿ. ವಿ. ಆಚಾರ್, ಯು. ರಾಮಚಂದ್ರ, ಕೇಳುನಂಬಿಯಾರ್ ಮೊದಲಾದವರು ದಿವಂಗತರ ಗುಣಗಾನ ಮಾಡಿದರು. ಸಾರ್ವಜನಿಕ ಸಭೆಯು ಬಳಿಕ ಮಾಡಿದ ನಿರ್ಣಯಗಳನ್ನು ಸರಕಾರಕ್ಕೆ ಕಳುಹಿಸಿಕೊಡಲಾಯಿತು. ಸಂಜೆ 3 ಗಂಟೆಗೆ ನಗರ ಸಭೆಯ ವಿಶೇಷ ಸಭೆ ಜರುಗಿ ಮುಂದಿನ ಕಾರ್ಯಕ್ರಮಗಳನ್ನು ನಿರ್ಣಯಿಸಲಾಯಿತು.

ಕಟಿಪಾಡಿ—ಸಮಾಜವಿಕಾಸ ಯೋಜನೆ ಗನುಗುಣವಾಗಿ ಹೆರಿಗೆ ಆಸ್ಪತ್ರೆಯೊಂದು ತಾ. 21ರಲ್ಲು ಮಂಗಳೂರಿನ ಶ್ರೀಮತಿ ಮೇರಿ ಬ್ರಿಟೊ ಅವರಿಂದ ಉದ್ಘಾಟಿಸಲ್ಪಟ್ಟಿತು. ಸಭಾರಂಭವ ಅಧ್ಯಕ್ಷತೆಯನ್ನು ಉಡುಪಿಯ ಡಾ! ಪಿ. ಆರ್. ನಾಯಕರು ವಹಿಸಿದ್ದರು. ಪ್ರಾರ್ಥನಾನಂತರ ಶ್ರೀಮತಿ ಕಲ್ಯಾಣಿ ಡಿ. ಸೆಟ್ಟಿಯವರು ಸ್ವಾಗತ ಭಾಷಣ ಮಾಡಿದರು. ಶ್ರೀಗಳಾದ ಟಿ. ಎ. ಪೈ, ಎಸ್. ಎಲ್. ಎ. ಕೆ. ಲಿಂಗಪ್ಪಯ್ಯ, ತಪಶಿಲ್ದಾರ್, ಕೆ. ವಾಸುದೇವ ಕಾಮತ್, ಡಾ! ಕೆ. ಜೆ. ಕಿಣಿ ಮತ್ತು ಶ್ರೀಮತಿ ಎಸ್. ಕಣ್ಣನ್, ಇವರು ಭಾಷಣ ಮಿತ್ತು ಹಳ್ಳಿಗಳ ಬಡ ಹೆಂಗಸರು ಈ ಹೆರಿಗೆ ಕೇಂದ್ರದ ಉಪಯೋಗ ಪಡೆಯಬೇಕೆಂದು ಹೇಳಿ ಸರ್ಕಾರ ಬೆಂಬಲ ಹಾಗೂ ಸಹಕಾರ ವನ್ನು ಬಯಸಿದರು. ಶ್ರೀಮತಿ ಕುಸುಮ ಎಸ್. ನಾಯ್ಕರು ಧನ್ಯವಾದಗಳನ್ನರ್ಪಿಸುತ್ತಾ ಡಾಕ್ಟರುಗಳಾದ ಪಿ. ಆರ್. ನಾಯಕ್, ಬಿ. ಬಿ. ಸೆಟ್ಟಿ, ಕೆ. ಜೆ. ಕಿಣಿ, ಕೃಷ್ಣ ರಾವ್ ಕೊರಿಡ್ಕಲ್ ಅವರು ಈ ಕೇಂದ್ರಕ್ಕೆ ಧರ್ಮಾರ್ಥ ವೈದ್ಯಕೀಯ ಸೇವೆ ಸಲ್ಲಿಸಲು ಒಪ್ಪಿರುವರೆಂದು ತಿಳಿಸಿದರು. ಶ್ರೀ ಪಿ. ಜನಾರ್ದನ ನಾಯ್ಕರು ತಮ್ಮ ಶ್ರೀ ಭುವನೇಂದ್ರ ಪ್ರೌಢ ಕ್ಷಾಲಾ ಕಾರ್ಯಾಲಯದಲ್ಲಿ ಅತಿಥಿಗಳಿಗೆಲ್ಲಾ ಉಪಹಾರವಿತ್ತರು.

ಸ್ಥಳೀಯ ಹ್ಯಾಸ್ಯುಲಿನ ವಿದ್ಯಾರ್ಥಿಗಳ ಕಲಾ ಸಂಘದ ಸಭೆಯು ತಾ. 26ರಲ್ಲು ಜರಿಗಿ ಕಾರ್ಯಕಾರೀ ಸಮಿತಿಗೆ ಈ ಕೆಳಗಿನವರು ಆರಿ ಸಲ್ಪಟ್ಟರು: ಶ್ರೀಗಳಾದ ಬಿ. ಕೃಷ್ಣಾನಂದ ಹೆಗ್ಡೆ (ಅಧ್ಯಕ್ಷ.; ಪರಿದಾಸ ಆಚಾರ್ಯ (ಉಪಾಧ್ಯಕ್ಷ); ಕೆ. ಆನಂದ್ಯಾಯ ಕಾಮತ್ (ಕಾರ್ಯದರ್ಶಿ); ನೇಮಿಕ್ ದಾಲ್ಮೇಡ (ಪ್ರಸ್ತ ಕಾಲಯದ ಕಾರ್ಯದರ್ಶಿ); ಯಶವಂತ ಕಾಮತ್ (ಲ್ಯಾಬ್ರೇರಿಯನ್); ಎ. ಕರುಣಾಕರ ಸೆಟ್ಟಿ (ಚರ್ಚಾಕೂಟದ ಕಾರ್ಯದರ್ಶಿ); ಬಿ. ಸಚ್ಚಿದಾನಂದ ಹೆಗ್ಡೆ (ಪತ್ರಿಕಾ ಸಂಪಾದಕ); ಕೆ. ಭೋಜ ಸೆಟ್ಟಿ (ನಾಟಕ ಕಾರ್ಯದರ್ಶಿ); ಕೆ. ಅನ್ನು ಯಾಜಿ ಪದ್ಮನಾಭ ಕಾಮತ್ (ಪಂದ್ಯಾಟ ಕಾರ್ಯದರ್ಶಿ).

ಕುಂಬಳೆ—ನುಂಜೇಶ್ವರ ಬ್ಲೋಕ್ ಡೆವಲಪ್‌ಮೆಂಟ್ ಆಫೀಸರ್ ಶ್ರೀ ಪಿ. ಸಂಕಪ್ಪ ನವರು ಕಳೆದ ತಾ. 26ರಲ್ಲು ಆಸುಸಾಸಿನ 40 ಮುಂದಿ ಕೃಷಿಕರಿಗೆ ರೂ. 120ರಂತೆ ತಕ್ಕಾವಿ ಸಾಲಗಳನ್ನು ಹಂಚಿದರು. ಸಾಲ ಪಡೆದ ಪ್ರತಿಯೋರ್ವನೂ ಒಂದೊಂದು ಮಾವಿ ಮುಂಡನ್ನು ಪಡಕೊಂಡನು. ಸ್ಥಳೀಯ ಉಪಾಧ್ಯಾಯರ ಕೇಂದ್ರ ಸಭೆಯು ತಾ. 30ರಲ್ಲು ಶ್ರೀ ಯು. ಆನಂದಸವರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಆರ್. ಎ. ಕಿದ್ವಾಯಿಯವರ ನಿಧನದ ಬಗ್ಗೆ ಸಂತಾಪ ಸೂಚಿಸಿತು.

ಬ್ರಹ್ಮಾವರ—ಕಳೆದ ತಾ. 25ರಲ್ಲು ಬ್ರಹ್ಮಾವರ ಸರ್ಕಲ್ ಕಾಂಗ್ರೆಸ್ ಕಮಿಟಿ ಸಭೆಯು ಶ್ರೀ ಪಿ. ವೈ. ರಾಮಾನ್ ಗುರಿಕ್ಕಳ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕೇಂದ್ರ ಸರಕಾರದ ಆಹಾರ ಮಂತ್ರಿ ಶ್ರೀ ಕಿದ್ವಾಯಿಯವರ ನಿಧನದ ಬಗ್ಗೆ ಸಂತಾಪ ಸೂಚಿಸುವ ಮತ್ತು ಜಿಲ್ಲಾ ಬೋರ್ಡ್ ಚುನಾವಣೆಯಲ್ಲಿ ಕಾಂಗ್ರೆಸ್ ಪುರಿಯಾಳುಗಳಿಗೆ ಮತವಿತ ಬ್ರಹ್ಮಾವರ ಮತ್ತು ಕೋಟ ಸರ್ಕಲಿನ ಮತದಾರರನ್ನು ಅಭಿನಂದಿಸುವ ನಿರ್ಣಯಗಳಾದುವು.

ಬಸ್ರೂರು—ಸ್ಥಳೀಯ ಭಾರತ ವಾಜ ನಾಲಯದಲ್ಲಿ ತಾ 26ರಲ್ಲು ಶ್ರೀ ರಮಾನಾಥ ನಾಯ್ಕರ ಅಧ್ಯಕ್ಷತೆಯಲ್ಲಿ ದೀಪಾವಳಿ ಉತ್ಸವ ಆಚರಿಸಲಾಯಿತು. ಶ್ರೀ ಶೀನ ದೇವಡಿಗರು ಭಾಷಣ ಮಾಡಿದರು.

ಆಲೂರು—ಕೊರ್ಗಿ ಹೆರಿಯಣ್ಣ ಸೆಟ್ಟಿ ಮತ್ತು ಹರ್ಕೂರು ಹೆರಿಯಣ್ಣ ಸೆಟ್ಟಿ ಕಂಪೆನಿಯವರು ಧನಲಕ್ಷ್ಮಿ ಪೂಜಾ ನಿಮಿತ್ತ ಪ್ರಸಿದ್ಧ ಅರ್ಥದಾರಿಗಳ ಕೂಡುನಿಕೆಯಿಂದ ಯಕ್ಷಗಾನವನ್ನೇರ್ಪಡಿಸಿದ್ದರು.

ನವಯುಗ ವಾರಪತ್ರಿಕೆಗೆ ಚಂದಾದಾರರಾಗಿರಿ.

ಬೊಂಬಾಯಿ—ಇಲ್ಲಿಯ ನ್ಯೂಕರ್ನಾಟಕ ಲ್ಯಾಬ್ರೆರಿಯ ವಾರ್ಷಿಕೋತ್ಸವವು ಕಳೆದ ತಾ. 21ರಲ್ಲು ಶ್ರೀ ಬಾಚಿಬೆಟ್ಟು ರಾಮರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಲ್ಯಾಬ್ರೆರಿಯ ಅಧ್ಯಕ್ಷ ಶ್ರೀ ಜಿ. ಎಸ್. ಪಾನೇಗಿಸ್, ಅವರು ಸ್ವಾಗತ ಭಾಷಣ ಮಾಡಿದರು. ಕಾರ್ಯದರ್ಶಿ ಶ್ರೀ ಆರ್. ಕೆ. ಮಿನೇಜಸ್ ಮತ್ತು ಶ್ರೀ ಕೆ. ಎಸ್. ರಾಯರು ಲ್ಯಾಬ್ರೆರಿಯ ಸಂಕ್ಷಿಪ್ತ ಚರಿತ್ರೆಯನ್ನು ವಿವರಿಸಿದರು. ಕೋಶಾಧಿಕಾರಿ ಶ್ರೀ ಬಿ. ಜಿ. ರಾಯರು ಲ್ಯಾಬ್ರೆರಿಯ ಲೆಕ್ಕಪತ್ರಗಳನ್ನೊಪ್ಪಿಸಿದರು. ಲ್ಯಾಬ್ರೆರಿಗೆ ಸರ್ವ ಕನ್ನಡಿಗರೂ ಸಹಾಯನೀಡಬೇಕೆಂದು ಸಭಾ ಧ್ಯಕ್ಷರು ಸೂಡಿದರು.

ಲಘು ಪರಿಚಯ

ಉಡುಪಿಯ ಮಹಾತ್ಮಾಗಾಂಧಿ ಸ್ಮಾರಕ ಕಾಲೇಜಿನ ಭಾಷಾ ಸಂಘದ ಕಾರ್ಯಕರ್ತರು "ಪಡಿಗ" ಎಂಬ ಪತ್ರಿಕೆಯ ಪತ್ರಿಕೆಯನ್ನು ಹೊರಡಿಸುತಿದ್ದು ಅದರ ದ್ವಿತೀಯ ಸಂಪುಟದ ಪ್ರಥಮ ಸಂಚಿಕೆಯು (ಆಕ್ಟೋಬರ್, ೧೯೫೪) ಹಿಂದಿನ ಸಂಚಿಕೆಗಳನ್ನು ಮೀರಿಸುವ ಪ್ರಮಾಣದಲ್ಲಿ ಸ್ವಾರಸ್ಯವಾದ ಲೇಖನಗಳಿಂದೊಡಗೂಡಿಯೂ ಬೆಳಕಿಗೆ ಬಂದಿದೆ. ಶ್ರೀಗಳಾದ ಜಿ. ಸುಬ್ಬರಾಯ, ಕೃಷ್ಣಾನಂದ ಹೆಗ್ಡೆ ಮುಂತಾದವರ ಕತೆ, ಲೇಖನ, ಕವನಗಳು ಸುಂದರವಾಗಿವೆ. ಜನಾಬ್ ಅಮೀರುದ್ದೀನ್ ಹಾಗು ಶ್ರೀ ಸುಧಾಕರರ ಚಿತ್ರ ಕೌಶಲವೂ ಕಣ್ಮಿಳಿಸುತ್ತದೆ. ಶ್ರೀ ಮೋಸರರ ಲಿಪಿಯು ಹಸ್ತ ಪತ್ರಿಕೆಯ ಸೊಬಗನ್ನು ದ್ವಿಗುಣಗೊಳಿಸಿದೆ. ವಿದ್ಯಾರ್ಥಿಗಳ ಸಾಹಿತ್ಯ ಹಾಗು ಕಲಾ ಸೇವೆಗೆ ಇತೋಪ್ಯಕಿಶಯವಾದ ಶ್ರೇಯಸ್ಸನ್ನು ಕೋರುತ್ತೇವೆ.

ಕಾಲೇಜಿನಲ್ಲಿ ವ್ಯಾಸಂಗ ನಿರತರಾಗಿದ್ದರೂ ಒಳ್ಳೆಯ ಯೋಗ್ಯತೆಯನ್ನು ಹೊಂದಿದ ಹೆಂದಾಸರೆಂದು ಪ್ರಖಂಸೆ ಗಳಿಸಿರುವ ಉಡುಪಿಯ ಶ್ರೀ ಬಿ. ಕೇಶವ ಪೈಗಳು ರಾಮಾಯಣದ ಕತೆಯನ್ನು ಸರಳವಾದ ಚಾಪದಿಗಳ ರೂಪದಲ್ಲಿ ಸುಲಭ ಗ್ರಾಸ್ಯವಾದ ಶೈಲಿಯಲ್ಲಿ ಬರೆದು ಪ್ರಕಟಿಸಿದ್ದಾರೆ. ಪದ್ಯ ರಚನೆಯಲ್ಲಿ ವ್ಯಾಕರಣ ದೋಸಗಳು ಕಂಡು ಬರುತ್ತಿದ್ದರೂ ಅವರ ಪ್ರಯತ್ನ ಸ್ತುತಾರ್ಹವೆಂದು ಹೇಳಬಯಸುವು. ಹೊಸ ಭಾವನೆಗಳ ಪೋಷಣೆ, ಕಾವ್ಯಲಕ್ಷಣಗಳ ಮೇಲೆ ಪ್ರಭುತ್ವ ಮುಂತಾದ ವಿಷಯಗಳಲ್ಲಿ ಕೈಯಾಡಿಸಿದರೆ ಅವರು ಇನ್ನೂ ಚೆನ್ನಾಗಿ ಬರೆಯಬಲ್ಲರು.

ಬಡವರೂ ಅನಾಥರೂ ಆದ ಮಕ್ಕಳಿಗೆ ಆಶ್ರಯವನ್ನಿತ್ತು, ಪೋಷಿಸಿ, ವಿದ್ಯೆಯನ್ನು ಕಲಿಸಿ ಉತ್ತಮ ನಾಗರಿಕರನ್ನಾಗಿ ರೂಪಿಸುವ ಉದ್ದೇಶದಿಂದ ಜಾತಿ, ಮತ, ಸಂಪ್ರದಾಯ ಹಾಗು ಲಿಂಗಭೇದವಿಲ್ಲದೆ ಕೆಲಸ ಮಾಡುತ್ತಿರುವ ಮಂಗಳೂರಿನ ಸ್ವಾಮಿ ಶ್ರದ್ಧಾನಂದ ಸೇವಾಶ್ರಮವು ೧೯೫೩—೫೪ನೇ ವರ್ಷದ ವರದಿಯು ಕಾರ್ಯಕಲಾಪಗಳ, ಲೆಕ್ಕಪತ್ರಗಳ ಹಾಗು ಸಾಧಾಯಕರ ವಿವರಗಳನ್ನೊಳಗೊಂಡು ಪ್ರಕಟವಾಗಿದೆ. ವರದಿ ವರ್ಷದಲ್ಲಿ ಆರು ಹರಿಜನ ಮಕ್ಕಳನ್ನೊಳಗೊಂಡು ಒಟ್ಟು ೭೩ ಮಕ್ಕಳು ಆಶ್ರಮದಲ್ಲಿದ್ದರೆಂದೂ ಇವರಲ್ಲಿ ಐವರು ವಿದ್ಯಾಭ್ಯಾಸವನ್ನು ಬಿಟ್ಟು ಉಳಿದವರೆಲ್ಲರೂ ನಾನಾ ತರಗತಿಗಳಲ್ಲಿ ಕಲಿಯುತ್ತಿರುವರೆಂದೂ ತಿಳಿಸಬರುತ್ತದೆ. ಸರಕಾರದಿಂದ ದೊರೆಯುವ ನೆರವು ಹೆಚ್ಚಲ್ಲದಿದ್ದರೂ ಸಾರ್ವಜನಿಕರ ಔದಾರ್ಯವು ಸಂಸ್ಥೆಯ ಮನ್ನಡೆಗೆ ಸಾಕಷ್ಟು ಆನುಕೂಲತೆಯನ್ನು ಒದಗಿಸಿದೆ. ಮಹಾಜನರ ದಾನ ಹಾಗು ಸಹಕಾರಗಳು ಆಧಿಕ ಪ್ರಮಾಣದಲ್ಲಿ ಲಭ್ಯವಾದರೆ ಅಶ್ರಯುವ ಚಟುವಟಿಕೆಗಳನ್ನು ಇನ್ನಷ್ಟು ವಿಸ್ತರಿಸಲು ಸಾಧ್ಯವಾದೀತು.

ಶ್ರೀ ರಾಮಕೃಷ್ಣಾಶ್ರಮದ ಪ್ರಕಟಣೆಗಳು, ಮೈಸೂರು.

	ರೂ.	ಆ.
ಶ್ರೀ ರಾಮಕೃಷ್ಣ ನಜನವೇದ (ಉತ್ತರಾರ್ಧ) (ಅಚ್ಚಿನಲ್ಲಿದೆ)	೧೦	೦
ಕೊಲಂಬೊ ಇಂದ ಅಲ್ಮೋರಕೆ	೫	೦
ಸಂವಾದ ತರಂಗಿಣಿ	೫	೦
ಶ್ರೀ ರಾಮಕೃಷ್ಣ ಉಪದೇಶಾಮೃತ	೩	೮
ಸ್ವಾಮಿ ವಿವೇಕಾನಂದ (ಕುವೆಂಪು)	೩	೮
ಭಗವಾನ್ ಶ್ರೀ ರಾಮಕೃಷ್ಣ	೩	೦
ಪತ್ರಮಾಲೆ	೩	೦
ಜ್ಞಾನಯೋಗ	೩	೦
ಗುರುವಿನೊಡನೆ ದೇವರಡಿಗೆ(ಕುವೆಂಪು)	೨	೦
ರಾಜಯೋಗ	೨	೧೦
ಶ್ರೀ ಶಾರದಾದೇವಿ ಸಂಭಾಷಣೆ	೨	೮
ಗೀತಾ ಪತ್ರಗಳು	೨	೮
ಸಿಂಚನೋಟಕೆ ಹಿಂಪೊಧರ್ಮ	೨	೮
ಶ್ರೀ ಶಾರದಾದೇವಿ	೨	೦
ಸಾಧಕನ ಕೈದೀವಿಗೆ	೨	೦
ಪರಮಾರ್ಥ ಪ್ರಸಂಗ	೨	೦
ಕರ್ಮಯೋಗ	೧	೮
ಬ್ರಹ್ಮಾನಂದ ನಜನ ಸುಧೆ	೧	೪
ಶ್ರೀ ರಾಮಕೃಷ್ಣ ಉಪನಿಷತ್	೧	೪
ಪರಿವ್ರಾಜಕ	೧	೪
ಪ್ರಾಚ್ಯ ಮತ್ತು ಪಾಶ್ಚಾತ್ಯ	೧	೪
ಭಕ್ತಿಯೋಗ	೧	೦
ಭಕ್ತಿ: ಗಾಣೀ ಮತ್ತು ಪರಾ	೧	೦
ಧಾರಣೆಯಲ್ಲಿ ದೀಪಧಾರಿ	೧	೦
ಶ್ರೀ ಗುರುದೇವರ ವಜನ	೧	೦
ಅಮರನಾಥ ಯಾತ್ರೆ	೧	೦
ಧನ್ಯತೆಗೆ ದಾರಿ	೧	೦
ಅನುಷ್ಠಾನ ವೇದಾಂತ	೧	೦
ವೇದಾಂತ	೦	೧೦
ವಿದ್ಯಾಭ್ಯಾಸ	೦	೧೦
ಹಿಂದೂ ಧರ್ಮಸಾರ	೦	೧೦
ವರ್ತಮಾನ ಭಾರತ	೦	೧೦
ವಿವೇಕವಾಣಿ	೦	೧೦
ನನ್ನ ಗುರುದೇವ	೦	೮
ಭಕ್ತಿ ಮಾರ್ಗ	೦	೮
ಬಿಕಾಗೋ ಉಪನ್ಯಾಸ	೦	೬
ಆರತಿ	೦	೬
ಶ್ರೀ ರಾಮಕೃಷ್ಣ(ಸಂಕ್ಷಿಪ್ತ ಜೀವನ ತ್ರಿವೇಣಿಯಿಂದ)	೦	೫
ಸ್ವಾಮಿ ವಿವೇಕಾನಂದ ,, ,,	೦	೫
ಶ್ರೀ ಶಾರದಾದೇವಿ ,, ,,	೦	೫
ಮುಮುಕ್ಷು ಲಕ್ಷಣ	೦	೪
ನನ್ನ ಜೀವನ ಮತ್ತು ಧ್ಯೇಯ	೦	೪
ಈಶ್ವರಾನುರಾಗ	೦	೪
ನೊಂದ ಜೀವಕ್ಕೆ ಭರವಸೆ	೦	೪
ಭಾರತ ಮಹಿಳೆ	೦	೪
ಕರ್ಮ ರಹಸ್ಯ	೦	೪
ಸಾಧನ	೦	೪
ಪನಹಾರಿಬಾಬ	೦	೪
ದೇವದೂತ ಕ್ರಿಸ್ತ	೦	೪
ಹೈಮವತಿಲ ಸಾನ್ನಿಧ್ಯದಲ್ಲಿ(ಪರಿವ್ರಾಜರ ದಿಂದ ಕೇದಾರ ಬದರಿಗೆ)	೨	೦

ಶ್ರೀ ರಾಮಕೃಷ್ಣಾಶ್ರಮ, ಮೈಸೂರು.

ಕಾರ್ತಿಕ ಬಹುಳ ಅಮಾವಾಸ್ಯೆ ತಾ|| 25—11—54 ಗುರುವಾರ

ಅಮೂಲ್ಯವಾದ ಆರು ಗ್ರಂಥಗಳ ಪ್ರಕಟಣೆ.

ಕನ್ನಡ ಕವಿರತ್ನ ಹೊಸಕೆರೆ ಜಿದಂಬರಯ್ಯನವರ

ಗೀತಾರ್ಥ ಚಂದ್ರಿಕೆ:— ಶ್ರೀಕೃಷ್ಣಾರ್ಜುನ ತಾತ್ಪರ್ಯ ಧ್ಯಾನಕ್ರಮ ಮತ್ತು ವಿಷಯಾನುಕ್ರಮಣಿಕೆಯಿಂದ ಕೂಡಿದೆ. ಶ್ರೀಕೃಷ್ಣ ಪರಮಾತ್ಮನು ಅರ್ಜುನನಿಗೆ ಗೀತೋಪದೇಶ ನೀಡಿದ್ದು ಕಾರ್ತಿಕ ಬಹುಳ ಅಮಾವಾಸ್ಯೆ. ಪುಟಗಳು ೪೮೦. ಬೆಲೆ: ರೂ. 3-4-0

ನೀತಿಗಳ ನೆಲಗಟ್ಟು ಧರ್ಮ ಮತ್ತು ನೀತಿ ಗ್ರಂಥ ಪುಟಗಳು ೨೩೦ ಬೆಲೆ: ರೂ. 2-0-0

ವೇದಾಂತದ ರೂಪರೇಖೆ ವೇಸುಂತ ಗ್ರಂಥ ಪುಟಗಳು ೭೫ ಬೆಲೆ 0-12-0

— ಎಂ. ವೆಂಕಟಾದ್ರಿ ಶಾಸ್ತ್ರಿಗಳವರ —

ಮಾಯಾವಿ ಅದ್ಭುತ ಪತ್ತೇದಾರಿ ಕಾದಂಬರಿ ಪುಟಗಳು ೨೩೦ ಬೆಲೆ: ರೂ. 1-8-0

— ಕುಲಕರ್ಣಿ ಬಿಂದುಮಾಧವರ—

ಕಲಾಜ್ಯೋತಿ ಅತ್ಯುತ್ತಮ ಸಾಮಾಜಿಕ ಕಾದಂಬರಿ ಪುಟಗಳು ೧೬೦ ಬೆಲೆ: ರೂ. 1-4-0

— ಡಾಕ್ಟರ್ ಬಿ. ವಿ. ವೆಂಕಟೇಶಯ್ಯನವರ —

ಪುಷ್ಪಲತ ವಿಕ್ಟರ್ ಹ್ಯೂಗೋರವರ ಬ್ಲಾಕ್‌ಟುಲಿಪ್ ಎಂಬ ಶ್ರೇಷ್ಠ ಇಂಗ್ಲೀಷ್ ಕಾದಂಬರಿಯ ಅನುವಾದ ಪುಟಗಳು ೨೮೦ ಬೆಲೆ: ರೂ. 1-8-0

ದಯವಿಟ್ಟು ನಿಮ್ಮ ಬೇಡಿಕೆಯನ್ನು ಇಂದೇ ಕಳುಹಿಸಿರಿ.

ಸಾಹಿತ್ಯ ಕುಟೀರ,
೨೮೧, ೫ನೇ ಕ್ರಾಸ್ ರಸ್ತೆ ಚಾಮರಾಜ ಪೇಟೆ,
ಬೆಂಗಳೂರು ೨.

ಸೂಚನೆಗಾರರು:— ಎಸ್. ಎಸ್. ಎನ್. ಬುಕ್ ಡಿಪೊ, ಬೆಂಗಳೂರು ೨.

ನಡೆಯುವ ಚಿತ್ರ:—
ಅದ್ಭುತ ಸಾಹಸದ—ಮಂತ್ರ ಮಾಟಗಳ—ರೋಮಾಂಚಕಾರಿ ಚಿತ್ರ.
ಶ್ರೀರಾಜರಾಜೇಶ್ವರಿಯವರ—

ಸೌದಾಮಿನಿ (ತಮಿಳು)

ಕನ್ನಾಂಬ, ಎಂ. ಕೆ. ರಾಧಾ, ನಾಗೇಶ್ವರರಾವ್, ವರಲಕ್ಷ್ಮಿ, ವನಜಾ, ಟಿ. ಆರ್. ರಾಮು ಚಂದ್ರನ್.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ತಾ. 2—11—54 ರಿಂದ.

ತಾ. 7-11-54ನೇ ಆದಿತ್ಯವಾರ ಬೆಳಿಗ್ಗೆ ಗಂಟೆ 10 ಕ್ಕೆ

ABBOTT & COSTELLO MEET CAPTAIN KID
(ಹಾಸ್ಯ ಮಯ ಚಿತ್ರ)



ಪುಸ್ತಕ ಮಾಸದ ಪ್ರಾರಂಭೋತ್ಸವ



"ನವಯುಗ"ವು ಪ್ರವರ್ತಿಸಿದ ಪುಸ್ತಕ ಮಾಸದ ಪ್ರಾರಂಭೋತ್ಸವದಲ್ಲಿ ಉದ್ಘಾಟಕರಾದ ಕವಿವರ್ಯ ದ ರಾ. ಬೇಂದ್ರೆಯವರು ಭಾಷಣಮಾಡುತ್ತಿರುವುದು. ಅವರ ಎಡಕ್ಕೆ ಕುಳಿತವರು ಅಧ್ಯಕ್ಷತೆ ವಹಿಸಿದ್ದ ಸ್ಥಳೀಯ ಎಂ ಎಲ್ ಎ ಶ್ರೀ. ಟಿ ಎ ಪೈಗಳು. ಕನ್ನಡ ಸಾಹಿತ್ಯದ ಒಳ್ಳೆಯ ಪುಸ್ತಕಗಳ ಪ್ರಚಾರ, ಮಾರಾಟ ಮತ್ತು ಸಾಹಿತ್ಯ ವಿಮರ್ಶೆಯ ಉದ್ದೇಶದಿಂದ ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿದ್ದು, ಸಾರ್ವಜನಿಕರ ಸಹಕಾರವನ್ನು "ನವಯುಗ"ವು ಅತ್ಯಧಿಕ ಪ್ರಮಾಣದಲ್ಲಿ ಬಯಸುತ್ತದೆ

ಮಂಗಳೂರು

ಜಿಲ್ಲಾ ಬೋರ್ಡು ಅಧ್ಯಕ್ಷರ ಚುನಾವಣೆಯು ಇದೇ ತಾ ೧೭ರಲ್ಲು ಆಪರಾಹ್ನ ೩ ಗಂಟೆಗೆ ಬೋರ್ಡಿನ ಕಾರ್ಯಾಲಯದಲ್ಲಿ ಕರೆಯಲಾದ ವಿಶೇಷ ಸಭೆಯಲ್ಲಿ ನಡೆಯಲಿರುವುದು ಅಧ್ಯಕ್ಷಸ್ಥಾನಕ್ಕೆ ಶ್ರೀಯುತ ಬಿ ಸುಂಜಯ್ಯ ಹೆಗ್ಡೆ ಡಾ! ಕೆ. ಕೆ. ಪೆಗ್ಡೆ, ಎಸ್ ಎಕ್ಸ್ ಡಿ ಪಿಂಟೊ ಮತ್ತು ಕೆ ಕೆ ಸಟ್ಟರೂ ಉಪಾಧ್ಯಕ್ಷ ಸ್ಥಾನಕ್ಕೆ ಶ್ರೀಗಳಾದ ಬಿ ಎಸ್ ಭಾಸ್ಕರ ರೈ ಮತ್ತು ಬಿ ಆರ್ ಕರ್ಕೇರರೂ ಸುರಿಯಾಳುಗಳೆಂದು ಹೇಳಲಾಗುತ್ತಿದೆ ಕಾರ್ಪೊರೇಷನ್ ಪಕ್ಷದ ಸಭೆಯು ತಾ ೧೨ರಲ್ಲು ಜರಗಿಸಲ್ಪಡುವುದು

ಆಗಮನ— ಆವಿಲ ಭಾರತ ಸಮಾಜ ವಿಕಾಸ ಯೋಜನೆಯ ಕಾರ್ಯದರ್ಶಿ ಶ್ರೀಯುತ ಎಲ್ ಗೋಪಾಲಮಿಯವರು ಕಳೆದ ವಾರ ಜಿಲ್ಲೆಯ ವಿವಿಧ ಕೇಂದ್ರಗಳನ್ನು ಸಂದರ್ಶಿಸಿ ಹಿಂತಿರಿಗಿದರು

ವರ್ಗಾವರ್ಗಿ— ಶ್ರೀ ಟಿ ತಾರಾನು ಸೆಂಜೆ, ಆವರಿಗೆ ವರ್ಗವಾಗಿ ಶ್ರೀ ಎಮ್ ಜಿ ರಾಜಾರಾಮ್, ಆವರು ಹೊಸ ಕಲೆಕ್ಟರರಾಗಿ ನೇಮಕಹೊಂದಿರುವರು

ಬಲಿದಾನ ದಿನಾಚರಣೆ—ಸ್ವಾಮಿ ದರ್ಯಾನಂದ ಸರಸ್ವತಿಯವರ ಬಲಿದಾನ ದಿನಾಚರಣೆಯು ಕಳೆದ ತ. ೨೦ರಲ್ಲು ಆರ್ಯ ಸಮಾಜ ಮಂದಿರದಲ್ಲಿ ಶ್ರೀ ಎ ಉ ಸಾನಂತರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಸನಾದ ಕೆ ಕೃಷ್ಣರಾವ್, ಕೆ ಶಂಕರನಾರಾಯಣ ಕಾರಂತ, ಎಮ್ ಆರ್ ಭಟ್, ಕೇಶವ ರಾವ್ ಜಂದ್ರ ತಿಷ್ಠೆ ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು

ರೈಲ್ವೆ ಶತಾಬ್ದಿ ಪ್ರದರ್ಶನ ಗಾಡಿಗಳು—ಮಂಗಳೂರಿಗೆ ಬಂದಿದ್ದು ಬಂದರದ ಗೂಡ್ಸ್ ಸ್ಟೇಶನ ಬಳಿ ತಂಗಿದೆ ಇವನ್ನು ಪ್ರವೇಶ ಧನಕೊಟ್ಟು ನೋಡಬಹುದಾಗಿದೆ

ವಾರ್ಷಿಕೋತ್ಸವ — ಸಿವಿಲ್ ಎವಿಯೇಶನ್ ವಿಭಾಗದ ನೌಕರರ ಯೂನಿಯನ್ನಿನ ವಾರ್ಷಿಕೋತ್ಸವವು ತಾ 31ರಲ್ಲಿ ಬಜ್ಪೆ ವಿಮಾನ ನಿಲ್ದಾಣದಲ್ಲಿ ಶ್ರೀ ಬಿ ಪ್ರೆಸ್ಕೊಂಡ ಬಾಳಿಗ, ಎಸ್ ಎಂ. ಎ ಅವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಕೆ ಜಿ ನಾಯರರು ಸ್ವಾಗತ ಮಾತುಗಳನ್ನಾಡಿದರು ಕಾರ್ಯದರ್ಶಿ ಶ್ರೀ ಮಾಣಿಲೀನರು ಧನ್ಯವಾದಗಳನ್ನರ್ಪಿಸಿದರು

ಸಹಕಾರಿ ಮಹಾಮಂಡಲದ ಉದ್ಘಾಟನೆ—ವಿ ಕೆ ಜಿಲ್ಲಾ ಕೃಷಿಕರ ಸಾಲಾಟ ಸಂಘ ಮತ್ತು ದ ಕ ಜಿಲ್ಲಾ ಸೆಂಟ್ರಲ್ ಕೋಆಪರೇಟಿವ್ ಸ್ಟೋರ್ಸ್—ಈ ಎರಡು ಸಂಸ್ಥೆಗಳು ಸೇರಿ ಹೊಸತಾಗಿ ಪದಕೊಂಡ ಭವನದ ಉದ್ಘಾಟನೆ ಮತ್ತು ನಾಮಕರಣ ಸಮಾರಂಭವು ತಾ 31ರಲ್ಲು ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಡೆಯವರ ಹಿರಿತನದಲ್ಲಿ ಶ್ರೀ ಸೊಳಪ್ಪೆ ಶಿವರಾಯರಿಂದ ನೆರವೇರಿಸಲ್ಪಟ್ಟಿತು. ಶ್ರೀ ಕೆ ಬಿ ಜನರಾಜ ಹೆಗ್ಡೆಯವರು, ಶ್ರೀ ಎ ಬಿ ಸೆಟ್ಟಿ ಹಾಗೂ ಸಹಕಾರಿ ಸಂಘಗಳ ರಿಜಿಸ್ಟ್ರಾರ್ ಮೊದಲಾದವರಿಂದ ಬಂದ ಸಂದೇಶಗಳನ್ನು ಓದಿದರು ಶ್ರೀ ಎಸ್ ನಸ್ಯಪ್ಪಯ್ಯ, ಎಮ್ ಎಲ್ ಸಿ ಆವರು ಸ್ವಾಗತ ಭಾಷಣ ಮಾಡುತ್ತಾ, ಈ ಭವನವನ್ನು ಒಂದು ಲಕ್ಷದ ಮೂವತ್ತಾರು ಸಾವಿರ ರೂಪಾಯಿಗಳಿಗೂ ಮಿಕ್ಕಿ ಹಣವನ್ನು ಕೊಟ್ಟು ಕೊಂಡುಕೊಳ್ಳಲು ಸಾಧ್ಯವಾಯಿತೆಂದರು ಶ್ರೀ ತಿರುವಾಯರು 'ಸಹಕಾರಿ ಮಹಾಮಂಡಲ' ಎಂದು ನಾಮಕರಣ ಮಾಡಿ ಭವನಕ್ಕೆ ಶುಭವನ್ನು ಕೋರಿದರು ಅಧ್ಯಕ್ಷ ಹೆಗ್ಡೆಯವರು ರಮ್ಯ ಶುಭಾಶೀರ್ವಾದಗಳನ್ನಿತ್ತರು

ಸಂಯುಕ್ತ ದಿನಾಚರಣೆಯು—ಸೈಂಟ್ ಎಲೋಸಿಯಸ್ ಕಾಲೇಜು ಯೂನಿಯನ್ನಿನ ಆಶ್ರಯದಲ್ಲಿ ತಾ 29ರಲ್ಲು ಯೂನಿಯನ್ ಆಧ್ಯಕ್ಷ ಶ್ರೀ ಪಿ ಪಿ ಭಾರತಿಯರ, ಅಧ್ಯಕ್ಷತೆಯಲ್ಲಿ ಜರಗಿತು ಶ್ರೀಗಳಾದ ಪಿ ಪಿ ಮಹೇಂದ್ರಾಚಾರ್ಯ, ಶ್ರೀನಿವಾಸ್ ಮೊದಲಾದವರು ದಿನಾಚರಣೆಯ ಮಹತ್ವದ ಕುರಿತು ಭಾಷಣಮಾಡಿದರು ಯೂನಿಯನ್ ಕಾರ್ಯದರ್ಶಿ ಶ್ರೀ ಎಸ್ ರಮಾನಂದ ಹೆಗ್ಡೆಯವರು ಧನ್ಯವಾದಗಳನ್ನರ್ಪಿಸಿದರು

ಮನರಂಜನ ತೆರಿಗೆ ರಿಜಿಸ್ಟ್ರಿಯಾದ ಸಭೆಗಳಿಗೂ, ನಾಟಕ, ನೃತ್ಯ ಮೊದಲಾದುವನ್ನು ನಡೆಸಲು ಪೆಂಡಲು ಕೊಡಲಾಗಿದ್ದ ಮನರಂಜನೆ ತೆರಿಗೆ ವಿನಾಯಿತಿಯು ಇನ್ನು ಮೂರು ವರ್ಷಗಳ ವರೆಗೆ ಕೊಡಲಾಗುವುದು ಈ ತೆರಿಗೆ ವಿನಾಯಿತಿಯ ಪ್ರಯೋಜನವನ್ನು ಪಡೆಯುವ ಸಂಘ ಸಂಸ್ಥೆಗಳು ವರ್ಷದಲ್ಲಿ ಒಂದು ಪ್ರದರ್ಶನವನ್ನಾದರೂ ಕೊಳಕು ಪ್ರದೇಶದಲ್ಲಿ ವಾಸಿಸುವವರಿಗೆ ಏರ್ಪಡಿಸಬೇಕು ಬಾನ ವರ್ಷದಲ್ಲಿ ಹೀಗೆ ತೆರಾಸಿಸುವುದಿಲ್ಲವೋ ಆನಂತರದ ವರ್ಷಗಳಲ್ಲಿ ರಿಯಾಯಿತಿಯು ಹಿಂತೆಗೆದುಕೊಳ್ಳಲಾಗುವುದು

ಅಮೆರಿಕದ ಕಾನ್ಸಲರ್— ಮತ್ತು ಸಾರ್ವಜನಿಕ ಸಂಪರ್ಕ ಖಾತೆಯ ಅಧಿಕಾರಿ ಮಿ! ಜಾರ್ಜ್ಯಾ ಬ್ಯಾನ್ಯಾರು ಇವ್ಲಿಗೆ ಆಗಮಿಸಿರುವರು ವಿದ್ಯಾಸಂಸ್ಥೆಗಳಿಗೆ ಫಿಲ್ಮ್‌ಕೊಟ್ಟರು

ನಾಟಕಕರ್ತರಿಗೊಂದು ಅಪೂರ್ವ ಸಂಧಿ!

ನೂರು ರೂಪಾಯಿ ಸಂಭಾವನೆ

ಲೋಕ ಗುರುಗಳಾದ ಶ್ರೀಮದ್ಭಾಚಾರ್ಯರಿ ಅನುಪಮ ಜೀವನವನ್ನು ಕುರಿತು ರಸಭರಿತವಾದ ಉತ್ತಮ ನಾಟಕವೊಂದನ್ನು ತಿಳಿಗನ್ನಡ ಭಾಷೆಯಲ್ಲಿ ಪ್ರಕಟಿಸುವ ಉದ್ದೇಶದಿಂದ ನಾವು ಒಂದು ನಾಟಕ ಸ್ಪರ್ಧೆಯನ್ನು ಏರ್ಪಡಿಸಲು ಸಂಕಲ್ಪಿಸಿದ್ದೇವೆ ಕೆಳಗಿನ ನಿಯಮುಗಳನ್ನು ಅನುಸರಿಸಿ ಈ ಸ್ಪರ್ಧೆಯಲ್ಲಿ ಯಾರೂ ಭಾಗವಹಿಸಬಹುದು ಬಂದ ನಾಟಕಗಳನ್ನು ನೂನರು ಪ್ರಮುಖ ತಜ್ಞ ಸಾಹಿತಿಗಳ ಪರಿಶೀಲನೆಗೊಳಪಡಿಸಿ ಸರ್ವೋತ್ತಮವಾದುದೆಂದು ಪರಿಗಣಿತವಾದುದಕ್ಕೆ ನೂರು ರೂಪಾಯಿಗಳ ಸಂಭಾವನೆಯನ್ನು ಕೊಡಲಾಗುವುದು.

ನಿಯಮಗಳು

ನಾಟಕದ ಪ್ರತಿಯು ಇದೇ ಬರುವ ಮಧ್ವನವಮಿ(ತಾ ೧೫-೨-೫೫)ಯ ಒಳಗೆ ನಮ್ಮ ಕೈಸೇರಬೇಕು

ನಾಟಕದಲ್ಲಿ ಶ್ರೀಮದಾಚಾರ್ಯರಿ ಸಮಗ್ರ ಜೀವನವನ್ನು ಯಥಾಸುಕೂಲವಾಗಿ ಚಿತ್ರಿಸಿರಬೇಕು ಆವರಿ ಘನೋನಾರ ವ್ಯಕ್ತಿತ್ವವನ್ನು ಸ್ಪುಟವಾಗಿ ರೇಖಿಸುವುದಲ್ಲದೆ ಆವರ ಅಮರ ಸಂದೇಶವನ್ನೂ ಸಮುಚಿತವಾಗಿ ಆಳವಡಿಸಿಕೊಳ್ಳಬಹುದು

ನಾಟಕವು ಐತಿಹಾಸಿಕ ಸತ್ಯಕ್ಕೆ ಅವಿರೋಧವಾಗಿರಬೇಕು

ಭಾಷೆ ಒಂಥಗಳು ಸುಂದರವಾಗಿರಬೇಕು ಸೈಜತೆ ಮತ್ತು ಗಾಂಭೀರ್ಯಗಳ ಎಲ್ಲಿಯನ್ನು ಎಲ್ಲಿಯೂ ಮೀರಬಾರದು

ಓದುವುದಕ್ಕೂ ಆಭಿನಯಿಸುವುದಕ್ಕೂ ಅನುಕೂಲವಾಗಿರಬೇಕು ಆಭಿನಯಿಸುವಾಗ ಸಾಮಾನ್ಯವಾಗಿ 3 ಘಂಟೆಗಳಲ್ಲಿ ಮುಗಿಸಂತಿರಬೇಕು

ಬರುವಂತಾಸಿಸಲ್ಪಟ್ಟ ನಾಟಕದ ಸಂಪೂರ್ಣ ಹಕ್ಕು 'ಪ್ರಕಾಶನ'ವಾಗಿರುವುದು

ಬಹುಮಾನ ಯೋಗ್ಯವಾದ ನಾಟಕಗಳು ಬರದಿದ್ದಾವರೆ ಬಹುಮಾನವನ್ನು ತಡೆಹಿಡಿದಿಡಲಾದೀತು

ಕಲಾವಿದರು ಸಹಕರಿಸಬೇಕೆಂದು ಸಪ್ರಶ್ರಯವಾಗಿ ಕೋರಲಾಗಿದೆ

ನಾಟಕಗಳನ್ನು ಕಳುಹಿಸಬೇಕಾದ ವಿಳಾಸ—

ಟಿ ಶ್ರೀಪತಿ, ಬಿ ಎ,
ಸಂಪಾದಕ, 'ಪ್ರಕಾಶನ',
ಉಡುಪಿ ಶ್ರೀಕೃಷ್ಣಾಪುರ ಮಠ,
ಸುರತ್ಕಲ್, ದ. ಕನ್ನಡ

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳು ಸಾಮಾನ್ಯಿಗಳೂ ರಿಯಿಂಗಿಯು, ಚೆಲ್ಲರೆಯಾಗಿಯೂ ಸಿಗುತ್ತವೆ

ಕಲ್ಕಂಜೆ ವ್ಯಾಸಾಚಾರ್ಯರ
ಪಾತ್ರೆ ಭಂಡಾರ,
ರಥಬೀಧಿ ಉಡುಪಿ

ಟೆಂಡರ್ ನೋಟೀಸು

ಈ ಕೆಳಗೆ ನಮೂದಿಸಲ್ಪಟ್ಟ ಕೆಲಸಗಳನ್ನು ಮಾಡಿಸುವುದಕ್ಕೋಸ್ಕರ ಪ್ರೈವೇಟ್ ಡಿಪಾರ್ಟ್‌ಮೆಂಟಿನ ರಿಜಿಸ್ಟರ್ಡ್ ಕಂಟ್ರಾಕ್ಟರುಗಳಿಂದ ಪ್ರತಿ ಕೆಲಸವ ಒಗ್ಗೆ ಪ್ರತ್ಯೇಕ ಪ್ರತ್ಯೇಕವಾದ ಮೊಹರು ಮಾಡಲ್ಪಟ್ಟ ಟೆಂಡರುಗಳು, ಆಯಾ ಕೆಲಸಕ್ಕೆ ಕೆಳಗಿನ ತಪ್ಪೆಯಲ್ಲಿ ನಮೂದಿಸಲ್ಪಟ್ಟಿರುವ ಆರ್ನೆಸ್ಟ್ ಹಣದೊಡನೆ ತಾ 1—12—1954ರ ಸಾಯಂ ಗಂಟೆ 1ರ ವರೆಗೆ ಕಟಪಾಡಿ ಸಂತೆಯಂತೆ ಜೊಂಡಿನ ಆಫೀಸಿನಲ್ಲಿ ಪ್ರೈಸಿಡೆಂಟರಿಂದ ಸ್ವೀಕರಿಸಲ್ಪಡುವುವು ಸ್ವೀಕರಿಸಲ್ಪಟ್ಟ ಟೆಂಡರುಗಳು ಆದೇ ದಿನ ಸಾಯಂ ಗಂಟೆ 5ಕ್ಕೆ ತೆರೆಯಲ್ಪಡುವುದು ಟೆಂಡರುದಾರರು ಹಾಜರಿರಬಹುದು ಹೆಚ್ಚಿನ ಮಾಹಿತಿ ಬೇಕಾದ್ದಲ್ಲಿ ಈ ಆಫೀಸಿನಲ್ಲಿ ವಿಚಾರಿಸಿರಿ

ಮಾಡಿಸತಕ್ಕ ಕೆಲಸಗಳ ವಿವರ

	ಕೆಲಸದ ವಿವರ	ಅಂದಾಜು ಖರ್ಚು	ಆರ್ನೆಸ್ಟ್ ಹಣ
1	ಆಫೀಸುಕಟ್ಟಡಕ್ಕೆ ಕಬ್ಬಿಣವನ್ನು ಕಟ್ಟಿಸುವುದು	ರೂ 6000/-	ರೂ 300/
2	ಯೇಣಗುಡ್ಡೆ ಜಟ್ಟಿಯನ್ನು ಕಟ್ಟಿಸುವುದು	ರೂ 3000/	ರೂ 150/-

ಕಟಪಾಡಿ,
1-11-1954

ಪಿ. ವೆಂಕಟ್ರಾಯ ನಾಯಕ್, ಬಿ ಎಸ್ ಸಿ.
ಪ್ರೆಸಿಡೆಂಟ್,
ಕಟಪಾಡಿ ಪಂಚಾಯತ ಬೋರ್ಡು, ಕಟಪಾಡಿ

BHUVANENDRA PRODUCTS LTD., KATAPADI, S. K.
ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!
ಇವುಗಳಿಂದಲೇ ಭುವನೇಂದ್ರ ಔಷಧಿಗಳು
ಜನಪ್ರಿಯವಾಗಿರುವವು
ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು
ನಮ್ಮಲ್ಲಿ ತಯಾರಿಸಲ್ಪಡುತ್ತವೆ
ವಿವರಗಳಿಗೆ ವಿಚಾರಿಸಿರಿ —
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ. ಕ.
ಡಿಪೊ - (1) ಉಡುಪಿ (2) ಮುರಾರ ಗಲ್ಲಿ, ಹುಬ್ಬಳ್ಳಿ.

ಕವಿವರ್ಯ ಬೇಂದ್ರೆಯವರ ಗಾರುಡಿ

ಬರೆದವರು:— ಶ್ರೀ ಎ. ಎಸ್. ರಾಮಕೃಷ್ಣ.

ಕವಿವರ್ಯ ಬೇಂದ್ರೆಯವರು ಅಕ್ಟೋಬರ್ ದಿನಾಂಕ ೩೪, ೩೫, ೩೬ರಂದು ಉಡುಪಿಯಲ್ಲಿದ್ದು ಇಲ್ಲಿನ ನಾಗರಿಕರನ್ನು ತಮ್ಮ ವಿಚಾರ ಪರಿಪ್ಲುತ ಭಾಷಣಗಳಿಂದ ತಣಿಸಿದರು. ತಣಿಸಿದರೆ? ಹೌದು, ತಣಿಸಿದರು. ಆದೇನು ಕಾರಣವೋ— ಉಡುಪಿಗೆ ಬಂದು ಭಾಷಣಕೊಡುವ ಪರಪೂರ ವಿದ್ವಾಂಸರಲ್ಲಿ ಕಚ್ಚಿನ ಮುಂದಿಕೊಂಜ ಸಂಕೋಚವನ್ನು ಕೊಂಡು ಮಾತನಾಡುತ್ತಾರೆ. ಆದರೆಲ್ಲಾ ನೀತಿ, ಧರ್ಮ ಎಂದಿವುಗಳ ಕುರಿತಾಗಿ ಪ್ರಸ್ತಾಪಿಸುವಾಗ ಬಲವರು ಓರಿಯರು ಏನನ್ನೋ ಬಚ್ಚಿಡುವವರಂತೆ ಮಾತನಾಡಿದ್ದುಂಟು. ಆದರೆ ಬೇಂದ್ರೆಯವರ ರೀತಿ ಬೇರೆಯಾಗಿತ್ತು. ಅವರೆಲ್ಲಿ ಸುಳ್ಳುಮರೆಯಿಲ್ಲ. ಹಾಗೇಯೂ ಬಿಚ್ಚಿ ಹೃದಯವಾದ ಮಾತ್ರಕ್ಕೆ ಯಾರನ್ನಾದರೂ ಜೆಜ್ಜಿ ನೋಯಿಸುವಂತೆ ಅವರು ಮಾತನಾಡಿದರೆ? ಖಂಡಿತವಾಗಿ ಇಲ್ಲ. ಸಾಮಾನ್ಯವಾಗಿ, ಹಿಂದು ಮುಂದು ನೋಡದೆ ಮಾತನಾಡುವರು ಉದ್ಧಟತನಕ್ಕಿಳಿದು ಸಭಿಕರಲ್ಲಜನೇಕರ ಕಾಪಕ್ಕೆ ಗುರಿಯಾಗುತ್ತಾರೆ. ಆದರೆ ಬೇಂದ್ರೆಯನರ ಮಾತನ್ನು ಕೇಳಿ ಮುಖಸಿಂಡರಿಸಿಕೊಳ್ಳುವ ಪ್ರಸಂಗ ಯಾರಿಗಾದರೂ ಉಂಟಾಗಿರಲಾರದೆನ್ನಿಸಿತು. ಅದು ಏಕೆಂದರೆ ಅವರು ಆಡಿದ್ದೆಲ್ಲಾ ಬಸು ಮಟ್ಟಿಗೆ ಸತ್ಯವಾಗಿತ್ತು. ಮಾತ್ರವಲ್ಲದೆ ಅವರು ಸತ್ಯವನ್ನೇ ಆಡಿದರಾದರೂ ಅವನ್ನು ಪ್ರಿಯವಾಗಿನಂತೆ ಆಡಿದರು. ಸತ್ಯವಾದುದನ್ನು ಹೇಳಿದಾಗ ಅನೇಕರಿಗೆ ಅದು ಆಪ್ರಿಯವಾಗುತ್ತದೆ ಅವರ ಪಾಲಿಗೆ ಆ ಸತ್ಯ ಆಪ್ರಿಯ. ಆಂಧ್ರವರಿಗೆ ಕೂಡಾ ಪ್ರಿಯವಾಗುವಂತೆ ಬೇಂದ್ರೆಯನರು ಮಾತನಾಡಿದರು ಇದೇ ಬೇಂದ್ರೆಯನರ ಗಾರುಡಿ "ಸತ್ಯಂಬ್ರೂಯಾತ್ ಪ್ರಿಯಂಬ್ರೂಯಾತ್ ." ಸುಸಂಸ್ಕೃತನ ಈ ಪ್ರಾಮುಖ್ಯ ಲಕ್ಷಣವನ್ನು ಕನ್ನಡದ ವರಕವಿಗಳಲ್ಲಿ ನಾವು ಕಂಡಿಪ್ಪಾದರೆ ಆಶ್ಚರ್ಯವೇನಿಲ್ಲ. "Do not see Shelley plain"— ಎಂಬ ಮಾತೊಂದಿದೆ. ಆದರೆ ನಮ್ಮ ಕವಿವರ್ಯರನ್ನು 'plain' ಆಗಿ ನೋಡುವುದೂ ಒಂದು ಭಾಗ್ಯವೇ.

ಪಾಸ್ಯದ ಹೊನಲು

ಹೀಗೆ, ಸತ್ಯವನ್ನೇ ಆದರೂ ಅನೇಕರಿಗೆ ಅಪ್ರಿಯವೆನ್ನಿಸಬಹುದಾದ ಸತ್ಯವನ್ನೇ ಆದರೂ, ಪ್ರಿಯವಾಗುವಂತೆ ಹೇಳುವ ಬೇಂದ್ರೆಯವರ ಈ ಗಾರುಡಿಯು ತೀರ ಯಶಸ್ವಿಯಾಗಿರುವುದು ಅವರ ಪಾಸ್ಯದಿಂದ. ಬಂದರೆಡು ತಾಸುಗಳ ಅಪಧಿಯಲ್ಲಿ ಆಷ್ಟೊಂದು ಮೇಲ್ಮಟ್ಟದ ಹಾಸ್ಯವು ನಮಗೆ ದೊರೆಯುವುದು ತೀರ ವಿರಳ; ನೋವು ತಿಳಿಯದಂತೆ ಮನಸ್ಸಿಗೆ ಆಷ್ಟೊಂದು ಇಂಜಕ್ಷನ್‌ಗಳು ದೊರೆಯುವುದು ತೀರ ವಿರಳ; ರುಚಿ ರುಚಿಯಾಗುವಂತೆ ಸಿಹಿ ಲೇಪಿಸಿದ ಆಷ್ಟೊಂದು ಕಹಿ ಗುಳಿಗೆಗಳನ್ನು ನಾವು ಒಂದೇ ಸಮನೆ ನುಂಗಿದ್ದು ತೀರ ವಿರಳ.

ನೊಪಲನೆಯ ದಿನ 'ಕನ್ನಡದ ಆಷ್ಟಾಂಗ ಸಂಸ್ಕೃತಿ' ಎಂಬ ವಿಷಯದ ಮೇಲೆ ಮಾತನಾಡುತ್ತಿರುವಾಗ ಸಾಕ್ರಟೀಸನ ಪ್ರಸ್ತಾಪ ಬಂತು. ಸಾಕ್ರಟೀಸ್ ಅಂದುಕೊಂಡನಂತೆ— "ಜನಗಳೂ ಬುದ್ಧಿ ನಂತರವೂ; ನಾನೂ ಬುದ್ಧಿವಂತನಲ್ಲಿ. ಆದರೆ ಅವರಿಗೆ ತಾವು ದಡ್ಡರೆಂಬುದು ಕೂಡಾ ತಿಳಿಯದು. ನನಗೆ ನಾನು ದಡ್ಡನೆಂಬುದು ತಿಳಿದಿದೆ"—ಎಂದು. ಸಾಕ್ರೆಟೀಸನ ಜೀವನದಲ್ಲಿ ಬರುವ 'Oracle of Delphy' ಎಂಬ ಪ್ರಸಂಗವನ್ನು ನಾವು ಎಷ್ಟೋ ಸಲ ಓದಿಕೊಂಡಿರಬಹುದು. ಆದರೆ ಬೇಂದ್ರೆಯವರು ಅವನ್ನು ತಮ್ಮ ವಿಷಯ ಪ್ರತಿಪಾದನೆಗಾಗಿ ಉಪಯೋಗಿಸಿಕೊಂಡಾಗ ಅಪಕ್ಕೆ ಎಷ್ಟೊಂದು ರಮ್ಯ! ಪಶ್ಚಿಮದ ಬಾನಂಚಿನ್ನಲ್ಲಿ ಸೇವಿಸುತ್ತಿರುವ ಸೂರ್ಯ ಮೋಡಗಳ ಮೇಲೆ ನಡೆಸುವ ಗಾರುಡಿಯನ್ನು ಜ್ಞಾಪಿಸಿಕೊಳ್ಳಿ. ಆದರೆ ನಮ್ಮ ಕವಿ ಮುಳುಗುವ ರವಿಯಲ್ಲಿ.

ಬೇಂದ್ರೆಯರ ಪಾಸ್ಯ ನೂರು ದಿನಗಳ ಪರ್ಯಂತ ಹೊನಲಾಗಿ ಹರಿಯಿತು. ಅವರು "ಏಕ್ ಚಾ ಪ್ಯಾಲಾ" ಮಂತಾರಿ ನಾಟಕದ ಒಂದು ಸನ್ನಿವೇಶನನ್ನು ವರ್ಣಿಸಿದ ವೈಖರಿಗೆ, ಅಲ್ಲಿ ತಾನು ಸೃಷ್ಟಿದ್ದನ್ನು ಸಿವ್ವಪಡಿಸುವುದಕ್ಕಾಗಿ ಕೈ ಎತ್ತಬೇಕಾದ ಪರಿಸ್ಥಿತಿಯಲ್ಲಿರುವ ಆ ಹೆಣವೇ ಎದ್ದು ಕುಳಿತು ಚಪ್ಪಾಳೆ ತಟ್ಟಬೇಕು! ಬೇಂದ್ರೆಯವರ ಪಾಸ್ಯದ ಹೊನಲಿನ ವಿವಿಧ ಗತಿಗಳೋ ಅಕ್ಕ ವಿಲ್ಲವಪಸ್ಸು. ಬಮ್ಮೊಮ್ಮೆ ಅದು ಮೇಕದಾಟುವಿನಲ್ಲಿ ಕಾವೇರಿ ಹರಿದಂತೆ ಧರಿಯುತ್ತದೆ. ಆಗ ಅದರ ಪಾತ್ರ ಬಲು ಕಿರಿದು. ಯಾರೋ ಬೇಂದ್ರೆಯವರನ್ನು ರವೀಂದ್ರರಿಗೆ ಹೋಲಿಸಿದರೆ? "ಹೌದು; ಟಾಗೂರರೂ ಪದ್ಯ ಬರೆದಿದ್ದಾರೆ, ನಾನೂ ಬರೆದಿದ್ದೇನೆ"—ಎನ್ನುತ್ತಾರೆಬೇಂದ್ರೆಯವರು. ಈಗೆ ಅವರ ಪಾಸ್ಯವು ಒಮ್ಮೊಮ್ಮೆ ಕೋನುತೆಯೊಬ್ಬಳು ತೊಡಮೆ ಬಾಟುನಂತೆ ಸದ್ದಿಲ್ಲದೆ ಚಿಮ್ಮಿ ಹೋಗುತ್ತದೆ.

ನವಯುಗದ ಮಹಡಿಯಲ್ಲಿ ನಗು

ಆದರೆ ತಮ್ಮ ಕೊನೆಯ ಕಾರ್ಯಕ್ರಮದ ವೇಳೆಗೆ ಬೇಂದ್ರೆಯವರು ಎಬ್ಬಿಸಿದ ನಗೆ ಬೇರೆ ರೀತಿಯದಾಗಿತ್ತು. ಅವರೇ ಹೇಳಿದಂತೆ ಮುರಂತ ನಾಟಕಗಳಲ್ಲಿ ಬರುವಂಥ ನಗೆಯು ನವಯುಗ ಕಾರ್ಯಾಲಯದ ಮಹಡಿ. ವ್ಯಾಸಂಗ ಗೋಷ್ಠಿಯ ಉದ್ಘಾಟನೆಯ ಸನ್ನಿವೇಶ. ನೆರೆದಿರುವವರು ಐವತ್ತು-ಅರುವತ್ತು ಮಂದಿ ಗೃಹಾಸಕ್ತ ಅಷ್ಟೇ. ಗೆಳೆಯರಾದ ಶ್ರೀಮಾನ್ ಕೆ. ಬಿ. ರಾಮಕೃಷ್ಣರಾಯರು 'ಕರೆ ಮತ್ತು ನೀತಿ' ಎಂಬ ತಮ್ಮ ವಿಚಾರ ಪ್ರಚೋದಕ ಪ್ರಬಂಧವನ್ನೋದಿದರು ಹತ್ತು ಜನರ ಕಲ್ಯಾಣಕ್ಕಾಗಿ ಆತ್ಮಾರ್ಪಣೆ ಮಾಡುವುದು ಧರ್ಮಸಮ್ಮತವಾಗಬಹುದು ಎಂಬ ಮಾತು ಬಂತು. ಕೊನೆಗೆ ಬೇಂದ್ರೆಯವರು ತೊಡಗಿದರು. ಬಾವಿಗೆ ಬಿದ್ದು ಗೋಳಾಡುತ್ತಿದ್ದವನು "ಲೋಕ ಮುಳುಗ್ತಿದೆ; ಉಳಿಸ್ರೋ" ಎಂದು ಕೂಗಿತಂತೆ ಯಾರೋ ಆದರೆ ಬೇಪ ಉಳಿಸಿ "ಎಲ್ಲಿ ಲೋಕ ಮುಳುಗ್ತಿರೋದು?" —ಎಂದು ಕೇಳಿದರಂತೆ. "ನಾನು ಮುಳುಗಿದರೆ ನನ್ನ ಪಾಲಿಗೆ ಲೋಕವೇ ಮುಳುಗಿದ ಹಾಗೆ"—ಎಂದಿತಂತೆ ನರಿ. "ತಾನಿದ್ದರೆ ಮೂರು ಲೋಕವುಂಟು!" ಆದ್ದರಿಂದ ಇತರರ ಕಲ್ಯಾಣಕ್ಕೇ ಆದರೂ ಬಪಳ ಸುಲಭವಾಗಿ ಬೇಪ ತೆರಬೇಕೆ?

ಬೇಂದ್ರೆಯನರು ಆಶಾವಾದಿಗಳು, ಆಶಾವಾದಿ ಕವಿಗಿ ಇವರೇ ಬಂಜಾಗ ಆತ ನೀತಿ—ಅನೀತಿ, ಧರ್ಮ—ಅಧರ್ಮಗಳ ವಿವೇಚನೆಗೆ ತೊಡಗಿದರೆ, ವಚನದ ಮಹತ್ವ ಏನೆಂಬುದರ ಅರಿವು ನನಗೆ ಉಟಾಗುತ್ತದೆ. ಕಲಿಯ ಕುರಿತು, ಜೀವನ ಕಲಿಯ ಕುರಿತು ಮಾತನಾಡುವಾಗ ನನ್ನ ಕವಿಯ ರಕ್ತ ಕುದ್ದು ಬಂತು. ಕಲಿಯಲ್ಲಿ, ಜೀವನದಲ್ಲಿ ನೀತಿ, ಅನೀತಿ ಎಂದು ಪ್ರತ್ಯೇಕಿಸುವ ಪೊದ ಒ ಇಂದಿನ ಜಗತ್ತಿನಲ್ಲಿ ನೀತಿ ಎನ್ನುವ ಉಳಿದಿವೆ ಎಂಬುದನ್ನು ನೋಡಿಕೊಳ್ಳಬೇಡವೆ? ಬೇಂದ್ರೆಯನರು ಇಂದಿನ ನೀತಿಯನ್ನು ತೂಕ ನಾಡಿ ಮುಂದೆ ಹಿಡಿದರು ಆಗ ಅವನ್ನು ಆಡಿದ ಮಾತುಗಳು ವಿಚಾರವನ್ನು ಕೆರಳಿಸುವಂಥವುಗಳು ಅವರು ಕೆರಳಿಯೇ ಪಾಠವನ್ನು ತಿದರು. ಆದರೆ ಕೆರಳಿದಾಗಲೂ ಕವಿ ವರ ಬೇಂದ್ರೆ ರಸಿಕರಾಗಿಯೇ ಇರುತ್ತಾರೆ. ಬಸಿಯೇರಿದಾಗಲೂ ಅವರು ನಕ್ಕು ನಗಿಸುತ್ತಾರೆ. ಕಾವಿರುವುದು ವಿಷಯದಲ್ಲಿ ಮಾತ್ರ ಹಾಪು; 'ನವಯುಗ'ದ ಮಹಡಿಯಲ್ಲಿ ನೆರೆದಿದ್ದ ಪತ್ಯೇಕವತ್ತು ಮಂದಿಯನ್ನು ಬೇಂದ್ರೆಯವರು ನಕ್ಕು ನಗಿಸಿದರು. 'ಖಿನ್ನ ಸೀ ಐಲೆಂಡ್' ನಲ್ಲಿ ಕಳ್ಳತನದ ವ್ಯವಸ್ಥೆ, ಮಹಾರಸನಾಪ ಅಧಿಕಾರಿಯೊಬ್ಬ—ಮಾತು ಮಾತಿಗೆ 'ಜ್ಯಾಮ್, ಡೆವಿಲ್' ಅನ್ನುವವನು ಒತ್ತಾಯಕ್ಕೊಳಗಾಗಿ 'ಗಾಡ್ ಬ್ಲೆಸ್ ಯೂ' ಎಂದಾಗಲೂ ಥಟ್ಟನೆ 'ಯೂ ನೊ ವಾಟ್ ಐ ಮೀನ್' —ಎಂದು ತಿದ್ದಿಕೊಂಡ ಬಗೆ, ಶೋಲಾಪುರದಲ್ಲಿ ಭಾಷಣಕ್ಕೆ ಕರೆದ ಸನಾಜಾರ ಇಂಥ ಹಲವಾರು ಪ್ರಸಂಗಗಳನ್ನು ಬೇಂದ್ರೆಯವರು ನಿವರಿಸಿದಾಗ ನಗದಿರಲು ಸಾಧ್ಯವೆ? ಎಲ್ಲರೂ ನಕ್ಕರು.

ಆದರೆ ಕೊನೆಗೊಮ್ಮೆ ಹಿಂದೇಟು ಹೊಡೆಯಿತು. "ನಾನಾಡಿದ್ದು ನಗತಕ್ಕ ವಿಷಯವಲ್ಲ" ಎಂದರು ಬೇಂದ್ರೆಯನರು. "ಬೇರೇನಾ ಮಾಡಲು ಕೈಕಾಗದ್ದಕ್ಕೆ ನೀವು ನಗತ್ತೀರಿ" —ಎಂದರೆವರು. ಕೈಲಾಸಂ ಒಮ್ಮೆ ಹೇಳಿದ್ದರು—"ನಾನು ನಗದೇಕಾಪುವನ್ನು ಹೇಳಿದಾಗ ನೀವು ನಗುತ್ತೀರಿ. ಸರಿ. ಆದರೆ ನನುವಿಗೆ ಆವಕಾಶವರದೊಡ್ಡಾದನ್ನು ಹೇಳಿದಾಗಲೂ ನೀವು ನಗುತ್ತೀರಿ. ಆಗ ನಿಮ್ಮನ್ನು ಕಂಡು ನಾನು ನಗುತ್ತೇನೆ!"—ಎಂದು. ಬೇಂದ್ರೆಯವರೂ ಹಾಗೆ ನಕ್ಕರೋ ಏನೋ! ಅದೇನಿದ್ದರೂ, ಬೇಂದ್ರೆಯನರು ಪರಿಸಿದ ಪಾಸ್ಯದ ಹೊನಲಿನೋಳಗಿಂದ ಆವರಪಾತಿನ ಒಳ ತಿರುಳನ್ನು ಅರಿಸಿ ತೆಗೆದುಕೊಳ್ಳಲು ನಾವು ಸಮರ್ಥರಿದ್ದರೆ, ಅವರು ನಕ್ಕರೂ ನಗಲಿ—ಬಡಿ, ಪರವಾ ಇಲ್ಲ!

ಸಿಹಿಮೂತ್ರ

ರೋಗ ನಿವಾರಣೆ.

(DIABETES)

ಏಳು ದಿನಗಳಲ್ಲಿ ಗುಣವಾಗುತ್ತದೆ

ಮೂತ್ರದಲ್ಲಿ ಸಕ್ಕರೆ ಪೆಚ್ಚು ಹೋಗುವ ದಕ್ಕೆ ಸಿಹಿಮೂತ್ರ ರೋಗ (Diabetes) ಎಂದು ಕರೆಯುತ್ತಾರೆ. ಎಂಥ ಭಯಂಕರ ರೋಗವೆಂಬರಿ, ಇದಕ್ಕೆ ಇದು ಬಲಿಯಾದ ರೋಗಿಯು ದಿನದಿನಕ್ಕೆ ಸಾವಿನತ್ತ ಸಾಗುತ್ತಿರುತ್ತಾನೆ. ಇದರ ಚಿಕಿತ್ಸೆಗೆ ಡಾಕ್ಟರು ಇಂಜಕ್ಷನ್ ಕಂಡುಹಿಡಿದಿದ್ದಾರೆ. ಆದರೆ ಇದರಿಂದ ರೋಗ ಸಂಪೂರ್ಣವಾಗಿ ಪಾಸಿಯಾಗುವುದಿಲ್ಲ. ಇಂಜಕ್ಷನ್ನಿನ ಪರಿಣಾಮ ಇರುವವರೆಗೆ ಸಕ್ಕರೆ ಅಂಶ ಸ್ವಲ್ಪ ಕಡಿಮೆಯಾಗುತ್ತದೆಯಷ್ಟೆ.

ಈ ದಾರುಣ ಖಾಹಿಲೆಯ ನುಮ್ಮ ಲಕ್ಷಣಗಳಾವುವೆಂದರೆ ಹಸಿವು ನೀರೆಡಿಕೆ ಆತಿ ಹೆಚ್ಚಾಗುವುದು, ಮೂತ್ರದಲ್ಲಿ ಹೆಚ್ಚು ಸಕ್ಕರೆ ಹೋಗುವಿಕೆ ಮತ್ತು ನವೆಯೂಗುವುದು ಇತ್ಯಾದಿ

ಈ ಖಾಹಿಲೆ ಉಲ್ಬಣಾವಸ್ಥೆಗೆ ಹೋದಾಗ ಹುಣ್ಣು, ಗುಳ್ಳೆ, ಕಣ್ಣಿನಲ್ಲಿ ಪೊರೆ ಮತ್ತು ಇತರ ತೊಡಕೆಂಗಳು.

ವೀನಸ್ ಚಾರ್ಮ್ ಆಧುನಿಕ ಕಾಲದ ವೈದ್ಯಕೀಯ ಪವಾನು ಇದರಿಂದ ಸಾವಿರಾರು ಜನರು ಮೃತ್ಯುವಿನ ದವಡೆಯಿಂದ ಪಾರಾಗಿದ್ದಾರೆ, "ವೀನಸ್ ಚಾರ್ಮ್" ಸೇವನೆಯಿಂದ ಎರಡನೆ ಆಥವಾ ಮೂರನೆಯ ದಿನದಿಂದ ಮೂತ್ರದಲ್ಲಿ ಸಕ್ಕರೆ ಹೋಗುವಿಕೆ ಕಮಿ ಆಗುವುದು. ಹೆಚ್ಚು ಸಲ ಮೂತ್ರಕ್ಕೆ ಹೋಗುವುದು ಕಡಿಮೆಯಾಗುತ್ತದೆ. ನಾಲ್ಕನೆಯ ದಿನದಿಂದ ನೀವು ಅರ್ಧ ಗುಣವಾಯಿತೆಂದು ಭಾವಿಸುವಿರಿ. ನೀವು ಯಾವ ಪಥ್ಯಗಳನ್ನು ಮಾಡಬೇಕಾಗಿಲ್ಲ. ವಿವರಣಾತ್ಮಕ ಕೈಪಿಡಿಗೆ ಬರೆಯಿರಿ, 50 ಮಾತ್ರೆಗಳ ಒಂದು ಶೀಸೆಗೆ, ರೂಪಾಯಿ 6-12-0. ಪ್ಯಾಕಿಂಗ ಮತ್ತು ಅಂಚೆ ಪೆಚ್ಚ ಉಚಿತ.

Venus Research Laboratory (N. W.)
Post Box No. 587, CALCUTTA.

ಕೃತಜ್ಞತಾ ಸಮರ್ಪಣೆ

ತಾ. 17—10—54 ರಲ್ಲು ನಡೆದ ದ. ಕ. ಜಿಲ್ಲಾ ಬೋರ್ಡು ಜುನಾವಳಿಯಲ್ಲಿ ಹಿರಿಯಡ್ಕ ಸರ್ಕಲಿನಿಂದ ಪ್ರಜಾ ಸೋಪಲಿಸ್ಟ್ ಪಾರ್ಟಿಯ ಉಮೇದ್ವಾರನಾದ ನನಗೆ ಮತಮಿತ್ತು ಪಾರ್ಟಿಯ ಮೇಲಿನ ಅಭಿಮಾನವನ್ನು ವ್ಯಕ್ತಗೊಳಿಸಿದ ಮತದಾರರಿಗೂ, ಅನೇಕ ಬಗೆಯಿಂದ ಸಹಾಯ ಸಹಕಾರವನ್ನಿತ್ತ ಮಿತ್ರ ವೃಂದಕ್ಕೂ ನನ್ನ ಹೃತ್ಪೂರ್ವಕವಾದ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ಮರ್ನೆ ಗೋವಿಂದ ಶೆಟ್ಟಿ.

ತಾ. 20—10—54.

ಕೃತಜ್ಞತೆಗಳು

ಇತ್ತೀಚೆಗೆ ನಮ್ಮ ಹಿರಿಯರಾದ ಮತ್ತು ಡಾ। ಕೆ. ಮಂಜುನಾಥ ರೈಗಳ ಪಿತೃಗಳಾದ ಬೆಳ್ಳಾರೆ, ಪಸ್ಸೆಗುತ್ತು ಜತ್ತಪ್ಪ ರೈಗಳ ನಿಧನದಿಂದಾದ ನಮ್ಮ ದುಃಖವಪರ್ಲಿ ಸಂತಾಪ ವ್ಯಕ್ತಪಡಿಸಿವರೆಲ್ಲರಿಗೂ ಈ ಮೂಲಕ ಆಭಾರ ಸೂಚಿಸುತ್ತೇವೆ. ಆ ದುಃಖದ ಸಂದರ್ಭದಲ್ಲಿ ಅವರ ಉತ್ತರಕ್ರಿಯೆಗೆ ಬಂದು ನಮ್ಮೊದನೆ ಸಹಕರಿಸಿದ ಎಲ್ಲಾ ನಮ್ಮ ಬಂಧು ಮಿತ್ರರಿಗೆ ಪ್ರತ್ಯ, ಪ್ರತ್ಯೇಕವಾದ ಆಭಾರ ಸೂಚಿಸಲು ಸಾಧ್ಯವಾಗಲಿಲ್ಲವೆಂಬುದಕ್ಕೆ ವ್ಯವಸಪಟ್ಟು ಈ ಮೂಲಕ ನಮ್ಮ ಕೃತಜ್ಞತೆಯನ್ನರ್ಪಿಸುತ್ತೇವೆ

ಡಾ। ಕೆ. ಮಂಜುನಾಥ ರೈ.
ಪಟೇಲ್, ಬಿ. ನಾರಾಯಣ ಶೇಕ.

ಯಂ. ಗಣಪಯ್ಯ ಎಂಡ್ ಸನ್ಸ್

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು ಇವರ

ಅಶೋಕಾರಿಷ್ಟ ಮತ್ತು ಪಾತ್ರ—ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಅಕಾಲ ಬಹಿಷ್ಟೆ, ಮತುಸ್ರಾಪಹು ಜಾಸ್ತಿಯಾಗಿಯೂ, ಕಡಿಮೆಯಾಗಿಯೂ ಹೋಗುವುದು, ಬಿಳಿಸೆರಗು, ಸಂತಾನ ಹೀನತೆ, ರಕ್ತಹೀನತೆ ಮುತುಕೂಲಿ, ಮೊನಲಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು. ಬಾಟ್ಲಿ 1ರ ರೂ. 3-8-0.

ಗರ್ಭ ರಕ್ಷಕ— ಗರ್ಭಿಣಿಯರಿಗೆ ಅತ್ಯಂತ ಫಲಕಾರಿಯಾದ ಔಷಧಿ. ಚಿವಿಜೋನ, ಗರ್ಭಸತನವಾಗುವಿಕೆ, ವಾಂತಿ, ಅರುಚಿ, ಆಶಕ್ತತೆ, ನುಲುಬ್ಬತೆ, ವಾಯು ಉಪದ್ರ, ಕೈ ಕಾಲುಬಚ್ಚುವುದು ಇವುಗಳನ್ನೆಲ್ಲಾ ಹೋಗಲಾಡಿಸುವುದು. ಬಾಟ್ಲಿ 1ರ ರೂ. 3-8-0. ಇವಲ್ಲದೆ ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ. ಕಾಯಿಲೆ ಸಂಗತಿ ವಿವರವಾಗಿ ಬರೆಯಲ್ಪಟ್ಟರೋಗಕ್ಕೆ ತಕ್ಕ ಔಷಧಿಯನ್ನು ರವಾನಿಸಬಹುದು.

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್)

ಪದತಪ್ಪಿದ ಮತ್ತು ನಿಂತುಹೋದ ಮುಟ್ಟು ಹೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಭಾದೆಕಪೂ ಉಂಟಾಗದೆ ತೀವ್ರ ಗುಣವೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/-

Mrs. P. DEVEE, L. D. (N. J.) (ವಿ.ಪಿ.ಪಿ. ಪ್ರತ್ಯೇಕ)
CALCUTTA—40 ಸ್ಟಾಕಿಸ್ಟರು: ಶಹಾಕಂಪನ್ಸಿ, ಮಂಗಳೂರು



ಸಿಂಡಿಕೇಟ್ ಬ್ಯಾಂಕ್,

ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

ಗಣಿ ಹಾಗು ಲೋಹ ಸಂಶೋಧನ ಕಾರ್ಯ

(೩ನೇ ಪುಟದಿಂದ)

ನೂರಕ್ಕೆ ಸುಮಾರು ೪೫ರಷ್ಟು ಲೋಹಾಂಶವನ್ನೊಳಗೊಂಡ ಉತ್ತಮ ದರ್ಜೆಯ ಕೋವೆಸೈಟ್ ಅದುರು ಹತ್ತು ಲಕ್ಷ ಟನ್ನುಗಳಷ್ಟೂ ಇದರ ಮುಮ್ಮಡಿ ಸುಮಾರು ಕನಿಷ್ಠ ಶ್ರೇಣಿಯ ಅದುರೂ ನಮ್ಮಲ್ಲಿ ಸಿಗಬಹುದೆಂದು ಅಂದಾಜು. ಕೆಲವು ಅದುರುಗಳಿಂದ ಲೋಹಾಂಶವನ್ನು ತೆಗೆಯುವುದಕ್ಕೂ ರಾಸಾಯನಿಕ ಪ್ರಕ್ರಿಯೆಗಳ ಕಷ್ಟವಾಗಿರುವುದರಿಂದ ಈಚೆಗೆ ಹೆಚ್ಚಾಗಿ ಬಳಕೆಗೆ ಬರುತ್ತಿರುವ "ಸ್ಟೈನ್‌ಲೆಸ್ ಸ್ಟೀಲ್" ಮತ್ತಿತರ ಉಕ್ಕಿನ ವಿಶೇಷ ಜಾತಿಗಳು ತಯಾರಿಕೆಯಲ್ಲಿ ಈ ಲೋಹದ ಉಪಯೋಗ ಹೆಚ್ಚು. ಮುಂದೆ ಸ್ಥಾಪಿಸಲ್ಪಡುವ ಉಕ್ಕಿನ ಕಾರ್ಖಾನೆಗಳ ದೃಷ್ಟಿಯಿಂದ ಕ್ರೋಮಿಯಮಿನ ಸ್ಥಾನವು ಉನ್ನತವಾಗಿದ್ದು, ಸರಕಾರವು ಇದರ ನಿರ್ಯಾತ ಮಾಡುವುದನ್ನು ತಡೆಗಟ್ಟಿರುವುದು.

ಟೈಟೇನಿಯಂ ಎಂಬ ಲೋಹಾಂಶವನ್ನು ಹೊಂದಿದ ಉತ್ತಮದರ್ಜೆಯ ವಾಗ್ನೆಟೈಟ್ ಎಂಬ ಕಬ್ಬಿಣದ ಅದುರು ಬಿಹಾರಿನಲ್ಲೂ ಬಾಕ್ಸೈಟ್ ಎಂಬ ಅಲುಮಿನಿಯಮಿನ ಅದುರು ಮುಂಬಯಿ, ಮಧ್ಯಪ್ರದೇಶಗಳಲ್ಲೂ ಇಲ್ಮನೈಟ್ ಎಂಬ ಅದುರು ತಿರುವಾಂಕೂರಿನಲ್ಲೂ ಸಿಗುತ್ತದೆ. ಇದನ್ನು ಮುಖ್ಯವಾಗಿ ಬಣ್ಣಗಳ ತಯಾರಿಕೆಗೂ ಕಬ್ಬಿಣ, ತಾಮ್ರ, ಅಲುಮಿನಿಯಂ ಮುಂತಾದ ಲೋಹಗಳೊಡನೆ ಬೆರಸಿ ಮಿಶ್ರ ಲೋಹದ ವಸ್ತುಗಳನ್ನು ಸಿದ್ಧಪಡಿಸುವುದಕ್ಕೂ ಉಪಯೋಗಿಸುವರು. ನಮ್ಮ ದೇಶದಲ್ಲಿ ಟೈಟೇನಿಯಮಿನ ವಿಷಯ ಹೆಚ್ಚಿನ ಸಂಶೋಧನೆ ನಡೆದಿಲ್ಲವಾದರೂ ಒಳ್ಳೆಯ ಭವಿಷ್ಯವಿರುವ ಲೋಹವೆಂದು ಹೆಸರಿಸುವಷ್ಟು ಉಪಯುಕ್ತತೆಯನ್ನು ಇದು ತೋರಿಸುತ್ತಿದೆ.

ಅಲುಮಿನಿಯಂನನ್ನು ಬಾಕ್ಸೈಟ್ ಎಂಬ ಅದುರಿನಿಂದ ತೆಗೆಯಲಾಗುತ್ತಿದ್ದು ನಮ್ಮ ದೇಶದಲ್ಲಿ ೫೫ ಕೋಟಿ ಟನ್ನುಗಳಷ್ಟು ಇದರ ಸಂಗ್ರಹ ವಿರಬಹುದು; ಇದರಲ್ಲಿ ಮೂರೂವರೆಕೋಟಿ ಟನ್ನುಗಳಷ್ಟು ಉತ್ತಮ ಶ್ರೇಣಿಯದು. ಸುಮಾರು ೩೫೦೦೦ ಟನ್ನುಗಳಷ್ಟು ಬಾಕ್ಸೈಟು ಅದುರು ಅಲುಮಿನಿಯಂ ತಯಾರಿಕೆಯಲ್ಲಿ ಈಗ ಉಪಯೋಗಿಸಲ್ಪಡುತ್ತಿದ್ದು ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಈ ಪ್ರಮಾಣವು ಇನ್ನೂ ಹತ್ತು ಸಾವಿರ ಟನ್ನುಗಳಷ್ಟು ಹೆಚ್ಚಿಕೊಳ್ಳಬಹುದು. ಇದಕ್ಕೆ ಅನುಕೂಲವಾಗುವಂತೆ ದಾಸೋದರ ಹಾಗು ಹಿಂಗಾರಿಡ ಕಣಿವೆಬೆಟ್ಟ ಪ್ರದೇಶಗಳಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸುವ ಪ್ರಯತ್ನ ನಡೆದಿರುವುದು. ಈಗ ಮುರಿ, ಕಲ್ಕತ್ತ, ಅಲ್ಲೆಪ್ಪಿಯ ಮತ್ತು ಅಸನ್‌ಸೋಲ ಮುಂತಾದೆಡೆಗಳಲ್ಲಿರುವ ಕಾರ್ಖಾನೆಗಳು ಅಲುಮಿನಿಯಂ ವಸ್ತುಗಳನ್ನು ಸಿದ್ಧಪಡಿಸುತ್ತಿದ್ದು, ಇವುಗಳ ಉತ್ಪಾದನಾ ವೆಚ್ಚವು ಮಾತ್ರ ಅಮೇರಿಕದಲ್ಲಿನದಕ್ಕಿಂತ ಕಡಿಮೆಯಾಗಿದೆ. ಇದನ್ನು ದಕ್ಷ ತಾಂತ್ರಿಕರ ನೆರವಿನಿಂದ ತಗ್ಗಿಸುವ ಪ್ರಯತ್ನಗಳನ್ನು ನಡೆಸಲಾಗುತ್ತದೆ.

ತಾಮ್ರದ ಗಣಿಗಳು ನಮ್ಮ ದೇಶದಲ್ಲಿ ಬಿಹಾರದ ಸಿಂಘ್‌ಭೂಮಿಯಲ್ಲಿಯಷ್ಟೇ ಕಾಣಸಿಗುತ್ತವೆ. ದೇಶದ ನಾನಾ ಭಾಗಗಳಲ್ಲಿ ತಾಮ್ರದ ಅದುರುಗಳಿವೆಯೆಂದು ಗೊತ್ತಾಗಿದ್ದರೂ ಗಣಿಗಾರಿಕೆಯನ್ನು ಆ ಬೆಲ್ಲಕ್ಕೆ ತೊಡಗಿರುವುದಿಲ್ಲ. ಉತ್ಪಾದನೆಯು ಅನುಕೂಲತೆ ಮತ್ತು ಬೆಚ್ಚಗಳ ದೃಷ್ಟಿಯಿಂದ ಜೈಪುರದ ಕೆಲವು ಪ್ರದೇಶಗಳಲ್ಲಿ ಗಣಿಗಾರಿಕೆಯು ಲಾಭದಾಯಕವೆಂದು ಪ್ರವೀಣರ ಅಭಿಪ್ರಾಯ. ನಮ್ಮ ದೇಶದಲ್ಲಿ ಸಾಮಾನ್ಯವಾಗಿ ಆರೇಳು ಸಾವಿರ ಟನ್ನುಗಳಷ್ಟು ವಾರ್ಷಿಕ ತಾಮ್ರ ಉತ್ಪಾದಿಸಲ್ಪಡುತ್ತದೆ. ಹೆಚ್ಚಾಗಿ ಇದನ್ನು ಹಿತ್ತಾಳೆಯ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ನಮಗೆ ವರ್ಷಕ್ಕೆ ೫೦೦೦ ಟನ್ನು ಗಳಾದರೂ ತಾಮ್ರವು ಬೇಕಾಗುತ್ತಿದ್ದು, ತಜ್ಞರು ತಾಮ್ರದ ಉತ್ಪಾದನೆಯನ್ನು ಅಧಿಕಗೊಳಿಸುವ ಪ್ರಯತ್ನದಲ್ಲಿದ್ದಾರೆ.

ಸೀಸ ಮತ್ತು ಸತುಗಳೂ ನಮ್ಮ ದೇಶದಲ್ಲಿ ವಿರಳವಾಗಿಯೇ ಸಿಗುತ್ತವೆ. ರಾಜಸ್ಥಾನದ ಜವಾರ್ ಪ್ರದೇಶದಲ್ಲಿ ಸೀಸ ಮತ್ತು ಸತುವಿನ ಉತ್ತಮ ಅದುರುಗಳು ಇವೆ. ಇಲ್ಲಿ ಒಂದು ಕೋಟಿ ಟನ್ನುಗಳಷ್ಟು ಅದುರು ದೊರಕಬಹುದೆಂದು ಅಂದಾಜು. ಸಾಮಾನ್ಯವಾಗಿ ದಿನಕ್ಕೆ ನೂರೈವತ್ತು ಟನ್ನುಗಳಷ್ಟು ಅದುರನ್ನು ಶುದ್ಧ ಮಾಡುವ ಕೆಲಸ ಇಲ್ಲಿ ನಡೆಯುತ್ತದೆ. ಸರಕಾರದವರು ಸೀಸದಷ್ಟೇ ಸತುವನ್ನೂ ಅಧಿಕ ಪ್ರಮಾಣದಲ್ಲಿ ಉಪಯೋಗಿಸುವ ಯೋಜನೆಯನ್ನು ಪರ್ಯಾಲೋಚಿಸುತ್ತಿದ್ದಾರೆ. ಆದರೆ ತವರಿಗೆ ಮಟ್ಟಿಗೆ ಮಾತ್ರ ನಾವು ನಿರಾಶಾಯರಾಗಿದ್ದೇವೆ. ನಮಗೆ ವರ್ಷಕ್ಕೆ ೪೦೦ ಟನ್ನುಗಳಷ್ಟಾದರೂ ತವರವು ಬೇಕಾಗುತ್ತಿದ್ದು ಮಲಯ ಮುಂತಾದ ದೇಶಗಳ ಆಮದನ್ನು ನಾವು ಕೊಂಡಿಕೊಂಡಿದ್ದೇವೆ. ಕೊರತೆಯ ವಸ್ತುಗಳಾದ ತಾಮ್ರ, ಸೀಸ, ಸತು ತವರಗಳ ಆವಿಷ್ಕಾರಕ್ಕೆ ಸರ್ಕಾರ ನಾವು ೧೬ ಕೋಟಿ ರೂಪಾಯಿಗಳಷ್ಟು ಹಣವನ್ನು ಪ್ರತಿವರ್ಷ ಪೆಚ್ಚುಮಾಡುತ್ತಿದ್ದೇವೆ.

ಕೆಲವು ವಿಶೇಷತರದ ಉಕ್ಕನ್ನು ತಯಾರಿಸುವುದಕ್ಕೆ ಟಂಗ್‌ಸ್ಟನ್ ಎಂಬ ಧಾತುವನ್ನು ಉಪಯೋಗಿಸುತ್ತಾರೆ. ನಮ್ಮಲ್ಲಿ ಅತ್ಯಲ್ಪ ಪ್ರಮಾಣದಲ್ಲಿ ಸಿಗುವ ಲೋಹಗಳಲ್ಲಿ ಇದೊಂದಾಗಿದ್ದು ರಾಜಸ್ಥಾನದ ಖಿ ಮಾತ್ರ ಕೆಲವು ಗಣಿಗಳು ಇವೆ. ಕಳೆದ ಮಹಾಯುದ್ಧದ ಸಮಯ ಸುಮಾರು ೩೦೦ ಟನ್ನುಗಳಷ್ಟು ಅದುರನ್ನು ಇಲ್ಲಿ ಅಗೆದು ತೆಗೆಯಲಾಯಿತು. ೧೯೩೧ರಲ್ಲಿ ಹೊರತೆಗೆದ ೧೪ ಟನ್ನುಗಳಷ್ಟು ಅದುರು ಉತ್ತಮ ದರ್ಜೆಯದಾಗಿತ್ತು. ನಮ್ಮಲ್ಲಿಯ ಉಕ್ಕಿನ ಕೈಗಾರಿಕೆಗೆ ಇದು ಸಾಕಾಗುವುದಿಲ್ಲ. ತಾತಾ ಕಾರ್ಖಾನೆಯವರು ಪ್ರತಿ ವರ್ಷ ೩೦ ಟನ್ನುಗಳಷ್ಟು ಟಂಗ್‌ಸ್ಟನ್ನನ್ನು ಹೊರದೇಶಗಳಿಂದ ತರಿಸುತ್ತಿರುವರೆಂದು ತಿಳಿದು ಬರುತ್ತದೆ.

ಅಭ್ರಕದ ಪುಟ್ಟಿಗೆ ಜಾಗತಿಕ ಆವಶ್ಯಕತೆಯ ಐದರಲ್ಲಿ ನಾಲ್ಕು ಪಾಲನ್ನು ಪೂರೈಸುವಷ್ಟು ಸಂಗ್ರಹವನ್ನು ನಮ್ಮ ದೇಶದಲ್ಲಿ ಕಾಣುತ್ತೇವೆ. ಬಿಹಾರ, ರಾಜಸ್ಥಾನ ಮತ್ತು ಮದ್ರಾಸುಗಳಲ್ಲಿ ಈ ಖನಿಜದ ಸಿಪ್ಪೆಪಪ್ಪುಗಳು ಹೇರಳವಾಗಿವೆ ಕಳೆದ ಹತ್ತು ವರ್ಷಗಳಲ್ಲಿ ಅಭ್ರಕದ ಉತ್ಪಾದನೆಯು ಇನ್ನುಡಿಯಾಗಿದ್ದು ಸುಮಾರು ಹತ್ತು ಕೋಟಿ ರೂಪಾಯಿಗಳಷ್ಟು ಪೊತ್ತದ ಲೋಹವು ಹೊರ ದೇಶಗಳಿಗೆ ರಫ್ತಾಗುತ್ತದೆ.

ಸಿಂಧ್ರಿಯಲ್ಲಿ ಗೊಬ್ಬರ ಕಾರ್ಖಾನೆಯನ್ನು ಸ್ಥಾಪಿಸಿದ ಬಳಿಕ ಜಿಪ್ಸಂ ಎಂಬ ಖನಿಜದ ಆವಶ್ಯಕತೆ ಬಹಳಷ್ಟು ಹೆಚ್ಚಿಕೊಂಡಿದ್ದು ರಾಜಸ್ಥಾನದಲ್ಲಿರುವ ಸುಮಾರು ೫ ಕೋಟಿ ಟನ್ನುಗಳಷ್ಟು ಸಂಗ್ರಹವನ್ನು ಬಳಸುವ ಪ್ರಯತ್ನ ನಡೆದಿರುತ್ತದೆ. ದಕ್ಷಿಣ, ಉತ್ತರ ಹಾಗು ಪಶ್ಚಿಮ ಭಾರತಗಳಲ್ಲೂ ಜಿಪ್ಸಂ ಅದುರು ದೊರಕುತ್ತದೆ. ಸಿಮೆಂಟು ಮತ್ತು ಫಲವರ್ಧಕ ಗೊಬ್ಬರಗಳ ಕಾರ್ಖಾನೆಗಳು ವಿಸ್ತರಿಸಿದ ಹಾಗೆಲ್ಲ ವರ್ಷಕ್ಕೆ ಎಂಟೊಂಭತ್ತು ಲಕ್ಷ ಟನ್ನುಗಳಷ್ಟು ಜಿಪ್ಸಂ ಬೇಕಾದೀತು.

ನಮ್ಮ ದೇಶದಲ್ಲಿ ಸಿಗುತ್ತಿರುವ ಲೋಹಗಳಲ್ಲಿ ಆ್ಯಂಟಿಮನಿ ಮುಖ್ಯವಾದವು: ಅಮಿತ ಭಾರತದಲ್ಲಿ ಇದರ ಕೊರತೆಯ ವಿನಿಮಯವಿಲ್ಲ. ಪಾಕಿಸ್ತಾನವು ವಿಸ್ತೃತವಾದ ಬಂದ ಬಳಿಕ, ಆ್ಯಂಟಿಮನಿಯ ಅದುರುಗಳಿದ್ದ ಚಿತ್ರಾಲ್ ಸಂಸ್ಥಾನವು ಭಾರತದ ಪಾಲಿಗೆ ಇಲ್ಲದಾಯಿತು. ನಮಗೆ ಪ್ರತಿ ವರ್ಷ ಬೇಕಾಗುವ ೬೦೦ ಟನ್ನು ಗಳಷ್ಟು ಆ್ಯಂಟಿಮನಿಯನ್ನು ಈಗ ಬರ್ಮಾ, ದಕ್ಷಿಣ ಆಫ್ರಿಕ ಮುಂತಾದೆಡೆಗಳಿಂದ ತರಿಸುತ್ತಿದ್ದೇವೆ. ಇದರಂತೆ ನಿಕ್ಕಲು ಲೋಹದ ಮಟ್ಟಿಗೂ ನಾವು ಸರಬರಲಂಬಿಗಳಾಗಿದ್ದೇವೆ. ನೀರಿಯ ನೇರ ಪಾಕದಲ್ಲಿ ಲೈಕ್ಯವರ್ಗದ ನಿಕ್ಕಲ್ ಅದುರುಗಳು ಇವೆ ಇಲ್ಲಿಂದಲೂ ಬರ್ಮಾದಿಂದಲೂ ನಾವು ಸುಮಾರು ೩೦೦೦ ಟನ್ನು ಗಳಷ್ಟು ನಿಕ್ಕಲನ್ನು ತರಿಸಿಕೊಂಡು ನಾಣ್ಯ ಮತ್ತಿತರ ವಸ್ತುಗಳ ತಯಾರಿಕೆಯಲ್ಲಿ ಬಳಸುತ್ತಿದ್ದೇವೆ.

ಮೇಲಿನ ಅಂಶಗಳನ್ನೆಲ್ಲ ಪರಿಶೀಲಿಸಿದರೆ ಸರಕಾರದವರು ರಾಷ್ಟ್ರೀಯ ಅಭಿವೃದ್ಧಿ ಯೋಜನೆಗಳಿಗೆ ಹೆಚ್ಚಿನ ಸಹಾಯ ನೀಡಲು ಎಷ್ಟು ತತ್ಪರತೆಯಿಂದ ಗಣಿ ಹಾಗು ಲೋಹ ಸಂಶೋಧನ ಕಾರ್ಯಗಳನ್ನು ಅಭಿವೃದ್ಧಿಗೊಳಿಸಬೇಕಾಗಿದೆಯೆಂದೂ, ಮನವರಿಕೆ ಆಗಾದಿರದು. ಆಧುನಿಕ ವೈಜ್ಞಾನಿಕ ವಿಧಾನಗಳು ಅನುಸರಿಸಿ ಅದುರುಗಳನ್ನು ಉದ್ಧಗೊಳಿಸುವುದು, ಹೊಸ ಲೋಹ ಸಂಗ್ರಹಗಳನ್ನು ಹುಡುಕುವುದು, ಗಣಿಗಳನ್ನು ವಿಸ್ತರಿಸುವುದು. ಉತ್ಪಾದನಾ ನೆಚ್ಚಿನನ್ನು ಕಡಿಮೆ ಮಾಡುವಂಥ ಮುಂತಾದ ವಿಷಯಗಳಲ್ಲಿ ಯೋಗ್ಯ ಸಹಾಯವನ್ನು ಮಾಡುವುದು ಅಪೇಕ್ಷಣೀಯ. ನಮ್ಮಲ್ಲಿ ಸಿಗದಿರುವ ಅದುರುಗಳನ್ನು ಬೇಕಾದಷ್ಟು ತರಿಸುವಂತೆ ಅನುಕೂಲತೆ ಒದಗಿಸುವುದೊಂದಿಗೆ, ನಮ್ಮಲ್ಲಿಯ ಲೋಹ ಕೈಗಾರಿಕೆಗಳು ಹೊರಗಿನವರ ಸ್ಪರ್ಧೆಯಿಂದ ತತ್ತರಿಸದಂತೆ ತಕ್ಕ ರಕ್ಷಣೆಯನ್ನು ಕೊಡುವುದೂ ಇಷ್ಟವೆನಿಸುತ್ತದೆ.

(ಉತ್ತಮ ಸಾರಸ್ವತ ಬ್ರಾಹ್ಮಣರ ಅಡಿಗೆ, ರುಚಿ ರುಚಿಯಾದ ವೈಸ್‌ಪ್ಲೇಟ್)

ರುಚಿಕರವಾದ ಊಟ— ಹವೇಶೀರ್ (Airy) ವಸತಿ,

ಎರಡು ಊಟ, ಕೋಟ್ (Cot) ಇತ್ಯಾದಿ ಸೌಕರ್ಯ.

ತಿಂಗಳೊಂದರ ರೂ. 52/- ಮಾತ್ರ.

ವಿಶೇಷ ಮಾಹಿತಿಗೆ ಪ್ರತ್ಯಕ್ಷ ವಿಚಾರಿಸಿರಿ.

ಸದ್ಗುರು ಬೋರ್ಡಿಂಗ್ ಎಂಡ್ ಲೋಜಿಂಗ್

ಹಿಂದೂಮಹಾ ಸಿನೇಮದ ಸಮೀಪ, ಪಾದರ್, ಮುಂಬಯಿ ೧೪.

ವ್ಯವಸ್ಥಾಪಕ: ವಿ. ಯಸ್. ಪ್ರಭು.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಎಳು ದಿವ್ಸ ಸೇವಿಸಿದರೆ ಮುಂದೆ ಐಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೪-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ಡಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

!! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !!

"ರಿಕರಿಂಗ್" ಠೇವಣಾತಿ.

ಒರೇ ರೂಪಾಯಿ ಒಂದು ಅಧವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ನೇಕಡಾ 4½%.

ಬಡವ ಬಲ್ಲಿದನೆಂಬ ಭೇದವಿಲ್ಲದ ಪ್ರತಿಯೊಬ್ಬರಿಗೂ ಅನುಕೂಲವಾದ ಯೋಜನೆ.

ನಿಮ್ಮ ಸವಿನಿಮಿತ್ತ ಕಾಪಿಯನ್ನು ಇಂದೇ ಲಿಪ್ಯ ತೆಯಿಂದ.

ದಿ ವಿಜಯ ಬೇಂಕ್ ಲಿಮಿಟೆಡ್.

ಸ್ವೀಕಾರ—ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವ ಪಸು ಎರಡೆರೆಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. —ಸಂ. ನ.)

ರಾಜ್ಯಾಂಗ ತತ್ತ್ವಗಳು—

ಬರೆದವರು: ಡಿ. ವಿ. ಜಿ. ಪ್ರಕಾರಕರು: ಕಾವ್ಯಾಲಯ, ಮೈಸೂರು. ಬೆಲೆ: ಒಂದು ರೂಪಾಯಿ.

ಪ್ರಜಾ ಬೋಧೆಯ ಸತ್ಕಾರ್ಯಕ್ಕೆ ಸಹಕಾರಿಯಾಗುವ ವಿದ್ಯಾ ಪ್ರಸಾರ ಪುಸ್ತಕಗಳನ್ನು ಸುಲಭ ಬೆಲೆಗೆ ಜೊರಕುವಂತೆ ಮಾಡುತ್ತಿರುವ ಕಾವ್ಯಾಲಯದವರಿಂದ ಕನ್ನಡ ಸಾಹಿತ್ಯಕ್ಕೆ ಅನರ್ಘ್ಯ ಕಾಣಿಕೆಯ ರೂಪದಲ್ಲಿ ಶ್ರೀ. ಗುಂದಪ್ಪನವರ "ರಾಜ್ಯಾಂಗ ತತ್ತ್ವಗಳು" ಎಂಬ ಶಾಸ್ತ್ರೀಯ ಗ್ರಂಥ ಪ್ರಕಟಿಸಲ್ಪಟ್ಟಿರುತ್ತದೆ. ಉತ್ತಮ ಕಾವ್ಯಗಳನ್ನೂ ಪ್ರಬಂಧಗಳನ್ನೂ ವೈಜ್ಞಾನಿಕ ಮಹತ್ತದ "ರಾಜ್ಯ ಶಾಸ್ತ್ರ" ಮುಂತಾದ ಗ್ರಂಥಗಳನ್ನೂ ಬರೆದಿರುವ ಶ್ರೀ. ಗುಂದಪ್ಪನವರು ಅಧಿಕಾರ ಪೂರ್ಣ ವಾಣಿಯಿಂದಲೂ ತಮಗೆ ವಿಶಿಷ್ಟವಾದ ಬೈದಿಸ್ಯ ಪ್ರಭಾನ ದಿಂದಲೂ ಭಾವತೀಯರ ಸಂವಾತನ ಶಾಸ್ತ್ರ ಗ್ರಂಥಗಳ ಅಭಿಪ್ರಾಯವನ್ನು ಪಾಶ್ಚಾತ್ಯರ ಆಧುನಿಕ ಸಿದ್ಧಾಂತ ಪ್ರಣಾಳಿಯೊಂದಿಗೆ ತುಲನೆ ಮಾಡಿ, ರಾಜ್ಯಾಂಗ ಸೂತ್ರಗಳ ಕೂಲಂಕಷವಾದ ಜ್ಞಾನವನ್ನು ಜೊಕ್ಕ ರೀತಿಯಲ್ಲಿ ಮಾಡಿಸಿ ಕೊಡಲು ಸಮರ್ಥರಾಗಿದ್ದಾರೆ. ಇಂದಿನ ಪ್ರಜಾ ಯುಗದಲ್ಲಿ ರಾಜ್ಯದ ವಿಜಕ್ಷಣತೆಯು ಪ್ರಜಾ ಮಂಡಳಿಯ ಸತ್ಪಗುಣಾಧಿಕ್ಯವನ್ನೂ ನ್ಯಾಯ ಶ್ರದ್ಧೆಯನ್ನೂ ಕರ್ತವ್ಯಜ್ಞಾನವನ್ನೂ ಜೊಂದಿಕೊಂಡಿರುವುದರಿಂದ ಸಂಕೀರ್ಣವಾದ ರಾಜಕೀಯ ವಿಚಾರಗಳನ್ನು ಸುಲಭವೂ ಸರಳವೂ ಆಕರ್ಷಕವೂ ಮನೋರಂಜಕವೂ ಶಾಸ್ತ್ರ ಸಮ್ಮತವೂ ಸಯುಕ್ತಿಕವೂ ಆದ ರೀತಿಯಲ್ಲಿ ಬೋಧಿಸುವ ಈ ಗ್ರಂಥಕ್ಕೆ ಹೆಚ್ಚಿನ ಮಹತ್ವವೂ ಸ್ಥಾನವೂ ಸಲ್ಲುತ್ತವೆ. "ಜನರ ಹಾಬ್ಯಕ್ಕೆ ಧರ್ಮವೇ ಸೂಲ; ಧರ್ಮಕ್ಕೆ ಅರ್ಥವೇ ಮೂಲ; ಅರ್ಥಕ್ಕೆ ರಾಜ್ಯ ವ್ಯವಸ್ಥೆಯೇ ಸೂಲ" ಎಂಬುದಾಗಿ ಜ್ಞಾಣಕ್ಯನು ಸಾರುವುದಕ್ಕೆ ಮುಂಚೆಯೇ ನಮ್ಮಲ್ಲಿ ರಾಜ್ಯ ಶಾಸ್ತ್ರವು ರಾಜ ನೀತಿ ಎಂಬ ಹೆಸರಿನಿಂದ ಧರ್ಮ ನಿಯಮಗಳಿಗನುಸಾರ ವಿಕಾಸನವನ್ನು ಹೊಂದಿದ್ದಿತು. ಪ್ರಜೆಯೇ ಸರ್ವಾಂಗ ಸ್ವಾಮಿಯಾಗಿರುವ ಈ ಕಾಲದಲ್ಲಿಯಂತೂ ನಾಗರಿಕರಿಗೆ ರಾಜ ನೀತಿಯ ತಿಳಿವಳಿಕೆಯು ಅತ್ಯಗತ್ಯವೆಂದು ಭಾವಿಸಲಾಗುತ್ತದೆ. ಪ್ರಸ್ತುತ ಪುಸ್ತಕದ ೧೫ ಪ್ರಕರಣಗಳಲ್ಲಿ ವಿಷಯದ ವಿಶ್ಲೇಷಣೆಯೊಂದಿಗೆ ಸಾಧಾರಣ ಮಟ್ಟದ ಸಂಸ್ಕೃತ ಪದಗಳನ್ನು ಬಳಸಿರುವುದರಿಂದ ಸಾಮಾನ್ಯ ಓದುಗರಿಗೂ ಸಹ ಇದು ಸುಲಭ ಗ್ರಾಹ್ಯವಾಗಿದೆ. ಪ್ರಜಾ ಪ್ರಭುತ್ವದ ಸಂಸ್ಥಾಪಕರಾದ ಅಮೆರಿಕದ ಜಾರ್ಜ್ ವಾಷಿಂಗ್ಟನ್ ಮತ್ತು ಅಬ್ರಹಾಂ ಲಿಂಕನ್ ಇವರ ಜೀವನ ಚರಿತ್ರೆಯನ್ನು ಸಂಕ್ಷಿಪ್ತವಾಗಿ ಕೊಟ್ಟಿರುವುದು ಸಹ ಸಮಯೋಚಿತವಾಗಿದೆ. ಪ್ರಜಾ ಪ್ರಭುತ್ವದ ಸಂಸ್ಥಾಪಕರಾದ ಅಮೆರಿಕದ ಜಾರ್ಜ್ ವಾಷಿಂಗ್ಟನ್ ಮತ್ತು ಅಬ್ರಹಾಂ ಲಿಂಕನ್ ಇವರ ಜೀವನ ಚರಿತ್ರೆಯನ್ನು ಸಂಕ್ಷಿಪ್ತವಾಗಿ ಕೊಟ್ಟಿರುವುದು ಸಹ ಸಮಯೋಚಿತವಾಗಿದೆ. ಪ್ರಥಮ ಮತ್ತು ಪ್ರಕರಣಗಳಲ್ಲಿ ರಾಜ್ಯ ವ್ಯವಸ್ಥೆಯ ಆರ್ಥಶಾಸ್ತ್ರ ಜ್ಞಾನದ ಅವಶ್ಯಕತೆಯನ್ನೂ ಆದರ ಲಾಭಗಳನ್ನೂ ನಿರೂಪಿಸಿದ್ದಾರೆ. ಮುಂದಿನ ನಾಲ್ಕು ಪ್ರಕರಣಗಳಲ್ಲಿ ರಾಜ್ಯದ ಲಕ್ಷಣಗಳನ್ನೂ ವಿವಿಧಾಂಗಗಳನ್ನೂ ಪ್ರಸ್ತಾಪಿಸಿ ರಾಜ್ಯ ಶಕ್ತಿಯ ಮೂಲವು ಧರ್ಮವೆಂದೂ ಧರ್ಮವು ಸರ್ವಾಭಿಪ್ರಾಯ ತವಾಸುದೆಂದೂ ಸಾರುತ್ತಾರೆ. ಸರ್ವಾಭಿಪ್ರಾಯವು ಪ್ರಜೆಗಳ ಒಕ್ಕೂಟವೆಂಬುದನ್ನು ನೆನೆದರೆ ರಾಜ್ಯವು ಮಹಾ ವೃಕ್ಷವಾಗುತ್ತದೆ. "ಪ್ರಜೆ ಆದರ ಸಾವಿರ ಬೇರುಗಳು. ಈ ಬೇರುಗಳಲ್ಲಿಯ ಜೀವರಸವೇ ಸ್ವಾಮ್ಯ ಶಕ್ತಿ. ಆ ಸ್ವಾಮ್ಯ ರಸವು ಆ ಮರದ ಮುಂಡದಲ್ಲಿ ಹರಿಯುತ್ತಿರುವಾಗ ಅದಂ ಬಿಳವಣಿಗೆ. ಆ ಮುಂಡವೇ ರಾಜ. ಆದರೆ ನಾಲ್ಕಾರು ಕೊಂಬೆ ರೆಂಬೆಗಳೇ ನಾನಾ ಸುಂಶ್ರಿ ಆಧಿಕಾರಿಗಳು. ಅವುಗಳ ಮೇಲಣ ಹೂವು ಹಣ್ಣುಗಳೇ ಜನಜೀವನವ ಜಾಗ್ಯ." ಹೀಗೆ ವಿವರಿಸಿದ ಬಳಿಕ ಬರುವ ಎಂಟನೆಯ ಪ್ರಕರಣವು ರಾಜ್ಯ ವ್ಯವಸ್ಥೆಯ ನಾಲ್ಕು ಪ್ರಕಾರಗಳನ್ನು ನಿರೂಪಿಸುತ್ತದೆ. ರಾಜನ ನಿರಂಕುಶ ಆಡಳಿತ, ಭೃತ್ಯಾಧಿಕಾರ ವ್ಯವಸ್ಥೆ ಸುತ್ತು ಪ್ರಜಾ ಪ್ರಭುತ್ವಕ್ಕೆ ಪಕ್ಷ ತಿಗಳಿಗಿಂತಲೂ ಪ್ರಜಾವಿಹಿತ ಸರಾಜಕ ಸಂಸ್ಥೆಯೇ ಯೋಗ್ಯವಾದುದೆಂಬ ಅಂಶವಿಲ್ಲಿ ಪ್ರದಿಪಾದಿಸಲ್ಪಟ್ಟಿರುವುದು. ಮುಂದೆ ರಾಜ್ಯ ಯಂತ್ರದ ಮೂರು ವಿಭಾಗಗಳಾದ ಶಾಸನಾಂಗ, ಕಾರ್ಯ ನಿರ್ವಾಹಕಾಂಗ ಸುತ್ತು ನ್ಯಾಯಾಂಗಗಳ ವೈಶಿಷ್ಟ್ಯಗಳನ್ನು ವಿವರಿಸುವ ಪ್ರಕರಣಗಳು ಬರುತ್ತವೆ. ಪೂರ್ವೋಕ್ತ ಕರಣ ತ್ರಯಗಳೊಡನೆ ನಿಕಟ ಸಂಬಂಧವನ್ನು ಹೊಂದಿದ್ದರೂ ರಾಜನು ತಟಸ್ಥನೂ ಸಾಕ್ಷೀ ಭೂತನೂ ಏಕಾಗುವನೆಂಬುದನ್ನೂ ಆವನ ಕರ್ತವ್ಯಗಳೇನೆಂಬುದನ್ನೂ ಹನ್ನೆರಡನೆಯ ಪ್ರಕರಣ ಹೇಳುತ್ತದೆ. ಈಗ ಭಾರತವು ರಾಜನಿಲ್ಲದ ರಾಜ್ಯವಾಗಿದ್ದರೂ ನಮ್ಮ ರಾಜ್ಯಾಂಗ ನಿಬಂಧನೆಯ ಪ್ರಕಾರ ರಾಷ್ಟ್ರಾಧ್ಯಕ್ಷನ ಸ್ಥಾನಮಾನಗಳೂ ಕರ್ತವ್ಯಗಳೂ ಹಿಂದಿನ ರಾಜನಹೊಣೆಗಾರಿಕೆಯನ್ನೆ ಹೋಲುತ್ತಿವೆಯೆಂದು ಮುಂದಿನ ಪ್ರಕರಣ ಮನಗಾಣಿಸುತ್ತದೆ. ಕೊನೆಯ ಎರಡು ಪ್ರಕರಣಗಳುಮಹತ್ವದ ಕೆಲವು ವಿಚಾರಗಳನ್ನು ಹೊರಗೆಡವುತ್ತವೆ. ಪ್ರಜಾಸತ್ತೆಯಲ್ಲಿ ಪ್ರಜೆಗಳಿಗೆ ಹಕ್ಕುಂಟು; ಆದರೆ ಅವರಲ್ಲಿ ಆರ್ಜತೆ ಇರಬೇಡವೆ? ಎಂಬ ಮೂಲಭೂತ ಅಂಶವನ್ನು ಲೇಖಕರು ನಾರ್ಮಿಕವಾಗಿ ವಿವೇಚಿಸಿದ್ದಾರೆ. ಪ್ರಜೆಗಳ ಅಶಿಕ್ಷಿಯೇ ಪ್ರಜಾ ರಾಜ್ಯದ ಪ್ರಥಮ ಶತ್ರುವೆಂದು ಅವರು ಹೇಳುತ್ತಾರೆ. ಪ್ರಜಾರಾಜ್ಯದಲ್ಲಿ ನಾನಾ ಅವಾಯಗಳವೆ ಎಂಬುದನ್ನೂ ಅವರು ಜ್ಞಾಪಿಸುತ್ತಾರೆ. ರಾಜಕೀಯ ಪಕ್ಷಗಳ ಪ್ರಭಾವದಿಂದ ಹೊರಗುಳಿದ, ಅಧಿಕಾರಕಾಂಕ್ಷಿಯಿಲ್ಲದ, ರಾಷ್ಟ್ರಕ ವರ್ಗವು ಹೆಚ್ಚಾಗಬೇಕೆಂದು ಅವರು ಒತ್ತಿ ಹೇಳುತ್ತಾರೆ. ನಮ್ಮ ರಾಜ್ಯ ಚೆನ್ನಾಗಿಲ್ಲವೆಂದರೆ ರಾಷ್ಟ್ರಕರ ಯೋಗ್ಯತೆ ತಕ್ಕಷ್ಟು ಇಲ್ಲವೆಂದೇ ಅರ್ಥ —ಇದು ಲೇಖಕರ ಖಚಿತ ಅಭಿಪ್ರಾಯ. ಈ ಮಾತನ್ನು ಲಕ್ಷಿಸಿದರೆ, ಪ್ರಸ್ತುತ ಪುಸ್ತಕದಂತೆ ಅರ್ಥಾರ್ಥ ಜ್ಞಾನದ ಅವಶ್ಯಕತೆಯನ್ನೂ ಆದರ ಲಾಭಗಳನ್ನೂ ನಿರೂಪಿಸಿದ್ದಾರೆ. ಮುಂದಿನ ನಾಲ್ಕು ಪ್ರಕರಣಗಳಲ್ಲಿ ರಾಜ್ಯದ ಲಕ್ಷಣಗಳನ್ನೂ ವಿವಿಧಾಂಗಗಳನ್ನೂ ಪ್ರಸ್ತಾಪಿಸಿ ರಾಜ್ಯ ಶಕ್ತಿಯ ಮೂಲವು ಧರ್ಮವೆಂದೂ ಧರ್ಮವು ಸರ್ವಾಭಿಪ್ರಾಯ ತವಾಸುದೆಂದೂ ಸಾರುತ್ತಾರೆ. ಸರ್ವಾಭಿಪ್ರಾಯವು ಪ್ರಜೆಗಳ ಒಕ್ಕೂಟವೆಂಬುದನ್ನು ನೆನೆದರೆ ರಾಜ್ಯವು ಮಹಾ ವೃಕ್ಷವಾಗುತ್ತದೆ. "ಪ್ರಜೆ ಆದರ ಸಾವಿರ ಬೇರುಗಳು. ಈ ಬೇರುಗಳಲ್ಲಿಯ ಜೀವರಸವೇ ಸ್ವಾಮ್ಯ ಶಕ್ತಿ. ಆ ಸ್ವಾಮ್ಯ ರಸವು ಆ ಮರದ ಮುಂಡದಲ್ಲಿ ಹರಿಯುತ್ತಿರುವಾಗ ಅದಂ ಬಿಳವಣಿಗೆ. ಆ ಮುಂಡವೇ ರಾಜ. ಆದರೆ ನಾಲ್ಕಾರು ಕೊಂಬೆ ರೆಂಬೆಗಳೇ ನಾನಾ ಸುಂಶ್ರಿ ಆಧಿಕಾರಿಗಳು. ಅವುಗಳ ಮೇಲಣ ಹೂವು ಹಣ್ಣುಗಳೇ ಜನಜೀವನವ ಜಾಗ್ಯ." ಹೀಗೆ ವಿವರಿಸಿದ ಬಳಿಕ ಬರುವ ಎಂಟನೆಯ ಪ್ರಕರಣವು ರಾಜ್ಯ ವ್ಯವಸ್ಥೆಯ ನಾಲ್ಕು ಪ್ರಕಾರಗಳನ್ನು ನಿರೂಪಿಸುತ್ತದೆ. ರಾಜನ ನಿರಂಕುಶ ಆಡಳಿತ, ಭೃತ್ಯಾಧಿಕಾರ ವ್ಯವಸ್ಥೆ ಸುತ್ತು ಪ್ರಜಾ ಪ್ರಭುತ್ವಕ್ಕೆ ಪಕ್ಷ ತಿಗಳಿಗಿಂತಲೂ ಪ್ರಜಾವಿಹಿತ ಸರಾಜಕ ಸಂಸ್ಥೆಯೇ ಯೋಗ್ಯವಾದುದೆಂಬ ಅಂಶವಿಲ್ಲಿ ಪ್ರದಿಪಾದಿಸಲ್ಪಟ್ಟಿರುವುದು. ಮುಂದೆ ರಾಜ್ಯ ಯಂತ್ರದ ಮೂರು ವಿಭಾಗಗಳಾದ ಶಾಸನಾಂಗ, ಕಾರ್ಯ ನಿರ್ವಾಹಕಾಂಗ ಸುತ್ತು ನ್ಯಾಯಾಂಗಗಳ ವೈಶಿಷ್ಟ್ಯಗಳನ್ನು ವಿವರಿಸುವ ಪ್ರಕರಣಗಳು ಬರುತ್ತವೆ. ಪೂರ್ವೋಕ್ತ ಕರಣ ತ್ರಯಗಳೊಡನೆ ನಿಕಟ ಸಂಬಂಧವನ್ನು ಹೊಂದಿದ್ದರೂ ರಾಜನು ತಟಸ್ಥನೂ ಸಾಕ್ಷೀ ಭೂತನೂ ಏಕಾಗುವನೆಂಬುದನ್ನೂ ಆವನ ಕರ್ತವ್ಯಗಳೇನೆಂಬುದನ್ನೂ ಹನ್ನೆರಡನೆಯ ಪ್ರಕರಣ ಹೇಳುತ್ತದೆ. ಈಗ ಭಾರತವು ರಾಜನಿಲ್ಲದ ರಾಜ್ಯವಾಗಿದ್ದರೂ ನಮ್ಮ ರಾಜ್ಯಾಂಗ ನಿಬಂಧನೆಯ ಪ್ರಕಾರ ರಾಷ್ಟ್ರಾಧ್ಯಕ್ಷನ ಸ್ಥಾನಮಾನಗಳೂ ಕರ್ತವ್ಯಗಳೂ ಹಿಂದಿನ ರಾಜನಹೊಣೆಗಾರಿಕೆಯನ್ನೆ ಹೋಲುತ್ತಿವೆಯೆಂದು ಮುಂದಿನ ಪ್ರಕರಣ ಮನಗಾಣಿಸುತ್ತದೆ. ಕೊನೆಯ ಎರಡು ಪ್ರಕರಣಗಳುಮಹತ್ವದ ಕೆಲವು ವಿಚಾರಗಳನ್ನು ಹೊರಗೆಡವುತ್ತವೆ. ಪ್ರಜಾಸತ್ತೆಯಲ್ಲಿ ಪ್ರಜೆಗಳಿಗೆ ಹಕ್ಕುಂಟು; ಆದರೆ ಅವರಲ್ಲಿ ಆರ್ಜತೆ ಇರಬೇಡವೆ? ಎಂಬ ಮೂಲಭೂತ ಅಂಶವನ್ನು ಲೇಖಕರು ನಾರ್ಮಿಕವಾಗಿ ವಿವೇಚಿಸಿದ್ದಾರೆ. ಪ್ರಜೆಗಳ ಅಶಿಕ್ಷಿಯೇ ಪ್ರಜಾ ರಾಜ್ಯದ ಪ್ರಥಮ ಶತ್ರುವೆಂದು ಅವರು ಹೇಳುತ್ತಾರೆ. ಪ್ರಜಾರಾಜ್ಯದಲ್ಲಿ ನಾನಾ ಅವಾಯಗಳವೆ ಎಂಬುದನ್ನೂ ಅವರು ಜ್ಞಾಪಿಸುತ್ತಾರೆ. ರಾಜಕೀಯ ಪಕ್ಷಗಳ ಪ್ರಭಾವದಿಂದ ಹೊರಗುಳಿದ, ಅಧಿಕಾರಕಾಂಕ್ಷಿಯಿಲ್ಲದ, ರಾಷ್ಟ್ರಕ ವರ್ಗವು ಹೆಚ್ಚಾಗಬೇಕೆಂದು ಅವರು ಒತ್ತಿ ಹೇಳುತ್ತಾರೆ. ನಮ್ಮ ರಾಜ್ಯ ಚೆನ್ನಾಗಿಲ್ಲವೆಂದರೆ ರಾಷ್ಟ್ರಕರ ಯೋಗ್ಯತೆ ತಕ್ಕಷ್ಟು ಇಲ್ಲವೆಂದೇ ಅರ್ಥ —ಇದು ಲೇಖಕರ ಖಚಿತ ಅಭಿಪ್ರಾಯ. ಈ ಮಾತನ್ನು ಲಕ್ಷಿಸಿದರೆ, ಪ್ರಸ್ತುತ ಪುಸ್ತಕದಂ

ನವಯುಗ ವಾರಪತ್ರಿಕೆಯು

ಸ್ವೀಕೃತವಾಗಿರುವ ಉತ್ತಮ

ಪುಸ್ತಕಗಳು ಮಾರಾಟಕ್ಕಿವೆ

ನವಭಾರತ ಪುಸ್ತಕ ಭಂಡಾರ, ಉಡುಪಿ

ಈ ಕೆಳಗಿನ ಆಕರ್ಷಣೆಗಳಿಂದ ಪುಸ್ತಕಗಳು ದೊರಕುತ್ತವೆ

ರೂ. 1೦೦ ರ ಮೇಲಿನ ಬೆಲೆಯ ಪುಸ್ತಕಗಳಿಗೆ ೧೫ ಪರ್ಸೆಂಟ್

ರೂ. 10 .. ರೂ. 25 ಗೆ ೧೨½ ಪರ್ಸೆಂಟ್

ರೂ 25 .. ರೂ. 50 ಗೆ ೧೦ ಪರ್ಸೆಂಟ್

ರೂ. 50 .. ರೂ. 100 ಗೆ ೭½ ಪರ್ಸೆಂಟ್

ಮೇಲ್ಪಟ್ಟ ಬೆಲೆಯ ಪುಸ್ತಕಗಳಿಗೆ ೫ ಪರ್ಸೆಂಟ್

ರೂ 100 .. ಮೇಲ್ಪಟ್ಟ ಬೆಲೆಯ ಪುಸ್ತಕಗಳಿಗೆ ೫ ಪರ್ಸೆಂಟ್

ಪುಸ್ತಕ ಪ್ರಿಯರಿಗೆ ಸುವರ್ಣಾವಕಾಶ

ಕೆಲವೇ ಪ್ರತಿಗಳು ಮಾತ್ರ ಲಭ್ಯ ಬೇಗ ಬನ್ನಿರಿ

ನವಭಾರತ ಪುಸ್ತಕ ಭಂಡಾರ ಉಡುಪಿ

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿ

ಮತದಾರರಲ್ಲಿ ಕಾಂಗ್ರೆಸ್ ಪಕ್ಷದ ಆಭಾರ ಸೂಚನೆ

ಇದೇ ಕಳೆದ ದ. ಕ. ಜಿಲ್ಲಾ ಬೋರ್ಡ್ ಚುನಾವಣೆಯಲ್ಲಿ ಭಾಗ ವಹಿಸಿದ ಕಾಂಗ್ರೆಸ್ ಪಕ್ಷಕ್ಕೆ, ಜನತೆಯು ಕಾಂಗ್ರೆಸ್ಸಿನ ಮೇಲಿನ ವಿಶ್ವಾಸವನ್ನು ಸೂಚಿಸಿ, ಕಾಂಗ್ರೆಸ್ ರಾಷ್ಟ್ರದ ಏಳಿಗೆಗಾಗಿಯೂ, ಜನಹಿತಕ್ಕಾಗಿಯೂ, ಮಾಡುತ್ತಿರುವ ಅನೇಕ ಮಹತ್ಕಾರ್ಯಗಳನ್ನು ಮನಗಂಡು ನಮ್ಮ ಜಿಲ್ಲೆಗೆ ಕಾಂಗ್ರೆಸ್ ಆಡಳಿತ ಯಿಂದ ದೊರಕಿದ ಪ್ರಯೋಜನಗಳಿಗೆ ಮೆಚ್ಚಿ, ನಿಸ್ಸಾರವಾದ ಟೀಕೆಗಳಿಗೆ ಬಲಿ ಬೀಳದೆ ಕಾಂಗ್ರೆಸ್ಸಿಗನೇ ತಮ್ಮ ಮತದಾನವನ್ನು ಕೊಟ್ಟು ಕಾಂಗ್ರೆಸ್ಸು ಸ್ಫರ್ಧಿಸಿ ಹೆಚ್ಚಿನ ಕ್ಷೇತ್ರಗಳಲ್ಲಿ ಪ್ರಚಂಡ ವಿಜಯವನ್ನು ಕೊಟ್ಟುದಕ್ಕೆ ನಾವು ತುಂಬಾ ಆಭಾರಿಯಾಗಿದ್ದೇವೆ.

ಅದೇ ರೀತಿ ಕಾಂಗ್ರೆಸ್ಸಿಗೆ ಮತದಾನ ಮಾಡಿದ ಎಲ್ಲಾ ಜನರಿಗೂ, ರಾಷ್ಟ್ರದ ಮೇಲಿನ ಪ್ರೀತಿಯಿಂದ ಕಾಂಗ್ರೆಸ್ಸಿಗಾಗಿ ನಿಡೆದಿಡದೆ ಈ ಚುನಾವಣೆಯಲ್ಲಿ ಕೆಲಸ ಮಾಡಿದ, ಕಾಂಗ್ರೆಸ್ಸನ್ನು ಯಶಸ್ವಿಯಾಗಿ ಮಾಡಿದ ಕಾಂಗ್ರೆಸ್ ಕೆಲಸ ಸ್ವಯಂ ಸೇವಕರಿಗೂ, ಎಲ್ಲಾ ಕ್ಷೇತ್ರಗಳಲ್ಲಿ ಚುನಾವಣೆಗೆ ನಿಂತ ಕಾಂಗ್ರೆಸ್ ಹುರಿಯಾಳುಗಳಿಗೂ, ಸ್ಮರ್ತ್ಸಾರ್ಹವಾಗಿ ಧನ್ಯವಾದಗಳನ್ನರ್ಪಿಸುತ್ತೇವೆ. ಇದೇ ರೀತಿಯಲ್ಲಿ ಶ್ರದ್ಧೆ, ಪ್ರೀತಿ, ಉತ್ಸಾಹಗಳನ್ನು ಜನರ ಹಿತ ದೃಷ್ಟಿಯಿಂದ ಆಗತಕ್ಕ ಯಾವತ್ತೂ ಕಾರ್ಯಗಳಲ್ಲಿ ಮುಂದಕ್ಕೆ ಇಡಬಕ್ಕಿಂತಲೂ ಹೆಚ್ಚಾಗಿ ತೋರಿಸಿ, ನಮ್ಮ ಹಿರಿಯ ಮತ್ತು ಪ್ರಮುಖ ರಾಷ್ಟ್ರೀಯ ಸಂಸ್ಥೆಯನ್ನು ಇನ್ನೂ ಬಲಗೊಳಿಸಿ, ಚಿಲ್ಲಿಯ ಹಾಗೂ ದೇಶದ ಸರ್ವತೋಮುಖ ಪ್ರಗತಿಯನ್ನು ಸಾಧಿಸಲು ಸಹಭಾಗಿಗಳಾಗಬೇಕಾಗಿ ಕೋರುತ್ತೇವೆ.

(ಸಹಿ) ಯು. ಹಿ. ಮಲ್ಯ, ಅಧ್ಯಕ್ಷ.

(ಸಹಿ) ಬಿ. ಬಿ ಶೆಟ್ಟಿ, ಕಾರ್ಯದರ್ಶಿ,
ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ.

(೧ನೇ ಪುಟ ದಿಂದ)

ಗುತ್ತಿಲ್ಲವೆಂಬುದನ್ನು ಮೊದಲಾಗಿ ಪ್ರಾರಂಭದಲ್ಲಿಯೇ ಖಚಿತ ಪಡಿಸಿಕೊಳ್ಳಬೇಕು. ಇದಕ್ಕ್ಯೋಸ್ಕರ ಪ್ರತಿಯೊಬ್ಬ ಶಾಸನ ಕರ್ತನೂ ಆತ್ಮ ಸಾಕ್ಷಿಯನ್ನು ಪ್ರಶ್ನಿಸುವುದು ವಿಹಿತ. ಕಾಯಿದೆಯು ಕ್ರಮಬದ್ಧವೆಂಬ ವೃಥ ವಿಶ್ವಾಸವು ಶಾಸನ ಕರ್ತರಲ್ಲಿ ಮೂಡಿದ ಪಕ್ಷದಲ್ಲಿ, ಆ ಕಾಯಿದೆಯನ್ನು ತಿಳಿಯಾಗಿ, ಸರಳವಾದ, ನಿರ್ದಿಷ್ಟವಾದ ರೀತಿಯಲ್ಲಿ ಬರೆಯುವುದಕ್ಕೆ ಅವರು ಹೆಚ್ಚಿನ ಗಮನವನ್ನು ಕೊಡುವುದು ಅಗತ್ಯ. ಇಲ್ಲಿ ತಪ್ಪಿ ಬಿದ್ದರೆ, ಶಬ್ದಗಳ ಹಾಗು ಪರಿಚ್ಛೇದಗಳ ಅರ್ಥ ವಿವರಣೆಯಲ್ಲಿ ಗೊಂದಲವಾಗುತ್ತದೆ, ನುತ್ತು ಆಡಳಿತ ವ್ಯವಸ್ಥೆಯ ಮೇಲೆ ಅದರಿಂದ ದುಷ್ಪ ಪರಿಣಾಮವಾಗುತ್ತದೆ. ಯಾವ ಕಾಯಿದೆಯೂ ಕ್ರಮಬದ್ಧವಲ್ಲವೆಂಬ ಸಾಮಾನ್ಯ ಅಭಿಪ್ರಾಯವು ನಾಗರಿಕರಲ್ಲಿ ಮೂಡಿದರೂ ಆಶ್ಚರ್ಯವಿಲ್ಲ! ಇಂಥ ವಿಪರೀತ ಭಾವನೆಗೆ ಎಡೆ ಇರದಂತೆ ನಡೆದು ಕೊಳ್ಳಬಿದ್ದರೆ. ನಮ್ಮ ಶಾಸನ ಕರ್ತರ ಮೇಲೆ ಜನರಿಗೇನೂ ಭರವಸೆ ಉಳಿಯಲಾರದು. ಲೋಪ ದೋಷಗಳಿಂದ ತುಂಬಿದ ಕಂತೆಯಾಗಿ ಕಾಯಿದೆಗಳು ಪರಿಗಣಿಸಲ್ಪಟ್ಟು, ರಾಜ್ಯ ವ್ಯವಸ್ಥೆಯೇ ಕುಸಿದುಬೀಳುವುದು.

—ಕಾರ್ತಿಕೇಯ.

ಬ್ರಹ್ಮಾವರ ಸರ್ಕಲಿನ ಎಲ್ಲಾ ಮತದಾರರಿಗೆ ಕೃತಜ್ಞತೆ

ಇದೇ ತಾರೀಕು 17—10—'54ರಲ್ಲು ನಡೆದ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಕೊಂಗ್ರೆಸ್ ಉಮೇದ್ವಾರರಾಗಿ ನಮ್ಮಿಬ್ಬರನ್ನು ನಿಲ್ಲಿಸಿ ಪ್ರಬಲ ಬಹುಮತದಿಂದ ಆರಿಸಿ ಬರುವಂತೆ ಮಾಡಿದ ಎಲ್ಲಾ ಮತದಾರರಿಗೂ ಎಲ್ಲಾ ಕಾರ್ಯಕರ್ತರಿಗೂ ನಮ್ಮ ಹೃತ್ಪೂರ್ವಕ ವಂದನೆಗಳು. ನಾವು ನಮ್ಮಿಂದಾಗುವ ಸೇವೆಯನ್ನು ಸಲ್ಲಿಸುವೆವೆಂದು ನಮ್ಮ ಸರ್ಕಲಿನ ಮತದಾರರಿಗೆ ಈ ಮೂಲಕ ದೃಢಪಡಿಸುತ್ತೇವೆ.

Blanche N. Pinto,
A. Narayana Hegde,

Edited, Printed & Published By K. H. Shetty at the Navayuga Press, Udipi, S. India

REGD. NO.
M. 3618

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೪
VOL. 34

ಉಡುಪಿ, 11—11—1954

ಸಂಚಿಕೆ ೧೧
NO. 1

ಸಂಪಾದಕೀಯ

ಕನ್ನಡ ಒಕ್ಕೂಟದ ವಿಷಯದಲ್ಲಿ ಒಂದು ನುಡಿಯಿಲ್ಲ; ಒಂದು ಕೊರಲಿಲ್ಲ. ಕನ್ನಡ ಸಾಹಿತ್ಯ ಪರಿಷತ್ತೂ ಇತರ ಅನೇಕ ಸಂಸ್ಥೆ ಸಮ್ಮೇಳನಗಳೂ ಏಕೀಕರಣದ ಅಗತ್ಯವನ್ನು ಒತ್ತಿ ಹೇಳಿರುತ್ತವೆ, ನಿಜ. ಆದರೆ ಮೈಸೂರಿನವರನೇಕರಿಗೆ ಹೊರ ಕನ್ನಡಿಗರ ಕಷ್ಟ, ಸುಖ ತಿಳಿಯದು. ಕೆಲವರಿಗೆ ಪ್ರಕಟವಾಗಿಯೇ ಅದು ಬೇಕಿಲ್ಲ. ಅವರು ಭಾಷಾ ಪ್ರಾಂತಗಳನ್ನು ಕುಂತು ವಿರಸ್ತುಡಿಯುತ್ತ, ಸಂಶಯಗಳನ್ನು ಅತೋಪಿಸುತ್ತ ಅಲ್ಲ ಗಳೆದರೆ ಯಾಂಗೆ ಪ್ರಯೋಜನ? ಜನವನ್ನು ಸ್ನೇಹದಲ್ಲಿಡುವ ಮತ್ತು ಉಳಿಸುವ ಮಾರ್ಗ ವಂತೂ ಅದಲ್ಲ.

—ವಿ. ಸೀತಾರಾಮಯ್ಯ.

ಏಕೀಕರಣದ ಒಗಟು

ರಾಜ್ಯಗಳ ಪುನರ್ಘಟನೆಯ ಪ್ರಶ್ನೆಯನ್ನು ವಿಚಾರಿಸುತ್ತಿರುವ ಫಜಲ ಅಲಿ ಆಯೋಗಕ್ಕೆ ಮೈಸೂರು ಸರಕಾರವು ತನ್ನ ಅಭಿಪ್ರಾಯಗಳನ್ನು ತಿಳಿಸುವುದಕ್ಕೆ ಮುಂಚೆ, ಮೈಸೂರೇತರ ಕನ್ನಡ ಪ್ರದೇಶಗಳ ವಸ್ತು ಸ್ಥಿತಿಯನ್ನು ಚಿತ್ರಿಸುವ ಕೆಲವು ವಿವರಗಳನ್ನು ಸಂಗ್ರಹಿಸಬೇಕೆಂದು ಕಳೆದ ಜೂನಿನಲ್ಲಿ ಕಾಂಗ್ರೆಸ್ಸು ಪಕ್ಷದ ಸಭೆಯೊಂದರಲ್ಲಿ ತೀರ್ಮಾನಿಸಿದ್ದರು. ಇದಕ್ಕೋಸ್ಕರ ಸರಕಾರವು ಹೈದರಾಬಾದು ಮತ್ತು ಮೈಸೂರುಗಳಲ್ಲಿ ಹಿಂದೆ ಮಂತ್ರಿಗಳಾಗಿದ್ದ ಶ್ರೀ ಎಂ. ಶೇಷಾದ್ರಿಯವರ ಅಧ್ಯಕ್ಷತೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿ ಶ್ರೀ. ವಿ. ಎಲ್. ಡಿಸೋಜಾ, ನಿವೃತ್ತ ಹೈಕೋರ್ಟು ನ್ಯಾಯಾಧೀಶ ಶ್ರೀ. ಟಿ. ಸಿಂಗಾರವೇಲು ಮುದಲಿಯಾರ್, ಸಾರ್ವಜನಿಕ ಕಾರ್ಯಕರ್ತ ಶ್ರೀ. ಓ. ವೀರಬಸಪ್ಪ, ಬೆಂಗಳೂರು ಜಿಲ್ಲಾ ಬೋರ್ಡಿನ ಮಾಜಿ ಅಧ್ಯಕ್ಷ ಶ್ರೀ. ಎಚ್. ಆರ್. ಗುರುವಾರೆಡ್ಡಿ—ಇವರು ಸದಸ್ಯರಾಗಿರುವ ಸಮಿತಿಯನ್ನು ನೇಮಿಸಿದ್ದಿತು.

ಏದು ಮಂದಿಯ ಈ ಸಮಿತಿಯು ಕೊಡಗು, ಮುಂಬಯಿ, ಹೈದರಾಬಾದು ಮತ್ತು ಮದ್ರಾಸು ರಾಜ್ಯಗಳಲ್ಲಿ ಕನ್ನಡ ಭಾಷೆಯನ್ನು ಮಾತನಾಡುವ ಜನಸಂಖ್ಯೆ ಹಾಗು ಕನ್ನಡ ಪ್ರದೇಶಗಳ ವಿಸ್ತಾರ; ಆ ಪ್ರದೇಶಗಳ ಶೈಕ್ಷಣಿಕ, ವೈದ್ಯಕೀಯ, ಸಾರ್ವಜನಿಕ ಆರೋಗ್ಯ, ಗ್ರಾಮಾಭಿವೃದ್ಧಿ, ಉದ್ದಿಮೆ ವ್ಯವಹಾರ, ನೀರಾವರಿ, ವಿದ್ಯುಚ್ಛಕ್ತಿ ಮುಂತಾದ ಲೋಕೋಪಯೋಗಿ ಕೆಲಸಗಳ ಮಟ್ಟ; ನೈಸರ್ಗಿಕ ಸಂಪತ್ತಿನ ಅಂದಾಜು ಮತ್ತು ಆದಾಯ, ವೆಚ್ಚ, ಸಾಲ, ಸೊತ್ತುಗಳಿಗೆ ಸಂಬಂಧಿಸಿದ ಅಂಕೆ ಸಂಖ್ಯೆಗಳು; ಪಂಚವಾರ್ಷಿಕ ಯೋಜನೆಯನ್ವಯ ಕೈಗೂಡಿಸಿದ ಪ್ರಗತಿ; ಈ ಪ್ರದೇಶಗಳ ಆರ್ಥಿಕ ಹಾಗು ಆಡಳಿತ ಸಮಸ್ಯೆಗಳ ವಿಶ್ಲೇಷಣೆ ಮುಂತಾದ ಕರ್ತವ್ಯಗಳನ್ನು ನಿರ್ವಹಿಸಬೇಕೆಂದು ಆದೇಶವನ್ನು ನೀಡಲಾಯಿತು. ಇವೆಲ್ಲ ವಿಷಯಗಳನ್ನು ಸಂಗ್ರಹಿಸುವುದಕ್ಕೋಸ್ಕರ ಸಮಿತಿಯು ಹತ್ತು ಸಭೆಗಳನ್ನು ಜರಗಿಸಿದ್ದಲ್ಲದೆ ಹೈದರಾಬಾದಿನ ತುಂಗಭದ್ರೆ, ಕೊಪ್ಪಳ, ರಾಯಚೂರು, ಬೀದರ ಮತ್ತು ಗುಲ್ಬರ್ಗ ಗಳನ್ನೂ ಮುಂಬಯಿಯ ಬಿಜಾಪುರ, ಧಾರವಾಡ ಮತ್ತು ಬೆಳಗಾಂವಿ ಜಿಲ್ಲೆಗಳನ್ನೂ ಸಂದರ್ಶಿತು. ಇತರ ಕನ್ನಡ ಪ್ರದೇಶಗಳ ಮಾಹಿತಿಯನ್ನು ಆಯಾ ಸರಕಾರದ ಮೂಲಕ ಪಡೆಯಲಾಯಿತು.

ತನ್ನ ೧೯೧ ಪುಟಗಳನ್ನು ದೀರ್ಘವಾದ ವರದಿಯನ್ನು ಸಮಿತಿಯು ಅಕ್ಟೋಬರ ತಿಂಗಳಂದು ಸರಕಾರಕ್ಕೆ ಒಪ್ಪಿಸಿದ್ದು ಅದರ ಸಾರಾಂಶವು ನವಂಬರ ೧೯ಂದು ಪತ್ರಿಕೆಗಳಲ್ಲಿ ಪ್ರಕಟವಾಯಿತು. ಸಮಿತಿಯು ಕನ್ನಡ ಪ್ರದೇಶವೆಂದು ಹೆಸರಿಸಿದ ಭಾಗಗಳು ಹೀಗಿವೆ—(೧) ಹೈದರಾಬಾದು ರಾಜ್ಯದಲ್ಲಿ ತಾಂಡೂರು ಮತ್ತು ಕೊಡಂಗಲ ತಾಲೂಕುಗಳನ್ನು ಬಿಟ್ಟು ಉಳಿದ ಗುಲ್ಬರ್ಗ ಜಿಲ್ಲೆ, ಬೀದರ ಜಿಲ್ಲೆಯ ಅರ್ಧಾಂಶ, ಗದ್ವಾಲ ಮತ್ತು ಆಲಂಪುರ ತಾಲೂಕುಗಳನ್ನು ಬಿಟ್ಟು ಉಳಿದ ರಾಯಚೂರು ಜಿಲ್ಲೆ—ಒಟ್ಟು ಜನ ಸಂಖ್ಯೆ ೧೯,೬೧,೬೧೧; (೨) ಮುಂಬಯಿ ರಾಜ್ಯದಲ್ಲಿ ಬೆಳಗಾಂವಿ ಮತ್ತು ಚಂದಗಡ ತಾಲೂಕುಗಳನ್ನು ಬಿಟ್ಟು ಉಳಿದ ಬೆಳಗಾಂವಿ ಜಿಲ್ಲೆ, ಶೋಲಾಪುರ ಜಿಲ್ಲೆಯ ದಕ್ಷಿಣ ಶೋಲಾಪುರ ಮತ್ತು ಅಕ್ಕಲ ಕೋಟೆ ತಾಲೂಕು, ಬಿಜಾಪುರ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳು—ಒಟ್ಟು ಜನ ಸಂಖ್ಯೆ ೪೩,೫೦,೭೯೧; (೩) ಮದ್ರಾಸು ಮತ್ತು ಆಂಧ್ರ ರಾಜ್ಯಗಳಲ್ಲಿ ಕಾಸರಗೋಡು ತಾಲೂಕನ್ನು ಬಿಟ್ಟು ಉಳಿದ ದಕ್ಷಿಣ ಕನ್ನಡ ಜಿಲ್ಲೆ, ಕೊಯಮುತ್ತೂರು ಜಿಲ್ಲೆಯ ಕೊಳ್ಳೇಗಾಲ ತಾಲೂಕು, ಅನಂತಪುರ ಜಿಲ್ಲೆಯ ಮಡಕಸಿರ ತಾಲೂಕು—ಒಟ್ಟು ಜನ ಸಂಖ್ಯೆ ೨೦೬೯೭೧; ಮತ್ತು (೪) ಕೊಡಗು—ಜನ ಸಂಖ್ಯೆ ೮೦,೪೧೦.

ಮೇಲಿನ ಅಚ್ಚ ಕನ್ನಡ ಪ್ರದೇಶಗಳಲ್ಲದೆ ವಿವಾದಾಸ್ಪದವಾಗಿರುವ ಭೂ ಭಾಗಗಳೂ ಇವೆಯೆಂದು ಸಮಿತಿ ಹೇಳುತ್ತದೆ; ದಕ್ಷಿಣ ಕನ್ನಡ ಜಿಲ್ಲೆಯ ಶುಳು ಮಾತನ್ನಾಡುವ ಜನರೂ ನೀಲಗಿರಿಯ ಬಡಗರೂ ಕೊಡಗಿನಲ್ಲಿ ತುಳು ಮತ್ತು ಕೊಡಗು ಭಾಷೆ ಮಾತನಾಡುವವರೂ ಕನ್ನಡ ಪ್ರೇಮಿಗಳೆಂದು ಸಮಿತಿ ಭಾವಿಸುತ್ತದೆ. ಅದರ ಅಭಿಪ್ರಾಯದಂತೆ ಮೈಸೂರಿನ ಹೊರಗಿರುವ ಕನ್ನಡ ಪ್ರದೇಶಗಳಲ್ಲಿ ಕನ್ನಡ ಭಾಷೆ ಮಾತನಾಡುವವರ ಜನಸಂಖ್ಯೆ ಒಟ್ಟು ೯೩,೧೦,೮೭೩. ಇಷ್ಟು ಜನರಿಗೆ ಸಂಬಂಧಿಸಿದ ಪರಿಸ್ಥಿತಿಯ ವಿಶ್ಲೇಷಣೆಯನ್ನು ಮಾಡುತ್ತಾ ಸಮಿತಿ ಮುಂದಿಟ್ಟ ಸಂಗತಿಗಳಲ್ಲಿ ದಕ್ಷಿಣ ಕನ್ನಡವನ್ನು ಬಿಟ್ಟು ಉಳಿದ ಮೈಸೂರೇತರ ಪ್ರದೇಶಗಳ ಮುಂಗಡ ಪತ್ರವು ೧೦೮ ಲಕ್ಷ ರೂಪಾಯಿಗಳ ವಾರ್ಷಿಕ ಕೊರತೆಯನ್ನು ತೋರಿಸುವುದೆಂಬ ಅಂಶ ಉಲ್ಲೇಖನೀಯ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉತ್ಪನ್ನ ಮತ್ತು ನೆಚ್ಚಗಳು ಬಾಯಿಗೊಡುತ್ತವೆ.

ಮಗನಿಗೆ ಜೀವನದ ಪಾಠವನ್ನು ಕಲಿಸಿ ಕೊಡುವೆನೆಂದು ಹೇಳುತ್ತಾ ತಂದೆ "ಇಗೋ ಈಗ ಆ ಎತ್ತರದ ಪೇಜನ್ನೇರು; ಮತ್ತು ಕೆಳಗೆ ಹಾರು" ಎಂದ.

ಏದು ವರ್ಷದ ಮಗನಿಗೆ ಚಿಂತೆಯಾಯಿತು. "ಅಪ್ಪಾ, ಬಿದ್ದು ಕಾಲು ಮುರಿದರೇನು ಗತಿ?" ಎಂದು ಕೇಳಿದ "ಚಿಂತೆಬಿಡು, ನಾನು ನಿನ್ನನ್ನು ಬೀಳದಂತೆ ಹಿಡಿಯುತ್ತೇನೆ" ಎಂಬ ಸಮಾಧಾನ ಬಂತು.

ಮೇಜನ್ನೇರಿ, ಮಗ ತಂದೆಯು ಸೂಚಿಸಿದಂತೆ ಕೆಳಗೆ ಹಾರಿದ—ಆದರೆ ತಂದೆ ಆತನನ್ನು ಹಿಡಿದುಕೊಳ್ಳಲಿಲ್ಲ. ನೋವಿನಿಂದ ಚಡಪಡಿಸುತ್ತಾ ಮಗ ತಂದೆಯ ವರ್ತನೆಯನ್ನು ಆಕ್ಷೇಪಿಸಿದ. "ಮಗೂ, ಇದೇ ಮೊದಲ ನೆಯ ಪಾಠ. 'ನಾನಿದ್ದೇನೆ' ಎಂದು ಹೇಳಿದವರೇ ಹಿಂದಿನಿಂದ ನೋಡ ಮಾತುತ್ತಾರೆ. ಆವರನ್ನು ನಂಬಬೇಡ" ಎಂಬ ಉತ್ತರ ಆವನಿಗೆ ದೊರೆಯಿತು.

ಆದರೆ ಹೈದರಾಬಾದಿನ ಕನ್ನಡ ಪ್ರದೇಶಗಳಲ್ಲಿ ರಾಷ್ಟ್ರನಿರ್ಮಾಣ ಚಟುವಟಿಕೆಗಳನ್ನು ಬಹಳಷ್ಟು ಹೆಚ್ಚಿಸುವ ಅಗತ್ಯವಿರುವುದರಿಂದ, ಕೊರತೆಯು ಮುಂದಿನ ವರ್ಷಗಳಲ್ಲಿ ಏರುತ್ತಾ ಹೋದೀತೆಂದು ಸಮಿತಿ ಅಭಿಪ್ರಾಯಪಡುತ್ತದೆ.

ಆದುದರಿಂದ ಕನ್ನಡ ಪ್ರದೇಶಗಳನ್ನೆಲ್ಲ ಮೈಸೂರಿನೊಡನೆ ಸೇರಿಸಿ ಹೊಸ ರಾಜ್ಯವನ್ನು ಮಾಡುವುದಾದಲ್ಲಿ ಆ ರಾಜ್ಯಕ್ಕೆ ತನ್ನ ಭವಿಷ್ಯವನ್ನು ರೂಪಿಸಿಕೊಳ್ಳಲು ಅನುಕೂಲವಾಗುವಂತೆ ಕೇಂದ್ರ ಸರಕಾರವು ಮುಕ್ತಹಸ್ತದಿಂದ ಧನ ಸಹಾಯ ನೀಡ ಬೇಕು ಎಂದು ಸಮಿತಿ ಸೂಚಿಸುತ್ತದೆ. ಇತರ ಕನ್ನಡ ಪ್ರದೇಶಗಳಲ್ಲಿಯ ರಾಜ ಮಾರ್ಗಗಳ ಉದ್ದಳತೆಯು ಮೈಸೂರಿನದನ್ನು ಸರಿಗಟ್ಟಬೇಕಾದರೆ ೧೫೦ ಲಕ್ಷ ರೂಪಾಯಿಗಳ ವೆಚ್ಚದಿಂದ ಇನ್ನೂ ೮೩೧ ಮೈಲು ಮಾರ್ಗಗಳನ್ನು ರಚಿಸ ಬೇಕಾಗುತ್ತದೆ; ವೈದ್ಯಕೀಯ ಸೌಲಭ್ಯಗಳನ್ನು ಮೈಸೂರಿನ ಮಟ್ಟಕ್ಕೆ ತರುವುದಕ್ಕೋಸ್ಕರ ೬೭ ಲಕ್ಷ ರೂಪಾಯಿಗಳ ವೆಚ್ಚದಿಂದ ಹೊಸ ಆಸ್ಪತ್ರೆಗಳ ನಿರ್ಮಾಣ ಹಾಗು ಜಿಲ್ಲಾ ಆಸ್ಪತ್ರೆಗಳ ವಿಸ್ತರಣೆ ಮಾಡಬೇಕಾಗುತ್ತದೆ; ಪಶು ಸಂಗೋಪನೆಯ ವಿಷಯದಲ್ಲೂ ೧೪ ಲಕ್ಷ ರೂಪಾಯಿ ವೆಚ್ಚದ ಕಾರ್ಯಕ್ರಮವನ್ನು ಇಟ್ಟುಕೊಳ್ಳಬೇಕಾಗುತ್ತದೆ ಆದರೆ, ಮೈಸೂರೇತರ ಪ್ರದೇಶಗಳಲ್ಲಿರುವ ಸಂಬಳದ ಮಟ್ಟ ಮಾತ್ರ ಮೈಸೂರಿನದಕ್ಕಿಂತ ಹೆಚ್ಚಿನದೆಂದೂ ಈ ಮಟ್ಟಕ್ಕೆ ಮೈಸೂರಿನದನ್ನು ತರಲು ೬೦೩ ಲಕ್ಷ ರೂಪಾಯಿಗಳ ಅಧಿಕ ವೆಚ್ಚ ಬರುವುದೆಂದೂ ಸಮಿತಿ ತಿಳಿಸುತ್ತದೆ.

(ನಂತೇ ಪುಟ ನೋಡಿರಿ)

THE CANARA INDUSTRIAL & BANKING SYNDICATE LTD.
Estd: 1925 H. O: UDIPI, S. India

ಖರ್ಚಿಲ್ಲದೆ ಹಣ ಕಳುಹಿಸಬೇಕೆ?

ಮುಂಬಯಿಯ ನಾಗರಿಕರು ಈ ಕಡೆ ಗಮನಿಸಿರಿ.

ರತ್ನಗಿರಿ, ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಮಲಬಾರು ಜಿಲ್ಲೆಗಳ ಪ್ರಾಮುಖ್ಯ ನಗರಗಳಲ್ಲಿರುವ ತಮ್ಮ ಬಂಧು ಮಿತ್ರರಿಗೆ ಕಾಲಕಾಲಕ್ಕೆ ಹಣ ಕಳುಹಿಸುವ ಮುಂಬಯಿಯ ನಮ್ಮ "ಸೇವಿಂಗ್ಸ್ ಬ್ಯಾಂಕ್ ಜೀವನಶಾ"ದಾರರ ಅನುಕೂಲತೆಗಾಗಿ ಖರ್ಚಿಲ್ಲದೆ ಹಣ ಕಳುಹಿಸುವ ವ್ಯವಸ್ಥೆ ಮಾಡಲಾಗಿರುವುದೆಂಬುದನ್ನು ಬಲ್ಲಿರಾ? ಹಣ ಕಳುಹಿಸುವ ಕಷ್ಟನಷ್ಟಗಳನ್ನು ನಮ್ಮ ಗಿರಾಕಿಗಳಿಗೆ ತಪ್ಪಿಸಬೇಕೆಂಬುದೇ ಈ ವ್ಯವಸ್ಥೆಯ ಉದ್ದೇಶ. ಕುಟುಂಬದ ಹಾಗೂ ಸ್ವಂತ ಉಪಯೋಗಕ್ಕಾಗಿ ಮಾತ್ರ ಈ ಧರ್ಮಾರ್ಥ ಸೌಲತ್ತನ್ನು ಪಡೆಕೊಳ್ಳಬೇಕಾಗಿ ವಿನಂತಿ. ಹೆಚ್ಚಿನ ಮಾಹಿತಿಯನ್ನು ಸಮೀಪದ ನಮ್ಮ ಯಾವುದೇ ಶಾಖೆಯಿಂದ ಪಡೆದುಕೊಳ್ಳಿರಿ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್,

ಸ್ಥಾಪನೆ: ೧೯೨೫] [ಪ್ರಧಾನ ಕಚೇರಿ: ಉಡುಪಿ, ದ. ಧಾರವಾಡ.

ಜವಾಹರಲಾಲ ನೆಹರು

ನಮ್ಮ ಪ್ರಧಾನ ಮಂತ್ರಿ ಒಬ್ಬ ವ್ಯಕ್ತಿಯಲ್ಲ—ಶಕ್ತಿ



ಅರುವತ್ತೈದರ ಶ್ರೀಮುಖ

ರಾಷ್ಟ್ರಪಿತ ಮಹಾತ್ಮಾ ಗಾಂಧೀಯವರು ತಮ್ಮ ಮರಣಕ್ಕೆ ಕೆಲವು ತಿಂಗಳ ಪೂರ್ವದಲ್ಲಿ ಜವಾಹರಲಾಲ ನೆಹರುಗಳನ್ನು ಕುರಿತು ಹೀಗೆ ಹೇಳಿದ್ದರು—"ನೆಹರು ನನ್ನ ರಾಜಕೀಯ ಉತ್ತರಾಧಿಕಾರಿ: ನಾನಿನ್ನೂ ಬದುಕಿರುವಾಗ ನೆಹರು ನನ್ನ ನಡುವೆ ಭಿನ್ನವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಬಹುದು; ಆದರೆ ನನ್ನ ಬಳಿಕ, ನೆಹರುವಿನ ಬಾಯಿ ನನ್ನದೇ ಮಾತನ್ನು ಆಡುತ್ತದೆ." ಇದೇ ನವಂಬರ ೧೪ನೇ ತಾರೀಕಿಗೆ ಅರುವತ್ತೈದು ವರ್ಷ ತುಂಬುವ ನೆಹರುಗಳ ವಿಷಯದಲ್ಲಿ ಗಾಂಧೀಯವರುಎಷ್ಟು ಸ್ಪಷ್ಟವಾದ ಮತ್ತು ಸತ್ಯವಾದ ಭವಿಷ್ಯವನ್ನು ನುಡಿದಿದ್ದರೆಂದು ನಮಗೀಗ ಆಶ್ಚರ್ಯವಾಗುತ್ತದೆ!

ಪ್ರಕ್ಷುಬ್ಧ ಪರಿಸ್ಥಿತಿಯನ್ನು ಎದುರಿಸುತ್ತಿರುವ ಇಂದಿನ ಜಗತ್ತಿನ ಮುಂದೆ ಗಾಂಧೀಜಿಯವರಿರುತ್ತಿದ್ದರೆ ಯಾವ ಆದರ್ಶಗಳನ್ನು ಇಡುತ್ತಿದ್ದರೋ ಆವುಗಳನ್ನೀಗ ಜವಾಹರಲಾಲ ನೆಹರು ಮಂಡಿಸುತ್ತಿದ್ದಾರೆ: ಭಾರತದಲ್ಲಿರುವ ತೀವ್ರಗಾಮಿಗಳ ಗುಂಪೊಂದು ಗೋವೆಯ ಪ್ರಶ್ನೆಯನ್ನು ಬಲಪ್ರಯೋಗದಿಂದಲಾದರೂ ಬೇಗನೆ ಇತ್ಯರ್ಥಗೊಳಿಸಬೇಕೆಂದು ಪ್ರತಿಪಾದಿಸಿದಾಗ "ಹಿಂಸೆಯು ಮನಸ್ತಾಪ, ಕ್ಲೇಶ ಮತ್ತು ಆಂತರರಾಷ್ಟ್ರೀಯ ದ್ವೇಷಗಳನ್ನು ಹೊರತು ಬೇರೇನನ್ನೂ ತರುವುದಿಲ್ಲ" ಎಂದು ನೆಹರು ಸಮಾಧಾನವನ್ನು ಹೇಳಿದರು. ಪಂಚತತ್ವಗಳ ತಳಹದಿಯ ಮೇಲೆ ಸಹಜೀವನದ ಆದರ್ಶದ ಕಲ್ಪನೆಯನ್ನು ಬಿಂಬಿಸುತ್ತಾ "ಈ ತತ್ವಗಳಲ್ಲಿ ನಿಷ್ಠೆಯನ್ನು ಪ್ರಕಟಿಸುವುದರಿಂದ ಜಾಗತಿಕ ವಾತಾವರಣ ತುಂಬ ಉತ್ತಮವಾದೀತು. ಇಂಥ ಘೋಷಣೆಗಳಲ್ಲಿ ಪ್ರಾಮಾಣಿಕತೆ ಇಲ್ಲವೆಂದಿಟ್ಟುಕೊಂಡರೂ ಒಮ್ಮೆ ಆಡಿದ ಮಾತಿನ ಪರಿಣಾಮವು ಶಾಂತಿಯನ್ನು ನೆಲೆಗೊಳಿಸುವುದಕ್ಕೆ ಅನುಕೂಲವಾದೀತು. ಶಾಂತಿಯನ್ನು ಶಾಂತಿಯುತವಾದ ಸಾಧನೆಗಳಿಂದಲೇ ರಕ್ಷಿಸುವುದು ಸಾಧ್ಯ" ಎಂದರು.

ನೆಹರುಗಳಿಗೆ ಗಾಂಧೀಜಿಯವರ ಎಲ್ಲ ಅಭಿಪ್ರಾಯಗಳು ಒಪ್ಪಿಗೆಯಾಗಿರಲಿಲ್ಲವೆಂಬುದನ್ನು ಅಲ್ಲಗಳೆಯುವುದು ಸಾಹಸವಾದೀತು: ಆದರೆ ಗಾಂಧೀಯವರ ವ್ಯಕ್ತಿತ್ವದ ಪ್ರಭಾವವು ನೆಹರುಗಳ ಭಾವನೆಯ ಮೇಲೆ ಅಚ್ಚಳಿಯದ ಪರಿಣಾಮವನ್ನು ಮಾಡಿರುತ್ತದೆ. ಮನ ಸಲಗವನ್ನು ಪಳಗಿಸುವ ಚತುರ ಮಾವುತನ ಕೆಲಸವನ್ನು ನೆಹರುಗಳ ವಿಷಯದಲ್ಲಿ ಗಾಂಧೀಯವರು ಯಶಸ್ವಿಯಾಗಿ ನಿರ್ವಹಿಸಿದರು. ೧೯೦೯ರಲ್ಲಿ ಇಂಗ್ಲೆಂಡಿನ ವಿದ್ಯಾಭ್ಯಾಸವನ್ನು ಮುಗಿಸಿ ಭಾರತಕ್ಕೆ ಮರಳಿದ ನೆಹರುಗಳ ಮೇಲೆ ತಂದೆ ಮೋತಿಲಾಲರ ಸುಧಾರಣಾ ಮನೋಭಾವದ ಹಾಗು ಗಾಂಧೀಯವರ ಉದಾತ್ತ ಗುಣಗಳ ಗಾಢವಾದ ಪ್ರಭಾವವು ಉಂಟಾಯಿತು. ಆಳರಸರ ವಿರುದ್ಧ ಬಹಿರಂಗ ಛಿದ್ರಾಯುಧವನ್ನು ನಡೆಸಿದರೂ ತಪ್ಪಲ್ಲವೆಂದು ಉದ್ವೇಗದಿಂದ ಮಾತನಾಡುತ್ತಿದ್ದ ನೆಹರುಗಳ ಮೇಲೆ ಮಹಾತ್ಮರೇ ಕರ್ತವ್ಯದ ಭಾರವನ್ನು ಹೇರಿ, ನಿಜವಾದ ಹೋಣೆಗಾರಿಕೆಯ ಅರಿವನ್ನು ಮಾಡಿಸಿ ಕೊಟ್ಟರು.

ಸ್ವಭಾವದಿಂದ ನೆಹರುಗಳು ದಂಗೆ ಏಳುವವರು: ಮುಂಗೋಪಿಗಳು: ಆದಾಗ್ಯೂ ನುರಿತರಾಜಕಾರಣಿಗಳು. ಪಾಶ್ಚಾತ್ಯರಾಷ್ಟ್ರಗಳಿಗೆ ನೆಹರುಗಳ ರಾಜಕೀಯ ಅರ್ಥವಾಡಷ್ಟು ಗಾಂಧೀಯವರ ಸತ್ಯ-ಅಹಿಂಸೆಗಳ ತತ್ವ ತಿಳಿಯುವುದಿಲ್ಲ. ಭಾರತದಲ್ಲಿ ಹುಟ್ಟಿರುವರೆಂಬುದಕ್ಕಾಗಿಯಷ್ಟೇ ನೆಹರುಗಳನ್ನು ಪಾಶ್ಚಾತ್ಯ ಪ್ರಭೃತಿಗಳಿಂದ ಬೇರ್ಪಡಿಸಬೇಕಲ್ಲದೆ, ಬೇರಾವ ಕಾರಣವೂ ತೋರುವುದಿಲ್ಲ ಎಂದವರುಂಟು. ಹ್ಯಾರೋ ಮತ್ತು ಕೇಂಬ್ರಿಜ್ಜುಗಳಲ್ಲಿ ಒಳ್ಳೆಯ ಶಿಕ್ಷಣವನ್ನುಹೊಂದಿದ ಶ್ರೀಮಂತ ಪುತ್ರ ನೆಹರು ಪಾಶ್ಚಾತ್ಯ ಸಂಸ್ಕೃತಿಯನ್ನು ತನ್ನಾಗಿ ಅರಗಿಸಿಕೊಂಡಿದ್ದರೆ. ಇವರಿಗೆ ಭಾರತೀಯ ನಾಗರಿಕತೆಯ ದರ್ಶನ ಮಾಡಿಸಿಕೊಡಬೇಕಾದರೆ ಗಾಂಧೀಯವರು ಎಷ್ಟು ಕಷ್ಟಪಟ್ಟಿದ್ದರೋ ಹೇಳಲು ಬಾರದು. ಅವರ ಈ ಪಟ್ಟ ಶಿಷ್ಯನು ಗುರುವಿನ ಮಾತನ್ನು ವಿರುವ ದಾಸ್ಯಭಾವನ್ನು ತೋರಿಸಲಿಲ್ಲ: ತನಗೆ ಸಂಪೂರ್ಣ ಮನವರಿಕೆಯಾಗದಿದ್ದರೂ, ಮಹಾತ್ಮರ ನಿಲುಮೆಯಲ್ಲಿ ನ್ಯಾಯವಾದ ಅಂಶವಿದೆ ಎಂಬ ವಿಶ್ವಾಸವನ್ನು ತೋರಿಸುತ್ತಲೇ ಬಂದನು.

ಪಾಶ್ಚಾತ್ಯ ಮತ್ತು ಪೌರಸ್ತ್ಯ ಸಂಸ್ಕೃತಿಗಳ ಪವಿತ್ರ ಸಂಗಮದಂತಿರುವ ನೆಹರುಗಳು ತಮ್ಮ ಬಂಡುಗಾರ ಮನೋಭಾವವನ್ನು ವಿಧಾಯಕ ಚಟುವಟಿಕೆಗಳ ಕಡೆಗೆ ಹರಿಸಲು ನೋಡಿದ್ದರೂ ಅದು ಸುಲಭವಾದ ಕೆಲಸವಾಗಿರಲಿಲ್ಲ: ಅವರ ಇತ್ಯಚರಿತ್ರೆಯಲ್ಲಿ ತನ್ನನ್ನು ಲಂಡಿಯಿಂದ ಹೊಡೆದ ಪೋಲೀಸು ಅಧಿಕಾರಿಯನ್ನು ಅವನೇರಿದ ಕುದುರೆಯಿಂದ ಕೆಳಗೆಳೆದು ಉರುಳಿಸಬೇಕೆಂದು ಅವರಿಗಾದ ಇಚ್ಛೆಯನ್ನು ಸಂಯಮಿಸುವುದು ಎಷ್ಟು ತ್ರಾಸದಾಯಕವಾಯಿತೆಂಬ ಉಲ್ಲೇಖ ಬರುತ್ತದೆ. ಮುಂಬಯಿಯಲ್ಲಿ ಅವರೊಮ್ಮೆ ಕಾರಿನಲ್ಲಿ ಹೋಗುತ್ತಿದ್ದಾಗ ಒಬ್ಬ ಕಾಂಗ್ರೆಸಿಗನು ತನಗೂ ಕಾಂಗ್ರೆಸಿನ ವರಿಷ್ಠರಿಗೂ ಆದ ವಿವಾದವನ್ನು ಬಗೆ ಹರಿಸುವ ವರೆಗೆ ಸತ್ಯಾಗ್ರಹ ಮಾಡುವೆನೆಂದು ಕಾರಿಗೆ ಅಡ್ಡವಾಗಿ ಕದಲದೆ ನಿಂತನು. "ಈ ಬಗೆಯ ಹುಚ್ಚು ನರ್ತನೆ ನನಗೆ ಸೇರುವುದಿಲ್ಲ—ಎಲ್ಲಕ್ಕೂ ಸತ್ಯಾಗ್ರಹವಲ್ಲ" ಎಂದು ಹೇಳುತ್ತಾ ನೆಹರು ಅವನನ್ನು ಒತ್ತಟ್ಟಿಗೆ ನೂಕಿ ದಾರಿ ಬಿಡಿಸಿಕೊಂಡರು. ಮಹಾತ್ಮಾ ಗಾಂಧೀಯವರ ಸ್ಮಶಾನ ಯಾತ್ರೆಯಲ್ಲಿ ಹತ್ತು ಲಕ್ಷ ಜನರು ನೆರೆದಿದ್ದರು—ಚಿತೆಗೆ ಇನ್ನೂ ಬೆಂಕಿ ಕೊಟ್ಟಿರಲಿಲ್ಲ; ಅಷ್ಟರಲ್ಲಿ ಜನರೆಲ್ಲರೂ ಎದ್ದು ನಿಂತು, ಮುಂದಕ್ಕೆ ನುಗ್ಗಿ ತೊಡಗಿದರು. ಆಗ ನೆಹರುಗಳು ಕುಳಿತುಕೊಳ್ಳಿರೆಂದು ಬೊಬ್ಬೆ ಹಾಕುತ್ತಾ ಜನರನ್ನು ಹಿಂದೆ ನೂಕ ಹತ್ತಿದರು. "ಊ ಹೂಂ" ಎಂದ ಹೆಂಗಸೊಬ್ಬಳ ರಟ್ಟೆ ಹಿಡಿದು ಅವರು ನೆಲಕ್ಕೆ ತಳ್ಳಿದರು.

ಇದನ್ನು ಮುಂಗೋಪದ ಪ್ರದರ್ಶನ ಎಂದು ಕರೆಯುವುದಕ್ಕಿಂತಲೂ ಶಿಸ್ತಿನ ಪಾಲನೆಗೆ ಅವರು ಕೊಡುವ ಮಹತ್ವವೆಂದು ಹೇಳುವುದು ಸರಿಯಾದೀತು. ತಮ್ಮ ಸಾರ್ವಜನಿಕ ಭಾಷಣಗಳಲ್ಲಿ ಅವರು ಶಿಸ್ತಿಗೆ ಬಹಳ ಮಹತ್ವವನ್ನು ಕೊಡುತ್ತಾರೆ: ನಾಗರಿಕರೆಂದು ಕರೆಸಿಕೊಳ್ಳುವ ಅರ್ಹತೆಯು ಪ್ರಥಮ ಪಾಠವೇ ಶಿಸ್ತೆಂದು ಅವರ ಅಭಿಪ್ರಾಯ. ಅವರು ಮನಸ್ಸು ಪ್ರತಿಶೀಲ ಲಕ್ಷಣಗಳನ್ನು ಹೊರ ಹೊಮ್ಮುತ್ತದೆ. ತಮಗೆ ಜನರು ಅಸಂಖ್ಯ ಹೊಗಳಿಕೆಗಳನ್ನು ನೀಡುವುದು ಅವರ ಮನಸ್ಸಿಗೆ ಸರಿಬರುವುದಿಲ್ಲ ತನ್ನ ಪಾದ ಧೂಳಿಯನ್ನು ಹೆಚ್ಚಿಕೊಳ್ಳಲು ಮುಂದಾದ ಮುದುಕಿಯನ್ನು ಅವರು ನಿರಾಕರಿಸಿದರು. ನೇಪಾಳದಲ್ಲಿ ದೈವದ ಪ್ರೀತ್ಯರ್ಥವಾಗಿ ಪ್ರಾಣಿ ಬಲಿಯನ್ನು ಕೊಡುವ ಉತ್ಸವ ನಡೆದಾಗ ಅದರಲ್ಲಿ ಭಾಗವಹಿಸಲು ನಹರು ನಿರಾಕರಿಸಿದರು ಕುಂಭಮೇಳ ಕಾಲದಲ್ಲಿ ಲಕ್ಷಾಂತರ ಯಾತ್ರಿಕರು ಸಂಗಮದಲ್ಲಿ ಪುಣ್ಯಸ್ನಾನ ಮಾಡಿದರೂ ನೆಹರುಗಳು ನೀರಿಗಿಳಿಯಲಿಲ್ಲ. ಅಂಧಶ್ರದ್ಧೆಯಲ್ಲಿ ಅವರಿಗೆ ತೀರ ಜುಗುಪ್ಸೆ: ಗಾಂಧೀಯವರ "ರಾಮನಾಮ" ಜಪದಲ್ಲೂ ನೆಹರುಗಳಿಗೆ ಆಸಕ್ತಿ ಇದ್ದಂತಿಲ್ಲ. ಹಾಲು ಸಕ್ಕರೆಯಂತೆ ಗಾಂಧಿ-ನೆಹರು ಬೆರೆತಿದ್ದರೂ ಅವರ ವ್ಯಕ್ತಿತ್ವದ ವೈಶಿಷ್ಟ್ಯಗಳು ಕೆಡಲಿಲ್ಲ—ಅವರಿಬ್ಬರೂ ಭಿನ್ನಾಭಿಪ್ರಾಯವನ್ನು ಹೊಂದುವುದಕ್ಕೆ.

(೧೧ನೇ ಸುಟ ನೋಡಿರಿ)

ನವಯುಗದ ಚಂದಾಹಣ ಬಾಕಿ ಇರುವವರು ದಯವಿಟ್ಟು ಅದನ್ನು ಈಗಲಾದರೂ ಕಳಿಸಿ ಸಹಕರಿಸುವಂತೆ ವಿನಂತಿ.

THE CANARA MUTUAL ASSURANCE COMPANY, LTD.,
Managing Director: T. R. A. PAI
Head Office: **UDIPI**, S. INDIA.] [Estd: 1935
ಅತ್ಯುತ್ತಮ ಬೋನಸ್
ಲಾಭಸಹಿತ ಪೋಲಿಸಿಗಳಿಗೆ ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ
ರೂ. 18/- ಜೋಲ್ ಲೈಫ್ ಎಶ್ಯೂರೆನ್ಸಿಗೆ
ರೂ. 15/- ಎಂಡೋಮೆಂಟ್ ಎಶ್ಯೂರೆನ್ಸಿಗೆ
31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.
ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫.
ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಘೋಷಿಸಿದ ಕಂಪೆನಿ.
CHIEF AGENTS:
THE COMMERCIAL CORPORATION OF INDIA, LTD.,
UDIPI, S. India.

ಪಯಿಲ್ವಾನಿನ ಆಕೃತಿ



ಕಟ್ಟುಮಸ್ತಾದ ಬಂಡಗಳು ಅವನನ್ನು ಬಲಿ ಪಯಿಲ್ವಾನನನ್ನಾಗಿ ಮಾಡಿತು. ಪ್ರತಿದಿನವೂ ಅವನು ತೆಗೆದುಕೊಳ್ಳುವ ಪ್ರಿಯವಾದ ಟಾನಿಕ್ ಆ ರೀತಿಯಾಗುವುದಕ್ಕೆ ಸಹಾಯಕಾರಿಯಾಗಿರುವುದು. ಅವನು ಪ್ರತಿದಿನಾ ತೆಗೆದುಕೊಳ್ಳುವ ಟಾನಿಕ್

ಜೀವಾಮೃತಂ
ಆರೋಗ್ಯಕ್ಕೆ ಬಲವೃದ್ಧಿಗೆ

ಆಯುರ್ವೇದಾಶ್ರಮಂ ಶಿಮಿಪೆಡ್ ಮದ್ರಾಸ್-17.

ಬಿಡುಗಡೆಯ ಉಸಿರೆಳೆಯುವ ಪೋಂಡಿಚೆರಿ

ಎರಡು ಸಾವಿರ ವರ್ಷ ಪುರಾತನವಾದ ಇತಿಹಾಸ

ನೊನ್ನೆ ನವೆಂಬರ್ ೧೧ನೇ ತಾರೀಕಿಗೆ ಭಾರತದ ಅಂಶವಾಗಿದ್ದರೂ ಫ್ರೆಂಚರ ಕೈಯಲ್ಲಿ ಕೊಳೆಯುತಿದ್ದ ನಾಲ್ಕು ಪುಟ್ಟ ಸಣಾಹತು ಪ್ರದೇಶಗಳ ಅಧಿಕಾರವನ್ನು ಭಾರತ ಸರಕಾರಕ್ಕೆ ಹಸ್ತಾಂತರಿಸುವ ಸಮಾರಂಭ ನಡೆಯಿತು. ಪಶ್ಚಿಮ ತೀರದ ಮಾಹೆಯು ೧೮೨೫ರಿಂದ, ಪೂರ್ವತೀರದ ಯಾನಂ ೧೮೫೪ರಿಂದ, ಕರೈಕಲ್ ೧೮೫೪ರಿಂದ ಫ್ರೆಂಚರ ಕೈಯಲ್ಲಿದ್ದಿತು; ಪೋಂಡಿಚೆರಿಯು ೧೬೭೪ರಿಂದ ಹಲವುಸಲ ಕೈಬದಲಾಗಿ ಕೊನೆಗೆ ೧೭೬೯ರಲ್ಲಿ ಖಾಯಂ ಆಗಿ ಫ್ರೆಂಚರ ಕೈಯಲ್ಲಿ ಉಳಿಯಿತು. ಭಾರತವನ್ನು ಗೆದ್ದುಕೊಂಡು ಆಳೆತುಹುವಾಜಲ ಪರ್ಯಂತ ಫ್ರೆಂಚ್ ಸಾಮ್ರಾಜ್ಯವನ್ನು ವಿಸ್ತರಿಸಬೇಕೆಂಬ ಡ್ಯೂಪ್ಲೆಯ ಹೆಬ್ಬಯಕೆಯನ್ನು ಕ್ಲೈವನು ನುಚ್ಚು ನೂರು ಮಾಡಿದುದರಿಂದ ಫ್ರೆಂಚರು ಮುಖ ಭಂಗಹೊಂದಿ, ತುಣುಕು ನೆಲಗಳಿಂದಲೇ ತೃಪ್ತಿಯನ್ನು ಪಡೆಯಬೇಕಾಯಿತು. ಈಗ ೨೧೦ ವರ್ಷಗಳ ಬಳಿಕ ಯುಗಧರ್ಮವನ್ನು ಅನುಸರಿಸಿ, ಫ್ರೆಂಚರು ಭಾರತದಲ್ಲಿ ತಮ್ಮ ಸಣಾಹತು ಆಳಿಕೆಯನ್ನು ಕೊನೆಗಾಣಿಸಿದರು.

ಕಲ್ಕತ್ತೆಯ ಸಮೀಪದ ಚಂದ್ರನಗರವನ್ನೊಳಗೊಂಡು ಐದು ತುಣುಕುಗಳನ್ನು ಫ್ರೆಂಚರು ಆಳುತ್ತಿದ್ದರೂ ಅವರ ಕೇಂದ್ರ ಸ್ಥಾನವಾಗಿ ಮೆರೆದ ನಗರವೆಂದರೆ ಪೋಂಡಿಚೆರಿ. ಎರಡು ಸಾವಿರ ವರ್ಷಗಳಷ್ಟು ಪುರಾತನವಾದ ಹಾಗು ಉಜ್ವಲವಾದ ಇತಿಹಾಸವನ್ನೊಳಗೊಂಡ ಪೊಂಡಿಚೆರಿಯ ಹೆಸರನ್ನು ಟೋಲಮಿ ಎಂಬ ಗ್ರೀಸಿನ ವಿಜ್ಞಾನಿಯು ಕ್ರಿಸ್ತಪೂರ್ವ ಎರಡನೆಯ ಶತಮಾನದಲ್ಲಿ ರೇಖಿಸಿದ ಭೂಪಟದಲ್ಲಿ "ಪುಡ್ಡಾಕೆ" ಎಂದು ಬರೆದಿದ್ದಾನೆಂದು ತಿಳಿದುಬರುತ್ತಿದೆ. ನುವ್ವಾಸಿನಿಂದ ೧೦೫ ಮೈಲುಗಳ ದಕ್ಷಿಣಕ್ಕೆ ಸಮುದ್ರತೀರದ ೧೯೫ ಚದರಮೈಲು ವಿಸ್ತೀರ್ಣ ಪ್ರದೇಶದಲ್ಲಿ ಹನ್ನೆರಡು ತುಂಡುಗಳಾಗಿ ಪೋಂಡಿಚೆರಿ ವಿಸ್ತರಿಸಿದ್ದು ಇಲ್ಲಿಯ ಜನಸಂಖ್ಯೆ ೨,೨೨,೦೦೦. ತಮಿಳರಲ್ಲಿ ಪ್ರಸಿದ್ಧರಾದ ಜೋಳರೂ ಪಲ್ಲವರೂ ಇಲ್ಲಿ ರಾಜ್ಯಭಾರವನ್ನು ಮಾಡಿ ಪ್ರಸಿದ್ಧರಾದರು. ಕಲೆ ಕೈಗಾರಿಕೆಗಳಿಗೆ ಅವರು ಪ್ರೋತ್ಸಾಹವನ್ನು ಕೊಟ್ಟರು; ಅನೇಕ ಮಂದಿರಗಳನ್ನು ಕಟ್ಟಿಸಿದರು. ಎಲ್ಲಕ್ಕಿಂತ ಹೆಚ್ಚಾಗಿ ಬಲವಾದ ನೌಕಾಪಡೆಯನ್ನು ಕಟ್ಟಿಕೊಂಡು, ಪಾಶ್ಚಾತ್ಯ ಹಾಗು ಪೌರಸ್ತ್ಯ ದೇಶಗಳೊಡನೆ ವ್ಯಾಪಾರ ಸಂಬಂಧವನ್ನು ಬೆಳೆಸಿದರು. ಸಂಬಾರ ಜೀನಸು, ಗಂಧದ ಒಡವೆಗಳು, ರೇಶ್ಮೆ ಬಟ್ಟೆ ಮುಂತಾದವುಗಳು ಇಲ್ಲಿಂದ ಕಳಿಸಲ್ಪಡುತ್ತಿದ್ದವು. ಇಂದಿಗೂ ಪೋಂಡಿಚೆರಿಯಲ್ಲಿ ರೋಮ್ ಹಾಗು ಏಗುಪ್ತ ದೇಶಗಳ ಪ್ರಾಚೀನ ನಾಣ್ಯಗಳು ಅಕಸ್ಮಾತ್ತಾಗಿ ಸೋಡಸಿಗುಕ್ಕವೆ.

ತದನಂತರ ರಾಷ್ಟ್ರಕೂಟರೇ ಮುಂತಾದ ಅನೇಕ ವಂಶದವರು ಇಲ್ಲಿ ಆಳಿ, ಪೋಂಡಿಚೆರಿ ರೇವನ್ನು ವ್ಯಾಪಾರ ಸಮೃದ್ಧಿಗಾಗಿ ಚೆನ್ನಾಗಿ ಬಳಸಿಕೊಂಡರು. ಬಿಜಾಪುರದ ಮುಸ್ಲಿಂ ಅರಸರು ಉದಾರವಾಗಿ ಫ್ರೆಂಚರನ್ನು ನಡೆಸಿಕೊಳ್ಳದಿರುತ್ತಿದ್ದರೆ, ಇಲ್ಲಿ ವಿದೇಶೀಯರ ಆಳಿಕೆಗೆ ಅವಕಾಶ ಒದಗುತ್ತಿರಲಿಲ್ಲವೇನೋ ಎಂದು ಅನಿಸುತ್ತದೆ. ವಿದೇಶೀಯ ಆಳಿಕೆ ಇಲ್ಲಿಯ ಜನರಿಗೆ ಒಳ್ಳೆಯದೇನನ್ನೂ ತರಲಿಲ್ಲ. ಬ್ರಿಟಿಷರ ಕೈಯಲ್ಲಿದ್ದ ಭಾರತವು ೧೯೪೭ರಲ್ಲಿ ಸ್ವತಂತ್ರಗೊಂಡ ಒಳಕವಂತೂ ಫ್ರೆಂಚ್ ಸ್ವಾತ್ಯಗಳ ಪರಿಸ್ಥಿತಿ ಎಷ್ಟು ನಿಕೃಷ್ಟವಿದೆ ಎಂಬ ಸಂಗತಿ ಲೋಕಕ್ಕೆ ವಿದಿತವಾಯಿತು. ಪೊಂಡಿಚೆರಿಗೆ ತಾಗಿದ ಭಾರತದ ನೆಲವಲ್ಲಿ ಅಕ್ಕಿಯು ಚೀಲಕ್ಕೆ ಇಳಿ ರೂಪಾಯಿಗಳಿದ್ದಾಗ ಫ್ರೆಂಚ ಸ್ವಾಸ್ಥ್ಯದಲ್ಲಿ ಇದರ ಇಮ್ಮಡಿ ಬೆಲೆ ತೆತ್ತು ಜನರು ಆಹಾರವನ್ನು ಕೊಂಡುಕೊಳ್ಳುತಿದ್ದರು. ತರಕಾರಿ, ಹೆಣ್ಣುಹಂಪಲ, ಮಾಂಸ, ಉಪ್ಪು, ಮೆಣಸು ಎಲ್ಲದರ ಕ್ಕೂ ಭಾರತವಲ್ಲಿರುವುದಕ್ಕಿಂತ ಅಧಿಕ ಬೆಲೆಯನ್ನು ಅವರು ತೆರುತ್ತಿದ್ದರು. ಫ್ರೆಂಚರು ಬೇಸಾಯಕ್ಕೆ ಹೆಚ್ಚಿನ ಪ್ರೋತ್ಸಾಹವನ್ನೇನು ಕೊಡಲಿಲ್ಲ - ೭೫೦೦ ಎಕ್ರೆ ಸಾಗುವಳಿಗೆ ಯೋಗ್ಯವಾದ ಭೂಮಿಯಲ್ಲಿ ೬೦೦೦ ಎಕ್ರೆಯಷ್ಟು ಭತ್ತವನ್ನು ಬೆಳೆಸುವ್ಯದ್ದರೂ ಒಬ್ಬನೇ ಒಬ್ಬ ಕೃಷಿತಜ್ಞನನ್ನೂ ಸರಕಾರ ಒದಗಿಸಲಿಲ್ಲ. ಸುಧಾರಿತ ಪದ್ಧತಿಯನ್ನು ಜನಪ್ರಿಯಗೊಳಿಸುವ ಹೆಚ್ಚಿನ ವ್ಯವಸಕ್ಕೂ ಅದು ಹೋಗಲಿಲ್ಲ. ಭೂಸುಧಾರಣೆ ಮುಂತಾದ ವಿಷಯಗಳನ್ನು ಫ್ರೆಂಚ ಪ್ರಭುತಿಗಳು ಉದಾಸೀನತೆಯಿಂದಲೇ ಕಂಡರು.

ಹೀಗಿದ್ದರೂ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಅವರು ಸಾಕಷ್ಟು ಕೆಲಸವನ್ನು ಮಾಡಿದರೆಂದು ಒಪ್ಪಿಕೊಳ್ಳಬಹುದು---ಅವರು ತೆರೆದ ಬೇರೆ ಬೇರೆ ಹಂತದ ಪ್ರಾಥಮಿಕ ಶಾಲೆಗಳು ಪ್ರತಿಯೊಂದೂ ಹಳ್ಳಿಯಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸವನ್ನು ನೀಡುತ್ತವೆ. ತಮಿಳು ಪತ್ರು ಫ್ರೆಂಚ ಭಾಷೆಗಳನ್ನು ಇಲ್ಲಿ ಕಲಿಸಲಾಗುತ್ತದೆ. ಒಂದೆರಡು ಕಾಲೇಜುಗಳಲ್ಲಿ ಇಂಗ್ಲಿಷನ್ನೂ ಕಲಿಸುವ ಏರ್ಪಾಡು ಇರುತ್ತದೆ. ಇವೆಲ್ಲವನ್ನೂ ಸರಕಾರದ ಪರವಾಗಿಯೇ ನಡೆಸಿ, ಕಾಲೇಜು ಮಟ್ಟದವರೆಗಿನ ಶಿಕ್ಷಣವನ್ನು ಧರ್ಮಾರ್ಥವಾಗಿ ಕೊಡುತ್ತಿದ್ದರು.ಆಟ್ಟೇ ಆಲ್ಲ, ಅನೇಕ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಧರ್ಮಾರ್ಥವಾಗಿ ಊಟವನ್ನು ಹಾಕುತ್ತಿದ್ದರು. ಪರೀಕ್ಷಾ ಶುಲ್ಕವು ನಾಮಮಾತ್ರವಾಗಿದ್ದುಯಾರಿಗೂ ಭಾರವೆನಿಸುತ್ತಿರಲಿಲ್ಲ. ಶಿಕ್ಷಣದಲ್ಲಿಯ ದೋಷವೆಂದರೆ ಪುಸ್ತಕೀಯ ಜ್ಞಾನಕ್ಕೆ ಅದು ಕೊಟ್ಟ ಮಹತ್ವ. ಪುಸ್ತಕಾಲಯ, ಚರ್ಚಾಕೂಟ, ಆಟ ಮುಂತಾದ ಪಾಠೇತರ ಚಟುವಟಿಕೆಗಳಿಗೆ ಶಾಲೆಗಳು ಸಾಕಷ್ಟು ಪ್ರಾಮುಖ್ಯತೆಯನ್ನು ನೀಡುತ್ತಿಲ್ಲ. ಆದರೆ ಮಕ್ಕಳ ಆರೋಗ್ಯದ ವಿಷಯದಲ್ಲಿ ಸರಕಾರ ಎಚ್ಚರಿಕೆಯಿಂದಲೇ ನಡೆದುಕೊಂಡಿತು. ಸಾಂಕ್ರಾಮಿಕ ರೋಗಗಳ ಪ್ರಭಾವವನ್ನು ನಿಯಂತ್ರಿಸುವ ದಾಕುಗಳನ್ನು ಹಾಕುವುದರಲ್ಲೂ ಗಾಂಧಾರಾಂತರಪ್ರದೇಶಗಳಿಗೆ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವುದರಲ್ಲೂ ಸರಕಾರ ಆಸ್ಥೆವಹಿಸಿ ಪುಡಿಯಿತು. ಇಲ್ಲಿಬೊಂದು ವೈದ್ಯಕೀಯ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಬೇಕೆಂಬ ಮಾತು ಬಲವಾಗಿ ಕೇಳಬರುತ್ತದೆ.

ಫ್ರೆಂಚರು ಇಲ್ಲಿ ನಗರಸಭೆಗಳ ಮೂಲಕ ಆಡಳಿತವನ್ನು ನಡೆಸುತ್ತಿದ್ದರು; ವಯಸ್ಕ ಮತದಾನ ಪದ್ಧತಿಯಂತೆ ಸದಸ್ಯರನ್ನು ಆರಿಸುತ್ತಿದ್ದರು. ಫ್ರೆಂಚ ಕಾಯಿದೆಯಲ್ಲಿ ಮರಣದಂಡನೆ ಇರಲಿಲ್ಲ. ಅಧಿಕಾರಿಗಳಿಗೆ ಮದ್ಯಾಸಿನ ತಕ್ಷಣ ಸ್ಥಾನ ಪತಿಗಳ ಎರಡರಷ್ಟು ಸಂಬಳವನ್ನು ಪಲ್ಲಿಸುತ್ತಿದ್ದರು; ಪ್ರತಿಯೊಬ್ಬನಿಗೂ ನಿವೃತ್ತಿ ವೇತನ ಸಿಗುತ್ತಿತ್ತಲ್ಲದೆ, ಅವನ ಮರಣಾನಂತರ ವಿಧವೆಯಾದ ಹೆಂಡತಿಗೂ ಆರೈವಾಸಿಯಷ್ಟು ಹಣವನ್ನು ಅವಳು ಬದುಕಿರುವಷ್ಟು ಕಾಲ ಸಂದಾಯ ಮಾಡುತ್ತಿದ್ದರು. ಹುಟ್ಟಿದ ಪ್ರತಿಯೊಂದು ಮಗುವಿನ ಹೆಸರಿನಲ್ಲಿ ಹತ್ತು ರೂಪಾಯಿಗಳಷ್ಟು ಭತ್ತೆಯನ್ನು ಕೊಟ್ಟು, ಕಡಿಮೆ ಸಂಬಳದ ಅಧಿಕಾರಿಗಳು ಗೊಣಗದಂತೆ ಮಾಡುತಿದ್ದರು. ಬೇರೆ ಜನರಿಗೆ ಮಾತ್ರ ಏನೇನೂ ಸುಖವಿರಲಿಲ್ಲ. ತೆರಿಗೆಗಳು ಬಹಳ ಹೆಚ್ಚಾಗಿದ್ದವು; ನಿರುದ್ಯೋಗ ಸಮಸ್ಯೆ ಭೀಕರವಿದ್ದಿತು. ಭಾರತೀಯ ನಾಣ್ಯ ವಿನಿಮಯದ ತೊಡಕುಗಳಿಂದ ಜನರೆಲ್ಲ ಸಂಕ್ರಸ್ತರಾಗಿದ್ದರು. ಪೋಂಡಿಚೇರಿಯಲ್ಲಿ ೧೩೦೦೦ ಕೈಮಗ್ಗಗಳಲ್ಲಿ ಕೆಲಸ ಮಾಡುತಿದ್ದ ೫೦೦೦೦ ನೇಕಾರರು ಬಹಳ ಕಠಿಣವಾದ ಪ್ರಸಂಗಗಳನ್ನು ಎದುರಿಸಬೇಕಾಯಿತು. ಎಷ್ಟೋ ಮಂದಿ ತಮ್ಮ ಕುಶಲ ಕಲೆಯನ್ನು ತೊರೆದು ಬಿಟ್ಟು, ತಮಗೇನೂ ತಿಳಿಯದ ಬೇರೆ ವೃತ್ತಿಯಲ್ಲಿ ಹೊಸತಾಗಿ ಜೀವನವನ್ನು ತೊಡಗಿದರು.

ಭಾರತದೊಡನೆ ಸೇರ್ಪಡೆ ಹೊಂದಿದುದರಿಂದ ಇನ್ನು ಮುಂದೆ ಆಲ್ಲಿಯ ಜನರಿಗೆ ತೊಂದರೆಯಾಗಲಾರದು. ಯುನಿಟಿಗೆ ಹತ್ತೂವರೆ ಆಣೆಯಷ್ಟು ಹಣ ತೆರಬೇಕಾಗಿದ್ದ ವಿದ್ಯುಚ್ಛಕ್ತಿಯು ಇನ್ನು ಮುಂದೆ ಮೂರಾಣೆ ಆಣೆಗೆ ಪ್ರತಿ ಮನೆಗೆ ಸಿಗುತ್ತದೆ; ಟನ್ನಿಗೆ ೧೦೫ ರೂಪಾಯಿ ಬೀಳುತ್ತಿದ್ದ ಕಲ್ಲಿದ್ದಲು ಇನ್ನು ಮುಂದೆ ೫೦ ರೂಪಾಯಿಗೆ ದೊರಕುತ್ತದೆ; ಕಾರ್ಖಾನೆಗಳಿಗೆ ನಾಲ್ಕಾಣೆಯ ಬದಲು ಆರ್ಧಾಣೆಗೆ ಯುನಿಟ್ ನಂತೆ ವಿದ್ಯುಚ್ಛಕ್ತಿ ಪೂರೈಸಲ್ಪಡುತ್ತದೆ. ಇವೆಲ್ಲದರ ಲಾಭವನ್ನು ಪಡೆದು ಪೋಂಡಿಚೆರಿಯ ಗಿರಣಿಗಳ ಏಳು ಸಾವಿರ ಕೆಲಸ

(೧೪ನೇ ಪುಟ ನೋಡಿರಿ)

ನಂಬಿಕೆಗೆ ಅರ್ಹತೆ!

ಅತ್ಯುತ್ತಮ ಟಾಯಲೆಟ್ ಸಾಬೂನಿನಲ್ಲಿ ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ ಅವೆಲ್ಲಾ

ಮೈಸೂರು ಸ್ಯಾಂಡಲ್ ಸೋಪಿನಲ್ಲಿ

ಇರುವವು ಎಂದು ಖಚಿತವಾಗಿ ಹೇಳುತ್ತೇನೆ.

* * *

— ಎಲ್ಲಾ ಕಡೆಗಳಲ್ಲೂ ದೊರಕುವುದು —

ಗೌರ್ವಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು.

Member: I. S. T. M. A.



ಎಸ್ಟೇಟ್ ಡ್ಯೂಟಿಯ ತೊಂದರೆಯನ್ನು ತಪ್ಪಿಸಿಕೊಳ್ಳಬೇಕೆಂದಿರುವಿರಾ?

ಆದರಸಂಬಂಧವಾದ ಸಮಸ್ಯೆಗಳನ್ನು ಯುನೈಟೆಡ್ ಇಂಡಿಯಾ ನಿಮ್ಮ ಸಂಗದ ಖರ್ಚಿಲ್ಲದೆ ಸಂತೋಷದಿಂದ ಸಿದ್ಧವಿದ್ದಾಳೆ.

ವಿಮಾ ಪಾಲಿಸಿಗಳಿಗೆ ಎಸ್ಟೇಟ್ ಡ್ಯೂಟಿಯಿಂದುಂಟಾಗುವ ನ್ಯೂನಾತಿರೇಕಗಳನ್ನು ಪರಿಹರಿಸಲು ನಮ್ಮ ಪ್ರಧಾನ ಕಛೇರಿಯಲ್ಲಿ ಇದಕ್ಕಾಗಿಯೇ ಪ್ರತ್ಯೇಕವಾದ ವಿಶೇಷ ವಿಭಾಗವು ಏರ್ಪಡಿಸಲ್ಪಟ್ಟಿದೆ. ಮತ್ತು ಅಲ್ಲಿ ಇದರ ಸಂಬಂಧವಾಗಿ ವಿಚಾರವಿನಿಮಯ ನಡೆಯಬಹುದು.

ನಮ್ಮ ಸೇವೆಯನ್ನು ಮತ್ತು ಸಹಾಯವನ್ನು ನೀವು ಉಚಿತವಾಗಿ ಪಡೆಯಬಹುದು. ಮತ್ತು ಇದಕ್ಕೆ ನೀವು ಯಾವ ವಿಧದಲ್ಲಿಯೂ ದಾಕ್ಷಿಣ್ಯಬದ್ಧರಾಗುವುದಿಲ್ಲ.

ದಿ ಯುನೈಟೆಡ್ ಇಂಡಿಯಾ
ಲೈಫ್ ಎಶ್ಯೂರೆನ್ಸ್ ಕಂಪೆನಿ
ಲಿ ಮಿ ಟೆ ಡ್

ಪ್ರಧಾನ ಕಛೇರಿ :
ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್ಸ್
ಪೋಸ್ಟ್ ಬಾಕ್ಸ್ 281, ಮದರಾಸು-1.

UI 160

ಪ್ರಕಾಶಂ ಮಂತ್ರಿ ಮಂಡಳದಲ್ಲಿ ಅವಿಶ್ವಾಸ

ಏಕ ಬಹುಮತದಿಂದ ಸರಕಾರ ಉರುಳಿತು

ಎಂಭತ್ತಾರು ವರ್ಷ ವ್ಯಾಯದ ವೃದ್ಧ "ಆಂಧ್ರ ಕೇಸರಿ" ಪ್ರಕಾಶಮರ ಮಂತ್ರಿ ಮಂಡಳದ ವಿರುದ್ಧ ಅವಿಶ್ವಾಸವನ್ನು ಸೂಚಿಸುವ ಗೊತ್ತುವಳಿಯನ್ನು ತಂದ ಶ್ರೀ ಲಚ್ಚಣ್ಣನವರು ಏಕ ಬಹುಮತದಿಂದ ವಿಜಯಿಗಳಾದರು; ಪರಿಣಾಮವಾಗಿ, ಪ್ರಕಾಶಮರ ಮಂತ್ರಿ ಮಂಡಳವು ತನ್ನ ಹದಿಮೂರು ತಿಂಗಳ ಅಸ್ತಿತ್ವದ ಬಳಿಕ ಗವರ್ನರರಿಗೆ ರಾಜೀನಾಮೆಯನ್ನು ಸಲ್ಲಿಸುವಂತಾಯಿತು. ಪ್ರಕಾಶಮರು ಹಿಂದೆ ಮದ್ರಾಸಿನಲ್ಲಿ ಹನ್ನೊಂದು ತಿಂಗಳ ತನಕ ನಾತ್ರ ಮಂತ್ರಿಮಂಡಳವನ್ನು ರಚಿಸಿ, ಅಧಿಕಾರ ಸ್ವಾತಂದಲ್ಲಿ ಇದ್ದರು ಕಾಂಗ್ರೆಸಿನ ಇತರ ಧುರೀಣರೊಡನೆ ಉಂಟಾದ ಮನಸ್ತಾಪ ಅವರು ಅಧಿಕಾರವನ್ನು ತ್ಯಜಿಸುವಂತೆ ಮಾಡಿತು. ಈಗ ಆಂಧ್ರದಲ್ಲೂ ಮದ್ರಾಸಿನ ಮಾಜಿ ಮಂತ್ರಿಗಳೂ ಆಂಧ್ರ ಕಾಂಗ್ರೆಸು ಸಮಿತಿಯ ಉಪಾಧ್ಯಕ್ಷರೂ ಆದ ಶ್ರೀ ಎನ್. ಶಂಕರ ರೆಡ್ಡಿ ಹಾಗು ಇನ್ನೊಬ್ಬ ಕಾಂಗ್ರೆಸು ಸದಸ್ಯ ಶ್ರೀ ಎನ್. ವೆಂಕಟ ಸುಬ್ರಹ್ಮಣ್ಯಂ ಇವರು ಎದುರು ನಿಂತು ಅವಿಶ್ವಾಸ ಗೊತ್ತುವಳಿಯು ಪರವಾಗಿ ಮತವಿತ್ತುದರಿಂದ ಪ್ರಕಾಶಮರು ಸೋಲನ್ನು ಅನುಭವಿಸಿದರು. ಶಂಕರ ರೆಡ್ಡಿಯವರು ತಮ್ಮ ನಿಲುಮೆಯನ್ನು ಸ್ಪಷ್ಟೀಕರಿಸುತ್ತಾ "ಈ ಮತದಾನದ ವಿಷಯದಲ್ಲಿ ಕಾಂಗ್ರೆಸು ಸದಸ್ಯರು ಹೇಗೆ ವರ್ತಿಸಬೇಕೆಂದು ಯಾವ ಆದೇಶವನ್ನೂ ಕೊಟ್ಟಿದ್ದಿಲ್ಲ—ಆದುದರಿಂದ ನನ್ನ ಮನಸ್ಸಿಗೆ ಸರಿಕಂಡಂತೆ ನಡೆದುಕೊಂಡಿದ್ದೇನೆ. ತಮಗೆ ಬೇಕಾದಾಗ ಬೇಕೆನಿಸಿದ ವಕ್ಷವನ್ನು ಸೇರಿ ಹೊಸ ಚುನಾವಣೆಗೆ ನಿಲ್ಲದೆ ಅಧಿಕಾರಕ್ಕೆ ಅಂಟಿಕೊಳ್ಳುವ ಸದಸ್ಯರ ವಿರುದ್ಧ ನಾನು ಮತವಿತ್ತಿದ್ದೇನೆ—ಕಾಂಗ್ರೆಸುಸರಕಾರವನ್ನಲ್ಲ, ಪ್ರಕಾಶಂ ಮಂತ್ರಿ ಮಂಡಳವನ್ನು ನಾನು ಪ್ರತಿಭಟಿಸಿದ್ದೇನೆ" ಎಂದರು.

ಪತನದ ಕಾರಣ

ಮಂತ್ರಿಮಂಡಳದ ಪತನಕ್ಕೆ ಕಾಂಗ್ರೆಸಿನ ಇಬ್ಬರು ಸದಸ್ಯರು ವಿರುದ್ಧ ಮತ ಕೊಟ್ಟದ್ದು ಹತ್ತಿರದ ಕಾರಣವೆನಿಸಿದ್ದು, ಕಾಂಗ್ರೆಸು ಪಕ್ಷವು ಅವರ ವಿರುದ್ಧ ಶಿಸ್ತಿನ ಕ್ರಮವನ್ನು ಕೈಗೊಳ್ಳಲು ನಿರ್ಧರಿಸಿರುತ್ತದೆ. ಆದರೆ, ಇದರ ಹಿನ್ನೆಲೆಯನ್ನು ಅವಲೋಕಿಸಿದರೆ, ಪ್ರಕಾಶಮರು ಅಧಿಕಾರಸ್ಥಾನವನ್ನು ವಹಿಸಿದ ನಂದೆರ್ಭ, ಆಗ ಅನುಸರಿಸಲಾದ ನೀತಿ ಹಾಗು ಜನರ ಮುಂದೆ ಸರಕಾರ ನಡೆಸಿದ ಕೆಲವು ಅನಪೇಕ್ಷಣೀಯವಾದ ತಂತ್ರಗಳು ಗೋಚರಕ್ಕೆ ಬರುತ್ತವೆ. ಗವರ್ನರರ ಆಳಿಕೆಯ ಹೊರತು ಬೇರೆ ಉಪಾಯವೇ ಇಲ್ಲವೆಂದು ಭಾವಿಸಲ್ಪಡುತ್ತಿದ್ದಾಗ, ಪ್ರಕಾಶಮರು ಕಾಂಗ್ರೆಸಿನ ಸಹಸದಸ್ಯರಾಗಿ ಸೇರಿಕೊಂಡು ಮುಖ್ಯ ಮಂತ್ರಿಗಳಾದರು. ಆಗಲೇ ಅಧಿಕಾರದಾಹಕ್ಕೆ ಒಳಗಾಗಿಯೇ ಪ್ರಕಾಶಮರು ಪಕ್ಷ ಬದಲಿಸಿದರೆಂಬ ಜರೋಪ ಕೇಳಿಸ ತೊಡಗಿತು. ಪ್ರಜಾ ಸಮಾಜವಾದಿ ಪಕ್ಷದ ಶ್ರೀ ಟಿ ವಿಶ್ವನಾಥಮರನ್ನೂ ಕೃಷಿಕರ ಲೋಕ ಪಕ್ಷದ ಶ್ರೀ ಜಿ. ಲಚ್ಚಣ್ಣನವರನ್ನೂ ಮಂತ್ರಿ ಮಂಡಳದಲ್ಲಿ ನೇರಿಸಿ, ಇದರಿಂದ ವಿರೋಧ ಬಲಗುಂದಬಹುದೆಂದು ಪ್ರಕಾಶಂ ಆಶಿಸಿದರು. ಆದರೆ ಲಚ್ಚಣ್ಣನವರು ಮಂತ್ರಿ ಮಂಡಳದೊಡನೆ ಹೊಂದಿಕೊಳ್ಳದೆ, ಹೊರ ಬಂದರು. ಪ್ರಜಾ ಸಮಾಜವಾದಿ ಪಕ್ಷವೂ ಒಡೆದು ಶ್ರೀ ಪಿ. ಗಜಪತಿರಾಜುರ ಮುಂದಾಳು ತನವನ್ನು ಸಿಡಿದ ಸದಸ್ಯರು ಒಪ್ಪಿಕೊಂಡರು. ಹೀಗೆ ಪ್ರತಿ ಪಕ್ಷದ ಬೆಂಬಲ ತಪ್ಪಿದ ಗಳಿಗೆಯಲ್ಲೆ ಪಾನ ಪ್ರತಿಬಂಧವನ್ನು ರದ್ದುಗೊಳಿಸಬೇಕೆಂದು ಸರಕಾರವನ್ನು ಒತ್ತಾಯಿಸುವ ಚಳವಳಿ ತೊಡಗಿತು ಸರಕಾರವು ರಾಮಮೂರ್ತಿ ಸಮಿತಿಯನ್ನು ನೇಮಿಸಿ, ಅದರ ವರದಿಯನ್ನು ಶಾಸನ ಸಭಾ ಸದಸ್ಯರ ಮುಂದೆ ಅಭಿಪ್ರಾಯಕ್ಕೊಸ್ಕರ ಮಂಡಿಸುವುದಾಗಿ ಹೇಳಿ, ಸಮಾಧಾನಗೊಳಿಸಿತು. ಸಮಿತಿಯ ವರದಿಯೇ ಮಂತ್ರಿ ಮಂಡಳಕ್ಕೆ ಮೃತ್ಯುವಾಯಿತು—ಅದರ ಸಿಫಾರಸುಗಳನ್ನು ಕಾರ್ಯಗತಗೊಳಿಸುವುದೂ ಪಾನ ಪ್ರತಿಬಂಧವನ್ನು ರದ್ದುಗೊಳಿಸುವುದೂ ಒಂದೇ ಎಂದು ತೋರಿತು. ಶಾಸನ ಸಭೆಯಲ್ಲಿ ವರದಿಗೆ ಬಹುಮತ ದೊರೆತರೂ, ಸರಕಾರ, ಅದರಲ್ಲೂ ಕಾಂಗ್ರೆಸು ಮಂತ್ರಿಗಳು, ಪಾನನಿರೋಧವನ್ನು ರದ್ದುಗೊಳಿಸಲು ತತ್ವದ ಮೇಲಿನ ಪ್ರೇಮದಿಂದ ಹಾಜರಿದರು. ಇದು ಮಂತ್ರಿ ಮಂಡಳದ ವಿರುದ್ಧ ಅವಿಶ್ವಾಸ ಸೂಚಿಸಲು ಬಲವಾದ ಕಾರಣವಾಯಿತು.

ಚರ್ಚೆಯ ತಿರುಳು

ಶಾಸನ ಸಭೆಯು ಅವಿಶ್ವಾಸ ಸೂಚಕ ಗೊತ್ತುವಳಿಯ ಚರ್ಚೆಯನ್ನು ಮಾಡುವುದಕ್ಕೆ ಮುಂಚೆ, ಶ್ರೀ ಲಕ್ಷ್ಮೀನರಸಿಂಹ ದೋರಾ ಎಂಬವರು ವಿಧಿಬಿಂದುವನ್ನೆತ್ತಿ ಗವರ್ನರರ ಭಾಷಣಕ್ಕೆ ಕೃತಜ್ಞತೆಯನ್ನು ಸೂಚಿಸುವ ಗೊತ್ತುವಳಿಗೆ ಮಂಡಿಸಿದ ತಿದ್ದುಪಡಿಗಳಲ್ಲಿನ ಆಶಯವನ್ನೆ ಅವಿಶ್ವಾಸ ಸೂಚಕ ಗೊತ್ತುವಳಿಯೂ ಬಿಂಬಿಸುವುದರಿಂದ ಮತ್ತು ಗವರ್ನರರ ಭಾಷಣದ ವಿಷಯದಲ್ಲಿ ತಿದ್ದುಪಡಿಗಳೆಲ್ಲ ಬಿದ್ದುಹೋಗಿರುವುದರಿಂದ ಪುನಃ ಚರ್ಚೆ ನಡೆಸಲು ಬಾರದು ಎಂದರು. ಇದನ್ನು ವಿರೋಧಿಸಿದ ಸದಸ್ಯರು, ಗವರ್ನರರ ಭಾಷಣದ ವಿಷಯದಲ್ಲಿ ತಂದ ತಿದ್ದುಪಡಿಗಳಲ್ಲಿ ರಾಮಮೂರ್ತಿ ಸಮಿತಿಯ ವರದಿಯನ್ನು ಕಾರ್ಯಗತಗೊಳಿಸಲಿಲ್ಲ ಎಂಬ ಕಾರಣವು ಅನುಷಂಗಿಕವಾಗಿತ್ತಾದರೂ, ಈಗಿನ ಅವಿಶ್ವಾಸಸೂಚಕ ಗೊತ್ತುವಳಿಯಲ್ಲಿ ವಿಷಯವೇ ಆದಾಗಿದೆಯೆಂದೂ ಹೇಳಿದರು ಅಧ್ಯಕ್ಷರು ಈ ಅಭಿಪ್ರಾಯವನ್ನು ಎತ್ತಿಹಿಡಿದು, ವಿಧಿಬಿಂದುವನ್ನು ತಳ್ಳಿಹಾಕಿದರು. ಲಚ್ಚಣ್ಣನವರು ಅವಿಶ್ವಾಸ ಸೂಚಕ ಗೊತ್ತುವಳಿಯನ್ನು ಮಂಡಿಸುತ್ತಾ ಮಂತ್ರಿಗಳನ್ನೇಕರು, ಮುಖ್ಯವಾಗಿ ಉಪಮುಖ್ಯ ಮಂತ್ರಿ ಶ್ರೀ ಎನ್. ಸಂಜೀವರೆಡ್ಡಿಯವರು ರಾಮಮೂರ್ತಿ ಸಮಿತಿಯ ವರದಿ ಸಿದ್ಧವಾಗುವುದಕ್ಕೆ ಮುಂಚೆಯೇ ವಾನಸ್ಪತಿಬಂಧವನ್ನು ರದ್ದುಗೊಳಿಸುವುದು ಅಪಾಧ್ಯ ಎಂದು ಜೋಯಿಸ್ತಾ ತಿರುಗುತ್ತಿದ್ದರು; ಪಾನನಿರೋಧ ಧೋರಣೆಯನ್ನು ಕಾಂಗ್ರೆಸಿಗರು ತಮ್ಮ ಪ್ರತಿಜ್ಞೆಯ ಸಂಗತಿಯಾಗಿ ತಿಳಿದುಕೊಂಡಿರೂ ಅನು ಸಂಪೂರ್ಣ ವಿಫಲಗೊಂಡಿವೆ ಎಂದು ಸುಂತಾಗಿ ಹೇಳಿದರು. ಸರಕಾರದ ಪರವಾಗಿ ಮಾತನಾಡಿದ ಪಾನನಿರೋಧ ಸಚಿವ ಶ್ರೀ ಪಟ್ಟಾಭಿ ರಾಮಯ್ಯನವರೂ ಶ್ರೀ ಸಂಜೀವ ರೆಡ್ಡಿಯವರೂ ನೀರಾದಿಂದ ಸಕ್ಕರೆಯನ್ನು ತಯಾರಿಸುವ ಯೋಜನೆಯೊಂದನ್ನು ಕೈಗೊಳ್ಳಲು ಸರಕಾರ ವಿಚಾರಿಸುತ್ತಿದ್ದು ಇದರಿಂದ, ಎರಡೂವರೆ ಲಕ್ಷ ಮೂರ್ತೆದಾರರಿಗೆ ಉದ್ಯೋಗ ಸಿಗುತ್ತದೆ. ಮದ್ಯಪಾನದ ದುಷ್ಪರಿಣಾಮಗಳನ್ನು ನಿವಾರಿಸಿ, ಜನರು ಸುಖಜೀವನ ನಡೆಸುವಂತೆ ಮಾಡುವುದೇ ನಮ್ಮ ಉದ್ದೇಶ ಎಂದರು.

ಮತದಾನದ ಸೋಜಿಗ

ಗೊತ್ತುವಳಿಯ ಮೇಲೆ ಮತದಾನ ನಡೆದಾಗ ಪ್ರಜಾಸಮಾಜವಾದಿ ಪಕ್ಷದ ಓರ್ವ ಸದಸ್ಯರನ್ನು ಬಿಟ್ಟು ಉಳಿದ ೧೪೦ ಮಂದಿ ಸಭೆಯಲ್ಲಿದ್ದರು. ರಾಯಲ ಸೀಮೆಯ ಸ್ವತಂತ್ರ ಸದಸ್ಯರೊಬ್ಬರು ಮತದಾನದಲ್ಲಿ ಭಾಗವಹಿಸದೆ ಸುಮ್ಮನುಳಿದರು ಗೊತ್ತುವಳಿಯು ಪರವಾಗಿ ಒಟ್ಟು ೬೯ ಮತಗಳೂ ವಿರೋಧವಾಗಿ ೬೮ ಮತಗಳೂ ದೊರೆತು ಪ್ರಕಾಶಮರು ಬೆಂಬಲ ಕಳೆದು ಕೊಂಡರು. ಆ ಕೂಡಲೇ ಅವರು ಗವರ್ನರ ಪ್ರತಿನಿಧಿಯವರಿಗೆ ತಮ್ಮ ಮಂತ್ರಿ ಮಂಡಳದ ರಾಜೀನಾಮೆಯನ್ನು ಒಪ್ಪಿಸಿದರು. ಆದರೆ ಗವರ್ನರರು ಪರಿಸ್ಥಿತಿಯನ್ನು ವಿಮರ್ಶಿಸಿ ಮುಂದಿನ ಕ್ರಮವನ್ನು ನಿಶ್ಚಯಿಸಲು ತಮಗೆ ತುಸು ಕಾಲಾವಕಾಶ ಬೇಕಿರುವುದರಿಂದ, ಅಷ್ಟರ ತನಕ ಅಧಿಕಾರದಲ್ಲಿ ಉಳಿಯಬೇಕೆಂದು ಪ್ರಕಾಶಮರನ್ನು ಕೇಳಿಕೊಂಡರು. ಇದಕ್ಕೆ ಪ್ರಕಾಶಮರು ಒಪ್ಪಿಕೊಂಡಿದ್ದರೂ ಅವರ ಮಂತ್ರಿ ಮಂಡಳವು ಜೋಪಾನವಾಗಿ ಸರಕಾರವಾಗಿ ಕೆಲಸ ಮಾಡುವ ಸಂಭವ ಅಷ್ಟೇನೂ ಇಲ್ಲವೆಂದು ಶ್ರೀ ಸಂಜೀವ ರೆಡ್ಡಿಯವರ ಹೇಳಿಕೆಯಿಂದ ತಿಳಿದು ಬರುತ್ತದೆ. ಈಗಿನ ಶಾಸನ ಸಭೆಯನ್ನು ವಿಸರ್ಜಿಸಿ, ಹೊಸ ಚುನಾವಣೆಗಳನ್ನು ನಡೆಸುವುದೇ ಸೂಕ್ತವೆಂದು ಅವರು ಹಾಗು ಪ್ರಜಾ-ಸಮಾಜವಾದಿ ಗುಂಪಿನ ಶ್ರೀ ರಾಜುರ ಅಭಿಪ್ರಾಯ. ಹೊಸ ಚುನಾವಣೆಗಳನ್ನು ಇನ್ನು ಮೂರು ತಿಂಗಳಲ್ಲಿ ನಡೆಸುವುದು ಸಾಧ್ಯವಾದೀತೆಂದೂ ಆಗ ಜನತೆಯು ಮುಂದೆ ಪ್ರಕಾಶಂ ಮಂತ್ರಿಮಂಡಳವು ಕೈಗೊಡಿಸಿದ ಪ್ರಗತಿಯನ್ನು ಬಣ್ಣಿಸಿ ಬಹುಮತವನ್ನು ಪಡೆಯುವ ಆಶೆ ತಮಗಿರುವೆಯೆಂದೂ ಸಂಜೀವ ರೆಡ್ಡಿಯವರು ಪತ್ರಿಕಾ ಪ್ರತಿನಿಧಿಗಳಿಗೆ ಹೇಳಿದರು.

ಮುಂದಿನ ನಿಲುಮೆ

ಆಂಧ್ರದ ಈಗಿನ ಪರಿಸ್ಥಿತಿಯಲ್ಲಿ ಯಾವ ಪಕ್ಷವೂ ಅಧಿಕಾರವನ್ನು ನಡೆಸುವುದು ಕಷ್ಟ. ಹತ್ತಿರದಾದ ಇಬ್ಬರು ಕಾಂಗ್ರೆಸಿಗರ ಮತದೊಂದಿಗೆ ಅವಿಶ್ವಾಸ ಸೂಚಕ ಗೊತ್ತುವಳಿಗೆ ದೊರತದ್ದು ಒಂದು ಬಹು

ZANDU'S THREE GEMS of AYURVEDIC MEDICINES

ಝಂಡೂರವರ ಮಕರಧ್ವಜ ಪಿಲ್ಸ್ (ಸುವರ್ಣ ಮಿಶ್ರಿತ)
ದೀರ್ಘಾವಧಿಯ ಕೆಮ್ಮು, ನರಗಳ ನಿಸ್ತೂಕ ಮತ್ತು ಸರ್ವಸಾಮಾನ್ಯ ಅಶಕ್ತತೆ ಹಾಗೂ ಇತರ ಎಡೆಯ ಬೇನೆಗಳಿಗೆ ಅತ್ಯಧಿಕ ಗುಣಕಾರಿ. ಬೆಲೆ: 1 ತೊಲೆಗೆ ರೂ. ೨—೦—೦

ಝಂಡೂರವರ ವಸಂತ ಕುಸುಮಾಕರ ರಸ—ಮೂತ್ರಾತಿಸಾರ, ಸಿಹಿಮೂತ್ರ, ನಿಸ್ತ್ರಾ ಇತ್ಯಾದಿ ಬಹುಕಾಲದ ಮೂತ್ರ ರೋಗಗಳಿಗೆ ದಾಕ್ಷರುಗಳಿಂದ ವಿಶಿಷ್ಟ ತರವಲ್ಲಿ ಶಿಫಾರಸು ಮಾಡಲ್ಪಟ್ಟಿವೆ. ಬೆಲೆ: ಕಾಲು ತೊಲೆಗೆ ರೂ. ೩—೦—೦.

ಝಂಡೂರವರ ಸುವರ್ಣ ಮಿಶ್ರಿತ ಚ್ಯವನಪ್ರಾಶ—ಸರ್ವರಿಗೂ ರುಚಿಕರವಾದ ಟಾನಿಕ್ ಆಹಾರ. ಬಂಗಾರ ಮತ್ತು ಇತರ ಭಸ್ಮಗಳ ಮಿಶ್ರಣ ಸಿರುವುದರಿಂದ ಶೀತ, ಕಫ, ಕೆಮ್ಮುಗಳಿಗೆ ಅತ್ಯಂತ ಪರಿಣಾಮಕಾರಿ.
ಬೆಲೆ: 1 ರಾತ್ತಿಗೆ ರೂ. ೭—೮—೦. ಕಾಲು ರಾತ್ತಿಗೆ ರೂ. ೨—೦—೦.

ಝಂಡೂರವರ ಔಷಧಿಗಳು ಮ.ಕ.ಜಿಲ್ಲೆಯ ಅಧಿಕೃತ ಏಜಂಟರಲ್ಲಿ ದೊರೆಯುವುವು

ಕ್ಯಾಟಲಾಗಿಗೆ ಕೆಳಗಿನ ಸೋಲ್ ಏಜಂಟರಿಗೆ ಬರೆಯಿರಿ.

DAMODAR & CO.,
113 Nainiappa Naicken Street, P. T.—MADRAS-3.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ಪ. ಭಾರತ).

ಅಧಿಕೃತ ಭಂಡವಾಳ ...	...	ರೂ. 25,00,000
ಚಂದಾ ಆಪಿಸಿ, ತೆತ್ತು ಬಂದ ಭಂಡವಾಳ	...	ರೂ. 20,00,000
ಕ್ಷೇಮ ನಿಧಿ ...	...	ರೂ. 10,50,000
ಠೇವಣಾತಿಗಳು ...	...	ರೂ. 2,98,19,000
ಒಟ್ಟು ವ್ಯವಹಾರ ಭಂಡವಾಳ	...	ಸುಮಾರು ರೂಪ್ಯಾ 4 ಕೋಟಿ
ಒಟ್ಟು ಶಾಖೆಗಳು ...	...	38

(31—12—1953ರಲ್ಲಿ)

THE CANARA BANKING CORPORATION LIMITED
Estd:- 1906] [H. O. UDIPI (S. India).

ಕಾಂಗ್ರೆಸಿನ ಅಧ್ಯಕ್ಷತೆಗೆ ದೇಭಾರರು ಉಮೇದ್ವಾರ

ಕಾರ್ಯಕಾರಿ ಸಮಿತಿಯ ಸರ್ವಾನುಮತದ ನಿರ್ಣಯ

ಪ್ರಧಾನ ಮಂತ್ರಿ ನೆಹರುಗಳು ತಮ್ಮ ಚೀನ ಪ್ರವಾಸದ ಅನುಭವವನ್ನು ಮೊನ್ನೆ ಸೋಮವಾರ ಹೊಸ ದೆಹಲಿಯಲ್ಲಿ ಸೇರಿದ ಕಾಂಗ್ರೆಸು ಕಾರ್ಯಕಾರಿ ಸಮಿತಿಗೆ ವಿದಿತಪಡಿಸಿದರು ಚೀನಕ್ಕೆ ಯುದ್ಧ ಬೇಕಾಗಿಲ್ಲ; ಅಲ್ಲಿ ರಾಷ್ಟ್ರವನ್ನು ಮರಳಿ ಕಟ್ಟುವ ದೊಡ್ಡ ಪ್ರಯತ್ನ ನಡೆಯುತ್ತಿದ್ದು, ಭುವಜನತಾಂಗವು ಇದರಲ್ಲಿ ಸಹಕಾರ ನೀಡುತ್ತಿದೆ ಎಂದವರ ಅಭಿಪ್ರಾಯ. ಆದರೆ ಅಲ್ಲಿ ಕಮ್ಯೂನಿಸ್ಟ್ ರಾಷ್ಟ್ರಗಳಿಗೆ ವಿಶಿಷ್ಟವಾದ ಸುದ್ದಿ ನಿಯಂತ್ರಣ ಮುಂತಾದ ಕ್ರಮಗಳಿವೆ ಎಂದೂ ನೆಹರೂ ಹೇಳಲು ಹಿಂದಿರಿಯಲಿಲ್ಲ. ತಮ್ಮ ಚೀನ ವಾಸ್ತವ್ಯದ ಕಾಲದಲ್ಲಿ ಜಗತ್ಪಿನ ಸುದ್ದಿಗಳನ್ನು ರಾಯಭಾರಿ ಕಚೇರಿಗೆ ಬರುವ ಕೇಬಲುಗಳ ಮೂಲಕವೇ ತಿಳಿಯಬೇಕಾಯಿತು; ಅಲ್ಲಿಯಸಕ್ರಿಗೆಗಳುಸುದ್ದಿ ನಿಯಂತ್ರಣಕ್ಕೊಳಗಾಗಿದ್ದು, ಸರಕಾರವನ್ನು ಛಾರತದ ಪತ್ರಿಕೆಗಳಂತೆ ಟೀಕಿಸಲು ಸಾಧ್ಯವಿಲ್ಲ ಇತ್ಯಾದಿ ಸಂಗತಿಗಳನ್ನೂ ಅವರು ತಿಳಿಸಿದರು.

ಈಡನರ ಕುತೂಹಲ

ಅನೇಕರಿಕೆಯ ಕೆಲವು ಪತ್ರಿಕೆಗಳು ನೆಹರು ನಿರಾಶರಾಗಿ ಮರಳಿದರು ಎಂದು ಮುಂಚಾಗಿ ಬರೆದಿದ್ದರೂ, ಸ್ವತಃ ನೆಹರುಗಳು ಹಾಗೆ ಛಾವಿಸಿದಂತೆ ಕಾಣುಬಂದಿಲ್ಲ. ಯುದ್ಧವಾಗಲಾರದೆಂದು ಯಾರೂ ''ಗ್ಯಾರಂಟಿ'' ಕೊಡುವುದು ಸಾಧ್ಯವಿಲ್ಲ; ಸಹಜೀವನದ ಪಂಚ ತತ್ವಗಳನ್ನು ಆಸುರಸುವುದೂ ಬಹುವುದೂ ಆಯಾ ರಾಷ್ಟ್ರಗಳನ್ನು ಹೊಂದಿಕೊಂಡಿದೆ. ಸಂಶಯದ ಮಾತನ್ನೆ ಆಡುತ್ತ ಹೋಗುವುದರಿಂದ ಪ್ರಯೋಜನವಾಗಲಾರದೆಂದಿಷ್ಟೇ ಹೇಳಬಹುದು - ಎಂದು ನೆಹರುಗಳ ಮಾತಿನ ಸಾರಾಂಶ. ಚೀನಕ್ಕೆ ಜಾಗತಿಕ ರಂಗದಲ್ಲಿ ಯೋಗ್ಯ ಸ್ಥಾನಮಾನವನ್ನು ಕಲ್ಪಿಸಿಕೊಡಬೇಕೆಂದು ಅವರು ಹೇಳುತ್ತಿದ್ದು, ಈ ವಿಷಯದಲ್ಲಿ ಬ್ರಿಟಿಷ ವಿದೇಶಾಂಗ ಸಚಿವ ಈಡನ್ನರಿಂದ ಸಾಕಷ್ಟು ಸಹಾಯವಾದೀತು. ನೆಹರುಗಳ ಯಾತ್ರೆಯಲ್ಲಿ ಒಳ್ಳೆಯ ಆಸಕ್ತಿಯನ್ನು ವಹಿಸಿದವರಲ್ಲಿ ಈಡನ್ನರು ಒಬ್ಬರೆಂದು ತಿಳಿದು ಬರುತ್ತದೆ. ನೆಹರುಗಳು ದಶಂಬರ ತಿಂಗಳಲ್ಲಿ ಜಕಾರ್ತದಲ್ಲಿ ಸೇರುವ ಕೊಲೊಂಬೋ ರಾಷ್ಟ್ರಗಳ ಸಭೆಗೂ ಜನವರಿ ತಿಂಗಳಲ್ಲಿ ಲಂಡನಿನಲ್ಲಿ ಸೇರುವ ಕಾಮನ್ವೆಲ್ತ್ ರಾಷ್ಟ್ರಗಳ ಪರಿಷತ್ತಿಗೂ ಹೋಗಲಿದ್ದು, ಅಲ್ಲಿ ಚೀನದ ಸ್ವಂತ ಅನುಭವಗಳನ್ನು ಜಾಗತಿಕ ರಾಜಕೀಯದ ಹಿನ್ನೆಲೆಯಲ್ಲಿ ಪುನಃ ವಿವರಿಸಬಹುದು.

ಪರ್ವತಾರೋಹಣ ಕಲೆ

ರಾಜಧಾನಿಗೆ ಮರಳುವ ಪೂರ್ವದಲ್ಲಿ ದಾರ್ಜಲಿಂಗಿನಲ್ಲಿ ನೆಹರುಗಳು ಪರ್ವತಾರೋಹಣದ ಶಿಕ್ಷಣವೀಯುವ ಸಂಸ್ಥೆಯೊಂದರ ಅಡಿಗಲ್ಲನ್ನು ಇಟ್ಟರು. ಕಾಂಚನ ಗಂಗಾ ಪರ್ವತದ ಭವ್ಯ ಹಿನ್ನೆಲೆಯನ್ನು ಹೊಂದಿದ ಸಭಾಂಗಣದಲ್ಲಿ ನೆಹರುಗಳನ್ನೂ ಇತರ ಅತಿಥಿಗಳನ್ನೂ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಗಳು ಸ್ವಾಗತಿಸಿ, ಹೊಸ ಕೇಸಿಂಗನು ಈ ಸಂಸ್ಥೆಯ ಮೂಲಕ ಬೆಳಕಿಗೆ ಬರಲೆಂದು ಹಾರೈಸಿದರು. ನೆಹರುಗಳು ತಮ್ಮ ಛಾಷಣದಲ್ಲಿ ಬಲಿಷ್ಠ ರಾಷ್ಟ್ರವಾಗಿ ಛಾರತವನ್ನು ರೂಪಿಸುವಲ್ಲಿ ಹಿಮಾಲಯವು ನಮಗೆ ಆದರ್ಶವಾಗಲಿ; ಮಾನಸಿಕ ಹಾಗು ಶಾರೀರಿಕ ಬಲವನ್ನು ಸಂವಾದಿಸಲು ಯುವಕರು ಈ ಸಂಸ್ಥೆಯನ್ನು ಉಪಯೋಗಿಸಲಿ ಎಂದರು. ಧೈರ್ಯ, ಸಾಹಸ, ಶಿಸ್ತುಗಳನ್ನು ಪರ್ವತಾರೋಹಣ ಕಲೆಯು ಪೋಷಿಸಿ, ಸಂವರ್ಧಿಸುವುದೆಂದು, ಛಾರತದ ಸೈನ್ಯ ಪಡೆಯೂ ಇತರರೊಂದಿಗೆ ಈ ಸಂಸ್ಥೆಯ ಪ್ರಯೋಜನವನ್ನು ಪಡೆಯಲಿರುವುದು. ತೇನ ಸಿಂಗರೂ ಸೈನ್ಯ ಪಡೆಯ ಅಧಿಕಾರಿಯಾಗಿ ಅನುಭವ ಸಂಪಾದಿಸಿದ ಮೇಜರ ದಯಾಳರೂ ಸಂಸ್ಥೆಗೆ ಮಾರ್ಗದರ್ಶನ ನೀಡುವರು. ತೇನಸಿಂಗರ ಪುಸ್ತಕವನ್ನು ನಿಲ್ಲಿಸಿ, ಸ್ಮಾರಕ ರಚಿಸುವ ಬದಲು ಇಂಥ ಸಂಸ್ಥೆಯನ್ನು ಸ್ಥಾಪಿಸಿ ನಡೆಸುವುದೇ ಉಚಿತವೆಂಬ ವಿಚಾರದ ಶ್ರೇಯಸ್ಸು ಶ್ರೀ ರಾಯರಿಗೆ ಸಲ್ಲುತ್ತದೆ.

ಕೇಂದ್ರ ಮಂತ್ರಿ ಮಂಡಲ

ಕಲ್ಕತ್ತೆಯಲ್ಲಿ ಬಾದಿಲಿದೊಡನೆಯೇ ರಫಿಯವರಿಲ್ಲದೆ ಹೇಗೆ ರಾಜ್ಯ ಸೂತ್ರವನ್ನು ನಡೆಸಲಿ ಎಂದು ಕಂಬನಿಗರೆದ ನೆಹರುಗಳು ಹೊಸ ದೆಹಲಿಗೆ ಮರಳಿದ ಬಳಿಕ ಮಂತ್ರಿ ಮಂಡಳದ ಪುನರ್ಘಟನೆಯ ವಿಚಾರ ಮಾಡುತ್ತಿರುವರೆಂದು ತಿಳಿದು ಬರುತ್ತದೆ. ತಮ್ಮ ಮೇಲಿನ ಭಾರವನ್ನು ಇಳಿಸಿ ಕೊಳ್ಳುವ ಹಾಗು ರಫಿಯವರ ಸ್ಥಾನವನ್ನು ತುಂಬಿಸುವ ಉದ್ದೇಶದಿಂದ ಇಬ್ಬರು ಅಥವಾ ಮೂವರು ಹೊಸ ಮಂತ್ರಿಗಳನ್ನು ಅವರು ನೇಮಿಸುವ ಸಂಭವ ಕಂಡುಬರುತ್ತದೆ. ಕಾಂಗ್ರೆಸು ಕಾರ್ಯಸಮಿತಿಯು ನೆಹರುಗಳು ಕಾಂಗ್ರೆಸಿನ ಅಧ್ಯಕ್ಷಸ್ಥಾನದ ಜವಾಬ್ದಾರಿಯನ್ನು ಇಳಿಸಿಕೊಳ್ಳಬಹುದೆಂದು ಒಪ್ಪಿದ್ದರೂ ಪ್ರಧಾನ ಮಂತ್ರಿ ಸ್ಥಾನದಿಂದ ತಾತ್ಕಾಲಿಕವಾಗಿಯಾದರೂ ವಿಶ್ರಾಂತಿ ಹೊಂದಲಾಗದೆಂದು ಹೇಳಿದ್ದ ನೆಹರುಗಳು ಈ ಸಲಹೆಯನ್ನು ಮನ್ನಿಸದೇಕಾಗುತ್ತದೆ.

ಕಾಂಗ್ರೆಸಿನ ಅಧ್ಯಕ್ಷ ಸ್ಥಾನ

ಅವಡಿಯಲ್ಲಿ ನಡೆಯುವ ಕಾಂಗ್ರೆಸಿನ ಅಧಿವೇಶನಕ್ಕೆ ಯಾರು ಅಧ್ಯಕ್ಷರಾಗಬಹುದೆಂಬ ವಿಷಯದಲ್ಲಿ ಕಾಂಗ್ರೆಸು ಸಮಿತಿಯು ಇಬ್ಬರು ಮೆಹನೀಯರ ಉಮೇದ್ವಾರಿಕೆಯನ್ನು ಪರಿಶೀಲಿಸಿತು. ಶ್ರೀ ಬೇರರ ಹೆಸರಿಗೆ ಬೆಂಬಲ ಕಂಡುಬಂದರೂ ಅವರೇ ಹೊಣೆಗಾರಿಕೆಯನ್ನು ಹೊತ್ತುಕೊಳ್ಳಲು ನಿರಾಕರಿಸಿದರು ಆದುದರಿಂದ ಸೌರಾಷ್ಟ್ರದ ಮುಖ್ಯ ಮಂತ್ರಿಯಾಗಿರುವ ದೇಭಾರರನ್ನು ಅಧ್ಯಕ್ಷಸ್ಥಾನಕ್ಕೆ ಸಿಫಾರಸು ಮಾಡಲು ಕಾರ್ಯಕಾರಿ ಸಮಿತಿಯು ತೀರ್ಮಾನಿಸಿತು. ದೇಭಾರರನ್ನು ಒಪ್ಪಿಸುವುದೂ ಸಮಿತಿಗೆ ಸುಲಭವೆನಿಸಲಿಲ್ಲ. ರಾಷ್ಟ್ರದ ಆಗು ಹೋಗುಗಳಲ್ಲಿ ಪ್ರತ್ಯಕ್ಷ ರೀತಿಯಲ್ಲಿ ಮಹತ್ವದ ಪಾತ್ರ ವಹಿಸುವ ಸಂಸ್ಥೆಯ ಕರ್ಣಧಾರರಾಗಿರಲು ಕಷ್ಟವಾದೀತೆಂದು ಆನರು ಮೊದಲು ಅಂಜಿ, ಹಿಂಜರಿದರೆರು ಈಗ ನಿರ್ಣಯಿಸಿದಂತೆ, ಕಾಂಗ್ರೆಸಿನ ಬಹಿರಂಗ ಅಧಿವೇಶನವು ೪೦ರಿನ ಜನವರಿ ತಿಂಗಳಿಂದ ಮಿಂಚಿನ ವರೆಗೆ ನಡೆಯುತ್ತದೆ. ಅದಕ್ಕೆ ಮುಂಚೆ ೧೭, ೧೮ ಮತ್ತು ೧೯ನೇ ತಾರೀಕುಗಳಲ್ಲಿ ಕಾರ್ಯಕಾರಿ ಸಮಿತಿಯ ಸಭೆಯೂ ೧೯ ಮತ್ತು ೨೦ನೇ ತಾರೀಕು ವಿಷಯನಿಯಾಮಕ ಸಭೆಯೂ ಅವಡಿಯಲ್ಲಿ ಸೇರುತ್ತದೆ.

ರಾಜಸ್ಥಾನ ಕಾಂಗ್ರೆಸು

ಕಾಂಗ್ರೆಸು ಕಾರ್ಯಕಾರಿ ಸಮಿತಿಯ ಮೊನ್ನಿನ ಸಭೆಯಲ್ಲಿ ಆಂಧ್ರದಲ್ಲಿ ಮಂತ್ರಿ ಮಂಡಳವು ಪತನ ಹೊಂದಿದ ಬಗೆಯನ್ನು ಶ್ರೀ. ಸಂಜೀವ ರೆಡ್ಡಿಯವರು ವಿವರಿಸಿದರು ಸಮಿತಿಯ ಮುಂದೆ ರಾಜಸ್ಥಾನದ ಕಾಂಗ್ರೆಸು ಪಕ್ಷದಲ್ಲಿನ ಒಡಕೂ ಪರಿಶೀಲಿಸಿಕ್ಕಿದ್ದಿತು. ಅಲ್ಲಿ ಮುಖ್ಯ ಮಂತ್ರಿ ಶ್ರೀ. ಜಯ ನಾರಾಯಣ ವ್ಯಾಸರೊಡನೆ ಶಾಸನ ಸಭೆಯ ಕಾಂಗ್ರೆಸು ಪಕ್ಷದ ಗುಂಪೊಂದು ವಿರೋಧವನ್ನು ವ್ಯಕ್ತಪಡಿಸಿ, ಕಂದಾಯ ಮಂತ್ರಿಗಳಾದ ಶ್ರೀ. ಮೋಹನಲಾಲ ಸುಖಾದಿಯಾರನ್ನು ಹೊಸ ಧುರೀಣರಾಗಿ ಆರಿಸಿ ತಂದುದು. ಪಕ್ಷದಲ್ಲಿ ತಮ್ಮ ಬಹುಸ್ಯನ್ನು ಕಾಯ್ದುಕೊಳ್ಳುವ ಉದ್ದೇಶದಿಂದ ಮಂತ್ರಿ ಮಂಡಳದ ವಿಸ್ತರಣೆ ಮಾಡಲು ವ್ಯಾಸರು ಆತಿಸುತ್ತಿರುವರೆಂದು ತಿಳಿದು ಬರುತ್ತದೆ. ಕೇಂದ್ರ ಕಾಲಿನೆಂಟರಿ ಬೋರ್ಡು, ಸಪಸ್ಯರ ವಿಶ್ವಾಸವನ್ನು ಮೊದಲಾಗಿ ಸಂಪಾದಿಸುವುದೊಳಿತೆಂದೆ, ಸಲಹೆ ಮಾಡಿತು. ವಿಶ್ವಾಸ ಪರೀಕ್ಷೆಯನ್ನು ಕಾಂಗ್ರೆಸು ಕಾರ್ಯದರ್ಶಿ ಶಿಗರ್ಜಾಲರ ನೇತೃತ್ವದ ಮತದಾನದ ಮೂಲಕ ನಡೆಸಿದಾಗ, ವ್ಯಾಸರ ಸರಾಜಯ ಹೊಂದಿದ

(೨ನೇ ಪುಟ ನೋಡಿರಿ)

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಸ್ತ್ರೀ ಸುಧ

ಸ್ತ್ರೀಯರ ಸಮಸ್ತ ವ್ಯಾಧಿಗಳಿಗೆಗೆ ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸರ್ವಸ್ತ ಗರ್ಭಾಶಯ ವ್ಯಾಧಿಗಳನ್ನು, ಯಕ್ತು ದೋಷಗಳನ್ನು, ಮುತು ಕೊಲೆ, ಸರಿಯಾಗಿ ಬಟಿಷ್ಟೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು. ಸಂತಾನವನ್ನು ಕಲಿಸುವುದು. ಒಂದು ತಿಂಗಳಿಗೆ ಸರಿ ಹೋಗುವ ೧ ತೊಲದ ಬೆಸಳಿ ರೂ. ೪-೦-೦

ನಮ್ಮ ಸ್ಥಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲ— ಬೆಂಗಳೂರು-2.
(2) ಹಾ ಕಂಪೆನಿ—ಮಂಗಳೂರು-1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

NAVAYUGA
Popular Kannada Weekly
Founder:—
Sri **A. B. SHETTY**, *M.L.A.*
Minister for Public Health, Govt. of Madras.

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೪	ಉಡುಪಿ ೧೧-೧೧-೨೫೪೪	ಸಂಚಿಕೆ ೧೧

ಗೋಧನದ ಸಂವರ್ಧನೆ

ಕೃಷಿ ಪ್ರಧಾನವಾದ ನಮ್ಮ ದೇಶದಲ್ಲಿ ಗೋ ಸಂಪತ್ತಿಗಿರುವ ಮಹತ್ವವನ್ನು ಕುರಿತು ಕಳೆದ ವಾರ ರಾಷ್ಟ್ರಪತಿ ರಾಜೇಂದ್ರ ಪ್ರಸಾದ, ಪ್ರಧಾನ ಮಂತ್ರಿ ಜವಾಹರಲಾಲ ನೆಹರು, ಕೃಷಿ ಮಂತ್ರಿ ಪಂಜಾಬರಾವ ದೇಶಮುಖ ಮುಂತಾದವರು ವಿಚಾರ ಗರ್ಭಿತವಾದ ಕೆಲವು ಮಾತುಗಳನ್ನು ಆಡಿದರು. ನಮ್ಮಲ್ಲಿ ಗೋಹತ್ಯೆ ಮಾಡುವುದು ಪ್ರಾಚೀನ ಕಾಲದಿಂದ ನಡೆದುಬಂದ ಸಂಪ್ರದಾಯವಾಗಿದೆ. ಆದರೆ ಇಂದು ಉದಾತ್ತವಾದ ಈ ಪರಂಪರೆಯ ಹಿಂದಿನ ಮನೋಭಾವ ಮಾತ್ರ ಮರೆತೇ ಹೋಗಿದೆ. ಪರಿಣಾಮವಾಗಿ ಗೋಸಂಹಾರ ಯನ್ನು ಮಾಡುವ ಪದ್ಧತಿಯೇ ಕಂಡು ಬರದ ರಾಷ್ಟ್ರಗಳಲ್ಲಿನದಕ್ಕಿಂತ ನಮ್ಮ ಜಾನುವಾರು ಸಂಪತ್ತು ತೀರ ನಿಕೃಷ್ಟಾವಸ್ಥೆಯನ್ನು ಮುಟ್ಟಿದೆ ಎಂದು ಇವರೆಲ್ಲರ ಒಟ್ಟು ಅಭಿಪ್ರಾಯ. ಲೋಕದ ಕಾಲ್ನಡಿಗೆಗಳ ನಾಲ್ಕರಲ್ಲಿ ಒಂದು ಪಾಲಿನಷ್ಟು ನಮ್ಮ ದೇಶದಲ್ಲಿ ತುಂಬಿದ್ದರೂ ಪಾಲು ಕರೆಯುವ ಪ್ರಶ್ನೆ ಬಂದಾಗ ನಮ್ಮ ಹಸುಗಳು ಇತರರೆಯ ದನಗಳಿಗಿಂತ ತುಂಬ ಕಡಿಮೆ ಪ್ರತಿಫಲವನ್ನು ನೀಡುತ್ತವೆ—ಅಂದರೆ ಒಟ್ಟು ಹಾಲಿನ ಉತ್ಪಾದನೆಯಲ್ಲಿ ಹತ್ತರಲ್ಲಿ ಒಂದು ಪಾಲು ಮಾತ್ರ ನಮ್ಮದು; ಎತ್ತುಗಳ ವಿಷಯದಲ್ಲೂ ಇದೇ ಮಾತು ಅನ್ವಯಿಸುತ್ತದೆ— ಹೆಗಲಿಗೇರಿಸಿದ ನೊಗವನ್ನು ಹೊತ್ತುಕೊಂಡು ನೇಗಿಲನ್ನೆಳೆದು ಗದ್ದೆಯಲ್ಲಿ ನಡೆಯುವ ಸಾಮರ್ಥ್ಯ ನಮ್ಮ ಎತ್ತುಗಳಲ್ಲಿ ಇದ್ದಂತಿಲ್ಲ. ಅವೆಲ್ಲ ತೀರ ಬಡಕಲು, ಮತ್ತು ಪ್ರಯೋಜನಕ್ಕೆ ಬಾರದ ಜಾತಿಗೆ ಸೇರಿದವುಗಳು. ಇವುಗಳನ್ನು ಮನೆಯಲ್ಲಿ ಇಟ್ಟುಕೊಂಡು ಸಾಕುವ ಹೊಣೆಯನ್ನು ಹೊತ್ತುಕೊಳ್ಳುವವರು ಯಾರು? ಆದುದರಿಂದ, ಇಂಥವುಗಳಲ್ಲಿ ಹೆಚ್ಚಿನವು ಹುಟ್ಟಿಯ ಹೊಂಗಯೇ ತಿರುಗುತ್ತಿರುತ್ತವೆ; ಅಥವಾ ಕಟುಕರ ಕೈಗೆ ಸಿಗುತ್ತವೆ. ಮಾಂಸ ತಯಾರಿಕೆಗಿಂತಲೂ ಚರ್ಮದ ಆಶೆಯಿಂದ ಅವುಗಳನ್ನು ನಾಲ್ಕಾರು ರೂಪಾಯಿಗಳ ಪ್ರತಿಫಲಕ್ಕೆ ಮಾರಾಟ ಮಾಡುವುದೂ ಕಂಡು ಬರುತ್ತದೆ. ಇದನ್ನು ತಡೆಗಟ್ಟುವುದಕ್ಕೆ ಹಿಂದು ಮಹಾ ಸಭೆ ಮುಂತಾದ ಪಕ್ಷಗಳವರು ಹೇಳುವಂತೆ ಶಾಸನವನ್ನು ಮಾಡಿದಷ್ಟಕ್ಕೆ ನಮ್ಮ ಕರ್ತವ್ಯವನ್ನು ನಿರ್ವಹಿಸಿದ ಸಮಾಧಾನ ದೊರಕುತ್ತದೆಯೆ? ಇಲ್ಲವೆಂದೇ ಹೇಳಬೇಕಾಗುವುದು. ಶಾಸನದ ಬಲದಿಂದ ದನಗಳ ಕೊಲೆಯಾಗುವುದನ್ನು ತಪ್ಪಿಸಬಹುದು—ಆದರೆ ಅವುಗಳ ಹೊಟ್ಟೆಗೆ ಹಾಕಿ ಸೋಷಿಸುವುದಕ್ಕೆ ಇದು ಪರಿಣಾಮಕಾರಿಯಾದ ಉಪಾಯವಾಗಲಾರದು. ಕಟುಕರ ಕೈಯಲ್ಲಿ ನಾಶವಾಗುವ ದನಗಳು ಹಟ್ಟಿಯಲ್ಲಿಯೇ ಸೊರಗಿ ಪ್ರಾಣ ಬಿಡುವಂಥ ಪರಿಸ್ಥಿತಿ ನಿರ್ಮಾಣವಾದರೆ ಅದರಿಂದ ಏನು ಸಿದ್ಧಿಸಿದಂತಾಯಿತು? ಆದುದರಿಂದ ವಿಧಾಯಕ ಮಾರ್ಗಗಳನ್ನೆ ನಾವು ಕೈಗೊಳ್ಳಬೇಕಾಗುತ್ತದೆ. ರಾಜಕೀಯ ದುರುದ್ದೇಶದಿಂದ ಕೂಡಿದ ಗೋಹತ್ಯಾ ಪ್ರತಿಬಂಧ ಆಂದೋಲನದಲ್ಲಿ ಜನರು ಧುಮುಕುವ ಬದಲು ಗೋ ಸಂಪತ್ತನ್ನು ಉಳಿಸಲೂ ಬೆಳೆಸಲೂ ನೆರವಾಗುವ ರಚನಾತ್ಮಕ ಕಾರ್ಯಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸಬೇಕೆಂದು ಧುರೀಣರು ಹೇಳಿರುವುದನ್ನು ನಾವು ಇಲ್ಲಿ ನೆನೆಯುವುದೊಳಿತು. ಜಾನುವಾರ ಗಳ ಪೋಷಣೆಯನ್ನು ಒಳ್ಳೆಯ ರೀತಿಯಲ್ಲಿ ಮಾಡಲಾಗುವಂತೆ ಜನತೆಗೆ ಶಿಕ್ಷಣವೀಯುವ ಹಾಗು ಸಲಹೆ ಸೂಚನೆಗಳನ್ನಿತ್ತು ನೆರವಾಗುವಳಿಂ ಗ್ರಾಮ ಕೇಂದ್ರಗಳನ್ನು ಸರಕಾರದವರು ತೆರೆದಿರುವುದು ರಚನಾತ್ಮಕ ಕೆಲಸಗಳ ದಿಸೆಯಲ್ಲಿಟ್ಟ ಮೊದಲ ಹೆಜ್ಜೆಯಾಗಿದೆ. ಇನ್ನೆರಡು ವರ್ಷಗಳಲ್ಲಿ ಈ ಗ್ರಾಮ ಕೇಂದ್ರಗಳ ಸಂಖ್ಯೆ ಆರು ನೂರಕ್ಕೆ ಏರಿಸಲ್ಪಡುತ್ತದೆ. ಜಾನುವಾರುಗಳ ತಳಿ ಸುಧಾರಣೆ, ಪೋಷಣೆ, ರೋಗೋಪಶಮನ, ಹೈನೋತ್ಪತ್ತಿಯ ಮುಂತಾದ ಹಲವು ವಿಷಯಗಳಲ್ಲಿ ಈ ಕೇಂದ್ರಗಳು ಆಸಕ್ತಿ ವಹಿಸುತ್ತವೆ. ಇವಲ್ಲದೆ ದೇಶದಲ್ಲಿ ಸಾವಿರಾರು ಗೋಶಾಲೆಗಳಿದ್ದು, ಅವುಗಳಲ್ಲಿ ಆರು ಲಕ್ಷ ಕಾಲ್ನಡಿಗೆಗಳು ಇವೆಯೆಂದು ಹೇಳಲಾಗುತ್ತದೆ. ಆ ಗೋಶಾಲೆಗಳಿಗೆ ವಿಸ್ತಾರವಾದ ಉಲ್ಲುಗಾವಲನ್ನು ಒದಗಿಸಿ ಕೊಡುವುದೂ ಪೋಷಕ ಆಹಾರಗಳನ್ನು ನೀಡುವುದೂ ತಮ್ಮ ಕರ್ತವ್ಯವೆಂದು ಸಮಾಜದ ಸ್ಥಿತಿವಂತರು ಭಾವಿಸಿದರೆ ಅದರಿಂದ ಗೋಧನದ ಸಂವರ್ಧನೆಗೆ ಬಹಳ ಪ್ರಯೋಜನವಾದೀತು. ರಾಷ್ಟ್ರೀಯ ಆರೋಗ್ಯ ರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸುವ ಹಾಲು ಬೆಣ್ಣೆ ತುಪ್ಪ ಮುಂತಾದವುಗಳನ್ನೊದಗಿಸುವ ಮತ್ತು ಕೃಷಿಗೆ ನೆರವಾಗುವ ಜಾನುವಾರು ಸಂಪತ್ತನ್ನು ಎಷ್ಟರ ಮಟ್ಟಿಗೆ ಪೋಷಿಸಿಕೊಂಡು ಬರುತ್ತೇವೋ ಅಷ್ಟು ನಾವು ಸುಖಿಗಳಾಗುತ್ತೇವೆ ಎಂಬುದನ್ನು ಮರೆಯ ಬಾರದು.

ಆಂಧ್ರದ ಭವಿಷ್ಯ

ಪ್ರಕಾಶಮರ ಮಂತ್ರಿಮಂಡಳವು ರಾಜೀನಾಮೆಯನ್ನು ಕೊಡಬೇಕಾಗಿ ಬಂದ ಪ್ರಸಂಗವು ಭವ್ಯವಾದ ಭಾರತವನ್ನು ಕಟ್ಟಬೇಕೆಂಬ ಅಭಿಲಾಷೆ ಉಳ್ಳವರಿಗೆ ಚಿಂತೆಯನ್ನು ಹುಟ್ಟಿಸುತ್ತದೆ, ಮಧ್ಯಪಾನ ಪ್ರತಿಬಂಧದ ಒಳಿತುಕೆಡುಕುಗಳನ್ನು ಜನ ಹಿತದ ದೃಷ್ಟಿಯಿಂದ ವಿವೇಚನೆ ಮಾಡದೆ, ಸರಕಾರದ ಮೇಲೆ ಸೇಡು ತೀರಿಸಿಕೊಳ್ಳಲು ಪ್ರತಿಪಕ್ಷ ದನರು ರಾಮಮೂರ್ತಿ ಸಮಿತಿಯ ಸಿಫಾರಸುಗಳನ್ನು ಸಾಧನವಾಗಿ ಮಾಡಿಕೊಂಡರು. ರಾಜ್ಯಾಂಗ ಘಟನೆಯು ಮದ್ಯಪಾನವನ್ನು ಪ್ರತಿಬಂಧಿಸುವುದು ಸರಕಾರದ ಆದರ್ಶವಾಗಬೇಕೆಂದು ಹೇಳಿರುವುದನ್ನು ಪ್ರತಿಪಕ್ಷ ದನರು ಗಮನಿಸಿದಂತೆ ಕಾಣುವುದಿಲ್ಲ. ಸರಕಾರವನ್ನು ಇಲ್ಲಿಯವರೆಗೆ ಜೊಂಬಲಿಸುತ್ತಿದ್ದ ಇಬ್ಬರು ಕಾಂಗ್ರೆಸಿಗರೂ ಮತ್ತಿಬ್ಬರು ಪ್ರಜಾಪಕ್ಷದ ಸದಸ್ಯರೂ ಆಯಕಟ್ಟಿನ ಮೇಳೆಯಲ್ಲಿ, ಪ್ರತಿಪಕ್ಷದವರ ಅವಿಶ್ವಾಸ ಸೂಚಕ ಗೊತ್ತುವಳಿಗೆ ಬೆಂಬಲವಿತ್ತರು. ಇದು ಪರಮ ಅನ್ಯಾಯವೆಂದೂ ಪಕ್ಷ ದ್ರೋಹವೆಂದೂ ಹೇಳಿದರೆ ಅತಿಶಯೋಕ್ತಿಯಾಗದು. ಯಾವ ರಾಜಕೀಯ ಪಕ್ಷವೇ ಆಗಲಿ, ಇಂಥ ದ್ರೋಹಿಗಳಿಗೆ ಅವಕಾಶವನ್ನು ಕಲ್ಪಿಸಿಕೊಡತಕ್ಕದ್ದಲ್ಲ. ಪಕ್ಷದ ಪಾವಿತ್ರ್ಯ ರಕ್ಷಣೆಗೆ ಸಾಕಷ್ಟು ಮಹತ್ವವನ್ನು ಸಲ್ಲಿಸುವುದೇ ಧುರೀಣರ ಕರ್ತವ್ಯ. ಪರೀಕ್ಷಾ ಪ್ರಸಂಗದಲ್ಲಿ ಸರಕಾರದ ಕೊರಳು ಕೊಯ್ದವರು ನಾಡಿಗೆ ಒಳಿತುಮಾಡಿದರೆ? ಎಂಬುದಿಲ್ಲಿ ವಿಚಾರಣೀಯವಾದ ಅಂಶ—ಇದಕ್ಕೆ ನಿಶ್ಚಯವಾಗಿಯೂ ಇಲ್ಲವೆಂಬ ಉತ್ತರವೇ ಬರುತ್ತದೆ. ಕೇವಲ ಒಂದು ಬಹುಮತದಿಂದ ಸರಕಾರವನ್ನು ಸೋಲಿಸಿದ ಪ್ರತಿ ಪಕ್ಷದವರು ಒಗ್ಗಟ್ಟನ್ನು ಮುಂದಕ್ಕೂ ಕಾಯ್ದುಕೊಳ್ಳುತ್ತೇವೆಂಬ ಭರವಸೆ ಕಾಣುವುದಿಲ್ಲ. ಈಗಾಗಲೇ ಶ್ರೀ ರಾಜುರ ಮುಂದಾಳುತನದಲ್ಲಿರುವ ಪ್ರಜಾ ಸಮಾಜವಾದಿಗಳು ಹೊಸ ಚುನಾವಣೆಯಾಗಲೆಂದು ಹೇಳುತ್ತಿದ್ದಾರೆ. ಆದುದರಿಂದ ಪ್ರತಿ ಪಕ್ಷದವರಿಗೆ—ಮುಖ್ಯವಾಗಿ ಕಮ್ಯುನಿಸ್ಟರಿಗೆ—ನಿರಾಶೆಯೇ ಅದೀತು; ಮತ್ತು ಹೊಸ ಚುನಾವಣೆಗಳನ್ನು ನಡೆಸುವುದೇ ಸಮಸ್ಯೆಯನ್ನು ಬಗೆಹರಿಸುವ ಉಪಾಯವೆನಿಸೀತು. ಹೊಸ ಚುನಾವಣೆಯಲ್ಲಿ ಕಾಂಗ್ರೆಸು ಹಾಗು ಪ್ರಕಾಶಂ ಮಂತ್ರಿ ಮಂಡಳದ ಪಕ್ಷವಾಗಿ ಜನರ ಧ್ವನಿಗೆ ಅಸಂದಿಗ್ಧ ಬಹುಮತದ ಬೆಂಬಲವು ದೊರೆತರೆ, ಇನ್ನು ನರಿಗಿನ ಹದಿಮೂರು ತಿಂಗಳ ಅಳಕೆಗೊಂದು ರೂಪು ಬಂದೀತು, ಇಲ್ಲದಿದ್ದರೆ, ಎಲ್ಲವೂ ಬಿಡ ವೈಲಾಗುತ್ತದೆ. ಪ್ರಕಾಶಂ ಮಂತ್ರಿ ಮಂಡಳವು ಅಲ್ಪಾವಧಿಯ ಆಳಕೆಯಲ್ಲಿ ಅನೇಕ ಒಳಿತನ್ನು ಸಾಧಿಸಿರುವುದೆಂಬ ಅಂಶವನ್ನು ಮರಳಿ ಚುನಾವಣೆಯಲ್ಲಿ ಭಾಗ ವಹಿಸುವ ಮತದಾರರು ಗಮನದಲ್ಲಿಟ್ಟು ಕೊಂಡು, ಭವಿಷ್ಯದ ಏಳಿಗೆಗಾಗಿ ಮತದಾನ ಮಾಡಲಿ; ನೂರಕ್ಕೆ ಅರುವತ್ತರಷ್ಟಾದರೂ ಸ್ಥಾನವು ಕಾಂಗ್ರೆಸಿಗೆ ಸಿಗುವಂತೆ—ಮತಾಗೆ ಬೇಕಾದರೆ ಯಾವದಾದರೂ ಒಂದು ಪಕ್ಷಕ್ಕೆ ಸಿಗುವಂತೆ—ವಿವೇಕದಿಂದ ನಡೆದುಕೊಳ್ಳಲಿ ಎಂದು ಹಾರೈಸುತ್ತೇವೆ.

ಅಮೇರಿಕದ ಚುನಾವಣೆಗಳ ಪರಿಣಾಮ
ಡೆಮೊಕ್ರೇಟರ ಕೈಯಲ್ಲಿ ರಿಪಬ್ಲಿಕನ್ನರ ರಾಜ್ಯಸೂತ್ರ

ಕಳೆದ ವಾರದ ಮಹತ್ವದ ಘಟನೆಗಳಲ್ಲಿ ಅಮೇರಿಕದ ಕಾಂಗ್ರೆಸಿಗೆ ನಡೆದ ಚುನಾವಣೆಗೆ ಅಗ್ರಸ್ಥಾನ ಸಲ್ಲುತ್ತದೆ. ಪ್ರಜಾ ಪ್ರತಿನಿಧಿ ಸಭೆಗೂ ಸೀನೇಟಿಗೂ ಎರಡು ವರ್ಷಕ್ಕೊಮ್ಮೆ ನಡೆಯುವ ಈ ಚುನಾವಣೆಯ ಪರಿಣಾಮವು ಎಲ್ಲರೂ ನಿರೀಕ್ಷಿಸಿದಂತೆ ಅಧ್ಯಕ್ಷ ಐಸೆನ್‌ಹೋವರರನ್ನೂ ಅವರು ಧುರೀಣರಾಗಿರುವ ರಿಪಬ್ಲಿಕನ್ನ ಪಕ್ಷವನ್ನೂ ನಿರಾಶೆಗೊಳಿಸಿತು; ಅರ್ಥಾತ್, ಪ್ರತಿಪಕ್ಷದ ಡೆಮೊಕ್ರಾಟರೇ ಅಧಿಕ ಸಂಖ್ಯೆಯಲ್ಲಿ ಕಾಂಗ್ರೆಸಿನ ಮೇಲಿನೆರಡು ಮನೆಗಳಿಗೆ ಆರಿಸಿ ಬಂದರು.

ಸೀನೇಟಿನಲ್ಲಿ ರಿಪಬ್ಲಿಕನ್ನರಿಗೆ ೪೭ ಸ್ಥಾನಗಳೂ ಡೆಮೊಕ್ರಾಟರಿಗೆ ೪೮ ಸ್ಥಾನಗಳೂ ದೊರೆತವು. ಒಂದು ಸ್ಥಾನವು ಸ್ವತಂತ್ರರಿಗೆ ಹೋಗಿದ್ದು, ಅವರು ಡೆಮೊಕ್ರಾಟರೊಡನೆ ಸಹಕರಿಸುವರೆಂದು ತಿಳಿದು ಬರುತ್ತದೆ. ಪ್ರಜಾಪ್ರತಿನಿಧಿ ಸಭೆಯಲ್ಲಿ ಡೆಮೊಕ್ರಾಟರಿಗೆ ಇದಕ್ಕೂ ಸ್ವಲ್ಪವಾದ ಬಹುಮತ ದೊರಕಿದ್ದು ೨೦೫ ರಿಪಬ್ಲಿಕನ್ನರ ವಿರುದ್ಧ ೨೩೦ ಡೆಮೊಕ್ರಾಟರು ಆರಿಸಿ ಬಂದಿರುವರು.

ಐಕರಿಗೆ ಪೇಚು

ಐಕರ ಪಕ್ಷಕ್ಕೆ ಈಗ ಒದಗಿದ ಸೋಲು ಅನಿರೀಕ್ಷಿತವಾದುದೇನಲ್ಲ-ಎಕೆಂದರೆ, ಅಧಿಕಾರದಲ್ಲಿರುವ ಪಕ್ಷವನ್ನು ಟೀಕಿಸಿ, ಜನಪ್ರಿಯತೆಯನ್ನು ಗಳಿಸುವ ಸುಲಭವಾದ ಮಾರ್ಗವನ್ನು ಡೆಮೊಕ್ರಾಟರು ಅವಲಂಬಿಸಿ, ಅದರ ಪ್ರಯೋಜನವನ್ನು ಹೊಂದಲು ಸಾಧ್ಯವಾಯಿತು. ಅಮೇರಿಕದ ಘಟನೆಯು ಸ್ಪಷ್ಟಕಾರಿ, ಅಧ್ಯಕ್ಷ ಐಕರು ತನ್ನ ಸ್ಥಾನಕ್ಕೆ ಎರವಾಗುವುದಿಲ್ಲ-ಮುಂದಿನೆರಡು ವರ್ಷಗಳಲ್ಲೂ ಅವರೇ ಅಧ್ಯಕ್ಷರಾಗಿ ಉಳಿಯುವರು. ಆದರೆ, ಈ ಅವಧಿಯಲ್ಲಿ ಅವರ ಧ್ಯೇಯ ಧೋರಣೆಗಳ ಮೇಲೆ ಡೆಮೊಕ್ರೆಟರು ಬಲವಾದ ಹತೋಟಿಯನ್ನು ಇಡಬಹುದು. ಡೆಮೊಕ್ರೆಟರ ಆದರ್ಶಗಳಿಗೆ ಒಪ್ಪದ ಕೆಲಸಗಳಲ್ಲಿ ಅಧ್ಯಕ್ಷರು ಕೈ ಹಾಕುವುದು ಕಷ್ಟವಾದೀತು ಮುಖ್ಯವಾಗಿ ನಿರುದ್ಯೋಗ ಸಮಸ್ಯೆ, ಕೃಷಿ ಉತ್ಪನ್ನಗಳ ಬೆಲೆ ಮುಂತಾದ ಆಂತರಿಕ ವಿಷಯಗಳಲ್ಲೂ ವಿದೇಶಾಂಗ ನೀತಿಯಲ್ಲೂ ಡೆಮೊಕ್ರಾಟರು ಅಧ್ಯಕ್ಷರನ್ನು ಹೆಜ್ಜೆ ಹೆಜ್ಜೆಗೆ ಇದಿರಿಸಬಹುದು. ಐಕರು ರಾಜ್ಯಭಾರ ನಿರ್ವಹಣೆಯಲ್ಲಿ ಡೆಮೊಕ್ರಾಟರ ಸಹಕಾರವನ್ನು ಕೇಳಿದ್ದಾರೆ; ತನ್ಮೊಡನೆ ಮುಂದಾಗಿ ವಿಚಾರ ವಿನಿಮಯ ನಡೆಸಿದರೆ, ಯೋಗ್ಯ ಸಹಕಾರ ನೀಡಬಹುದೆಂದು ಡೆಮೊಕ್ರಾಟರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಇಂಥ ಸಹಕಾರವು ೧೯೫೮ನೇ ಇಸವಿಯಲ್ಲಿ ನಡೆಯುವ ಅಧ್ಯಕ್ಷರ ಚುನಾವಣೆಯಲ್ಲಿ ಡೆಮೊಕ್ರಾಟರಿಗೆ ಜಯ ಗಳಿಸಿಕೊಡುವುದಕ್ಕೆ ಅನುಕೂಲವಾದ ರೀತಿಯನ್ನು ಬಿಟ್ಟುಕೊಡಲಿಕ್ಕಿಲ್ಲವೆಂದು ಹೇಳಿದರೆ ಕವಿವಾಗಲಾರದು.

ರಾಷ್ಟ್ರ ಸಂಘದಲ್ಲಿ

ಸಂಯುಕ್ತ ರಾಷ್ಟ್ರ ಸಂಘದಲ್ಲಿ ದೀರ್ಘ ಕಾಲೀನ ಸತ್ಪರಿಣಾಮವನ್ನು ಮಾಡಬಲ್ಲ ಕೆಲವು ಸೂಚನೆಗಳನ್ನು ಕಳೆದ ವಾರ ಚರ್ಚಿಸಲಾಯಿತು ನಿಶ್ಶಸ್ತ್ರೀಕರಣದ ವಿಷಯದಲ್ಲಿ ಪಂಚರಾಷ್ಟ್ರಗಳು ತಮ್ಮ ಸಮಾಲೋಚನೆಗಳನ್ನು ಮುಂದುವರಿಸಬೇಕೆಂಬ ತತ್ವವನ್ನು ಒಪ್ಪಲಾಯಿತು. ಭಾರತದ ಪ್ರತಿನಿಧಿ ಶ್ರೀ ಕೃಷ್ಣ ಮೆನೋನ್ನರು ರಾಷ್ಟ್ರ ಸಂಘದ ಸದಸ್ಯತ್ವವನ್ನು ಬಯಸುವ ರಾಷ್ಟ್ರಗಳಿಗೆ ಪ್ರವೇಶ ನೀಡುವ ಅಥವಾ ಬಿಡುವ ವಿಷಯವನ್ನು ಕೊನೆಯದಾಗಿ ಇತ್ಯರ್ಥ ಮಾಡಲು ಭದ್ರತಾ ಮಂಡಳಿಕ್ಕೆ ಸೇರಿವ ರಾಷ್ಟ್ರಗಳ ಮಂತ್ರಿ ಅಥವಾ ಪ್ರತಿನಿಧಿಗಳ ಸಮಿತ್ತನ್ನು ನೇರೆಯಿಸಬೇಕೆಂಬ ಸಲಹೆ ಮಾಡಿದರು

ಈಗ ಎಳು ಕಮ್ಯುನಿಸ್ಟ ಪಕ್ಷದ ರಾಷ್ಟ್ರಗಳ ಪ್ರಬೇಶಕ್ಕೆ ಭದ್ರತಾ ಮಂಡಳದಲ್ಲಿ ಆಸಕ್ಯಕ ಬಹುಮತ ಸಿಕ್ಕಿಲ್ಲ. ೧೪ ಕಮ್ಯುನಿಸ್ಟೇತರ ರಾಷ್ಟ್ರಗಳಿಗೆ ಬಹುಮತ ದೊರೆತಿದ್ದರೂ ರಶಿಯಾ ತನ್ನ ಪ್ರತಿನಿಧಿವಾದಿಕಾರವನ್ನು ಪ್ರಯೋಗಿಸಿ, ತಡೆ ಹಾಕಿಗುವುದು. ಆಮೇರಿಕವು ಅಣುಶಕ್ತಿಯನ್ನು ಶಾಂತಿ ಕಾಲದ ಉಪಯೋಗಕ್ಕಾಗಿ ಬಳಸಲು ನಾಲ್ಕು ಅಂಶಗಳ ಒಂದು ಸೂಚನೆಯನ್ನು ಮುಂದಿಟ್ಟಿತು. ರಶಿಯವು ಈ ವಿಷಯದಲ್ಲಿ ಆಸಕ್ತಿಯನ್ನು ತೋರಿಸುತ್ತಿದ್ದರೂ ಕಮ್ಯುನಿಸ್ಟ ಚೀನಕ್ಕೆ ಆಮಂತ್ರಣ ವೈಜ್ಞಾನಿಕ ಪರಿಷತ್ತು ನೆರೆಯಿಸುವ ವಿಷಯವನ್ನು ಟೀಕಿಸದೆ ಬಿಡಲಾರದು.

ಮೊಸ್ಕೋದ ಉತ್ಸವ

೦ಶ್ಯದ ಕ್ರಾಂತಿಯ ಮೂವತ್ತೇಳನೆಯ ವಾರ್ಷಿಕೋತ್ಸವವನ್ನು ಮೊಸ್ಕೋದಲ್ಲಿ ಆಚರಿಸಲಾಯಿತು. ಅಭಿವೃದ್ಧಿ ಯೋಜನೆಗಳ ಮಂತ್ರಿ ಸಬರೋವರು ಈ ಸಂದರ್ಭದಲ್ಲಿ ವರದಿಯನ್ನೋದುತ್ತಾ, ಬಂಡವಾಳಶಾಹಿ ರಾಷ್ಟ್ರಗಳೊಡನೆ ಸಹ ಜೀವನವನ್ನು ನಡೆಸುವುದು ರಶ್ಯದ ಇಚ್ಛೆ ಎಂದರು. ಪಶ್ಚಿಮ ಜರ್ಮನಿಯೊಡನೆ ಪಾಶ್ಚಾತ್ಯ ರಾಷ್ಟ್ರಗಳು ಮಾಡಿಕೊಂಡ ಒಪ್ಪಂದವನ್ನು ಅವರು ಟೀಕಿಸಿದರು. ಸೈನ್ಯ ಬಲವನ್ನು ಸುದೃಢವಾಗಿಡಬೇಕೆಂದೂ ಜೇಳಲಾಯಿತು. ರಶಿಯದ ವಿದೇಶಾಂಗ ಸಚಿವರು ಝೂರ ಅರಸರ ಕಾಲದಲ್ಲಿ ಪ್ರಸಿದ್ಧಿ ಪಡೆದಿದ್ದ ನೃತ್ಯಗಾರವೊಂದರಲ್ಲಿ ವಿದೇಶಗಳ ರಾಯಭಾರಿಗಳೊಂದು ಔತಣವನ್ನು ಏರ್ಪಡಿಸಿದ್ದರು. ಇಲ್ಲಿ ಭಾರತದ ಕುರಿತು ವಿಶೇಷವಾದ ಗೌರವನ್ನು ಶ್ರದ್ಧಿಸಲಾಯಿತು. ಪಶ್ಚಿಮ ರಾಷ್ಟ್ರಗಳ ಪ್ರತಿನಿಧಿಗಳೊಡನೆಯೂ ಬಿಚ್ಚು ಮನಸ್ಸಿನ ಮಾತುಕತೆಯನ್ನು ನಡೆಸಲಾಯಿತು. ಆದರೆ ಇದು ಮೆಲಿಂಕೋವರ ಧೋರಣೆ ಬದಲಾಗಿರುವುದರ ಸೂಚನೆಯೇ ಏನೆಂದು ತಿಳಿಯದು. ವೈತ್ರಿ ಬೆಳೆಸುವ ಆಕಾಂಕ್ಷೆಯನ್ನು ಇದು ತೋರಿಸುತ್ತಿದ್ದರೂ ಹೆಚ್ಚಿನ ಆಶೆಯನ್ನು ಕಟ್ಟಿಕೊಳ್ಳುವಂಥ ಮಹತ್ವದ ಮಾತುಕತೆ ಇಲ್ಲ ನಡೆ ಯುಲಿಲ್ಲ. "ಹಿರಟೆ 'ಗಿಂತ ಹೆಚ್ಚಿನದೇನೂ ಕಾಣಲಿಲ್ಲ.

(ಖನೇ ಪುಟದಿಂದ)

ರು. ಅವರು ರಾಜೀನಾಮೆಯನ್ನು ಇನ್ನೂ ಒಪ್ಪಿಸಿಲ್ಲ—ವರಿಷ್ಠರಿಂದ ಹೊಸ ಸೂಚನೆ ಬರುವುದನ್ನೆ ಅವರು ಕಾಯುತ್ತಿದ್ದಾರೆಂದು ತಿಳಿದುಬರುತ್ತದೆ.

ಪ್ರಸವಾ ಪಕ್ಷದ ಬಿಕ್ಕಟ್ಟು

ಪ್ರಜಾ ಸಮಾಜವಾದಿ ಪಕ್ಷದಲ್ಲಿ ಉಂಟಾಗಿರುವ ಆಂತರಿಕ ಬಿಕ್ಕಟ್ಟಿನ ಕುರಿತು ಕೃಪಲಾನಿಯವರು ಬಹುಮತದಿಂದ ಪಕ್ಷವು ಸ್ವೀಕರಿಸಿದ ನಿರ್ಣಯಗಳನ್ನು ಅಲ್ಲಗಳೆಯುವ ಸದಸ್ಯರ ಮೇಲೆ ದೋಷಾರೋಪಣೆಯನ್ನು ಮಾಡಿದ್ದಾರೆ. ಇಂಥ ಬಂಡುಗಾರರು ಜನರಲ್ಲಿ ಬುದ್ಧಿ ಭ್ರಮೆಯನ್ನು ಹುಟ್ಟಿಸುತ್ತಿದ್ದಾರೆಂದು ಆವರೆ ಆಭಿಪ್ರಾಯ ಪಕ್ಷದ ನಿರ್ಣಯಗಳನ್ನು ಪ್ರತಿಭಟಿಸಿ ನಡೆಯುವವರ ವಿರುದ್ಧ ಶಿಸ್ತು ಭಂಗದ ಕ್ರಮವನ್ನು ಕೈಗೊಳ್ಳುವ ಅನಿವಾರ್ಯತೆ ಬೇಳದಂತೆ, ಧೋರಣವು ತಮ್ಮಲ್ಲಿ ನಿಲುಮೆಯನ್ನು ತಿದ್ದಿಕೊಳ್ಳುವರೆಂದು ಅವರು ಆಶಿಸಿದರು ಹೀಗೆ ಮಾಡುವುದರಿಂದ ಪಕ್ಷವು ಛಿನ್ನವಿಚ್ಛಿನ್ನವಾಗದೆ ಉಳಿಯಬಹುದೆಂಬ ತಾತ್ಪರ್ಯಗಳೇನೂ ಇರದೆ, ತೋರಿಕೆಗೆ ಮಾತ್ರ ವಾದವಿವಾದ ಹೂಡುವ ಇಂದಿನ ಪರಿಸ್ಥಿತಿಯು ನಾಗಪುರ ಅಧಿವೇಶನದ ಬಳಿಕ ಊರ್ಜಿತಹೊಂದಬಹುದೆಂದೂ ಅವರು ತಿಳಿಸಿದರು.

ಉಡುಪಿ

ಭಾಷಣ—ಸ್ಥಳೀಯ ಸರಕಾರೀ ಆಧ್ಯಾಪಕರ ತರಬೇತಿ ಕಾರೆಯಲ್ಲಿ ಕಳದ ತಾ. ೨೫ ರಲ್ಲು ವಿಶೇಷ ಸಭೆಯೊಂದು ಶಾಲಾ ಹೆಡ್ಮಾಸ್ಟರ್ ಶ್ರೀ ಯು. ಕೃಷ್ಣ ರಾಯರ ಆಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಟಿ. ರಮೇಶ ಭೈಗಳು 'ಜಪಾನಿನ ಶಿಕ್ಷಣ ಮತ್ತು ಗುಡಿಕೈಗಾರಿಕೆಗಳು' ಎಂಬೀ ವಿಷಯದಲ್ಲಿ ಭಾಷಣವನ್ನಿತ್ತರು. ಭಾಷಣಗಾರರ ಪರಿಚಯವನ್ನು ಶ್ರೀ ಎಸ್. ಸದಾಶಿವ ರಾಯರು ಮಾಡಿಕೊಟ್ಟರು.

ಡಾ| ಎ. ವಿ. ಬಾಳಿಗೆ—ಬೊಂಬಾಯಿಯ ಸುಪ್ರಸಿದ್ಧ ಡಾ| ಎ. ವಿ. ಬಾಳಿಗರು ಉಡುಪಿಯ ದಿ ಕೆನರಾ ಮ್ಯೂನಿಸಿಪಲ್ ಎಲೆಕ್ಟ್ರಿಸಿಟಿ ಕಂಪನಿಯ ಡೈರೆಕ್ಟರ್ ಮಂಡಳಿಗೆ ಇತ್ತೀಚೆಗೆ ಆಯ್ಕೆ ಹೊಂದಿರುವರೆಂದು ತಿಳಿದುಬರುತ್ತದೆ.

ಸರ್ಕಲ್ ಕಾಂಗ್ರೆಸ್ ಕಮಿಟಿ ಸಭೆಯು—ತಾ. ೨೪ರಲ್ಲು ಶ್ರೀ ಜಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಡೆಯವರ ಆಧ್ಯಕ್ಷತೆಯಲ್ಲಿ ಜರಗಿತು. ಕೇಂದ್ರ ಸರಕಾರದ ಆಹಾರ ಮಂತ್ರಿ ಶ್ರೀ ಕಿದ್ವಾಯಿ ಮತ್ತು ಸ್ಥಳೀಯ ಹಿರಿಯ ಮುಂದಾಳು ವಕೀಲ್ ಶ್ರೀ ಎಮ್ ವಿಠಲ ಕಾಮತರಿ ನಿಧನದ ಬಗ್ಗೆ ಸಂತಾಪ ಸೂಚಿಸಲಾಯಿತು. ದ. ಕ. ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಉಡುಪಿ ತಾಲೂಕಿನ ಪುತ್ತೂರರು ಕಾಂಗ್ರೆಸ್ ಹುರಿಯಾಳುಗಳನ್ನೇ ಆರಿಸಿದ ಬಗ್ಗೆ ನುತದಾರರಿಗೆ ಕೃತಜ್ಞತೆಯನ್ನು ಆರ್ಪಿಸುವ ಹಾಗೆಯೇ ವಿಜಯೀ ಕಾಂಗ್ರೆಸ್ ಹುರಿಯಾಳುಗಳನ್ನು ಆಭಿನಂದಿಸುವ ನಿರ್ಣಯಗಳಾಡುವು. ತಾಲೂಕಿನ ಹಳ್ಳಿಗಳಲ್ಲಿ ಗ್ರಾಮ ಕಾಂಗ್ರೆಸ್ ಕಮಿಟಿಗಳನ್ನು ರಚಿಸಬೇಕೆಂದು ತೀರ್ಮಾನ ವಾಯಿತು. ಮುಂಬರುವ ಎಸೆಂಬ್ಲಿ ಆಭಿವೇಶನದಲ್ಲಿ ಚರ್ಚೆಗೆ ಬರಲಿರುವ ಒಕ್ಕಲುಹಿತ ಮಸೂದೆಯ ಕುರಿತು ಅನುಭವಕೊಟ್ಟ ಬಗ್ಗೆ ಶ್ರೀ ಟಿ. ಎ. ಪೈ, ಎಸ್. ಎಲ್. ಎ. ಮತ್ತು ಸದ್ರಿ ಮಸೂದೆಯನ್ನು ಕಾರ್ಯಗತ ಮಾಡುವ ವಿಷಯದಲ್ಲಿ ಮುಖ್ಯ ಮಂತ್ರಿ ಶ್ರೀ ಕೆ. ಕಾಮರಾಜ ನಾಡರರನ್ನು ಆಭಿನಂದಿಸಲಾಯಿತು.

ಎಮ್. ಜಿ. ಎಮ್. ಕಾಲೇಜಿನ ಸಾಹಿತ್ಯೋತ್ಸವವು—ತಾ. 5, 6, 7ರಲ್ಲು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಮೊದಲಿನ 'ಮುದ್ದಣ ಜಯಂತಿಯ' ಶ್ರೀ ಎಸ್. ವೆಂಕಟರಾಜರ ಆಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಹಿ. ನಾರಾಯಣ ಆಯ್ಯಂಗಾರರು ಸ್ವಾಗತ ಭಾಷಣ ಮಾಡಿದ ಮೇಗೆ ಕುಮಾರಿ ಲೀಲಾ ಭೆಟ್, ಎಸ್. ಎ. ಬಿ. ಟಿ. ಯವರು ಕವಿ ಮುದ್ದಣನ ಕುರಿತು ಸುದೀರ್ಘ ಭಾಷಣಗೈದರು. ಆಧ್ಯಕ್ಷರು ಸಾಹಿತ್ಯದ ಬೆಳವಣಿಗೆ, ಕವಿ ಮುದ್ದಣನ ಪ್ರಾಧಿಸಿಯ ಮೊದಲಾದವನ್ನು ವಿವರಿಸಿ ಸಾಹಿತಿಗಳು ಸ್ವೀಚ್ಛಾ ಪ್ರವೃತ್ತಿ ಬೆಳೆಸಬೇಕೆಂದರು.

ಎರಡನೆಯದಿನ ಪ್ರಿನ್ಸಿಪಾಲ್ ಎಚ್. ಸುಂದರ ರಾವ್, ಎಮ್. ಎ. ಅವರ ಆಧ್ಯಕ್ಷತೆಯಲ್ಲಿ ಶ್ರೀ ಕೆ. ಶಿವರಾಮ ಕಾರಂತರು 'ಶ್ರೀ ಕೆ. ಕೆ. ಹೆಬ್ಬಾರರ ಕಲಾಕೃತಿಗಳು' ಎಂಬ ಕುರಿತು ಮಾತನಾಡುತ್ತಾ, ಶ್ರೀ ಹೆಬ್ಬಾರರ ಕಲಾನೈಪುಣ್ಯ, ನವೀನತೆ, ಪ್ರತಿಭೆಯನ್ನು ವಿವರಿಸಿದರು. ಶ್ರೀ ಚಂದ್ರಕಾಂತಾಚಾರ್ಯರು 'ಅಂತಃಪುರ ಗೀತೆ'ಯಿಂದ ಕೆಲವು ಕವನಗಳನ್ನು ವಾಚಿಸಿದರು. ಆಧ್ಯಕ್ಷರು ಆರಂಭದಲ್ಲಿ ಶ್ರೀ ಕಾರಂತರ ಪರಿಚಯ ಮಾಡಿದರಲ್ಲದೆ, ಆಧ್ಯಕ್ಷ ಭಾಷಣದಲ್ಲಿ ಶ್ರೀ ಕಾರಂತರ ಆಭಿಪ್ರಾಯವನ್ನು ಸಮರ್ಥಿಸಿ ಮಾತನಾಡಿದರು. ಆರಂಭದಲ್ಲಿ ಶ್ರೀ ಸಿ. ರಾಮಚಂದ್ರ ಭಟ್ಟರು ಸ್ವಾಗತ ಭಾಷಣ ಮಾಡಿದ್ದರು.

ಕೊನೆಯ ದಿನ ಫ್ಯಾನ್ಸಿ ಡ್ರೆಸ್ಸ್ ಕಂಪೆನೆಂಟ್ಯು, ನಾಣ್ಯಪೇಂದ್ರ ಆಟಾರ್ಯ, ಎಮ್.ಎ. ಆವರ ಆಧ್ಯಕ್ಷತೆಯಲ್ಲಿ ನೆರೆದ ಸಭೆಯಲ್ಲಿ ಶ್ರೀ ಜಿ. ಸುಬ್ಬರಾಯರಿಂದ ಸ್ವಾಗತವಾದ ಮೇಲೆ ಶ್ರೀ ವಿ. ಸೀತಾರಾಮಯ್ಯ, ಎಮ್. ಎ. ಆವರು "ಶ್ರೀ ಶಿವರಾಮ ಕಾರಂತರ" ಕುರಿತು ಉಪನ್ಯಾಸವೀಯುತ್ತಾ, ಇಂದು ಸರ್ವಬುದ್ಧಿ ಜೀವಿಗಳಾದ ಕನ್ನಡಿಗರ ದೃಷ್ಟಿ ಪುತ್ತೂರಿನ ಮೇಲೆ ಕೇಂದ್ರೀಕೃತವಾಗಲು ಕಾರಂತರ ವ್ಯಕ್ತಿತ್ವ ಹಾಗೂ ಬಹುಮುಖ ಜೀವನಗಳು ಕಾರಣವೆಂದರು. ಕಾರಂತರು ಪರಿಪೂರ್ಣ, ನಿರ್ಭೀತಿ, ಸ್ವತಂತ್ರ ಹಾಗೂ ನಿಸ್ಪೃಹ ವ್ಯಕ್ತಿಯೆಂದು ತಿಳಿಸಿ ಅವರ ನಾನಾ ವಿಧದ ಚಟುವಟಿಕೆಗಳನ್ನು ವಿವರಿಸಿ ಇಂದಿನ ಸರ್ವಶ್ರೇಷ್ಠ ಕಾದಂಬರಿಕಾರರೆಂದರು. ಆಧ್ಯಕ್ಷರ ಭಾಷಣವಾದ ಮೇಲೆ ಧನ್ಯವಾದ ಸಣಾ ಕಾರ್ಯ ನಡೆಯಿತು. ಮೊದಲು ದಿನ ಗಳಲ್ಲಿಯೂ ಸಂಸ್ಕೃತ, ಹಿಂದಿ, ಕನ್ನಡ ನಾಟಕಗಳೂ ಯಕ್ಷಗಾನ ಪೊದಲಾದ ವಿವಿಧ ವಿನೋದಾವಳಿಗಳೂ ಯಶಸ್ವಿಯಾಗಿ ಜರಗಿದುವು.

ಮಹಿಳಾ ಸಮಾಜದ ವಾರ್ಷಿಕೋತ್ಸವವು ತಾ. ೨೯ರಂದು ಶ್ರೀಮತಿ ಕುಸುಮಾ ಎಸ್. ನಾಯ್ಕರ ಆಧ್ಯಕ್ಷತೆಯಲ್ಲಿ ಮುಕುಂದ ನಿವಾಸದಲ್ಲಿ ಜರಗಿತು. ಶ್ರೀಮತಿ ಅನಸೂಯಾ ಬಿ. ಶೆಟ್ಟರು ಸಮಾಜದ ವರದಿ, ಶ್ರೀಮತಿ ಕಣ್ಣನ್ ಮಹಿಳಾ ಸಹಕಾರ ಸಂಘದ ವರದಿಯನ್ನು ಓದಿದರು. ಆಧ್ಯಕ್ಷೆಯರು ಮಹಿಳಾ ಸಮಾಜದ ಬಲ ಸಂವರ್ಧನೆಯಿಂದೇ ಸಿಸ್ವಾರ್ಥ ಸೇವೆಯಿಂದ ಮಹಿಳೆಯರಿಗೆ ಜಾಗೃತಿಗಳನ್ನು ಸಾಧಿಸಬೇಕೆಂದೂ ಹೇಳಿದರು. ಬಳಿಕ ವಿವಿಧ ವಿನೋದಾವಳಿಗಳು ಜಯಪ್ರದವಾಗಿ ಜರಗಿ ಶ್ರೀಮತಿ ರೋಹಿಣಿಯವರಿಂದ ಧನ್ಯವಾದಗಳಾದುವು.

ಪತ್ರಿಕೋದ್ಯೋಗಿಗಳ ಸಭೆ—ಯೊಂದು ತಾ. ೮ರಂದು 'ನವಯುಗ' ಕಛೇರಿಯಲ್ಲಿ ಶ್ರೀ ಎಚ್. ಸುಂದರ ರಾಯರ ಆಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಹೊನ್ನಯ್ಯ ಶೆಟ್ಟರು ಪತ್ರಿಕೋದ್ಯೋಗಿ ಸಂಘವನ್ನು ಪುನ ರ್ಘಟಿಸುವ ಆವಶ್ಯಕತೆಯನ್ನು ವೀಕರಿಸಿದರು. ಆಧ್ಯಕ್ಷರೂ ವಿಶೇಷ ಆಮಂತ್ರಣದಂತೆ ಬಂದಿದ್ದ ಶ್ರೀ ಟಿ. ಎ. ಪೈಗಳೂ, ಎ. ಜೆ. ಆಳ್ವ ಮತ್ತು ಎಸ್. ಎಲ್. ನಾರಾಯಣ ಭಟ್ಟರೂ ಮಾತನಾಡಿ ಪತ್ರಿಕೋದ್ಯಮಿಗಳಿಂದ ಜನತೆಗೆ ಉತ್ತಮ ಸೇವೆ ದೊರೆಯುವಂತೆಯೂ, ಪತ್ರಿಕೋದ್ಯಮಗಳ ಹಿತರಕ್ಷಣೆ, ವಿಚಾರ ವಿನಿಮಯ ಮೊದಲಾದವೆಗಳಿಗೆ ಅನುಕೂಲವಾಗುವಂತೆಯೂ ಸಂಘವನ್ನು ಪುನರುಜ್ಜೀವಗೊಳಿಸುವುದೊಳ್ಳಿತೆಂದು ತಮ್ಮ ತಮ್ಮ ಸಲಹೆ ಸೂಚನೆಗಳನ್ನಿತ್ತರು. ಬಳಿಕ ಸಂಘವನ್ನು ಪುನರ್ಘಟಿಸಬೇಕೆಂದು ನಿರ್ಣಯಿಸಿ ಸಂಘದ ಘಟನಾವಳಿಯನ್ನು ಸಿದ್ಧಗೊಳಿಸಲು ಸಮಿತಿಯೊಂದು ರಚಿಸಲ್ಪಟ್ಟಿತು.

ಅಸ್ಸಾಂ ನೆರೆಸೀರ್ತರ ಸಹಾಯಾರ್ಥವಾಗಿ—ಸ್ಥಳೀಯ ಯುವಕರಾದ ಶ್ರೀಗಳಾದ ಕೆ. ರಘುರಾಮ ಪೈ, ಕೆ. ಪದ್ಮನಾಭ ರಾವ್, ಪಿ. ರಮಾನಂದ ನಾಯಕ್, ಕೆ. ಗಣಪತಿ ಶೆಣೈ, ಫೋಸಾ ಫರ್ನಾಂಡಿಸ್, ರಶೀದ್ ಸಾಹೇಬ್, ಬಿ. ಗೋಪಾಲ ಕೃಷ್ಣ, ಜಯರಾಮ ರೈ ಮತ್ತು ರವೀಂದ್ರ ಶೆಟ್ಟರು ಸಾರ್ವಜನಿಕರಿಂದಲೂ, ಸಂಘ ಸಂಸ್ಥೆಗಳಿಂದಲೂ ಕೇ.ಪಿ.ಸಿ.ಸಿ ಯ ರೂ. 730-1-3 ನ್ನು ಪಂಡಿತ ಜವಾಹರಲಾಲರಿಗೆ ಕಳುಹಿಸಲಾಗಿರುವುದೆಂದು ಶ್ರೀ. ಟಿ. ಎ. ಪೈ, ಎಂ. ಎಲ್. ಎ. ಗಳು ತಿಳಿಸುತ್ತಾರೆ.

ರಾಷ್ಟ್ರಭಾಷಾ ಶಿಕ್ಷಣ ಶಿಬಿರದ ವಾರ್ಷಿಕೋತ್ಸವವು ಶ್ರೀ ಕೆ. ಶ್ರೀಧರ ದಾಸ್ತಿಗಳ ಆಧ್ಯಕ್ಷತೆಯಲ್ಲಿ ತಾ. ೧೮ರಲ್ಲು ವಿವಿಧ ಕಾರ್ಯಕ್ರಮಗಳಿಂದ ನೆರವೇರಿತು.

ಶ್ರೀಗಳಾದ ಕಾರಂತ ವಿ. ಸೀ. ಯವರ ಉಪನ್ಯಾಸಗಳು—

"ನವಯುಗ"ದ ಸೇಕ್ಯತ್ವದಲ್ಲಿ ಉಪಕ್ರಮಿಸಲಾಗಿರುವ "ಪುಸ್ತಕ ಮಾಸ"ಗ ಅಂಗವಾಗಿ ತಾ. ೧೯ರಂದು ನವಂಬಗ ಪ್ರೆಸ್ಸಿನ ಮಾಳಿಗೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಆಧ್ಯಕ್ಷ ಶ್ರೀ ವಿ. ಸೀತಾರಾಮಯ್ಯ ಹಾಗು ಕನ್ನಡದ ಸುಪ್ರಸಿದ್ಧ ಗ್ರಂಥಕರ್ತ ಶ್ರೀ ಕೆ. ಶಿವರಾಮ ಕಾರಂತ ಇವರ ಭಾಷಣಗಳು ನಡೆದವು. ಸಭಾಧ್ಯಕ್ಷತೆಯನ್ನು ಡಾ ಟಿ. ನಾಥನ ವೈಗಳು ವಹಿಸಿದ್ದರು. ಶ್ರೀ ಕೆ. ಹೊನ್ನಯ್ಯ ಶೆಟ್ಟರು ಸ್ವಾಗತ ಭಾಷಣವನ್ನು ಮಾಡುತ್ತಾ ಗ್ರಂಥಗಳಿಗೆ ಯೋಗ್ಯ ಪ್ರಚಾರ ನೀತಿ, ಉತ್ತಮ ಸಾಹಿತ್ಯವನ್ನು ಜನಪ್ರಿಯಗೊಳಿಸುವುದು "ಪುಸ್ತಕ ಮಾಸ"ದ ಉದ್ದೇಶವೆಂದು ಹೇಳಿದರು. ಕಾರಂತರು ತಮ್ಮ ಭಾಷಣದಲ್ಲಿ ಲೇಖಕನ ಕರ್ತವ್ಯಗಳನ್ನು ವಿವರಿಸುತ್ತಾ ಆ ಮನು ಪ್ರಾಮಾಣಿಕನಾಗಿರಬೇಕೆಂದೂ ಆ ನುಭವದ ಬಳಿಕ ಮೇಲೆ ಬರೆಯಬೇಕೆಂದೂ ಹೇಳಿದರು. ಪ್ರಕಾಶನ ಕ್ಷೇತ್ರದಲ್ಲಿ ತಮ್ಮ ಅನುಭವವನ್ನು ವಿವರಿಸುತ್ತಾ ಒಳ್ಳೆಯ ಗ್ರಂಥಗಳನ್ನು ಓದುವ ಆಭಿರುಚಿಯನ್ನು ಬೆಳೆಸಿಕೊಳ್ಳಿದ್ದರೆ ಪರಿಸ್ಥಿತಿ ಸುಧಾರಿಸುವುದು ಕಸ್ತ ಎಂದನು. ಓದುಗರ ಸಂಸ್ಕಾರ ಬೆಳೆಯುವುದಕ್ಕೆ ವಿಮರ್ಶಕರು ಸಹಾಯಮಾಡಬೇಕೆಂದೂ ಆಭ್ಯಾಸಪೂರ್ಣವಾದ ಹಾಗು ಉದಾರ ಪ್ರಚೋದಕವಾದ ಕೃತಿಗಳಿಗೆ ಪ್ರೋತ್ಸಾಹ ಕೊಡಬೇಕೆಂದೂ ಅವರು ಆಪೇಕ್ಷಿಸಿದರು. ಶ್ರೀ ಸೀತಾರಾಮಯ್ಯನವರು ಈ ಆಭಿಪ್ರಾಯವನ್ನು ಅನುಮೋದಿಸಿ, ಜನರು ಹೊರಗಿನ ಆಕರ್ಷಣೆಗಿಂತ ಒಳಗಿನ ತಿರುಳನ್ನು ಮೆಚ್ಚುವರೆ ರೇಬನ ಹಾಗು ಗ್ರೇಥ ಪ್ರಕಾಶನ ಕಲೆಗಳು ಬಮಕ ಬಲ್ಲುನೆಂದು ಬೇಳಿದರು. ಆಧ್ಯಕ್ಷರು ತಾತ್ಕಾಲಿಕ ಜನಪ್ರಿಯತೆ ಹಾಗು ಶಾಶ್ವತ ಸ್ಥಾನಮಾನಗಳನ್ನು ಹೊಂದುವ ಸಾಹಿತ್ಯ ಪ್ರಕಾರವನ್ನು ವಿವರಿಸಿದರು. ಧನ್ಯವಾದದೊಂದಿಗೆ ಸಭೆ ವಿಸರ್ಜನಗಲ್ಪಟ್ಟಿತು.

ಶ್ರೀ ಶಿವರಾಮ ಕಾರಂತರು—ತಾ. ೧೯ರಂದು ಹಂಗಾರಕಟ್ಟೆಯಲ್ಲಿ ಅಲ್ಲಿಯ ಕರ್ನಾಟಕ ಸಂಘದವರು ವಿರ್ಪಡಿಸಿದ ಸಭೆಯಲ್ಲಿ ಜೀವನ ಮತ್ತು ಕಲೆಯ ಕುರಿತು ಶ್ರೀ ಎ. ಜೆ. ಆಸ್ಟಿಯವರ ಆಧ್ಯಕ್ಷತೆಯಲ್ಲಿ ಭಾಷಣವಿತ್ತರು.

ಪಂ| ನೆಹರೂ ಜನ್ಮದಿನಾಚರಣೆ—ಯು ತಾ. 14ನೇ ದಿನ ಪ್ರಭಾತಫೇರಿ, ಧ್ವಜಾರೋಹಣ, ಮಕ್ಕಳ ಆಟ ಸ್ಪರ್ಧೆ, ಸಾರ್ವಜನಿಕ ಆಟ ಸ್ಪರ್ಧೆ, ಸಂಜೆ 5.30ಕ್ಕೆ ರಥಬೀದಿಯಲ್ಲಿ ಸಾರ್ವಜನಿಕ ಸಭೆ, ಭಾಷಣ ಸ್ಪರ್ಧೆ ಮೊದಲಾದ ಕಾರ್ಯಕ್ರಮಗಳಿಂದ ಜರಗಲಿವೆ ಸ್ಥಳೀಯ ಬೋರ್ಡು ಹೈಸ್ಕೂಲಿನಲ್ಲಿ ಜವಾಹರಲಾಲರ ಛಾಯಚಿತ್ರದ ಅನಾವರಣವು ಶ್ರೀ ಆಫಸಾರು ಶ್ರೀಪಾದಂಗಳವರ ಆಧ್ಯಕ್ಷತೆಯಲ್ಲಿ ಡಾ| ಟಿ. ಪೂಧವ ಪೈಗಳಿಂದ ಸಂ. 8 ಗಂಟೆಗೆ ನೆರವೇರುವುದೆಂದೂ ಸರ್ವರಿಗೂ ಸ್ವಾಗತವೆಂದೂ ಮುಖ್ಯ ಆಧ್ಯಾಪಕರು ವಿನಂತಿಸುತ್ತಾರೆ.

ಹಚ್ಚು ಹಚ್ಚು ಪುಸ್ತಕಗಳನ್ನು ಓದಿದಷ್ಟೂ ವಿಶಾಲ ಹೃದಯಿಗಳಾಗುತ್ತೇವೆ.
ಪಂ| ಜವಾಹರಲಾಲ.

ವಿಶೇಷವಾದ ಸಂಪದಕ್ಕು

(ವಿಶೇಯದ ಆರ್ಥಿಕ ಸ್ಥಿತಿ ಚಿತ್ರ)

ಬರೆದವರು: ಕು. ಶಿ. ಹರಿದಾಸ ಭಟ್ಟ, ಎಂ. ಎ.

ಇಂದಿನ ರಾಜಕೀಯದಲ್ಲಿ ಚರ್ಚಾಸ್ಪದವಾದ ಭೂಮಿಂಡಮಾದ ವಿಶೇಯದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಚಿತ್ರವನ್ನು ಸರಳವಾಗಿಯೂ, ವಿಶದವಾಗಿಯೂ, ಸಚಿತ್ರವಾಗಿಯೂ ವಿವರಿಸುವ ಏಕಮಾತ್ರ ಗ್ರಂಥ

ವಿಶೇಯದ ಎಲ್ಲ ವಿದ್ಯಾರ್ಥಿಗಳೂ, ರಾಜಕೀಯಜ್ಞರೂ, ಓದಬೇಕಾದ ಪುಸ್ತಕ. ಬೆಲೆ: ಎರಡು ರೂಪಾಯಿ.

ವಾಚನಾಲಯಗಳಿಗೆ ಆತ್ಯಗತ್ಯವಾದದ್ದು.

1. ನವಯುಗಪ್ರೆಸ್, ಉಡುಪಿ. 2. ನವಭಾರತ ಪುಸ್ತಕ ಭಂಡಾರ, ಉಡುಪಿ.

ಮಂಗಳೂರು—ಸ್ಥಳೀಯ ಗ್ರಾಮಸೇವಾ ಸಂಘವು ತಾ. ೧೯ರಲ್ಲು ಶ್ರೀ ಪಿ. ಅಮೀರ್ ಅಹಮ್ಮದ್, ಆಸರ ಅಧ್ಯಕ್ಷತೆಯಲ್ಲಿ ಜರಗಿ ಯುವಕ ಸಂಘವೊಂದು ಸ್ಥಾಪಿಸಲಾಯಿತು. ಶ್ರೀಗಳಾದ ನಾ. ಖಂ. ಆಣ್ಣಾಜಿ ಬಲ್ಲಾಳ್, ವಿಠಲ ಶೆಟ್ಟಿ, ಅಂಗರ ಪಾಲನ್ ಮತ್ತು ಸುಬ್ರಹ್ಮಣ್ಯ ಆಚಾರ್ ಅನುಕ್ರಮವಾಗಿ ಅಧ್ಯಕ್ಷ, ಉಪಾಧ್ಯಕ್ಷತೆ, ಜತೆಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟಿರಲ್ಲದೆ ಕಾರ್ಯಕಾರಿ ಸಮಿತಿಗೆ ಇತರ ನಾಲ್ವರ ಆಯ್ಕೆ ನಡೆಯಿತು.

ಕಿದಿಯೂರು—ಇಲ್ಲಿಯ ಎಯಿಡೆಡ್ ಹಾಗೂ ಎಲ್ ಶಾಲೆಯ ಹೆತ್ತವರ ಸಭೆಯು ತಾ. ೭ರಲ್ಲು ಶಾಲಾ ಡಿಪ್ಯೂಟಿ ಇನ್ಸ್‌ಪೆಕ್ಟರ್ ಶ್ರೀ ಎಚ್. ಸಂಜೀವ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎಲ್. ಫೆರ್ನಾಂಡೀಸ್, ಎ. ಎನ್. ವೆಂಕಟ್ರಮಣ ತಂತ್ರಿ, ಕೆ. ಶಂಕರ ರಾವ್ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಅಧ್ಯಕ್ಷರ ಮುಕ್ತಾಯ ಭಾಷಣ, ಧನ್ಯವಾದಾರ್ಪಣೆಗಳಾಗಿ ಶ್ರೀ ಎ. ನಾರಾಯಣ ತಂತ್ರಿಗಳಿಂದ ಚಹಾ ಸತ್ಕಾರವಾಗಿ ಸಮಾರಂಭ ಕೊನೆಗೊಂಡಿತು.

ನಿಂಜೂರು—ಇಲ್ಲಿಯ ಪಂಚಾಯತ ಟೋರ್ಡಿನ ಜುನಾವಣೆಯು ತಾ. ೬ರಲ್ಲು ಜರಗಿ ಶ್ರೀಗಳಾದ ಎನ್. ರಾಜು ಶೆಟ್ಟಿ (ಅಧ್ಯಕ್ಷ), ರಘುರಾಮ ಹೆಗ್ಡೆ, ಶ್ರೀನಿವಾಸಭಟ್, ಚೀಂಪ ಶೆಟ್ಟಿ, ಜೊಸೆಫ್ ಸಜರೆತ್, ನಾಗೇಶ್ ನಾಯ್ಕ ಮತ್ತು ಕೊರಗ ಪರವ ಕೂಡಾ ಆರು ಜನರು ಸದಸ್ಯರಾಗಿ ಆರಿಸಲ್ಪಟ್ಟರು.

ಮುಂಡ್ಕೂರು—ಕಳೆದ ತಾ. ೨೦ರಲ್ಲು ಮುಂಡ್ಕೂರು ಗ್ರಾಮದ ಸಚ್ಚೇರಿಪೇಟೆಯಲ್ಲಿ ಶ್ರೀ ಕೆ. ಪಿ. ಭೋಜ ಶೆಟ್ಟರ ಅಧ್ಯಕ್ಷತೆಯಲ್ಲಿಯೂ, ಮುಂಡ್ಕೂರು ಪೇಟೆ ಸುಧಾಸ ಕಟ್ಟೆಯಲ್ಲಿ ಶ್ರೀ ಎಮ್. ಎಲ್. ಕಾಮತರ ಅಧ್ಯಕ್ಷತೆಯಲ್ಲೂ ಮೂಲ್ಕಿ ಸರ್ಕಲಿನಿಂದ ಜಿಲ್ಲಾ ಟೋರ್ಡಿಗೆ ಜುನಾವಣೆಯಾದ ಶ್ರೀಗಳಾದ ಬಿ. ಆರ್. ಕರ್ಕೇರ ಮತ್ತು ಬ್ರಿಟೊ ಅವರನ್ನು ಅಭಿನಂದಿಸುವ ಸಭೆಗಳು ಜರಗಿದವು. ಕೇಂದ್ರ ಸರಕಾರದ ಆಹಾರ ಮಂತ್ರಿ ಶ್ರೀ ಕಿದ್ವಾಯಿಯವರ ನಿಧನದ ಬಗ್ಗೆ ಸಂತಾಪ ಸೂಚಕ ನಿರ್ಣಯವಾಯಿತು.

ದೇವಿಸುರ—ಶ್ರೀ ದುರ್ಗಾ ಪ್ರಸಾದಿಕ ಹಾಗೂ ಎಲ್ ಶಾಲೆಯ ಮೇಲ್ತರಗತಿಯ ವಿದ್ಯಾರ್ಥಿಗಳು ಕಳೆದ ತಾ. ೨೨ರಲ್ಲು ವಿಲೇಜ್ ಗ್ಯಾಡ್ ಶ್ರೀ ಸತ್ಯನಾರಾಯಣ ರಾಯರ ನೇತೃತ್ವದಲ್ಲಿ ಜಪಾನ್ ಕ್ರಮದ ಬೇಸಾಯಕ್ಕೆ ಪೂರಕವೇ ತಯಾರಿಸಿದ ನೇಜಿಯನ್ನು ಸುಧಾರಿತ ಕ್ರಮದಿಂದ ಶಾಲಾವಠಾರ ಗದ್ದೆಯಲ್ಲಿ ಸಾಲಾಗಿ ನೆಟ್ಟರು.

ಕುಂಬಳೆ—ಕಳೆದ ತಾ. ೩೧ರಲ್ಲು ಪೊಗ್ರಾಲಿನಲ್ಲಿ ಜಿಲ್ಲಾ ಟೋರ್ಡು ಕಾಂಗ್ರೆಸ್ ಸದಸ್ಯರ ಸತ್ಕಾರ ಸಭೆಯು ಶ್ರೀ ಎಸ್. ಎಸ್. ಮೊಗ್ರಾಲ್, ಎಮ್. ಎಲ್. ಎ. ಆಸರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಬಿ. ಬಾಲಕೃಷ್ಣ ಆಡ್ಯಂತಾಯ, ಎಫ್. ಎಕ್ಸ್. ಡಿ. ಪಿಂಟೊ ಮೊದಲಾದವರು ಹಾಜರಿದ್ದರು. ಶ್ರೀಗಳಾದ ಉಮೇಶ ರಾವ್, ದೇವಪ್ಪಾಳ್ವ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು.

ಅಧಮಾರು—ಕಳೆದ ತಾ. ೨೨ರಲ್ಲು ಸ್ಪ್ಲಾಟ್‌ಲೆಟ್ಟಿನೆಂಟ್ ಯು. ಆರ್. ಆಚಾರ್ಯರು ಸ್ಥಳೀಯ ಬೋರ್ಡು ಹೈಸ್ಕೂಲನ್ನು ಸಂದರ್ಶಿಸಿ 'ವೈಮಾನಿಕ ಸಾಹಸ'ದ ಕುರಿತು ಭಾಷಣಮಾಡಿದರು. ಅಧಮಾರು ಸುಬ್ರಹ್ಮಣ್ಯ ಸ್ವಾಮಿಗಳವರು ಸಭಾಧ್ಯಕ್ಷತೆ ವಹಿಸಿದ್ದರು. ತಾ. ೨೫ರಲ್ಲು ಶಿವರ ಸೈಂಟ್‌ಮೇರೀಸ್ ಹೈಸ್ಕೂಲಿನ ಹೆಡ್ಮಾಸ್ಟರ್ ಶ್ರೀ ಎಲ್. ವೆಂಡೋನ್ಸಾರವರು ಪವಿತ್ರ ಬೈಬಲಿನ ವಿಷಯವಾಗಿ ಉಪನ್ಯಾಸವಿತ್ತರು. ಆದೇ ದಿನ ಸಂಜೆ ಮೂಲ್ಕಿ ವಲಯದ ಅಂತರ್ ಶಾಲಾ ವ್ಯಾಯಾಮ ಸಂಘದ ಅಧ್ಯಕ್ಷರಾದ ಶ್ರೀ ಪಿ. ನಾರಾಯಣ ರಾಯರು ಈ ಶಾಲೆಯ ಅಂತರ್ಗೃಹ ಪಂದ್ಯಾಟಗಳನ್ನು ಉನ್ಮಾಟಿಸಿದರು.

ಹಿರಿಯಡಕ—ಮಹತೋಭಾರ ಶ್ರೀ ವೀರಭದ್ರ ದೇವಾಲಯದ ಜೀರ್ಣೋದ್ಧಾರ ಮಹಾಕಾರ್ಯವು ಸಂಬಂಧಿಸಿದ ಆರು ಗ್ರಾಮಗಳ ಮಹಾಜನರ ಸಭೆಯಲ್ಲಾದ ಒಮ್ಮತದ ನಿರ್ಣಯದಂತೆ ತಾ. ೮ನೇ ಬೆಳಿಗ್ಗೆ ಅರಂಭಸಲ್ಪಟ್ಟಿತು. ಉದಾರಿ ಮಹಾಜನರ ಹಾಗೂ ಭಕ್ತಾದಿಗಳ ಸಹಾಯವನ್ನು ಕೋರಲಾಗಿದೆ.

ಮಾಯಿಪ್ಪಾಡಿ—ತಾ. ೭-೧೧-೫೪ರಲ್ಲು ಮಾಯಿಪ್ಪಾಡಿ ಸರಕಾರಿ ಬುನಾದಿ ಶಿಕ್ಷಣ ತರಬೇತಿ ಶಾಲೆಯಲ್ಲಿ ಪೂರ್ವಾಹ್ನ ಚರಕ ದೆಬ್ಲಿಯೂ, ಅಪರಾಹ್ನ ತಕಲಿಯಲ್ಲಿಯೂ ಸರ್ವ ಸೇವಾಸಂಗದ (ದ. ಕನ್ನಡ ಮತ್ತು ಕೊಡಗು ವಿಭಾಗದ) ಸಂಚಾಲಕರಾದ ಶ್ರೀ ಯಸ್. ಯು. ರಾಮಚಂದ್ರ ರಾಯರ ನೇತೃತ್ವದಲ್ಲಿ ಸರ್ವಸೇವಾ ಸಂಘದ ಪತಿಯಿಂದ ನೂಲುವಿಕೆಯ ಸ್ಪರ್ಧೆ ನಡೆಯಿತು. ಸಂಜೆ ನೆರೆದ ಸಭೆಯಲ್ಲಿ ಶ್ರೀ ರಾಮಚಂದ್ರ ರಾಯರು ಬುದ್ಧ ಗಯೆಯಲ್ಲಿ ಜರಗಿದ ಸರ್ವೋದಯ ಸಮ್ಮೇಳನದ ಕುರಿತಾಗಿಯೂ, ವಿನೋಬಾಜಿಯವರ ಭೂದಾನ, ಜೀವನ ದಾನ, ಇತ್ಯಾದಿ ತತ್ವಗಳ ಕುರಿತಾಗಿಯೂ ಉದ್ಬೋಧಕ ಉಪನ್ಯಾಸವಿತ್ತರು.

ಎಂದಿನ ದಿನ ಇವರ ಅಧ್ಯಕ್ಷತೆಯಲ್ಲಿ ಸಂಯುಕ್ತ ರಾಷ್ಟ್ರಸಂಘದ ಕುರಿತಾದ ಭಾಷಣಗಳಿದ್ದುವು".

ಗುಡ್ಡೆಅಂಗಡಿ—ಕಳೆದ ತಾ. ೩೧ರಲ್ಲು ಕುಂಡಾಪುರ ತಾಲೂಕು ಹಲ್ಸನಾಡು ಪುತ್ತು ಕೇಸನಪುರ ಗ್ರಾಮಸ್ಥರ ಹಾಗೂ ಶ್ರೀ ಸೈಲಾಡಿ ಸೂರಪ್ಪ ಸೆಟ್ಟಿ ಮೊದಲಾದವರ ಕೂಡುವಿಕೆಯಿಂದ ಜಿಲ್ಲಾ ಬೋರ್ಡು ಮೆಂಬರುಗಳಾಗಿ ಆರಿಸಲ್ಪಟ್ಟ ಶ್ರೀಗಳಾದ ಆರ್. ಕೆ. ಸಂಜೀವ ರಾವ್, ವೈ. ಕೇಜಪ್ಪ ಸೆಟ್ಟಿ, ಎಮ್. ಎಮ್. ಹೆಗ್ಡೆ, ಎನ್. ಎಸ್. ಪರಮೇಶ್ವರ ಐನವರನ್ನು ಶ್ರೀ ವೈ. ಮುಂಜಯ್ಯ ಶೆಟ್ಟಿ, ಎಂ. ಎಲ್. ಎ. ಆವರ ಅಧ್ಯಕ್ಷತೆಯಲ್ಲಿ ಅಭಿನಂದಿಸುವ ಸಭೆ ಜರಗಿತ್ತಲ್ಲದೆ ಸಂಜೆ ಯಕ್ಷಗಾನ ಕೂಟವು ಶ್ರೀ ಮರವಂತೆ ಸರಶಿಂಶ ಭಾಗವತರ ಹಾಡುವಿಕೆ ಮತ್ತು ಶ್ರೀ ರಾಮಚಂದ್ರ ಹೆಬ್ಬಾರರ ಮೃದಂಗ ವಾದನ ಹಾಗೂ ಶ್ರೀ ರಾಮ ಐತಾಳರ ಅರ್ಥಧಾರಿಕೆಯಲ್ಲಿ ನಡೆಯಿತು.

ಸೊರಕ್ಕಲ್—ವಿಕಕಾಲದಲ್ಲಿ ದಂಪತಿಗಳ ಆಂತ್ಯ ಸಂಸ್ಕಾರ—ಇಲ್ಲಿಯ ಗೌಡ ಸಾರಸ್ವತ ಸಮುದಾಯ ಸಂಸ್ಥಾಪಿಸಿದ ಮನೆತನದ ಏಕೈಕ ಪದವೀಧರರಾಗಿದ್ದ ಶ್ರೀ ಎಸ್. ಆರ್. ಕಾಮತ್, ಬಿ. ಎ., ಎಲ್. ಟಿ., ಇವರು ದಿನಾಂಕ ೧೮ರಂದು ರಾತ್ರೆ ಗಂಟೆ ೧೦ಕ್ಕೆ ಸ್ವಗೃಹದಲ್ಲಿ ತನ್ನ ೬೧ನೆಯ ವಯಸ್ಸಿನಲ್ಲಿ ಹೃದಯಸ್ತಂಭನದಿಂದ ದಿವಂಗತರಾದರೆನ್ನಲು ವ್ಯಸನವೆನಿಸುತ್ತದೆ. ಅಂದೇ ರಾತ್ರೆ ಬೆಳಗಾಗುವ ಮೊದಲು ಗಂಟೆ ೪ಕ್ಕೆ ದಿವಂಗತರ ಧರ್ಮಪತ್ನಿ ಶ್ರೀ ಸಂಜೀವಿಯಮ್ಮೆ ಅಂದಾಕಾಮತರವರು ಬಹುದೀರ್ಘಕ್ಕೆಂದು ಹೊರಗೆ ಹೋಗಿ ಅಂಗಳದ ಜಾಗಿಗೆ ಹಾರಿ ಪತಿಯ ಆತ್ಮದೊಂದಿಗೆ ಐಕ್ಯತೆಯನ್ನು ಹೊಂದಿದರೆಂದು ತಿಳಿಸಲು ಮತ್ತಷ್ಟು ದುಃಖವೆನಿಸುತ್ತದೆ.

ದಿವಂಗತ ರಾಮ ಕಾಮತರು ಪ್ರಾರಂಭದಲ್ಲಿ ಮಂಗಳೂರಿನ ಮಿಶ್ಶನ್ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿದ್ದು, ನಂತರ ೧೮ ವರ್ಷಗಳ ಕಾಲ ಬಂಟ್ವಾಳ ಶ್ರೀ ವೆಂಕಟಪಟ್ಟಣ ಸ್ವಾಮಿ ಟೆಂಪಲ್ ಹೈಸ್ಕೂಲಿನ ಮುಖ್ಯಾಧ್ಯಾಪಕರಾಗಿದ್ದು, ಬಳಿಕ ಕಳೆದಜೂನು ತರೆಗಿನ ೫ ವರ್ಷಗಳಲ್ಲಿ ಸುರತ್ಕಲ್ ವಿದ್ಯಾಪಾಯಿನೀ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿ ವಿದ್ಯಾಸೇವೆಯಲ್ಲಿ ನಿರತರಾಗಿದ್ದರು. ಇವರ ವಿದ್ಯಾಭ್ಯಾಸತೆ, ಹಿತಮಿತ ನುಡಿಗಳು ಗಂಭೀರತೆ ಹಾಗೂ ಸಾತ್ವಿಕ ಸ್ವಭಾವಗಳಿಂದ ಸರ್ವಜನಾದರಣೀಯರಾಗಿದ್ದರೆಂದರೆ ಅತ್ಯುಕ್ತಿಯಾಗದು.

ದಿನಾಂಕ ೨೮ರಂದು ಮೃತ ಸತಿಪತಿಯರ ಅಂತ್ಯದ ದರ್ಶನಕ್ಕಾಗಿ ಈ ಊರ ನೆರೆಯೂರ ಆಬಾಲವೃದ್ಧ ಸ್ತ್ರೀ ಸಮೂಹವು ತಂಡ ತಂಡವಾಗಿಯೂ, ವಿದ್ಯಾಪಾಯಿನೀ ಶಾಲಾಧ್ಯಾಪಕ ವರ್ಗವು ವಿದ್ಯಾರ್ಥಿಗಳ ಸಮೇತವಾಗಿಯೂ ಬಂದು ನೆರೆದಿರಲು, ದಂಪತಿಗಳ ಕಳೇಬರವನ್ನು ಅಲಂಕರಿಸಿ, ಭಜನಾಘೋಷದೊಂದಿಗೆ ಗಂಟೆ ೧೩ಕ್ಕೆ ಮೆರವಣಿಗೆಯಿಂದ ಅಂತ್ಯ ಸಂಸ್ಕಾರವನ್ನು ಸಂಭ್ರಮಪೂರ್ವಕ ನೆರವೇರಿಸಲಾಯಿತು. "ಪತಿಗನುಕೂಲೆ ಸತಿ—ಸತಿಗನುಕೂಲ ಪತಿ"ಯರಾಗಿ ಬಾಳಿ ಏಕಕಾಲದಲ್ಲಿ ಪರಂಧಾಮವನ್ನು ಸೇರಿದ ಈ ದಂಪತಿಗಳ ಅಗಲುವಿಕೆಯಿಂದ ಇವರ ಎಂಟು (ಗಂಡು ೬ ಹೆಣ್ಣು ೨) ಮಕ್ಕಳು ಮರಿಮಕ್ಕಳಿಂದ ಕೂಡಿದ ಘನ ಸಂಸಾರಕ್ಕೆ ಉಂಟಾದ ಅಪಾರ ನಷ್ಟವನ್ನು ಸಹಿಸುವ ಶಕ್ತಿಯನ್ನೂ, ಮೃತ ದಂಪತಿಗಳ ಆತ್ಮಕ್ಕೆ ಚಿರಶಾಂತಿಯನ್ನೂ ಪರಮಾತ್ಮನು ಕರುಣಿಸಲೆಂದು ಹಾರೈಸುವ,

—ಎಸ್. ಆರ್., ಹೆಬ್ಬಾರ್.

ಕಥೆ, ಕಾದಂಬರಿ, ಕವಿತೆ, ನಾಟಕ ಮೊದಲಾದ ನಾನಾ ಪುಸ್ತಕಗಳು

1	ಸ್ವತಂತ್ರ ಜೀವನೋಪಾಯ	0	4
2	ಸಂಶಯ ಪಿಶಾಚಿ	0	10
3	ನಾಡ ಕತೆಗಳು	0	8
4	ಕುಶಲವ	0	8
5	ಕಾವ್ಯ ಸಾಮ್ರಾಜ್ಯ	1	8
6	ಪುಢುವನ	8	8
7	ಮುಂದಿನ ದೇವರು	0	4
8	ಪೃಥಚಾರಿಣಿ ಯಾರು	1	4
9	ದೆಂಡ್ತಿ ಗಂಡನಾದರೆ	0	4
10	ಪುರುಷ ಪಥ	0	4
11	ಸನ್ಯಾಸಿಯ ಸೋಗಿನಲ್ಲಿ	0	12
12	ನಂದಾದೀಪ	0	14
13	ದೇಶಭಕ್ತೆ	1	4
14	ಪ್ರೇಮ ವಿಜಯ	1	0
15	ರಂಗಭೂಮಿ	0	10
16	ಸೇವಾಪಥ	0	8
17	ನಾರೀ ಹೃದಯ	1	8
18	ಭಾರತೀಯ ಕತೆಗಳು	1	12
19	ಪ್ರಕಾಶ	2	4
20	ನೂರು ಪ್ರಯಸನಗಳು	1	4
21	ನಗೆ ನೋಟಗಳು	1	0
22	ಅನ್ನದೇವರು ಮತ್ತು ಕತೆಗಳು	1	0
23	ಭಾರತದಲ್ಲಿ ಜಾತಿಭೇದ	1	0
24	ವಿಷ್ಣುವಿನ ದಶಾವತಾರ ಅರ್ಥಾತ್ ದಶಾವತಾರ	0	12
25	ಆಕಾಶ ಗಂಗೆ	2	8
26	ಸ್ವಾತಂತ್ರ್ಯವೀರ ಸಾವರಕರರು	1	4
27	ಜೇನಿನ ಸಂಗ್ರಾಮ	1	8
28	ಕದಂಬ	1	4
29	ಕವಿತಾಕಾಮಿನಿ	2	0
30	ಸ್ವರಾಜ್ಯ ವಿಜಯ	0	8
31	ಸಪ್ತಸಾಗರ	0	12
32	ಜಮಿಮಾನ್ದಾರ	1	8
33	ಜಾಣನ ಬೆದಗು	1	4
34	ಲೋಹಾನುಪ್ರೇ	1	0
35	ಚಿಗುರು	0	10
36	ನನ್ನ ಕಥೆಗಳು	0	10
37	ನಕ್ಕರೂ ನಗಬಹುದು	0	10

ವಿನರವಾಡ ಕೆಟಲಾಗಿಗೆ ಬರೆಯಿರಿ.
ಎಲ್ಲೆಲ್ಲಿಯೂ ಸ್ಟಾಕಿಸ್ಟರು ಬೇಕಾಗಿದ್ದಾರೆ.
ಕೆರಿಯರ್ ಪ್ರಸಂಚ ಉಡುಪಿ.
ಆಥವಾ
ನವಭಾರತ ಬುಕ್ ಡಿಪೊ, ಉಡುಪಿ.

ನಿಮ್ಮ ಬಹುದಿನದ ಆಸೆ ಪಕ್ಕನೆ ಒದಗಿ ಬಂದಿದೆ. ಪ್ರದರ್ಶನವಾದ ಕಡೆಗಳಲೆಲ್ಲಾ 'ಅತ್ಯುತ್ತಮ'ವೆಂಬ ಸರ್ವಸ್ಮಶಂಸೆ ಗಳಿಸಿದ ಅದ್ಭುತ ಪತ್ತೆದಾರಿ ಚಿತ್ರ

ಅಧಿಕಾರಿ [ಕನ್ನಡ]

ಕುಮಾರಿ, ಪ್ರೇಮ್‌ನಾಜೀರ್ ನೊದಲಾದವರು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ತಾ. 12-11-54 ರಿಂದ.

—ಕನ್ನಡದಲ್ಲಿ ಹೊಸ ಬಗೆಯ ಗ್ರಂಥ—

ಬಿಡುಕು ಬಂಗಾರ

(ಬರೆದವರು: ಕುಮಾರಸ್ವಾಮಿ)

- ಬಾಳ್ವೆಯ ಹಲವು ಪ್ರಶ್ನೆಗಳನ್ನು*** ದಿಟ್ಟತನದಿಂದ ಉತ್ತರಿಸಿ ಚೈತನ್ಯ ಪೂರ್ಣ ವ್ಯಕ್ತಿತ್ವಕ್ಕೆ ಒಪ್ಪವಿಡುವ ಪುಸ್ತಕ.
- ಪ್ರತಿಯೊಬ್ಬನೂ ಸಂಗ್ರಹಿಸಬೇಕಾದ ಸುಖಜೀವನದ ಕೈಗನ್ನಡಿ.

ಬೆಲೆ: ಒಂದೂವರೆ ರೂಪಾಯಿ

ನಮ್ಮಲ್ಲಿ ದೊರೆಯುವ ಇತರ ಪುಸ್ತಕಗಳ ಕೆಟಲಾಗಿಗೂ, ಪಾಚನಾಲಯ, ಹೈಸ್ಕೂಲ್, ಕಾಲೇಜುಗಳಿಗೂ ನಾವು ಕೊಡುವ ಕಮಿಶನ್ ವರಕ್ಕೂ ಬರೆಯಿರಿ
1. ನವಯುಗಪ್ರೆಸ್, ಉಡುಪಿ. 2. ನವಭಾರತ ಪುಸ್ತಕ ಭಂಡಾರ, ಉಡುಪಿ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ ಶ್ರೀ. ಕೂರಡ್ಕತ್ತಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಯನ್ನು ಇಂದೇ ತರಿಸಿಕೊಳ್ಳಿರಿ

ಬೆಲೆ:— ಸಾಧಾರಣ ಪ್ರತಿ— ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ— ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

ದೊರಕುವ ಸ್ಥಳಗಳು:-1) ನವಭಾರತ ಪುಸ್ತಕ ಭಂಡಾರ, ಉಡುಪಿ.
2) ನವಯುಗ ಪ್ರೆಸ್, ಉಡುಪಿ, ದ. ಕ.

ಮಂಗಳೂರು

ಶಂಕುಸ್ಥಾಪನೆ— ಬಲ್ಮಠದ ನಜರೇತ್ ಕಾನ್ವೆಂಟಿಗಾಗಿ ಕಟ್ಟಲಿರುವ ಇಗರ್ಜಿಯ ಶಂಕುಸ್ಥಾಪನೆಯನ್ನು ತಾ. 4ರಲ್ಲು ಮಂಗಳೂರಿನ ಬಿಷಪ್ರಾದ ಡಾ| ವಿ. ಆರ್. ಫೆರ್ನಾಂಡಿಸ್ ರವರು ನೆರವೇರಿಸಿದರು. ಶ್ರೀ ಜೆ. ಪಿ. ಲೇಸ್ರೋರವರು ಸ್ವಾಗತ ಮಾಡಿಗಳನ್ಯಾಡಿದರು. ರೆ| ಫಾ| ಪಿಲಿಪ್ ನೆರಿಯನವರು ವಂದನೆಗಳನ್ನರ್ಪಿಸಿದರು.

ರೋಟರಿ ಕ್ಲಬ್ಬಿನ ಸಭೆಯು ತಾ. 4ರಲ್ಲು ರಾತ್ರಿ ಶ್ರೀ ವಿ. ಎಸ್. ಕುಪ್ಪೆರವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಕೆ. ವಿಶ್ವನಾಥ ಕಾಮತರು ಗತಸಭೆಯ ವರದಿಯನ್ನೋದಿದರು. ಅಂದಿನ ಸಭೆಯ ಪ್ರಮುಖ ಆಕರ್ಷಣೆಗಳಾದ ರೆ| ಫಾ| ಎ. ಸೋಸ್ಸೇರವರು "ಕೈಗಾರಿಕೆಗಳಲ್ಲಿ ದೂರದೃಷ್ಟಿಯ ಸಂಬಂಧ" ಎಂಬ ವಿಚಾರದಲ್ಲಿ ಭಾಷಣಗೈತ್ತರು. ಶ್ರೀಗಳಾದ ಎಚ್. ಕೃಷ್ಣಮೂರ್ತಿ, ಆ ಬೂಬಕ್ಕರ್ ತಂತಮ್ಮ ಅಭಿಪ್ರಾಯಂಗಳನ್ನಿತ್ತರು. ವಂದನಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ನೆರಹೀಡಿತ ಸಹಾಯನಿಧಿಗೆ ಇದೇ ತಾ. 4ರ ತನಕ ರೂಪಾಯಿ 1091-15-7 ಜಮೆಯಾಗಿರುವುದಾಗಿ ಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿಯ ಪತ್ರಿಕಾ ಹೇಳಲಾಗಿದೆ.

ಹರಿಜನ ಸಾರ್ವಜನಿಕ ಸಭೆಯು ಕಳೆದ ತಾ. 31ರಲ್ಲು ಶ್ರೀ ಕೆ. ಈಶ್ವರ, ಎಸ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿ ಕೇಂದ್ರ ಸರಕಾರದ ಸಾಮಾಜಿಕ ಕಲ್ಯಾಣ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರ ಭೇಟಿಯ ಬಗ್ಗೆ ಸಂತಾಪ ಸೂಚಿಸಲಾಯಿತು. ಅವಿಲ ಭಾರತೀಯ ಡಿಪ್ರೆಸ್ಡ್ ಕ್ಲಾಸಸ್ ಲೀಗಿನ ಬಂದು ಶಾಖೆಯನ್ನು ಧ. ಕ. ಜಿಲ್ಲೆಯಲ್ಲಿಯೂ ಸ್ಥಾಪಿಸಬೇಕೆಂದು ಸಭೆಯು ತೀರ್ಮಾನವಾಗಿ ಶ್ರೀಗಳಾದ ಕೆ. ಈಶ್ವರ (ಅಧ್ಯಕ್ಷ), ಕೆ. ನಿಕಲಪ್ಪಾಸ್ತ್ರಿ (ಕಾರ್ಯದರ್ಶಿ), ಕೆ. ಪದಪ್ಪ, ಕೆ. ನೇಮು. ಪಿ. ಮುಕುಂದ, ಎ. ಕೇಶವ ಮತ್ತು ತಿಮ್ಮಯ್ಯ ಗಾರಿಕಾರರೆಂಬ ಕಾರ್ಯಕಾರೀ ಸಮಿತಿ ಸ್ಥಾಪಿಸಲಾಯಿತು.

ಸರ್ಕಲ್ ಕಾಂಗ್ರೆಸ್ ಕಮಿಟಿ ಸಭೆಯು ತಾ. 2ರಲ್ಲು ಸಂಜೆ ಶ್ರೀ ಬಿ. ಭೋಜರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕೇಂದ್ರ ಸರಕಾರದ ಆಹಾರ ಮಂತ್ರಿ ಜನಾಬ್ ರಫಿ ಆಮೆದ್ ಕಿದ್ವಾಯಿ ಆವರ ನಿಧನಕ್ಕೆ ಬಗ್ಗೆ ಸಂತಾಪ ಸೂಚಿಸುವ ನಿರ್ಣಯವು ಮಾಸ್ಯವಾಯಿತು.

ಅಭಿನಯಕೇಸರಿ ಗರೂಡ ಸದಾಶಿವರಾವ್ ಆವರ ನಿಧನದ ಬಗ್ಗೆ ಸಂತಾಪ ಸೂಚಿಸುವ ಸಭೆಯು ಎಸ್. ಕೆ. ನಾಟಕ ಸಭೆಯವರ ನೇತೃತ್ವದಲ್ಲಿ ಜರಗಿತು. ಶ್ರೀಗಳಾದ ಎಸ್. ಪೆಂಕಟೇಶ ನಾಯಕ್, ವೈ ರಾಮ ರಾವ್ ಮತ್ತು ಕಿದ್ವಾಯಿ ಅವರುಗಳ ಬಗ್ಗೆಯೂ ಸಂತಾಪ ಸೂಚಿಸಲಾಯಿತು.

ಗೋಸಾಷ್ಟಮಿ ಉತ್ಸವವು ತಾ. 4ರಲ್ಲು ಮಂಗಳೂರಲ್ಲಿ ಸಾಂಗವಾಗಿ ಜರಗಿತು. ಅಂದು ಬೆಳಿಗ್ಗೆ ಗೋಪೂಜೆ, ಗೋವ್ರಗಳ ಮೆರವಣಿಗೆಗಳಾದುವು. ಸಂಜೆ ಗಣಪತಿ ಹೈಸ್ಕೂಲಿನಲ್ಲಿ ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಶ್ರೀ ಆದಿಶೇಷಾನಂದಜೀಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಡಾ| ಎಸ್. ಎ. ಶರ್ಮಾ, ಶ್ರೀಗಳಾದ ಲಕ್ಷ್ಮಣ ಭಟ್, ಎಸ್. ಆರ್. ನಾರಾಯಣ ಪೊದಲಾದವರು ಭಾಷಣಗೈದರು. ಶ್ರೀ ದಿ. ಮೋಹನರಾಯರು ವಂದನೆಗಳನ್ನರ್ಪಿಸಿದರು.

ಕೆನರಾ ಬೇಂಕಿನ ನಿವ್ವತೆ— ಮುಂದಿನ ತಿಂಗಳಲ್ಲಿ ಸಾರ್ವತ್ರಿಕ ಸಂಪುಟದುನ ಸಿದ್ಧತೆಗಳನ್ನು ಅಖಿಲ ಭಾರತ ಬೇಂಕ್ ನೌಕರರ ಸಂಘವು ನಡೆಸುರುವುದಷ್ಟೆ! ಕೆನರಾ ಬೇಂಕಿನ ನೌಕರರೂ ಸಂಘಿನಲ್ಲಿ ಭಾಗವಹಿಸಿ ಬೇಂಕಿನ ದೈನಂದಿಕ ಕಾರ್ಯಗಳಿಗೆ ತೊಡಕಾಗುವ ಸಂದರ್ಭದಲ್ಲಿ ಏನು ಮಾಡಬೇಕು ಎಂಬುದನ್ನು ವಿಚಾರಿಸಲು ತಾ. 1ರಲ್ಲು ಬೇಂಕಿನ ಕಾಲಂದಾರರ ಸಭೆಯು ಜರಗಿತು. ಶ್ರೀಗಳಾದ ಆರ್. ಬಿ. ಶಿ. ಡಿ. ಅಂದ್ರಾಜೆ, ಮಾಣೀಲ್ ಶ್ರೀನಿವಾಸ ನಾಯಕ್ ಮತ್ತು ಪಿಜಾರ್ ಗೋಪಿನಂದ ಕೈಗಳಿರುವ ಕ್ರಿಯಾ ಸಮಿತಿಯೊಂದು ರಚಿಸಲ್ಪಟ್ಟಿತು. ನೌಕರರು ಸಂಪುಟದಲ್ಲಿ ದಿನಪೂರ್ತಿ ಕಾರ್ಯವೆಸಗಲು ಸ್ವಯಂಸೇವಕರನ್ನು ಸಿದ್ಧಗೊಳಿಸಿಡಬೇಕೆಂದು ನಿರ್ಣಯಿಸಲಾಯಿತು.

ಜಿಲ್ಲಾ ಬೋರ್ಡು ಅಧ್ಯಕ್ಷರ ಚುನಾವಣೆ— ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯ ಕಾರಿ ಮಂಡಳಿ, ಕಾಂಗ್ರೆಸ್ ಜಿಲ್ಲಾಪಂಚಾಯತ್ ಸಮಿತಿ ಮತ್ತು ಜಿಲ್ಲಾ ಬೋರ್ಡು ಕಾಂಗ್ರೆಸ್ ಪಕ್ಷದ ಸದಸ್ಯರ ಸಭೆಯು ತಾ. ತಾ. 6ರಲ್ಲು ಸೇರಿ ಕಾಂಗ್ರೆಸ್ ಕಡೆಯಿಂದ ಅಧ್ಯಕ್ಷತೆಗೆ ಯಾರು ಉಮೇದ್ವಾರರಾಗಿ ನಿಲ್ಲಬೇಕೆಂಬುದನ್ನು ಚರ್ಚಿಸಿದರು. ಅಧ್ಯಕ್ಷರ ಚುನಾವಣೆ ದಿನ ತಾ. 12ನೇ ಬೆಳಿಗ್ಗೆ 9 ಗಂಟೆಗೆ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷತೆಯಲ್ಲಿ ಸೇರಿ ತಮ್ಮ ಉಮೇದ್ವಾರರು ಯಾರೆಂಬುದನ್ನು ಚುನಾವಣೆಯ ಮುಹೂರ್ತದ ಅಧಿಕಾ ಒನ್ನು ತಿಳಿದು ನಿರ್ಣಯಿಸಿಕೊಳ್ಳಬೇಕೆಂದು ತೀರ್ಮಾನವಾಯಿತು.

ತಾಲಾ ದಿನಾಚರಣೆ— ಪುಣಾಗ್ರಿಸ್ ಸ್ಯಾನ್ಸೈಲಿನ ತಾಲಾ ದಿನಾಚರಣೆಯು ತಾ. 4ರಲ್ಲು ಸಂಜೆ ಶ್ರೀ ಬಿ. ವೈಕುಂಠ ಬಾಳಿಗ, ಎಸ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ತಾಲಾ ಜೆಡ್ಜ್ಮೆಂಟ್ ರೆ| ಫಾ| ಪಿ. ಅರಾಸ್ಸರು ವರದಿಯನ್ನೋದಿದರು. ಜಿಲ್ಲೆಯ ಲ್ಲಿ ಕಥೋಲಿಕ್ ವಿದ್ಯಾಸಂಸ್ಥೆಗಳು ಮಾಡುತ್ತಿರುವ ಸೇವೆಯನ್ನು ಪ್ರಶಂಸಿಸಿ ಅಧ್ಯಕ್ಷರು ಸೂಚನೆಯಿತ್ತರು. ಬಳಿಕ ತಾಲಾ ವಿದ್ಯಾರ್ಥಿಗಳ ವಿವಿಧ ವಿನೋದಾವಳಿಗಳಾದುವು.

(ಇನೇ ಪುಟದಿಂದ)

ಗಾರರು ಸುಖಜೀವನವನ್ನು ನಡೆಸಬಹುದು. ಇಲ್ಲಿ ಹೊಸತಾಗಿ ಸಕ್ಕರೆ ಕಾರ್ಖಾನೆಯನ್ನು ತೆರೆಯಬಹುದು. ವಿಲ್ಲಿಯಾವರಿನಲ್ಲಿ ಕಾಫ್ಪಿ ಸೋಪಿನ ಕಾರ್ಖಾನೆಯನ್ನು ತೆರೆಯಲು ಅನುಕೂಲವಾಗುವಷ್ಟು ಸುಣ್ಣದ ಕಲ್ಲಿನ ನಿಕ್ಷೇಪ ಕಂಡುಬರುತ್ತದೆ. ಒಂದು ಸಿಮೆಂಟು ಕಾರ್ಖಾನೆಯನ್ನು ಸ್ಥಾಪಿಸಲು ಅವಕಾಶವುಂಟು. ಕಾಮ ಕಲ್ಲಿದ್ದಲಿನ ದೊಡ್ಡ ಸಂಗ್ರಹವೂ ಬಾಹುವಾರಿನಲ್ಲಿ ಕಂಡುಬರುತ್ತದೆ. ಈಗ ೨೦ ನಂಬ್ರದ ನೂಲನ್ನು ಮಾತ್ರ ಗಿರಣಿಗಳಲ್ಲಿ ತಯಾರಿಸುತ್ತಿದ್ದು ಇನ್ನು ಮುಂದೆ ೫೦ರಿಂದ ೬೦ ನಂಬ್ರದ ವರೆಗಿನ ನೂಲನ್ನು ತಯಾರಿಸಲು ಬರುವಂತೆ ಹತ್ತಿಯನ್ನು ಬೆಳೆಸಬಹುದು. ಭಾರತ ಸರಕಾರವು ಪಂಚವಾರ್ಷಿಕ ಯೋಜನೆಯನ್ನು ಇಟ್ಟಿಗೆ ವಿಸ್ತರಿಸುವಾಗ ಇವೆಲ್ಲ ಸಂಗತಿಗಳನ್ನು ಪರ್ಯಾಲೋಚಿಸುವುದೆಂದು ಆಶಿಸೋಣ.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 304/1954.

ಶ್ರೀ ವಿಶ್ವೋತ್ತಮತೀರ್ಥ ಸ್ವಾಮಿಯವರು. ಇವರ ಜನರಲ್ ಏಜೆಂಟ್ P. ಶ್ರೀಪತಿ ಆಚಾರ್ ಶ್ರೀ ಸೋದೆಮಠ ಉದ್ದಿ..... ವಾದಿರು.

ಮತ್ತು

ಮಹಾಬಲ ಶೆಟ್ಟಿ, ಸುಬ್ಬು ಶೆಟ್ಟಿ ಮಗ ಉದ್ದಿ ತಾಲ್ಲೂ ಬೆಳಪು ಗ್ರಾಮು...ಪ್ರತಿವಾದಿ.

ವಾದಿರು ನಿಮ್ಮ ಮೇಲೆ ವಿಜಯ ಸಂವತ್ಸರದ ಗೇಣಿ ಬಾಕಿ ಕೇಳಿ ರೂ. 949—4—0 ಕ್ಕೆ ದಾವಲು ಮಾಡಿದ ಮೇಲಿನ ದಾವೆಯು ನಿಮ್ಮ ಹಾಜರಾತಿಯ ಬಗ್ಗೆ ತಾರೀಕು 26—11—1954ರಲ್ಲು ಬೆಳಿಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಇಟ್ಟಿರುವುದರಿಂದ, ಸದರಿ ತಾರೀಕಿನಲ್ಲಿ ನೀವು ಸ್ವತಹಾ ಅಥವಾ ವಕೀಲರ ಮುಕಾಂತರ ಹಾಜರಾಗಿ ನಿಮ್ಮ ಉದಾಪರಣೆ ಇರುವಲ್ಲಿ ದಾವಲು ಮಾಡಬಹುದಾಗೂ, ತಪ್ಪಿದಲ್ಲಿ ಸದರಿ ದಾವಾ ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲ್ಪಡುತ್ತದಾಗಿಯೂ, ಈ ಮೂಲಕ ನಿಮಗೆ ತಿಳಿಯಪಡಿಸೋಣವಾಗುತ್ತದೆ.

A. N. Sitaramachar.
Advocate for Plaintiff.
Karkala Date 6—11—1954.

ಅತ್ಯಂತ ಕಡಿಮೆ ಬೆಲೆಗೆ

ನಾಟಕಗಳಿಗೆ ಬೇಕಾಗುವ ಹೆಂಗಸರ ಮತ್ತು ಗಂಡಸರ ಕೂದಲು ತೋಪಸ್, ಗಡ್ಡ, ಜರಿ ಮುಂದಾನು, ಯಾವದೇ ವಿಧದ ಕೀಟಿ ಪಟ್ಟಿ, ಈಟಿ, ಹೆಚ್ಚೇಕಿ ಯಾವತ್ತೂ ನಾಟಕದ ಸಾಮಾನುಗಳು ಅತ್ಯಂತ ಸುಲಭ ಬೆಲೆಗೆ ಧಾರಾಳವಾಗಿ ದೊರೆಯುತ್ತವೆ.

ನವಿವರ ಕ್ಯಾಟಲಾಗಿಗೆ ನಿಮ್ಮ ಪೂರ್ಣ ವಿಳಾಸದೊಂದಿಗೆ ಕೂಡಲೇ ಬರೆಯಿರಿ.

DHARAMSHI MULGI DRESSWALLA
132 C, Bhagat wadi Bhuleshwar Road. BOMBAY-2

ಕಾರ್ತಿಕ ಬಹುಳ ಅಮಾವಾಸ್ಯೆ ತಾ|| 25—11—54 ಗುರುವಾರ

ಅಮೂಲ್ಯವಾದ ಆರು ಗ್ರಂಥಗಳ ಪ್ರಕಟಣೆ.

ಕನ್ನಡ ಕವಿರತ್ನ ಹೊಸಕೆರೆ ಚಿದಂಬರಯ್ಯನವರ

ಗೀತಾರ್ಥ ಚಂದ್ರಿಕೆ:- ಶ್ರೀಶಂಕರಾರ್ಯ ತಾತ್ಪರ್ಯ ವ್ಯಾಸಕ್ರಮ ಮತ್ತು ವಿಷಯಾನುಕ್ರಮಣಿಕೆಯುಂದ ಕೂಡಿದೆ. ಶ್ರೀಕೃಷ್ಣನು ಪರಮಾತ್ಮನು ಅರ್ಜುನನಿಗೆ ಗೀತೋಪದೇಶ ಮಾಡಿದ್ದು ಕಾರ್ತಿಕ ಬಹುಳ ಅಮಾವಾಸ್ಯೆ. ಳಲಂ ಪುಟಗಳು. ಬೆಲೆ: ರೂ. 3 4-0

ನೀತಿಗಳ ನೆಲಗಟ್ಟು ಧರ್ಮ ಮತ್ತು ನೀತಿ ಗ್ರಂಥ ಪುಟಗಳು ೨೩೦ ಬೆಲೆ: ರೂ. 2-0-0

ವೇದಾಂತದ ರೂಪರೇಖೆ ವೇದಾಂತ ಗ್ರಂಥ ಪುಟಗಳು ೫೫ ಬೆಲೆ 0-12-0

— ಎಂ. ವೆಂಕಟಾದ್ರಿ ಶಾಸ್ತ್ರಿಗಳವರ —

ಮಾಯಾವಿ ಅದ್ಭುತ ಸತ್ಯೇದಾರಿ ಕಾದಂಬರಿ ಪುಟಗಳು ೩೩೦ ಬೆಲೆ: ರೂ. 1-8-0

— ಕುಲಕರ್ಣಿ ಬಿಂದುಮಾಧವರ—

ಕಲಾಜ್ಯೋತಿ ಅತ್ಯುತ್ತಮ ಸಾಮಾಜಿಕ ಕಾದಂಬರಿ ಪುಟಗಳು ೧೬೦ ಬೆಲೆ: ರೂ. 1-4-0

— ಡಾಕ್ಟರ್ ಬಿ. ವಿ. ವೆಂಕಟೇರಯ್ಯನವರ —

ಪುಷ್ಪಲತ ವಿಶ್ವರ್ ಹ್ಯೂಗೋರವರ ಬ್ಲಾಕ್‌ಟುಲಿಪ್ ಎಂಬ ಪ್ರೇಕ್ಷ್ಯ ಇಂಗ್ಲೀಷ್ ಕಾದಂಬರಿಯ ಅನುವಾದ ಪುಟಗಳು ೨೪೦ ಬೆಲೆ: ರೂ. 1-8-0

ದಯವಿಟ್ಟು ನಿಮ್ಮ ಬೇಡಿಕೆಯನ್ನು ಇಂದೇ ಕಳುಹಿಸಿರಿ.

ಸಾಹಿತ್ಯ ಕುಟೀರ,
೨೮೧, ಜನೆ ಕ್ರಾಸ್ ರೆಸ್ಟ್ ಚಾಮರಾಜ ಪೇಟೆ,
ಬೆಂಗಳೂರು ೨.

ಮಾರಾಟಗಾರರು:— ಎಸ್. ಎಸ್. ಎನ್. ಬುಕ್ ಡಿಪೊ, ಬೆಂಗಳೂರು ೨.

ಪ್ರಬಂಧ ಸ್ಪರ್ಧೆ

"ಪುಸ್ತಕ ಮಾಸ"ದ ಶುಭ ಪ್ರಸಂಗದಲ್ಲಿ "ನವಯುಗ" ವಾರಪತ್ರಿಕೆಯು ಸರ್ವರಿಗಾಗಿ ಒಂದು ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲು ನಿರ್ಧರಿಸಿದ್ದೇವೆ. ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನವನ್ನು ಹೊಂದಿದ (೧) "ಮಧುವನ" (ವಿವಿಧ ಕತೆಗಾರರು) (೨) "ಕವಿತಾಕಾಮಿನಿ" (ಎಸ್. ವೆಂಕಟರಾಜ) (೩) "ಕಾವ್ಯ ಸಾಮ್ರಾಜ್ಯ" (ವಿವಿಧ ಕವಿಗಳು) (೪) "ವಿಶೇಷವಾದ ಸಂಪತ್ತು" (ಕು. ಶಿ. ಹರಿದಾಸ ಭಟ್ಟ) ಮತ್ತು (೫) ಬದುಕು ಬಂಗಾರ (ಕುಮಾರ ಸ್ವಾಮಿ) — ಈ ಐದು ಪ್ರಬಂಧಗಳಲ್ಲಿ ಯಾವುದಾದರೂ ಒಂದರ ಕುರಿತು ನಿರ್ದಾರ್ತಕ ಪ್ರಬಂಧವನ್ನು ಇದೇ ನವಂಬರ್ ೨೦ನೇ ತಾರೀಕಿನೊಳಗೆ ನಮ್ಮ ಕೈ ಸೇರುವಂತೆ ಬರೆದು ಕಳುಹಿಸಬೇಕು. ಪ್ರಬಂಧವು ಫುಲ್ಸ್ಕ್ಯಾಪ್ ೩ ಪಾಳೆಗಳನ್ನು ಮೀರಿರಬಾರದು.

ಪರೀಕ್ಷಣ ಸಮಿತಿಯವರು ನಿರ್ಣಯಿಸಿದ ಯೋಗ್ಯ ಪ್ರಬಂಧಗಳಿಗೆ ಕೆಳಗಿನಂತೆ ಬಹುಮಾನಗಳನ್ನು ಕೊಡಲಾಗುವುದು:—

ಪ್ರಥಮ ಬಹುಮಾನ: ೩೫ ರೂಪಾಯಿ.
ದ್ವಿತೀಯ ಬಹುಮಾನ: ೧೫ ರೂಪಾಯಿ.
ತೃತೀಯ ಬಹುಮಾನ: ೧೦ ರೂಪಾಯಿ.
(ಬಹುಮಾನಗಳು ಗ್ರಂಥ ರೂಪದಲ್ಲಿ ಕೊಡಲ್ಪಡುತ್ತವೆ.)

"ನವಯುಗ" ವಾರಪತ್ರಿಕೆ,
ಉಡುಪಿ, ದ. ಕನ್ನಡ.

ಕರ್ನಾಟಕದಲ್ಲೆಲ್ಲ ಜನಪ್ರಿಯವಾದ
ಅತಿ ಕಡಿಮೆ ಬೆಲೆಯ

ಗೀತೆಯ ಕೈಗನ್ನಡಿ

ಹೊಸಕೆರೆ ಚಿದಂಬರಯ್ಯನವರ
ಸರಳ ಕನ್ನಡ ಆರ್ಥಸಹಿತವಾದ
ಭಗವದ್ಗೀತೆ

ಬೆಲೆ: 0-8-0

ಕೋರ್ಟು ಮತ್ತು ಸೊಸೈಟೀ ಫೋರ್ಮುಗಳೂ ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ. ಅಥವಾ
ನವಭಾರತ ಬುಕ್ ಡಿಪೊ, ಉಡುಪಿ.

ಏಕೀಕರಣದ ಒಗಟು

(೧೨ನೇ ಪುಟದಿಂದ)

ಸರಕಾರದ ನೌಕರರ ವಿಷಯದಲ್ಲಿಯೆ ಷ್ಟೇ ಅಲ್ಲ—ಇತರ ಕೆಲವು ಬಡಜಿತ ಸಮಸ್ಯೆಗಳಿಗೂ ಹೊಸತಾಗಿ ನಿರ್ಣಾಣವಾಗುವ ಕನ್ನಡ ರಾಜ್ಯ ಅವಕಾಶ ಕೊಡುವುದೆಂದು ಸಮಿತಿ ಹೇಳುತ್ತದೆ. ಉದಾಹರಣೆಗೆ, ಹೈದರಾಬಾದಿನಲ್ಲಿ ಪಾನನಿರೋಧ ಶಾಸನವು ಜ್ಯಾರಿಯಲ್ಲಿಲ್ಲ, ಆದರೆ ಅದಕ್ಕೆ ಹೊಂದಿಕೊಂಡ ಮುಂಬಯಿ ಸುತ್ತು ಮೈಸೂರಿನ ಜಿಲ್ಲೆಗಳಲ್ಲಿ ಯಾರೂ ಮದ್ಯ ಪಾನವನ್ನು ಮಾಡುವಂತಿಲ್ಲ. ಇಂಥ ಪರಿಸ್ಥಿತಿ ಕಳ್ಳಸಾಗಾಟಕ್ಕೆ ಪ್ರೋತ್ಸಾಹ ಕೊಡಬಹುದು. ಭೂ ಸಾಗುವಳಿಯ ಸಂಬಂಧದಲ್ಲೂ ಒಂದೊಂದು ಪ್ರದೇಶದಲ್ಲಿ ಒಂದೊಂದು ಕಾಯಿದೆ ಜ್ಯಾರಿಯಲ್ಲಿದ್ದು ಹೊಸ ರಾಜ್ಯವನ್ನು ರಚಿಸುವುದಾದಲ್ಲಿ ಎಲ್ಲೆಜೆಗೂ ಅನ್ವಯಿಸುವ ಶಾಸನವನ್ನು ಮಾಡಬೇಕಾಗುತ್ತದೆ. ಹೈದರಾಬಾದಿನ ಕನ್ನಡ ಪ್ರದೇಶಗಳಲ್ಲಿ ಶಾಂತಿ ಮತ್ತು ಕಾಯಿದೆ ವ್ಯವಸ್ಥೆಯನ್ನು ಇನ್ನೂ ಕೆಲಸಮಯದ ವರೆಗೆ ನಿರೀಕ್ಷಿಸುತ್ತಿರುವುದು ಒಳಿತೆಂದು ಸಮಿತಿ ಸೂಚಿಸುತ್ತದೆ. ಆಯಕಟ್ಟಿನ ಪ್ರಸಂಗಗಳಲ್ಲಿ ಸುವ್ಯವಸ್ಥೆ ಮತ್ತು ಭದ್ರತೆಯನ್ನು ಕಾಯ್ದುಕೊಳ್ಳಲೂ ಶೀಘ್ರ ನಿರ್ಣಯಗಳನ್ನು ಕೈಗೊಳ್ಳಲೂ ಅಭಿವೃದ್ಧಿ ಪ್ರಯತ್ನಗಳನ್ನು ಹತ್ತಿರದಿಂದ ನಿರೀಕ್ಷಿಸುತ್ತಿರಲೂ ಸಾಧ್ಯವಾಗುವಂತೆ ಮುಂಬಯಿ ವ.ತ್ತು ಹೈದರಾಬಾದು ರಾಜ್ಯಗಳ ಕನ್ನಡ ಪ್ರದೇಶಗಳನ್ನು ಒಬ್ಬ ಕಮಿಶನರ ಕೈಕೆಳಗೆ ಒಪ್ಪಿಸುವುದು ವಿಹಿತವೆಂದು ಸಮಿತಿ ಹೇಳುತ್ತದೆ.

ಈಗಿನ ಜಿಲ್ಲೆಗಳ ವಿಸ್ತಾರವು ಬಹಳ ಹೆಚ್ಚಿದೆಯೆಂದೂ ಆವುಗಳನ್ನು ವ್ಯವಸ್ಥಿತ ರೀತಿಯಲ್ಲಿ ಪುನರ್ಘಟಿಸುವುದು ಇಷ್ಟೇನೂ ಸಮಿತಿಯ ಅಭಿಪ್ರಾಯ. ಕಂದಾಯ ಮಂಡಳವನ್ನು ನೇಮಿಸಿದ ತರುವಾಯ ಅದು ಈ ಪ್ರದೇಶಗಳನ್ನೆಲ್ಲ ಸುತ್ತಾಡಿ ಬಂದರಾಗಬಹುದೆಂದು ಸಮಿತಿಗೆ ತೋರುತ್ತದೆ. ಹೈಕೋರ್ಟಿನಲ್ಲಿ ನ್ಯಾಯಾಧೀಶರ ಸಂಖ್ಯೆಯನ್ನು ಹೆಚ್ಚಿಸಬೇಕಾದೀತಲ್ಲದೆ, ಉಳಿದ ಕನ್ನಡ ಪ್ರದೇಶಗಳಿಗೆ ಬೆಂಗಳೂರು ನಗರವು ಬಹಳ ದೂರವಾಗುವುದರಿಂದ, ಹೈಕೋರ್ಟನ್ನು ಯಾವುದಾದರೊಂದು ಮಧ್ಯವರ್ತಿ ಸ್ಥಳಕ್ಕೆ ವರ್ಗಾಯಿಸುವುದೂ ಇಷ್ಟವೆಂದು ಸಮಿತಿ ಭಾವಿಸುತ್ತದೆ. ಸಮಿತಿಯು ನೈಸರ್ಗಿಕ ಸಂಪತ್ತಿನ ವಿಷಯದಲ್ಲಿ ಪಾಗು ಪಂಚವಾರ್ಷಿಕ ಯೋಜನೆಯ ಪ್ರಗತಿಯ ವಿಷಯದಲ್ಲಿ ಏನು ಹೇಳಿದೆ ಎಂಬ ವಿಷಯವನ್ನು ಪತ್ರಿಕೆಗಳಲ್ಲಿ ಪ್ರಕಟವಾದ ಸಂಶಗಳು ಸಾಕಷ್ಟು ವಿವರವಾಗಿ ಹೇಳುವುದಿಲ್ಲ. ಹೈದರಾಬಾದು ಕರ್ನಾಟಕದಲ್ಲಿ ನಿಜಾಗಾರಿಕೆಯನ್ನೂ ಬಟ್ಟೆಯ ಕೈಗಾರಿಕೆಯನ್ನೂ ಅಭಿವೃದ್ಧಿಗೊಳಿಸಬಹುದು; ಮುಂಬಯಿ ಕರ್ನಾಟಕದಲ್ಲಿ ಬಟ್ಟೆ ನುತ್ತು ಕಾಗದ ತಯಾರಿಕೆಯ ಉದ್ದಿಮೆಯನ್ನು ನಡೆಸಬಹುದು ಎಂದು ಮಾತ್ರ ಸಮಿತಿ ಸೂಚಿಸುತ್ತದೆ. ಈಗಾಗಲೇ ಕೈಗೊಳ್ಳಲಾಗಿರುವ ಅಭಿವೃದ್ಧಿ ಪ್ರಯತ್ನಗಳ ದೆಸೆಯಿಂದ ೨೬ ಕೋಟಿ ರೂಪಾಯಿಗಳ ಸಾಲಕ್ಕೆ ಹೆಗಲೊಡ್ಡಬೇಕಾದೀತೆಂದೂ ಸಾಮಾಜಿಕ ಸೇವೆಯು ಹೊರತಾದ ಪ್ರಥಮ ಹೆಜ್ಜೆ ಎಂಬುದಾಗಿಯೂ ಅವರು ಕರೆದಿದ್ದರು. ಆದರೆ ಅಂದಿನ ತಪ್ಪು ಧೋರಣೆಯನ್ನು ಅವರು ಹಿಂದಿನಿಂದ ಬದಲಿಸಿಕೊಂಡರು. ಈಗ— ಆ ಪರಿಂದ ನೇಮಕಗೊಂಡ ಶೇಶಾದ್ರಿ ಸಮಿತಿಯು ಹೇಳಿದಷ್ಟು ಸುಲಭವಾಗಿ ಏಕೀಕರಣವನ್ನು ಸಾಧಿಸಲಾಗದೆಂದು ತನ್ನ ವರದಿಯ ಮೂಲಕ ಎಚ್ಚರಿಕೆ ಕೊಡುತ್ತದೆ.

ಕನ್ನಡಿಗರ ಜೀವಾಳದ ಪ್ರಶ್ನೆಯೇ ಏಕೀಕರಣ—ಅದನ್ನು ಮೈಸೂರಿನವರು ಲಘುವಾಗಿ ತಿಳಿದುಕೊಳ್ಳಬಾರದು. ಹೊರಗಿನ ಕನ್ನಡಿಗರು ಏಕೀಕರಣದ ಬಗ್ಗೆ ಎಷ್ಟು ಉತ್ಸಾಹವನ್ನು ತೋರಿಸುವರೆಂದು ಫಜಲ ಅಲಿ ಆಯೋಗಕ್ಕೆ ಒಪ್ಪಿಸಿದ ಮಾನವಿಗಳ ರಾಶಿಯೇ ಸ್ಪಷ್ಟವಾಗಿ ಹೇಳುತ್ತದೆ. ಕೊರತೆಯ ಪ್ರದೇಶಗಳು ಇವಾದುದರಿಂದ, ಮೈಸೂರಿನೊಡನೆ ಸೇರಿ ಲಾಭ ಹೊಂದಲು ಅಲ್ಲಿಯ ಜನರು ಬಯಸುವರೆಂಬುದನ್ನು ಮಾತ್ರ ಲೆಕ್ಕಕ್ಕೆ ಹಿಡಿದು ಕೊಂಡರೆ ದೊಡ್ಡ ತಪ್ಪನ್ನು ಮಾಡಿದಂತಾದೀತು. ಕೊರತೆಯ ಭಾಗಗಳೆಂದು ಇಂದು ಸಮಿತಿಯು ಭಾವಿಸಿರುವ ಪ್ರದೇಶಗಳಲ್ಲಿಯ ವಿಪುಲ ನೈಸರ್ಗಿಕ ಸಂಪತ್ತಿಗೆ ಸಮಿತಿಯು ಸಾಕಷ್ಟು ಮುಕ್ತ ಕೊಟ್ಟಿಲ್ಲವೆಂದು ತೋರುವುದಿಲ್ಲ. ಈಗಲಾದರೂ ಇಲ್ಲಿ ಆದಾಯಕ್ಕಿಂತಲೆಚ್ಚು ಆಧಿಕವೆಂದು ಎಲ್ಲರೂ ಭಾವಿಸುವುದಿಲ್ಲ ಹಾಗಷ್ಟವೆಂದಿಟ್ಟುಕೊಂಡರೂ ಸಂಪತ್ಸಮೃದ್ಧವಾದ ರಾಜ್ಯವೊಂದನ್ನು ನಾಳೆಯಾದರೂ ಕಟ್ಟೋಣ ಎಂಬ ಕೆಚ್ಚಿದೆಯಿಂದ ಇಂದಿನ ಕಲವು ಆತಂಕಗಳನ್ನು ಇದಿರಿಸುವುದರಲ್ಲಿಯೇ ಶ್ರೇಯಸ್ಸುಂಟು—ಮೈಸೂರಿನ ಪ್ರಭೃತಿಗಳು ದಯಮಾಡಿ ಇವನ್ನು ಮನಗಾಣಬೇಕು. ಬಹುದಿನಗಳ ಬಯಕೆಯೊಂದು ಕೇಂದ್ರ ಸರಕಾರದ ಕೃಪೆಯಿಂದ ಪೂರ್ಣವಾಗುವ ಶುಭ ಲಕ್ಷಣಗಳು ಕಾಣಿಸಿಕೊಂಡಿರುವಾಗ ಅವಲಕ್ಷಣ ಮಾತನಾಡಬಾರದು; ಹೊರಗಿನ ಕನ್ನಡಿಗರಿಗೆ ವಿಲಕ್ಷಣವಾದ ಭಾರವನ್ನು ಹೇಳಿಸಿಕೊಡುವ ಹವ್ಯಾಸಕ್ಕೂ ಹೋಗಬಾರದು.

—ಕಾರ್ತಿಕೇಯ.

ಸಿಹಿಮೂತ್ರ

ರೋಗ ನಿವಾರಣೆ.

(DIABETES)

ಏಳು ದಿನಗಳಲ್ಲಿ ಗುಣವಾಗುತ್ತದೆ

ಮೂತ್ರದಲ್ಲಿ ಸಕ್ಕರೆ ಹೆಚ್ಚು ಹೋಗುವ ದಕ್ಕೆ ಸಿಹಿಮೂತ್ರ ರೋಗ (Diabetes) ಎಂದು ಕರೆಯುತ್ತಾರೆ. ಎಂಥ ಭಯಂಕರ ರೋಗವೆಂದರೆ, ಇದಕ್ಕೆ ಇದು ಬಲಿಯಾದ ರೋಗಿಯು ದಿನದಿನಕ್ಕೆ ಸಾವಿನತ್ತ ಸಾಗುತ್ತಿರುತ್ತಾನೆ. ಇದರ ಚಿಕಿತ್ಸೆಗೆ ಡಾಕ್ಟರು ಇಂಜಕ್ಷನ್ ಕಂಡುಹಿಡಿದಿದ್ದಾರೆ. ಆದರೆ ಇದರಿಂದ ರೋಗ ಸಂಪೂರ್ಣವಾಗಿ ವಾಸಿಯಾಗುವುದಿಲ್ಲ. ಇಂಜಕ್ಷನ್ನಿನ ಪರಿಣಾಮ ಇರುವವರೆಗೆ ಸಕ್ಕರೆ ಅಂಶ ಸ್ವಲ್ಪ ಕಡಿಮೆಯಾಗುತ್ತದೆಯಷ್ಟೆ.

ಈ ರೋಗದ ಮುಖ್ಯ ಲಕ್ಷಣಗಳಾವುವೆಂದರೆ ಹಸಿವು ನೀರಡಿಕೆ ಅತಿ ಹೆಚ್ಚಾಗುವುದು, ಮೂತ್ರದಲ್ಲಿ ಹೆಚ್ಚು ಸಕ್ಕರೆ ಹೋಗುವಿಕೆ ಸುತ್ತ ನವೆಯಾಗುವುದು ಇತ್ಯಾದಿ.

ಈ ಖಾಯಿಲೆ ಉಲ್ಬಣಾವಸ್ಥೆಗೆ ಹೋದಾಗ ಹುಣ್ಣು, ಗುಳ್ಳೆ, ಕಣ್ಣಿನಲ್ಲಿ ಪೊರೆ ಸುತ್ತು ಇತರ ತೊಡಕುಗಳು.

ವೀನಸ್ ಚಾರ್ಮ್ ಆಧುನಿಕ ಕಾಲದ ವೈದ್ಯಕೀಯ ಪವಾಡ ಇದರಿಂದ ಸಾವಿರಾರು ಜನರು ಮೃತ್ಯುವಿನ ಪವಡೆಯಿಂದ ಪಾರಾಗಿದ್ದಾರೆ, "ವೀನಸ್ ಚಾರ್ಮ್" ಸೇವನೆಯಿಂದ ಎರಡನೆ ಆಥವಾ ಮೂರನೆಯ ದಿನದಿಂದ ಮೂತ್ರದಲ್ಲಿ ಸಕ್ಕರೆ ಹೋಗುವಿಕೆ ಕಡಿಮೆ ಆಗುವುದು. ಹೆಚ್ಚು ಸಲ ಮೂತ್ರಕ್ಕೆ ಹೋಗುವುದು ಕಡಿಮೆಯಾಗುತ್ತದೆ. ನಾಲ್ಕನೆಯ ದಿನದಿಂದ ನೀವು ಆರ್ಧ ಗುಣವಾಯಿತೆಂದು ಭಾವಿಸುವಿರಿ. ನೀವು ಯಾವ ಪಥ್ಯಗಳನ್ನು ಮಾಡಬೇಕಾಗಿಲ್ಲ. ವಿವರಣಾತ್ಮಕ ಕೈಪಿಡಿಗೆ ಬರೆಯಿರಿ. ೫೦ ಮಾತ್ರೆಗಳ ಒಂದು ಶೀಸೆಗೆ, ರೂಪಾಯಿ 6-12-0. ಪ್ಯಾಕಿಂಗ ಮತ್ತು ಅಂಚೆ ವೆಚ್ಚ ಉಚಿತ.

Venus Research Laboratory (N. W.)
Post Box No. 587, CALCUTTA.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂವಿಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಲಂಜೆ ವ್ಯಾಸಾಚಾರ್ಯರ
ಪಾತ್ರೆ ಭಂಡಾರ,
ರಥಬೀದಿ ಉಡುಪಿ.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ವರಪ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

BHUVANENDRA PRODUCTS LTD., KATAPADI, S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು
ಜನಪ್ರಿಯವಾಗಿರುವವು.
ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು
ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:—

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್ ಕಟಪಾಡಿ, ದ. ಕ.

ಡಿಪೋ:— (1) ಉಡುಪಿ (2) ಮಂಗಳಾತ ಗಲ್ಲಿ, ಹುಬ್ಬಳ್ಳಿ.

ಕುಮಾರಿ ಬಿಲ್ಲೆಗಳು (ಸರಕಾರಿ ರಜಿಸ್ಟರ್)

ಹದತಪ್ಪಿದ ಮುತ್ತು ನಿಂಪುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಭಾದಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ 5/- ಸ್ಪೆಶಲ್ ರೂ.8/-

Mrs. P. DEVEE, F. Ds. (N. J.) (ವಿ.ಪಿ.ಪಿ. ಪ್ರತ್ಯೇಕ)
CALCUTTA—40 ಸ್ಥಾನಿಕರು: ರಘಾಕಂಪೆನಿ, ಮಂಗಳೂರು

ಜವಾಹರಲಾಲ ನೆಹರು

(೨ನೇ ಪುಟದಿಂದ)

ಸಂತೋಷದಿಂದಲೇ ಒಪ್ಪಿದ್ದಂತೆ ಕಾಣುವುದೆಂದು ಪಟ್ಟಾಭಿ ಸೀತಾರಾಮಯ್ಯ ಹೇಳಿದುದನ್ನು ಇಲ್ಲಿ ಜ್ಞಾಪಿಸಬಹುದು.

ಕುದುರೆಯು ಲಗಾಮನ್ನು ಎಳೆದೆಳೆದ, ಬಟ್ಟು ಬಟ್ಟು ಗಾಡಿಯೋಡಿಸಬೇಕಾಗುವಂತೆ, ನೆಹರುಗಳ ಮನಸ್ಸು ಸರಿಯಾದ ರೀತಿಯಲ್ಲಿ ಕೆಲಸ ಮಾಡುವಂತೆ ಗಾಂಧೀ ತುಂಬ ಶ್ರಮ ಪಡಿಸಿದರು. ಜೋತಿಲಾಲರು ಭಾರತೀಯ ಘಟನೆಯ ಸುಧಾರಣೆಗಳ ವರದಿಯನ್ನು ಒಪ್ಪಿಸಿದಾಗ, ಜವಾಹರಲಾಲರು ಅದಕ್ಕೆ ಸಹಿಹಾಕಿದ್ದರು. ಕರಾಚಿಯ ಅಧಿವೇಶನದಲ್ಲಿ ಮೂಲ ಭೂತ ಹಕ್ಕುಗಳ ಗೊತ್ತುವಳಿಯ ಕಾಲದಲ್ಲಿ ಅವರು ಮಹಾತ್ಮರ ಅಭಿಪ್ರಾಯವನ್ನು ತಮಗನುಕೂಲವಾಗುವಂತೆ ತಿರುಗಿಸಲು ಸ್ಪರ್ಧಿಸಿ ವಿಫಲರಾಗಿದ್ದರು. ಗಾಂಧಿ ಅಮರ್ವಿನ ಒಡಂಬಡಿಕೆಯಿಂದ ಬಡಿಕ ನೊಂದವರಲ್ಲಿ ನೆಹರು ಒಬ್ಬರು. ಇದನೆಲ್ಲ ತಿಳಿದ ಗಾಂಧಿಯವರು ಹೋರಾಟದೇ ನೆಹರುವಿಗೆ ಪ್ರಿಯವಾದುದೆಂದು ಖಚಿತ ಮಾಡಿ, ಅವರನ್ನು ಪ್ರತಿಯೊಂದೂ ಅಂದೋಲನದಲ್ಲಿ ಧುಮುಕಿಸಿದರು. ಒಟ್ಟು ಹದಿನಾರು ವರ್ಷಗಳನ್ನು ಸೆರೆಮನೆಯಲ್ಲಿ ಕಳೆದ ನೆಹರುಗಳು ಆಲ್ಲಿಯೂ ತಮ್ಮ ಭಾವನೆಗಳನ್ನು ಪುಸ್ತಕ ರೂಪದಲ್ಲಿ ವ್ಯಕ್ತ ಪಡಿಸಿ ಪ್ರಸಿದ್ಧರಾದರು.

ಜೋಕ ಪರ್ಯಟನದಲ್ಲಿ ತುಂಬ ಉತ್ಸಾಹವನ್ನು ತೋರಿಸಿದ ನೆಹರುಗಳು ಕಾಂಗ್ರೆಸಿನ ಅಂತಾರಾಷ್ಟ್ರೀಯ ಧೋರಣೆಯ ಮೂಲ ಪ್ರವರ್ತಕರಾಗಿದ್ದರು: ಮಹಾತ್ಮರ ಅಹಿಂಸಾದಿವನ್ನು ನೆಹರುಗಳು ಈ ಮಟ್ಟಿಗೆ ಸಂಪೂರ್ಣ ಪಡಿಸಿದ್ದರು. ಲಕ್ನೌ ಕಾಂಗ್ರೆಸಿನ ಅಧ್ಯಕ್ಷ ಸ್ಥಾನದಿಂದ ಅವರು ಸಾಮ್ರಾಜ್ಯ ಶಾಹಿತ್ವದ ವಿರುದ್ಧ ಬಂಡೆದ್ದ ಜನತೆಯ ಉಲ್ಲೇಖನವನ್ನು ಮಾಡುತ್ತಾ ಪ್ರಚಂಡ ಭಾವಣೆಗೈದರು. ಏಶಿಯದ ಜನತೆಯ ಸ್ವಾತಂತ್ರ್ಯ ಹೋರಾಟದ ಉಜ್ವಲ ವರ್ಣನೆಯನ್ನು ಮಾಡುತ್ತಾ ಭಾರತೀಯರ ಹೋರಾಟವು ಲೋಕದ ದಲಿತ, ಶೋಷಿತ ಜನತೆಯ ಚಳವಳಿದ ಅಂಗವೆಂದು ಸಾರಿದರು. ನ್ಯಾಯ ಮತ್ತು ಸೌಂದರ್ಯದಲ್ಲಿ ಪ್ರೀತಿಯನ್ನು ತೋರಿಸುವ ನೆಹರು ರಾಷ್ಟ್ರ ರಾಷ್ಟ್ರಗಳಲ್ಲಿ, ವರ್ಗ ವರ್ಗಗಳಲ್ಲಿ ಸಮಾನ ಗೌರವ ಹಾಗು ಸ್ಥಾನಮಾನಗಳಿರಬೇಕೆಂದು ಅಪೇಕ್ಷಿಸುತ್ತಾರೆ; ಸಹಾನುಭೂತಿ, ಸದ್ಭಾವ ಮತ್ತು ಸೌಹಾರ್ದಗಳೇ ಸೌಂದರ್ಯದ ಲಕ್ಷಣವೆಂದು ಹೇಳುತ್ತಾರೆ ಇದಕ್ಕಾಗಿ ವೈಜ್ಞಾನಿಕ ದೃಷ್ಟಿಕೋನವನ್ನು ಆಳವಡಿಸಿಕೊಳ್ಳುವುದು ಅವರಿಗೆ ಇಷ್ಟವೆನಿಸುತ್ತದೆ ಕಾನೂನು ಕಾಯಿದೆಗಳೊಂದಿಗೆ ತಾವು ಕಲಿತ ವಿಜ್ಞಾನದ ಪಾಠಗಳನ್ನು ಅವರು ಇದಕ್ಕಾಗಿ ಉಪಯೋಗಿಸಿಕೊಳ್ಳುತ್ತಿರುವಂತೆ ಭಾಸವಾಗುತ್ತದೆ.

ಯುರೋಪು,ಏಶಿಯ ಮತ್ತು ಆಫ್ರಿಕಗಳ ಧುರೀಣರು ಸಾಮ್ರಾಜ್ಯ ಶಾಹಿತ್ವವನ್ನು ಏಕ ಕಂಠದಿಂದ ಖಂಡಿಸಿದ ಬ್ರುಸೆಲ್ಸಿನ ಸರಿಷತ್ತಿನಲ್ಲಿ ನೆಹರು ಹಾಜರಿದ್ದರು. ಭಾರತದ ಯಾವ ಕಮ್ಯುನಿಸ್ಟನೂ ಹೊಂದಿರದಷ್ಟು ಗಾಢವಾದ ಪ್ರಭಾವವನ್ನು ಅವರು ರಶಿಯದ ಸಂದರ್ಶನದಿಂದ ಪಡೆದಿದ್ದರು. ಮದ್ರಾಸು ಕಾಂಗ್ರೆಸಿನಲ್ಲಿ ಅವರು ತಂದ ಸ್ವಂತಾಜ್ಯ ಗೊತ್ತುವಳಿಗೆ ರಶಿಯದ ಸಂದರ್ಶನವೇ ಹೇತುವಾಗಿದ್ದಿತು ಸಮಾಜವಾದಿ ದೃಷ್ಟಿಯನ್ನು ನೆಹರುಗಳಷ್ಟು ಚೆನ್ನಾಗಿ ಆಳವಡಿಸಿಕೊಂಡವರು ಭಾರತದಲ್ಲಿ ಬೇರಾರೂ ಇಲ್ಲ – ಕಾಂಗ್ರೆಸಿನಲ್ಲಿ ಸಮಾಜವಾದಿ ತತ್ವಗಳಿಗೆ ಪ್ರಾಶಸ್ತ್ಯ ದೊರಕುವಂತೆ ಪ್ರಯತ್ನಿಸಿದವರೇ ಅಪರು. ಎಡ ಹಾಗು ಬಲ ಗುಂಪುಗಳಲ್ಲಿ ಒಡೆದಂತೆ ಕಾಣುತಿದ್ದ ಕಾಂಗ್ರೆಸನ್ನು ಬಲಪಡಿಸಲು ಅವರು ಜನತಾರಂಗವನ್ನು ಕಟ್ಟಿದರು. ಸ್ವಾತಂತ್ರ್ಯೋತ್ಸತ್ತರಲ್ಲಿ ಪ್ರವರ್ತಿಸಲ್ಪಟ್ಟ 'ಪಂಚವರ್ಷೀಕ ಯೋಜನೆ'ಯ ರೂಪರೇಖೆಗಳನ್ನು ಹಾಕಿಕೊಟ್ಟವರೇ ನೆಹರು.

ಸಮಾಜವಾದಿಯಾದ ನೆಹರು ವಿಧಾಯಕ ಕೆಲಸಗಳನ್ನು ಮೆಚ್ಚುತ್ತಾರೆ: ರಶಿಯನ ಪ್ರಗತಿಯನ್ನು ಕಂಡು ಅವರ ಕಣ್ಣು ಕೋರೈಸಿದ್ದರೂ ಅಲ್ಲಿಯ ಹಿಂಸಾತ್ಮಕ ಪದ್ಧತಿ ಅವರಿಗೆ ಪ್ರಿಯವಾಗಲಿಲ್ಲ ಅವರಲ್ಲಿ ಸುಪ್ತವಾಗಿದ್ದ ಮಾನವೀಯ ಭಾವನೆಗಳು ಗಾಂಧೀಯವರ ಸಂಪರ್ಕದಿಂದ ಜಾಗೃತಗೊಂಡು ಹಿಂಸೆಯನ್ನು ಬಟ್ಟು ಪ್ರಗತಿ ಹೊಂದುವುದು ಸಾಧ್ಯವೆಂಬ ಅಂಶ ಅವರಿಗೆ ಮನವರಿಕೆಯಾಯಿತು. ಭಾರತದಲ್ಲಿ ಕಮ್ಯುನಿಸ್ಮನ್ನು ಅವರು ವಿರೋಧಿಸುವುದು ಹಿಂಸೆಯ ಮೇಲಿನ ತಾತ್ಪಾರದಿಂದ; ಮತ್ತು ಹೊರಗಿನ ರಾಷ್ಟ್ರಕ್ಕೆ ಕಮ್ಯುನಿಸ್ಟರು ತೋರಿಸುವ ನಿಷ್ಠೆಯಿಂದ. ಜೀನದಿಂದ ಅನೇಕರಿದ ವರೆಗೆ ಲೋಕವನ್ನೆಲ್ಲ ಸುತ್ತಾಡಿದ ನೆಹರು ಭಾರತೀಯ ನಾಗರಿಕತೆಯು ಚೆನ್ನು ತ್ಯವನ್ನು ಈಗ ಚೆನ್ನಾಗಿ ಗುರುತಿಸಿದ್ದಾರೆ —ಹೊರಗಿನಿಂದ ಭಾರತವನ್ನು ನೋಡಿದರೆ ಇದರ ಭವ್ಯ ಸ್ವರೂಪ ಸ್ವಯಮೇವ ವ್ಯಕ್ತವಾಗುತ್ತದೆ ಎಂದವರು ಸೊಸ್ಸೆ ತಾನೆ ಹೇಳಿದರು.

ಇಷ್ಟೆಲ್ಲ ಗುಣಭರಿತರಾಗಿದ್ದರೂ ನೆಹರುಗಳು ಸಮರ್ಥ ಆಡಳಿತಗಾರರೆಲ್ಲವೆಂಬ ದೂರುಗಳು ಬರುತ್ತವೆ —ವ್ಯಕ್ತಿಗತವಾಗಿ ಅವರು ಮಹಾ ಜೀವ. ಜನತೆಯನ್ನು ಪ್ರೀತಿಯಿಂದ ಒಲಿಸಿಕೊಳ್ಳುವ ಕಲೆ ಅವರಿಗೆ ಚೆನ್ನಾಗಿ ತಿಳಿದಿರುವುದೂ ನಿಜ. ಆದರೆ ಅವರಂತೆಯೇ ಧುರೀಣರಾಗಬಯಸುವ ಪರಿಗೆ ಯೋಗ್ಯ ಮಾರ್ಗದರ್ಶನವನ್ನು ಮಾಡುವದಕ್ಕೆ ನ್ಯವಧಾನವಿಲ್ಲ ದಿನ್ನು ನೆಹರು ತಮ್ಮ ಸ್ವಂತ ಕೆಲಸದಲ್ಲಿ ಮುಗ್ನರಾಗುತ್ತಾರೆ. ಇಪನ್ನು ರಾಷ್ಟ್ರದ ಭವಿಷ್ಯದ ದೃಷ್ಟಿಯಿಂದ ಅಪಾಯಕರವೆಂದು ಜೇಳಲಾಗುತ್ತದೆ. ಗಾಂಧೀಯವರು ಶಿಷ್ಯವೃಂದವೊಂದನ್ನು ಕಟ್ಟಿಕೊಂಡು ಒಬ್ಬೊಬ್ಬ ವ್ಯಕ್ತಿಯಲ್ಲಿರುವ ವಿಶಿಷ್ಟ ಗುಣವನ್ನು ಗುರುತಿಸಿ ಅವನ ಕರ್ತವ್ಯವನ್ನು ಮನಗಾಣಿಸಿಕೊಟ್ಟು, ರಾಷ್ಟ್ರದ ಸೇವೆ ಅಬಾಧಿತವಾಗಿ, ನಿರಾತಂಕವಾಗಿ ನಡೆಯುವಂತೆ ಜಾಗರೂಕತೆಯನ್ನು ವಹಿಸಿದರು. ನೆಹರುಗಳ ಮನಸ್ಸು ಈ ವಿಷಯದತ್ತ ಹರಿದಂತೆ ಕಾಣುವುದಿಲ್ಲ — 'ನೆಹರೂರ ಬಳಿಕ ಯಾರು?'

ಎಂಬ ಪ್ರಶ್ನೆಯನ್ನವರು ಈಜೆಗೆ ಜನಾಂಗದ ಮುಂದೆ ನುಂಡಿಸಿರುವಂದರೂ ಅದನ್ನು ತಾವೇ ಉತ್ತರಿಸುವ ಸಾಹಸಕ್ಕೆ ಇಳಿಯದಿದ್ದರೆ ಅದರಿಂದ ಹೆಚ್ಚಿನ ಪ್ರಯೋಜನವಾಗಲಾರದು. ತಮ್ಮ ಶೇಷಾಯುಷ್ಯದಲ್ಲಿ ನೆಹರುಗಳು ಇತ್ತ ಗಮನಿಸುವರೆಂದು ಹಾರೈಸೋಣ!

ಭಾರತೀಯ ಸಂಗೀತದ ಲಘು ಪರಿಚಯ

ನಮಗೆ ತಿಳಿಯದಂತೆಯೇ ನಮ್ಮನ್ನು ತಿದ್ದುವ ಶಕ್ತಿಯುಳ್ಳ ಕಲೆಗಳಲ್ಲಿ ಸಂಗೀತವು ಅಗ್ರಸ್ಥಾನವನ್ನು ಪಡೆಯುತ್ತದೆ. ಗ್ರೀಕ ತತ್ವಜ್ಞಾನಿಯಾದ ಪ್ಲೇಟೋ ಎರಡು ಸಾವಿರ ವರ್ಷಗಳ ಹಿಂದೆ "ಸಂಗೀತ ಪ್ರಕಾರದ ಶಿಕ್ಷಣವು ಅತ್ಯಂತ ಪ್ರಭಾವಶಾಲಿಯಾದದ್ದು" ಎಂದು ಹೇಳಿದ್ದನು. ಪುರಾತನ ಗ್ರೀಸಿನಲ್ಲಿ ಸೂನಸಿಕ ರೋಗಿಗಳ ಚಿಕಿತ್ಸೆಗೆ ಸಂಗೀತವನ್ನು ಸಾಧನವಾಗಿ ಬಳಸುತ್ತಿದ್ದರು. ಭಾರತದಲ್ಲಿಯೂ ಇದನ್ನು ಅನುಸರಿಸುತ್ತಿದ್ದಂತೆ ಕಂಡುಬರುತ್ತದೆ. ಭಾರತೀಯ ಸಂಗೀತಕ್ಕೆ ವಿಪುಲವಾದ ಪರಂಪರೆ ಇದೆಯೆಂಬುದಕ್ಕೆ ಸಾಮವೇದವೇ ನಿದರ್ಶನ. ವೇದಗಳ ಪ್ರಕಾರ ಸಂಗೀತವೆಂದರೆ ಮುಕ್ತಿಮಾರ್ಗ.

ನಿರಕ್ಷರತೆಗೂ ಆಜ್ಞಾನಕ್ಕೂ ನ್ಯತ್ಯಾಸವಿದೆ ಎಂಬುದನ್ನು ನಾವು ತಿಳಿದುಕೊಳ್ಳಲೇಬೇಕೆಂದು ಕುಮಾರಸ್ವಾಮಿಯವರ ಸ್ಪಷ್ಟ ಅಭಿಪ್ರಾಯ—ಇಂದಿನ ನಗರಗಳಲ್ಲಿರುವ ಸುಶಿಕ್ಷಿತರ ಸಾಂಸ್ಕೃತಿಕ ಮಟ್ಟಕ್ಕಿಂತಲೂ ವಿಜ್ಞೋ ಉನ್ನತವಾದ ರೀತಿಯಲ್ಲಿ ಜೀವನ ಸಾಗಿಸುತ್ತಿರುವ ವರನ್ನು ನಾವು ಭಿನ್ನ ಜೀವಾಲಯಗಳ ಸಜೂನಸಿದ್ದುಕೊಂಡು ರಾಮಾಯಣ, ಮಹಾಭಾರತಗಳಂಥ ಕಾವ್ಯಗಳ ನಿಕಟ ಸಂಪರ್ಕದಿಂದಲೂ ಪೀರ ಪುರುಷರನ್ನು ಕುರಿತಾದ ಹಾಡುಗಳಿಂದಲೂ ಸ್ಫೂರ್ತಿಯನ್ನು ಪೊಂದಿದ ನಿರಕ್ಷರಿಗಳಲ್ಲಿ ಕಾಣಬಹುದು.

ಮೂಲತಃ ಸಂಗೀತವೆಂದರೆ ಗೀತ, ನೃತ್ಯ ಮತ್ತು ಭಾವಪ್ರದರ್ಶನಗಳ ಸಮ್ಮಿಶ್ರಣ. ಭಾರತೀಯ ಸಂಗೀತದಲ್ಲಿ 12 ಸ್ವರಗಳುಂಟು. ಇವುಗಳಲ್ಲಿ 7 ಮೂಲಸ್ವರಗಳು; ಉಳಿದ 5 ಮೂಲ ಸ್ಥಾಯಿಯನ್ನು ಬದಲಾಪಡಿ ಮಾಡುವುದರಿಂದ ಉಂಟಾದವುಗಳು. ಇವರಲ್ಲೂ 12 ಉಸಭಾಗಗಳಿವೆ ಮತ್ತು ಶ್ರುತಿಧ್ವನಿಗಳಲ್ಲಿ ಅವು ವಿಂಗಡಿಸಲ್ಪಟ್ಟಿರುತ್ತವೆ. ಇವುಗಳ ಸಂಯೋಗದಿಂದ ಒಟ್ಟು 72 ಸ್ವರ ಶ್ರೇಣಿಗಳಾಗುತ್ತವೆ. ಭಾರತೀಯ ರಾಗಗಳ ನರ್ಗೀಕರಣವು ಈ ಸ್ವರ ಶ್ರೇಣಿಗಳನ್ನು ಅವಲಂಬಿಸಿರುತ್ತವೆ.

ಸಂಸ್ಕೃತದಲ್ಲಿ ಸುಪ್ರಸಿದ್ಧ ಸಂಗೀತ ಶಾಸ್ತ್ರ ಗ್ರಂಥವಾದ ಸಾರಂಗದೇವನ "ಸಂಗೀತ ರತ್ನಾಕರ" ಎಂಬುದು ನಮ್ಮಲ್ಲಿ ರೂಢಿಪರುವ ಉತ್ತರಾದಿ ಮತ್ತು ದಕ್ಷಿಣಾದಿ ಸಂಗೀತ ಪ್ರಕಾರಗಳ ಪ್ರಾಚೀನ ಲಕ್ಷಣ ಗ್ರಂಥ. ವಿದ್ವಾಂಸರ ಅಭಿಪ್ರಾಯವನ್ನು ಗಮನಿಸುವುದಾದರೆ 13ನೇ ಶತಮಾನದ ವರೆಗೆ ಭಾರತವಾದ್ಯಂತ ಒಂದೇ ಬಗೆಯ ಶಾಸ್ತ್ರೀಯ ಸಂಗೀತವಿದ್ದಿತು. ಮುಸಲ್ಮಾನರ ಆಳ್ವಿಕೆಯು ಭಾರತದಲ್ಲಿ ನೆಲೆಗೊಂಡ ಬಳಿಕ, ವಿದೇಶಗಳಲ್ಲಿಯ ಸಂಗೀತ ಕ್ರಮಗಳೊಂದಿಗೆ—ಮುಖ್ಯವಾಗಿ ಪರ್ಶಿಯಾದ ಸಂಗೀತದೊಂದಿಗೆ—ನಿಕಟ ಸಂಪರ್ಕ ಬೆಳೆಯಲು ದಾರಿಯಾಯಿತು. ಉತ್ತರಾದಿ ಸಂಗೀತವೆಂದು ನಾವಿಂದು ಕರೆಯುವ ಹಾಡುಗಾರಿಕೆಯು ಈ ಕಾಲದಲ್ಲಿ ಪ್ರಾದುರ್ಭಾವಕ್ಕೆ ಬಂದಿತು. ಇದರಲ್ಲಿ ಅಮೂರ್ತ ಮಿಶ್ರ ಎಂಬಾತನು ಮಹತ್ವದ ಪಾತ್ರವನ್ನು ನಿರ್ವಹಿಸಿದನು.

ದಕ್ಷಿಣಾದಿ ಮತ್ತು ಉತ್ತರಾದಿ ಸಂಪ್ರದಾಯಗಳಲ್ಲಿರುವ ಮುಖ್ಯ ವ್ಯತ್ಯಾಸವೆಂದರೆ, ಮೊದಲನೆಯದರಲ್ಲಿ ಎತ್ತರದ ಮತ್ತು ತಗ್ಗಿನ ಸ್ಥಾಯಿಗಳ ಸಂಯೋಜನೆಗೆ ಅವಕಾಶವಿಲ್ಲ; ಎರಡನೆಯದರಲ್ಲಿ ತಾಳಕ್ಕೆ ಪ್ರಾಧಾನ್ಯವಿಲ್ಲ. ಇವೆರಡೂ ಪದ್ಧತಿಗಳನ್ನು ಸಮನ್ವಯ ದೃಷ್ಟಿಯಿಂದ ಆಳವಡಿಸಿಕೊಳ್ಳುವ ಪ್ರಯತ್ನಗಳು ಈ ಶತಮಾನದಲ್ಲಿ ನಡೆಯುತ್ತಿವೆ, ಕೆಲಮಟ್ಟಿಗೆ ಯಶಸ್ಸೂ ಪ್ರಾಪ್ತವಾಯಿತು. ಅನರೂ ತಂತಮ್ಮ ವೈಶಿಷ್ಟ್ಯಗಳನ್ನು ಇವು ಉಳಿಸಿಕೊಂಡು ಬಾಳಬೇಕೆಂದು ಅಪೇಕ್ಷಿಸುವ ಸಂಗೀತ ಜ್ಞರ ಪ್ರಮಾಣವು ಕಡಿಮೆಯಾಗಿಲ್ಲ.

ಸಾಮಾನ್ಯವಾಗಿ ದಕ್ಷಿಣಾದಿ ಪದ್ಧತಿಯು ಕರ್ನಾಟಕ ಸಂಗೀತವೆಂದು ಕರೆಯಲ್ಪಡುತ್ತದೆ. ದಕ್ಷಿಣ ಭಾರತದ ಕನ್ನಡ, ತಮಿಳು, ತೆಲುಗು ಮತ್ತು ಮಲೆಯಾಳ ಭಾಷೆಗಳ ವಿದ್ವಾಂಸರು ಕರ್ನಾಟಕ ಸಂಗೀತವನ್ನು ಬಹಳವಾಗಿ ಪೋಷಿಸಿವ್ವಾರೆ. ತಮಿಳು ನಾಗರಿಕತೆಯ ಸುವರ್ಣಯುಗದಿಂದಲೂ ನಯನಾರ್ ಮತ್ತು ಆಳ್ವಾರುಗಳ ಪ್ರಭಾವದಿಂದ ಪೃಷ್ಟವಾಗಿ ಬೆಳೆದ ಕರ್ನಾಟಕ ಸಂಗೀತವು ವಿಜಯನಗರದ ಚಕ್ರಾಧಿಪತ್ಯವು ಉಚ್ಛ್ರಾಯ ಸ್ಥಿತಿಯನ್ನು ಹೊಂದಿದ್ದಾಗ ಪೋಷಣೆ ಕಳೆಯೊಂದಿಗೆ ಶೋಭಿಸಿತು. ಅಂದಿನ ಕಲಾವಿದರ ಸಾಧನೆಯ ಪರಿಚಯವನ್ನು ರಾಮಾಮಾತ್ಯನ "ಸ್ವರಮೇಳ ಕಲಾನಿಧಿ" ಮತ್ತು ಸೋಮನಾಥನ "ರಾಗವಿಬೋಧ" ಚೆನ್ನಾಗಿ ಮಾಡಿಕೊಡುತ್ತವೆ.

ವಿಜಯನಗರದ ಪತನದ ತರುವಾಯ ರಾಜಕೀಯ ಶಕ್ತಿಯು ತಂಜಾವೂರಿನ ಮರಾಠರ ಕೈಗೆ ವರ್ಗಾವಣೆಯನ್ನು ಹೊಂದಲು

ಕರ್ನಾಟಕ ಸಂಗೀತವೂ ಆಲ್ಲಿ ಆಶ್ಚರ್ಯವನ್ನು ಹೊಂದಿತು ಗೋಸಂದ ದೀಕ್ಷಿತ್, ವೆಂಕಟ ಮುಖಿ, ಪಹಚಿ ಮುಪ್ಪಾರಾಜ, ತುಲಜವಪಾ ರಾಜ ಮುಂತಾದವರ ಕೃತಿಗಳಲ್ಲಿ ಕರ್ನಾಟಕ ಸಂಗೀತ ಸಾಧನೆಯು ಕಂಡುಬರುತ್ತದೆ. 18 ನೇ ಶತಮಾನದಲ್ಲಿ ತ್ಯಾಗರಾಜ ದೀಕ್ಷಿತರೂ ಶ್ಯಾಮ ಶಾಸ್ತ್ರಿಗಳೂ ನಡೆಸಿದ ಸಾಧನೆಯಿಂದ ಕರ್ನಾಟಕ ಸಂಗೀತ ಗೌರವದ ತುತ್ತತುದಿಯನ್ನೇರಿತು

ಅನೇಕ ವೈವಿಧ್ಯವನ್ನು ಹೊಂದಿದ ಕರ್ನಾಟಕ ಸಂಗೀತಪದ್ಧತಿ ದಕ್ಷಿಣದ ಎಲ್ಲ ಭಾಷೆಗಳ ಪ್ರತಿಭಾವಂತ ಸಂಗೀತಗಾರರೂ ಕೈಯಾಡಿಸಿ ತಮ್ಮ ಮುದ್ರೆಯನ್ನು ಒತ್ತಿದ್ದಾರೆ. ಕನ್ನಡದಲ್ಲಿ ಪುರಂದರದಾಸರೇ ಮುಂತಾದವರು ನೂರಾರು ಸೇವೆಯನ್ನು ನಾಸಿಲ್ಲಿ ನೆನೆಯಬಹುದು. ಭಾರತದ ಇತರ ಭಾಗಗಳಲ್ಲಿಯೂ ಪ್ರತಿಭಾವಂತರು ಸಂಗೀತದ ಬೆಳವಣಿಗೆಗೆ ನೆರವಾಗಿದ್ದಾರೆ. ಬಂಗಾಳದಲ್ಲಿ ಜಯದೇವ ಮತ್ತು ಗೌರಾಂಗ ಪ್ರಭು, ಉತ್ತರ ಪ್ರದೇಶದಲ್ಲಿ ಕಬೀರ, ಸೂರದಾಸ, ರಾಜಸ್ಥಾನದಲ್ಲಿ ಮೀರಾ ಬಾಯಿ, ಮಹಾರಾಷ್ಟ್ರದಲ್ಲಿ ರಾಮದಾಸ, ತುಕಾರಾಮು ಮುಂತಾದವರು ಜನ್ಮನೀತ್ತು ಅನುಪಮ ಕಾಣಿಕೆಗಳನ್ನು ಸಲ್ಲಿಸಿದರು.

ರಾಗಗಳು ಶಿಥಿಲಗೊಳ್ಳದ ರೀತಿಯಲ್ಲಿ ದಕ್ಷಿಣದವರು ಒಳ್ಳೆಯ ಶ್ರದ್ಧೆಯನ್ನು ಪಹಿಸಿರುವುದು ಕಂಡುಬರುತ್ತದೆ. ಹಿಂದಿನ ತಮಿಳು ಸಂಗೀತ ಪದ್ಧತಿಯ ಶಂಕರಾಭರಣ, ಖರಹರಪ್ರಿಯ, ಹನುಮತೋಡಿ, ಕಲ್ಯಾಣಿ, ಹರಿಕಾಂಭೋಧಿ, ನಟಭೈರವಿ ಇಂಥ ಜನಪ್ರಿಯ ರಾಗಗಳೊಂದಿಗೆ ಇಂದಿನದನ್ನು ತುಲನೆಮಾಡಿದರೆ ಇದು ವ್ಯಕ್ತವಾಗುತ್ತದೆ. ಕರ್ನಾಟಕ ಸಂಗೀತದಲ್ಲಿ ರಾಗಗಳು ಜನಕ—ಜನ್ಯ ಪದ್ಧತಿಯಂತೆ ವರ್ಗೀಕರಿಸಲ್ಪಟ್ಟಿರುತ್ತವೆ. ರಾಗ, ತಾಳ ಮತ್ತು ಸ್ವರ ಸಂಯೋಜನ ವಿಧಾನವನ್ನು ವಿಸ್ತರಿಸುವ ನಿಯಮಗಳು ಒಂದೇ ಆದರೂ ಭಾಷಾಮೂಢ್ಯಪದಲ್ಲಿ ನೈಪುಣ್ಯತೆ ವಿರುತ್ತದೆ.

ಸಾಹಿತ್ಯ ಮತ್ತು ಹಾಡುಗಾರಿಕೆಯು ಸಂಗೀತದ ಮೇಲೆ ಆಚ್ಚಳಿಯದ ಪ್ರಭಾವವನ್ನು ಬೀರಿದ್ದು, ಎಲ್ಲ ಕೃತಿಗಳೂ ಹಾಡುವುದಕ್ಕೋಸ್ಕರವೇ ರಚಿಸಲ್ಪಟ್ಟಿಂತೆ ಭಾಸವಾಗುವುದು. ಹಾಡುಗಾರಿಕೆಗೆ ಸಹಾಯ ಮಾಡುವ ಉದ್ದೇಶದಿಂದ ವಾದ್ಯಗಳನ್ನು ಬಳಸಲಾಯಿತೇ ಹೊರತು ವಾದ್ಯಗಳಿಗೋಸ್ಕರವೇ ಕೃತಿಗಳು ನಿರ್ಮಾಣ ಹೊಂದಲಿಲ್ಲ. ನಮ್ಮ ಸಂಗೀತ ವಾದ್ಯ ಪ್ರಕಾರಗಳಲ್ಲಿ ಪಲವಾರು ನಮೂನೆಗಳನ್ನು ಕಾಣಬಹುದು. ದಕ್ಷಿಣದ ಕೊಳಲು ಮತ್ತು ನಾಗಸ್ವರಗಳಂಥ ಊದುವ ವಾದ್ಯಗಳು ಶರನಾಯಿಗಳಾಗಿ ರೂಪಾಂತರ ಹೊಂದಿದವು ತಂತೀ ವಾದ್ಯಗಳಲ್ಲಿ ವೀಣೆ, ಸಿತಾರ, ಸಾರೋದ, ಸಾರಂಗಿ ಮುಂತಾದವುಗಳು ಉಲ್ಲೇಖನೀಯ. ಮೃದಂಗ, ತಬಲಾ ಮುಂತಾದ ಮರ್ದನ ವಾದ್ಯಗಳ ನುಟ್ಟಿಗೆ ಭಾರತದಲ್ಲಿರುವಷ್ಟು ವೈವಿಧ್ಯ ಬೇರಾವ ದೇಶದಲ್ಲೂ ಕಾಣಸದು

ಶಾಸ್ತ್ರೀಯ ಪರಂಪರೆಯು ಜೊತೆಗೆ ಲಘು ಸಂಗೀತದ ಬೆಳವಣಿಗೆಯೂ ಸಾಕಷ್ಟು ನಡೆದಿರುವುದನ್ನು ನಾವಿಲ್ಲಿ ಮರೆಯಬಾರದು. ಮೊಗಲ ಬಾದಶಾಹರ ಆಸ್ಥಾನಗಳಲ್ಲಿ ಧ್ರುವ್ ಪಯಾಲ್, ರುಂರಿ, ಗಜಲ್, ಖವಾಲಿ ಇತ್ಯಾದಿಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡುತ್ತಿದ್ದರು 19ನೇ ಶತಮಾನದಲ್ಲಿ ಮೊಗಲರ ಸಾಮ್ರಾಜ್ಯ ಅಳಿದು ಹೋಗಲು, ಮೆಲ್ಲ ಮೆಲ್ಲನೆ ಪಾಶ್ಚಾತ್ಯ ಸಂಗೀತದ ಪ್ರಭಾವವು ಭಾರತೀಯ ಸಂಗೀತ ಕ್ಷೇತ್ರದಲ್ಲಿ ಕಂದು ಬರತೊಡಗಿತು ಯುದ್ಧಕಾಲದ ಪ್ರಚಾರ ವೈಖರಿಯು ಇದಕ್ಕೆ ಇನ್ನಷ್ಟು ಇಂಬನ್ನೊದಗಿಸಿತು. ಜಲ ಚಿತ್ರಗಳ ತಯಾರಕರು ಪಾಶ್ಚಾತ್ಯ ಸಂಗೀತ ರೂಪಗಳ ಕೆಳತರಗತಿಯ ಆನುಕರಣೆಗೆ ಮನಸ್ಸು ಮಾಡಿದರು. ಇದು ಲಘು ಸಂಗೀತದ ಪಾವಿತ್ರ್ಯವನ್ನು ಕೆದಿಸಲು ಕಾರಣವಾಯಿತು.

ಲಘು ಸಂಗೀತದ ಮಹತ್ವವನ್ನು ಭಾರತೀಯರಿಗೆ ಮನವರಿಕೆ ಮಾಡಿಸಿ ಕೊಟ್ಟವರಲ್ಲಿ ಕವೀಂದ್ರ ರವೀಂದ್ರರಿಗೆ ಅಗ್ರ ಪೂಜೆ ಸಲ್ಲುತ್ತದೆ. ಪಾಶ್ಚಾತ್ಯ ಸಂಗೀತದಲ್ಲಿ ಎಲಿಜಬೆಥ್ ರಾಣಿಯ ಕಾಲದ ಗೀತಗಳು, ಶೇಕ್ಸ್‌ಪಿಯರ್, ಜಾನ್‌ಸನ್ ಇವರ ಹಾಡುಗಳು, ಗೆಟೆ ಮುಂತಾದ ಜರ್ಮನರ ಲೈಡುಗಳು ಎಸ್ಸು ಉನ್ನತ ಸ್ವಾಸನನ್ನು ಹೊಂದಿರುತ್ತವೋ ಅಷ್ಟೇ ಮನ್ನಣೆಯನ್ನು ಭಾರತದ ಲಘು ಸಂಗೀತ ಪ್ರಕಾರಕ್ಕೂ ದೊರಕಿಸುವಂತೆ ಆವರು ಮಧುರ ರಾಗದಲ್ಲಿ ಕಾವ್ಯ ಸಾಹಿತ್ಯ ಪ್ರವಾಹವು ತುಂಬಿ ಹರಿಯುವಂತೆ ಪ್ರಯತ್ನಿಸಿದರು. ಈಚೆಗೆ ಭಗವತಿಚರಣ ವರ್ಮ, ಮಹಾದೇವಿ ವರ್ಮ ಮುಂತಾದ ಹಿಂದೀ ಕವಿಗಳು ಅಖಿಲ ಭಾರತ ಆಕಾಶವಾಣಿಯೊಡನೆ ಸಹಕರಿಸುತ್ತಾ ಲಘು ಸಂಗೀತ ಪ್ರಸಾರಕ್ಕೆ ಪ್ರೋತ್ಸಾಹ ನೀಡುತ್ತಿದ್ದಾರೆ.

ಆಕಾಶವಾಣಿ ಪ್ರಸಾರಗಳು ಭಾರತದಲ್ಲಿ ಪ್ರಾರಂಭಿಸಲ್ಪಟ್ಟ ಮೇಲೆ ಸಂಗೀತ ಕಲೆಗೆ ಹೆಚ್ಚಿನ ಪ್ರೋತ್ಸಾಹದೊರೆಯಿತೆಂದೂ ಹೊಸ ಮಾರ್ಗಗಳಲ್ಲಿ ಆದು ವಿಸ್ತರಿಸುವುದಕ್ಕೆ ಅನುಕೂಲವಾಯಿತೆಂದೂ ಹೇಳಿದರೆ ತಪ್ಪಾಗಲಾರದು. ಪಾಡುಗಾರಿಕೆಗೂ ವಾದ್ಯ ವಾದನಕ್ಕೂ ಆಕಾಶವಾಣಿಯು ಅಶ್ರಯ ನೀಡುತ್ತಿದೆಯಲ್ಲದೆ, ಸಂಗೀತದ ಪುನರುತ್ಥಾನ ಕಾರ್ಯವನ್ನು ಒಳ್ಳೆಯ ಮುತುವರ್ಜಿಯಿಂದ ನಿರ್ವಹಿಸುತ್ತಿದೆ. ಜಾನಪದ ಸಂಗೀತಗಳಿಗೆ ಆದು ಕೊಟ್ಟ ಪ್ರಾಮುಖ್ಯತೆಯು ನಾವು ಮೆಚ್ಚತಕ್ಕ ವಿಷಯಗಳಲ್ಲಿ ಒಂದು ಎಲ್ಲಿ ನೋಡಿದರೂ ಜನಾಂಗವು ಮೊತ್ತಮೊದಲು ತನ್ನ ವೈಭವಶಾಲಿಯಾದ ಸಾರಿಪರಿಕ ಸಂಪತ್ತನ್ನೇ ಸ್ಮರಿಸುವುದು ದೃಷ್ಟಿಗೋಚರವಾಗುತ್ತಿರುವಾಗ, ಶಿಲಾಯುಗದಿಂದಲೂ ಮನುಷ್ಯನು ಮುಕ್ತಕಂಠದಿಂದ ತನ್ನ ಭಾವನೆಗಳನ್ನು ಹಾಡಿತೋರಿಸಿದ್ದಿರುವಾಗ, ಜಾನಪದ ಗೀತಗಳನ್ನು ಉಪೇಕ್ಷಿಸುವುದು ಸರಿಯಾಗದು.

ಇದನ್ನು ಮನಗಂಡು, ಗುಡ್ಡಗಾಡಿನ ಮತ್ತು ಗ್ರಾಮಾಂತರ ಪ್ರದೇಶಗಳ ಸಂಗೀತ ಸುಧೆಯನ್ನು ಎಲ್ಲರಿಗೂ ಉಣ್ಣಿಸುವ ಪ್ರಯತ್ನಗಳು ನಡೆಸಲ್ಪಡುತ್ತವೆ. ತಜ್ಞರು ಧ್ವನಿವಾಹಕ ಯಂತ್ರಗಳನ್ನು ತೆಗೆದುಕೊಂಡು ಜಾನಪದ ಗೀತಗಳ ಧ್ವನಿ ಮುದ್ರಣವನ್ನು ಮಾಡಿಕೊಳ್ಳುತ್ತಾರೆ; ಆಕಾಶವಾಣಿಯು ಅದನ್ನು ಆಗಿಂದಾಗ್ಗೆ ಬಿತ್ತರಿಸಿ, ಜಾನಪದ ಗೀತಗಳ ಸೌಂದರ್ಯವು ಕೆಲವೇ ವಿಶೇಷ ಸೌಕರ್ಯವುಳ್ಳ ಜನರ ಸುಖ ಸಾಧನವಾಗದೆ, ಎಲ್ಲರ ಮನಸ್ಸನ್ನೂ ಸಂತೋಷ ಪಡಿಸುವುದಕ್ಕೆ ನೆರವಾಗುತ್ತದೆ. ಜಾನಪದ ಸಂಗೀತವು ತೊಟ್ಟಿಲ ಮಗುವಿಗೆ ನಿದ್ರೆ ಬರಿಸುತ್ತದೆ; ಪ್ರಣಯಿಗಳ ವಿರಹ ವೇದನೆಯನ್ನು ನುರೆಯಿಸುತ್ತದೆ; ನೇಜ ನಡುವಾಗ, ಪೈರು ಕೊಯ್ಯುವಾಗ, ಧಾನ್ಯ ಸಂಗ್ರಹಿಸುವಾಗ, ದೋಣಿ ನಡೆಸುವಾಗ ಶ್ರಮಹಾರಕವಾಗಿಯೂ ಸ್ಫೂರ್ತಿಯ ಸ್ತ್ರೋತವಾಗಿಯೂ ಪರಿಣಮಿಸಿ, ನವಚೈತನ್ಯವನ್ನು ನೀಡುತ್ತದೆ.

ಜಾನಪದ ಸಂಗೀತವು ಶಿಲಾಯುಗದಷ್ಟು ಪುರಾತನವಾದದ್ದು: ಅದನ್ನು ಲಿಖಿತ ರೂಪದಲ್ಲಿ ಕಾಪಾಡಿಕೊಂಡು ಬರುವ ಪ್ರಯತ್ನ ಹಿಂದೇನೂ ನಡೆಯಲಿಲ್ಲ ಆದುದರಿಂದ, ಮೂಲ ಪದಗಳು ಹಾಗೆಯೇ ಉಳಿದದ್ದು ವಿರಳ. ಹಾಡುಗಾರರು ತಮಗೆ ಬೇಕಾಸಿದಂತೆ ಶಬ್ದಗಳನ್ನು ಬದಲಾಯಿಸಿದರು; ಹೊಸ ಶಬ್ದಗಳನ್ನು ಸೇರಿಸಿದರು. ಒಂದೇ ವಿಷಯವನ್ನು ಕುರಿತಾದ ಹಾಡು ಒಂದೊಂದು ಹಳ್ಳಿಯಲ್ಲಿ ಒಂದೊಂದು ಬಗೆಯ ಶಬ್ದ ಸಂಪತ್ತಿನಿಂದ ತುಂಬಿರುವುದು ಅನುಭವ ಸಿದ್ಧವಾದ ವಿಷಯ. ಶಾಸ್ತ್ರೀಯ ಪದ್ಧತಿಯೊಂದು ರೂಪುಗೊಂಡದ್ದು ಎಷ್ಟೋ ಕಾಲದ ಬಳಿಕ—ಜಾನಪದ ಸಂಗೀತದಲ್ಲಿ ಮೂಲವನ್ನು ಗುರುತಿಸಬಹುದಾದ ಸಾರಂಗ ಮುಂತಾದ ಶಾಸ್ತ್ರೀಯ ರಾಗಗಳ ಜನಪ್ರಿಯತೆಯನ್ನು ನೆನೆದರೆ ಜಾನಪದ ಸಂಗೀತದ ಪ್ರಸಾರಕ್ಕೆ ನಾವು ಆತ್ಯಧಿಕ ಪ್ರಾಶಸ್ತ್ಯವನ್ನು ಕೊಡಬೇಕೆಂದು ಸಿದ್ಧವಾಗುತ್ತದೆ.

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

!! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !!

"ರಿಕರಿಂಗ್" ಠೇವಣಾತಿ.

ಬರೇ ರೂಪಾಯಿ ಒಂದು ಆಧವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ನೇಕಡಾ 4½%.

ಬಡವ ಬಲ್ಲಿದರೆಂಬ ಭೇದವಿಲ್ಲದ ಪ್ರತಿಯೊಬ್ಬರಿಗೂ ಅನುಕೂಲವಾದ ಯೋಜನೆ.

ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ

ದಿ ವಿಜಯ ಬೇಂಕ್ ಲಿಮಿಟೆಡ್.

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ 10- } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ
ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್.
ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.

ಆಧವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂದ್ರಮ್, ಕಲ್ಲಿಕೋಟೆ ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು

The Bombay Life Assurance Co., Ltd., Bombay.

ಯಂ. ಗಣಪ್ಪಯ್ಯ ಎಂಡ್ ಸನ್ಸ್

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು ಇವರ

ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಆಕಾಲ ಬಹಿಷ್ಠೆ. ಋತುಸ್ರಾಪವು ಜಾಸ್ತಿಯಾಗಿಯೂ, ಕಡಿಮೆಯಾಗಿಯೂ ಹೋಗುವುದು, ಬಿಳಿಸೆರಗು, ಸಂತಾನ ಹೀನತೆ, ರಕ್ತಹೀನತೆ ಋತುಶೂಲೆ, ಮೊನಲಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು. ಬಾಟ್ಲಿ 1ರ ರೂ. 3-8-0.

ಗರ್ಭ ರಕ್ಷಕ— ಗರ್ಭಿಣಿಯರಿಗೆ ಅತ್ಯಂತ ಫಲಕಾರಿಯಾದ ಔಷಧಿ. ಚಿನಿದೋಷ, ಗರ್ಭಸತನವಾಗುವಿಕೆ, ವಾಂತಿ, ಅರುಚಿ, ಅರಕ್ತತೆ, ಮಲಬದ್ಧತೆ, ವಾಯು ಉಪದ್ರವ, ಕೆಕಾಲುಬಚ್ಚುವುದು ಇವುಗಳನ್ನೆಲ್ಲಾ ಹೋಗಲಾಡಿಸುವುದು. ಬಾಟ್ಲಿ 1ರ ರೂ. 3-8-0

ಇವಲ್ಲದೆ ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ,ರೋಗಕ್ಕೆ ತಕ್ಕ ಔಷಧಿಯನ್ನು ರವಾನಿಸಬಹುದು..

(ಉತ್ತಮ ಸಾರಸ್ವತ ಬ್ರಾಹ್ಮಣರ ಅಡಿಗೆ, ಶುಚಿ ರುಚಿಯಾದ ರೈಸ್‌ಪ್ಲೇಟ್)

ರುಚಿಕರವಾದ ಊಟ— ಹವೇಶೀರ್ (Airy) ವಸತಿ,
ಎರಡು ಊಟ, ಕೋಟ್ (Cot) ಇತ್ಯಾದಿ ಸೌಕರ್ಯ.

ತಿಂಗಳೊಂದರ ರೂ. 52/- ಮಾತ್ರ.

ವಿಶೇಷ ಮಾಹಿತಿಗೆ ಪ್ರತ್ಯಕ್ಷ ವಿಚಾರಿಸಿರಿ.

ಸದ್ಗುರು ಬೋರ್ಡಿಂಗ್ ಎಂಡ್ ಲೋಜಿಂಗ್

ಹಿಂದ್ ಮಾತಾ ಸಿನೇಮದ ಸಮೀಪ, ದಾದರ್, ಮುಂಬಯಿ ೧೪.

ವ್ಯವಸ್ಥಾಪಕ: ವಿ. ಯಸ್. ಪ್ರಭು.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಎಳು ದಿವ್ಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವ ಬಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫—೮—೦ .... ಪೋಸ್ಟು ಖರ್ಚು ರೂ. ೦—೧೪—೦

—:ವಿಳಾಸ:—

ಹಾಲಪ್ಪಾ ಹಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

Edited, Printed & Published By K. H. Shetty at the Navayuga Press, Udipi, S. India

REGD. NO. M. 3618

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೪ VOL. 34

ಉಡುಪಿ, 18—11—1954

ಸಂಚಿಕೆ ೧೨ NO. 12

ನವಚೀನದ ದರ್ಶನ

ನಮ್ಮಲ್ಲಿ ಇತರ ರಾಷ್ಟ್ರಗಳನ್ನು ಅಭ್ಯಸಿಸುವ ಅವಕಾಶ ಉಂಟು ಅವುಗಳಿಂದ ನಾವು ಒಳಿತನ್ನು ಕಲಿಯಬೇಕು. ಪಾಶ್ಚಾತ್ಯ ರಾಷ್ಟ್ರಗಳನ್ನು ತಿಳಿದುಕೊಂಡಿದ್ದೇವೆ. ಆದರಂತೆ ರಶಿಯ ಹಾಗು ಚೀನ್ಯಗಳಿಂದಲೂ ನಾವು ಸಾರ ಕಲಿಯಬೇಕು. ಚೀನ ಮತ್ತು ಭಾರತಗಳನ್ನು ಇದಿರಿಸುತ್ತಿರುವ ಸಮಸ್ಯೆಗಳಲ್ಲಿ ಸಾಮ್ಯವಿದ್ದು, ಇವುಗಳ ಪರಿಹಾರಕ್ಕೆ ಚೀನ ಹೇಗೆ ನಡೆದುಕೊಳ್ಳುತ್ತಿದೆ ಎಂಬುದನ್ನು ತಿಳಿಯುವ ಕುತೂಹಲ ನಮ್ಮದು. ಈ ಪ್ರಯತ್ನದಲ್ಲಿ ನಮ್ಮ ವ್ಯಕ್ತಿತ್ವದ ಪೈಶಿಷ್ಟ್ಯವನ್ನು ಮಾತ್ರ ಕಳೆದುಕೊಳ್ಳಲಾಗದು; ಕೇವಲ ಅನುಕರಣೆ ಪ್ರಯೋಜನಕ್ಕೆ ಬಾರದು.

—ಜವಾಹರಲಾಲ ನೆಹರು

ಪ್ರಧಾನ ಮಂತ್ರಿ ನೆಹರುಗಳು ನವ ಚೀನದ ಸಂದರ್ಶನವನ್ನು ಮುಗಿಸಿ ಬಂದು ಹದಿನೈದು ದಿನಗಳ ಮೇಲಾದರೂ ಅವರ ಬಿಸಿ ಆರಿದಂತಿಲ್ಲ—ಅವರ ಮತ್ತು ಅವರ ಪರಿವಾರದವರ ಅನುಭವಗಳೇನು ಎಂಬ ವಿಷಯದಲ್ಲಿ ಭಾರತದ ಒಳಗೂ ಹೊರಗೂ ಕುತೂಹಲವು ತೋರಿಸಲ್ಪಡುತ್ತಿದೆ. ಇದೇ ಗಣನೀಯ ದಿನಾಂಕ ಹೊಸ ದೆಹಲಿಯಲ್ಲಿ ಜರಗಿದ ಸ್ವತಂತ್ರ ಪತ್ರಿಕಾ ಸಮ್ಮೇಳನವನ್ನು ಆದಕ್ಕೆ ಪ್ರತ್ಯಕ್ಷವಿದರ್ಶನವಾಗಿ ಕೊಡಬಹುದು. ಇಲ್ಲಿ ಮಾತನಾಡುತ್ತಾ ನೆಹರುಗಳು "ನಾನು ಚೀನಕ್ಕೆ ಹೋದದ್ದು ಭರವಸೆ ನೀಡಲಿಕ್ಕೂ ಅಲ್ಲ; ಭರವಸೆ ಪಡೆಯಲಿಕ್ಕೂ ಅಲ್ಲ; ಕೇವಲ ಚೀನವನ್ನು ಕಂಡು ತಿಳಿಯಲು, ತಿಳಿದು ಮೆಚ್ಚಲು ಮತ್ತು ನಮ್ಮ ಬಗ್ಗೆ ಚೀನೀಯರನ್ನು ಮೆಚ್ಚಿಸಲು ನಾನು ಅಲ್ಲಿಗೆ ಸೌಹಾರ್ದ್ರ ಸಂದರ್ಶನ ನೀತಿ ಮರಳಿದ್ದೇನೆ" ಎಂದರು. "ಯೋಗ್ಯ ನಡತೆಯ ಬಗ್ಗೆ ಅವರಿಂದ ಆಶ್ವಾಸನೆ ಕೇಳಲು ನಾನು ಯಾರು? ಭಾರತ ಸರಕಾರದಿಂದ ಯಾವಾದರೂ ಇಂಥ ಭರವಸೆ ಕೇಳಿದರೆ ನಾನು ಅದನ್ನು ಅಭ್ಯಸ್ತತನಾಗಿಯೇ ಭಾವಿಸುತ್ತೇನೆ. ರಾಷ್ಟ್ರದ ಹಾಗು ಜನರ ಮನೋ ಭೂಮಿಕೆಯು ಅಲ್ಲಿಯ ಪರಿಸ್ಥಿತಿಯನ್ನು ಹೊಂದಿ ಕೊಂಡಿರುತ್ತದೆ ಎಂಬುದನ್ನು ನಾವು ಮರೆಯಬಾರದು" ಎಂದವರು ತಿಳಿಸಿದರು.

ಚೀನದಲ್ಲಿ ಕಮ್ಯುನಿಸ್ಟರ ಆಳ್ವಿಕೆ ನಡೆದಿದೆ ಎಂಬ ವಿಷಯದಲ್ಲಿ ನೆಹರುಗಳು ಪರಿಪೂರ್ಣ ಸಹಮತರಾದರು. ಸಾಮ್ಯವಾದದ ತತ್ತ್ವಗಳ ತಳಹದಿಯಲ್ಲಿ ಆರ್ಥಿಕ ಹಾಗು ರಾಜಕೀಯ ಕಾರ್ಯಪ್ರಣಾಳಿಯನ್ನು ರೂಪಿಸಿ, ಅದನ್ನು ಚೀನದ ಪರಿಸ್ಥಿತಿಗೆ ಸ್ವಲ್ಪ ಮಟ್ಟಿಗಾದರೂ ಹೊಂದಿಕೊಳ್ಳುವ ಪ್ರಯತ್ನ ನಡೆದಿದೆ ಎಂದು ಅವರು ಹೇಳಿದರು, ನಮ್ಮದಕ್ಕಿಂತ ಸಂಪೂರ್ಣ ಭಿನ್ನವಾದ ಸರಕಾರ ಅಲ್ಲಿ ಕೆಲಸ ಮಾಡುತ್ತಿದೆ. ಆದರೆ ಸ್ವರೂಪ ಹೇಗೆ ಬೇಕಾದರೆ ಇರಲಿ, ರಾಷ್ಟ್ರದ ಪ್ರಗತಿ ಮತ್ತು ಅಭಿವೃದ್ಧಿಗೆ ಅದು ಪೋಷಕವಾಗಿದೆಯೇ? ಮತ್ತು ಮಾಡಿದ ತ್ಯಾಗಕ್ಕೆ ತಕ್ಕ ಪ್ರತಿಫಲ ದೊರಕಿದೆಯೆ? ಎಂಬುದೇ ಮಹತ್ವದ ವಿಷಯ. ಇದರ ಉತ್ತರವನ್ನು ಭವಿಷ್ಯವೇ ಕೊಟ್ಟೀತೆಂದು ನೆಹರುಗಳು ಹೇಳಿದರೆ, ಅವರ ಮಗಳು ಶ್ರೀಮತಿ ಇಂದಿರಾ ಗಾಂಧಿಯವರು ಹಿಂದಿನ ಚೀನದೊಂದಿಗೆ ಇಂದಿನ ಚೀನವನ್ನು ಹೋಲಿಸಿ ಅದಾಯಕವಾದ ರಶಿಯದ ಚಿತ್ರವನ್ನು ಪತ್ರಿಕಾ ಪರಿಸತ್ತಿನಲ್ಲಿ ರೇಪೆಸಿದ್ದರು. ಈ ಸಲ ಚೀನದ ವಿಷಯದಲ್ಲಿ ಅವರು ಪತ್ರಿಕಾ ಪ್ರತಿನಿಧಿಗಳ ಮುಂದೆ ವಿವರಿಸಿದ ಅನುಭವವು ನಮ್ಮಲ್ಲಿ ನವಜಾಗೃತಿಯನ್ನು ಮೂಡಿಸುವಂತಿದೆ ಎಂದು ತಪ್ಪಾಗದು. ಚೀನದ ಜನತೆ ಶ್ರಮಜೀವನದಲ್ಲಿ ತೋರಿಸುತ್ತಿರುವ ಉತ್ಸಾಹಕ್ಕೆ ಅವರು ನೂರು ಹೋದರು. ಸಂಕಾರವು ಲಂಚಗುಳಿತನ ಪೆನ್ನೂ ಹಕ್ಕು ಪಾತಶತನವನ್ನೂ ತೊಡೆದು ಹಾಕಿದೆಯಲ್ಲದೆ ಭೂಸುಧಾರಣೆಯ ಕ್ರಮಗಳನ್ನೂ ಕೈಗೊಂಡಿರುವುದು. ಸಾಂಘಿಕ ವ್ಯವಸಾಯವನ್ನೇನೂ ಅಲ್ಲಿ ಅನುಸರಿಸುತ್ತಿಲ್ಲ—ರೈತರನ್ನು ಸಹಕಾರ ಸೂತ್ರದಲ್ಲಿ ಸಂಘಟಿಸುವುದೇ ಸುಧಾರಣೆಯ ಕ್ರಮ ಇದರ ಪರಿಣಾಮವು ಗ್ರಾಮಾಂತರ ಪ್ರದೇಶಗಳಲ್ಲಿ ಗಾಢವಾಗಿ ಕಂಡು ಬರುತ್ತದೆ. ಹೀಗೆ ಉಂಟಾದ ಉತ್ಸಾಹದ ವಾತಾವರಣವನ್ನು ರಭಸದ ಪ್ರಚಾರದ ಮೂಲಕ ಸದಾ ಕುದುರಿಸಲಾಗುತ್ತದೆ ಚಟುವಟಿಕೆಯ ಪ್ರತಿಯೊಂದೂ ಅಂಗವನ್ನು ಉತ್ಪಾದನೆ ಹೆಚ್ಚಿಸುವುದಕ್ಕ್ಕೋಸ್ಕರ ಉಸಯೋಗಿಸಲಾಗುತ್ತದೆ ಶಿಬಿರವಿಹಾರ ಕೇಂದ್ರಗಳನ್ನು ನಡೆಸುವವರೂ ಈ ಉದ್ದೇಶವನ್ನು ಇಟ್ಟುಕೊಂಡಿರುತ್ತಾರೆ—ಎನ್ನುತ್ತಾ ಮೆಕ್ಕಳಿಗೆ ಹೇಳುವ ಗುಬ್ಬಿಗಳ ಕತೆಯೊಂದನ್ನು ಅವರು ವಿವರಿಸಿದರು: ತಂತಿಯ ಬೇಲಿಯೇ ಆಗಿ ಉಳಿದ ಒಂದು ಗುಬ್ಬಿ ತೊಂದರೆಗೊಳಗಾಗುತ್ತದೆ; ಇದನ್ನು ಉಳಿದ ಗುಬ್ಬಿಗಳು ಪಾರು ಮಾಡುತ್ತವೆ. ಸಾಮಾಜಿಕ ಜೀವನದ ಸುಖಶಾಂತಿಯನ್ನು ಮುಕ್ಕಳಿಗೆ ಬಿಂಬಿಸುವುದೇ ಈ ಕತೆಯನ್ನು ಹೇಳುವುದರ ಉದ್ದೇಶ.

ನಮ್ಮ ಪಂಚವಾರ್ಷಿಕ ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ಹಳ್ಳಿಗರ ಸಹಾಭವನ್ನು ಜಾಗೃತಗೊಳಿಸಲುವ್ಯಯಂ ಸೇವಕರನ್ನು ತರಬೇತಿ ಮಾಡುವಂತೆಯೇ ನವಚೀನದಲ್ಲೂ ತರುಣ-ತರುಣಿಯರನ್ನು ಹಳ್ಳಿಗಳಿಗೆ ಕಳಿಸಲಾಗುತ್ತದೆ ಎಂದು ಇಂದಿರಾ ಗಾಂಧಿ ದೇಖಿದರು. ಅವರಿಗೆ ವಿಶೇಷವಾದ ತರಬೇತಿ ಕೊಡಲ್ಪಡುತ್ತದೆ. ಅಧಿಕಾರಿ ವರ್ಗಕ್ಕಿಂತಲೂ ಈ ಮುಂದಿನವರ್ಗ ತರುಣ-ತರುಣಿಯರಿಗೆ ಹೆಚ್ಚು ಮಹತ್ವ ಕೊಡಲ್ಪಡುತ್ತದೆ. ಅವರು ನಾನಾ ರೀತಿಯಿಂದ ಜನರಲ್ಲಿ ಉತ್ಸಾಹವನ್ನು ಮೂಡಿಸುತ್ತಾರೆ. ಅನೇಕವಿಧ ನೆಯ ಸಾಧನಗಳನ್ನು ಉಪಯೋಗಿಸಿಯೂ ಶಿಕ್ಷಣ ನೀಡಲ್ಪಡುತ್ತಿದೆ "ಪೇಕಿಂಗದಲ್ಲಿ ಒಂದುನಾಟಿಕವನ್ನು ಆಭಿನಯಿಸಿದರು—ಸಸ್ಯ ಶಾಸ್ತ್ರದಲ್ಲಿ ಸಂಶೋಧನೆ ನಡೆಸುತ್ತಿದ್ದ ಒಬ್ಬ ಯುವತಿ ಇದರ ನಾಯಕಿಯಾಗಿದ್ದಳು. ತನ್ನ ಸಂಶೋಧನೆಗಳನ್ನು ರಾಷ್ಟ್ರಕ್ಕೆ ಉಪಯುಕ್ತವಾದ ರೀತಿಯಲ್ಲಿ ಆಳವಡಿಸಿಕೊಳ್ಳಬೇಕೆಂಬ ಸಲಹೆ ನೀಡಿದ ಮಿತ್ರನೊಬ್ಬನ ಅಕಾರ್ಯನಿಮಿತ್ತವಾಗಿ ಇವಳು ಕಾಲೇಜು ಮುಗಿದ ಬಳಿಕ ಹಳ್ಳಿಗಳಲ್ಲಿ ಶಿಕ್ಷಕಳಾಗಿ ಕೆಲಸ ಮಾಡಲು ನುಂದಾಗುವಳು ಈ ರೀತಿಯ ಪ್ರಚಾರ ಬಹಳ ವ್ಯಾಪಕವಾಗಿ ನಡೆದಿರಬೇಕೆಂದು ನನಗೆ ತೋರಿತು. ವಿದ್ಯಾರ್ಥಿಯಾಗಿರುವಾಗಲೇ ತರುಣ—ತರುಣಿಯರಲ್ಲಿ ರಾಷ್ಟ್ರದ ಉಜ್ಜೀವನೋದ್ದೇಶಕ್ಕಾಗಿ ಮೀಡಿಯುವ ಹುಮ್ಮಸ್ಸನ್ನು ಪ್ರಚೋದಿಸುತ್ತಿದ್ದ ಕೊರಳಿಗೆ ಕರಪತ್ರಗಳನ್ನು ಸುತ್ತಿಕೊಂಡು ಕೆಲಸ ಮಾಡುವ ಈ ವಿದ್ಯಾರ್ಥಿಗಳನ್ನು ಕಂಡು ನಿಜಕ್ಕೂ ಆನಂದವಾಗುತ್ತದೆ"

(೧-೨ ಪುಟ ನೋಡಿರಿ)

ಕಿವಜನೊಬ್ಬ ಕಾರಿನಲ್ಲಿ ಪ್ರಯಾಣಿಸುತ್ತಿದ್ದನು. ಶ್ರವಣ ದೋಷವನ್ನು ಸರಿಪಡಿಸಲು ಆತನು ಕಿವಿಗೆ ಯಂತ್ರವೊಂದನ್ನು ಇಟ್ಟುಕೊಂಡಿದ್ದನು.

ಡ್ರೈವರನಿಗೆ ಯಂತ್ರವನ್ನು ನೋಡಿ ಕುತೂಹಲ ಕೆರಳಿತು— "ಏನು ಸ್ವಾಮಿ, ಅದನ್ನು ಇಟ್ಟುಕೊಂಡಿದ್ದರೆ ಕಿವಿ ಜಾಸ್ತಿಗಿ ಕೇಳುತ್ತದೆಯೆ?" ಎಂದವನು ಕೇಳಿದನು "ಹೌದು" ಎಂಬ ಉತ್ತರ ದೊರೆಯಿತು.

ಆಗ ಆತನೊಂದು ಸಣ್ಣುಪಾಯ ಹೊಳೆಯಿತು ಬಿಟ್ಟು "ಎಸ್ಟೇ ಒಳ್ಳೆಯ ರಿಲಿ, ಒಬ್ಬೊಬ್ಬರಲ್ಲಿ ಒಂದೊಂದು ಸ್ಯೂನತೆ ಇದ್ದೇ ಇರುತ್ತದೆ. ಏನು ಸೂಡುವುದೆ ಈಗ ನನ್ನನ್ನೆ ನೋಡಿ—ಕಣ್ಣಿನ ದೋಷದಿಂದಾಗಿ ಎಮೆರಿನ ನನ್ನೊಮ್ಮೊಂದೂ ನನಗೆ ಸರಿಯಾಗಿ ತೋರುವುದಿಲ್ಲ" ಎಂದನು.

ಸ್ಥಾಪನೆ: ೧೯೩೫ [ಪ್ರಧಾನ ಕಚೇರಿ: ಉಡುಪಿ, ದ ಭಾರತ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿ.

ನಿಮ್ಮ ಹಣವು ಮಾತನಾಡಬಲ್ಲುದಾದರೆ.

ಎಲ್ಲರಂತೆ ನಿಮಗೂ ಸಂದರ್ಭಾನುಸಾರ ನಗದು ಹಣದ ಆವಶ್ಯಕತೆ ಬೀಳುವುದು. ಆ ಕಾಲಕ್ಕೆ ನೀವು ಸ್ವಲ್ಪ ಹಣವನ್ನು ಕೂಡಿಟ್ಟೇ ಸಬೇಕಲ್ಲವೆ. ವಿನಾಕಾರಣ ಹಣವನ್ನು ಮನೆಯಲ್ಲೇ ಇರಿಸಿಕೊಳ್ಳುವುದಕ್ಕೆ ಬದಲಾಗಿ ರಾತ್ರಿ ಹಗಲೂ ಸುರಕ್ಷಿತ ಪೆಟ್ಟಿಗೆಯಲ್ಲಿಡಲು ನೀವು ಅಪೇಕ್ಷಿಸುವಿರಿ ಹಣವನ್ನು ಶೀಘ್ರವಾಗಿಸಲು ನೀವು ತಾವಾಗಿಯೇ ಬಾರದೂ ಅವಕ್ಕೆ ಬದ್ಧಿ ಸಿಕ್ಕಿದರೆ ಬಾಗಬಹುದೆಂಬ ಅಪೇಕ್ಷೆ ನಮಗಿದೆ. ನೀವು ಸಾಲ ಪಡೆಯಲು ಸೌಕರ್ಯಗಳಿರುವ ಬೇಂಕಿನಲ್ಲೆ ನಿಮ್ಮ ಹಣವನ್ನು ಠೇವಣಿಸಿಡಲು ನೀವು ಇಚ್ಛಿಸುವಿರಿ. ಬೇಂಕಿನಲ್ಲಿ ತಿರಿಯಲಾಗುವ ಬೆಲ್ಕೆಯೇ ನಿಮಗೆ ಯಾವ ಕಾಲವಲ್ಲೂ ಎಲ್ಲಾ ಸೌಕರ್ಯವನ್ನು ಒದಗಿಸಬಲ್ಲುದು. ಲೈ ಬಿ ಟಾ ಕ ಗಿಂಗಳನ್ನು ನಮ್ಮ ಬ್ಯಾಂಕು ತೀರ್ಪ್ರ ಚೆಮಾವಣಿ ಸಾಲಪತ್ರಗಳನ್ನು ಒದಗಿಸಬಲ್ಲುದು ನಿಮ್ಮ ಅನುಕೂಲತೆಗಾಗಿ ವಿವಿಧ ಬೇಂಕಿಂಗ್ ಸೇವೆಗಳನ್ನು ಕ್ಪೂಢೀಕರಿಸಲಾಗಿದೆ. ಆನುವಂದಿಸಮ್ಮಲ್ಲಿಯೇ ಬೇಂಕಿಂಗ್ ವ್ಯವಹಾರವನ್ನು ಮಾಡಿ ಆಮೂಲ್ಯ ಸಲಹೆಯನ್ನು ಬೂಸಿಕೊಳ್ಳಿರಿ.

ಚಲಾವಣೆ ಭಂಡವಾಳ ರೂ. ೬,೫೦,೦೦,೦೦೦

THE CANARA INDUSTRIAL & BANKING SYNDICATE LTD.
Estd: 1925 H. O UDIPI, S India

ಉಕ್ಕು - ಔದ್ಯೋಗಿಕ ಪ್ರಗತಿಯ ಅಡಿಗಲ್ಲು

ಭಾರತದ ಅಭಿವೃದ್ಧಿಯಲ್ಲಿ ರಶ್ಯದ ಕುತೂಹಲ

ವಿಶ್ವವಿಶ್ರುತ ಜರ್ಮನಿ ತಜ್ಞರ ನೆರವಿನಿಂದ ಒಡಿಸಾದ ರೂರಕೇಲದಲ್ಲಿ ಭಾರತ ಸರಕಾರದವರು ಒಂದು ಉಕ್ಕಿನ ಕಾರ್ಖಾನೆಯನ್ನು ಕಟ್ಟಿಸಬೇಕೆಂದು ನಿರ್ಧರಿಸಿದ್ದು ಈಗ ಒಂಭತ್ತು ತಿಂಗಳಿಂದ ಯೋಜನೆ ಕಾರ್ಯರೂಪದಲ್ಲಿ ಇಳಿಯುತ್ತಿದೆ ಇಪ್ಪರಲ್ಲಿಯೇ ಇನ್ನೊಂದು ಉಕ್ಕಿನ ಕಾರ್ಖಾನೆಯನ್ನು ರಶಿಯದ ತಂತ್ರಜ್ಞರ ಸಹಾಯದಿಂದ ನೆಲೆಗೊಳಿಸುವ ವಿಚಾರವನ್ನು ಸರಕಾರ ಪರ್ಯಾಲೋಚಿಸುತ್ತಿದೆ. ನೊನ್ನೆ ಸಪ್ತಂಬರ ತಿಳಿರಂದು ಲೋಕಸಭೆಯಲ್ಲಿ ಉತ್ಪಾದನಾ ಮಂತ್ರಿ ಶ್ರೀ ಕೆ. ಸಿ ರೆಡ್ಡಿಯವರು ಭಾರತ ಸರಕಾರವು ರಶಿಯದ ತಜ್ಞರನ್ನು ಹೆಚ್ಚಿನ ವಿಷಯಗಳ ಪರಿಶೀಲನೆಗಾಗಿ ಭಾರತಕ್ಕೆ ಆಹ್ವಾನಿಸಿದೆ ಎಂಬುದಾಗಿ ತಿಳಿಸಿದರು. ಇದೇ ನವಂಬರ ತಿಂಗಳ ನೂರನೇ ವಾರದಲ್ಲಿ ಹನ್ನೆರಡು ತಜ್ಞರ ಮಂಡಳವೊಂದು ಭಾರತಕ್ಕೆ ಆಗಮಿಸಿ, ಹೊಸ ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸುವ ಬಗ್ಗೆ ಅಗತ್ಯವೆನಿಸಿದ ಎಲ್ಲ ಮಾಹಿತಿಗಳನ್ನೂ ಸಂಗ್ರಹಿಸುವುದು.

ವಿದೇಶಗಳ ಪತ್ರಿನಿಧಿಗಳ ಪರಿಷತ್ತೊಂದರಲ್ಲಿ ಆಹ್ವಾನಿತರಾಗಿ ಹೋಗಿದ್ದ ಕೇಂದ್ರ ವಾಣಿಜ್ಯ ಮಂತ್ರಿ ಶ್ರೀ ಕೃಷ್ಣಮಾಚಾರಿಯವರು ರಶಿಯದ ನೆರವಿನ ವಿಷಯದಲ್ಲಿ ಒಳ್ಳೆಯ ಮಾತುಗಳನ್ನು ಆಡಿರುವರೆಂದು ತಿಳಿದು ಬರುತ್ತದೆ. ಅವರ ಅಭಿಪ್ರಾಯದಂತೆ, ಭಾರತವು ತಾಂತ್ರಿಕ ಸಹಾಯ ಮುಂತಾದ ಸಂಗತಿಗಳಲ್ಲಿ ಅಂತಾರಾಷ್ಟ್ರೀಯ ದೃಷ್ಟಿಕೋಣವನ್ನು ಇಟ್ಟುಕೊಂಡಿದ್ದು, ಎಲ್ಲಿಂದ ಸಹಾಯ ಒದಗಿದರೂ ಅದನ್ನು ಸ್ವೀಕರಿಸಲು ನಾವಾ ಸಿದ್ಧರಿದ್ದೇವೆ; ಆದರೆ ಸಹಾಯವು ಪ್ರಾಮಾಣಿಕರೀತಿಯದಿದ್ದು, ರಾಜಕೀಯ ಅಥವಾ ಇನ್ನಿತರ ಸ್ವರೂಪದ ಕುಹಕಗಳಿಗೆ ಎಡೆ ಇರಬಾರದು. ಸಂಯುಕ್ತ ರಾಷ್ಟ್ರ ಸಂಘವುಹಿಂದುಳಿದ ದೇಶಗಳಿಗೆ ಪ್ರಾಮಾಣಿಕ ರೀತಿಯ ತಾಂತ್ರಿಕ ಸಹಾಯವನ್ನು ಒದಗಿಸುತ್ತಿದ್ದು, ರಶಿಯದಿಂದ ಭಾರತಕ್ಕೆ ಬರುವ ಸಹಾಯವೂ ಸಂಯುಕ್ತ ರಾಷ್ಟ್ರ ಸಂಘದ ಮೂಲಕವೇ ದೊರಕಿಲ್ಪಡುತ್ತದೆ. ಆದುದರಿಂದ ಅದರಲ್ಲಿ ದೋಷಯುಕ್ತವಾದ ಅಂಶವೇನೂ ಇರಲಾರದು. ಇನ್ನೊಂದು ವೈಶಿಷ್ಟ್ಯವೆಂದರೆ, ರಶಿಯವು ಹೊರಗಿನ ಯಾರ ಸಹಾಯವನ್ನೂ ಪಡೆಯದೆ ತನ್ನ ಔದ್ಯೋಗಿಕ ಪ್ರಗತಿಯನ್ನು ಸ್ವಂತ ಪ್ರಜೆಗಳ ಕೃತಿಭಿಯಿಂದಲೇ ಸಾಧಿಸಿದ್ದು, ಹೀಗೆ ಅದು ಕೈಗಾರಿಕಾ ಕ್ಷೇತ್ರದಲ್ಲಿ ಸಂಪಾದಿಸಿದ ಜ್ಞಾನದ ಲಾಭ ನಮಗೆ ಗುವುದು. ಮೂವತ್ತು ವರ್ಷಗಳ ಹಿಂದಿನ ರಶಿಯದ ಸ್ಥಿತಿ ಈಗಿನ ಭಾರತಕ್ಕಿಂತಲೂ ನಿಕೃಷ್ಟವಾಗಿತ್ತೆಂಬುದನ್ನು ನೆನೆದರೆ, ರಶಿಯದ ತಜ್ಞರ ಅನುಭವವು ನಮ್ಮ ನಾಡನ್ನು ಮರಳಿ ಕಟ್ಟುವಲ್ಲಿ ಅಮೆರಿಕದ ನೆರವಿಗಿಂತಲೂ ಹೆಚ್ಚು ಸ್ಫೂರ್ತಿ ಕೂಟ್ಟೀತು.

ಹೀಗೆ ರಾಷ್ಟ್ರವನ್ನು ಪುನಾರಚಿಸಬೇಕೆಂಬ ಪುಮ್ಮನ್ಸಿನಿಂದ ತುಂಬಿ ತುಳುಕುವ ನಮ್ಮ ಸರಕಾರವು ಕೈಗಾರಿಕೆಗಳ ಪಸ್ತರಣ ವಿಷಯದಲ್ಲಿ ಕೆಲವು ಮಹತ್ವದ ಅಂಶಗಳನ್ನು ಅಗತ್ಯವಾಗಿ ಗಮನಿಸಬೇಕಾಗುತ್ತದೆ. ನಮ್ಮ ಕೊರತೆಗಳನ್ನು ನಿವಾರಿಸುವುದಕ್ಕೆ ನಾವು ತೋರಿಸಿದೆಬ್ಬೇ ಅತುರವನ್ನು ಯೋಜನೆಗಳು ವ್ಯವಸ್ಥಿತ ರೀತಿಯಲ್ಲಿ ಕಾರ್ಯಗತಗೊಳ್ಳುವಂತೆ ನೋಡಿಕೊಳ್ಳುವುದಕ್ಕೂ ತೋರಿಸದಿದ್ದರೆ, ಅದರಿಂದ ನಮಗೆ ಲಾಭವಾಗುವ ಬದಲು ಹಾನಿ ಸಂಭವಿಸಬಹುದು. ಉಕ್ಕಿನ ಉತ್ಪಾದನೆಯನ್ನು ಹೆಚ್ಚಿಸಬೇಕು ಎಂಬ ಹಂಬಲಮಾತ್ರ ಇದ್ದರೆ ಸಾಲದು—ಅದಕ್ಕೆ ಸಂಬಂಧಿಸಿದ ಪ್ರತಿಯೊಂದೂ ಸಮಸ್ಯೆಗಳ ವಿಶ್ಲೇಷಣೆಯನ್ನು ಮಾಡಿ, ಯೋಗ್ಯ ಜನರನ್ನು ಗುರುತಿಸಿ, ಉತ್ತಮ ಕಾರ್ಯಕ್ರಮವನ್ನು ಸಿದ್ಧಗೊಳಿಸುವುದು ಅದಕ್ಕಿಂತಲೂ ಮಹತ್ವದ ವಿಷಯ ಯೋಜಕರು ಇದನ್ನು ಮರೆಯದೆ, ತತ್ವಗಳ ಮೇಲಿನ ವ್ಯೋಹವನ್ನು ಮಾತ್ರ ತೋರಿಸದೆ, ವ್ಯಾವಹಾರಿಕ ಅಂಶಗಳನ್ನೂ ವಿಚಾರಿಸುವುದು ಅಪೇಕ್ಷಣೀಯ.

ಉಕ್ಕಿನ ಕಾರ್ಖಾನೆಯನ್ನು ಎಲ್ಲಿ ಸ್ಥಾಪಿಸಬೇಕು ಎಂಬ ವಿಷಯದಲ್ಲಿ ಈಗ ಮುಖ್ಯ ಪ್ರದೇಶ ಹಾಗು ಪಶ್ಚಿಮ ಬಂಗಾಳ ಸರಕಾರಗಳಲ್ಲಿ ಯುದ್ಧವಾಗುತ್ತಿರುವಂತೆ ತೋರುತ್ತದೆ. ನಿಷ್ಪಕ್ಷಪಾತ ದೃಷ್ಟಿಯಿಂದ ನೋಡಿದರೆ, ವರ್ಷವಿಡೀ ನೀರು ದೊರಕುವ, ನೆರೆಯ ನೀರಿನ ಪುಟ್ಟಕ್ಕಿಂತಲೂ ಎತ್ತರವಿರುವ, ಕಬ್ಬಿಣದ ಅದುರು, ಕಲ್ಲಿದ್ದಲು ಮತ್ತು ವಿದ್ಯುಚ್ಛಕ್ತಿಯ ಕೇಂದ್ರಗಳಿಗೆ ಸನಿಹ ವಿರುವ, ಪಶ್ಚಿಮ ಹಾಗು ದಕ್ಷಿಣ ಭಾರತಗಳಿಗೆ ಸುಲಭದಲ್ಲಿ ಸರಕು ಸಾಗಿಸುವಂತೆ ರೈಲಿನ ಅನುಕೂಲತೆ ಹೊಂದಿರುವ, ಮಲೇರಿಯಾ ಮುಂತಾದ ಪಿಡುಗುಗಳಿಗೆ ಎಡೆ ಇರದೆ ಕೆಲಸಗಾರರು ನಿರೋಗಿಯಾಗಿರುವುದಕ್ಕೆ ಸಾಧ್ಯವಾದ ಸ್ಥಳವೊಂದನ್ನು ಹುಡುಕುವುದು ವಿಹಿತ. ಈ ದೃಷ್ಟಿಯಿಂದ ಪಶ್ಚಿಮ ಬಂಗಾಳದಲ್ಲಿರುವ ದುರ್ಗಾಪುರದ ಉಮೇದ್ವಾರಿಕೆಯನ್ನೆ ಮನ್ನಿಸಬೇಕೆಂದು ಹೇಳುವನವರುಂಟು. ಆದರೆ, ಹಿಂದುಳಿದ ಪ್ರದೇಶಗಳ ಅಭಿವೃದ್ಧಿಯನ್ನು ಸಾಧಿಸಬೇಡವೆ ಎಂಬ ಪ್ರಶ್ನೆಯನ್ನು ಮುಂಡಿಸಿದಾಗ, ಮಧ್ಯಪ್ರದೇಶ ಸರಕಾರದ ವಾದಕ್ಕೆ ಬಲಬರುತ್ತದೆ. ಇಂಥ ವಿವಾದವನ್ನು ತೀರ್ಮಾನಿಸುವ ಹೊಣೆಗಾರಿಕೆಯನ್ನು ತಜ್ಞರೇ ಹೊತ್ತುಕೊಳ್ಳುವುದು ಶ್ರೇಯಸ್ಕರ. ಸರಕಾರವು ತನ್ನ ಮೂಗು ಹೊಗಿಸುವುದು ಇಷ್ಟವಲ್ಲ—ಏಕೆಂದರೆ, ಮುತವಾರು ಸ್ಪರ್ಧೆತ ಸಂಪಾದಿಸಲು ಆದು ಅಷ್ಟಾಗಿ ಪ್ರಶಸ್ತವಲ್ಲದ ಸ್ಥಳವನ್ನು ಆರಿಸಿಕೊಂಡರೆ, ಆದರ ನಷ್ಟವನ್ನು ರಾಷ್ಟ್ರವು ಹೊರಬೇಕಾಗುತ್ತದೆ.

ಭೂಗರ್ಭದಲ್ಲಿರುವ ಕಲ್ಲಿದ್ದಲಿನ ನಿಕ್ಷೇಪ ನಮಗೆ ಎಲ್ಲಿಯ ವರೆಗೆ ಸಾಕು ಎಂಬ ವಿಷಯವನ್ನು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಸ್ಥಾಪಿಸುವಾಗ ಅಗತ್ಯವಾಗಿ ಗಮನಿಸ ತಕ್ಕದ್ದು—೧೯೫೦ನೇ ವರ್ಷದಲ್ಲಿ ನಡೆಸಿದ ಪರಿಶೀಲನೆಯಂತೆ ನಾವು ಉಕ್ಕಿನ ಕೈಗಾರಿಕೆಯಲ್ಲಿ ವರ್ಷಕ್ಕೆ ೫೫ ಲಕ್ಷ ಟನ್ನುಗಳಷ್ಟು ಕಲ್ಲಿದ್ದಲನ್ನು ಬಳಸುತ್ತಿದ್ದೇವೆ. ಆದರೆ ಮುಂದಿನ ಐವತ್ತು ವರ್ಷಗಳಲ್ಲಿ ನಮ್ಮ ಉತ್ಪಾದನೆಯು ಹತ್ತು ಪಾಲು ಹೆಚ್ಚಬಹುದೆಂದು ಲೆಕ್ಕ ಹಾಕಿದ್ದು, ಹಾಗಾದಾಗ ೫೫ ವರ್ಷಗಳ ತನಕ ನಾಲ್ಕು ವರ್ಷಕ್ಕೆ ಕಲ್ಲಿದ್ದಲಿನ ಸಂಗ್ರಹವಿದೆ ಎಂದು ತಿಳಿದು ಬರುತ್ತದೆ. ಇದರಲ್ಲಿ ಕೂಡ ಅತ್ಯಾಧುನಿಕ ಕ್ರಮಗಳನ್ನು ಅನುಸರಿಸಿದ್ದರೆ ಪ್ರಯೋಜನ ಅರ್ಧದಷ್ಟು ತಗ್ಗಬಹುದು. ಆದ್ದರಿಂದ, ಕಲ್ಲಿದ್ದಲಿನ ಸಂಗ್ರಹದ ಪೂರ್ಣ ಪ್ರಯೋಜನವನ್ನು ಪಡೆಯುವಾಗುವಂತೆ ಭಾರತ ಸರಕಾರವು

(೧೧ನೇ ಪುಟ ನೋಡಿರಿ)

ಕುಂದಾಪುರ ಡಿ. ಮು. ಕೋರ್ಟಿನಲ್ಲಿ
O. S. 518/1932. R. L. P. 141/54

ಅರ್ಜಿದಾರರ— H. ರಾಮಕೃಷ್ಣ ಭಟ್ಟ, ಮಂಜುನಾಥ ಭಟ್ಟರ ಮಗ, ಕುಂದಾಪುರ ಕ್ಷೇತ್ರ.

ಎದ್ರಿರು— 1. ಶಶಿಧರ, 2. ಕಮಲಾಕರ, 3. ವಸಂತ, 4. ಭಾಸ್ಕರ—ಕೆಪಟನ್ A. R. ಭಟ್ಟರ ಮಕ್ಕಳು, 5. ರಾಜ್ಞಾ ಬ್ಯಾ, ಕೆಪಟನ್ A. R. ಭಟ್ಟರ ವಿಧವೆ.

1ನೇ ಎದ್ರಿಯು ಪೆಲ್ಲೂರು ಅಸಿಸ್ಟಾಂಟ್ ಸರ್ಜನನಾಗಿಯೂ, ಮಿಕ್ಕವರು ಉಡ್ಡಿ ಕ್ವೆಬಯಲ್ಲಿಯೂ ಇರುತ್ತಾರೆ.

ಸದ್ರಿ 1ನೇ ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:

ಆರ್ಜಿದಾರನು ಎದ್ರಿರ ಮೇಲೆ ಪಡೆದ ಮೇಲಿನ ದಿಕ್ರಿಯ ಮೇಲೆ ನಡ್ರಿದ ಸದ್ರಿ ಅಮ್ಲಜ್ಞಾರಿಯು ತಾರೀಕು 23-11-1954ಕ್ಕೆ ತಪ್ಪಿಸಿಗೆ ಉಂಟು. ಆ ಕುರಿತು ಸದ್ರಿ ಎದ್ರಿಯ ದೇನಾದರೂ ಅಕ್ಷೇಪಣೆಯಿದ್ದರೆ, ಆ ತಾರೀಕಿಗೆ ಹಗಲು 11 ಗಂಟೆಗೆ ಮೇಲಿನ ಕೋರ್ಟು ಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಎಕ್ಸಪಾರ್ಟಿಯಿಂದ ನಿನ್ನು ಅರ್ಜಿಯು ತೀರ್ಮಾನವಾಗುತ್ತಿಂಬ ಸಂಗ್ತಿ ಕೋರ್ಟು ಹುಕುಂ ಮೇರೆಗೆ ಈ ಮೂಲ್ಕ ತಿಳಿಸಲಾಗುತ್ತದೆ.

S. S. Kolkebail,
Advocate for Petr

Coondapur, 7-11-54.

THE CANARA MUTUAL ASSURANCE COMPANY, LTD.,
Managing Director: T. R. A. PAI
Head Office: **UDIPI**, S. INDIA.] [Estd: 1935

ಅತ್ಯುತ್ತಮ ಬೋನಸ್

ಲಾಭಸಹಿತ ಪೋಲಿಸಿಗಳಿಗೆ ವಿಮಾ ಪೊಲಬಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ. 18/- ಹೋಲ್ ಲೈಫ್ ಎಶ್ಯೂರೆನ್ಸಿಗೆ

ರೂ. 15/- ಎಂಡೋಮೆಂಟ್ ಎಶ್ಯೂರೆನ್ಸಿಗೆ

31-12-1953ನೇ ತಾರೀಕಿಗಾಪ 1951ರಿಂದ 1953ರ ವರೆಗಿನ ಆಪಥಿಯ ವಿಮಾಗಣನೆಯ ಫಲಿತಾಂಶ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫.

ಸ್ಥಾಪನೆಯಾದಂದಿನಿಂದಲೂ ಪ್ರತಿವರ್ಷವೂ ಬೋನಸ್ ಪಂಚಿದ ಕಂಪೆನಿ.

CHIEF AGENTS:
THE COMMERCIAL CORPORATION OF INDIA, LTD.,
UDIPI, S. India



ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಕಾಂತನನ್ನೆದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುತೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

---

೩೦ वर्षोंसे जगप्रसिद्ध और विजयी होनेवाला।

प्रत्येक स्टोर में और सब स्थानों पर बिकता है।

बाटलीवाला एण्टीमिक्चर
और गोलियां
मलेरिया इन्फ्लुएंजा और प्रत्येक प्रकारके बुखार के लिये।

सोल मेन्युफेक्चरर: डी. एच. एल. बाटलीवाला सन्स एण्ड कं. लि.
बाटलीवाला बिल्डिंग, ९३ बी. पोर्तुगीझ चर्च स्ट्रीट,
Tele. Add. "CAWASHABAD" दादर, बम्बई २८.

ಎರಡನೆಯ ಪಂಚವಾರ್ಷಿಕ ಯೋಜನೆ

ವಾಸ್ತವಿಕ ದೃಷ್ಟಿಕೋಣದ ಮಹತ್ವ

ಪೊದಲನೆಯ ಪಂಚವಾರ್ಷಿಕ ಯೋಜನೆಯ ಅವಧಿ ಮುಗಿಯುವುದಕ್ಕೆ ಇನ್ನೂ ಒಂದೂವರೆ ವರ್ಷದಷ್ಟು ಸಮಯ ಇರುವಾಗಲೇ ಎರಡನೆಯ ಪಂಚವಾರ್ಷಿಕ ಯೋಜನೆಯ ರೂಪರೇಖೆಗಳನ್ನು ಸಿದ್ಧಗೊಳಿಸುವ ಉದ್ದೇಶದಿಂದ ಪ್ರಯತ್ನಗಳನ್ನು ನಡೆಸಲಾಗುತ್ತಿದೆ. ಕಳೆದ ವಾರ ಪೊಸ ದೆಹಲಿಯಲ್ಲಿ ಯೋಜನಾ ಆಯೋಗದ ಸದಸ್ಯರು, ರಾಜ್ಯಗಳ ಮುಖ್ಯ ಮಂತ್ರಿಗಳು ಮುಂತಾದವರಿಂದ ಕೂಡಿದ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಸಭೆ ಸೇರಿ ಪ್ರಥಮ ಹಾಗು ದ್ವಿತೀಯ ಪಂಚವಾರ್ಷಿಕ ಯೋಜನೆಗಳನ್ನು ಕಾರ್ಯಗತಗೊಳಿಸುವ ಕುರಿತು ವಿಚಾರ ವಿನಿಮಯವನ್ನು ನಡೆಸಿತು. ಅದರ ಸಾರವನ್ನು ಗ್ರಹಿಸುವುದರಿಂದ ನಮಗೆ ಹೆಚ್ಚಿನ ಪ್ರಯೋಜನ ಲಭ್ಯವಾದೀತು. ರಾಷ್ಟ್ರದ ಅಭಿವೃದ್ಧಿಯ ಹೆಜ್ಜೆಯನ್ನು ಗುರುತಿಸುವುದಕ್ಕೂ ಇದರಿಂದ ನೆರವು ದೊರಕೀತು.

ಅಧಿವೇಶನವನ್ನು ಪ್ರಧಾನ ಮಂತ್ರಿ ನೆಹರುಗಳು ಉದ್ಘಾಟಿಸಿದರು. ಭಾರತವು ಸ್ವಾತಂತ್ರ್ಯೋತ್ತರದಲ್ಲಿ, ಹಾಗು ಪಂಚವಾರ್ಷಿಕ ಯೋಜನೆಯು ಪೊದಲಿನ ಮೂರು ವರ್ಷಗಳಲ್ಲಿ ಸಾಧಿಸಿದ ಪ್ರಗತಿಯು ಗಣನೀಯವಾಗಿದೆ ಎಂದವರು ಅಭಿಮಾನದಿಂದ ಹೇಳಿದರು. ಯೋಜನೆಯು ನಿಶ್ಚಿತ ಸ್ವರೂಪವನ್ನೆ ಹೊಂದಿಬೇಕೆಂಬ ಅಭಿಪ್ರಾಯಕ್ಕೆ ಬದ್ಧರಾಗದೆ ಗತಿಶೀಲತೆಯನ್ನು ತೋರಿಸುವುದು ವಿಹಿತವೆಂದು ಅವರು ಸಲಹೆ ನೀಡಿದರು. ಸಮಯ ಪ್ರಭಾ ಪರಿವರ್ತನೆ ಹೊಂದುವ ಬಗೆಯನ್ನು ನೋಡಿದರೆ ಮುಂದಿನ ಹತ್ತಿಪ್ಪತ್ತು ವರ್ಷಗಳಲ್ಲಿ ಭಾರತವು ಸಮಾಜವಾದಿ ತತ್ವಗಳಿಗೆ ಮನ್ನಣೆಕೊಡುವ ರಾಷ್ಟ್ರವಾಗಿ ಪರಿಣಮಿಸಬಹುದೆಂದು ಅವರು ಹೇಳಿದರು ತಮ್ಮ ಕಣ್ಣಮುಂದೆಯಂತೂ ಸಮಾಜವಾದಿ ಭಾರತದ ಚಿತ್ರವನಿದೆ ಎಂಬುದಾಗಿ ನೆಹರು ಸಾರಿದರು. ಇಲ್ಲಿ ಬಾಸಗಿ ಬಂಡವಾಳಕ್ಕೆ ಅವಕಾಶವೇ ಇಲ್ಲವೆಂಬ ನಿರ್ಬಂಧವಿಲ್ಲ—ಅದಾಗ್ಯೂ ಅದು ತನ್ನ ಹಿಂದಿನ ಪ್ರಭುಪಟ್ಟವನ್ನು ಪೊರೆದು, ಸಾಮಾಜಿಕ ನಿಯಂತ್ರಣ ಹಾಗು ಧರ್ಮತೆಗಳಿಗೆ ಒಳಪಟ್ಟೇ ವಿಕಾಸಹೊಂದಬಹುದು ಎಂದು ಅವರ ಅಭಿಪ್ರಾಯ.

ಸಾರ್ವಾಂಗಿಕ ಅಭಿವೃದ್ಧಿಯನ್ನು ಸಾಧಿಸಿದ ಭಾರತವನ್ನು ಕಟ್ಟುವ ಉತ್ಸಾಹದಲ್ಲಿ ನೆಹರುಗಳು ಈಗಿನ ಮಂದಗತಿಯನ್ನು ಕುರಿತು ತುಂಬ ಅಸಹನೆಯನ್ನು ತೋರಿಸಿದರು. ಸಿರುದ್ಯೋಗ ಸಮಸ್ಯೆಯನ್ನು ಬಿಡಿಸುವುದು, ಗ್ರಾಮಾಂತರ ಪ್ರದೇಶಗಳಿಗೆ ವೈದ್ಯಕೀಯ ಸೌಲಭ್ಯವನ್ನು ಒದಗಿಸುವುದು, ನಮಗೆ ಬೇಕಾದ ಯಾಂತ್ರಿಕ ಸಲಕರಣೆಗಳನ್ನು ಇಲ್ಲಿಯೇ ಉತ್ಪಾದಿಸುವುದುಮುಂತಾದವಿಷಯಗಳಲ್ಲಿ ನಾವು ಸಾಕಷ್ಟು ಸಫಲರಾಗಲಿಲ್ಲವೆಂದವರು ಖೇದದಿಂದನುಡಿದರು.ಚೀನದ ಹಾಗು ಭಾರತದ ವಾರ್ಗಗಳು ಬೇರೆ ಬೇರೆಯಾಗಿದ್ದರೂ ಅವು ನಿರ್ವಹಿಸಬೇಕಾದ ಕರ್ತವ್ಯಗಳಲ್ಲಿ ಸಾಮ್ಯವಿದೆ ಎಂದು ಹೇಳುತ್ತಾ, ನಮ್ಮಲ್ಲಿ ವಿಶಿಷ್ಟ ವಿಷಯಗಳಲ್ಲಿ ಪ್ರಾವೀಣ್ಯ ಪಡೆದವರ ಸಂಖ್ಯೆ ಕಡಿಮೆ ಇರುವುದಕ್ಕೆ ವ್ಯಥೆಪಟ್ಟರು. ಚೀನದ ವಿಶ್ವವಿದ್ಯಾಲಯಗಳಲ್ಲಿ ಜನರು ಯೋಗ್ಯ ಉದ್ಯೋಗಗಳಿಗಾಗಿ ತರಬೇತಿ ಹೊಂದಿದರ ನಮ್ಮಲ್ಲಿ ಪದವಿಗಾಗಿ ಶಿಕ್ಷಣ ಕೊಡಲ್ಪಡುತ್ತಿದೆ ಎಂದು ನೆಹರು ನುಡಿದರು.

ನೆಹರುಗಳ ಅನಿಸಿಕೆಯನ್ನು ಕಲ್ಯಾಣ ಕಾಂಕ್ಷಿಗಳಾದ ಪ್ರಜೆಗಳೆಲ್ಲರೂ ಅರ್ಥ ಮಾಡಿಕೊಳ್ಳಬಲ್ಲರು. ನಮ್ಮ ಸಮಸ್ಯೆಗಳಲ್ಲಿ ಪ್ರತಿಯೊಂದನ್ನೂ ಸಮಾಧಾನಕರವಾಗಿ ಬಿಡಿಸಬೇಕೆಂಬ ಬಗ್ಗೆ ಆತುರವನ್ನು ತೋರಿಸುವುದು ಸಹಜವೇ ಆಗಿದೆ. ಆದರೆ, ಕೇವಲ ಆತುರದಿಂದಲೇ ಎಲ್ಲ ಕೆಲಸವೂ ನೆರವೇರುವುದಿಲ್ಲ - ಬೀಜ ಸಟ್ಟವಾತ್ರಕ್ಕೆ ಫಲಕೊಯ್ಯಲು ಸಿಗುವುದಿಲ್ಲ: ಸ್ವಲ್ಪ ಸಮಯ ನಾವು ಕಾದು ಕುಳಿತಿರಲೇ ಬೇಕಾಗುತ್ತದೆ; ನಾತ್ರ ವಲ್ಲ, ನೆಟ್ಟ ಬೀಜವು ಮೊಳೆತು, ವಲ್ಲರಿಸಿ ಪುಷ್ಪಿಸುವ ವರೆಗೆ ಆಥೆ ಕೆಯನ್ನೂ ಮಾಡಬೇಕಾಗುತ್ತದೆ. ಈ ದೃಷ್ಟಿಯಿಂದ ಸಮಸ್ಯೆಯನ್ನು ನೋಡಿದರೆ, ನಾವು ಸಾಧಿಸಿದ್ದೇನೂ ಇಲ್ಲ ಎಂಬ ಅಸಮಾಧಾನವಾಗಲೀ ಫಲ ಸಾಕಷ್ಟು ಪ್ರಮಾಣವಾಗಿ ಸಿಗುವುದಿಲ್ಲ ಎಂಬ ಅಸಹನೆಯಾಗಲೀ ಸಮರ್ಥನೀಯವೆನಿಸಲಾರದು. ಭವ್ಯ ಆಶಯದ ಚಿತ್ರಕ್ಕೂ ವ್ಯಾವಹಾರಿಕ ಕ್ಷೇತ್ರದ ಪರಿಸ್ಥಿತಿಗೂ ಬಹಳ ಅಂತರ ವಿರುವುದರಿಂದ ಈ ಮಾತನ್ನು ಜ್ಞಾಪಿಸಬೇಕಾಗುತ್ತದೆ.

ಯೋಜನೆಯು ವಾಸ್ತವಿಕತೆಯನ್ನು ಬಿಟ್ಟು ಬಹಳ ದೂರ ಹೋಗಲಾರದೆಂಬುವನ್ನು ನೆಹರುಗಳ ಭಾಷಣದ ತರುವಾಯ ನೆರವೇರಿದ ಕಾರ್ಯಕಲಾಪಗಳು ಸ್ಪಷ್ಟಗೊಳಿಸುತ್ತವೆ. ಆದರೆವು ನಮ್ಮ ಮುನ್ನೋಟವನ್ನು ನಿರ್ಮಲಗೊಳಿಸಿ, ಒಂದು ಹದಕ್ಕೆ ತರುತ್ತದೆ ಎಂದು ಮಾತ್ರ ಹೇಳಬಹುದಲ್ಲದೆ, ಅದೇ ಸಾಧನೆಯ ಮಾನದಂಡವಾಗಲಾರದು. ನಾವೇನು ಸಾಧಿಸಿದ್ದೇವೆ ಎಂಬ ಪ್ರಶ್ನೆಯನ್ನು ಉತ್ತರಿಸುವಾಗ, ನಮ್ಮ ಆವಶ್ಯಕತೆಗಳ ದೀರ್ಘ ಪಟ್ಟಿಯೊಡನೆ ತುಲನೆ ಮಾಡುವುದಕ್ಕಿಂತಲೂ ನಮ್ಮ ಪರಿಸ್ಥಿತಿಯಲ್ಲಿ ಅಭಿವೃದ್ಧಿಗೋಸ್ಕರ ಮಾಡಬಹುದಾಗಿದ್ದ ತ್ಯಾಗದ ಮಟ್ಟವನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದು ಮೇಲು. ಕೈಗಾರಿಕೆಯೇ ಪ್ರಧಾನವಾದ ರಾಷ್ಟ್ರದಲ್ಲಿ ಒಬ್ಬ ನಾಗರಿಕನಿಗೆ ದಿನಕ್ಕೆ ಎಂಟು ತಾಸಿನ ಕೆಲಸ ದೊರಕುವುದಕ್ಕೆ ಹತ್ತುಸಾವಿರ ರೂಪಾಯಿಗಳ ಬಂಡವಾಳ ಸುರಿದ ಕಾರ್ಖಾನೆ ಬೇಕಾಗುತ್ತದೆ. ನಾವು ಒಬ್ಬ ನಿರುದ್ಯೋಗಿಗೆ ಕೆಲಸ ದೊರಕಿಸಿಕೊಡುವುದಕ್ಕೋಸ್ಕರ ಇಷ್ಟು ಹಣವನ್ನು ವೆಚ್ಚಮಾಡುವ ಸ್ಥಿತಿಯಲ್ಲಿದ್ದು, ನಿರುದ್ಯೋಗ ಸಮಸ್ಯೆ ದೂರಾಗದೆ ಉಳಿಯಿತೆ ಎಂಬುದು ವಿಚಾರಿಸಲ್ಪಡಬೇಕಲ್ಲದೆ, ಸಮಸ್ಯೆಯ ಭೀಕರತೆಯಿಂದೇ ಕಂಗೆಡಿಸುವಂತಿರಬಾರದು.

ಬೇರೆ ಬೇರೆ ರಾಜ್ಯಗಳ ಮುಖ್ಯ ಮಂತ್ರಿಗಳು ವ್ಯಕ್ತಗೊಳಿಸಿದ ಅಭಿಪ್ರಾಯವನ್ನು ನೋಡಿದಿದೆ, ನಮ್ಮ ದೇಶದಲ್ಲಿ ಅದಾಯ ಸ್ರೋತ ಬಹಳ ಮಿತವಾಗಿರುವುದೇ ನನ್ನು ಅನೇಕ ಸಮಸ್ಯೆಗಳು ಬಗೆಹರಿಯುವುದಕ್ಕೆ ಇನ್ನೂ ಪೀಡೆಕೊಡುತ್ತಿರುವುದಕ್ಕೆ ಕಾರಣವೆಂದು ಸ್ಪಷ್ಟವಾಗುತ್ತದೆ. ಸಾರ್ವಜನಿಕ ರಂಗದಲ್ಲಿ ೪೨೦೦ ಕೋಟಿ ರೂಪಾಯಿಗಳಷ್ಟು ಹೆಚ್ಚು ವೆಚ್ಚವನ್ನು ತೋರಿಸುವ ನಮ್ಮ ಪ್ರಥಮ ಪಂಚವಾರ್ಷಿಕ ಯೋಜನೆ ೬೦೦ ಕೋಟಿ ರೂಪಾಯಿಗಳಷ್ಟು ಕೊರತೆಯನ್ನು ಅನುಭವಿಸಬೇಕಾಗುತ್ತದೆ ಎಂಬ ವಿಷಯದಲ್ಲಿ ಈಗ ಯಾರಿಗೂ ಸಂಶಯಉಳಿದಿಲ್ಲ.ನಮ್ಮ ಆದಾಯವನ್ನು ಹೆಚ್ಚಿಸುವ ವಿಧಾನಗಳು ಯಾವುವು ಎಂಬ ಪ್ರಶ್ನೆಗೆ ಸಮರ್ಪಕವಾದ ಉತ್ತರಗಳು ದೊರಕದಿರುವಾಗ, ಯೋಜನೆಯನ್ನು ಕಾರ್ಯಗತ ಗೊಳಿಸುವಲ್ಲಿ ಹಣದ ಅಡಚಣೆಯು ಮುಖ್ಯ ತೊಡಕಾಗಿರುವಾಗ, ನಾವು ಮಾಡಬಹುದಾದುದಾದರೂ ಏನು?

ಹಣದ ಅಭಾವವು ಎಷ್ಟು ಉತ್ಕಟವಾಗಿದೆಯೆಂದರೆ ಮದ್ರಾಸು ರಾಜ್ಯಕ್ಕೆ ಯೋಜನೆಯ ಕೊನೆಯ ವರ್ಷದಲ್ಲಿ ಕರ್ಚು ಮಾಡಲು ಏನೂ ಹಣ ಉಳಿದಿಂತೆ ತೋರುವುದಿಲ್ಲ. ಪರಿಣಾಮವಾಗಿ ೨೨ ಕೋಟಿ ರೂಪಾಯಿಗಳಷ್ಟು ವೆಚ್ಚ ತಗಲುವ ಪಂಚವಾರ್ಷಿಕ ಯೋಜನೆಯ ನಾಲ್ಕರಲ್ಲಿ ಒಂದೆರಡನ್ನು ಒಳಗೊಳ್ಳುವ—ಅನೇಕ ಕಾರ್ಯಕ್ರಮಗಳನ್ನು ರದ್ದುಗೊಳಿಸಬೇಕಾಗಿ ಬರಬಹುದೆಂಬ ಅಂಜಿಕೆಯನ್ನು ಮೇಲಿನ ಸಭೆಯಲ್ಲಿ ಶ್ರೀ ಸಿ. ಸುಬ್ರಹ್ಮಣ್ಯಮರು ವ್ಯಕ್ತಪಡಿಸಿದರು. ಕೇಂದ್ರ ಸರಕಾರವು ರಾಜ್ಯ ಸರಕಾರಗಳಿಗೆ ಅಧಿಕ ಧನ ಸಹಾಯವನ್ನು ಮಾಡಬೇಕೆಂಬುದು ಎಲ್ಲ ರಾಜ್ಯಗಳ ಪಲ್ಲವಿಯೆಂತಾಗಿತ್ತೆಂದರೂ ಸಲ್ಲುತ್ತದೆ. ಇದಕ್ಕೆ ಕೇಂದ್ರ ಸರಕಾರದ ಆರ್ಥ ಸಚಿವ ದೇಶಮುಖರು ಕೊಡುವ ಉತ್ತರವೇನೆ.? ರಾಜ್ಯಗಳ ಆದಾಯವನ್ನೂ ಯೋಜನೆಯ ವೆಚ್ಚವನ್ನೂ ಬಾಯಿಗೂಡಿಸುವುದಾಗದಿದ್ದರೆ, ಯೋಜನೆಯಲ್ಲಿ ಕಡಿತ ಮಾಡಬೇಕೆಂದೇ ಅವರು ಖಂಡತುಂಡವಾಗಿ ಹೇಳಿದರು. ರಾಜ್ಯ ಸರಕಾರಗಳೊಡನೆ ಪೂರ್ವ ಭಾವಿಸಮಾಲೋಚನೆಗಳನ್ನು ನಡೆಸಿಯೇ ಯೋಜನೆಯ ವಿವರಗಳನ್ನು ಗೊತ್ತುಪಡಿಸಿರುವುದರಿಂದ ಹಣದ ಅಭಾವ ಉಂಟೆಂದು ಈಗ ಹೇಳುವುದರಲ್ಲಿ ಔಚಿತ್ಯವಿಲ್ಲ ಎಂದವರು ನಿಲುಮೆ ಇದ್ದಂತೆ ಕಂಡು ಬರುತ್ತದೆ.

(೪ ನೇ ಪುಟ ನೋಡಿರಿ)

ನಂಬಿಕೆಗೆ ಅರ್ಹತೆ!

ಅತ್ಯುತ್ತಮ ಟಾಯಲೆಟ್ ಸಾಬೂನಿನಲ್ಲಿ ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ ಅವೆಲ್ಲಾ

ಮೈಸೂರು ಸ್ಯಾಂಡಲ್ ಸೋಪಿನಲ್ಲಿ

ಇರುವವು ಎಂದು ಖಚಿತವಾಗಿ ಹೇಳುತ್ತೇನೆ.

* * *

— ಎಲ್ಲಾ ಕಡೆಗಳಲ್ಲೂ ದೊರಕುವುದು —

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು.

Member: I. S. T. M. A.

ZANDU'S THREE GEMS of AYURVEDIC MEDICINES

ಝೂಂಡೂರವರ ಮಕರಧ್ವಜ ಪಿಲ್ಸ್ (ಸುವರ್ಣ ಮಿಶ್ರಿತ)

ದಿಙ್ಮೂಢತೆಯ ಕೆಸ್ಮು, ನರಗಳ ನಿಸ್ಸಾರ ಮತ್ತು ಸರ್ವಶಾಮಾನ್ಯ ಅಶಕ್ತತೆ ಹಾಗೂ ಇತರ ಎಲೆಯ ಬೇನೆಗಳಿಗೆ ಅತ್ಯಧಿಕ ಗುಣಕಾರಿ. ಬೆಲೆ: 1 ತೊಲೆಗೆ ರೂ. 9—0—0

ಝೂಂಡೂರವರ ವಸಂತ ಕುಸುಮಾಕರ ರಸ—ಮೂತ್ರಾತಿಸಾರ, ಸಿಹಿಮೂತ್ರ, ನಿಶ್ಶಕ್ತ ಇತ್ಯಾದಿ ಬಹುಕಾಲದ ಮೂತ್ರ ರೋಗಗಳಿಗೆ ಡಾಕ್ಟರುಗಳಿಂದ ವಿಶಿಷ್ಟ ತರದಲ್ಲಿ ಶಿಫಾರಸು ಮಾಡಲ್ಪಟ್ಟಿದೆ. ಬೆಲೆ: ಕಾಲು ತೊಲೆಗೆ ರೂ. 8—0—0.

ಝೂಂಡೂರವರ ಸುವರ್ಣ ಮಿಶ್ರಿತ ಚ್ಯವನಪ್ರಾಶ—ಸರ್ವರಿಗೂ ರುಚಿಕರವಾದ ಹೊಸತರ ಆಹಾರ, ಬಂಗಾರ ಮತ್ತು ಇತರ ಭಸ್ಮಗಳ ಮಿಶ್ರಣ ನಿರುವುದರಿಂದ ಶೀತ, ಕಫ, ಕೆಮ್ಮುಗಳಿಗೆ ಅತ್ಯಂತ ಪರಿಣಾಮಕಾರಿ.
ಬೆಲೆ: 1 ರಾತ್ತಿಗೆ ರೂ. 7—8—0. ಕಾಲು ರಾತ್ತಿಗೆ ರೂ. 2—0—0.

ಝೂಂಡೂರವರ ಔಷಧಿಗಳು ಮೈ.ಕ.ಜಿಲ್ಲೆಯ ಅಧಿಕೃತ ವಿಜಂಟರ್ಸ್‌ಲ್ಲಿ ದೊರೆಯುವುವು

ಕ್ಯಾಟಲಾಗಿಗೆ ಕೆಳಗಿನ ಸೋಲ್ ವಿಜಂಟರಿಗೆ ಬರೆಯಿರಿ.

DAMODAR & CO.,
113 Ninniappa Naicken Street, P. T.-MADRAS-3.

೫೫೦೦ ಕೋಟಿ ರೂಪಾಯಿಗಳ ಮುಂದಿನ ಯೋಜನೆ

(ನಿನ್ನೆ ಸುಟದಿಂದ)

ಪ್ರತಿಯೊಂದು ರಾಜ್ಯ ಸರಕಾರವೂ ಅಭಿವೃದ್ಧಿ ಪ್ರಯತ್ನಗಳ ದೊಡ್ಡಪಟ್ಟಿಯನ್ನು ರಚಿಸಿ, ಜನರ ಪ್ರೀತಿ ಸಂಪಾದಿಸಲು ನೋಡಿತೇ ಹೊರತು, ಆವನ್ನು ಕಾರ್ಯಗತಗೊಳಿಸಲು ಸಾಕಷ್ಟು ಆದಾಯ ಬರುವ ಕಲ್ಪನೆಯನ್ನು ಮಾಡಿದ್ದಿತೇ ಎಂದು ನಾವೀಗ ಸಂಶಯಿಸುವ ಪರಿಸ್ಥಿತಿ ನಿರ್ಮಾಣವಾಗಿದೆಯೆಂದರೆ ಅತಿಶಯೋಕ್ತಿ ಎನಿಸದು. ತೆರಿಗೆಯ ವಿಷಯವನ್ನು ವಿಚಾರಿಸಲು ನೇಮಕಗೊಂಡ ಸಮಿತಿಯು ಕಲ್ಯಾಣ ರಾಷ್ಟ್ರದ ಧ್ಯೇಯಕ್ಕೆ ಸರಿಯಾಗಿ ಸರಕಾರವು ಕಾರ್ಯಕಲಾಪಗಳನ್ನು ನಡೆಸಲಾಗುವಂತೆ ಹೊಸ ಹೊಸ ತೆರಿಗೆಯ ಸೂಚನೆಗಳನ್ನು ಮಾಡಬಹುದು. ಆದರೆ ಎಷ್ಟೇ ಹೇಳಿದರೂ ಆದರ ದೆಸೆಯಿಂದ ಸರಕಾರದ ಆದಾಯವು ಈಗಿನ ಮಟ್ಟಕ್ಕಿಂತ ಬಹಳವಾಗಿ ಏರಲಾರದು ಆದುದರಿಂದ ನಿಜವಾಗಿ ಏನಾದರೂ ಒಳ್ಳೆಯ ಕೆಲಸ ಮಾಡಬೇಕೆಂದಿದ್ದರೆ ಈಗ ಕೈಗೊಳ್ಳಲಾದ ಅನೇಕ ಬಗೆಯ ಕಾರ್ಯಕ್ರಮಗಳಲ್ಲಿಯೇ ಅನಾವಶ್ಯಕವೆನಿಸಿಸುವದನ್ನು ಬಿಟ್ಟುಗೊಡುವುದು ಲೇಸು. ಕಳೆದ ಮೂರು ವರ್ಷಗಳ ಯೋಜನೆಯ ಅವಧಿಯಲ್ಲಿ ಬೇರೆಬೇರೆ ಕೆಲಸಗಳಲ್ಲಿ ಹಣವು ವ್ಯರ್ಥವಾಗಿ ವೆಚ್ಚವಾದದ್ದೇನಾದರೂ ಇದೆಯೆ,ಎಂದು ಮುಂತಾಗಿ ವಿಚಾರಿಸುವುದು ಅಪೇಕ್ಷಣೀಯ. ಈಗಾಗಲೇ ಜನಪದ ಅಭಿವೃದ್ಧಿ ಯೋಜನೆ, ರಾಷ್ಟ್ರೀಯ ವಿಸ್ತರಣ ಯೋಜನೆ ಮುಂತಾದವುಗಳಲ್ಲಿ ಸರಕಾರದ ಆಡಳಿತ ವರ್ಗಕ್ಕೆ ಸಂಬಳರೂಪದಲ್ಲಿ ಸಂದ ನೊತ್ತವೇ ಜನರ ಲಾಭಕ್ಕೊಸ್ಕರ ಕೈಗೊಂಡ ಕೆಲಸಗಳಿಗಿಂತ ಹೆಚ್ಚೆಂಬ ಟೀಕೆ ಕೇಳಿಬರುತ್ತಿದೆ ಇಂಥ ಆಕ್ಷೇಪಗಳನ್ನು ಮೊತ್ತಮೊದಲಾಗಿ ದೂರೀಕರಿಸುವುದು ಶ್ರೇಯಸ್ಕರ.

ಇದೇ ಕಾಲದಲ್ಲಿ ರಾಜ್ಯ ಸರಕಾರಗಳು ಹೆಚ್ಚು ಆದಾಯವನ್ನು ಸಂಪಾದಿಸುವ ಪ್ರಯತ್ನಗಳಲ್ಲಿ ಆಸಕ್ತಿಯನ್ನು ವಹಿಸುವುದೂ ಇಷ್ಟವೆನಿಸುತ್ತದೆ. ಯೋಜನಾ ಆಯೋಗದ ಉಪಾಧ್ಯಕ್ಷರಾದ ಶ್ರೀ ಕೃಷ್ಣಮಾಚಾರಿಯವರು ಆರ್ಥಸಚಿವ ದೇಶಮುಖರಿಗಿಂತ ಬಹಳ ಸೌಮ್ಯವಾದ ಮಾತಿನಲ್ಲಿ ಅನೇಕ ಉತ್ತಮ ಸೂಚನೆಗಳನ್ನು ಮಾಡಿದ್ದಾರೆ. ಚಿಕ್ಕ ಉಳತಾಯವನ್ನು ಪ್ರೋತ್ಸಾಹಿಸುವುದಲ್ಲದೆ, ನೀರಾವರಿಯಿಂದ ಪ್ರಯೋಜನ ಹೊಂದುವ ಪ್ರದೇಶದಲ್ಲಿ ನೀರಿನ ಮೇಲೆ ಕರಹೇರುವುದು, ಭೂಮಿಯಾದ ಮೇಲೆ ವಿಶೇಷ ತೆರಿಗೆಯನ್ನು ಹಾಕುವುದು, ಕೃಷಿ ಆದಾಯದ ಮೇಲೆ ಸುಂಕ ಹೇರುವುದು, ರೊಕ್ಕದ ಪೈರಿನ ಮೇಲೆ ತೆರಿಗೆ, ಅರಣ್ಯ, ಖನಿಜ ನಿಕ್ಷೇಪ ಮುಂತಾದವುಗಳ ಸುಂಕ ದಗವನ್ನು ಪುನರ್ವಿಮರ್ಶಿಸುವುದು ಇವೇ ಮುಂತಾದ ಸೂರ್ಗಗಳಿಂದ ಆದಾಯವನ್ನು ಹೆಚ್ಚಿಸಬಹುದೆಂದು ಅವರ ಅಭಿಪ್ರಾಯ. ರಾಜ್ಯ ಸರಕಾರಗಳು ಈ ಹೊಸ ತೆರಿಗೆಗಳ ಪರವಾಗಿ ಜನರ ಮನಸ್ಸನ್ನು ಒಲಿಸಿಕೊಳ್ಳಲು ಸಮರ್ಥವಾಗಬೇಕು ಎಂದನು ಅಪೇಕ್ಷಿಸಿದರು. ಉತ್ಪಾದಕ ಕಾರ್ಯಗಳಿಂದ ಈ ತೆರನಾದ ಪ್ರತಿಫಲವನ್ನು ಅಪೇಕ್ಷಿಸುವುದು ನ್ಯಾಯವಾಗಿದ್ದು, ಆಗ ಕೊರತೆ ಧನ ವಿನಿಯೋಗ ಪದ್ಧತಿಯನ್ನು ಅನುಸರಿಸಿ, ಯೋಜನೆಗಳನ್ನು ಕಾರ್ಯಗತಗೊಳಿಸಿದರೂ ದುಷ್ಪರಿಣಾಮವಾಗಲಾರದು

ಹೆಚ್ಚಿನ ರಾಜ್ಯ ಸರಕಾರಗಳು ಎರಡನೆಯ ಪಂಚವರ್ಷಿಕಯೋಜನೆಯ ಗಾತ್ರ ವಿಷಯದಲ್ಲಿ ಮಾಹಿತಿಯನ್ನು ತಿಳಿಯಬಯಸಿದವು. ಈ ಅಂದಾಜನ್ನು ತಿಳಿದರೆ ತಮ್ಮ ಕಾರ್ಯಕ್ರಮ ಪಟ್ಟಿಯನ್ನು ಸಿದ್ಧಗೊಳಿಸಲು ಇನ್ನುಕೂಲವಾಗುವುದೆಂದು ಆವು ಹೇಳಿದವು. ಇದಕ್ಕೆ ಉತ್ತರವಾಗಿ ಶ್ರೀ ದೇಶಮುಖರು ಮುಂದಿನ ನಮ್ಮ ಯೋಜನೆಯು ಐದೂವರೆ ಸಾವಿರ ಕೋಟಿ ರೂಪಾಯಿಗಳಷ್ಟು ದೊಡ್ಡದಾದೀತೆಂದು ಹೇಳಿದರು. ಇದರಲ್ಲಿ ಖಾಸಗಿರಂಗಕ್ಕೆ ಎರಡೂವರೆ ಸಾವಿರ ಕೋಟಿ ರೂಪಾಯಿಗಳೂ ಸಾರ್ವಜನಿಕ ರಂಗಕ್ಕೆ ಮೂರು ಸಾವಿರ ಕೋಟಿ ರೂಪಾಯಿಗಳೂ ಬೇಗುತ್ತವೆ. ಮೊದಲನೇ ಯೋಜನೆ ಮೂರೂವರೆ ಸಾವಿರ ಕೋಟಿ ರೂಪಾಯಿಗಳಷ್ಟಿದ್ದು, ಖಾಸಗಿ ರಂಗಕ್ಕೆ ೧೫೦೦ ಕೋಟಿ ಹಾಗು ಸಾರ್ವಜನಿಕ ರಂಗಕ್ಕೆ ೨೫೦೦ ಕೋಟಿ ರೂಪಾಯಿಗಳ ವೆಚ್ಚ ಬರುತ್ತದೆ. ಇದನ್ನು ಪೂರೈಸುವುದೇ ನಮಗೆ ಬಹಳ ಕಷ್ಟವೆನಿಸಿರುವಾಗ, ಎರಡನೆಯ ಯೋಜನೆಯ ಗಾತ್ರಕಂಡು ನಾವು ಹೆಘರ್ಷಭರಿತರಾಗುವುದಂಲ್ಲ ಅರ್ಥವಿಲ್ಲ. ದೇಶಮುಖರೇ ಹೇಳಿದಂತೆ ನಮ್ಮ ಶಕ್ತಿಸಾಮರ್ಥ್ಯದ ಆಂದಾಜನ್ನು ಇನ್ನೂ ಮಾಡಿಲ್ಲ; ನೆಚ್ಚಿಕ್ಕಾಗಿ ಎಷ್ಟು ಹಣ ಲಭ್ಯವಾಗಬಹುದೆಂದೂ ತಿಳಿದಿಲ್ಲ; ಕೊರತೆ ಧನ ವಿನಿಯೋಗ ಪದ್ಧತಿಯನ್ನು ಎಷ್ಟರ ಮಟ್ಟಿಗೆ ಅನಲಂಬಿಸಬಹುದೆಂದೂ ಗೊತ್ತಿಲ್ಲ. ಇವೆಲ್ಲ ಇನ್ನೂ ಊಹೆಯ ಅಂತಸ್ತಿನಲ್ಲಿದ್ದು, ಈಗಲೇ ಕೊನೆಯ ಮಾತನ್ನು ಹೇಳಲು ಬಾರದು.

ಇವುಗಳಲ್ಲದೆ, ನ್ಯಾಯಸಹಾಯಿಕ ತೊಡಕುಗಳಲ್ಲಿ ಮುಖ್ಯವಾದ ಬೇರೆ ಕೆಲವು ಅಂಶಗಳೂ ಇವೆ—ಯೋಜನೆಗಳ ಯಶಸ್ಸಿಗೆ ಆಗತ್ಯವೆನಿಸಿದ, ನಿಜವಾದ ಮಾಹಿತಿಗಳನ್ನು ಒದಗಿಸಿ ಕೊಡುವ; ಅಂಕೆಸಂಖ್ಯೆಗಳ ಅಭಾವವನ್ನು ಹೊಡ್ಡ ತೊಡಕೆಂದು ಪರಿಗಣಿಸಬಹುದು. ನಿರುದ್ಯೋಗ ಸಮಸ್ಯೆಯ ವಿಚಾರವನ್ನೆ ಮಾಡುವುದಾದರೆ ದೇಶದಲ್ಲಿ ಯಾವುಪಾದರೊಂದು ವಿಶಿಷ್ಟ ಕಾಲದಲ್ಲಿ ಎಷ್ಟು ಜನರು ನಿರುದ್ಯೋಗಿಗಳಾಗಿದ್ದರು, ಪಂಚವಾರ್ಷಿಕ ಯೋಜನೆಯ ಪರಿಣಾಮವಾಗಿ ಎಷ್ಟು ಜನರಿಗೆ ಕೆಲಸ ಸಿಕ್ಕಿತ್ತು ಎಂಬುದನ್ನು ತಿಳಿಸುವ ಅಂಕೆ ಸಂಖ್ಯೆಗಳು ಲಭ್ಯವಿಲ್ಲ. ಭೂಸುಧಾರಣೆಯ ಮಟ್ಟಿಗೆ ಮಧ್ಯಸ್ಥರ ಪದ್ಧತಿಯನ್ನು ನಿರ್ಮೂಲಮಾಡಲು ತೃಪ್ತಿಕರವಾದ ಕಾಯಿದೆ ಕ್ರಮಗಳನ್ನು ರಾಜ್ಯಸರಕಾರಗಳು ಕೈಗೊಂಡಿದ್ದರೂ ಹಿಡುವಳಿಗಳ ಗಣನೆ ಮುಂತಾದ ಕ್ರಮಗಳಿನ್ನೂ ಪೂರ್ತಿಯಾಗಿಲ್ಲ ಬೇರೆ ಬೇರೆ ಭೂಗುಣಗಳಿರುವ ಹಿಡುವಳಿಗಳ ಪ್ರಮಾಣವನ್ನು ನಿರ್ಧರಿಸುವುದು ಮತ್ತು ನ್ಯಾಯವಾಗಿ ಅವುಗಳನ್ನು ಭೂಮಿ ಇಲ್ಲದವರಿಗೆ ಹಂಚುವುದು ಇತ್ಯಾದಿ ಕೆಲಸಗಳು ಬಹಳ ಗಡುಚಾಗಿದ್ದು, ಅದಕ್ಕೆ ತಕ್ಕ ಸಿಬಂದಿಗಳ ಅಭಾವವೂ ಕಂಡುಬರುತ್ತಿದೆ. ಆದುದರಿಂದ ಯೋಜನೆಯ ಕುರಿತು ಅಸಂತೋಷ ಹಾಗು ಅಸಹನೆ ತೋರಿಸುವುದಕ್ಕಿಂತಲೂ ನಾವು ಸಹಕರಿಸಬಹುದಾದ ಬಗೆಯನ್ನು ನಿರ್ಧರಿಸುವುದೇ ಸೂಕ್ತವಾದುದೆಂದು ಹೇಳಬೇಕಾಗುತ್ತದೆ.

ಲೋಕಸಭೆಯ ಅಧಿವೇಶನ

ಕಡ್ಡಾಯಿಯವರಿಗೆ ಶ್ರದ್ಧಾಂಜಲಿ

ಇದೇ ಸೋಮವಾರ (ದಿನಾಂಕ ೧೫) ಲೋಕ ಸಭೆಯ ಚಳಿಗಾಲದ ಅಧಿವೇಶನವು ಪ್ರಾರಂಭವಾಯಿತು. ಅಂದು ಪ್ರಧಾನ ಮಂತ್ರಿ ನೆಹರುಗಳು ದಿವಂಗತ ಕಿಡ್ಡಾಯಿಯವರ ಆಕಸ್ಮಿಕ ನಿಧನಕ್ಕೋಸ್ಕರ ಹಾರ್ದಿಕ ಸಂತಾಪವನ್ನು ವ್ಯಕ್ತಪಡಿಸಿ, ಅವರ ಗುಣಕಥನವನ್ನು ಮನಮುಟ್ಟುವ ರೀತಿಯಲ್ಲಿ ಮಾಡಿದರು. ಸಭಾಧ್ಯಕ್ಷ ಶ್ರೀ ಮಾವಳಣಕರರೂ ನೆಹರೂರ ಭಾವನೆಗಳನ್ನು ಪುಷ್ಟೀಕರಿಸಿ ಮಾತನಾಡಿದರು. ದಿವಂಗತರ ಗೌರವಾರ್ಥವಾಗಿ ಸಭೆಯನ್ನು ಒಂದು ದಿನ ಮುಂದೆ ಹಾಕಲಾಯಿತು.

ಲೋಕ ಸಭೆಯ ಮುಂದೆ ಈ ಹಕೆಯ ಮಸೂದೆಗಳಲ್ಲದೆ ೩೦ ಹೊಸ ಮಸೂದೆಗಳೂ ಚರ್ಚೆಗಾಗಿ ಮುಂಡಿಸಲ್ಪಡುವ ಸೂರೈಕೆ ಇದೆ. ಇಷ್ಟು ಮಸೂದೆಗಳನ್ನು ಚಳಿಗಾಲದ ಅಧಿವೇಶನದ ಪ್ಲೆಯೇ ಚರ್ಚಿಸುವುದು ಸಾಧ್ಯವಾಗಲಾರದಾದರೂ ಕೇಂದ್ರ ಸರಕಾರದ ಮಂತ್ರಿ ಶಾಖೆಗಳ ಆತುರದ ದ್ಯೋತಕವಾಗಿ ಇದನ್ನು ಭಾವಿಸಬಹುದು. ಕೇಂದ್ರ ಚಲಚ್ಚಿತ್ರ ಮಂಡಳಿಯ ಸ್ಥಾಪನೆ, ಕ್ರಿಮಿನಲ್ ಪ್ರೊಸೀಜರ್ ಕೋಡಿಗೆ ತಿದ್ದುಪಡಿ ಮುಂತಾದವುಗಳ ಚರ್ಚೆ ನಡೆಯುವುದಲ್ಲದೆ ಸರಕಾರವು ಇದೇ ದಶಂಬರ ೩೧ಕ್ಕೆ ಆವಧಿ ಮುಗಿಯುವ ಸ್ಥಾನಬದ್ಧತೆಯ ಶಾಸನಕ್ಕೆ ಇನ್ನೈರದು ವರ್ಷಗಳ ಜೀವವಾನ ಮಾಡಬೇಕೆಂದೂ ಪ್ರಾರ್ಥಿಸಬಹುದು.

ರಾಜ್ಯಾಂಗ ಘಟನೆಯ ೩೧ನೇ ಸೂತ್ರಕ್ಕೆ ತಿದ್ದುಪಡಿ ಮಾಡುವ ಮಸೂದೆ ಎಲ್ಲಕ್ಕಿಂತಲೂ ಪ್ರಾಮುಖ್ಯವಾದುದೆಂದು ಹೇಳಬಹುದು. ಖಾಸಗಿ ಸೊತ್ತುಗಳನ್ನು ಸಾರ್ವಜನಿಕ ಉದ್ದೇಶಗಳಿಗೋಸ್ಕರ ವಶಪಡಿಸುವಾಗ ಏಂಥಾರ ಕೊಡಬಾರದೆನ್ನುವುದು ಸರಕಾರದ ನೀತಿಯಲ್ಲ; ಆದರೆ ನ್ಯಾಯಸ್ಥಾನಗಳ ಅಧಿಕಾರ ಚಲಾವಣೆಗೆ ಆವಕಾಶವಿಲ್ಲದಂತೆ ಮಾಡುವುದೇ ಸದ್ದುಪಡಿಯ ಉದ್ದೇಶ ಎಂದು ಹೇಳಲಾಗುತ್ತದೆ. ರಾಜ್ಯ ಸಭೆಯ ಅಧಿವೇಶನವೂ ಇದೇ ನವೆಂಬರ ೨೫ನೇ ತಾರೀಕು ಸೇರಲಿದ್ದು, ಆಗ ಮಂದು ಕಾಯಿದೆಗೆ ಸಂಬಂಧಿಸಿದ ಅನೇಕ ಮಸೂದೆಗಳು ಚರ್ಚಿಸಲ್ಪಡುತ್ತವೆ.

PALCE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policy-holders and Representatives. At whatever stage we welcome your association with the POPULAR.

THE
POPULAR INSURANCE CO., LTD.
"POPULAR BUILDINGS" MANGALORE-1

ಯಂ. ಗಣಪಯ್ಯ ಎಂಡ್ ಸನ್ಸ್

ಆಯುರ್ವೇದಿಕ್ ಫಿಜಿಸಿಯನ್ಸ್. ರೆಥೆಬೀದಿ, ಮಂಗಳೂರು ಇವರ

ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಅಕಾಲ ಬಹಿಷ್ಪ, ಋತುಸ್ರಾವವು ಜಾಸ್ತಿಯಾಗಿಯೂ, ಕಡಿಮೆಯಾಗಿಯೂ ಹೋಗುವುದು, ಬಿಳಿಸೆರಗು, ಸಂತಾನ ಹೀನತೆ, ರಕ್ತಹೀನತೆ ಋತುಶೂಲೆ, ಮೊಸಲಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು. ಬಾಟ್ಲಿ 1ರ ರೂ. 3-8-0.

ಗರ್ಭ ರಕ್ಷಕ—ಗರ್ಭಿಣಿಯರಿಗೆ ಆತ್ಯಂತ ಫಲಕಾರಿಯಾದ ಔಷಧಿ. ಜಪಾದೋಷ, ಗರ್ಭಸಂತಸವಾಗುವಿಕೆ, ವಾಂತಿ, ಅರುಚಿ, ಅರಕ್ಕತೆ, ಮಲಬದ್ಧತೆ, ವಾಯು ಉಪದ್ರ, ಕೈಕಾಲುಬಚ್ಚುವುದು ಇವುಗಳನ್ನೆಲ್ಲಾ ಹೋಗಲಾಡಿಸುವುದು. ಬಾಟ್ಲಿ 1ರ ರೂ. 3-8-0. ಇವಲ್ಲದೆ ಇನ್ನೂ ಅನೇಕ ತರವ ಔಷಧಿಗಳು ನಮ್ಮಲ್ಲಿ ದೊರೆಕುತ್ತವೆ. ಕೆಟಲಾಗಿಗೆ ಬರೆಯಿರಿ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ,ರೋಗಕ್ಕೆ ತಕ್ಕ ಔಷಧಿಯನ್ನು ರವಾನಿಸಬಹುದು.

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್

ರಾಜಮಹೇಂದ್ರಿ — ಇವರ

ಬಾಲ ಸುಧ

ಇದು ಸಣ್ಣ ಬಾಲಕರಿಗೆ ಆಜೀರ್ಣ, ಜ್ವರ, ಕೆಮ್ಮು, ಶೀತ, ನುಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ, ಪುಳ್ಳುಳು ಕ್ಟೀಣವಾಗಿ ಕೈಕಾಲು ಸಣ್ಣದಾಗುವಿಕೆ, ಲಿವರ್ ಬೆಳೆಯುವುದು, ಈ ಎಲ್ಲಾ ವ್ಯಾಧಿಗಳಿಗೆ ಪಜ್ರಾಯುಧವಾಗಿದೆ. ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು. ಈ ಔಷಧಿಕ್ಕೆ ಮಿಕ್ಕಿ ಇಷ್ಟಿರುವ ಯೋಗ್ಯತಾ ಪತ್ರಗಳನ್ನು ಪಬೆದಿರುವವಲ್ಲದೆ ನೇಪಥ್ಯದಲ್ಲಿ ಅನೇಕ ಪಥದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿಯಾಗುವ ೫೦ ಸೂತ್ರಿಗಳ ಸೀಸೆಗೆ ರೂ. 1—0—0.

ನಮ್ಮ ಸ್ವಾಕೆಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲಾ—ಬೆಂಗಳೂರು 2.
(2) ಷಾ ಕಂಪೆನಿ—ಮಂಗಳೂರು 1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

ಆಂಧ್ರದಲ್ಲಿ ರಾಷ್ಟ್ರಾಧ್ಯಕ್ಷರ ಆಳಿಕೆ

ಬೇಗನೇ ಹೊಸ ಚುನಾವಣೆ ನಡೆಯುವುದು

ತಮ್ಮ ಮಂತ್ರಿ ಮಂಡಳದ ಮೇಲೆ ತಂದ ಅವಿಶ್ವಾಸ ಗೊತ್ತುವಳಿಯು ಸ್ವೀಕಾರಗೊಂಡು ತಾವು ರಾಜೀನಾಮೆಯನ್ನು ನೀಡಬೇಕಾಗಿ ಬಂದಾಗ, ಪ್ರಕಾಶಮರು ಘಟನಾತ್ಮಕವಾದ ಒಂದು ಅಧಿಕಾರವನ್ನು ಉಪಯೋಗಿಸಿ, ಹೊಸತಾಗಿ ಚುನಾವಣೆಗಳನ್ನು ನಡೆಸುವುದೇ ಸೂಕ್ತವಾದ ಕ್ರಮ ಎಂಬುದಾಗಿ ಗವರ್ನರರಿಗೆ ಸಲಹೆ ಮಾಡಿದ್ದರು. ಇದನ್ನು ಪ್ರತಿಪಕ್ಷಗಳು ತೀವ್ರವಾಗಿ ಪ್ರತಿಭಟಿಸಿದರೂ—ಮುಖ್ಯವಾಗಿ ಕಮ್ಯುನಿಸ್ಟ್ ಪ್ರಭೃತಿಗಳು ತಮಗೆ ಮಂತ್ರಿ ಮಂಡಳವನ್ನು ರಚಿಸಲು ಆವಕಾಶ ಕೊಡಬೇಕಾದದ್ದು ನ್ಯಾಯವೆಂದು ಹೇಳಿದರೂ—ಛಾರತದ ರಾಷ್ಟ್ರಾಧ್ಯಕ್ಷರು ಆಂಧ್ರದ ಈಗಿನ ವಿಶಿಷ್ಟ ಪರಿಸ್ಥಿತಿಯಲ್ಲಿ ಯಾವ ಪಕ್ಷವೂ ಆಡಳಿತದ ಹೊಣೆ ಸಿರ್ವಹಿಸುವಂತಿಲ್ಲ ಎಂಬ ನಿರ್ಣಯಕ್ಕೆ ಬಂದೇ ಬಂದರು. ಇದೇ ಗುರಿಯನ್ನೇ ದಿನಾಂಕ ಅವರೊಂದು ಆಜ್ಞೆಯನ್ನು ಹೊರಡಿಸಿ ಆಂಧ್ರದ ಆಡಳಿತೆಯನ್ನು ತಾವೇ ಕೈಗೆ ತೆಗೆದುಕೊಂಡಿರುವುದಾಗಿಯೂ ತಮ್ಮ ಪ್ರತಿನಿಧಿಯಾಗಿ ಗವರ್ನರ ಶ್ರೀ. ಸಿ. ಎಂ. ತ್ರಿವೇದಿಯವರು ಅಧಿಕಾರಗಳನ್ನು ನಿರ್ವಹಿಸುವರೆಂದೂ ಸಾರಿದರು.

ಹೊಸ ಚುನಾವಣೆ

ಆಂಧ್ರದ ಗವರ್ನರರು ಪತ್ರಿಕಾ ಪರಿವತ್ತಿನಲ್ಲಿ ರಾಷ್ಟ್ರಾಧ್ಯಕ್ಷರ ಆಜ್ಞೆಯನ್ನು ವಿವರಿಸುತ್ತಾ ಈಗ ವಿಸರ್ಜಿಸಲ್ಪಟ್ಟಿರುವ ಶಾಸನ ಸಭೆಗೆ ಕೂಡಲೇ ಹೊಸ ಚುನಾವಣೆಗಳನ್ನು ನಡೆಸಲಾಗುವುದೆಂದು ಹೇಳಿದರು. ಪಂಚವಾರ್ಷಿಕ ಯೋಜನೆಯ ಅನೇಕ ಕಾರ್ಯಕ್ರಮಗಳ ಕಡೆಗೆ ತೀವ್ರ ಗಮನವನ್ನು ಕೊಡಬೇಕಾಗಿದ್ದರೂ, ರಾಜ್ಯದಲ್ಲಿ ಪ್ರಜಾ ಪ್ರಭುತ್ವಕ್ಕೆ ಸಮ್ಮತವಾದ ಸರಕಾರವನ್ನು ಸ್ಥಾಪಿಸುವ ವಿಷಯಕ್ಕೆ ತಾವು ಪ್ರಥಮ ಪ್ರಾಶಸ್ತ್ಯವನ್ನು ಕೊಡುವುದಾಗಿ ಅವರು ಭರವಸೆ ನೀಡಿದರು. ಮುಂದಿನ ಫೆಬ್ರುವರಿ ಗುಗನೇ ತಾರೀಕಿನ ಹೊತ್ತಿಗೆ ಚುನಾವಣೆಗಳನ್ನು ನಡೆಸಬಹುದು; ಮಾರ್ಚಿ ಗುಗನೇ ತಾರೀಕಿನ ಸುಮಾರಿಗೆ ಫಲಿತಾಂಶಗಳು ಪ್ರಕಟವಾಗಬಹುದು; ಮತ್ತು ಏಪ್ರೀಲು ಗನೇ ತಾರೀಕು ಹೊಸ ಮಂತ್ರಿ ಮಂಡಳವು ಅಧಿಕ ರಕ್ಕೆ ಬಂದೀತು ಎಂದವರು ಆಲೋಚನೆಯನ್ನು ವ್ಯಕ್ತಗೊಳಿಸಿದರು. ನಡುವಣ ನಾಲ್ಕೈದರೆ ತಿಂಗಳ ಅವಧಿಯಲ್ಲಿ ತಾನು ಯಾವದೇ ಸಲಹೆಗಾರರನ್ನು ನೇಮಿಸದೆ ನೇರವಾಗಿ ಶಕ್ತಿವಿದ್ದಷ್ಟು ದಕ್ಷ ರೀತಿಯಲ್ಲಿ ಸರಕಾರದ ಕಾರ್ಯಭಾರವನ್ನು ನಾಗಿಸಿಕೊಂಡು ಹೋಗುವುದಾಗಿ ಅವರು ತಿಳಿಸಿದರು.

ಕಾಂಗ್ರೆಸಿಗೆ ಸಂತೋಷ

ರಾಷ್ಟ್ರಾಧ್ಯಕ್ಷರ ಉದ್ಘೋಷಣೆಯನ್ನು ಆಂಧ್ರದಲ್ಲಿ ಹೇರಿದ್ದರಿಂದ ಕಾಂಗ್ರೆಸು ವರ್ತುಲಗಳಿಗೆ ಸಂತೋಷವಾಗಿದೆ. ಶ್ರೀ ಸಂಜೀವ ರೆಡ್ಡಿಯವರು ಹೊಸ ದಿಢೀರಿಯಲ್ಲಿ ಕಾಂಗ್ರೆಸ ಪಟಿಯರನ್ನೂ ಪ್ರಧಾನ ಮಂತ್ರಿ ಶ್ರೀ ನೆಹರು ಇತರ ಸರಕಾರದ ಪ್ರಮುಖರನ್ನೂ ಕಂಡಾಗ, ಹೊಸ ಚುನಾವಣೆಗಳನ್ನು ನಡೆಸುವುದೇ ಯೋಗ್ಯ ಎಂಬ ತಮ್ಮ ಅಭಿಪ್ರಾಯವನ್ನು ಕಡೆಗೆ ಅವರನ್ನು ಆಕರ್ಷಿಸಲು ಸಮರ್ಥರಾದರು. ಹೊಸ ಚುನಾವಣೆಯಲ್ಲಿ ಕಾಂಗ್ರೆಸಿಗೆ ನಿಶ್ಚಿಳ ಬಹುಮತವು ಸಿಗುವುದೆಂಬ ಭರವಸೆಯನ್ನು ಹೊಂದಿದ ಇವರು ತಮಗನ್ಕೂಲವಾಗಿ ರೂಪಿಸುವ ಪ್ರಯತ್ನದಲ್ಲಿ ಈಗ ತೊಡಗಿದ್ದಾರೆ. ಹೊಸ ಚುನಾವಣೆಯ ಫಲಿತಾಂಶವಾಗಿ ಅಧಿಕಾರ ಸಹಿಸುವ ಮಂತ್ರಿಮಂಡಳವು ಅವಿಶ್ವಾಸ ಸೂಚಕ ಗೊತ್ತುವಳಿ ಮತ್ತಿತರ ಕಾರಣಗಳಿಂದ ಅಧಿಕಾರವನ್ನು ತ್ಯಜಿಸಬೇಕಾಗಿ ಬರದಿದ್ದರೆ ಐದು ವರ್ಷಗಳ ವರೆಗೆ ಅಸ್ತಿತ್ವದಲ್ಲಿ ಉಳಿಯುತ್ತದೆ. ಹೆಚ್ಚಿದ ಜನಸಂಖ್ಯೆಯನ್ನು ಅನುಲಕ್ಷಿಸಿ ಆಂಧ್ರ ಶಾಸನ ಸಭೆಗೆ ೧೯೬ ಸ್ಥಾನಗಳನ್ನು ಕೊಟ್ಟಿದ್ದು, ಇವುಗಳಿಗೆ ನಡುವರ್ಥ ಸುರಿಯಾಳುಗಳನ್ನು ಆರಿಸುವ ಕೆಲಸ ಈಗ ನಡೆದಿರುತ್ತದೆ.

ಪ್ರತಿಪಕ್ಷದ ಪ್ರತಿಕ್ರಿಯೆ

ಚುನಾವಣೆಯಲ್ಲಿ ಕಾಂಗ್ರೆಸಿಗೂ ಕಮ್ಯುನಿಸ್ಟರಿಗೂ ನೇರವಾದ ಸ್ಪರ್ಧೆ ನಡೆಯುವುದೆಂದು ಹೇಳಲಾಗುತ್ತದೆ. ಕಮ್ಯುನಿಸ್ಟ ಧುರೀಣರಾದ ಶ್ರೀ. ನಾಗಿ ರೆಡ್ಡಿಯವರು ತಮಗೆ ಮಂತ್ರಿಮಂಡಳವನ್ನು ರಚಿಸಲು ತಕಾಶ ಕೊಡದುದಕ್ಕೆ ಚೆನ್ನಾಗಿ ಟೀಕೆ ಮಾಡಿದರು. ಕಾಂಗ್ರೆಸು ಜನಾಭಿಪ್ರಾಯಕ್ಕೆ ಮನ್ನಣೆ ಕೊಡಲು ಸಿದ್ಧವಿಲ್ಲ ವೆಂಬುದನ್ನು ಇದು ತೋರಿಸುವುದೆಂದು ಇವರು ಹೇಳಿದರು. ತಾವು ಅಧಿಕಾರ ಸಹಿಸಿದ್ದರೆ ಜನರಿಗೆ ಪ್ರಯೋಜನವಾಗುವ ಭೂಸುಧಾರಣೆ ಮತ್ತಿತರ ಕ್ರಮಗಳನ್ನು ಕೂಡಲೇ ಕೈಗೊಳ್ಳುತಿದ್ದುದಾಗಿ ಹೇಳುತ್ತಾ, ತನ್ನ ಜೆಂಬಲಿಗರ ಯಾದಿಯನ್ನು ಒಪ್ಪಿಸಿ, ನಿಶ್ಚಿಳ ಬಹುಮತವನ್ನು ತೋರಿಸಲು ಬದ್ಧನೆಂದು ಗವರ್ನರರಿಗೆ ತಿಳಿಸಿದರೂ ಅದನ್ನು ಕಡೆಗಣಿಸಿದ. ದಕ್ಕೆ ಅವರು ವಿಷಾದಿಸಿದರು. ಕೃಷಿಕರ ಲೋಕ ಪಕ್ಷದ ಧುರೀಣರಾದ ಶ್ರೀ ಲಚ್ಚಣ್ಣನವರು ರಾಷ್ಟ್ರಾಧ್ಯಕ್ಷರ ಆಳಿಕೆಯನ್ನು ಹೇರುವ ಮುಂಚೆ ಪ್ರತಿಪಕ್ಷಗಳಿಗೆ ಮಂತ್ರಿಮಂಡಳ ರಚಿಸಲು ಬಿಡಬೇಕಿತ್ತೆಂದು ಹೇಳಿದ್ದಲ್ಲದೆ, ಹೊಸ ಸರಕಾರ ಅಸ್ತಿತ್ವಕ್ಕೆ ಬರುವ ಮುಂಚೆ ಗವರ್ನರರು ತಮ್ಮ ಉದ್ಘಾಟನಾ ಭಾಷಣದಲ್ಲಿ ಪ್ರಸ್ತಾಪಿಸಿದ ತೆರಿಗೆಯ ಹೊಸ ಕೂಡನೆಗಳನ್ನು ಕಡೆ ಹಿಡಿಯುವರೆಂದು ಆತಿಸಿದರು.

ಅಂತಿಮ ನಿರ್ಧಾರವು

ಗವರ್ನರರು ತಮ್ಮ ರಾಜೀನಾಮೆಯನ್ನು ಸ್ವೀಕರಿಸುವುದಕ್ಕೆ ಮುಂಚೆ ಪ್ರಕಾಶಮರು ತಮ್ಮ ಮಂತ್ರಿಮಂಡಳದ ಸಭೆಯನ್ನು ಜರಗಿಸಿ, ಪಾಸ ಪ್ರವೃತಿ ಬಂಧದ ನಿರ್ಬಂಧಗಳನ್ನು ಕೆಲವಟ್ಟಿಗೆ ಸಡಿಲಿಸಲು ತೀರ್ಮಾನಿಸಿದರು. ಪರದೇಶಗಳಿಂದ ಅವುನಾವ ಮದ್ದುಗಳನ್ನು ಉಪಯೋಗಿಸುವವರು ವೈದ್ಯಕೀಯ ಪ್ರಶಸ್ತಿ ಸಭ್ರವನ್ನು ಹಾಜರು ಪಡಿಸಬೇಕೆಂಬ ನಿಯಮವನ್ನು ತೆಗೆದು ಹಾಕಬೇಕೆಂದೂ ಇಪ್ಪತ್ತೈದ್ದ ಗ್ರಾಮ ಪಂಚಾಯತುಗಳು ಬೆಲ್ಲ ಮತ್ತು ಸಕ್ಕರೆಯನ್ನು ತಯಾರಿಸುವುದಕ್ಕೊಸ್ಕರ ನೀರಾ ತೆಗೆಯುವ ಕಾರ್ಯವನ್ನು ಸಂಘಟಿಸಬಹುದೆಂದೂ ಅವನು ನಿರ್ಣಯಿಸಿದರು. ಮಂತ್ರಿ ಮಂಡಳದ ಈ ನಿರ್ಣಯಗಳನ್ನು ಜಾರಿಗೆ ತರುವುದಕ್ಕೆ ಮುಂಕೆ ವಾನಪ್ರಶಿಟಿಭ ಕಾಯಿದೆಗೆ ತಿದ್ದುಪಡಿ ಮಾಡಬೇಕಾಗುವುದರಿಂದ ಗವರ್ನರರೇ ಈ ಬಗ್ಗೆ ಕೊನೆಯ ಕ್ರಮ ಕೈಗೊಳ್ಳಬೇಕಾಗುತ್ತದೆ.

ನೆಹರೂರ ಜಯಂತಿ

ಆಂಧ್ರದ ವಿಷಯದಲ್ಲಿ ಯಾರಿಗೆ ಏನು ತೋರಿದರೂ ಎಲ್ಲರಿಗೂ ಸಂತೋಷದಾಯಕವಾದ ದಿನವೆಂದರೆ ನವೆಂಬರ ೧೪ನೇ ತಾರೀಕು ಭಾರತಾದ್ಯಂತ ಆಚರಿಸಲ್ಪಟ್ಟಿತು: ಅದೇ ಸ್ವತಂತ್ರ ಭಾರತದ ಪ್ರಥಾನ ಮಂತ್ರಿ ಜವಾಹರಲಾಲ ನೆಹರು ಗಳ ೬೫ನೇ ಜಯಂತಿ. ಇಂದು ದೇಶವಿದೇಶಗಳಿಂದ ನೆಹರುಗಳಿಗೆ ಅನೇಕ ಅಭಿನಂದನಾಪರ ಸಂದೇಶಗಳು ಬಂದಿದ್ದುವು. ಅವುಗಳಲ್ಲಿ ರಷ್ಯಾ, ಚೀನ, ಪೀಟಮೀಪ ಮುಂತಾದ ಕಮ್ಯುನಿಸ್ಟ ರಾಷ್ಟ್ರಗಳ ಪ್ರಮುಖರ ಶುಭ ಕಾಮನೆಗಳು ಉಲ್ಲೇಖನೀಯ. ಆವರೆಲ್ಲರೂ ನೆಹರುಗಳನ್ನು ಶಾಂತಿ ದೂತ ಎಂಬುದಾಗಿ ಕರೆದು, ಗೌರವಿಸಿ, ಪೀರ್ಘಾಯುರಾರೋಗ್ಯಗಳನ್ನು ಕೋರಿದರು. ಬರ್ಮಾದ ಪ್ರಧಾನಿ ಯುನೂರವರು ಆಕಾಶವಾಣಿ ಭಾಷಣ ಮಾಡುತ್ತಾ ನೆಹರುಗಳು ರಾಜಕೀಯ ಚದುರಪಟಿಕೆಗಳಿಂದ ನಿವೃತ್ತಿ ಹೊಂದುವುದರಿಂದ ಭಾರತ ಕೃಷ್ಣಾ ಅಲ್ಲ—ಅಗ್ಗೇಯ ಏಕ್ಯಾಕ್ಕೂ ಜಗತ್ತಿಗೂ ಅಪಾರ ನಷ್ಟವಾಗುವುದೆಂದು ಹೇಳಿದರು. ಪಾಕಿಸ್ತಾನಕ್ಕೆ ತೆರಳುವ ಮಾರ್ಗದಲ್ಲಿ ಲಕ್ನೋದಲ್ಲಿ ಇಳಿದಿದ್ದ ಪಾಕಿಸ್ತಾನದ ಗವರ್ನರ ಜನರಲ್ಲರಾದ ಗುಲಾಂ ಮಹಮ್ಮದರು ನೆಹರುಗಳಿಗೆ ಶುಭ ಸಂದೇಶ ಕಳಿಸುತ್ತಾ ತಮ್ಮಿಬ್ಬರ ಪ್ರಯತ್ನದಿಂದ ಭಾರತ-ಪಾಕಿಸ್ತಾನಗಳ ನಡುವಣ ವಿವಾದಗಳು ಶಾಂತಿಯುತವಾಗಿ ತೀರ್ಮಾನ ಹೊಂದುವಂತಾಗಲೆಂದು ಹಾರೈಸಿದರು. ನೆಹರುಗಳನ್ನು ರಾಷ್ಟ್ರೀಯ ಸ್ಮೇಡಿಯಮ್ಮಿನಲ್ಲಿ ಲಕ್ಷಾಗಟ್ಟಲೆ ಪುಟ್ಟ ಕೈಗಳು ಸ್ವಾಗತಿಸಿ, ಜಯ ಘೋಷ ಮಾಡಿದರು.

ಮಂಚದ ಸೌಕರ್ಯ

ನೆಹರುಗಳು ತಮ್ಮ ಜಯಂತಿಯ ಶುಭ ಸಂದರ್ಭದಲ್ಲಿ ಸಂದೇಶವೀಯುತ್ತಾ "ನನಗೆ ತೋರಿಸುವ ಪ್ರೀತಿಯಿಂದ ನನ್ನ ಬಲ ಹೆಚ್ಚುತ್ತದೆ. ಇದರಿಂದ ಸಂಪದ್ಭರಿತ ಭಾರತವನ್ನು ಕಟ್ಟಲು ನೆರವಾಗುತ್ತದೆ" ಎಂದು ನುಡಿದರು. ಈಗಾಗಲೇ ಅವರ ಸುಮಾರಾಯತನದಲ್ಲಿ ಭಾರತವು ಜನೇಕ ಪ್ರಗತಿಪರ ಕ್ರಮಗಳನ್ನು ಕೈಗೊಂಡಿದ್ದು, ಇದೇ ಗುರಿನೇ ಕಾರ್ಯಕಿನಿಂದ ದಿಲ್ಲಿ—ಹೌರಾ, ದಿಲ್ಲಿ—ಮುಂಬಯಿ, ದಿಲ್ಲಿ—ಮದ್ರಾಸು ಎಕ್ಸ್‌ಪ್ರೆಸ್ ರೈಲ್ವೆಗಳಲ್ಲಿ ತೃತೀಯ ಶ್ರೇಣಿಯ ಪ್ರಯಾಣಿಕರಿಗೆ ಒದಗಿಸಲಾಗಿರುವ ಮಲಗುವ ಮಂಚದ ವ್ಯವಸ್ಥೆಯನ್ನು ಇತ್ತೀಚಿನ ವಿದರ್ಶನವಾಗಿ ಕೊಡಬಹುದು. ಮೇಲಿನ ಗಾಡಿಗಳಲ್ಲಿ ಪ್ರತಿಯೊಂದಕ್ಕೂ ಎಳ ಮಂಚಗಳನ್ನು ಜೋಡಿಸಿದ್ದು. ಪ್ರತಿ ಪ್ರಾತ್ರಿಗೆ ಸುಮಾರು ರೂಪಾಯಿಗಳಂತೆ ದೆಚ್ಚು ಹಣವನ್ನು ಕೊಟ್ಟರೆ ಇವನ್ನು ಉಪಯೋಗಿಸಬಹುದು. ಮಲಗುವ ಈ ವ್ಯವಸ್ಥೆಯನ್ನು ಕ್ರಮೇಣ ಇತರ ರೈಲುಗಳಿಗೂ ವಿಸ್ತರಿಸಲಾಗುವುದು.

ಉಡು. ಮು. ಕೋರ್ಟಿನಲ್ಲಿ

O. P. 120/1954.

1. ವಿಶ್ವನಾಥರಾವ್. 2. ರಾಜ ಗೋಪಾಲ ರಾವ್, ಶ್ರೀನಿವಾಸರಾಯರ ಮಗಂದಿಯರು 3. ಸತ್ಯಭಾಮ, ಶ್ರೀನಿವಾಸರಾಯರ ವಿಧವೆ ಉದ್ದಿ ತಾಲ್ಲ್ಯ, ಕೊಡವೂರು ಗ್ರಾಮ

—ಅರ್ಜಿದಾರರು.

ಕೊಡವೂರು ಸುಬ್ರಾಯ ಆ್ಯತಾಳರ ವಿಧವೆ ಭಾಗೀರಥಿ ಅಮ್ಮನು ಕರ್ನಾಟಕ ಬೀಂಕಿನಲ್ಲಿ ತಾರೀಕು 11.7.1947ನೇ ರಶೀದಿ ಪ್ರಕಾರ ನಂಬ್ರ 216/1947ನೆಗೆ ರೂಪಾಯಿ 800-0-0 ಡಿಪೋಜಿಟ್ ಮಾಡಿದ್ದಾಳೆ. ಸದರಿಯವಳು 19-9-1947ರಲ್ಲಿ ಮೃತಪಟ್ಟಿದ್ದಾಳೆ. ಸದ್ರಿ ರೂ. 800 ಪ ಬಡ್ಡಿಯಲ್ಲಸುತಾ ತನಗಿದ್ದ ೬ ಅಂಶದ ಹಕ್ಕನ್ನು ಅವಳ ನಾದಿ ದಾರರೆ ಪೈಕಿ ಬಬ್ಬನಾಪ ಗುರುರಾಜ ಆ್ಯತಾಳರ ಮಗ ಸುಬ್ರಾಯ ಆ್ಯತಾಳನು 1, ೭ನೆ ಅರ್ಜಿದಾರರ ತಂದೆ ಪ ತಿನಿಯವಳ ಗಂಡ ಶ್ರೀನಿವಾಸರಾಯರಿಗೆ 3-10-1917ರಲ್ಲಿ ಟ್ರಸ್ಟಿಸರ ಮಾಡಿಕೊಟ್ಟಿದ್ದಾರೆ. ಸದ್ರಿ ಶ್ರೀನಿವಾಸರಾಯರು ಸ್ವತಃಪಟ್ಟಿದ್ದಾರೆ. ಆದ್ದರಿಂದ ಅವರ ಮುಮ್ಮಿ ವಾರ್ಸಿದಾರರಾದ ಅರ್ಜಿದಾರರೆ ಹಕ್ಕಿನ ಬಾಬ್ತು ಡಿಪೋಜಿಟು ಯಲಿರುವ ರೂ. 151—8—0 ವಸೂಲು ಮಾಡುವ ಹಾಗೆ 1ನೆ ಅರ್ಜಿದಾರನ ಹೆಸರಿಗೆ ವಾರಿಸ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ಅರ್ಜಿ ನಾಳ್ಲು ಮಾಡಿದ್ದರಿಂದ ಆಕ್ಷೇಪ ಉಳ್ಳವರು ಸದ್ರಿ ಆರ್ಜಿ ತಾ. 24.11.'54ನೆ ದಿನ್ನ ಪಗ್ಗು 10 ಗಂಟೆಗೆ ಸದ್ರಿ ಕೋರ್ಟು ಮುಂದೆ ಕರದಾಗ್ಗೆ ಹಾಜ್ರರಬೇಕಾಗಿ ಜ್ಞಾಪೀ ಟು ಮಾಡಿಕೊಳ್ಳತಕ್ಕದ್ದು.

K. Laxminarayana Aithal,
Vakil for Petioners.

15-11-1954.

ಜಿಲ್ಲೆಯ ಪ್ರಕಟಣೆಗಳಲ್ಲದೆ ಕರ್ನಾಟಕದ ಎಲ್ಲ ಕಡೆಗಳ ಪುಸ್ತಕಗಳೂ ಸದ್ಯ ಜನಪ್ರಿಯವಾದ ಅಗ್ಗ ದರದ ಕೈಹೊತ್ತಿಗೆಗಳೂ

ನಮ್ಮಲ್ಲಿ ದೊರೆಯುತ್ತವೆ.

ಪಂಚಾಯತು ಬೋರ್ಡುಗಳಿಗೂ ಪೈಸ್ಕೂಲುಗಳಿಗೂ ನಾವು ಕೊಡುವ ವಿಶೇಷ ಸವಲತ್ತನ್ನು ವಿಚಾರಿಸಿ ತಿಳಿಯಿರಿ. ಕೆಟಲಾಗಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ,
ರಿಜಿಸ್ಟರ್ಡ್ ಪಬ್ಲಿಷರ್ಸ್, ಉಡುಪಿ.

NAVAYUGA
Popular Kannada Weekly
Founder:—
Sri **A. B. SHETTY**, *M L A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೭೪	೧೮-೧೧-೨೫೪	೧೨

ಮಾಲಕ-ಮಜೂರ ಸಂಬಂಧ

ಕೂಲಿಕಾರ ಸಚಿವರ ಹೆಸ್ಸೊಂದೆಯ ಪರಿಷತ್ತನ್ನು ಹೊಸದಿಹಲಿಯಲ್ಲಿ ಮೊನ್ನೆ ದಿನಾಂಕ ೧೫ರಂದು ಉದ್ಘಾಟಿಸುತ್ತಾ ಪ್ರಧಾನ ಮಂತ್ರಿಗಳು ಮಾಲಕ-ಮಜೂರ ಸಂಬಂಧವನ್ನು ಕುರಿತು ಆಡಿದ ಕೆಲವು ಮಾತುಗಳು ಬಳಕ ಪ್ರಾಮುಖ್ಯತೆಯನ್ನು ಪಡೆದಿವೆ. ತಮಗೆ ಸಹಜವಾದ ಸಹಾನುಭೂತಿ ಪರ ದೃಷ್ಟಿಕೋಣದಿಂದ ಅವರು ಕೂಲಿಕಾರ ಚಳವಳದ ಇತಿಹಾಸವನ್ನು ಬಣ್ಣಿಸಿದರು. ಔದ್ಯೋಗಿಕ ವಿಷ್ಣವದ ಬಳಕ ಸಮಾಜದಲ್ಲಿ ಸ್ಥಿರವಾದ ಸ್ಥಾನವನ್ನು ಹೊಂದಿದ ಈ ವರ್ಗವು ಸುಸಂಘಟಿತ ರೂಪದಲ್ಲಿ ಬಾಳುವುದಕ್ಕೆ ಸಾವಿರ ಅಡಚಣೆಗಳನ್ನು ಎದುರಿಸಬೇಕಾಯಿತೆಂದು ಅವರು ಹೇಳಿದರು. ಮಾಲಕ ವರ್ಗದವರು ಕೂಲಿಕಾರ ಸಂಘಟನೆಯನ್ನು ಎಷ್ಟು ಮಾತ್ರಕ್ಕೂ ಮೆಚ್ಚುತ್ತಿರಲಿಲ್ಲ; ಕೂಲಿಕಾರ ಸಂಘಗಳನ್ನು ಕಟ್ಟುವುದಕ್ಕೆ ಆತಂಕಗಳನ್ನೊಡ್ಡಲಾಯಿತು; ಕೂಲಿಕಾರ ಚಳವಳವನ್ನು ಹತ್ತಿಕ್ಕುವುದಕ್ಕೆ ಭೇದೋಪಾಯಗಳನ್ನು ಅನುಸರಿಸಲಾಯಿತು. ಮಾಲಕ ವರ್ಗದ ಈ ತಂತ್ರಗಳೇ ಕೂಲಿಕಾರರಲ್ಲಿ ತಮ್ಮ ಬೇಡಿಕೆಗೆ ಮನ್ನಣೆ ದೊರಕಿಸುವುದಕ್ಕೆ ಸಂಘ ಮತ್ತು ಹೋರಾಟಗಳೇ ಸಾಧನವೆಂಬ ಭಾವನೆಯನ್ನು ಮೂಡಿಸಿದವೆಂದೂ ತಿಳಿಸಿದರು. ಇಂದು ಅಲ್ಪಸಂಖ್ಯಾಕರಾದ ಮಾಲಕರು ಮುಂಬೆಬಹುಸಂಖ್ಯಾಕ ಕೂಲಿಕಾರರ ಸುಸಂಘಟಿತ ಚಳವಳ ನಡೆದಿರುತ್ತದೆ. ಕೂಲಿಕಾರ ಧುರೀಣರಲ್ಲಿ ಅಗ್ರಮಾನ್ಯರೆನಿಸಿದ ಮಾಜಿ ಮಜೂರ ಮಂತ್ರಿ ಗಿರಿಯವರ ಮಾತಿನಲ್ಲಿ "ಕೂಲಿಕಾರ ಸಂಘಟನೆ ಶಾಶ್ವತವಾಗಿ ಉಳಿಯಲು ಬಂದಿದೆ." ಇದನ್ನು ಪ್ರತಿಯೊಬ್ಬ ಒಡೆಯನೂ ಮನ್ನಿಸಲೇ ಬೇಕಾಗಿದ್ದು, ಕೆಲಸಗಾರರೊಡನೆ ಘರ್ಷಣೆಯನ್ನು ಆದಷ್ಟು ಕಡಿಮೆ ಮಾಡಿಕೊಳ್ಳುವುದಕ್ಕೆಯೇ ಅವನು ತನ್ನ ಜಾಣ್ಮೆಯನ್ನು ವ್ಯಯಿಸುವುದು ಅಪೇಕ್ಷಣೀಯ. ವ್ಯವಹಾರದಲ್ಲಿ ಮಾಲಕ-ಮಜೂರ ಹಿತಾಸಕ್ತಿಗಳಲ್ಲಿ ತಿಕ್ಕಾಟವನ್ನು ಹೋಗಲಾಡಿಸುವ ಉದ್ದೇಶವಿಂದ ಕೂಲಿಕಾರರ ಸಂಘಗಳಿಗೆ ವಿಸ್ತಣೆಯನ್ನು ಕೊಡುವುದು ಬಹಳ ಲಾಭದಾಯಕವಾದ ರೀತಿ ಎಂದು ಹಲವರ ಅಭಿಪ್ರಾಯ. ಆದರೆ ಚಿನೇಕ ಮಾಲಕರು ಕೂಲಿಕಾರರು ಸಂಘಟನೆ ಹೊಂದಿದರೆ, ಸಂಘ ಮತ್ತು ಹೋರಾಟಗಳಂಥ ಅನಪೇಕ್ಷಣೀಯ ಪ್ರಸಂಗಗಳಲ್ಲಿ ಹೆಚ್ಚಿನ ಕಷ್ಟ ತಲೆದೋರುತ್ತದೆಂದು ಹೇಳುತ್ತಾರೆ. ನಿಜಕ್ಕೂ ಇದು ಹೆದರಿಕೆ ಬರಿಸುವ ಮಾತು: ಸಮಸ್ಯೆಗಳ ಪರಿಹಾರಕ್ಕೆ ಸಂಘ ಮತ್ತು ಹೋರಾಟಗಳೇ ಮಾರ್ಗವಾದರೆ, ರಾಷ್ಟ್ರದ ಪ್ರಗತಿಯನ್ನು ನಾವು ಸಾಧಿಸುವುದು ಸುಲಭದ ಕೆಲಸವಾಗಲಾರದು. ಸಂಪತ್ತಿನ ವಿತರಣೆ ಮುಂತಾದವುಗಳಲ್ಲಿ ತಮಗೆ ನ್ಯಾಯವಾದ ಪಾಲು ಸಿಗಬೇಕೆಂದು ಕೇಳುತ್ತಿರುವ ಕೂಲಿಕಾರರ ಯಾವ ತಂಟೆಯನ್ನೂ ಸಂಘ ಮತ್ತು ಹೋರಾಟಗಳಿಗಳ ಮನೋಭಾವದಿಂದ ನೋಡಿದರೆ ಹಿತವೆನಿಸದು. ಏಕೆಂದರೆ, ನೆಪರುಗಳು ಹೇಳುವಂತೆ ಸಂಪತ್ತಿನ ಉತ್ಪಾದನೆಯಾಗದಿದ್ದರೆ, ವಿತರಣೆಯ ಮಾತಾಡುವುದರಿಂದ ಲಾಭವೇನು? ಮೊದಲು ಸಂಪತ್ತನ್ನು ಹೆಚ್ಚಿಸಬೇಕು; ಆ ಮೇಲೆ ಅದರಲ್ಲಿ ತಮ್ಮ ಹಕ್ಕಿನ ಪಾಲನ್ನು ಕೇಳಬಹುದು. ಆದುದರಿಂದ ಕೂಲಿಕಾರರು ಕೊನೆಯ ಉಪಾಯವೆಂಬುದಕ್ಕಾಗಿಯೂ ಸಂಘ, ಹೋರಾಟಗಳಂಥ ಉಗ್ರ ಕ್ರಮಗಳನ್ನು ಕೈಗೊಳ್ಳಬಾರದು. ಯುದ್ಧಗಳಿಂದ ಜಾಗತಿಕ ಮಹತ್ವದ ಯಾವ ಸಮಸ್ಯೆಗೂ ಪರಿಹಾರ ಹೊಂದುವುದಿಲ್ಲವೆಂಬ ಭಾವನೆ ಈಗೀಗಬಲಿಯುತ್ತಿರುವಂತೆ, ಸಂಘ ಅಥವಾ ಹೋರಾಟಗಳಿಂದ ಔದ್ಯಮಿಕ ಕ್ಷೇತ್ರದ ಯಾವ ಪ್ರಶ್ನೆಯೂ ಕೊನೆಯದಾಗಿ ಇತ್ಯರ್ಥಹೊಂದಲಾರದು ಎಂಬ ವಿವೇಕ ಸಂಬಂಧಿಸಿದ ಎಲ್ಲರಲ್ಲೂ ಮೂಡಿ ಬಂದರೆ, ಅದರಿಂದ ಪ್ರಯೋಜನವಾದೀತು. ಮಾಲಕ-ಮಜೂರ ಸಂಬಂಧವು ಮಾನವೀಯವಾಗಿ ದ್ವನಿಸಿ ಚಂದ; ಅದು ತಾತ್ಕಾಲಿಕ ಅಥವಾ ರಾಜಕೀಯ ಘರ್ಷಣೆಯ ಕೊಳೆಯಾಗ ಬಾರದು. ಕೂಲಿಕಾರರನ್ನು ಔದ್ಯಮಿಕ ಪ್ರಗತಿಯ ಆಧಾರಸ್ತಂಭವೆಂದು ಭಾವಿಸಿ ಅವರ ಹಿತಗಳ ಕಡೆಗೆ ಗಮನವನ್ನು ಮಾಲಕರು ಕೊಡುತ್ತಾ ಹೋಗುವುದು ಎಷ್ಟೂ ಇಷ್ಟವಾದದ್ದೋ ಉತ್ಪಾದನೆಯನ್ನು ಹೆಚ್ಚಿಸಿ ರಾಷ್ಟ್ರವನ್ನು ಸಂಸ್ಕೃದ ಭರಿತ ಮಾಡುವುದಕ್ಕಾಗಿ ಕೂಲಿಕಾರರು ಘಾತಕ ಉಪಾಯಗಳನ್ನು ಬಿಟ್ಟು ಕೊಡುವುದೂ ಅಷ್ಟೇ ಶ್ರೇಯಸ್ಕರ. ಪರಸ್ಪರ ಸಹಾನುಭೂತಿಯ ದೃಷ್ಟಿಯಲ್ಲದೆ ಕಚ್ಚಾಡುತ್ತಾ ದಿನಗಳೆದರೆ ಯಾವದೇ ಲಾಭವಾಗಲಾರದು. ಕೂಲಿಕಾರರು ತಮ್ಮ ಪ್ರಚಂಡ ಜನ ಶಕ್ತಿಯನ್ನು ಮತ್ತು ಮಾಲಕರು ಧನ ಶಕ್ತಿಯನ್ನು ಪೂರಕವಾದ ರೀತಿಯಲ್ಲಿ ಬಳಸುವಂತಾದರೆ ಮಾತ್ರ ರಾಷ್ಟ್ರಕ್ಕೆ ಕ್ಷೇಮವಾಗುತ್ತದೆ. ಇದಕ್ಕೋಸ್ಕರ ಮಾಲಕರಲ್ಲಿ ಔದಾರ್ಯ ಎಷ್ಟು ಅಗತ್ಯವೋ ಕೂಲಿಕಾರರಲ್ಲಿ ಉದ್ದಿಮೆಯೊಡನೆ ಸಹಕರಿಸುವ ಬುದ್ಧಿಯೂ ಅಷ್ಟೇ ಅವಶ್ಯವೆನಿಸುತ್ತದೆ.

ಕಲ್ಯಾಣ ಸಂಸ್ಥೆಗಳ ಪಾತ್ರ

ಸಾಮಾಜಿಕ ಕಲ್ಯಾಣ ಕಾರ್ಯಗಳ ಮಹತ್ವ ನಮ್ಮ ದೇಶದಲ್ಲಿ ಎಷ್ಟಿದೆ ಎಂಬ ವಿಷಯದಲ್ಲಿ ಕಳೆದ ವಾರ ಧುರೀಣರಾದವರು ಪ್ರಸ್ತಾಪನೆಯನ್ನು ಮಾಡಿದರು. ಹೊಸ ದೆಹಲಿಯಲ್ಲಿ ಸಾಮಾಜಿಕ ಕಲ್ಯಾಣ ಮಂಡಳದ ಸಭೆಯೊಂದು ಜರಗಿದಾಗ ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದ ಹಾಗು ಶ್ರೀಮತಿ ದುರ್ಗಾಬಾಯಿ ದೇಶಮುಖರೂ ಸೇರಲಿನಲ್ಲಿ ಮದ್ರಾಸು ರಾಜ್ಯದ ಸಾಮಾಜಿಕ ಕಾರ್ಯಕರ್ತರ ಸಭೆ ನೆರೆದಾಗ ಗವರ್ನರ್ ಶ್ರೀ ಪ್ರಕಾಶ ಹಾಗು ಮುಖ್ಯ ಮಂತ್ರಿ ಕಾಮರಾಜ ನಾಡರರೂ ಅನೇಕ ಹಿತನುಡಿಗಳನ್ನು ಆಡಿದರು. ಭಾರತವನ್ನು ಕಲ್ಯಾಣ ರಾಷ್ಟ್ರವಾಗಿ ರೂಪಿಸಬೇಕೆನ್ನುವ ಧ್ಯೇಯವು ಬಹಳ ಉತ್ತಮವಾದದ್ದಾಗಿದ್ದು, ಇದನ್ನು ಸರಕಾರದ ಗುತ್ತಿಗೆಯೆಂದೇ ಭಾವಿಸುವುದು ಸರಿಯಲ್ಲ. ಸಾಮಾಜಿಕ ಹಿತ ಮಾಡುವ ಭರದಲ್ಲಿ ಸರಕಾರವು ಮಾನವೀಯ ಸಂಬಂಧವನ್ನು ಎಷ್ಟು ಮಾತ್ರಕ್ಕೂ ಕಡೆಗಣಿಸಲಾಗದು ವ್ಯಕ್ತಿಗತ ಹಾಗು ಕೌಟುಂಬಿಕ ಕ್ಷೇತ್ರದಲ್ಲಿ ಸರಕಾರವು ಅನಾವಶ್ಯಕವಾಗಿ ಹಸ್ತಕ್ಷೇಪನವನ್ನು ಮಾಡುತ್ತಿದ್ದರೆ ಅದು ಜನರನ್ನು ನೋಯಿಸಬಹುದು; ಅಥವಾ ಕೆರಳಿಸಬಹುದು ಇಲ್ಲ ಸ್ವಯಂ ಸೇವಕರೇ ಕಾರ್ಯಕರ್ತರಾಗಿರುವ ಸಾಮಾಜಿಕ ಕಲ್ಯಾಣ ಮಂಡಳಗಳು ಸರಕಾರಕ್ಕಿಂತಲೂ ಹೆಚ್ಚು ಉತ್ತಮವಾದ ಮತ್ತು ಪರಿಣಾಮಕಾರಿಯಾದ ಸೇವೆಯನ್ನು ಸಲ್ಲಿಸಲು ಶಕ್ಯವುಂಟು: ಮುಖ್ಯವಾಗಿ ಮನವೊಲಿಸುವಿಕೆಯ ತಂತ್ರವನ್ನು ಉಪಯೋಗಿಸಿ ಕೆಲಸ ಮಾಡಲು ಅವುಗಳಿಗೆ ಸಾಧ್ಯವುಂಟು. ಇದಕ್ಕಾಗಿಯೇ ಸಾಮಾಜಿಕ ಕಲ್ಯಾಣ ಮಂಡಳಗಳಿಗೆ ನಾವು ಮಹತ್ವವನ್ನು ಕೊಡುತ್ತಿದ್ದೇವೆ ಇವುಗಳು ತಮ್ಮ ಚಟುವಟಿಕೆಗಳನ್ನು ಯಶಸ್ವಿಯಾಗಿ ನಡೆಸಲಾಗುವಂತೆ ಸಾರ್ವಜನಿಕರಿಂದ ಹೇಗೋ ಸರಕಾರದಿಂದಲೂ ಧನ ಸಹಾಯವನ್ನು ಪಡೆಯಬಹುದು. ಆದರೆ ಸರಕಾರದ ಆದೇಶಾನುಸಾರನಡೆಯುವುದಕ್ಕಿಂತಲೂ ಸಾರ್ವಜನಿಕರ ಹಿತವನ್ನು ಗಮನಿಸುವುದೇ ಕಾರ್ಯಕರ್ತರ ಕರ್ತವ್ಯವಾಗಬೇಕು. ಜನರ ನಡುವೆ ನಿರಲು ಕೆಲಸ ಮಾಡುವುದರಿಂದ ಮತ್ತು ಅವರ ನಿತ್ಯ ಆವಶ್ಯಕತೆಗಳನ್ನು ಗುರುತಿಸಿ, ಅವುಗಳನ್ನು ಪೂರೈಸಲು ಪ್ರಯತ್ನಿಸುವುದರಿಂದ ಸಾಮಾಜಿಕ ಹಿತದ ಕಾರ್ಯಗಳು ಹೆಚ್ಚು ಉಪಾಯುಕ್ತವಾಗುವುದಷ್ಟೇ ಅಲ್ಲ, ಜನಪ್ರಿಯತೆಯನ್ನೂ ಸಂಪಾದಿಸಿ, ಕಾರ್ಯಕರ್ತರ ಬಲವನ್ನು ಹೆಚ್ಚಿಸುವುದು ನಿಶ್ಚಯ. ಬಡತನ, ಅಜ್ಞಾನ ಮತ್ತು ರೋಗ ರುಜಿನಗಳ ವಿರುದ್ಧ ಹೋರಾಡುವ ಮುಖ್ಯ ಧ್ಯೇಯಗಳಿಂದ ಸ್ಫೂರ್ತಿ ಪಡೆದ ಕಾರ್ಯಕರ್ತರು ಜನರೊಡನೆ ಬೆರೆತು ಕೆಲಸ ಮಾಡುವುದರಿಂದಲೇ ತಮ್ಮ ಗುರಿಯನ್ನು ಮುಟ್ಟಬಲ್ಲರು. ಆಗ ಅವರಿಗೆ ಸಾರ್ವಜನಿಕರಿಂದ ಉದಾರವಾದ ದೇಣಿಗೆಯನ್ನು ಸಂಪಾದಿಸುವುದೂ ಕಷ್ಟವಾಗಲಾರದು. ಖಾಸಗಿಯಾಗಿ ಜರಗುವ ಕೆಲಸಗಳಿಗೆ ಪೂರಕವಾಗಿ ಸರಕಾರವೂ ಕೆಲವು ಹೊಣೆಗಾರಿಕೆಗಳನ್ನು ಶೀಘ್ರದಲ್ಲಿ ನಿರ್ವಹಿಸಿದರೆ ಅದು ಕಳಶಪ್ರಾಯವಾಗುತ್ತದೆ. ಮುಖ್ಯವಾಗಿ ನಮ್ಮ ಸಂವಿಧಾನದಲ್ಲಿ ನಿರ್ದೇಶಿಸಿದ ಪ್ರತಿಯೊಬ್ಬ ಪ್ರಜೆಗೂ ಉದ್ಯೋಗ ಮಾಡುವ ಮತ್ತು ರಕ್ಷಣ ಪೊಂದುವ ಅಧಿಕಾರ ಮುಂಸಾಮಾನ್ಯವನ್ನು ಸರಕಾರ ನೆರವೇರಿಸಿದರೆ ಪರಿಸ್ಥಿತಿಯು ತುಂಬಾ ಸುಧಾರಿಸುತ್ತದೆ. ನಮ್ಮ ಸರಕಾರಗಳು ಎಲ್ಲ ಒಳ್ಳೆಯ ಕೆಲಸಗಳನ್ನೂ ಒಂದೇ ಸಲಕ್ಕೆ ಮಾಡಿ ಮುಗಿಸಲಾರವೆಂಬುದು ನಿಜ; ಇದು ಖಾಸಗಿ ರಂಗದ ಉತ್ಸಾಹವನ್ನು ಮಾತ್ರ ಎಷ್ಟಕ್ಕೂ ಕಡಿಮೆ ಮಾಡಬಾರದು.

ನಗೀಬರ ಮೇಲೆ ಒಳಸಂಚಿನ ಆರೋಪ

ಅಧ್ಯಕ್ಷ ಸ್ಥಾನದಿಂದ ಪದಚ್ಯುತಿ

ಈಜಿಪ್ತದಿಂದ ಬರುವ ವರದಿಯೊಂದು ರಾಜಕಾರಣಿಗಳ ಗಮನವನ್ನು ಕಳೆದ ವಾರ ವಿಶೇಷವಾಗಿ ಸೆಳೆಯಿತು: ಜನರಲ್ ನಗೀಬರನ್ನು ಕ್ರಾಂತಿಕಾರಿ ಸೈನಿಕ ಮಂಡಳವು ಅಧ್ಯಕ್ಷ ಗದ್ದುಗೆಯಿಂದ ಪದಚ್ಯುತ ಮಾಡಿತೆಂದು ಆದು ಹೇಳುತ್ತದೆ. ಕಳೆದ ಫೆಬ್ರವರಿ ತಿಂಗಳಲ್ಲಿ ಅಧ್ಯಕ್ಷ ನಗೀಬರು ಅಧ್ಯಕ್ಷಸ್ಥಾನದಿಂದ ನಿವೃತ್ತಿ ಹೊಂದಿದರು; ಆದರೆ ಕೆಲವೇ ದಿನಗಳಲ್ಲಿ ಮರಳಿ ಪದಾರೂಢರಾದರು. ಆದರೆ ಈ ಸಲ ಅವರ ಮೇಲೆ ಬಹಳ ಗಂಭೀರವಾದ ಆರೋಪವನ್ನು ಹೇರಲಾಗಿದ್ದು, ಆದರೆ ಪರಿಣಾಮವಾಗಿ ನಗೀಬರು ಗಡೀಪಾರು ಅಥವಾ ಮರಣ ದಂಡನೆಯ ಶಿಕ್ಷೆಗೆ ಗುರಿಯಾಗಬಹುದೆಂದು ಹೇಳಲಾಗುತ್ತದೆ.

ಒಳಸಂಚಿನ ಸಂಶಯ

ಕೆಲವು ದಿನಗಳ ಪೂರ್ವದಲ್ಲಿ ಸುಯೇಜ ಕಾಲುವೆಯ ಸಂಬಂಧದಲ್ಲಿ ಬ್ರಿಟಿಷರೊಡನೆ ತೃಪ್ತಿಕರವಾದ ಒಡಂಬಡಿಕೆಯೊಂದನ್ನು ಈಜಿಪ್ತಿನ ಪ್ರಧಾನ ಮಂತ್ರಿ ಕರ್ನಲ್ ನಸೇರರು ಮಾಡಿಕೊಂಡರು ಅದು ನಗೀಬರಿಗೆ ಅಷ್ಟು ಹಿಡಿಸಿದಂತೆ ಕಾಣಲಿಲ್ಲ. ಮುಸ್ಲಿಂ ಬಾಂಧವ್ಯ ಸಂಸ್ಥೆ ಎಂಬುದಕ್ಕೂ ತೂ ಅದು ಸ್ವಲ್ಪವೂ ರುಚಿಸಲಿಲ್ಲ. ಈ ಸಂಘವು ಒಳ ಸಂಚು ಹೂಡಿ, ನಸೇರರನ್ನೂ ಅವರ ಮಂತ್ರಿ ಮಂಡಳದವರನ್ನೂ ಕೊಂದು ಮುಗಿಸುವ ಪ್ರಯತ್ನ ಮಾಡಿದ್ದಿತೆಂದು ಈಗ ತಿಳಿಯುತ್ತದೆ. ನಸೇರರ ಮೇಲೆ ಸಾರ್ವಜನಿಕ ಸಭೆಯೊಂದರಲ್ಲಿ ಗುಂಡು ಹಾರಿಸಲಾಗಿದ್ದಿತು; ಅದು ಗುರಿ ತಪ್ಪಿದುದರಿಂದ ಅವರು ಬದುಕಿ ಕೊಂಡರು ಮುಸ್ಲಿಂ ಬಾಂಧವ್ಯದವರ ಕೈವಾಡವೇ ಇದೆಂದು ತಿಳಿದ ಬಳಕ ಆ ಸಂಘದ ಮೇಲೆ ಪ್ರತಿಬಂಧನವನ್ನು ಹೇರಿ, ಮುಖಂಡರನ್ನು ಬಂಧಿಸಲಾಯಿತು. ಇವರ ವಿಚಾರಣೆಯಿಂದ, ಒಳ ಸಂಚಿನಲ್ಲಿ ನಗೀಬರು ಸೇರಿರುವರೆಂಬ ಸಂಶಯ ಉಂಟಾಗಿದೆ ಎಂದು ನಸೇರರ ವಕ್ತಾರರೊಬ್ಬರು ತಿಳಿಸಿದರು.

ತಾಜಿಮುದ್ದೀನರ ಆಹ್ವಾನ

ಇತ್ತ ಪಾಕಿಸ್ತಾನದಲ್ಲಿ ಗಂಭೀರ ಸ್ವರೂಪದ ಸ್ಥಿತ್ಯಂತರಗಳಾಗುತ್ತಿವೆ ಎಂದು ತಿಳಿದು ಬರುತ್ತಿದೆ. ಪ್ರಧಾನಿ ಮಹಮ್ಮದ್ ಅಲಿಯವರು ಈಗ ಗವರ್ನರ ಜನರಲ್ಲ ಗುಲಾಂ ಮಹಮ್ಮದ್‌ರ ಕೈಗೊಂಬೆಯೇ ಆಗಿದ್ದಾರೆ. ಒಳಾಡಳಿತದ ಸಚಿವ ಹಾಗು ಸೈನ್ಯಾಧಿಕಾರಿಗಳಲ್ಲಿ ಪ್ರಮುಖರಾದ ಸೇಜರ್ ಜನರಲ್ ಇಸ್ಕಂದರ್ ಮಿರ್ಜಾರವರ ಮಾತೇ ಗಟ್ಟಿಯಾಗಿ ಕೇಳಿಸುತ್ತಿದೆ ಘಟನಾ ಸಮಿತಿಯನ್ನು ಗವರ್ನರರು ವಿಸರ್ಜಿಸಿರುವುದು ಸರಿಯೆಂಬ ಪ್ರಶ್ನೆಯು ಈಗ ಸಿಂಧದ ಮುಖ್ಯ ನ್ಯಾಯಾಲಯದ ಮುಂದೆ ಬಂದಿದೆ.

ರಣೆಯು ಬೇಗನೇ ಪ್ರಾರಂಭವಾಗುತ್ತದೆ. ಘಟನೆಯ ಸಮಿತಿಯ ಅಧ್ಯಕ್ಷರಾದ ತಾಲ್ಲೂಮುದ್ದೀನರು ಗವರ್ನರ ಜನರಲ್ಲರಿಗೆ ಘಟನಾ ಸಮಿತಿಯನ್ನು ವಿಸರ್ಜಿಸುವ ಅಧಿಕಾರವೇ ಇಲ್ಲವೆಂದು ಹೇಳಿ, ಹೊಸ ಮಂತ್ರಿ ಮಂಡಳದ ಸದಸ್ಯರು ಪ್ರತಿಜ್ಞಾ ವಚನ ಸ್ವೀಕರಿಸಿದ್ದು ತಪ್ಪೆಂದು ನ್ಯಾಯಸ್ಥಾನದ ಮುಂದೆ ವಾದಿಸಿದರು.

ಏಕಘಟಕದ ವಿನಾಶ

ಇದಕ್ಕಿಂತಲೂ ಮಹತ್ವದ ಪ್ರಶ್ನೆಯು ಪಾಕಿಸ್ತಾನದಲ್ಲಿ ಪ್ರಜಾಪ್ರಭುತ್ವ ಯಾವ ಪ್ರಕಾರವಾಗಿರಬೇಕೆಂಬುದಕ್ಕೆ ಸಂಬಂಧಿಸಿರುತ್ತದೆ. ಸುಶಿಕ್ಷಿತ ಜನರ ಸಂಖ್ಯೆ ಪ್ರಮಾಣವು ಅಲ್ಪವಾಗಿರುವ ಪಾಕಿಸ್ತಾನಕ್ಕೆ ನಿಯಂತ್ರಿತ ಪ್ರಜಾಪ್ರಭುತ್ವವೇ ಸೂಕ್ತವಾದ ಆಡಳಿತ ವಿಧಾನ ಎಂಬುದಾಗಿ ಮಿರ್ಜಾರವರು ಹೊಸ ಮಾತನ್ನು ಹೇಳುತ್ತಿದ್ದಾರೆ. ಇದರೊಡನೆ ಪಶ್ಚಿಮ ಪಾಕಿಸ್ತಾನದ ಪ್ರಾಂತ್ಯಗಳೆನ್ನೆಲ್ಲ ಒಂದೇ ಘಟಕವಾಗಿ ರೂಪಿಸುವ ನೂತನ ಸಾಹಸವೊಂದು ಕಂಡುಬರುತ್ತದೆ. ಗವರ್ನರ ಜನರಲರೇ ಇದರ ಮೂಲ ಪ್ರವರ್ತಕರಾಗಿದ್ದು ತಮ್ಮ ಉದ್ದೇಶಕ್ಕೆ ಅಡ್ಡಿಯೊಡ್ಡಿದವರನ್ನು ಅವರು ಮಾರ್ಗದಿಂದ ಕಿತ್ತೊಗೆಯುವುದಕ್ಕೆ ಹಿಂಜರಿಯುತ್ತಿಲ್ಲ.ಹೀಗಾಗಿ ಪಂಜಾಬಿಗಳ ಜಾಬಲ್ಯಕ್ಕೆ ಅವಕಾಶ ಮಾಡಿಕೊಡುವ ಏಕಘಟಕ ಸೂಚನೆಯನ್ನು ವಿರೋಧಿಸುವೆನೆಂದ ಸಿಂಧಿದ ಪೀರಜಾರರು ಮುಖ್ಯ ಮಂತ್ರಿ ಸ್ಥಾನದಿಂದ ಪರಿಚ್ಯುತರಾದರು. ಅವರ ಮೇಲೆ ದುರಾಡಳತದ ಆರೋಪವನ್ನು ಹೇರಲಾಯಿತು; ಪಜಾರಣಾ ಮಂಡಳಿಯೂ ನೇಮಕಗೊಂಡಿತು. ಅವರ ಜ್ಞಾನಕ್ಕೆ ಹಿಂದೆ ದುರಾಡಳತದ ಆರೋಪಕ್ಕೆ ಗುರಿಯಾಗಿದ್ದ ಮತ್ತು ಹೊಣೆಗಾರ ಸ್ಥಾನಗಳಿಗೆ ಅನರ್ಹರೆಂದು ಸಾರಿದ್ದ ಖುರ್ರೋರನ್ನು ಏರಿಸಿದ್ದು ಜೋಡ್ಯವೇ ಸರಿ! ಏಕ ಘಟಕ ಸೂಚನೆಯನ್ನು ವಿರೋಧಿಸಿದ ಶಾಸನ ಸಭೆಯ ಸ್ಪೀಕರ್ ಪಕ್ಷದ ಧುರೀಣ ಸಯ್ಯದರನ್ನೂ ಬಂಧಿಸಿವ್ವು, ಇದು ಕೇಂದ್ರ ಮಂತ್ರಿ ಮಂಡಳದಲ್ಲಿರುವ ಸದಸ್ಯರೊಬ್ಬರನ್ನು ನೋಯಿಸಿದೆಯೆಂದೂ, ಹೀಗಾಗಿ ಮರಳಿ ಮಂತ್ರಿ ಮಂಡಳದಲ್ಲಿ ಬೆಕ್ಕಟ್ಟು ತಲೆದೋರೀತೆಂದೂ ಹೇಳಲಾಗುತ್ತದೆ

ಪೂರ್ವ-ಪಶ್ಚಿಮ ಗೆಳೆತನ

ರಷಿಯದೊಡನೆ ಸ್ನೇಹದಿಂದ ವರ್ತಿಸುವ ಸೂಚನೆಗಳನ್ನು ಅಧ್ಯಕ್ಷ ಐಸೆನ್ ಹೋವರರು ಕೊಟ್ಟದ್ದು, ಕಳೆದ ವಾರ ನೀರೀಕ್ಷಕರನ್ನು ಕೆಲಮಟ್ಟಿಗೆ ಚಕಿತಗೊಳಿಸಿತು. ಜಪಾನಿನ ಹೊಕೈಡೋ ದ್ವೀಪಗಳ ಹತ್ತಿರ ಸುಳಿದಾಡುತ್ತಿದ್ದ ಅಮೇರಿಕದ ವಿಮಾನಗಳನ್ನು ರಷಿಯದ ವಿಮಾನಗಳು ಹೊಡೆದ ಪ್ರಸಂಗದಲ್ಲಿ ಮಾತನಾಡುತ್ತಾ ಅಧ್ಯಕ್ಷ ಐಕರು ರಷಿಯಾವನ್ನು ಮನವಾರಿ ದೂಷಿಸಲು ಸಾಧ್ಯವಿಲ್ಲ ಎಂದರು. ಇದು ಆಶ್ಚರ್ಯದ ಮಾತು—ಹಾಗೆಯೇ ಕಮ್ಯುನಿಸ್ಟ್ ಚೀನವು ದ್ವೇಷವಶ ಕಿದಿಯುಗುಳುವ ಡಲ್ಲೇಸರು ನೆಹರುಗಳ ಚೀನೀ ಸಂದರ್ಶನದಿಂದ ಒಳ್ಳೆಯ ಪರಿಣಾಮವನಾಗಿರಬಹುದೆಂಮ ಹೇಳಿದರು. ಕಮ್ಯುನಿಸ್ಟರ ಧೋರಣೆಯಲ್ಲಿ ನಿಜವಾಗಿಯೂ ಬದಲಾವಣೆಯಾಗಿದೆಯೆ, ಏನೆಂದು ಉಚಿತವಾಗಿ ಈಗಲೇ ಕಳಬಂತಿಲ್ಲವಾದರೂ ಸ್ಟಾಲಿನ್ನರ ಬಳಿಕ ರಶಿಯಾದಲ್ಲಿ ಸಾಕಷ್ಟು ಮಹತ್ವದ ಪರಿವರ್ತನೆಗಳು ದೃಷ್ಟಿಗೋಚರವಾಗುತ್ತಿವೆ ಎಂದು, ನೀರೀಕ್ಷಕರ ಅಭಿಪ್ರಾಯ. ಪೂರ್ವ ಪಶ್ಚಿಮಗಳಲ್ಲಿ ಪರಸ್ಪರ ಸೌಹಾರ್ದ ಸಂಬಂಧ ಹೆಚ್ಚಬೇಕೆಂದೂ ಚರ್ಚಿಲರೂ ಒಪ್ಪುತ್ತಿದ್ದು, ಜನವರಿ ತಿಂಗಳಲ್ಲಿ ಕಾಮನ್ವೆಲ್ತ್ ರಾಷ್ಟ್ರಗಳ ಪರಿಷತ್ತು ಜರಗಿದಾಗ,ಅಲ್ಲಿಗೆ ಬಂದ ಪ್ರಧಾನಿ ಮಂತ್ರಿಗಳ ಒಲವನ್ನು ತಮ್ಮ ಕಡೆಗೆ ಅವರು ತಿರುಗಿಸಬಹುದು. ಪ್ರಧಾನ ಮಂತ್ರಿ ನೆಹರೂಗಳಂತೂ ಇಂಥ ಉಪಕ್ರಮಕ್ಕೆ ಬೆಂಬಲ ಕೊಡುತ್ತಿದ್ದು, ರಷಿಯನನ್ನು ಆವರು ಸಂದರ್ಶಿಸುವ ದಿನಗಳು ಬಹಳ ಹತ್ತಿರದಲ್ಲಿರುವಂತೆ ಕಾಣುತ್ತದೆ. ಆ ಸರಕಾರದಿಂದ ಆನುಗೆ ಆಮಂತ್ರಣ ಎಂದೋ ಬಂದಿರುತ್ತದೆ.

ಉಡುಪಿ

ಎಸ್. ಜಿ. ಎಸ್. ಕಾಲೇಜಿನಲ್ಲಿ ಬೊಂಬಾಯಿಯ ಸುಪ್ರಸಿದ್ಧ ಪತ್ರಿಕೋದ್ಯಮಿ ಶ್ರೀ ಎಸ್. ವಿ. ಕಾಮತರು ತಾ. 12ರಂದು ನಿವೇಶ ಪ್ರವಾಸವ ಕುರಿತು ಭಾಷಣವಿತ್ತರು.

ಹೊಸ ರಸ್ತೆ ಉದ್ಘಾಟನೆ— ಇಂದ್ರಾಣೀ ಕ್ಷೇತ್ರಕ್ಕೆ ಹೋಗಿ ಬರಲು ಆನುಕೂಲವಾಗುವಂತೆ ನೂತನವಾಗಿ ನಿರ್ಮಿಸಿದ ರಸ್ತೆಯ ಉದ್ಘಾಟನಾ ಸಮಾರಂಭವನ್ನು ತಾ 12 ರಲ್ಲು ಸಂಜೆ ಉಡುಪಿ ಅಥಸಾರಿ ಮರದ ಶ್ರೀ ವಿಬುಧೇಶತೀರ್ಥ ಶ್ರೀಪಾದಂಗಳವರು ನೆರವೇರಿಸಿದರು. ಶ್ರೀ ದೇವಸ್ಥಾನದಲ್ಲಿ ಹೊಸ ತಾಗಿ ಕಟ್ಟಿಸಿದ ವಾಲ ನುಂಬರವನ್ನು ಶ್ರೀ ಪುತ್ತಿಗೆಮಠದ ಶ್ರೀಪಾದಂಗಳವರು, ಹಾಗೂ ಶ್ರೀ ಅಥಮಾರುಮುಡದ ಶ್ರೀಪಾದಂಗಳವರೊಡನೆ ಪ್ರವೇಶಿಸಿ ಶ್ರೀ ದೇವಿಗೆ ನಮಸ್ಕರಿಸುವ ಸಮಾರಂಭವೂ ಈ ಸಂದರ್ಭದಲ್ಲಿ ಜರಿಗಿತು. ಶ್ರೀ. ಕು. ವಿ. ಹರಿದಾಸ ಭಟ್ಟರು ಈ ಸ್ತುತ್ಯ ಕಾರ್ಯಾನೆಸಗಿದವರನ್ನು ಪ್ರಶಂಸಿಸಿ ಆಭಾರ ಸೂಚಿಸಿದರು.

ಕ್ರಿಶ್ಚಿಯನ್ ಹ್ಯಾಸ್ಕೂಲಿನ ಸಾಹಿತ್ಯ ಸಭೆಯು ತಾ.10ರಲ್ಲು ಹೆಡ್ಮಾಸ್ಟರ್ ಶ್ರೀ ಎಸ್.ಎನ್.ಸುತಾಯರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎ.ಜೆ.ಆಲ್ಪಿಯನರು 'ಪತ್ರಿಕೋದ್ಯಮದ ಸ್ಥಿತಿಗತಿ' ಕುರಿತು ಸುದೀರ್ಘ ಭಾಷಣವಿತ್ತರು. ಶಾಲಾ ವಿದ್ಯಾರ್ಥಿ ಶ್ರೀ ಎಸ್. ಕೆ. ಬಾಬುಲಾಲರವರು ಭಾಷಣಗಾರರ ಸರಿಚಯವನ್ನು ಮಾಡಿಕೊಟ್ಟರು.

ಲಕ್ಷದೀಪ ಸಾಹಿತ್ಯೋತ್ಸವ—ತಾ. 10ರಲ್ಲು ಉಡುಪಿ ಕಲಾಸ್ಪಂದನ ಆಶ್ರಯದಲ್ಲಿ ಸಂಸ್ಕೃತ ಕಾಲೇಜು ಮುಯಿಯಲ್ಲಿ ಲಕ್ಷದೀಪ ಸಾಹಿತ್ಯೋತ್ಸವವು ಶ್ರೀ ಕೆ.ಶಿವರಾಮು ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು ಉಪಕಾರ್ಯದರ್ಶಿ ಶ್ರೀ ಪಿ. ಆರ್. ಐತಾಳರ ಸ್ವಾಗತಿಕ ಮಾತುಗಳಾದ ಬಳಿಕ ಶ್ರೀ ಎ. ವಿಠಾಲ ಭಟ್ಟರು ಕುಮಾರವ್ಯಾಸ ಭಾರತದಿಂದ ಕೆಲವು ಕವಿತೆಗಳನ್ನು ಸುಸ್ವರವಾಗಿ ಹಾಡಿದರು. ಶ್ರೀ ಯು. ರಾಘವೇಂದ್ರ ಆಚಾರ್ಯರು 'ಅಣುಶಕ್ತಿ'ಯ ಕುರಿತು ವಿಚಾರಪೂರ್ಣ ಉಪನ್ಯಾಸವಿತ್ತರು ಪ್ರಬಂಧ ಸ್ಪರ್ಧೆಗಳ ಕಾಲಕ್ಷೇಪವಾಗಿನಡೆ ಕೊನೆಗೊಂಡಿತು.

ನಗರ ಸಭೆಯು— ತಾ. 13ರಲ್ಲು ಚೇರ್‌ಮೆನ್ ಡಾ! ವಿ. ವಿ ನ್ಯಾಕರವರ ಅಧ್ಯಕ್ಷತೆಯಲ್ಲಿ ಜರಿಗಿತು. ಕೆಲವು ಸರಕಾರಿ ಆದೇಶಗಳು ವಿಕಾರ್ಡು ನೂತನವಾಗುವ. ಕಳೆದ ಆರು ತಿಂಗಳಲ್ಲಿ ಖರ್ಚಾದ ನಿರ್ಣಯಗಳಿಗೆನುಸಾರವಾಗಿ ಪೂರ್ಣ ಸುತ್ತು ಅನುಮತಿ ವಾದ ಕೆಲಸಗಳ ವರದಿ ಕುರಿತು ಚರ್ಚೆ ನಡೆಯಿತು. ಸ್ವಾತಂತ್ರ್ಯ ವಿಜಾಚರಣೆ ಸ್ಕಾರಿಕ ಸ್ಕಾಲರ್ ವಿತ್ತನ್ನು ಜೋರ್ಡಾ ಹ್ಯಾಸ್ಕೂಲಿನ ವಿದ್ಯಾರ್ಥಿ ಶ್ರೀ ಎ. ಕೃಷ್ಣಾಚಾರ್ಯರಿಗೆ ಕೊಡುವುದೆಂದಾಯಿತು.

ನೇಮಕ— ಸ್ಟೇಟು ಬ್ಯಾಂಕ್ ಮ್ಯಾನೇಜರ್ ಶ್ರೀ ಆ. ಗೋಪಾಲಕೃಷ್ಣರಾಯರಿಗೆ ಕಡಲೂರಿನ ಸಬ್ ಜಡ್ಜರಾಗಿ ನೇಮಕವಾದುದರಿಂದ ಅವರ ಸ್ಥಾನದಲ್ಲಿ ಶ್ರೀ ಯು. ಹಯವದನರವರು ಚಾರ್ಜು ವಹಿಸಿಕೊಂಡರು. ಎಸಿಸಿಲ್ ಬ್ಯಾಂಕ್ ಮ್ಯಾನೇಜರಾಗಿ ಥಾರಾಪುರದಿಂದ ಶ್ರೀ ಎಂ. ವೆಂಕಟ್ರಾಯರು ಬೇಸಗೆ ಬಂದಿರುವರು. ನಗರಾದ ಶ್ರೀ ಆ. ಗೋಪಾಲಕೃಷ್ಣರಿಗೆ ವಕೀಲ ಸಂಘ, ಅಧಿಕಾರಿಗಳ ಕ್ಲಬ್ಬುಗಳಲ್ಲಿ ಸಿಹಾಯಸತ್ಕಾರ ಕೂಟಗಳಾದವು.

ನೆಹರೂ ಜಯಂತಿ— ಉಡುಪಿ ಕಾಂಗ್ರೆಸ್ ಕಮಿಟಿ ಆಶ್ರಯದಲ್ಲಿ ನೆಹರೂ ಜನ್ಮದಿನಾಚರಣೆಯು ತಾ. 14ರಲ್ಲಿ ಯಶಸ್ವಿಯಾಗಿ ಜರಿಗತು. ಅಂದು ಬೆಳಿಗ್ಗೆ ಪ್ರಭಾತ ಫೇರಿಯಾಗಿ ಗಾಂಧೀ ಮೈದಾನದಲ್ಲಿ ಶ್ರೀ ಟಿ. ಎ. ಪೈ. ಎಮ್. ಎಲ್. ಎ. ಆವರಿಂದ ರಾಷ್ಟ್ರಧ್ವಜಾರೋಹಣ ನಡೆಸಿ ಸಾರ್ವಜನಿಕ ಕ್ಷಾರ್ಥನೆಯಾಗಿ ಪುಷ್ಪಗಳಿಗೆ ಸಿಹಿ ಹಂಚಲಾಯಿತು. ಬಳಿಕ ಆಟಗಳ ಸ್ಪರ್ಧೆ ಜರಿಗಿ ಬೆಳಿಗಿನಕಾರ್ಯಕ್ರಮ ಮುಗಿಯಿತು. ಆಪರಾಹ್ನ ಟೌನ್‌ಹಾಲ್ ಹ್ಯಾಸ್ಕೂಲಿನ ಸಿಸಲ್ಸ್ ಹಾಲಿನಲ್ಲಿ, ಸರ್ಕಲ್ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ ಬಿ. ಕೃಷ್ಣಯ್ಯ ಹೆಗ್ಡೆಯವರು ವಾರೆಗೆ ದಾನವತ್ತ ಪಂಡಿತ ನೆಹರೂರವರ ಭಾವಚಿತ್ರವನ್ನು ಪಾ! ಟಿ. ಎಮ್. ಎ. ಪೈಗಳು ನೆಹರೂ ಪೈಶಿಷ್ಟ್ಯ ಶ್ರೀಮಂತಿಕೆಯ ಆವಶ್ಯಕತೆಗಳನ್ನು ವಿವರಿಸಿ ಅನಾವರಣಗೊಳಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಅಧಸಾರು ಮರದ ಶ್ರೀ ವಿಬುಧೇಶ ತೀರ್ಥಶ್ರೀಪಾದಂಗಳವರು ವಹಿಸಿದ್ದರು. ಶಾಲಾ ಮುಖ್ಯೋಪಾಧ್ಯಾಯರು ಶ್ರೀ ಅನಂತ ಕೃಷ್ಣ ಸಾಮುಗರು ಸ್ವಾಗತ ಮಾತುಗಳನ್ನಾಡಿದರು. ಬಾಲಾದಿತ್ಯಾರ್ಥಿ ಬಳಿಂದ ಶ್ರೀ ಶ್ರೀ ನಿವಾಸ ಇವರು ಧನ್ಯವಾದಗಳನ್ನಿತ್ತರು.

ಸಂಜೆ ರಥಬೀದಿಯಲ್ಲಿ ಉತ್ಸಾಹ ಹಾಗೂ ವಿಶಿಸ್ಟ ಸಾರ್ವಜನಿಕ ಸಭೆಯು ಪ್ರಿನ್ಸಿಪಾಲ್ ಎಚ್. ಸುಂದರರಾಯರ ಅಧ್ಯಕ್ಷತೆಯಲ್ಲಿ ಜರಿಗಿತು. ಶ್ರೀ. ಟಿ. ಎ ಪೈಗಳಿಂದ ಸ್ವಾಗತಿತವಾದ ಮೇಲೆ ಕೆಸ್ಟಡ ಮತ್ತು ಹಿಂದೀ ಭಾಷೆಗಳಲ್ಲಿ ನೂತನ ಉಪಕ್ರಮವಾಗಿ ಭಾಷಣ ಸ್ಪರ್ಧೆ ನಡೆಯಿತು. ಸರಿಜನ ಬಾಲ ಬಾಲಕಿಯರಿಗೆ ಸಾರ್ವಜನಿಕರು ಕೊಟ್ಟ ವಸ್ತ್ರಗಳನ್ನು ಮುನಿಸಿಪಲ್ ಚೇರ್‌ಮೆನ್ ಡಾ! ವಿ. ವಿ. ನ್ಯಾಕರಾಯರು ವಂಚಿದರು. ವಿಜೃಂಭಿಗಳಲ್ಲಿ ಹಾಗೂ ಭಾಷಣ ಸ್ಪರ್ಧೆಗಳಲ್ಲಿ ನೆಪ್ಪಿನವರಿಗೆ ಸಾರಿತೋಷ ವಿತರಣೆಯಾಗಿ ನೆಹರೂ ಮಹಾತ್ಮೆ, ನಿಲುಮೆಯನ್ನು ವಿವರಿಸಿ ಅಧ್ಯಕ್ಷ ಭಾಷಣ ಮಾಡಿತು. ಶ್ರೀ ಎ. ಜೆ. ಆಲ್ಪಿಯನರು ಧನ್ಯವಾದಗಳನ್ನರ್ಪಿಸಿದರು.

ಪತ್ರಿಕೋದ್ಯಮಿಗಳ ಸಭೆಯು— ತಾ. 13ರಲ್ಲು ನವಯುಗ ಪ್ರೆಸ್ಸಿನ ನೂತನ ಮೆಷಿನ್ ಶ್ರೀ ಎಚ್. ಸುಂದರರಾಯರ ಅಧ್ಯಕ್ಷತೆಯಲ್ಲಿ ಜರಿಗಿದಾಗ ವಿಶೇಷ ಆತಿಥ್ಯಗಳಿಗಾಗಿ ಆಗಮಿಸಿದ್ದ ಉಡುಪಿಯವರೇ ಆದ ಜೋಜುಯಿಸ್ ಪತ್ರಿಕಾ ಪ್ರತಿನಿಧಿ ಶ್ರೀ ಎಸ್. ವಿ. ಕಾಮತರು ಅಮೇರಿಕಾದಲ್ಲಿಯ ಪತ್ರಿಕಾ ಸ್ವಾತಂತ್ರ್ಯ, ಸಂಪಾದಕೀಯ, ಸುದ್ದಿಗಾರರ ಜನಾಭ್ಯಾರಿ, ಸ್ಥಾನಮಾನಗಳ ಕುರಿತು ಭಾಷಣವಿತ್ತರು. ಇದೇ ಸಭೆಯಲ್ಲಿ ಪತ್ರಿಕೋದ್ಯೋಗಿ ಸಂಘದ ನಿಯಮಾವಳಿಗಳನ್ನು ಓದಿ ಸುಂಜೂರು ಮಾಡಲಾಯಿತಲ್ಲದೆ ಚಾಲ್ತಿವರ್ಷಕ್ಕೆ ಕಾರ್ಯಕಾರಿ ಸಮಿತಿಯನ್ನೂ ರಚಿಸಲಾಯಿತು.

ಫೌಂಟೆನ್ ಸಹಿತಿಸಿದವರು— ಇದೇ ತಾ. 10ರಲ್ಲಿ ಆನಿಬೆಸೆಂಟ್ ಮನೆಯೊಂದಕ್ಕೆ ಪಿಂಕಿತಗಳಿದ ಸುದ್ದಿ ಬಂದೊಡನೆ ಸಜ್ಜಾ ಫೀಸರ್ ಶ್ರೀ ಆ. ಗೋಪಾಲಕೃಷ್ಣರವರ ನಾಯಕತ್ವದಲ್ಲಿ ಅಲ್ಲಿಗೆ ಧಾವಿಸಿ ಬೆಂಕಿಯನ್ನು ಪತ್ತೋಟಗೆಂದರೆಂದು ತಿಳಿದು ಬರುತ್ತದೆ.

ಪೋಸ್ಟು ನೇಮ್ ಮತ್ತು ಕೆಳತರ ಗತಿಯ ನೌಕರ ಸಭೆಯು—ತಾ. 7ರ ಭಿಗೋಪಾಲಾಶ್ರಮದ ಸುಮತಿಬಾಯಿ ಶ್ರೀ ಯು. ಶೇಷ ಸಟ್ಟರ ಅಧ್ಯಕ್ಷತೆಯಲ್ಲಿ ಜರಿಗಿ ಇಲಾಖಾ ಮಂತ್ರಿಗಳಾದ ಶ್ರೀ ರಫಿಅಹಮದ್ ಕಿದ್ವಾಯಿಯವರ ನಿಧನದ ಬಗ್ಗೆ ಸಂತಾಪ ಸೂಚಿಸಿದವರೆ ಆತ್ಮಕ್ಕೆ ಶಾಂತಿಯನ್ನು ಕೋರಲಾಯಿತು. ಸಂಸ್ಥದ ಸದಸ್ಯ ಶ್ರೀ ಎಮ್. ಲಕ್ಷ್ಮಣ ಭಟ್ಟರ ನಿಧನದ ಬಗ್ಗೆಯೂ ಮು:ಏಸೂಚಿಸಲಾಯಿತು. ಪೋಸ್ಟು ಮೇನ್ ಸುತ್ತು ನಾಲ್ಕು ನೇ ತರಗತಿನೌಕರರಿಗೆ ಪಾಲಾ ಪವಾಲೆಗಳನ್ನು ಪರೀಕ್ಷಿಸಲಾಯಿತು ಮೇಲಧಿಕಾರಿಗಳಿಗೆ ಬರೆ ಕೊಳ್ಳುವ ಅನೇಕ ನಿರ್ಣಯಗಳಾದುವು.

ಕೆಲವು ಉತ್ತಮ ಪುಸ್ತಕಗಳು.

ಬದುಕು ಬಂಗಾರ	(ಕುಮಾರಸ್ವಾಮಿ)	1	8
ಯುಗವಾಣಿ	(ಕು. ಶಿ. ಹರಿದಾಸಭಟ್ಟ)	0	8
ಫಂಟಮರಾ	(,,)	2	0
ಬಿಡಿಮಿನ ನಂಪತ್ತು	(,,)	2	0
ಪ್ರಜಾಪ್ರಭುತ್ವವನ್ನು ಕುರಿತು	(ಶಿವರಾಮ ಕಾರಂತ)	0	8
ಆಂತರಂಗದ ಕತೆಗಳು	(ಸಂಕಲನ)	1	4
ಸ್ವಪ್ನಯೋಗ	(ಕಾರ್ನಿಕೇಯ)	0	8
ನೀತಿನಿರೋಧ ಕತೆಗಳು		0	12
ನೇಪಾಪಥ	(ನೇಮ್ ಗೊವಿಂದಾಸ್)	0	8
ಸರಸ್ವತಿ	(ಡಾ! ಎಂ. ವಾಧವಾಚಾರ್ಯ)	0	12
ಗೀತೆಯ ಕೈಗನ್ನಡಿ	(ವಿವಂಬರಯ್ಯ)	0	8
ಭಾರತದ ಕರ್ಣ	ಎಸ್. ಎಸ್. ಕಿರ್ಲೋ)	0	6
ಪ್ರಾಚೀನ ತುಳುನಾಡು	(,,)	2	0
ಮುತ್ತಿಲ	(,,)	0	12
ಮಧುಪರ್ಕ	(ಸಂಕಲನ)	3	0
ಕಾವ್ಯಾನ್ಯಾಸ್ಯ	(,,)	1	8
ರವಿಗಳ ಸಾಗಾಟ	(ಕಳ್ಳ ಪೋಲಿ)	0	12
ಕವಿತಾಕಾಮಿನಿ	(ಎಸ್. ವೆಂಕಟರಾಜ)	3	0
ಆಕಾಶಗಂಗೆ		1	12
ಜೀವನ ಸಂಗ್ರಾಮ	(ಪಿ. ಶೇಷ ರೆಡ್ಡಿ)	1	8
ಪೇಪರ್ಕ	(ಕೆ. ಕೆ. ರೆಡ್ಡಿ)	1	4
ಪ್ರೇಮವಿಜಯ	,,	1	0

ವಿಜಯರು ಜೇಕು. ವರ್ತಗಳಿಗೂ ನವ್ಯವಲ್ಲಿ ಹೊರಿಯುವ ಎಲ್ಲಾ ಕತೆಗಳ ಪ್ರಪ್ರಕಗಳ ಕೆಟಲಾಗಿಗೂ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ವಿಶಿಯದ ಸಂಪತ್ತು

(ವಿಶಿಯದ ಆರ್ಥಿಕ ಸ್ಥಿತಿ ಚಿತ್ರ)

ಬರೆದವರು: ಕು. ಶಿ ಹರಿದಾಸ ಭಟ್ಟ, ಎಂ. ಎ.

ದಾಸಿ ರಾಜಕೀಯದಲ್ಲಿ ಆರ್ಥಿಕವಾದ ವಿಶಿಯದ ರಾಷ್ಟ್ರೀಯ ಸಂಪತ್ತು ಆರ್ಥಿಕ ಸ್ಥಿತಿಚಿತ್ರವನ್ನು ಸರಳವಾಗಿಯೂ, ವಿವರವಾಗಿಯೂ, ರೇಖಾಚಿತ್ರಗಳಿಂದಲೂ ವಿವರಿಸುವ ವಿಕಮಾತ್ರ ಗ್ರಂಥವೆ

ವಿಶಿಯದ ಎಲ್ಲ ವಿದ್ಯಾರ್ಥಿಗಳಿಗೂ, ರಾಜಕೀಯಜ್ಞರಿಗೂ, ವಿವಚೇಕಾದ ಪುಸ್ತಕ. ಬೆಲೆ: ಎರಡು ರೂಪಾಯಿ.

ವಾಚನಾಲಯಗಳಿಗೆ ಅತ್ಯಗತ್ಯವಾದದ್ದು.

ಕಾರ್ಯಾಲಯದ ಎಲ್ಲ ಕವಿಗಳ ಪ್ರಸ್ತಕಗಳೂ ಸಿಗುತ್ತವೆ. ವಿಶೇಷ ಸವಲತ್ತುಗಳಿಗಾಗಿ ಬರೆಯಿರಿ—

1. ನವಯುಗ ಪ್ರೆಸ್, ಉಡುಪಿ. 2. ನವಭಾರತ ಪುಸ್ತಕ ಭಂಡಾರ, ಉಡುಪಿ.

ಉಡುಪಿಯಲ್ಲಿ, ನವಯುಗ ವಾರಪತ್ರಿಕೆಯ ನೇತೃತ್ವದಲ್ಲಿ ಉಪಕ್ರಮಿಸಲಾಗಿರುವ ಪುಸ್ತಕ ಮಾಸದ ಅಂಗವಾಗಿ ತಾ ೨೦ರಂದು ಪ್ರಸಿದ್ಧ ಸಾಹಿತಿಗಳಿಬ್ಬರ ಭಾಷಣ ಮೇಲಿನ ಚಿತ್ರದಲ್ಲಿ ಶ್ರೀ ಶಿವರಾಮ ಕಾರಂತರು ಭಾಷಣ ಗೈದುತ್ತಿದ್ದಾರೆ. ನಡುವೆ ಕುಳಿತವರು ಅಧ್ಯಕ್ಷತೆ ವಹಿಸಿದ ಡಾ। ಟಿ ಎಂ ಎ ಪೈಗಳು. ಕೆಳಗಿನ ಚಿತ್ರದಲ್ಲಿ ಶ್ರೀ ವಿ ಸೀತಾರಾಮಯ್ಯನವರು ಭಾಷಣಗೈದುತ್ತಿರುವುದನ್ನು ನೋಡಬಹುದು



ಭೂಮಿ ಹಿಡುವಳಿಯ ಸರಿಪಡಿಸಲಿ

ನೆ—ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಭಾರತದಲ್ಲಿನ ಭೂ ಹಿಡುವಳಿಯ ಕುರಿತಾದ ತಿಳಿವಳಿಕೆಯನ್ನು ಯೋಜನಾ ಸಮಿತಿಯವರು ಮಾಡಿದ್ದರೂ ಅದರ ಇದಕ್ಕೆ ಬೇಕಾದ ಭೂಸುಧಾರಣೆ ಏನನ್ನು ಹಿಡುವಳಿಯ ಕುರಿತಾದ ಸರಿಯಾದ ಮಾಹಿತಿ ಸಿಗಲಿಲ್ಲ. ಆಲ್ಲವಕ್ಕೂ ಇರುವ ಅಂಕಿ ಸಂಖ್ಯೆಗಳ ಮೇರೆಗೆ ಒಕ್ಕಲುಗಳು ಸಾಗುವಳಿ ಮಾಡುವ ಭೂಮಿಯನ್ನು ಮತ್ತು ಭೂಮ್ಯಾಲಿಕರು ಸ್ವತಹಾ ಸಾಗುವಳಿ ಮಾಡುವ ಭೂಮಿಯನ್ನು ಎಂಬುದು ತಿಳಿದು ಬರುವುದಿಲ್ಲ. ಒಕ್ಕಲುಗಳ ಒತ್ತರಕ್ಷಣೆಗೇ ಸ್ಥರ ಬೇಕಾದ ಕಾರ್ಯಕ್ರಮವು ಕೈಗೊಳ್ಳಲು ಮೇಲಿನ ವಿಚಾರಗಳಲ್ಲಿ ಸರಿಯಾದ ಒಂಕಿ ಸಂಖ್ಯೆಗಳು ಆಗತ್ಯವಿದೆ. ಹೀಗಾಗಿ ಭೂಮಿ ಹಿಡುವಳಿಯ ಸರಿಯಾದ ಗಣನೆಯನ್ನು ಮಾಡಬೇಕೆಂದು ಯೋಜನಾ ಸಮಿತಿಯವರು ಪ್ರಾಂತೀಯ ಸರಕಾರಗಳೊಡನೆ ಕೇಳಿಕೊಂಡಿದ್ದಾದರೆಸ್ಸಲಾಗಿದೆ

ಮದ್ರಾಸು ಸಂಸ್ಥಾನವು ಕಾಡಲೇ ಭೂಮಿ ಹಿಡುವಳಿಯ ಗಣನೆಯನ್ನು ಮಾಡಲು ಆಜ್ಞೆ ಕೊಟ್ಟಿದ್ದು 1951ನೆ ನವೆಂಬರ ಆದಿಯಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಕಾರ್ಯ ಆರಂಭವಾಗಿದೆ. ಇದಕ್ಕೆ ಬೇಕಾದ ರವಿನ್ಯೂ ಇನ್ಸ್‌ಪೆಕ್ಟರ್, ಡಿಸ್ಟ್ರಿಕ್ಟ್ ತಹಸಿಲ್ದಾರ್ ಮಾದಿಯಾದ ಶಿಬಂಧಿಗಳ ಸೇವೆಯನ್ನಾಗಿನ ಆ ಜಿಲ್ಲೆಗೆ 6 ಸ್ಪೆಶಲ್ ಡಿಸ್ಟ್ರಿಕ್ಟ್ ತಹಸಿಲ್ದಾರರ ಮತ್ತು 22 ಸ್ಪೆಶಲ್ ರವಿನ್ಯೂ ಇನ್ಸ್‌ಪೆಕ್ಟರರ ನೇಮಕವಾಗಿದೆ. ಗ್ರಾಮಸ್ಥರ ಶ್ರಮವಿಭಾಗ ಮಾಡಿಕೆಯನ್ನೆಲ್ಲಾ ಒಟ್ಟುಗೂಡಿಸುವರು. ಆದರ ಕೆಲಸಗಳನ್ನು ಸ್ಪೆಶಲ್ ರವಿನ್ಯೂ ಇನ್ಸ್‌ಪೆಕ್ಟರರು ಪರಿಶೀಲಿಸುವರು. ಡಿಸ್ಟ್ರಿಕ್ಟ್ ತಹಸಿಲ್ದಾರರು ಸೂಪರಿಟೆಂಡ್ ಮಾಡುವರು. ಸರಿಯಾದ ರೀತಿಯಲ್ಲಿ ಈ ಜಮೀನು ಹಿಡುವಳಿ ಗಣನೆಯು ಜರಗುವಂತೆ ಸಹಕರಿಸಬೇಕೆಂದು ಜಿಲ್ಲಾ ಕಲೆಕ್ಟರರು ವಿನಂತಿಸುತ್ತಾರೆ

ಕುಂದಾಪುರ ಬ್ಯಾಂಕ್ ನೋಸದ ಪ್ರಕರಣ—

ಕುಂದಾಪುರದ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿಲಿಮಿಟೆಡ್—ಇದರ ಮಾಜಿ ಮೆನೇಜಿಂಗ್ ಡೈರೆಕ್ಟರ್ ಶ್ರೀ ಕೆ ವಿಠಲದಾಸ ಶಣೈ, ಇದರ ಮಾಜಿ ಶ್ರೀ ಬಿ ವಾಸುದೇವ ನಾಯಕ್ ಮತ್ತು ಈ ಬ್ಯಾಂಕಿನ ನೌಕರವಾಗಿದ್ದ ಶ್ರೀ ಕೆ ಅನಂತ ಕಾಮತ್—ಈ ಮೂವರ ಮೇಲೆ ಬ್ಯಾಂಕಿಗೆ ಮೋಸದ ಮೂಲಕ ಒಳಪಡಿಸಿದ ಇತ್ಯಾದಿ ಆರೋಪಗಳ ಮೇಲೆ ಆ ಮೂವರ ವಿಚಾರಣೆ ನಡೆಸಿದ ಸ್ಪೆಶಲ್ ಗ್ರಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರು ವಿಧಿಸಿದ ಎರಡರಿಂದ ಏಳು ವರ್ಷಗಳ ವರೆಗಿನ ಸಾದಾ ಶಿಕ್ಷೆ ಕುಟ್ಟು ರೂಪಾಯಿ 100ರಿಂದ 1000 ವರೆಗಿನ ದಂಡನೆ ಶಿಕ್ಷೆದ್ದು, ಮೇಲಿನ ಶಿಕ್ಷೆಗಳು ಸಾಗಿದೆ ಅಪೀಲುಗಳನ್ನು ಜಿಲ್ಲಾ ನ್ಯಾಯಾಧೀಶರಾದ ಶ್ರೀ ಕೆ ಕಂಪ ನಂಬಿಯರ ಟ್ರೈಬ್ಯೂನಲ್‌ರು ತಳ್ಳಿ ಹಾಕಿ, ಶಿಕ್ಷೆಗಳನ್ನೂ ದಂಡನೆಯನ್ನೂ ಇನ್ನು 11ರಷ್ಟು ಖಾಯಂಗೊಳಿಸಿದರು

ಇದೇ ಬೇಂಕಿನ ಮೋಸದ ಪ್ರಕರಣದ ಇನ್ನೊಂದು ಅಪೀಲನ್ನು ತಾ 3ರಲ್ಲಿ ತಳ್ಳಿ ಹಾಕಿ ಐದು ಜನರ ಮೇಲೆ ವಿಧಿಸಿದ ಶಿಕ್ಷೆಯನ್ನು ನ್ಯಾಯಾಧೀಶರು ಖಾಯಂ ಮಾಡಿದ್ದರು

ಈ ಬೇಂಕಿನ ಸುಳ್ಳು ಬೆಲ್ಟು ಶತ್ರಗಳ ಮೂಲಕ ಸುಮಾರು ಹನ್ನೆರಡು ಲಕ್ಷ ರೂಪಾಯಿಯಷ್ಟು ದುರುಪಯೋಗ ಪಡಿಸಿದುದನ್ನು ಎಗ್ರಿಸಿನ ಸಿ ಐ ಡಿ ತಾಪೆಯವರು ಪತ್ತೆ ಹಚ್ಚಿದ್ದರು. ಅದರಲ್ಲಿ ರೂ 2,75,000ನ್ನು ಮೋಸಹೊಳಿಸಿದುದಕ್ಕೆ ಮಾತ್ರ ವಿಚಾರಣೆಗೊಳಪಡಿಸಲಾಗಿತ್ತು ಎಂದು ಮುಂದಿನ ವಿವರಣೆಯು ಸ್ಪೆಶಲ್ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟ್ ಶ್ರೀ ಟಿ ಶ್ರೀನಿವಾಸಸರವರಿಂದ ನಡೆಸಲಾಗಿತ್ತು. ಆಪೀಲಿನವರ ಪರವಾಗಿ ಶ್ರೀಗಳಾದ ಜಿ. ಸೋಮಶೇಖರರಾವ್ ಬಿ ಗಂಗಾಧರರಾವ್, ಪಿ ಜನಾರ್ಧನ ರಾವ್ ಮತ್ತು ಬಾಸ್ಕರರಾಯರೂ ಸರಕಾರದ ಪರವಾಗಿ ಸ್ಪೆಶಲ್ ಪಬ್ಲಿಕ್ ಪ್ರಾಸಿಕ್ಯೂಟರ್ ಶ್ರೀ ಕೆ ನಾರಾಯಣ ರೈಗಳೂ ವಾದಿಸಿದ್ದರು. ಸಿ ಐ ಡಿ ಸಬ್ ಇನ್ಸ್‌ಪೆಕ್ಟರ್ ಶ್ರೀ ಎನ್. ಎಸ್. ಮಾನೆಪಾಡಿಯವರು ಸಹಕರಿಸಿದ್ದರು

ಮೂಲ್ಕಿ—ಈ ಸರ್ಕಲಿನಿಂದ ಪಕ್ಷ ಜಿಲ್ಲಾ ಬೋರ್ಡಿಗೆ ಬಯಸುವುದರಿಂದ ಆರಿಸಲ್ಪಟ್ಟ ಕಾಂಗ್ರೆಸ್ ಪಕ್ಷದ ಶ್ರೀ ಬಿ ಆರ್ ಕಳೆರ್ಕರ ಮತ್ತು ಶ್ರೀಮತಿ ಮೇಬೆಲ್ ಡ್ರಿಟೊ ಅವರಿಗೆ ದಿಲ್ಲಿವ ಸಮಾಜ ಸೇವಾಸಂಸದಲ್ಲಿ ತಾ 7ರಲ್ಲು ಶ್ರೀ ಎನ್ ಎನ್ ಸುವರ್ಣ ಎಮ್. ಎಲ್ ಎ, ಆವರ ಅಧ್ಯಕ್ಷತೆಯಲ್ಲಿ ಸತ್ಕಾರ ಕೂಟವೊಂದು ಜರಗಿತು. ಈ ಸಮಾರಂಭಕ್ಕೆ ಡಾ। ಪಿ. ನಬರಾಜನ್, ಶ್ರೀ ಜೋನ್ ಸೀಯರ್ಸ್ ಮೊದಲಾದವರು ಚಿತ್ತೈಸಿದ್ದರು. ಡಾ। ಎಮ್ ರಾಯಪ್ಪ ಕಾಮತ್, ಜೆಡ್ ಮುಡಿ ಸುಬ್ಬ ಜೆಂಪ, ನಾಗೇಶ ಕೆಂಪೈ, ಕೆ ಶಂಕರುದ್ದೀನ್, ಡಾ ಎ ಸಿ ಸುವರ್ಣ ಮೊದಲಾದವರು ಶಾಶ್ವತೋಚಿತ ಮಾತುಗಳನ್ನಾಡಿದರು. ಡಾ। ನಬರಾಜನ್ ಮತ್ತು ಜೋನ್‌ಸೀಯರ್ಸ್ ಆವರು ಬ್ರಹ್ಮ ಶ್ರೀ ನಂರಾಯಣ ಗುರು ಸ್ವಾಮಿಯವರ ತತ್ವವಿಚಾರಗಳಲ್ಲಿ ಭಾಷಣ ಮಾಡಿದರು. ಎಡೆಪ್ಪಾಡಿಯ ಶ್ರೀ ಬಿ ಜಿ ದಾಸರೂ ಸ್ವಾಮಿ ಚಿಯವರ ತತ್ವವಿಚಾರಗಳಲ್ಲಿ ಮಾತಾಡಿದರು

ಬಂಟ್ವಳ—ಇಲ್ಲಿಯ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ಶ್ರೀ ರಾಮ ಭಜನಾ ಕಾರ್ಯವು ಕಳೆದ ತಾ 20ರಲ್ಲಿ ಸ್ಥಾಪನಾ ಉತ್ಸವಾಗಿ ಇದೇ ತಾ 10ರಲ್ಲು ವಿಶೇಷ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಉತ್ಸವಸ್ಪಾಗಿ ಕೊನೆಗೊಂಡಿತು

ಇನ್ನಂಜೆ—ಸ್ಥಳೀಯ ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಸ್ವಾಮಿ ಹ್ಯಾಸ್ಪಲಿನ ಆಧ್ಯಾತ್ಮಿಕ ಕಾರ್ಯಕ್ರಮದ ಸಲುವು ಹುಬ್ಬೊಕ್ಕೂರಿನಲ್ಲಿ ಶ್ರೀ ಎ ಶ್ಯಾಮರಾಯರ ಆಸ್ಪತ್ರೆಯಲ್ಲಿ ಜರುಗಿ ಚಾರ್ತಿ ಪರುಷದಲ್ಲಿ ಸಭೆ ವಿಧ್ಯಾರ್ಥಿ ಸಂಘವೊಂದನ್ನು ಸ್ಥಾಪಿಸಿ ಚೇಕಿನ್ನು ನಿರ್ಣಯವಾಯಿತು. ಸಂಘಕ್ಕೆ ಸದಸ್ಯರನ್ನು ಸೇರಿಸುವ ಬಗ್ಗೆ ತ್ವರಿತಲಿಕ ಕಮಿಟಿಯೊಂದು ರಚಿಸಲ್ಪಟ್ಟಿತು

ಆಲೂರು—ಜಿಲ್ಲಾ ಬೋರ್ಡು ಸದಸ್ಯ ಸ್ಥಾನಕ್ಕೆ ಕಾಂಗ್ರೆಸ್ ಪಕ್ಷದ ಮಾರಿಯಾಳು ರಾಗಿ ಆರಿಸಿ ಬಂದ ಶ್ರೀಗಳಾದ ವೈ ತಿಮ್ಮಪ್ಪ ಶೆಟ್ಟಿ, ಎಸ್ ಎಸ್ ಪರಮೇಶ್ವರಯ್ಯ ಇವರನ್ನು ಸ್ವಾಗತಿಸಿ ಅಭಿನಂದಿಸುವ ಸಭೆಯು ತಾ 8ರಲ್ಲು ಆಲೂರು ಕೇಂದ್ರದಲ್ಲಿ ಶ್ರೀ ವೈ ಮಂಜಯ್ಯ ಶೆಟ್ಟಿ, ಎಮ್ ಎಲ್ ಎ, ಆವರ ಅಧ್ಯಕ್ಷತೆಯಲ್ಲಿ ಜರಗಿತ್ತು. ಆರಂಭದಲ್ಲಿ ಮಾನ್ಯ ಅತಿಥಿಗಳೆಲ್ಲರೂ ಜ್ಯೋತಿ ಸಹಿತ ತಕ್ಕೂಡಿಸಮೆರವಣಿಗೆಯಲ್ಲಿ ಕರೆತರಿಸಲ್ಪಟ್ಟರು.

ನೆಹರೂ ಜಯಂತಿ—ಉತ್ಸವವು ತಾ 14ರಲ್ಲಿ ಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿ ಆಶ್ರಯದಲ್ಲಿ ಜರುಗಿತು. ಕೆ ಕೆ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ನಿಂದ ಸಾರ್ವಜನಿಕ ಸಭೆಯಲ್ಲಿ ಜರಗಿತು. ಸರ್ಕಲ್ ಕಾಂಗ್ರೆಸ್ ಕಮಿಟಿ ಉಪಾಧ್ಯಕ್ಷೆ ಶ್ರೀ ಎಟ್ ಕೆ ತಿಂಗಳಾಯನವರು ಸ್ವಾಗತ ಭಾಷಣ ಮಾಡಿದರು. ಶ್ರೀಯುತ ಎ ಶಂಕರ ಆಳ್ವ, ಎಸ್ ಎಸ್ ಪೊಳ್ಳ, ಕೆ ಆರ್ ಆಚಾರ್, ಶ್ರೀಮತಿ ಕಾಪಂಬರಿ ಹೆಬ್ಬೆ ಮೊದಲಾದವರು ಮಾತನಾಡಿದರು

NAVAYUGA WEEKLY

ADVERTISEMENT RATES

Display Advertisements — Rs 2/ 8 per column inch for contracts of 50 or more and Rs 3/- per column inch for casual advertisements

Classified Advertisements — As 8/ per line (minimum 8 lines).

For rates for advertising in colours and special position please write to
ADVERTISEMENT MANAGER,
'NAVAYUGA'
Post Box No 22, UDIPI, S K

BHUVANENDRA PRODUCTS LTD., KATAPADI, S. K.
ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ! ವೈದ್ಯರಿಗೆ ವಿಶ್ವಾಸ!!!
ಇವುಗಳಿಂದಲೇ ಭುವನೇಂದ್ರ ಔಷಧಿಗಳು
ಜನಪ್ರಿಯವಾಗಿರುವವು
ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು
ನಮ್ಮಲ್ಲಿ ತಯಾರಿಸಲ್ಪಡುತ್ತವೆ
ವಿವರಗಳಿಗೆ ಬರೆಯಿರಿ –
ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್ ಕಟಪಾಡಿ, ದ. ಕ.
ಡಿಪೊ – (1) ಉಡುಪಿ (2) ಮಂಗಳೂರು ಗಲ್ಲಿ, ಹುಬ್ಬಳ್ಳಿ.

ನಡೆಯುವ ಚಿತ್ರ
ಒಮ್ಮೆ ನೋಡಿದವರು ಹತ್ತು ಬಾರಿ ನೋಡದುತ್ತಾರೆ ನೋಡಿ ನೋಡಿ ನಕ್ಕು ನಗುತ್ತಾರೆ ಮತ್ತೂ ಮತ್ತೂ ಸಂತೋಷ ಪಡುತ್ತಾರೆ ಒಮ್ಮೆ, ಸಾರ್ವಸಮಯ ಹಾಸ್ಯಪೂರ್ಣ ಕನಿಷ್ಠ ಚಿತ್ರ
ಅಧಿಕಾರಿ (ಕನ್ನಡ)
ಪ್ರೇಂ ನಾಜೀರ್, ಪಂಕಜವಲ್ಲಿ, ಕುಸುಮಾ, ಪ ಎಂದಾದವರು
ಉಡುಪಿ ಶ್ರೀ ರಾಮಕೃಷ್ಣ ಥಿಯೇಟರ್ಸ್, ಲಿ.,
ಬರುವ ಚಿತ್ರ ಆರ್ ಸಾರ್
ಗುರುದತ್, ಶ್ಯಾಮಾ, ಜಗದೀಶ್‌ಚೇಟ್, ಕಿಶೆಲಾ, ವಿಷ್ಣುವರ್ಧನ, ಗುರುದತ್

ಮಂಗಳೂರು

ಬೊಂಬಾಯಿ ಮೇಯರರಿಗೆ ನಗರಸಭೆಯ ಮಾನಪತ್ರ— ದಿವಂಗತ ಸರ್ದಾರ್ ಪಟೇಲರ ಪುತ್ರರೂ ಬೊಂಬಾಯಿಯ ಮೇಯರರೂ ಆದ ಶ್ರೀ ರುಸ್ತುಂಭ್ರ ಪಟೇಲರು ತಾ. 13ರಲ್ಲು ಬೆಳಿಗ್ಗೆ ಬೊಂಬಾಯಿಯಿಂದ ಸುಂಗಳೂರಿಗೆ ಆಗಮಿಸಿದರು ವಿಮಾನ ನಿಲ್ದಾಣದಲ್ಲಿ ಜಿಲ್ಲಾ ಬೋರ್ಡು ಅಧ್ಯಕ್ಷ ಡಾ। ಕೆ. ಕೆ ಹೆಗ್ಡೆ, ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಡಾ।ಯು. ಪಿ. ಮುಲ್ಕಿ, ಕಾರ್ಯದರ್ಶಿ ಶ್ರೀ ಬಿ. ಬಿ. ಶೆಟ್ಟಿ, ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗ ಮೊದಲಾದವರು ಅವರಿಗೆ ಸ್ವಾಗತವಿತ್ತರು. ಮುಖ್ಯಮಂತ್ರಿ ಆನಂತರ ಕಣ್ಣಾನೂರಿಗೆ ಹೋಗಿ ನಿನ್ನೆ ದಿನ ತಾ. 14ರಲ್ಲು ಬೆಳಿಗ್ಗೆ ಮಂಗಳೂರಿಗೆ ಹಿಂತಿರುಗಿ ಬಂದರು.

ಮುನಿಸಿಪಲ್ ಆಫೀಸಿನಲ್ಲಿ ನಗರಸಭೆಯ ಪರವಾಗಿ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಶ್ರೀ ಪಟೇಲರಿಗೆ ಮಾನಪತ್ರ, ಪನ್ನು ಅರ್ಪಿಸಿದರು. ಸುಂಗಳೂರಿನ ಅನೇಕ ತರುಣ ತರುಣಿಯರು ಬೊಂಬಾಯಿಗೆ ಹೋಗಿ ನೆಲಸಿ ಅಲ್ಲಿ ತಮ್ಮ ಜೀವನ ನಿರ್ವಹಣೆ ಹಾಗೂ ಸೇವಾಕಾರ್ಯಗಳನ್ನು ಮಾಡಲು ಆಶ್ರಯ ಅವಕಾಶಗಳನ್ನು ಕಲ್ಪಿಸಿ ಕೊಟ್ಟ ಬೊಂಬಾಯಿ ನಗರದ ಪಿತೃಸಮಾನ ಪೋಷಣೆಯ ಕುರಿತು ಇತ್ಯಾದಿ ಮಾನಪತ್ರದಲ್ಲಿ ಹೇಳಲಾಗಿತ್ತು.

ಮಾನಪತ್ರಕ್ಕೆ ಮಾನ್ಯ ಅತಿಥಿಗಳು ಉತ್ತರವಿಯುತ್ತಾ, ಮಂಗಳೂರಿನ ಸೃಷ್ಟಿ ಸೌಂದರ್ಯವನ್ನು ನೋಡಿ ತುಂಬಾ ಸಂತೋಷವಾಯಿತು. ದೇಶದ ಜನತೆಯು ತನ್ನ ತೀರ್ದರೂಪರನ್ನು ಹೊರೆಯದಿರುವುದನ್ನು ಕಂಡು ಸಂತೋಷವಾಗಿದೆ. ಅಧಿಕಾರ ಸ್ವೀಕರಿಸಿದಂದಿನಿಂದ ಕೆಲವರು ನುರೆತರೂ ಜನತೆಯು ನೂತ್ರ ತನಗೆ ಸೇವೆ ಸಲ್ಲಿಸಿದವರನ್ನು ಎಂದೂ ಮರೆಯದು ಎಂದೆರು ಅವರು ಮುತ್ತೂ ಹೇಳಿದುದೇನೆಂದರೆ ಮಂಗಳೂರು ಜಿಲ್ಲೆಯವರು ಬೊಂಬಾಯಿಯಲ್ಲಿ ಜೀವನ ನಡೆಸುತ್ತಿದ್ದು ಪರಸ್ಪರ ಮೈತ್ರಿ ಭಾವದಿಂದ ಕೆಲವು ಧರ್ಮಾರ್ದ ವೈದ್ಯಕೀಯ ಸಂಸ್ಥೆಗಳನ್ನೂ ಸಮಾಜಸೇವಾ ಸಂಸ್ಥೆಗಳನ್ನೂ ಸ್ಥಾಪಿಸಿರುವುದು ಆಪರ ಪ್ರೀತಿ ಪೃತ್ಯವೆಂದು ಎತ್ತಿ ಹೇಳತಕ್ಕದ್ದಾಗಿದೆ. ಬೊಂಬಾಯಿಯಲ್ಲಿ ನಡೆಯುವಂತೆ ಮಂಗಳೂರಲ್ಲೂ ಸಮಾಜಹಿತ ಕಾರ್ಯಗಳನ್ನು ನಗರ ಸಭಾ ಸದಸ್ಯರು ಮತ್ತು ನಾಗರಿಕರು ಕೂಡಿ ಕೊಂಡು ಸಶ್ರಮದಿಂದ ಕೈಕೊಳ್ಳಬಹುದೆಂದು ಸೂಚಿಸಿದರು. ಕೊನೆಯಲ್ಲಿ ಪ್ರಧಾನ ನೆಪರುಗಳ ಗುಣಗಾನ ಮಾಡಿ, ಕಾಂಗ್ರೆಸಿನ ಧಾವೀ ಅಧ್ಯಕ್ಷರಾಗುವ ಶ್ರೀ ದೇಬಾರರು ಆ ಸ್ಥಾನಕ್ಕೆ ಸರ್ವತ್ರ ಯೋಗ್ಯರೆಂದು ಹೇಳಿದರು. ಮುಖ್ಯಾತ್ಮ ಶ್ರೀ ಪಟೇಲರು ವಿಮಾನ ಮೂಲಕ ಬೊಂಬಾಯಿಗೆ ಹಿಂತಿರಳಿದರು.

ಕಾಂಗ್ರೆಸ್ ಪ್ರತಿನಿಧಿಗಳ ಅವಿರೋಧ ಆಯ್ಕೆ— ದ. ಕ ಜಿಲ್ಲೆಯ 17 ಸರ್ಕಲುಗಳಿಂದ ಈ ಕೆಳಗಿನ ಮಹಾಶಯರು ಕಾಂಗ್ರೆಸ್ ಪ್ರತಿನಿಧಿಗಳಾಗಿ ಆರೋಧ ಆಯ್ಕೆ ಹೊಂದಿರುವರು. ಕುಂಜಾರುಗಿರಿ ಉತ್ತರ: ಶ್ರೀ ಗಳಾಪ ಬಿ. ಸುಬ್ಬಣ್ಣ ಶೆಟ್ಟಿ, ಕುಂದಾಪುರ ದಕ್ಷಿಣ: ಯು. ಶ್ರೀನಿವಾಸ ಮಲ್ಯ, ಬ್ರಹ್ಮಾವರ: ಎಸ್. ಎಸ್. ಡಿ. ಪಿಂಟೊ, ಉಡುಪಿ: ಟಿ. ಎ ಪೈ, ಕಟಪಾಡಿ: ಕೆ. ಮುದ್ದು ಸುವರ್ಣ, ಕಾರ್ಕಳ: ಕೆ. ಪರಾನಂದ ಹೆಗ್ಡೆ, ಮೂಡಬಿದ್ರೆ: ಎಸ್. ನಿರಂಜನ್ಯ, ಮೂಲ್ಕಿ: ಬಿ. ಆರ್. ಕರ್ಕೇರ, ಬಂಟ್ವಾಳ: ಬಿ ವೈಕುಂಠ ಬಾಳಿಗ, ಪಾಣೆಮಂಗಳೂರು: ಡಾ। ಪದ್ಮನಾಭ ಮಲ್ಯ, ಸುಂಗಳೂರು ಉತ್ತರ. ಜೋಆರ್ ಜೋಜರಾವ್, ಸುಂಗಳೂರು ದಕ್ಷಿಣ: ಕೆ. ವರದರಾಜ ಪ್ರಭು, ಉಪ್ಪಿನಂಗಡಿ: ಬಿ. ಬಾಲಕೃಷ್ಣ ರೈ, ಪುತ್ತೂರು: ಬಿ ವಿಠಲದಾಸ ಶೆಟ್ಟಿ, ಮಂಜೇಶ್ವರ: ಬಿ ಬಿ. ಶೆಟ್ಟಿ, ಕಾಸರಗೋಡು ಕೆ. ಪಿ. ಗಂಗಾಧರ ರೈ, ಹೊಸದುರ್ಗ, ಡಾ। ಬಿ. ಆಚ್ಯುತ ಪೈ.

ನೆರೆಪೀಡಿತರ ಸಹಾಯ ನಿಧಿಗೆ— ಈ ತನಕ 1091—15—7 ಜಮಾಯಾಗಿದ್ದು ರೂಪಾಯಿ 1000/- ಪನ್ನು ಳಉಸಲಾಗಿದೆ.

ಸಹಾಯಾರ್ಥ ಸೈತ್ಯ:— ಪ್ರಧಾನ ಮಂತ್ರಿಗಳ ಪ್ರವಾಪ ಪೀಡಿತರ ಸಹಾಯನಿಧಿಗಾಗಿ ಮಂಗಳೂರು ಪೌಲಳ್ ಆಪ್ತೆತ್ರೆಯ ನರ್ಸಸ್ ಕ್ಲಬ್ಬಿನವರು ತಾ. 6ರಲ್ಲು ರಾತ್ರಿ ನಾಟಕ ನೃತ್ಯಾದಿ ಪ್ರದರ್ಶನಗಳನ್ನಿತ್ತರು.

ಜಿಲ್ಲಾ ಬೋರ್ಡು ಚುನಾವಣಾ ರದ್ದತಿಗೆ ಅರ್ಜಿ:— ಸಂಸ್ಥೆ, ಕೋಟಿ, ಕಾರ್ಕಳ ಮತ್ತು ಮಂಗಳೂರುಪೌರಕಲಯ ಈ ಮೂವರ ಕ್ಷೇತ್ರಗಳಲ್ಲಿ ನಡೆದ ಜುನಾವಣಾ ರದ್ದತಿಯ ಬಗ್ಗೆ ಅರ್ಜಿ ಸಾಡಲಾಗಿದೆ ಎಂದು ಹೇಳಲಾಗಿದೆ.

ಆ. ಭಾ. ಸಹಕಾರಿ ವಿನಾಚರಣೆಯು—ತಾ. 6ರಲ್ಲು ದ. ಕ. ಜಿಲ್ಲಾ ಸಹಕಾರಿ ಅಭಿವೃದ್ಧಿ ಸಂಘ ಮತ್ತು ಸೆಂಟ್ರಲ್ ಬ್ಯಾಂಕಿನ ಪ್ರಮಖರ ಶ್ರೀ ಎಚ್. ನರಸಿಂಯನವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಆರ್. ಕೆ. ಪ್ರಭುಗಳು ಅಂತರ್ ರಾಷ್ಟ್ರೀಯ ಸಹಕಾರಿ ಸಂಘದ ಘೋಷಣೆಯನ್ನೋದಿದರು. ಈ ಸಭೆಗೆ ಶ್ರೀ ಮೊಳಹಳ್ಳಿ ಶಿವರಾಯರು ಆಗಮಿಸಿದ್ದರು.

ತೆರಿಗೆದಾರರ ಸಭೆ: ಮಂಗಳೂರು ಪುರಜನ ಸಂಘದ ಆಶ್ರಯದಲ್ಲಿ ತಾ 7ರಲ್ಲು ಮಿಷನ್ ಹ್ಯಸ್ಕೂಲಿನ ಪಠಾರದಲ್ಲಿ ತೆರಿಗೆ ದಾರರ ಸಭೆಯು ಶ್ರೀ ಕೆ. ಆರ್. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿ ತೆರಿಗೆ ನೀತಿಯಿಂದ ತೆರಿಗೇದಾರರಿಗಾದ ಸಂಕಷ್ಟಗಳನ್ನು ವಿಮರ್ಶಿಸಲಾಯಿತು.

ದ. ಕ. ಜಿಲ್ಲಾ ಅಂಚೆ ಮತ್ತು ತಂತೀಶಾಖೆಯ:— ಸ್ಕೌಟ್ಸ್-ಗೈಡ್ಸ್ ಉತ್ಸವವು ತಾ. 28ರಲ್ಲಿ ಪೋಲಿಸ್ ಪೆರೇಡ್ ಬಯಲಲ್ಲಿ ಶ್ರೀ. ಟಿ. ಎ. ಪೈ. ಎಸ್., ಎಲ್., ಎ; ಆನರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಶ್ರೀಮತಿ ಪ್ರೇಮಪೈಗಳು ಬಹುಮಾನ ವಿತರಣೆ ಮಾಡುವರು.

ಜಿಲ್ಲಾ ಬೋರ್ಡಿನ ಅಧ್ಯಕ್ಷರಾಗಿ
ಡಾ। ಕೆ. ಕೆ. ಹೆಗ್ಡೆಯವರ
ಅವಿರೋಧ ಆಯ್ಕೆ



ತಾ. 12ರಲ್ಲು ಆಪರಾಹ್ನ 3 ಗಂಟೆಗೆ ಜಿಲ್ಲಾ ಕಲೆಕ್ಟರ್ ಹಾಗೂ ಎಕ್ಸ್ ಒಫಿಸಿಯೊ ಪ್ರೆಸಿಡೆಂಟ್ ಶ್ರೀ ಎಮ್. ಜಿ ರಾಜಾರಾಮ್ ಅವರ ಅಧ್ಯಕ್ಷತೆಯಲ್ಲಿ ಪ್ರೆಸಿಡೆಂಟರ ಚುನಾವಣೆಗಾಗಿ ಜಿಲ್ಲಾ ಬೋರ್ಡ ನೂತನ ಸದಸ್ಯರ ಸಭೆಯು ನಡೆಯಿತು. ಪ್ರಮಾಣ ವಚನ ಸ್ವೀಕಾರವಾದ ನಂತರ ಜಿಲ್ಲಾ ಬೋರ್ಡ ಕಾರ್ಯದರ್ಶಿ ಶ್ರೀ ಕೆ. ಸಂಜೀವ ಶೆಟ್ಟರು ಅಧ್ಯಕ್ಷರ ಚುನಾವಣೆ ನೋಟೀಸನ್ನು, ನಿಯಮಗಳನ್ನೂ ಓದಿದರು. ಆ ಮೇರೆ ಶ್ರೀ ಬಿ. ಪುಂಜಯ್ಯ ಹೆಗ್ಡೆಯವರು ಡಾ। ಕೆ. ಕೆ. ಹೆಗ್ಡೆಯವರ ಹೆಸರನ್ನು ಅಧ್ಯಕ್ಷಸ್ಥಾನಕ್ಕೆ ಸೂಚಿಸಲು ಶ್ರೀ ಎಸ್. ಎಕ್ಸ್ ಡಿ. ಪಿಂಟೊ ಅವರು ಅನುಮೋದಿಸಿದರು. ಶ್ರೀ ಎನ್. ಜಿ. ಕಾಮತರು ಶ್ರೀ ಎ. ಕೃಷ್ಣ ಶೆಟ್ಟರ ಹೆಸರನ್ನು ಅಧ್ಯಕ್ಷ ಸ್ಥಾನಕ್ಕೆ ಸೂಚಿಸಿದುದನ್ನು ಶ್ರೀ ಹೆ. ಎಸ್. ಕೃಷ್ಣನ್ ನಂದಿಯಾವರು ಅನುಮೋದಿಸಲಾಗಿ ಮತದಾನದ ಸಿದ್ಧತೆ ನಡೆಯುತ್ತಿರುವಾಗ ಡಾ। ಕೆ. ಸಾಗಪ್ಪ ಅಳ್ವರೇ ಮೊದಲಾದವರ ಸೂಚನೆಯನ್ನು ಮನ್ನಿಸಿ ಶ್ರೀ ಕೃಷ್ಣ ಶೆಟ್ಟರು ತಮ್ಮ ಉಮೇದ್ವಾರಿಕೆಯನ್ನು ಹಿಂತೆಗೆದು ಕೊಂಡರು. ಬಳಿಕ ಸಭಾಧ್ಯಕ್ಷರು ಡಾ। ಕೆ. ಕೆ. ಹೆಗ್ಡೆಯವರು ಅನಿರೋಧವಾಗಿ ಅಧ್ಯಕ್ಷರಾದರೆಂದು ಜಾಹೀರುಗೊಳಿಸಿದರು ಹೊಸ ಅಧ್ಯಕ್ಷರನ್ನು ಅಭಿನಂದಿಸಿ ಜಿಲ್ಲಾ ಕಲೆಕ್ಟರು ಶ್ರೀ ಹೆಗ್ಡೆಯವರಿಗೆ ಅಧ್ಯಕ್ಷಪೀಠ ವಿಟ್ಟು ಕೊಟ್ಟರು. ಬಳಿಕ ಶ್ರೀಗಳಾದ ಕೆ. ಕೆ ಶೆಟ್ಟಿ, ಎಸ್. ಎಸ್. ಹೆಗ್ಡೆ, ಡಾ। ಕೆ. ಸಾಗಪ್ಪ ಅಳ್ವ, ಬಿ. ಪುಂಜಯ್ಯ ಹೆಗ್ಡೆ, ಎಸ್. ಜಿ. ಕಾಮತ್, ಎ. ಕೃಷ್ಣ ಶೆಟ್ಟಿ, ಶ್ರೀಮತಿ ಉಮಾದೇವಿ ತೊಪಲಾವರು ನೂತನ ಅಧ್ಯಕ್ಷರಿಗೆ ಅಭಿನಂದನೆಗಳನ್ನು ಸಲ್ಲಿಸಿದರು. ಜಿಲ್ಲಾ ಬೋರ್ಡಿನ ಶಿಬಂದಿಸರವಾಗಿ ಶ್ರೀ ಕೆ. ಸಂಜೀವ ಶೆಟ್ಟರು ಅಧ್ಯಕ್ಷರನ್ನು ಅಭಿನಂದಿಸಿದರು. ಜಿಲ್ಲೆಯ ಸೇವೆ ಮಾಡುವ ಕಾರ್ಯದಲ್ಲಿ ಸರ್ವರ ಸಹಕಾರವನ್ನು ಶ್ರೀ ಹೆಗ್ಡೆಯವರು ಕೋರಿ ಸರ್ವರಿಗೂ ಆಭಾರ ಸೂಚಿಸಿದರು.

ಬೆಳಿಗ್ಗೆ 9 ಗಂಟೆಗೆ ಜಿ ಬೋರ್ಡಿನ ಕಾಂಗ್ರೆಸ್ ಪಾರ್ಟಿಯಿಂದ ಅಧ್ಯಕ್ಷಸ್ಥಾನಕ್ಕೆ ಪುರಿಯಾಳನ್ನು ಜುನಾಯಿಸುವರೆ ಕಾಂಗ್ರೆಸ್ ಆ ವೀಸಿನಲ್ಲಿ ಡಾ। ಯು ಪಿ. ಮುಲ್ಕರ ಅಧ್ಯಕ್ಷತೆಯಲ್ಲಿ ಪಕ್ಷದ ಸದಸ್ಯರ ಸಭೆ ನಡೆದಿತ್ತು. ಡಾ। ಕೆ. ಕೆ. ಹೆಗ್ಡೆ, ಶ್ರೀಗಳಾದ ಎಸ್. ಎಸ್. ಡಿ ಪಿಂಟೊ, ಬಿ. ಪುಂಜಯ್ಯ ಹೆಗ್ಡೆ, ಕೆ. ಕೆ. ಶೆಟ್ಟಿ ಬೀಗೆ ನಾಲ್ವರು ಅಧ್ಯಕ್ಷ ಸ್ಥಾನಕ್ಕೆ ನಿರ್ಧಾಗಳಿಗಾಗಿದ್ದುದರಿಂದ ಸುತ್ತ ದಾಸ ನಡೆಯಬೇಕಾಯಿತು.

ಡಾ। ಕೆ. ಕೆ. ಹೆಗ್ಡೆ ಇವರು ಉಡುಪಿ ತಾಲೂಕಿನ ಹಿರಿಯದ್ದ ಸರ್ಕಲಿನಿಂದ ಜುನಾಯಿಸಿ ಹೋದ ಸದಸ್ಯರು. ಉಡುಪಿಯಲ್ಲಿ ಜೈ ಸ್ಕೂಲ್ ಶಿಕ್ಷಣ ಮುಗಿಸಿ ಮಂಗಳೂರು ಗವರ್ನಮೆಂಟ್ ಕಾಲೇಜಿನಲ್ಲಿ ಬ್ಯಾಸಂಗ ಮುಗಿಸಿ ಆನಂತರ ಮದ್ರಾಸ್ ಮೆಡಿಕಲ್ ಕಾಲೇಜಿನಲ್ಲಿ ವೈದ್ಯಕೀಯ ಶಿಕ್ಷಣ ಪೂರೈಸಿ ಎಂ. ಬಿ. ಬಿ. ಸ್ ಡಿಗ್ರಿ ಪಡೆದರು. ಸುರತ್ಕಲ್ 15 ವರ್ಷಗಳಿಂದ ಮಂಗಳೂರಿನಲ್ಲಿ ವೈದ್ಯಕೀಯ ವೃತ್ತಿ ನಡೆಸುತ್ತಿದ್ದಾರೆ. ಇದಿಗೆ ನಾನಾ ಸಾರ್ವಜನಿಕ ಕೆಲಸಗಳಲ್ಲಿ ಮಿಡಿದು ಜನಪ್ರಿಯತೆ ಗಳಿಸಿದವರು. ಸಜ್ಜನಿಕೆಯ ವ್ಯಕ್ತಿ ಸ್ವಾಂತಂತ್ರ್ಯ ಕಾಂಗ್ರೆಸಿಗರು ಹಿಂದೆಯೂ ಜೋರ್ಡು ಸದಸ್ಯರಾಗಿದ್ದು, ಸ್ಟಾಂಡಿಂಗ್ ಕಮಿಟಿಯ ಮೆಂಬರರಾಗಿದ್ದು, ಕೆಲಸ ಮಾಡಿ ಅನುಭವಸ್ಥರೆನ್ನಿಸಿದವರು. ಅಧ್ಯಕ್ಷರಾಗಿ, ಯೋಚಿಸಿಯಿತು, ಈ ಕಾರ್ಯ ನಿರ್ವಹಿಸುವ ಶಕ್ತಿ, ಸಾಮರ್ಥ್ಯ ವುಳ್ಳವರು.

ಇವರ ಅಧ್ಯಕ್ಷತೆಯನ್ನು, ಜೋರ್ಡು ತನ್ನ ಘನತೆಯನ್ನು ಕಾಯ್ದು ಕೊಂಡು, ಜಿಲ್ಲೆಯು ಸರ್ವಾಂಗೀಣ ಅಭಿವೃದ್ಧಿ ಯಾಗುವಂತಾಗಲೆಂದು ಜಿಜ್ಞಾಸೆ.

ಮೊದಲ ನುತಗಣನೆಯಲ್ಲಿ ಡಾ। ಕೆ. ಕೆ. ಹೆಗ್ಡೆ 9; ಶ್ರೀ ಎಸ್. ಎಕ್ಸ್ ಡಿ ಪಿಂಟೊ 8, ಶ್ರೀ ಬಿ. ಪುಂಜಯ್ಯ ಹೆಗ್ಡೆ 7; ಶ್ರೀ. ಕೆ. ಕೆ. ಶೆಟ್ಟಿ 3 ಮತಗಳು; ಶ್ರೀ ಕೆ. ಕೆ. ಶೆಟ್ಟರನ್ನು ಬಿಟ್ಟು ನಡೆದ ಎರಡನೆಯ ಮತ ಗಣನೆಯಲ್ಲಿ ಡಾ। ಕೆ. ಕೆ ಹೆಗ್ಡೆ 10; ಶ್ರೀ. ಎಸ್. ಎಕ್ಸ್ ಡಿ. ಪಿಂಟೊ 10; ಶ್ರೀ. ಬಿ. ಪುಂಜಯ್ಯ ಹೆಗ್ಡೆ 8 ಪುರಗಳು, ಶ್ರೀ. ಬಿ. ಪುಂಜಯ್ಯ ಹೆಗ್ಡೆಯರನ್ನು ಬಿಟ್ಟು ನಡೆದ ಮೂರನೆ ಮತಗಣನೆಯಲ್ಲಿ ಡಾ। ಕೆ. ಕೆ. ಹೆಗ್ಡೆ 15, ಶ್ರೀ. ಎಸ್. ಎಕ್ಸ್. ಡಿ. ಪಿಂಟೊ 11 ಮತಗಳು ಸಿಕ್ಕಿದುದೆಂದೂ ತಿಳಿದು ಬರುತ್ತದೆ. ಆಂತೂ ಡಾ। ಕೆ. ಕೆ. ಹೆಗ್ಡೆಯವರು ಅಧ್ಯಕ್ಷ ಚುನಾವಣೆಗೆ ಪಕ್ಷದ ಉಸ್ತುವಾರಿ ವಾಗಿ ಚುನಾಯಿತರಾದರು ಒಟ್ಟು 11 ಸದಸ್ಯರಿರುವ ಜೋರ್ಡಿನಲ್ಲಿ ಪಕ್ಷದ ಸದಸ್ಯ ಸಂಖ್ಯೆ 81 ಆಗಿರುತ್ತದೆ.

(ಉತ್ತಮ ಸಾರಸ್ವತ ಬ್ರಾಹ್ಮಣರ ಆಡಿಗೆ, ಶುಚಿ ರುಚಿಯಾದ ರೈಸ್‌ಪ್ಲೇಟ್)
ರುಚಿಕರವಾದ ಊಟ— ಹವೇತೇರ್ (Airy) ವಸತಿ,
ಎರಡು ಊಟ, ಕೋಟ್ (Cot) ಇತ್ಯಾದಿ ಸೌಕರ್ಯ.
ತಿಂಗಳೊಂದರ ರೂ. 52/- ಮಾತ್ರ.
ವಿಶೇಷ ಮಾಹಿತಿಗೆ ಶ್ರೀಯುಕ್ತ ವಿಚಾರಿಸಿರಿ.
ಸದುರು ಬೋರ್ಡಿಂಗ್ ಎಂಡ್ ಲೋಜಿಂಗ್
ಹಿಂದ್‌ಸೂತಾ ಸಿನೇಮದ ಸಮೀಪ, ದಾದರ್, ಮುಂಬಯಿ ೧೪.
ವ್ಯವಸ್ಥಾಪಕ: ವಿ ಯೆಸ್. ಪ್ರಭು.

ಕುಮಾರಿ ಬಿಲ್ಲೆಗಳು (ಸರಕಾರ ರಜಿಸ್ಟರ್ಡ್)
ಹದತಪ್ಪಿದ ಮತ್ತು ನಿಂತುಹೋದ ಮುಟ್ಟು
ದೋಷಗಳನ್ನು ಪರೋಟಿಗೆ ತರುವವು.
ಈ ಔಷಧ ಸೇವನೆಯಿಂದ ಯಾವ ಭಾದಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ 5/- ವೈರಿಂಗ್ ರೂ.8/-
Mrs. P. DEVEE, F. Ds (N. J) (ಸಿ. ಪಿ. ಪಿ. ಪ್ರತ್ಯೇಕ)
CALCUTTA—40 ಸ್ವಾಕಿನ್ಸರು: ಶಹಾಕಂಪೌಂಡ್, ಮಂಗಳೂರು

The S K A. Co-operative Marketing Society Ltd.
BUNDER, MANGALORE 1, S. K.
ತಾರೀಕು 15—11—54ನೇ ಸೋಮವಾರ
ಈ ಸಂಸ್ಥೆಯ ಆಫೀಸನ್ನು ನ್ಯೂವಾನ್ ರಸ್ತೆ ಬದಿಯ ಸ್ವಂತ ಕಟ್ಟಿದ
ಸಹಕಾರಿ ಮಹಲ್‌ಗೆ
ವರ್ಗಾಯಿಸಲಾಗುವುದು ಮತ್ತು ಅದಿಕೆ ನಂತರ ಎಲ್ಲಾ ಸ್ಟೂಲಿಂಗಳನ್ನು ವನಕೊಳ್ಳುವ ಮತ್ತು ವಿಕ್ರಯಿಸುವ ಎಲ್ಲಾ ವಹಿವಾಟುಗಳನ್ನು ಅಲ್ಲಿಯೇ ನಡೆಸಲಾಗುವುದರಿಂದ, ಈ ಸ್ಥಳ ಬದಲಾವಣೆಯನ್ನು ಎಲ್ಲರೂ ಗಮನದಲ್ಲಿಟ್ಟು ಸಹಕರಿಸಬೇಕಾಗಿ ವಿನಂತಿ.
ಸಿ ಲಕ್ಷ್ಮೀನಾರಾಯಣ ರಾವ್,
ಕಾರ್ಯದರ್ಶಿ,
ದ. ಕ. ಕೃಷಿಕರ ಮಾರಾಟ ಸಂಘ, ಲಿಮಿಟೆಡ್,
ಬಂದರ, ಮಂಗಳೂರು-1.

ಸ್ವೀಕಾರ - ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. —ಸಂ. ನ.)

ಬದುಕು ಬಂಗಾರ—

ಬರೆದವರು: ಶ್ರೀ ಕುವಾರಸ್ವಾಮಿ; ಪ್ರಕಾಶಕರು: ನವಯುಗ ಎಂಟರ್ ಪ್ರೈಸ್ ಲಿಮಿಟೆಡ್, ಉಡುಪಿ; ಬೆಲೆ: ಒಂದೂವರೆ ರೂಪಾಯಿ.

ಮನುಷ್ಯ ಪ್ರಕೃತಿಯ ಪ್ರಸಾದ ಬಲದಿಂದಲೇ ಬುದ್ಧಿಜೀವಿ; ವಿಚಾರಗಳ ಸುಂಧನಮಾಡಿ ವಿವೇಕದ ನವೀನತನವನ್ನು ತೆಗೆದು ಅನುಜಪಿಸುವ ಆರ್ಷತೆಯುಳ್ಳವನು. ಇಂತಹ ಯೋಗ್ಯತೆಯ ವರದಿಂದಲೇ ತನ್ನ ಬದುಕನ್ನು ಬಂಗಾರವಾಗಿ ಮಾಡುವ ಸಾಧ್ಯತೆ ಮನುಷ್ಯನಿಗೆ ಮಿಸಲಾಗಿದೆ. ಈ ದಾರಿಯಲ್ಲಿ ಪ್ರಪಂಚದ ಪ್ರಾಚೀನಾಧುನಿಕ ಮಹಪುರುಷರುಗಳೇಕರು ತನ್ನು ಅನುಪಮ ಸೇವೆ ಸಲ್ಲಿಸಿದ್ದಾರೆ. ಧಾರ್ಮಿಕ ಮಾರುಷರು, ತತ್ವಜ್ಞಾನಿಗಳು, ಸತ್ಯವೇತ್ತರು, ಋಷಿವರರು, ಕವಿಗಳು, ವಿಜ್ಞಾನಿಗಳು ಮೊದಲು ಹಲವು ಪಾದಿಗಳಿಂದ ಮಾನವ ಸುಂಧನಮಾಡಿ ಬದುಕನ್ನು ಬಂಗಾರವಾಗಿಸಲು ನೆರವಾಗಿದ್ದಾರೆ. ಪೌರಸ್ತ್ಯ ಪಾಶ್ಚಾತ್ಯ ಸಾಹಿತ್ಯ ರಾಶಿಯಲ್ಲಿಯೂ ಈ ಮಾರ್ಗದ ಗ್ರಂಥಗಳು ಮಲವಿವೆ. ಪೌರಸ್ತ್ಯ ಸಾಹಿತ್ಯ ಸಂಪ್ರದಾಯದಲ್ಲಿ ವೇದೋಪನಿಷತ್ತುಗಳು, ಕನ್ನಡ ಸಾಹಿತ್ಯಮಾರ್ಗದಲ್ಲಿ ರನ್ನ ರನ್ನದ ವಜನಗಳು, ಸರ್ವಜ್ಞನ ತ್ರಿಪದಿಗಳು ಇಂತಪ ಉತ್ತಮ ಸಂಪ್ರದಾಯ ಹಿಂದಿನಿಂದಲೇ ಬೆಳೆದು ಬಂದಿದೆ. ಆದರೆ ಅಧುನಿಕ ಕನ್ನಡ ಸಾಹಿತ್ಯದಲ್ಲಿ ಈ ಪಾದಿಯ ಹೊತ್ತಗೆಗಳು ತೀರಾ ಕದಿನು. ಶ್ರೀ ದಿನಾಕರರ 'ಅಂತರಾತ್ಮನಿಗೆ', ಶ್ರೀ ಶಿವರಾಮ ಕಾರಂತರ 'ಜಾತ್ರೆಯೇ ಬೆಳಕು' ಮತ್ತು ಶ್ರೀ ಅಲೂರರೆಂಥ ಮಾರುಷರೆಯರ ಜೀವನ ಸ್ಪೃತಿಗಳ ರೀತಿಯ ಕೆಲವೇ ಗ್ರಂಥಗನ್ನುಳಿದರೆ, ಅಧುನಿಕ ಕನ್ನಡದಲ್ಲಿ ಈ ಸಾಹಿತ್ಯ ಪರಂಪರೆ ಸಾಕಷ್ಟು ಬಂದಿಲ್ಲವೆಂಬ ಕೊರತೆಯನ್ನು ಕಾಣಬಹುದಾಗಿದೆ. ಶ್ರೀ ಕುವಾರ ಸ್ವಾಮಿಯವರು ತನ್ನ ಪ್ರಸ್ತುತಿಯ ಗ್ರಂಥವಾದರೂ ಈ ಹಾದಿಯ ನೂತನ ಗ್ರಂಥವನ್ನು ಕನ್ನಡ ಸಾಹಿತ್ಯಕ್ಕೆ ಒದಗಿಸಿದ ಬಗ್ಗೆ ನಿಜವಾಗಿಯೂ ಅಭಿನಂದನಾರ್ಹರು.

'ಬದುಕು ಬಂಗಾರ'ವೆಂಬೀ ಗ್ರಂಥದಲ್ಲಿ ನಾನಾ ವಿಚಾರಗಳ ವಿಮರ್ಶಾತ್ಮಕವಾದ ಮೂವತ್ತು ಪ್ರಬಂಧಗಳು ಸೇರಿವೆ. ಪ್ರತಿಯೊಂದು ಪ್ರಬಂಧಕ್ಕೂ ಒಂದು ಸೂಕ್ಷ್ಮ ಸುಂದರ ಕಥೆ ಕಳಶವಿಟ್ಟಂತಿದೆ. ಈ ಕಥೆಯ ಸುನ್ನುಡಿಯಿಂದ ಆರ್ಷಿತನಾದ ಓದುಗನು, ಮುಂದಿನ ವಿಚಾರ ಧಾರೆಯನ್ನಾದರೂ, ವಿಮರ್ಶಾತ್ಮಕ ವೀಕ್ಷಣೆಯನ್ನಾದರೂ ಕಥೆಯ ಒಟ್ಟಿಂದ ದಲೇ ಓದುವ ಒಟುಕ್ಕೆ ಸೇರುತ್ತಾನೆ. ಪ್ರತಿಯೊಂದು ಪ್ರಬಂಧದಲ್ಲಿಯೂ, ಎತ್ತಿಕೊಂಡ ವಿಚಾರಗಳ ವಿಮರ್ಶೆಗಳಿಗೆ ಉಪಾಪರೆಣಿಗಳು ಸಾಧ್ಯತೆ ಪೌರಸ್ತ್ಯ ವಿಚಾರಶೀಲ ಪರಂಪರೆಯಿಂದ ಒದಗುತ್ತಿವೆ ಯೇಸು, ಸೈಗಂಬರೆ, ಬುದ್ಧರಾದಿ ಜಗಸ್ಮರುಗಳೆ, ಗಾಂಧಿ, ನೆಪರು, ಚರ್ಚಿಲ್ ಪ್ರಭೃತಿ ರಾಜಕಾರಣೆಗಳೆ, ಯಾಜ್ಞವಲ್ಕ್ಯ, ಆರಿನಿಂದ, ಪ್ಲೇಟೋರಾದಿಯಾಗಿ ತತ್ವಜ್ಞಾನಿಗಳೆ, ಕಾಳಿದಾಸ, ಶೇಕ್ಸ್‌ಪೀಯರ್, ಕಾರಂತ ಮೊದಲಾಗಿ ಸಾಹಿತಿಗಳ ಕೃತಿ ತತ್ವಗಳ ನಿದರ್ಶನಗಳು ಓದುಗನಲ್ಲಿ ವಿಚಾರ ಧಾರೆಯನ್ನು ಪೆರತಗೊಳಿಸುತ್ತವೆ. ಜಟಿಲ ಸಮಸ್ಯೆಗಳನ್ನು ಶಿಥಿಲಶಿಥಿಲವಾಗಿ, ಸುಪ್ತಬಂಧಗಳನ್ನು ಲಘು ಲಘು ರೂಪವಾಗಿ, ಚಿಕ್ಕ ಪಾದರೂ ಹೊಕ್ಕವಾಗಿ, ಕಥಾತ್ಮಕ ಶೈಲಿಯಲ್ಲಿ ಈ ಸುಂದರ ಪ್ರಬಂಧಗಳನ್ನು ರಚಿಸಿ ಮಾಡಿದ ಶ್ರೀ. ಕುಮಾರಸ್ವಾಮಿಯವರ ಲೇಖನ ಶಕ್ತಿ ಕನ್ನಡದಲ್ಲಿ ಪ್ರೌಢತ್ವಾಪಹನೀಯವಾದ ಹೊಸ ಪಾದಿಯೆಂದು ಕಂದಿತವಾಗಿ ಒಪ್ಪಲೇ ಬೇಕು.

ವ್ಯಕ್ತಿ ರಾಷ್ಟ್ರದ ಸುಂದರ ಪ್ರತೀಕ; ಪ್ರತಿ ಒಬ್ಬ ವ್ಯಕ್ತಿಯ ಉನ್ನತ ಮಟ್ಟದಿಂದ ಆ ರಾಷ್ಟ್ರದ ಔನ್ನತ್ಯವನ್ನು ತಿಳಿಯಬಹುದು. ಆತ್ಮೋನ್ನತಿಯೇ ರಾಷ್ಟ್ರೋನ್ನತಿಯೆಂಬುದು ಸರ್ವಥಾ ಸತ್ಯ. ಆದ್ದರಿಂದಲೇ ಇಂದಿನ ವಿದ್ಯಾಕ್ಷೇತ್ರದ ಪದ್ಧತಿಯಲ್ಲಿ, ಸ್ವತಂತ್ರ ಭಾರತದ ಸರಕಾರವು ಪ್ರತಿಯೊಬ್ಬ ನಿವ್ಯಾರ್ಥಿಯಲ್ಲಿಯೂ ಮುಂದಾಳುತನದ ಆರ್ಷತೆ ಇರಬೇಕೆಂದು, ಆ ದಿಶೆಗೆ ತರಬೇತಿ ಕೊಡಬೇಕೆಂದು ಒತ್ತಾಯಿಸುತ್ತದೆ. ನಾಗರಿಕ ಶಿಕ್ಷಣದಂತಹ ಆಭ್ಯಾಸಗಳಿಗೆ, ಸಾಮೂಹಿಕ ಸೇವೆಯಂತಹ ಕಾರ್ಯಗಳಿಗೆ ಶಾಲೆ ಕಾಲೇಜುಗಳಲ್ಲಿ ಹೆಚ್ಚಿನ ಸುವತ್ತು ಬಂದಿದೆ. ಆಂತೆ ರಾಷ್ಟ್ರದ ಪ್ರಜೆ ನೈಯಕ್ತಿಕ ಆರ್ಜತೆಯನ್ನು ಹೆಚ್ಚಿಸಿಕೊಳ್ಳುವ ನಾನಾ ರೀತಿಗಳನ್ನು, ವಿಚಾರಗಳನ್ನು ಈ ಪ್ರಬಂಧಗಳು ಚರ್ಚಿಸುತ್ತವೆ. ಪ್ರತಿಯೊಬ್ಬನಿಗೂ ಆತ್ಮ ಗೌರವ ಬೇಕು, ಬಹುಮುಖ ಅಭಿರುಚಿಯ ಅಗತ್ಯ, ಸಮಾಜಸೇವೆಯಲ್ಲಿ ಆಸಕ್ತಿಯಿರಬೇಕು ಮುಂತಾದ ಪ್ರಯೋಜನ, ಗುರುತರ ಕಾರ್ಯಗಳೆಡೆಯಲ್ಲಿಯೂ ಲಘು ಮನಸ್ಕತೆ, ಸೌಂದರ್ಯದೃಷ್ಟಿ, ಚಟಗಳ ತ್ಯಾಗದ ತಪಸ್ಸು, ದುರ್ವ್ಯಸನದ ದುರದೃಷ್ಟ, ವ್ಯರ್ಥ ವಿಚಾರಗಳ ನರವು, ಫಲಾಫಲಗಳ ಆನಾಸಕ್ತಿಯಿಂದ ಕಾರ್ಯ ಪ್ರವೃತ್ತಿ, ಸಾಂಘಿಕ ಜೀವನ, ದುಃಖಿಗಳ ಮೇಲೆ ಸಹಾನುಭೂತಿ, ಸ್ನೇಹ ಜೀವನ, ಲೋಕಜ್ಞಾನದೆ, ಹಿರಿಕಿರಿಯರ ಗುಣ ಶೀಲಗಳು, ಜೀವನದ ನೂತನ ಆದರ್ಶ, ಬದುಕಿನ ಅರ್ಥ ಇವೇ ಮೊದಲಾದ ವ್ಯಕ್ತಿ ಜೀವನದ ಪಾಡ್ಯೂ ಪಗಳನ್ನು ಈ ಪ್ರಬಂಧ ರಾಶಿಗಳಲ್ಲಿ ಶ್ರೀ ಕುಮಾರಸ್ವಾಮಿಯವರು ಓದುಗರ ಮುಂದಿಟ್ಟಿದ್ದಾರೆ. ಮನುಷ್ಯನು ವಿಚಾರನಂತನಾಗಿ ವಿವೇಕಯುತನಾಗಿ, ಗಾರವಾನ್ವಿತನಾಗಿ, ಬದುಕನ್ನು ಬಂಗಾರವಾಗಿ ಮಾಡುವ ವಿವಿಧ ಮುಖಗಳನ್ನು ಅವರು ತೋರಿಸಿರುವರು.

ನೂತನವೂ ಸ್ವಾರಸ್ಯಪೂರ್ಣವೂ ಆದೀ ಗ್ರಂಥಕ್ಕೆ ಶ್ರೀ ಕು ಶಿ. ಹರಿದಾಸ ಭಟ್ಟರು ಒಂದು ಸುಂದರ ಪ್ರಸ್ತಾವನೆಯನ್ನು ಬರೆದು ಕೃತಿಯ ಮತ್ತು ಕೃತಿಕಾರರ ಪರಿಚಯ ಮಾಡಿಸಿದ್ದಾರೆ. ಕೆಲವು ಕಡೆಗಳಲ್ಲಿ ವೈಲಿಯ ವೈಧಿಲ್ಯ, ಭಾಷಾ ದಾರಿಲ್ಯಗಳು ಕಂಡುಬಂದರೂ ಲೇಖಕರ ಪ್ರಥಮ ಪ್ರಯತ್ನವಾದುದರಿಂದ, ಇಂತಹ ನೂತನ ಗ್ರಂಥವೊಂದನ್ನು ಕನ್ನಡ ಸಾಹಿತ್ಯಕ್ಕೆ ಒದಗಿಸಿದ ಶ್ರೀ ಕುಮಾರ ಸ್ವಾಮಿಯವರ ಪ್ರಯತ್ನದಲ್ಲಿ ಆ ಲೋಪದೋಷಗಳು ತೀರಾ ಅಗಣ್ಯವಾಗಿವೆ. ಬೆಲವಾರು ಶ್ರೇಷ್ಠ ಗ್ರಂಥಗಳನ್ನು ಓದಿ ಜೀರ್ಣಿಸಿಕೊಂಡ ಲೇಖಕರ ಬುದ್ಧಿ ಗುಣವು ಇದರ ಪ್ರತಿಯೊಂದು ಪ್ರಬಂಧದಲ್ಲಿಯೂ ಒಡಮೂಡಿರುವುದು. ಆದರೊಂದಿಗೆ ತನ್ನದೇ ರೀತಿಯ ನೂತನ ವಾದವನ್ನು ಮುಂದೊಡ್ಡುವ ಸಫಲತೆಯೂ ಇವರಿಗೆ ಸಿದ್ಧಿಸಿದೆ. ಇಂತಪ ನಿರಂತರ ಆಭ್ಯಾಸ, ಪ್ರಯತ್ನಗಳ ಪರಿಣಾಮತೆಯಿಂದ ಕನ್ನಡಕ್ಕೆ ಇವರಿಂದ ಇನ್ನಷ್ಟು ಹೆಚ್ಚಿನ ಕೃತಿರತ್ನಗಳು ಒದಗುವಂತಾಗಲೆಂದು ಹಾರೈಸುತ್ತೇನೆ.

—ಕಯ್ಯಾರ.

ಮೊದ್ದು ಮಗು—

ಬರೆದವರು: ಪವಗಿರಿನಂದ. ಪ್ರಕಾಶಕರು: ವಿವೇಕ ಸಾಹಿತ್ಯ ಮಾರಿ, ಸುಂಗಳೂರು ೪. ಬೆಲೆ. ರೂ. ೮—೦೩—೦.

"ನವಗಿರಿನಂದ" ಎಂಬ ಅಂಕಿತ ನಾಮದಿಂದ ಶ್ರೀ ಸುಂದರ ಬಟ್ಟು ರಂಗರಾಯರು ಅನೇಕ ಕಾದಂಬರಿಗಳನ್ನು ಬರೆದು, ಹೆಸರು ಗಳಿಸಿದ್ದಾರೆ. ಅವರ "ಮೊದ್ದು ಮಗು" ಎಂಬ ಈ ಕೃತಿಯನ್ನು ಪ್ರಕಾರಕರು "ಹೊಸ ಪಾದಂಬರಿಯ ಕಾದಂಬರಿ" ಎಂದು ಘೋಷಿಸಿದ್ದಾರೆ. ಇದರ ಔಚಿತ್ಯ ನುಾತ್ರ ನಮಗೆ ಮನವರಿಕೆಯಾಗುವುದಿಲ್ಲ. ಇವನ್ನು ಕಾದಂಬರಿಯ ಸುಲಿಗೆ ಸೇರಿಸುವುದೇ ಸರಿ ಕಾಣುವುದಿಲ್ಲ -ಇನ್ನು ಹೊಸ ಮಾದರಿ ಹೇಗಾದೀತೊ ತಿಳಿಯದು. ಇಲ್ಲಿ ಒಬ್ಬ ವ್ಯಕ್ತಿಯ ಕಥೆಗೆ ಪ್ರಾಮುಖ್ಯತೆಯನ್ನು ಕೊಟ್ಟು ಚಿತ್ರಿಸದೆ, ಹಿನ್ನೆಲೆಯ ಅನೇಕ ಪಾತ್ರಗಳಿಗೂ ಸನ್ನಿವೇಶಗಳಿಗೂ ಮಹತ್ವವನ್ನು ಕೊಟ್ಟು, ವರ್ಣಿಸಿದ್ದು ಹೊಸ ಮಾದರಿ ಇದೇ ಆಗಿದೆಯೊ ಏನೊ— ಆದರೆ ನಿಜವಾಗಿ "ನುುಗಿನಿಂತ ಮೂಗುತಿ ಭಾರ" ಎಂಬ ಮಾತನ್ನೆ ಈ ರೀತಿ ನೆನಪಿಗೆ ತಂದು ಕೊಡುತ್ತದೆ. ತಿಮ್ಮನೆಂಬ ಹುಡುಗನ ಬಾಲ್ಯ ಜೀವನವನ್ನು ವರ್ಣಿಸಲು ಪ್ರಯತ್ನಿಸುವಾಗ ಲೇಖಕರು ಬೇಕಾಗಿಯೋ ಬೇಡಾಗಿಯೋ ಆ ವನ ಜೀವನವಲ್ಲಿ ಸುಳಿದು ಹೋದ ವ್ಯಕ್ತಿಗಳ ಇತಿಹಾಸದ ಬಣ್ಣನೆ ಮಾಡುತ್ತಾರೆ. ನಿಜ ಹೇಳಬೇಕೆಂದರೆ ಹೆಸರನ್ನು ಮಾತ್ರ ಉಲ್ಲೇಖಿಸಿದರೆ ಸಾಲಬಹುದಾಗಿದ್ದಲ್ಲಿ ಕೆಲವು ಅಧ್ಯಾಯಗಳನ್ನೆ ತುರುಕಿಸಿರುವುದುಂಟು. ಓದುಗರ ಮಟ್ಟಿಗೆಯಸೋರಂಜನೆಗೊಳಿಸುವಫಟನೆಗಳು ಇವಾಗಿರಬಹುದು— ಆದರೆ "ಕಾದಂಬರಿ" ಯ ಸಫಲತೆಗೆ ಅವುಗಳಿಂದ ಪೋಷಣೆ ದೊರೆತಿಲ್ಲ ಕತೆಯ ಓಟಕ್ಕೆ ಆತಂಕವಾದಂತೆ ಅನಿಸುತ್ತದೆ. ಇದನ್ನು ಓದಿ ಮುಗಿಸಿದ ಬಳಿಕ, ತಿಮ್ಮನ ಬಾಲ್ಯ ಜೀವನದ ವಿಷಯದಲ್ಲಿ ಯಾವ ರೀತಿಯ ಆಘಾತಾಯವೂ ಚಿರಸ್ಥಾಯಿಯಾಗಿ ಉಳಿಯುವುದಿಲ್ಲ. ತಂದೆಯ ಅಕಸ್ಮಿಕ ಮರಣ ಮತ್ತು ಬಡತನದಿಂದ ತಿಮ್ಮನು ಹೋಟೆಲ ಮಾಣಿಯಾಗಬೇಕಾಯಿತು ಎಂಬ ಸಹಾನುಭೂತಿ ಹುಟ್ಟಿದರೂ ಅದು ಮಾಮೂಲಿನ ಜಾತಿಗೆ ಸೇರಿತೆ ಹೊರತು, ಹಾರ್ದಿಕ ವಿರಲಾರದು. ಕಲಾತ್ಮಕಚಿತ್ರಣದ ಅಭಾವವೇ ಇದಕ್ಕೆ ಕಾರಣ. ತುಳುನಾಡಿನ "ದೇಸಿ" ಪದಗಳನ್ನು ಲೇಖಕರು ಜಾಣತನದಿಂದ ಪ್ರಯೋಗಿಸಿದ್ದಾರೆ; ಆದರೆ ಕೆಲವೆಡೆ ತುಳು ಮಾತನ್ನು ಸಂಭಾಷಣೆಗೆ ಬಳಸಿಕೊಂಡದ್ದು ಅಷ್ಟು ಸೊಗಯಿಸಿಲ್ಲ. ಮೇಲಿನ ಕೆಲವು ನ್ಯೂನತೆಗಳನ್ನು ಬಿಟ್ಟರೆ, ಮಾತಿನ ಮೋಡಿ, ಶೈಲಿಯ ಸೌಂದರ್ಯ ಇತ್ಯಾದಿಗಳು ಮೆಚ್ಚುಗೆ ಗಳಿಸುತ್ತವೆ; ಸನ್ನಿವೇಶಗಳನ್ನು ಸರಿಯಿಯಕೊಂಡಿರುವಂತೆ ಒಂದರೊಡನೆ ಒಂದಾಗಿ ಜೋಡಿಸಿರುವುದರಲ್ಲೂ ಕುಶಲತೆ ಎದ್ದು ಕಾಣುತ್ತದೆ. ಪುಸ್ತಕದ ಬೆಲೆ ಹೆಚ್ಚಲ್ಲ, ಆದರೆ ಆಸ್ಪ ಚೆನ್ನಾಗಿಲ್ಲದ ಮುಖ ಪುಟದ ಚಿತ್ರಕ್ಕೂ ಕಥಾ ವಸ್ತುವಿಗೂ ಇರುವ ಸಂಬಂಧ ಗೊತ್ತಾಗುವುದಿಲ್ಲ.

ಮನೆ ತುಂಬಿದ ಬೆಳಕು—

ಬರೆದವರು: ಸಿದ್ದಣ್ಣ ಮಸಳಿ. ಪ್ರಕಾಶಕರು: ಪ್ರತಿಭಾ ಗ್ರಂಥ ಮಾಲೆ, ಧಾರವಾಡ. ಬೆಲೆ: ರೂ. ೦—೧೨—೦.

ಗೆಳೆಯ ರಾಮಚಂದ್ರರೊಬ್ಬರನ್ನು ಹೊರತು ಪಡಿಸಿದವರೆ ಸಿದ್ದಣ್ಣನವರೆನ್ನು ಜೀಗ ವ್ಯಾತನಾಮರಾದ ಇನ್ನೊಬ್ಬ ಕವಿ ಕನ್ನಡದಲ್ಲಿ ಸಿಕ್ಕುವುದಿಲ್ಲ—ಎಂಬುದಾಗಿ ಈ ಕವನ ಸಂಕಲನಕ್ಕೆ ಪರಿಚಯವನ್ನು ಮಾಡಿಕೊಡುತ್ತಾ ಶ್ರೀ ಬಸವರಾಜ ಕಟ್ಟೀಮನಿಯವರು ಹೇಳಿದ್ದಾರೆ. ಕನ್ನಡದಲ್ಲಿ ಹೊಸ ಕವಿಗಳು ವಿರಳವಾಗಿಯೇ ಹುಟ್ಟುವರೆನೊ ಎಂದುಕೊಂಡಿರುವಾಗ ಸಿದ್ದಣ್ಣನವರು ನನ್ನ ಮಾರ್ಗವನ್ನೂ ಸ್ವಾತಂತ್ರ್ಯದ ಪದ್ಧತಿಯನ್ನೂ ಅನುಸರಿಸಿ ಕೆಲವು ಒಳ್ಳೆಯ ಕವಿತೆಗಳನ್ನು ಬರೆದಿದ್ದಾರೆ. ಅವರ ಕೆಲವು ಕವಿತೆಗಳು ಬಹಳ ಸರಳವಾಗಿವೆ; ಪ್ರಾಸ ಬದ್ಧವಾಗಿವೆ. ಉದಾಹರಣೆಗೆ—

ಕಣ್ಣು ಅರಳಿದೆ ಹೆರಳು ಸಡಿಲಿವೆ
ಸೆರಗು ಜಾರಿದೆ ತೋರಿದೆ
ಜೀವ ಜೀವದಿ ಜೀನ ಪೆಸನಪಿ
ಕರಿಳಿ ಕರುಳಲಿ ಕರಗಿದೆ
(ಕಾವ್ಯಪೂರ್ಣ)

ಹಗಲು ಮನಸಿನಲಿ ಇರುಳು ಕನಸಿನಲಿ
ಚಿತ್ರ ನೂರು ನೂರು
ಮುಗಿಲ ತೀರಾನಲಿ ತೀಲಿ ಬಂದಿರಲು
ಕಣ್ಣು ತಂಬ ನೀರು
(ಹೂವು ಪಣ್ಣು ಬಿಡಲಿ)

—ಇಲ್ಲಿ ಭಾವಾಂಶಕ್ಕಿಂತಲೂ ಗೀತಾಂಶಕ್ಕೆ ಹೆಚ್ಚಿನ ಪ್ರಾಮುಖ್ಯತೆ ದೊರೆತಿರುವುದನ್ನು ಕಾಣುತ್ತೇವೆ. ಸೃದಯ ಸ್ಪಂದನವನ್ನು ಮಾಡಬಲ್ಲ ಶಕ್ತಿಯನ್ನೊಳಗೊಂಡ ಭಾವ ರಾಗಗಳನ್ನೂ ಅವರು ಕೆಲವೆಡೆ ವ್ಯಕ್ತಗೊಳಿಸುತ್ತಾರೆ. ಉದಾಹರಣೆಗೆ—

ಕರುಳ ತಂಪಿಗೆ ಬೆದಲು ನಸುಬೆ ತಾಕಿದ
ರೂನು
ನುನಿಸಿನೊಳ ಮರೆಯಲ್ಲಿ ಏನೊ ತಾನ
(ದೀಪದಾನ)

ಪಕಳೆ ಪಕಳೆಯ ಬಿಡಿಸಿ ಮಾಧುರ್ಯ
ಹೊರ ಸೂಸಿ
ತುಂಬಿ ಬದುಕುವ ಜೀವನಕ್ಲಿ ಸಾವು
(ಮಧುವನದ ಮಂದಾರ)

ನನ್ನ ಕಣ್ಣಂಚಿನಲಿ ಹರಿವ ಗಂಗಾ
ಯಮುನೆ
ಕೆಳಗಿನೆಪಿನುಡಿನಲಿ ಸಂಗಮಿಸಲಿ
(ಆತಿಥಿಗೆ)

ಮೇಲಿನ ಮೂರುಗಳ ಹಿಂದಿನ ಉದಾರ ಮನೋಭಾವವೂ ಶಬ್ದ ಬಂಧದ ರಸವ್ಯಂಜಕತೆಯೂ ಮೆಚ್ಚತಕ್ಕದ್ದು. ಸಿದ್ದಣ್ಣನವರು ವಾಸ್ತವಿಕತೆಗೂ ಆದರ್ಶಕ್ಕೂ ಸಮನ್ವಯದ ಸೇತುವೆ ರಚಿಸಲು ಹೋಗುವುದಿಲ್ಲ—ಅವರೆ ಇವರೆಡರ ಚಿತ್ರವನ್ನೂ ನಮ್ಮ ಕಣ್ಣ ಮುಂದೆ ಬಿಂಬಿಸಲು ಮಾತ್ರ ಮರೆಯುವುದಿಲ್ಲ. "ಮೂಜಿಗಲ್ಲನು ಕಂಡು ಕಾಲನೆತ್ತುವ ಜಾತಿ, ನೂರು ಶತಮಾನಗಳ ಇದುವೆ ನೀತಿ" (ಗಂಡು—ಹೆಣ್ಣು) ಎಂಬ ವಿಡಂಬನೆ, "ದೈವ ಕರೆದೊಯ್ದರೂ ನಾವು ಹೋಗಲೆ ಬೇಕು, ನಂಜಿದ್ದರೂ ಅದನ್ನು ಕುಡಿಯ ಬೇಕು" (ಧಾರವಾಡದ ತಾಯಿ) ಎಂಬ ಆದೃಷ್ಟವಾದ, "ಹಿಂದಾ ನುದರ ಕಡೆಗೆ ಪರಿದೂಡಿ ಹೋಗುವಮು ನನ್ನೆ ಬಾಳಿನ ನಿತ್ಯ ಮಂತ್ರವಿರಲಿ!" (ಒಳದನಿ) ಎಂಬ ಆದರ್ಶ, "ಬರುತಿರಲಿ ಬರದಿರಲಿ ಕಲಿಸಬೇಕು, ಕಲಿಸದಿದ್ದರೆ ಜೀಗೆ ಸಾಗಬೇಕು (ಥಣ್ ಥಣಾ...ಥಣ್) ಎಂಬ ವಾಸ್ತವ ಚಿತ್ರ ಅವರ ಕವಿತೆಗಳಲ್ಲಿ ಕಾಣ ಸಿಗುತ್ತಿದ್ದು ಬ್ಲಂಪ್ಟ ನುಯ ಪ್ರಪಂಚದ ದರ್ಶನ ನವಾಗಾಗುತ್ತದೆ. "ಚಚದ ಜೀನು", "ಬೆಳುದಿಂಗಳ ಮಳೆ" "ದೇಪದಂಗಡಿ", "ಕಾಮು ಕಡಲು" ನುಂತಾದ ಪದಪ್ರಯೋಗಗಳು ಕಾವ್ಯ ಸಿದ್ಧಿಯ ಲಕ್ಷಣಗಳನ್ನು ಹೊರಗೆಡವುತ್ತವೆ. ಆದರೆ ಸಿದ್ದಣ್ಣನವರು ಸಾಧನೆಯ ಪಂಥವನ್ನು ಇನ್ನೂ ಪೂರಿಲ್ಲ—ಅವರ ಭಾವನೆಗಳಲ್ಲಿ ಪವ, ಮಾಧುರ್ಯ, ಸಂವೇದನೆ ಇನ್ನಷ್ಟು ಪುಡಿಯಬೇಕು—"ಮನೆ ತುಂಬಿದ ಬೆಳಕು" ಹಾಗಾಗುವ ಪಭ ಸೂಚನೆಯನ್ನು ಕೊಡುತ್ತದೆ.





ನಾಟಿಕ ಸಾಮಾನುಗಳು

ಅತೀ ಸುಲಭ ಬೆಲೆಗೆ ತರಹೆವಾರು ನಾಟಿಕ ಸಾಮಾನುಗಳು ಉಪಯೋಗಿಸಲು ತೊರೆಯುತ್ತಿವೆ. ನಟ ನಟಿಯರಿಗೆ ಬೇಕಾಗುವ ಉದ್ದ ಕೂದಲು, ತೋಪನ್, ಖಡ್ಗ, ಧನುಸ್ಸು ಇತ್ಯಾದಿ ಇತ್ಯಾದಿ ರುಜು ಆಗಿ ಸದಾ ಸಿದ್ಧವಿವೆ. ಬೆಲೆಯ ಪಟ್ಟಿಗಾಗಿ ಸ್ಪಷ್ಟ ವಿಳಾಸದೊಂದಿಗೆ ಬರೆಯಿರಿ.

DHARAMSHI MULGI DRESSWALLA
132 C, Bhagat wadi Bhuleshwar Road,
BOMBAY—2

ಉಕ್ಕು—ಔದ್ಯೋಗಿಕ ಪ್ರಗತಿಯ ಅಡಿಗಲ್ಲು

(೨ನೇ ಪುಟದಿಂದ)

ಅತ್ಯಾಧುನಿಕ ತಂತ್ರಗಳಿಗೆ ಪ್ರೋತ್ಸಾಹವನ್ನು ಕೊಡುವುದು ಇಷ್ಟವೆನಿಸುತ್ತದೆ. ಟಾಟಾರವರ ಎರಡೂ ಶುದ್ಧಿ ಗೃಹಗಳನ್ನು ಬಿಟ್ಟರೆ ಬೇರೆ ಮೂರನ್ನು ಖಾಸಗಿ ಸಂಸ್ಥೆಗಳು ಇಷ್ಟರಲ್ಲಿಯೇ ಕಟ್ಟುತ್ತವೆ ಎಂದು ಕೇಳುತ್ತೇನೆ. ಇಂಥ ಶುದ್ಧಿ ಗೃಹಗಳು ತಿಂಗಳಿಗೆ ೩೦೦೦೦ ಟನ್ನುಗಳಷ್ಟಾದರೂ ಕಲ್ಲಿದ್ದಲನ್ನು ಬಳಸುತ್ತಿದ್ದರೆ, ಅವುಗಳು ಲಾಭದಾಯಕವಾಗಿ ಕೆಲಸಮಾಡಬಹುದು. ದುರ್ದೈವದಿಂದ ಎಳೆಂಟು ಗೃಹಗಳನ್ನು ಬಿಟ್ಟರೆ, ಉಳಿದವು ೨೦೦೦ ಟನ್ನುಗಳಷ್ಟು ಕಲ್ಲಿದ್ದಲನ್ನೂ ಈಗ ಬಳಸುತ್ತಿಲ್ಲ.

ಇದನ್ನು ಸುಧಾರಿಸಲು ಸರಕಾರವು ಯೋಗ್ಯ ಧನಸಹಾಯವನ್ನು ನೀಡಬೇಕು ಈಗಿನ ಶುದ್ಧಿ ಗೃಹಗಳು ಜೆಟ್ಟು ಉತ್ಪಾದನೆ ಮಾಡುವಂತೆ ಪ್ರೋತ್ಸಾಹವನ್ನು ಕೊಡಬೇಕು, ಲಾಭದಾಯಕ ರೀತಿಯಲ್ಲಿ ಕೆಲಸ ಮಾಡದ ಶುದ್ಧಿ ಗೃಹಗಳೆಲ್ಲ ಪರ್ಸ್ಪರ ಸೇರ್ಪಡೆ ಹೊಂದುವ ಬಗೆಯನ್ನು ವಿಚಾರಿಸಬೇಕು. ತಾಂತ್ರಿಕರ ನೆರವಿನಿಂದ ಇವೆಲ್ಲ ಅಂಶಗಳನ್ನು ವಿಚಾರಿಸಿದರೆ ಅದರಿಂದ ಪ್ರಯೋಜನವಾಗುವುದು ನಿಶ್ಚಯ. ಇದರಂತೆ, ಉಕ್ಕಿನ ಕಾರ್ಖಾನೆಗಳ ರಚನೆಯಲ್ಲಿ ಬೇಕಾಗುವ ವಿಶೇಷ ನಮೂನೆಯ ಇಟ್ಟಿಗೆಗಳನ್ನು ತಯಾರಿಸುವುದಕ್ಕೂ ಸರಕಾರ ಈಗಿಂದೀಗ ಪ್ರೋತ್ಸಾಹವನ್ನು ನೀಡಬೇಕು. ಸಾವಿರಗಟ್ಟಲೆಯಲ್ಲಿ ಬೇಕಾಗುವ ಇಟ್ಟಿಗೆಗಳನ್ನು ನಾವು ವಿದೇಶಗಳಿಂದ ತರಿಸಿಕೊಳ್ಳುತ್ತಾ ಹೋದರೆ, ಏನು ಸುಖ? ಮತ್ತೆಂದು ಅಂಶವೆಂದರೆ ಕಲ್ಲಿದ್ದಲಿನ ಗ್ಯಾಸನ್ನು ಉಪಯೋಗಿಸುವ ಬದಲು ಟಾಟಾರವರಂತೆ ಎಣ್ಣೆಯನ್ನು ಬಳಸುವುದು. ಮೈಸೂರಿನಲ್ಲಿರುವ ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ಈಚೆಗೆ ಆಗ್ಗದಲ್ಲಿ ಸಿಗುವ ವಿದ್ಯುಚ್ಛಕ್ತಿಯ ಪ್ರಯೋಜನವನ್ನು ಪಡೆದು ವಿಶೇಷ ಮಾದರಿಯ ಕುಲುಮೆಯನ್ನು ಸ್ಥಾಪಿಸಿ, ಕಲ್ಲಿದ್ದಲಿನ ಬಳಕೆಯನ್ನು ಅರ್ಧದಷ್ಟು ತಗ್ಗಿಸಿದ್ದಾರೆ. ಆದರೆ ಉಳಿದೆಡೆ ವಿದ್ಯುಚ್ಛಕ್ತಿ ಮೈಸೂರಿನಲ್ಲಿ ಸಿಕ್ಕಷ್ಟು ಆಗ್ಗದಲ್ಲಿ ದೊರಕುವ ಸಂಭವವಿಲ್ಲವಾದುದರಿಂದ, ಟಾಟಾರವರ ನೋತನ ಪ್ರಯೋಗದ ಲಾಭವನ್ನು ಗುರುತಿಸುವುದು ಸೋಲು.

ಚಿತ್ತರಂಜನದಲ್ಲಿ ರೈಲ್ವೆ ಯಂತ್ರಗಳನ್ನು ಸಿದ್ಧಪಡಿಸುವ ಕಾರ್ಖಾನೆಯನ್ನು ಸ್ಥಾಪಿಸಿದಾಗ ಅದಕ್ಕಾಸಿಯಷ್ಟು ಕಾಣವನ್ನು ಕೆಲಸಗಾರರಿಗೆ ಜನಕೂಲತೆ, ಮಾರ್ಗಗಳ ನಿರ್ಮಾಣ ಮುಂತಾದ ನಾಗರಿಕ ಸೌಕರ್ಯಗಳಿಗಾಗಿಯೇ ಬಳಸಲಾಯಿತು; ಕೈಗಾರಿಕೆಯನ್ನು ದೃಢಗೊಳಿಸುವ ಯೋಜನೆಯ ಅಂಶಕ್ಕೆ ಸಾಕಷ್ಟು ಮಹತ್ವವನ್ನು ನೀಡಿ, ಹಣವನ್ನು ಪೆಚ್ಚು ಮಾಡಿದಂತೆ ಕಾಣಲಿಲ್ಲ. ಕೆಲಸಗಾರರ ಹಿತ ಮುಂತಾದವುಗಳು ಮುಖ್ಯವಾದರೂ, ಕೈಗಾರಿಕೆಯ ಅವಶ್ಯಕತೆಗಳನ್ನು ಯೋಜಕರು ಉಪೇಕ್ಷಿಸಲಾಗದು. ಹಾಗೆಯೇ ರಾಮನಿಗೆ ಲಾಭವಾಗಲೆಂದು ದೂಮನಿಗೆ ಹಾನಿ ಮಾಡುವುದೂ ಸರಿಯಲ್ಲ—ಹೊಸ ಕಾರ್ಖಾನೆಗಳಿಗೆ ನೆರವಿಗೆ ಸಂಪರ್ಕದ ಅನುಕೂಲತೆಗಳನ್ನು ನೀಡಬೇಕೆಂದು ಹೇಳುತ್ತಾ, ಹಳೆಯ ಕಾರ್ಖಾನೆಗಳ ಅವಶ್ಯಕತೆಯನ್ನು ಮರೆತು ಬಿಟ್ಟರೆ ಕ್ಷೇಮವಿಲ್ಲ. ನೂತನ ಕಾರ್ಖಾನೆಗಳಿಗೆ ತಾಂತ್ರಿಕರು ಬೇಕೆಂದೂ, ಅಧಿಕ ಸಂಬಳದ ಆಮಿಷ ತೋರಿಸಿ, ಈಗಿನ ಕಾರ್ಖಾನೆಗಳಿಂದ ಕೆಲಸಗಾರರನ್ನು ಆಕರ್ಷಿಸಿದರೂ ಪ್ರಯೋಜನವಿಲ್ಲ. ಯೋಗ್ಯತೆಯನ್ನು ಹಿನ್ನೆಲೆಗೆ ಸರಿಸಿ, ಜಾತೀಯ, ಪ್ರಾಂತೀಯ ಅತ್ಯೀಯ ಮುಂತಾದ ಭಾವನೆಗಳಿಗೊಗ್ಗಾಗಿ ತಾಂತ್ರಿಕರ ಹಾಗು ಕೆಲಸಗಾರರ ಆಯ್ಕೆಯಲ್ಲಿ ಪಕ್ಷವಾತ ತೋರಿಸಿದೂ ತೊಂದರೆ ತಪ್ಪದು.

ಒಟ್ಟಿನಲ್ಲಿ ಉಕ್ಕಿನ ಕಾರ್ಖಾನೆಯಂಥ ಸಂಸ್ಥೆಯನ್ನು ಸ್ಥಾಪಿಸುವಾಗ ಆದಕ್ಕೆ ಬೇಕೆನಿಸಿದ ವಸ್ತುಗಳನ್ನು ಪೂರೈಸುವ ಕೇಂದ್ರಗಳ ಬೆಳವಣಿಗೆಗೆ ಪ್ರಥಮ ಪ್ರಾಶಸ್ತ್ಯವನ್ನು ಕೊಡಬೇಕು; ಅವು ಚೆನ್ನಾಗಿ ಕೆಲಸ ಮಾಡುವಂತೆ ಕೆಲವು ಅಂತರಾಷ್ಟ್ರೀಯ ತಜ್ಞರ ನೇತೃತ್ವದಲ್ಲಿ ರಾಷ್ಟ್ರೀಯ ಉನ್ನೇದ್ಯೋಗರನ್ನು ತರಬೇತಿಗೊಳಿಸಬೇಕು; ಸಂಸ್ಥೆಯ ಯೋಗಕ್ಷೇಮವನ್ನು ಸಂಪೂರ್ಣ ನೋಡಿಕೊಳ್ಳುವ ಪ್ರವೀಣನನ್ನು ಗುರುತಿಸಿ, ಜವಾಬ್ದಾರಿಯನ್ನು ಅವನ ತಲೆಯ ಮೇಲೆ ಹೊರಿಸಬೇಕು. ಸಿಂಧ್ರಿಯ ಗೊಬ್ಬರ ಕಾರ್ಖಾನೆ ಮುಂತಾದ ಕೇಂದ್ರಗಳಲ್ಲಿ ಮ್ಯಾನೇಜಿಂಗ ಡೈರೆಕ್ಟರ ಎಂಬ ಹೊಣೆಗಾರಿಕೆಯ ಸ್ಥಾನಕ್ಕೆ ಒಂದೆರಡು ವರ್ಷಗಳ ಅವಧಿಯಲ್ಲಿ ನಾಲ್ಕಾರು ಜನರು ಬಂದರು. ಇವರಲ್ಲಿ ಯಾರಿಗೂ ಸಂಸ್ಥೆಯ ಕಾರ್ಯಕ್ರಮದ ಪೂರ್ಣ ಜ್ಞಾನವನ್ನುಮಾಡಿಕೊಂಡು, ಅದು ಒಳಿತಾಗಿ ದುಡಿಯುವ ಅವಕಾಶ ದೊರಕಲಿಲ್ಲ. ಹೀಗಾಗಬಾರದು—ನಮ್ಮ ಆಯ್ಕೆಯಲ್ಲಿ ತಪ್ಪಿರಬಾರದು; ಮತ್ತು ಹತ್ತು ಹದಿನೈದು ವರ್ಷಗಳಾದರೂ ಆ ವ್ಯಕ್ತಿ ಸಂಸ್ಥೆಯ ಸೇವೆಗೆ ದುಡಿಯುವಂತಿರಬೇಕು. ಕೊನೆಯ ಸಂಗತಿಯೆಂದರೆ, ಉಕ್ಕಿನ ಕಾರ್ಖಾನೆಯಿಂದ ಪ್ರಯೋಜನ ಪೊಂದಿ ಕೆಲಸ ಮಾಡಬಹುದಾದ ಬೇರೆ-ಹೊಸಕಾರ್ಖಾನೆಗಳನ್ನು ಸ್ಥಾಪಿಸುವುದು. ಉದಾಹರಣೆಗೆ ರಾಸಾಯನಿಕ ದ್ರವ್ಯಗಳನ್ನು ಉತ್ಪಾದಿಸುವ ದುರ್ಗಾಪುರದ ಕಾರ್ಖಾನೆ ಗಣನೀಯವಾಗಿ ವಿಸ್ತರಿಸಬಹುದು.

ಕುಂದಾಪುರ ಡಿ.ಮು. ಕೋರ್ಟಿನಲ್ಲಿ

S. C. 253/54.

ವಾದಿ— ವೆಂಕಟ್ರಮಣ ಕಿಣಿ, ಪದ್ಮನಾಭ ಕಿಣಿ ಮಗ, ಕುಂದಾಪುರ ತಾಲ್ಲೂ, ಹಳ್ಳಾಡಿ ಹರ್ಕಾಡಿ ಗ್ರಾಮದವ.

ಪ್ರತಿವಾದಿರು— 1. ಪುಟ್ಟಯ್ಯ ಸೆಟ್ಟಿ, ದುರ್ಗಿ ಸೆಟ್ಟಿ ಮಗ, 2. ಮಹಾಬ್ಲ ಸೆಟ್ಟಿ, 3. ರಾಮಣ್ಣ ಸೆಟ್ಟಿ, 1ನೇ ಪ್ರತಿವಾದಿ ಅಳಿಯಂದಿರು, 4. ಗುಲಾಬಿ ಸೆಟ್ಟಿ, 5. ಜಲಜಮ್ಮ ಸೆಟ್ಟಿ, 6. ನಾರಾಯಣ ಸೆಟ್ಟಿ ಚಂದಮ್ಮ ಸೆಟ್ಟಿ ಮಕ್ಕಳು— ಕುಂದಾಪುರ ತಾಲ್ಲೂ ಹಾರ್ಡಳ್ಳಿ ಮಂಡಾಳಿ ಗ್ರಾಮದಲ್ಲಿರುವವರು.

ಸದ್ರಿ 2, 3, 5ನೇ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಪ್ರತಿವಾದಿರಿಂದ ವಾದಿಗೆ ವರ್ಷ 1ರ ಮೂಲಗೇಣಿ, ಗೇಣಿ ಐಬ್ಬು ಅಕ್ಕಿ ಮಾನಿಗೆ 2 ಸೇರು 15¾. ಬೆಲ್ತಿಗೆ ಅಕ್ಕಿ ಮಾನಿಗೆ ½. ನಗ್ದು ರೂಪಾ 2-9-8. ಹೊರೆ 1ರ ಪ್ರಕಾರ ಬರತಕ್ಕ ಕಳದ ವಿಜಯ ಸಂಗರದ ಗೇಣಿ ಬಗ್ಗೆ ಮೇಲಿನ ದಾವಾ ಮಾಡಿದ್ದಾಗಿದ್ದು, ಸದ್ರಿ ದಾವೆಯನ್ನು ತಾರೀಕು 20-11-54ಕ್ಕೆ ಪ್ರತಿವಾದಿರ ಉದಾಸರಣೆ ಬಗ್ಗೆ ಇಟ್ಟುಕೊಳ್ಳಾತ್ತಾರೆ. ಈ ಕುರಿತು ಸದ್ರಿ ಪ್ರತಿವಾದಿರ ಆಕ್ಷೇಪಣೆಗಳಿದ್ದರೆ ಆ ತಾರೀಕಿಗೆ ಹಗಲು 11 ಗಂಟೆಗೆ ಮೇಲಿನ ಕೋರ್ಟು ಮುಂದೆ ಹಾಜ್ರಾಗಿ ಜವಾಬು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಸದ್ರಿ ಪ್ರತಿವಾದಿರ ಯಕ್ಪಪಾರ್ಟಿಯಿಂದ ದಾವೆಯನ್ನು ತೀರ್ಮಾನಿಸಲಾಗುತ್ತದೆಂಬ ಸಂಗ್ತಿ ಕೋರ್ಟು ಹುಕುಂ ಪ್ರಕಾರ ತಿಳಿಸಲಾಗುತ್ತದೆ.

S. S. Kolkebail,
Advocate for Plaintiff
Coondapoor, 10-11-54.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಮಿಂಚಿಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ನ್ಯಾಸಾಚಾರ್ಯರ
ಪಾತ್ರೆ ಭಂಡಾರ,
ರಥಬೀದಿ ಉಡುಪಿ.

ಚೆಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವ್ಸ ಸೇವಿಸಿದರೆ ಮುಂದೆ ಏಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಜಾತವಾಗುವದು.

ಬೆಲೆ-೧ ಬಾಟ್ಲಿಗೆ — ರೂ. ೫-೪-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ಡಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

!! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !!

"ರಿಕರಿಂಗ್" ಠೇವಣಾತಿ.

ಬರೇ ೬ರೂಪಾಯಿ ಒಂದು ತಿಂಗಳಿಗೆ ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ಸೇಕಡಾ 4½%.

ಬಡವ ಬಲ್ಲಿದರೆಂಬ ಭೇದವಿಲ್ಲದ ಪ್ರತಿಯೊಬ್ಬರಿಗೂ ಅನುಕೂಲವಾದ ಯೋಜನೆ.

ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ

ದಿ ವಿಜಯ ಬೇಂಕ್ ಲಿಮಿಟೆಡ್.

(೧ನೇ ಪುಟದಿಂದ)

ಅಧಿಕ ಉತ್ಪಾದನೆಗಾಗಿ ಹೀಗೆ ಪ್ರಚಾರ ನಡೆಸುವುದು ಮತ್ತು ಸಾಮೂಹಿಕ ಜೀವನಕ್ಕಾಗಿ ಅಗ್ರಹ ತೋರಿಸುವುದು ಕಲೆಯಷ್ಟು ಸಾಹಿತ್ಯದ ವಿಕಾಸದ ಮೇಲೆ ದುಷ್ಪರಿಣಾಮವನ್ನು ಬಾಡಲಿಕ್ಕಿಲ್ಲವೇ ಎಂಬ ಪ್ರಶ್ನೆ ಇಲ್ಲಿ ಬರುತ್ತದೆ. ಇದಕ್ಕೆ ಉತ್ತರ ಕೊಡಬೇಕಾದರೆ ಹತ್ತು ದಿನಗಳ ವಾಸ್ತವ್ಯ ಕಾಲದ ಅನುಭವ ಎಷ್ಟಕ್ಕೂ ಸಾಲದು.ಆದುದರಿಂದ "ಎಲ್ಲ ದೇಶಗಳಲ್ಲಿಯೂ ಹೀಗೆ ನಾಡಲಾಗುತ್ತದೆ" ಎಂಬ ಸಾಮಾನ್ಯ ವಿವರಣೆಯನ್ನೆ ಇಂದಿರಾ ಗಾಂಧಿಯವರು ಕೊಟ್ಟರು ಎಲ್ಲಿ ನೋಡಿದರಲ್ಲಿ ಕಂಡು ಬರುವ ನಗುಮುಖದ ಮಕ್ಕಳು ಚೀನದ ಇನ್ನೊಂದು ವೈಶಿಷ್ಟ್ಯ ಎಂದವರು ಹೇಳಿದರು ಕಮ್ಯುನಿಸ್ಟರಿಗೆ ಜನಸಂಖ್ಯೆಯ ಹೆಚ್ಚಳದಲ್ಲಿ ನಂಬಿಕೆ ಇಲ್ಲ, ಆದರೆ ಒಂದಲ್ಲ ಒಂದು ದಿನ ಅವರು ಈ ಸಮಸ್ಯೆಯನ್ನು ಇದಿರಿಸಬೇಕಾದೀತು ಎಂದು ಇಂದಿರೆ ಎಚ್ಚರಿಸಿದರು. ಮಹಿಳೆಯರು ಹಿಂದಿನ ಕಾಲದ ಬಂಧನಗಳಿಂದ ವಿನೋಚನ ಹೊಂದಿ ಉತ್ಸಾಹದಿಂದ ಕಾರ್ಯಶ್ರಮತೆಯಿಂದಲೂ ಹೊಣೆಗಾರಿಕೆಯನ್ನು ನಿರ್ವಹಿಸುತ್ತಿರುವರೆಂದು ಅವರು ತಿಳಿಸಿದರು. ಜನರೆಲ್ಲರೂ ಶಿಸ್ತಿನಿಂದ ನಡೆದುಕೊಳ್ಳುವರು ಪೋಲೀಸರು ಜನರೊಡನೆ ಸೌಹಾರ್ದದಿಂದ ವರ್ತಿಸುವರು. ಪೂರ್ವ ದೇಶಗಳ ಆತಿಥ್ಯ ಹೆಚ್ಚಿನದೆಂದು ಹೇಳಲಾಗುತ್ತದೆ— ಚೀನೀಯರ ಉಪಚಾರ ಅದಕ್ಕೂ ದೊಡ್ಡದು ಎನ್ನುತ್ತಾ ತಮ್ಮ ಕಣ್ಣಿಗೊಂದು ಕಸ ಬಿದ್ದುದಕ್ಕೆ ಒಬ್ಬ ವೈದ್ಯನನ್ನು ಕರೆಸಿದ ಸ್ವಸಂಗವನ್ನು ಉಲ್ಲೇಖಿಸಿದರು.

ಭಾರತದ ರಾಷ್ಟ್ರ ಭಾಷೆಯಾದ ಹಿಂದಿಯನ್ನು ಪೇಕಿಂಗ್ ವಿಶ್ವವಿದ್ಯಾಲಯದಲ್ಲಿ ಕಲಿಸಲಾಗುತ್ತದೆ. ಸಾರ್ವಜನಿಕ ಸಮಾರಂಭಗಳಲ್ಲಿ ಚೀನೀ ಭಾಷಣಗಳ ಹಿಂದಿ ಅನುವಾದವನ್ನು ಒಬ್ಬ ವಿದ್ಯಾರ್ಥಿನಿ ಮಾಡುತ್ತಿದ್ದಳು. ಕುತೂಹಲಕ್ಕೆಯ ಭಾಷೆಯ ಹಿಂದಿ ಅವಳಿಗೆ ಚೆನ್ನಾಗಿ ಬರುತ್ತಿದ್ದರೂ ಸಾಮಾನ್ಯ ಮಾತುಕತೆಯ ಪರಿಚಯ ಅವಳಿಗೆ ತಷ್ಟು ಇರಲಿಲ್ಲ. "ನಾನು ಅವಳಿಗೆ ಚೆನ್ನಾಗಿ ಹಿಂದಿ ಮಾತನಾಡುವುದನ್ನು ಕಲಿಯಲು ಭಾರತಕ್ಕೆ ಬರುವ ಅವಕಾಶವನ್ನು ಕಲ್ಪಿಸಿಕೊಳ್ಳು ಎಂದು ಸೂಚಿಸಿದ್ದೇನೆ" ಎಂದು ಶ್ರೀಮತಿ ಗಾಂಧಿ ಪತ್ರಿಕೋದ್ಯಮಿಗಳ ಸಂಘದ ಮೇಳಿದರು. ಚೀನದಲ್ಲಿ ಸಾಮಾನ್ಯವಾಗಿ ಪ್ರತಿಯೊಂದೂ ಕೆಲಸ ಪೂರ್ವ ನಿಶ್ಚಿತ ಅಚ್ಚಿನಲ್ಲಿ ಹೊಯ್ದಂತೆ ಕಂಡು ಬರುತ್ತದೆ—ಆದರೆ ಆಲ್ಲಿ ಕುತೂಹಲವನ್ನು ಕೆರಳಿಸುವ ವೈವಿಧ್ಯವೂ ಮಿತವಾದ ಕ್ಷೇತ್ರದಲ್ಲಿ ನೋಡ ಸಿಗುತ್ತದೆ ಎನ್ನುತ್ತಾ ನಾಟಕಗಳ ವೈಚಿತ್ರ್ಯವನ್ನು ಅವರು ವಿವರಿಸಿದರು. "ಪೇಕಿಂಗಿನಲ್ಲಿ ಸ್ತ್ರೀಯರ ಪಾತ್ರಗಳನ್ನು ಪುರುಷರೇ ನಿರ್ವಹಿಸುವರು, ಶಾಂಘೈಯಲ್ಲಿ ಸ್ತ್ರೀಯರೇ ಪುರುಷ ಪಾತ್ರಗಳನ್ನು ಹಾಕುವರು, ಕೆಂಟಿನಲ್ಲಿ ಸ್ತ್ರೀ-ಪುರುಷರಿಬ್ಬರೂ ಕೂಡಿ ಅಭಿನಯಿಸುವರು ಪೇಕಿಂಗಿನಲ್ಲಿ ನಾವು ನೋಡಿದೊಂದು ನಾಟಕದಲ್ಲಿ ೭೪ ವರ್ಷ ಪ್ರಾಯದ ಸುಪ್ರಸಿದ್ಧ ನಟನೊಬ್ಬನು ೨೦ ವರ್ಷದ ತರುಣಿಯ ವಾತ್ಸವನ್ನು ಅತ್ಯುತ್ತಮವಾಗಿ ಅಭಿನಯಿಸಿದನು. ಅವನ ನಡೆನುಡಿ ಹಾವಭಾವಗಳು ಯುವತಿಯರನ್ನು ಮೀರಿಸುವಂತಿದ್ದವು" ಎಂದು ಇಂದಿರೆ ಬೊಗಳಿದರು.

ಪಾಳೆಯಗಾರಿಕೆ ಹಾಗು ವಸಾಹತುವಾದದ ವಿರುದ್ಧ ನಿಂತು ಅಭಿವೃದ್ಧಿ ಸಥದಲ್ಲಿ ವನ್ನಡೆಯುವ ಫಲವನ್ನು ನವ ಚೀನ ಪ್ರಕಟಪಡಿಸುತ್ತಿದೆ ಎಂದು ಅವರ ಮಾತಿನಿಂದ ತಿಳಿದು ಬರುತ್ತದೆ. ಭಾರತಕ್ಕೂ ಈ ಮಾತನ್ನು ಚೆನ್ನಾಗಿ ಅನ್ವಯಿಸಬಹುದು. ಚೀನವು ಹೇಗೆ ಮೂರು ಆಧವಾ ನಾಲ್ಕು ಪಂಚವಾರ್ಷಿಕ ಯೋಜನೆಗಳನ್ನು ಕೈಗೊಂಡು ಸಮಾಜವಾದಿ ರಾಷ್ಟ್ರದ ನೆಲಗಟ್ಟನ್ನು ಹಾಕಲು ಬಹುಸುತ್ತಿದೆಯೋ ನಾವು ಸಹ ಅದೇ ಅಭಿಲಾಷೆಯನ್ನು ತೋರಿಸುತ್ತಾ ಏಳೂವರೆ ಸಾವಿರ ಕೋಟಿ ರೂಪಾಯಿ ವೆಚ್ಚದ ಎರಡನೆಯ ಸಂಚವಾರ್ಷಿಕ ಯೋಜನೆಯ ವಿಚಾರವನ್ನು ಸೂಡುತಿದ್ದೇವೆ ಏತಿಯದ ಎಲ್ಲ ದೇಶಗಳ ಚೀನೆಯೂ ಒಂದೇ—ಬಡತನ. ಅದರ ನಿವಾರಣೆಯಲ್ಲಿ ಅನುಸರಿಸುವ ಕ್ರಮಗಳಲ್ಲಿ ಮಾತ್ರ ವ್ಯತ್ಯಾಸ ಕಾಣಿಸುತ್ತದೆ. ಚೀನದ ರೀತಿಯೊಂದಾದರೆ, ಭಾರತದ್ದು ಇನ್ನೊಂದು. ಆದುದರಿಂದ ನಾವು ಚೀನೀಯರನ್ನು ಕಂಡು ಸಹಾನುಭೂತಿ ವ್ಯಕ್ತಪಡಿಸುವುದೂ ಅವರ ಅಭಿವೃದ್ಧಿಯನ್ನು ನೋಡಿ ಸಂತೋಷಗೊಳ್ಳುವುದೂ ಉತ್ಸಾಹದಿಂದ ಸ್ಫೂರ್ತಿಯನ್ನು ಪಡೆಯುವುದೂ ಸಹಜನೇ ಆಗಿದೆ. ಜನರಲ್ಲಿ ದೇಶದ ವಿವಿಧ ಅಭಿವೃದ್ಧಿ ಪ್ರಯತ್ನಗಳಲ್ಲಿ ಉತ್ಸಾಹವನ್ನು ಕುದುರಿಸುವುದೇ ಪ್ರಧಾನ ಮಂತ್ರಿ ನೆಹರುಗಳು ತಾತ್ಪುರ್ತಿಕವಾಗಿಯಾದರೂ ಗದ್ದುಗೆಯಿಂದ ಇಳಿದು ಬರುವುದಕ್ಕೆ ಅನೇಕ್ಷೆಪಟ್ಟುದರ ಮೂಲ ಕಾರಣವೆಂದು ಶ್ರೀ ಸುಬ್ರಹ್ಮಣ್ಯಂ ಹೇಳಿರುವುದನ್ನು ನೋಡಿದರೆ—೨೦ ವರ್ಷದ ಯುವತಿಯ ಪಾತ್ರವನ್ನು ನಿರ್ವಹಿಸಿದ ೭೪ ವರ್ಷದ ವೃದ್ಧ ನಟನಿಂದ ಅವರಿಗೆ ಹೆಚ್ಚಿನ ಹುರುಪು ಒಂದಿದೆ ಎಂದು ಭಾವಿಸಬೇಕಾಗುತ್ತದೆ. ನೆಹರುಗಳ ಕಣ್ಣಿಗೆ ಭಾರತೀಯರು ಸತ್ವಹೀನರಂತೆ ಕಾಣಿಸುತ್ತಿದ್ದು ಈ ಅಭಿಪ್ರಾಯವನ್ನು ಹುಸಿಗೊಳಿಸುವುದು ನಮ್ಮ ತರುಣ-ತರುಣಿಯರ ಪ್ರಥಮ ಕರ್ತವ್ಯ ಇದೇ ನಾವು ಚೀನದಿಂದ ಕಲಿಯಬೇಕಾದ ಅತ್ಯುತ್ತಮ ಪಾಠ.

ಸಿಹಿಮೂತ್ರ

ರೋಗ ನಿವಾರಣೆ.

(DIABETES)

ಏಳು ದಿನಗಳಲ್ಲಿ ಗುಣವಾಗುತ್ತದೆ

ಮೂತ್ರವಲ್ಲಿ ಸಕ್ಕರೆ ಹೆಚ್ಚು ಹೋಗುವ ದಕ್ಕೆ ಸಿಹಿಮೂತ್ರ ರೋಗ (Diabetes) ಎಂದು ಕರೆಯುತ್ತಾರೆ ಎಂಥ ಭಯಂಕರ ರೋಗವೆಂದರೆ, ಇವಕ್ಕೆ ಇದು ಬಲಿಯಾದ ರೋಗಿಯು ದಿನದಿನಕ್ಕೆ ಸಾವಿನತ್ತ ಸಾಗುತ್ತಿರುತ್ತಾನೆ. ಇದರ ಚಿಕಿತ್ಸೆಗ ಡಾಕ್ಟರು ಇಂಜಕ್ಷನ್ ಕಂಡುಹಿಡಿದಿದ್ದಾರೆ ಆದರೆ ಇದರಿಂದ ರೋಗ ಸಂಪೂರ್ಣವಾಗಿ ಪಾಸಿಯಾಗುವುದಿಲ್ಲ. ಇಂಜಕ್ಷನ್ನಿನ ಪರಿಣಾಮ ಅದುನಪರೆಗೆ ಸಕ್ಕರೆ ಅಂಶ ಸ್ವಲ್ಪ ಕಡಿಮೆಯಾಗುತ್ತದಯಷ್ಟೆ.

ಈ ದಾರುಣ ಖಾಹಿಲೆಯ ಮುಖ್ಯ ಲಕ್ಷಣಗಳಾವುವೆಂದರೆ ಪಸಿವು ನೀರಡಿಕೆ ಆತಿಮೆಚ್ಚಾಗುವುದು, ಮೂತ್ರದಲ್ಲಿ ಹೆಚ್ಚು ಸಕ್ಕರೆ ಹೋಗುವಿಕೆ ಮತ್ತು ನವೆಯಾಗುವುದು ಇತ್ಯಾದಿ.

ಈ ಖಾಹಿಲೆ ಉಲ್ಬಣಾವಸ್ಥೆಗೆ ಹೋದಾಗ ಹುಣ್ಣು, ಗುಳ್ಳೆ, ಕಣ್ಣಿನಲ್ಲಿ ಪೊರೆ ಮತ್ತು ಇತರ ತೊಡಕುಗಳು

ವೀನಸ್ ಚಾರ್ಮ್ ಆಧುನಿಕ ಕಾಲದ ವೈದ್ಯಕೀಯ ಪವಾಸು ಇದರಿಂದ ಸಾವಿರಾರು ಜನರು ಸೃಮ್ಮಿನ ದಸೆಯಿಂದ ಪಾರಾಗಿದ್ದಾರೆ, "ವೀನಸ್ ಚಾರ್ಮ್" ಸೇವನೆಯಿಂದ ಎರಡನೆ ಆಥವಾ ಮೂರನೆಯ ದಿನದಿಂದ ಮೂತ್ರದಲ್ಲಿ ಸಕ್ಕರೆ ಹೋಗುವಿಕೆ ಕಡಿಮೆ ಆಗುವುದು ಹೆಚ್ಚು ಸಲ ಮೂತ್ರಕ್ಕೆ ಹೋಗುವುದು ಕಡಿಮೆಯಾಗುತ್ತದೆ ನಾಲ್ಕನೆಯ ದಿನದಿಂದ ನೀವು ಆರ್ಧ ಗುಣವಾಯಿತೆಂದು ಭಾವಿಸುವಿರಿ ನೀವು ಯಾವ ಪಥ್ಯಗಳನ್ನು ಮಾಡಬೇಕಾಗಿಲ್ಲ. ನಿಜರೋಗಾತ್ಮಕ ಕೈಪಿಡಿಗೆ ಒರೆಯಿರಿ ೫೦ ಮಾತ್ರೆಗಳ ಒಂದು ಶೀಸೆಗೆ, ರೂಪಾಯಿ 6-12-0. ಪ್ಯಾಕಿಂಗ ಮತ್ತು ಅಂಚೆ ಪೆಚ್ಚ ಉಚಿತ.

Venus Research Laboratory (N. W.)
Post Box No 587, CALCUTTA

ಮದ್ಯಪಾನ ಪ್ರತಿಬಂಧ

ಫ್ರಾನ್ಸು ಮತ್ತು ಆಂಧ್ರ

ಕಳೆದವಾರ ಆಂಧ್ರದ ನುಂತ್ರಿ ಮಂಡಳವು ಪಾನ ಪ್ರತಿಬಂಧನವನ್ನೇ ಹೆಚ್ಚು ಕಡಿಮೆ ರದ್ದು ಮಾಡುವ ರಾಸು ಮೂರ್ತಿ ಸಮಿತಿಯ ಸೂಚನೆಯಂತೆ ನರ್ತಿಸಲಿಲ್ಲವೆಂದು ಹೇಳುತ್ತಾ ಪ್ರತಿಪಕ್ಷದವರು ಅವಿಶ್ವಾಸ ಸೂಚನೆಯನ್ನು ಯಂಡಿಸಿ ಗೆದ್ದರು. ಆವರ ಉದ್ದೇಶವು ಮಂತ್ರಿ ಮಂಡಳವನ್ನು ಉರುಳಿಸುವುದಾಗಿದ್ದರೆ, ಅವರು ಕೃತಾರ್ಥರಾದರೆಂದು ಹೇಳಬಹುದು. ಬದಲಾಗಿ ಪಾನ ಪ್ರತಿಬಂಧದಲ್ಲಿ ಆವರಿಗೆ ಶ್ರದ್ಧೆ ಇಲ್ಲವೆಂಬುದೇ ನಿಜವಾದ ಕಾರಣವಾಗಿದ್ದರೆ, ಅವಿಶ್ವಾಸ ಗೊತ್ತುವಳಿಯ ಪರವಾಗಿ ಮತದಾನ ಮಾಡಿದ ಎಲ್ಲ ಸದಸ್ಯರೂ ಪೇರಿಸಿ ನಿಂದ ಬಂದ ಈ ಕೆಳಗಿನ ವಾರ್ತೆಯನ್ನು ದಯವಿಟ್ಟು ಓದಬೇಕು.

ಆಂಧ್ರದ ಪಾನ ಪ್ರತಿಬಂಧ ಕಾಯಿದೆಯು ಎಷ್ಟು ಆಪೇಕ್ಷಣೀಯವಾದದ್ದು ಎನ್ನುವುದು ಕುಡುಕರಿಗೆ ಉತ್ತೇಜನ ಕೊಡದಿರುವುದಿಗು ಎಷ್ಟು ಹಿತವಾದದ್ದು ಎಂಬ ಬಗ್ಗೆ ಯಾವ ಸಂದೇಸವೂ ಉಳಿಯಲಾರದು ಪೇರಿಸಿಸಾರ್ತಿ ಹೀಗೆ ಹೇಳುತ್ತದೆ —

"ತಮ್ಮ ಕೈಯಲ್ಲಿ ಯಾವಾಗಲೂ ಹಾಲು ಆಥವಾ ಇತರ ಸಾಥಾರಣ ಪಾನೀಯದ ಲೋಟವನ್ನು ಹಿಡಿದುಕೊಂಡಂತೆ ಚಿತ್ರೀಕರಿಸಲ್ಪಡುವ ಫ್ರಾನ್ಸಿನ ಪ್ರಧಾನ ಮಂತ್ರಿ ಮೊನ್ಸರ್ ಮೆಂಡಿ ಫ್ರಾನ್ಸರು ಜಾಲದಲ್ಲಿ ವ್ಯಾಪಕವಾಗಿ ಪಟ್ಟಿರುವ ಕುಡುಕತನದವಿರುದ್ಧ ತಮ್ಮ ಮುಂದಿನ ಹೆಜ್ಜೆಯೆನ್ನಿಸುವರೆಂದು ತಿಳಿದುಬರುತ್ತದೆ. ತಮ್ಮ ಅಧಿಕಾರ ಬಲದಿಂದ ಆವರು ಮುಂದಿನ ವರ್ಷದ ಜೂಟ್ ಸಕ್ಕರೆಯ ಕೊಯ್ಲಿನಲ್ಲಿ ಮೂರರಲ್ಲಿ ಒಂದಂಶವನ್ನು ಮಾತ್ರ ಸಾದಕ ಪೇಯಗಳಿಗಾಗಿ ಉಪಯೋಗಿಸ ಬಹುದೆಂದು ಸೊದಲೇ ಆಜ್ಞೆ ಪಡಿಸಿದ್ದಾರೆ ಮತ್ತು ಈಗ, ಪಾರ್ಲಿಮೆಂಟಿನ ಸರ್ವಾಲಪಲ್ಲಿ ಮಾದಕ ಪೇಯಗಳ ಬಲವು ತೋರಿಸುವ ಜನರ ಒತ್ತಾಯವನ್ನು ಲಕ್ಷಿಸದೆ ಮುಮ್ಮದ ದೊಡ್ಡ ಉತ್ಪಾದಕರ ಹಾಗೂ ಸಾಸಾಮ್ಯ ಕುಡುಕರ ಮೇಲೆ ಪರಿಣಾಮಸುಮಾಡುವ ಕ್ರಮಗಳನ್ನು ಕೈಗೊಳ್ಳುವ ಸಿದ್ಧತೆಯಲ್ಲಿ ಇದ್ದಾರೆ. ಆವರ ವಿಚಾರಗಳನ್ನು ಹೀಗೆ ವರ್ಣಿಸಬಹುದು ಯುದ್ಧ ಕಾಲದಲ್ಲಿ ಇದ್ದಂತೆ ಕುಡಿಯದ ದಿನಗಳನ್ನು ಸಂಘಟಿಸುವುದೆ ಆಗ ವಾರದಲ್ಲಿ ಒಂದೆರಡುದಿನ ಯಾವತರ ದಮದ್ಯವನ್ನು ಆಂಗಡಿಗಳಲ್ಲಿ ನಿಷ್ಕ್ರಯಿಸಲಾಗದು ಆಂಗಡಿಗಳ ಬಾಗಿಲು ತೆರೆಯುವಿಕೆ ಮತ್ತು ಮುಚ್ಚುವಿಕೆಗಳ ಮೇಲೆ ವಿಶೇಷ ಕಣ್ಣಿಡುವುದು ಈಗಿರುವಂತೆ ಮುಂಜಾನೆ ತೆರೆದ ಆಂಗಡಿಗಳು ಮಧ್ಯರಾತ್ರಿಯಾನರೂ ಮುಚ್ಚುವುದಿಲ್ಲ ಮಾದಕ ಪೇಯಗಳ ಮೇಲೆ ಇನ್ನಷ್ಟು ವೃದ್ಧಿ ಮಾದಕ ಪೇಯಗಳ ಮೇಲೆ ಇನ್ನಷ್ಟು ಹೆಚ್ಚು ಸುಂಕವನ್ನು ಪೇರುಪುದು ಈಗಾಲೇ ಏರೋಪ್ಯ ರಾಷ್ಟ್ರಗಳಲ್ಲೆಲ್ಲ ಫ್ರಾನ್ಸಿನ ಸುಂಕ ಪಚ್ಚಿನದು ಸಾರ್ವಜನಿಕ ರೀತಿಯಲ್ಲಿ ಕುಡಿದು ಗೊಂದಲ ಎಬ್ಬಿಸುವವರ ಮೇಲೆ ಭಾರವಾದ ದಂಡವನ್ನು ಹೊರಿಸುವುದು ಈಗ ಕಂಡಾಪಟ್ಟೆ ಗಲಾಟೆ ನಾಡುವವರ ಮೇಲೆ ಎದುರು ಪ್ರಾಂಕುಗಳ ದಂಡ ಪೇರಲಾಗುತ್ತದೆ ಅಪ್ರಬುದ್ಧರಿಗೆ ನೂಡಕಪೇಯಗಳನ್ನು ಮಾರದಂತೆ ತಡೆಯುವುದು ಫ್ರಾನ್ಸಿನ ಸುದ್ದವ್ಯಾಪಾರದಲ್ಲಿ ಅರೆವಾಸಿಯನ್ನು ಪಾಲನ್ನು ಪಡೆದ ಕಳ್ಳಭಟ್ಟಿ ತಯಾರಕರನ್ನು ಗೊತ್ತು ಹಚ್ಚಿ, ಶಿಕ್ಷಿಸುವುದು ಭಟ್ಟಿ ಇಳಿಸಲು ಕೊಡುವ ಅನುಜ್ಞೆಪತ್ರ ಬೇಟಗಳನ್ನು ಕಡಿಮೆಮಾಡುವುದು ಮಾದಕ ಪೇಯಗಳ ಜಾಹೀರಾತನ್ನು ಖಾಸಗಿಯಾಗಿಸುವುದು".

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ
25 ವರುಷಗಳ ಅನುಭವ ಪರಿಶ್ರಮದಿಂದ ಬರಲಿರುವ—
ಶ್ರೀ ಶ್ರೀ ಹೊರದ್ದಲ್ಲ ಶ್ರೀನಿವಾಸರಾಯರಿಂದ ವಿರಚಿತವಾದ—



[ENGLISH MADE EASY]

ಯನ್ನು ಇಂದೇ ತರಿಸಿಕೊಳ್ಳಿರಿ

ಬೆಲೆ — ಸಾದಾ ರೆಕ್ಸಿನ್ ಪೈಜ್ ರೂ ೧೦-೦ (ಪೋಸ್ಟಾಲು ಹೆಚ್ಚುವರಿ ಬೇರೆ)
ಉತ್ತಮ ಸ್ಪೆಷಲ್ ರೆಕ್ಸಿನ್ ರೂ. ೮—೦—೦ (ಪೋಸ್ಟಾಲು ಹೆಚ್ಚುವರಿ ಬೇರೆ)

ದೊರಕುವ ಸ್ಥಳಗಳು -1) ನವಭಾರತ ಪುಸ್ತಕ ಭಂಡಾರ, ಉಡುಪಿ.
2) ನವಯುಗ ಪ್ರೆಸ್, ಉಡುಪಿ, ದ. ಕ.

ಕರ್ನಾಟಕದಲ್ಲೆಲ್ಲ ಜನಪ್ರಿಯವಾದ
ಅತಿ ಕಡಿಮೆ ಬೆಲೆಯ

ಗೀತೆಯ ಕೈಗನ್ನಡಿ

ಹೊಸಕೆರೆ ಚಿದಂಬರಯ್ಯನವರ ಸರಳ ಕನ್ನಡ ಅರ್ಥಸಹಿತವಾದ ಭಗವದ್ಗೀತೆ

ಬೆಲೆ: 0-8-0

ಕೋರ್ಟು ಮತ್ತು ಸೊಸೈಟೀ

ಪೋಸ್ಟುಗಳೂ ದೂರವಯ್ಯತ್ತವೆ.

ನವಯುಗ ಪ್ರೆಸ್, ಉಡುಪಿ. ಅಥವಾ
ನವಭಾರತ ಬುಕ್ ಡಿಪೊ, ಉಡುಪಿ.

Edited, Printed & Published By K. H. Shetty at the Navayuga Press, Udipi, S. India

REGD. NO. M. 3618

LICENCE NO. 21
Licensed to Post without Prepayment.

ಕನ್ನಡ ನಾಡು

ಸಂಪುಟ ೩೪ VOL. 34

ಉಡುಪಿ, 25—11—1954

ಸಂಚಿಕೆ ೧೩ NO. 13

ಸೇವಾ ಜೀವನವು ವಿನಯ ಪೂರ್ಣವಾಗಿರಬೇಕು. ಇತರರಿಗಾಗಿ ತನ್ನ ಜೀವಿತವನ್ನು ಅರ್ಪಿಸಬಲ್ಲವನಿಗೆ ತನಗಾಗಿ ಒಂದು ಸ್ಥಾನವನ್ನು ಕಾಯ್ದು ಕೊಳ್ಳುವುದಕ್ಕೆ ಸಮಯವಿರಲಾರದು. ನಿಷ್ಕ್ರಿಯತೆಯನ್ನು ವಿನಯವೆಂದು ಭಾವಿಸಲಾಗದು. ಮಾನವಜಾತಿಯ ಸೇವೆಗಾಗಿ ಸಂತತವಾದ, ಬಹು ಕಷ್ಟಕರವಾದ ಪರಿಶ್ರಮವನ್ನು ನೂಡುವುದೇ ನಿಜವಾದ ವಿನಯ ದೇಶಸೇವೆಯೇ ಈಶಸೇವೆ ಎನ್ನುವ ಮಾತನ್ನು ನೆನೆದರೆ ನಮ್ಮ ಚಟುವಟಿಕೆಗಳು ದೇವರಪ್ಪ ಅವಿಶ್ರಾಂತವಾದುದಾಗಿರಬೇಕು.

—ಗಾಂಧೀಜಿ.

ಮಹಾತ್ಮಾಗಾಂಧೀಜಿಯ ಜನ್ಮ ದಿನದ ಸಂದರ್ಭದಲ್ಲಿ ಎಂ. ಪಿ. ಯವರು "ಜನಜನ" ಪತ್ರಿಕೆಯಲ್ಲಿ "ಎಲ್ಲಕ್ಕಿಂತಲೂ ಹೆಚ್ಚಾಗಿ ನಮಗಿಂದು ತಮ್ಮ ಶ್ರದ್ಧೆ ಮತ್ತು ಜೀವನಾದರ್ಶಗಳನ್ನು ರಾಜಕೀಯದಲ್ಲಿ ಕಾಣಬೆ—ಹೀಗೆ ಕಾಣುವುದೇ ಇಂದಿನ ದೃಷ್ಟಿಯಾಗಿರುವಂತೆ ಭಾಸವಾಗುತ್ತದೆ—ಸ್ವಾರ್ಥ ರಹಿತ ಸೇವೆ ಪತ್ತು ನೀತಿಮತ್ತೆಯ ಉದಾತ್ತ ಗುಣಗಳಲ್ಲಿ ಕಾಣುವ ಜನರು ಬೇಕಾಗಿದ್ದಾರೆ: ಗಾಂಧೀಜಿಯವರ ಸಂದೇಶಗಳ ಸಾರವೇ ಇದು. ನಾವು ಅದಕ್ಕೆ ಓಗೊಟ್ಟು ಉನ್ನತವಾದ ಧ್ಯೇಯ ಸಾಧನೆಗಾಗಿ ನಮ್ಮನ್ನು ಅರ್ಪಿಸಿಕೊಳ್ಳೋಣ" ಎಂದು ಬರೆದರು. ರಾಜಕೀಯ ಸ್ವರಾಜ್ಯವನ್ನು ಸಾಧಿಸುವಷ್ಟಕ್ಕೆ ಗಾಂಧೀಜಿಯ ಸಂದೇಶವು ಮಿತವಾಗಿರಲಿಲ್ಲವೆಂದೂ ವೈಯಕ್ತಿಕ ಸ್ವರಾಜ್ಯವನ್ನು ನಾವುಸಂವಾದಿಸುವುದನ್ನು ಅದಕ್ಕಿಂತಲೂ ಮಹತ್ವದ ಸಂಗತಿಯಾಗಿ ಅವರು ಭಾವಿಸುತ್ತಿದ್ದರೆಂದೂ ಎಂ. ಪಿ. ಅಭಿಪ್ರಾಯ ಪಟ್ಟರು. ವೈಯಕ್ತಿಕ ಸ್ವರಾಜ್ಯವೇ ಭಾರತೀಯ ಸ್ವರಾಜ್ಯದ ನಿಜವಾದ ಅಡಿಗಲ್ಲು ಎಂದವರು ನುಡಿದರು.

ಉನ್ನತವಾದ ಜೀವನಾದರ್ಶವನ್ನು ಇಟ್ಟುಕೊಳ್ಳಬೇಕೆಂಬ ಮಹಾತ್ಮರ ವಚನವನ್ನು ಅವರ ಪಟ್ಟ ಶಿಷ್ಯರೆಂದು ಹೇಳಿಕೊಳ್ಳುವ ಜನರು ಎಷ್ಟು ಮಟ್ಟಿಗೆ ನೆನಪಿಟ್ಟುಕೊಂಡಿರುವರೋ ಎಂಬ ಅನುಮಾನ ನಮಗೀಗ ನಿತ್ಯವೂ ಆಗುತ್ತಿರುತ್ತದೆ ಗಾಂಧೀಜಿಯವರ ಹೆಸರನ್ನು ಆದಷ್ಟು ಹೆಚ್ಚಾಗಿ ಒಳಸುವವರಲ್ಲಿ ಕಾಂಗ್ರೆಸಿಗರನ್ನು ಭಿಟ್ಟರೆ ಬೇರೆ ಪ್ರತಿಸ್ಪರ್ಧಿಗಳು ದೊರಕುವುದಿಲ್ಲ. ಪ್ರಜಾ ಸಮಾಜವಾದಿಗಳು ಸ್ವಲ್ಪ ಮಟ್ಟಿಗೆ ಗಾಂಧೀಜಿಯವರ ಆದರ್ಶಗಳನ್ನು ಕುರಿತು ಆಡುತ್ತಿದ್ದರೂ ಕಾಂಗ್ರೆಸಿಗರ ಅರ್ಭಟೆಯನ್ನು ಅದು ಎದುರಿಸಲಾರದು. ಕಾಂಗ್ರೆಸು ಸಂಸ್ಥೆಯ ಯಾವ ಕಾರ್ಯಕರ್ತರಿಗಳಾದರೂ ಗಾಂಧೀಜಿಯ ನಾಮಪರಣ ಮಾಡದ ಹೊರತು ನೆರವೇರುವುದೇ ಅಶಕ್ಯವೋ ಎಂಬ ಭೃಮೆ ಮೂಡಿಸುವಷ್ಟು ಮಟ್ಟಿಗೆ ಅವರನ್ನು ಉದಾಹರಿಸಲಾಗುತ್ತದೆ. ಹೀಗೆ ಮಾಡುವಾಗ, ಕಾಂಗ್ರೆಸಿಗರು ಒಂದು ಕ್ಷಣವಾದರೂ ಅತ್ಮ ನಿರೀಕ್ಷಣೆಯನ್ನು ಮಾಡಿಕೊಂಡದ್ದುಂಟೆ ಎಂಬ ವಿಶಯದಲ್ಲಿ ನಾವು ಖ್ಯಾಮಾಣಿಕವಾದ ಉತ್ತರವನ್ನು ನಿರೀಕ್ಷಿಸುವುದೇ ತಪ್ಪಾದೀತು.

ಅಧಿಕಾರದ ದಾಹ

ಜವಾಹರಲಾಲ ನೆಹರುಗಳಂಥ ಕೆಲವೇ ಉಚ್ಚ ವರ್ಗದ ಕಾಂಗ್ರೆಸು ಧುರೀಣರನ್ನು ಬಿಟ್ಟರೆ, ಕಾಂಗ್ರೆಸು ಸಂಸ್ಥೆಯ ಹೆಚ್ಚಿನ ಸದಸ್ಯರು ಗಾಂಧೀಜಿಯ ಹೆಸರನ್ನು ದುರುದ್ದೇಶ ಪೂರ್ವಕವಾಗಿಯೇ ಬಳಸುತ್ತಿರುವಂತೆ ಕಂಡು ಬರುತ್ತದೆ. ಅವರು ಮಹಾತ್ಮರ ವಚನಗಳ ಪಾವಿತ್ರ್ಯವನ್ನು ತಮ್ಮ ಸ್ವಾರ್ಥ ಸಾಧನೆಗಾಗಿ ಕೆಡಿಸಿ ಬಿಡಲು ಅಧವಾ ಗಾಳಿಗೆ ತೂರಲು ಹಿಂದೆ ಮುಂದೆ ನೋಡುವುದಿಲ್ಲವೆಂಬುದು ನಿಜವಾಗಿಯೂ ವಿಷಾದಕರವಾದ ವಿಷಯ. ಕಾಂಗ್ರೆಸಿಗರ ಸ್ವಾರ್ಥವು ಇಂದು ಒಂದೇ ಒಂದು ಗುರಿಯನ್ನು ಹೊಂದಿದ್ದು, ಅದರ ಬಹಿರಂಗ ಸ್ವರೂಪವೇ ಅಧಿಕಾರದ ದಾಹ. ಇದನ್ನು ಅಪ್ತಗಳೆಯುವುದರಿಂದ ಯಾವ ಪ್ರಯೋಜನವೂ ಇಲ್ಲ—ಸೇವಾಪರಾಯಣತೆಯೇ ತನ್ನ ಜೀವಿತದ ಧ್ಯೇಯವೆಂದು ಹೇಳಿಕೊಳ್ಳುತ್ತಾ ಅಧಿಕಾರ ಸ್ಥಾನಕ್ಕೋಸ್ಕರ ಪರಸ್ಪರ ಕಚ್ಚಾಡುತ್ತಿರುವ ನಮ್ಮ ಕಾಂಗ್ರೆಸು ಮುಖಂಡರನ್ನು ಕಂಡು ಜನರು ಮುಸಿ ಮುಸಿ ನಗುತ್ತಿದ್ದರೂ ಅವರಿಗೆ ಅದತ್ತ ಕಡೆ ಗಮನವಿವ್ವಂತೆ, ಅದರಿಂದ ಎಚ್ಚರ ಹೊಂದಿದಂತೆ ಕಾಣುವುದಿಲ್ಲ

ಕಾಂಗ್ರೆಸು ಸಂಸ್ಥೆಯು ದೊಡ್ಡದು—ಅದನ್ನು ಮಹಾಮಹಾ ತ್ಯಾಗಿಗಳೂ ಹುತಾತ್ಮರೂ ವಿಧಾಯಕ ಕಾರ್ಯಕರ್ತರೂ ಕಟ್ಟಿದವರು. ಅವರ ನಿರಂತರವಾದ ಜನ ಸೇವೆಯೇ ಸ್ವತಃ ಕೀರ್ತಿಗಾಮಿಗಳಾಗಿದ್ದರೂ ಅವರಿಗೆ, ಅವರಿರುವ ಸಂಸ್ಥೆಗೆ ಚಿರಸ್ಥಾಯಿಯಾದ ಖ್ಯಾತಿಯನ್ನು ತಂದು ಕೊಟ್ಟಿತು. ಉಜ್ವಲವಾದ ಈ ಪರಂಪರೆಯನ್ನು ಇಂದಿನ ಪೀಳಿಗೆಯ ಜನರು ಮಂದುವರಿಸಿಕೊಂಡು ಹೋಗುತ್ತಿದ್ದರೆ ಅದರಷ್ಟು ಚೆನ್ನಾದ ಕೆಲಸ ಬೇರೆ ಯಾವುದೂ ಇರಲಿಲ್ಲ. ದುರ್ದೈವದಿಂದ ಹಾಗಾಗದೆ, ಹಿಂದಿನ ಬಂಡವಾಳದ ಮೇಲೆ ನಿನ್ನ ದೂಡುವ ಕೆಟ್ಟ ಬುದ್ಧಿಯು ಪ್ರಬಲಿಸಿರುವಂತೆ ತೋರುತ್ತದೆ. ಇದು ಎಷ್ಟು ಮಾತ್ರಕ್ಕೂ ಇಷ್ಟವಾದುದಲ್ಲ, ನಿಜ. ಆದರೆ, ಹಾಗೆ ಹೇಳಿದವರು ಕಾಂಗ್ರೆಸಿನ ಇಂದಿನ ಸದಸ್ಯರಿಗೆ ಪ್ರಿಯವಾಗುವುದಿಲ್ಲ—ಅವರು ಸಂಸ್ಥೆಯನ್ನು ಟೀಕಿಸುವವರೆಂಬ ಆಪವಾದಕ್ಕೆ ಗುರಿಯಾಗುವುದೂ ಅಪರೂಪವಲ್ಲ. ಆದರೆ ಅಧಿಕಾರಕ್ಕೋಸ್ಕರ ಕಚ್ಚಾಡುತ್ತಾ ಒಳಜಗಳಗಳಲ್ಲಿ ಬಿದ್ದು ಆನರ್ಘ ಪರಂಪರೆಗಳನ್ನು ಉಂಟು ಮಾಡುವ ಕಾಂಗ್ರೆಸಿಗರಿಗಿಂತ ಸಕಾಲದಲ್ಲಿ ಎಚ್ಚರಿಕೆಯ ನುಡಿಯಾಡುವ ಕರ್ಮಠರೇ ನಿಜವಾದ ಹಿತಚಿಂತಕರೆಂದರೆ ಜನ ಒಪ್ಪಿಯಾರು.

ಅಧಿಕಾರದ ಲಾಲಸೆ ಸ್ವಾತಂತ್ರ್ಯೋತ್ತರದಲ್ಲಿ ಬಹಳವಾಗಿ ಕಟ್ಟುರುವುದು—ಗ್ರಾಮ ಪಂಚಾಯತಿಯ ಜುನಾವಣೆಂಯಲ್ಲಿ ರಾಮಪ್ಪ ಹಾಗು ಭೀಮಪ್ಪನವರಲ್ಲಿ ಮನಸ್ತಾಪವುಂಟಾಯಿತು. ಅವರ ಸಡುವಣ ಸ್ಪರ್ಧಿ ನಿತ್ಯ ಜಗಳದಲ್ಲಿ ಪರಿಣಮಿಸಿತು.

ಕೆಲಸಮಯದ ಬಳಿಕ ಈ ವೈಷಮ್ಯ ಇಲ್ಲದಂತಾಗಿದೆ ಎಂಬ ಅನುಭವ ಜನರಿಗಾಗತೊಡಗಿತು.

"ಅವರಿಬ್ಬರೂ ತಮ್ಮ ದ್ವೇಷವನ್ನು ಹುಗಿದು ಹಾಕಿದರೇನು?" ಎಂದು ಹೊರಗಿನವರೊಬ್ಬರು ಊರವರನ್ನು ವಿಚಾರಿಸಿದರು.

"ಇಲ್ಲ, ಎರಡು ತಿಂಗಳ ಹಿಂದೆ ಭೀಮಪ್ಪನವರನ್ನೆ ಹುಗಿದು ಬಿಟ್ಟರು" ಎಂಬ ಉತ್ತರ ಸಿಕ್ಕಿತು.

ದೇಶವನ್ನು ಬ್ರಿಟಿಷರು ಬಿಟ್ಟುಹೋಗುವಾಗ ಕಾಂಗ್ರೆಸಿನ ಕೈಗೆ ರಾಜ್ಯಸೂತ್ರವನ್ನು ವಹಿಸಿಕೊಟ್ಟುದರಿಂದ, ಅಧಿಕಾರದ ಮೋಹವು ಬಹಳವಾಗಿ ಪ್ರಬಲಿಸಿತು. ಎಲ್ಲ ಹೋರಾಟಕ್ಕೂ ರಾಜಕೀಯ ಸ್ವರಾಜ್ಯವು ಅಂತ್ಯವನ್ನು ತಂದಂತಾಯಿತು. ಆರ್ಥಿಕ ಹಾಗು ಸಾಮಾಜಿಕ ಪುನಾರಚನೆಯ ಮಹಾಕಾರ್ಯ ಕಾಂಗ್ರೆಸಿನ ಮುಂದಿದೆ ಎಂಬುದಾಗಿ ಪರಿಸ್ಥರು ಹೇಳುತ್ತಿದ್ದರೂ ಅವರು ಅಧಿಕಾರಾಸ್ಥಾನದಲ್ಲಿ ಉಳಿದೇ ಈ ಮಾತನ್ನಾಡಿದುದರಿಂದ, ಕನಿಷ್ಠರಲ್ಲೂ ಅಧಿಕಾರದ ಹಂಬಲವು ಹೆಚ್ಚಿಕೊಂಡಿತು ಹೊರತು ಸೇವೆಯ ಮನೋಭಾವನೆ ಮೂಡಿಬರಲಿಲ್ಲ. ಪರಿಣಾಮದಲ್ಲಿ, ಕಾಂಗ್ರೆಸು ಪಕ್ಷದಲ್ಲಿಯೇ ಒಳಜಗಳಗಳನ್ನು ಇಂದು ಕಾಣುತ್ತಿದ್ದೇವೆ. ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿಗೆ ಅಧ್ಯಕ್ಷಚುನಾವಣೆಯಾಯಿತು—ನಾಲ್ಕು ಮಂದಿ ಕಾಂಗ್ರೆಸ್ ಸದಸ್ಯರು ಜನತೆ ತಮ್ಮನ್ನೆ ಒಯಸುತ್ತಿದೆ ಎಂಬ ಭೃಮೆಯಿಂದ ಪಕ್ಷಪೋಳಗೆ ಸ್ಪರ್ದೆಗಿಳಿದರು ಕೊನೆಗೆ ವಿಜಯಿಗಳಾದವರು ಸಹ ನೊಂಕ್ಕೆ ಏನತ್ತೆಂದರಷ್ಟು ಕಾಂಗ್ರೆಸಿಗರ ಬೆಂಬಲವನ್ನು ಮಾತ್ರ ಪಡೆದರು ಹೊರಗಿನ ತೋರಿಕೆಗೆ ಜನರು ಸರ್ವಾನುಮತದಿಂದ ಆರಿಸಿ ಬಂದವರಾಗಿರಬಹುದು—ಆದರೆ ಕಾಂಗ್ರೆಸಿನಲ್ಲಿ ಅಧಿಕಾರ ದಾಹ ಮಿತಿಮೀರಿರುವುದೆಂಬ ಸತ್ಯವನ್ನು ಅದು ಪುಡೆಮಾಚಲಾರದು.

ಭಾರತದಲ್ಲೆಲ್ಲ ಕಾಂಗ್ರೆಸು ಪಕ್ಷದ ಕತೆ ಇದನ್ನೆ ಒಡನಡಿಯುತ್ತದೆ—ರಾಜ್ಯಸ್ಥಾನದಲ್ಲಿ ರಾಷ್ಟ್ರಸಭಾ ಸದಸ್ಯರಲ್ಲಿ ಭಿನ್ನಾಭಿಪ್ರಾಯ ಬೈದಾಬಾವಿಸಲ್ಲಿ ಕಾಂಗ್ರೆಸು ಸದಸ್ಯರಲ್ಲಿ ಏಕಾಭಿಪ್ರಾಯ, ಮೈಸೂರಿನಲ್ಲಿ ಹನುಮಂತಯ್ಯನವರಿಗೂ ವೀರೇಂದ್ರ ಪಾಟೀಲರಿಗೂ ಸುನಸ್ತಾಪ, ಮದ್ರಾಸಿನಲ್ಲಿ ರಾಜಗೋಪಾಲಾಚಾರಿಯವರ ನಿರ್ಗಮನದ ಪ್ರಕರಣ ಎಲ್ಲವೂ ಕಾಂಗ್ರೆಸು ಪಕ್ಷ

(೧೯೯ ಪುಟ ನೋಡಿರಿ)

THE CANARA INDUSTRIAL & BANKING SYNDICATE LTD.
Estd: 1925 H. O. UDIPI, S India

ನಿಮ್ಮ ಹಣವು ಮಾತನಾಡಬಲ್ಲುದಾದರೆ.

ಎಲ್ಲರಂತೆ ನಿಮಗೂ ಸಂದರ್ಭಾನುಸಾರ ನಗದು ಹಣದ ಅವಶ್ಯಕತೆ ಬೀಳುವುದು. ಆ ಕಾಲಕ್ಕೆ ನೀವು ಸ್ವಲ್ಪ ಹಣವನ್ನು ಕೊಡದೇ ಸತಾಯಿಬಲ್ಲಿರಿ ವಿನಾಕಾರಣ ಹಣವನ್ನು ಮನೆಯಲ್ಲೇ ಇರಿಸಿಕೊಳ್ಳುವುದಕ್ಕೆ ಬನಲಾಗಿ ರಾತ್ರಿ ಪಗಲೂ ಸುರಕ್ಷಿತ ಭದ್ರತೆಯಲ್ಲಿಡಲು ನೀವು ಅಪೇಕ್ಷಿಸುವಿರಿ ಹಣವನ್ನು ಲೇವಾದಿರಿಸಲು ನೀವು ತಯಾರಿಲ್ಲವಾದರೂ ಅದಕ್ಕೆ ಬಡ್ಡಿ ಸಿಕ್ಕದಿರಾಗಬಹುದೆಂಬ ಅಪೇಕ್ಷೆ ನಿಮಗಿದೆ ನೀವು ಸಾಲ ಪಡೆಯಲು ಸೌಕರ್ಯಗಳಿರುವ ಬೇಂಕಿನಲ್ಲಿ ನಿಮ್ಮ ಹಣವನ್ನು ಕೆಲಸಕ್ಕಿಡಲು ನೀವು ಇಚ್ಛಿಸುವಿರಿ. ಬೇಂಕಿನಲ್ಲಿ ತೆರೆಯಲಾಗುವ ಲೆಕ್ಕವೇ ನಿಮಗೆ ಯಾವ ಕಾಲವಧಿಯಲ್ಲಾ ಎಲ್ಲಾ ಸೌಕರ್ಯವನ್ನು ಒದಗಿಸಬಲ್ಲುದು. ಚಿತಿ ಕಾಸಾ ಕರೆಂಟಗುಳ್ಳ ನಮ್ಮ ಬ್ಯಾಂಕು ಶೀಘ್ರ ಲೇವಾದೇವಿ ಸೌಲಭ್ಯಗಳನ್ನು ಒದಗಿಸಬಲ್ಲುದು ನಿಮ್ಮ ಅನುಕೂಲತೆಗಳಿಗಾಗಿ ವಿವಿಧ ಬೇಂಕಿಂಗ್ ಸೇವೆಗಳನ್ನು ಕ್ರೋಢೀಕರಿಸಲಾಗಿದೆ. ಆನುದಂದವ ನಮ್ಮಲ್ಲಿಯೇ ಬೇಂಕಿಂಗ್ ವ್ಯವಹಾರವನ್ನು ನಾಡಿ ಅಮೂಲ್ಯ ಸಹಯವನ್ನು ಉಳಿಸಿಕೊಳ್ಳಿರಿ.

ಚಲಾವಣ ಭಂಡವಾಳ ರೂ ೬,೫೦,೦೦,೦೦೦

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ

ಸ್ಥಾಪನೆ: ೧೯೨೫] [ಪ್ರಧಾನ ಕಛೇರಿ: ಉಡುಪಿ, ದ. ಭಾರತ.

ಹೈನ ಕೇಂದ್ರಗಳ ಅಭಿವೃದ್ಧಿಯ ಪ್ರಯತ್ನ

ಆರೆ ಹಾಗು ಆನಂದದ ಮಹಾ ಯೋಜನೆಗಳು

ಪೋಷಕ ಆಹಾರ ವಸ್ತುಗಳಲ್ಲಿ ಹಾಲು ಮತ್ತು ತಜ್ಜನ್ಯ ಹೈನ ಪದಾರ್ಥಗಳೇ ಅತ್ಯುತ್ತಮವಾದವುಗಳೆಂದು ಈಗ ಸಂದೇಹದ ಲವಲೇಶವಿಲ್ಲದೆ ಒಪ್ಪಲಾಗುತ್ತದೆ. ನಮ್ಮ ಪ್ರಾಚೀನ ಶಾಸ್ತ್ರಗ್ರಂಥಗಳಾದ ವೇದಗಳು ಹಾಲನ್ನು ಅಮೃತ ತುಲ್ಯವೆಂದು ಹೊಗಳಿದರೆ ಆಧುನಿಕ ವಿಜ್ಞಾನಿಗಳು ಮಗುವಿನಲ್ಲಿ ಜೀವಸತ್ತ್ವವನ್ನು ಕುಂಬುವ ಶಕ್ತಿ ಹಾಲಿಗೆ ಮಾತ್ರ ಇದೆಯೆಂದು ಪ್ರಶಂಸಿಸುತ್ತಾರೆ. ಜನರ ಆರೋಗ್ಯಕ್ಕೂ ದೇಹದ ಪೋಷಣೆಗೂ ನೆರವಾಗುವ ಹಾಲು ನಮ್ಮ ದೇಶದಲ್ಲಿ ಈಗಲೀಗ ವಿರಳವಾಗುತ್ತಾ, ತುಟ್ಟಿಯಾಗುತ್ತಾ ಬರುತ್ತಿದೆ. ಜೇನು ಸುರಿವ ಹಾಲು ಹರಿವ ಸ್ವರ್ಗ ಭೂಮಿಯಾಗಿ ಹಿಂದೆ ಭಾರತವನ್ನು ವರ್ಣಿಸಿದ್ದರು; ನಮ್ಮ ಪುರಾಣಗಳು ಭಗವಂತನ ಅವಾಸಸ್ಥಾವವೇ ಕ್ಷೀರ ಸಾಗರವೆಂದು ಹೇಳಿ, ಹಾಲಿನ ಕುರಿತಾದ ನಮ್ಮ ಗೌರವವನ್ನು ಹೆಚ್ಚಿಸಿದ್ದವು. ಇಂದು ಭಾರತವು ಹಿಂದಿನ ಹೆಗ್ಗಳಿಕೆಯನ್ನು ಹೊಂದಿಲ್ಲ. ಹಾಲು ಪೂರೈಕೆಯು ನಮಗೊಂದು ಸಮಸ್ಯೆಯಾಗಿ ಪರಿಣಮಿಸಿರುವುದು.

ಸಂಖ್ಯಾ ಪ್ರಮಾಣದಿಂದ ನೋಡಿದರೆ ನಮ್ಮ ದೇಶದಲ್ಲಿ ಭೂ ಲೋಕದಲ್ಲಿ ಬೇರೆ ಯಾವ ದೇಶದಲ್ಲೂ ಇರದಷ್ಟು ಹೆಚ್ಚು, ಅಂದರೆ ೧೫೫ ಕೋಟಿ ಜಾನುವಾರುಗಳಿವೆ. ಆದರೆ ಇವುಗಳಲ್ಲಿ ಪುಷ್ಕಳವಾಗಿ ಹಾಲು ಹಿಂಡುವ ದನಗಳೂ ಬೇಸಾಯದ ಕೆಲಸವನ್ನು ಸಮರ್ಥವಾಗಿ ಮಾಡಬಲ್ಲ ಎತ್ತುಗಳೂ ಅತ್ಯಲ್ಪ ಪ್ರಮಾಣದಲ್ಲಿಯಷ್ಟೇ ಸಿಗುತ್ತವೆ. ಹೆಚ್ಚಿನವು ಬರಡು ಹಾಗು ಅಶಕ್ತ ಕಾಲ್ನಡೆಗಳಾಗಿದ್ದು ಅವುಗಳನ್ನು ಸಾಕುವುದೇ ರೈತನ ಚಿಂತೆಯಾಗಿದೆ. ನಮ್ಮ ದನಗಳು ಸರಾಸರಿ ವರ್ಷಕ್ಕೆ ೭೫೦ ರಾತಲು ಹಾಲನ್ನು ಕೊಡುತ್ತವೆ; ಪರದೇಶಗಳಲ್ಲಿ ಈ ಪ್ರಮಾಣವು ಮೂರು ಅಥವಾ ನಾಲ್ಕು ಪಾಲು ಹೆಚ್ಚಿರುತ್ತದೆ. ನಮ್ಮ ಒಟ್ಟು ಉತ್ಪಾದನೆಯಾದ ೭೫೦ ಲಕ್ಷ ಟನ್ನುಗಳಷ್ಟು ಹಾಲನ್ನು ಹಂಚಿದಾಗ, ಪ್ರತಿಯೊಬ್ಬನ ಪಾಲಿಗೆ ಕಾಲುರಾತಲೂ ಬರುವುದಿಲ್ಲ. ಸಾಮಾನ್ಯ ಸುನುಷ್ಯನಿಗೆ ದಿನಕ್ಕೆ ಅರ್ಧರಾತಲಿನಷ್ಟು ಹಾಲು ಮತ್ತು ಅರ್ಧ ರಾತಲಿನಷ್ಟು ಬೆಣ್ಣೆ, ತುಪ್ಪ, ಮೊಸರು, ಮಜ್ಜಿಗೆ ಮುಂತಾದ ಹೈನಪದಾರ್ಥಗಳು ಆಗತ್ಯವೆಂದು ವಿಜ್ಞಾನಿ ಹೇಳುತ್ತಿದ್ದರೂ ಬಡ ಭಾರತೀಯನು ಅಷ್ಟು ಸೌಭಾಗ್ಯವನ್ನು ಪಡೆದಿಲ್ಲ.

ಎಲ್ಲ ಜನರೂ ಹಾಲನ್ನು ಸೇವಿಸುವರೆಂದು ಭಾವಿಸಿದರೆ ತಪ್ಪಾದೀತು. ಉದಾಹರಣೆಗೆ ಬರ್ಮ, ಜೀನ ಮುಂತಾದ ಪೌರಸ್ತ್ಯ ರಾಷ್ಟ್ರಗಳಲ್ಲಿ ಹಾಲಿನ ಉಪಯೋಗವನ್ನು ಹೊರಗಿನಿಂದ ಬಂದವರಷ್ಟೇ ಮಾಡಿಕೊಳ್ಳುವರು ಹೊರತು ಅಲ್ಲಿಯವರು ಅದನ್ನು ಆವಶ್ಯಕತೆಯೆಂದು ತಿಳಿದಿಲ್ಲ. ಆದಾಗ್ಯೂ ಅಲ್ಲಿ ಕೃಷ್ಟ ಪುಷ್ಟರಾದ, ಆರೋಗ್ಯವಂತ ಜನರು ಇರುವರಾದರೆ, ಅದಕ್ಕೆ ಕಾರಣ ಬೇರೆಯೇ ಇದೆ–ಆ ದೇಶಗಳಲ್ಲಿ ಮಾಂಸ ಮತ್ತು ಏಗನುಗಳನ್ನು ಧಾರಾಳವಾಗಿ ಉಪಯೋಗಿಸಲಾಗುತ್ತದೆ ನಮ್ಮಲ್ಲಿಯೂ ಮಾಂಸವನ್ನು ತಿನ್ನುವ ಜನರೇ ಹೆಚ್ಚಾಗಿ ಹಾಲು ಮತ್ತು ತಜ್ಜನ್ಯ ಪದಾರ್ಥಗಳನ್ನು ಬಳಸುವರೆಂದು ಹೇಳಬಹುದು; ಇಂಥವರು ಸಹ ದಿನಕ್ಕೆ ಎರಡು ಔನ್ಸಿನಿಂದ ಆರು ಔನ್ಸಿನಷ್ಟು ಮಾತ್ರ ಉಪಯೋಗಿಸುವರೆಂಬುದು ಶೋಚನೀಯವಾದ ವಿಚಾರ. ಇಷ್ಟು ಕಡಿಮೆ ಹಾಲಿನಿಂದ ದೃಢಕಾಯರಾದ ತರುಣ ಜನಾಂಗವನ್ನು ರೂಪಿಸುವುದು ಸಾಧ್ಯವಾಗಲಾರದು. ಆದುದರಿಂದ ಹೇಗಾದರೂ ಮಾಡಿ, ನಮ್ಮ ಪಶು ಸಂಪತ್ತನ್ನು ಅಭಿವೃದ್ಧಿಗೊಳಿಸಿ, ಹೈನ ಪದಾರ್ಥಗಳ ಉತ್ಪಾದನೆಯನ್ನು ಹೆಚ್ಚಿಸಿ, ಏಪರಣೆಯನ್ನು ಸುಗಮ ಮಾಡಬೇಕೆಂಬ ಸಂಗತಿಯು ಈಗ ಎಲ್ಲರ ಲಕ್ಷ್ಯವನ್ನೂ ನೆಳೆದಿರುತ್ತದೆ.

ಹಾಲಿನ ಸಮಸ್ಯೆಯನ್ನು ರಚನಾತ್ಮಕ ರೀತಿಯಲ್ಲಿ ಬಿಡಿಸುವುದಕ್ಕೆ ಪ್ರೇಗೆ ಪ್ರಯತ್ನಿಸಬಹುದು? ಮೊತ್ತ ಮೊದಲಾಗಿ ಜಾನುವಾರುಗಳಿಗೆ ಯೋಗ್ಯ ಆಹಾರವನ್ನು ಪೂರೈಸುವುದಕ್ಕೆ ನಾವು ಮಹತ್ವವನ್ನು ಕೊಡಲೇಬೇಕು. ಹಸಿವಿನಿಂದ ಕಂಗೆಡುವ ದನಗಳಿಂದ ನಾವು ಹಾಲನ್ನು ಅಪೇಕ್ಷಿಸುವುದು ಮೂರ್ಖತನವಾದೀತು ಜಾನುವಾರುಗಳ ಮೇವಿನಲ್ಲಿ ಈಗ ಕಾಲಂಶದಷ್ಟು ಕೊರತೆ ಕಾಣಿಸುತ್ತದೆ. ತಜ್ಞರ ಅಭಿಪ್ರಾಯದಂತೆ ಪರಿಸ್ಥಿತಿಯನ್ನು ಸುಧಾರಿಸಿ ಉತ್ತಮ ಆಹಾರವನ್ನು ಒದಗಿಸುವುದರಿಂದ ಹಾಲಿನ ಉತ್ಪತ್ತಿಯನ್ನು ನೂರಕ್ಕೆನಲುವತ್ತರಷ್ಟು ಹೆಚ್ಚಿಸಬಹುದು. ಕೃಷಿ ನಿರತನಾದ ರೈತನಿಗೆ ದನಕರುಗಳ ಮತ್ತಿತರ ಜಾನುವಾರುಗಳ ಹೊಟ್ಟೆಗೆ ಸಾಕಷ್ಟು ಹುಲ್ಲನ್ನು ಹಾಕುವುದು ಕಠಿಣವಾದ ಕೆಲಸವಾಗಲಾರದು; ಅವನು ಒಳ್ಳೆಯ ರೀತಿಯಲ್ಲಿ ಕೃಷಿಯನ್ನು ನೂಡಿದಪಕ್ಷದಲ್ಲಿ ಫಸಲುಸಹ ಒಳ್ಳೆಯದಾಗುತ್ತದೆ. ಪರಿಣಾಮದಲ್ಲಿ ಪುಷ್ಕಳವಾದ ಧಾನ್ಯದೊಂದಿಗೆ ದೊಡ್ಡ ಹುಲ್ಲಿನ ರಾಶಿಯೂ ಕೈಗೆಬರುತ್ತದೆ. ಸುಧಾರಿತ ರೀತಿಯ ಬೇಸಾಯ ನೂಡುವುದರಿಂದ ಇಬ್ಬಗೆಯ ಲಾಭಗಳಾಗುತ್ತವೆ; ಅಹಾರ ಧಾನ್ಯಗಳ ಸಮೃದ್ಧಿಯೊಂದಿಗೆ ಪಶುಗಳ ಪೋಷಣೆಗೆ ಬೇಕಾದ ವಸ್ತುಗಳೂ ಲಭಿಸುತ್ತವೆ. ಹಿಂದಿಮುಂತಾದ ಪೋಷಕ ಪ

(೧೧ನೇ ಪುಟ ನೋಡಿರಿ)

ಮಾರಾಟದಲ್ಲಿ ಇತರ ಎಲ್ಲವುಗಳನ್ನೂ ಮೀರಿಸುವ ಚಹಾ !

ಇತರ ಯಾವದೇ ಚಹಾಗಿಂತಲೂ ಬ್ರೂಕ್ ಬಾಂಡ್ ಚಹಾ ಹೆಚ್ಚು ಮಾರಾಟವಾಗುತ್ತದೆ. ಏಕೆಂದರೆ ಅದು ನಿಜವಾಗಿಯೂ ಹಸನಾಗಿರುವುದಲ್ಲದೆ ಶುದ್ಧತೆಯುಳ್ಳದ್ದೂ ಆಗಿದೆ.

ಫ್ಯಾಕ್ಟರಿಯಿಂದ ಅಂಗಡಿಗೆ ತ್ವರಿತದಿಂದ ತಲುಪಿಸಲ್ಪಡುವುದರಿಂದ ಅದರ ಹಸನಾಗಿರುವಿಕೆಯನ್ನು ಖಂಡಿತ ಮಾಡುತ್ತದೆ, ಹಾಗೂ ಪೊಟ್ಟಣಗಳ ಸೀಲ್ ಮಾಡುವಿಕೆಯು ಅದಕ್ಕೆ ಧೂಳು, ರೊಳೆ ಸೇರದಂತೆಯೂ, ಬೆರಕೆ ಮಾಡಲಾಗದಂತೆಯೂ ಕಾಪಾಡುವುದು.

ಬುದ್ಧಿವಂತಿಕೆಯಿಂದ ಕೊಳ್ಳಿರಿ– ಮತ್ತು ಹಣವನ್ನುಳಿಸಿರಿ !

ಬ್ರೂಕ್ ಬಾಂಡ್– ಪ್ರತಿಯೊಂದು ಪೊಟ್ಟಣವೂ ನಿಮಗೆ ಹೆಚ್ಚುಬಟ್ಟಲು ಉತ್ತಮ ಚಹಾವನ್ನೊದಗಿಸುತ್ತದೆ!

ಇತರ ಯಾವದೇ ಚಹಾಗಿಂತಲೂ
ಬ್ರೂಕ್ ಬಾಂಡ್
ಚಹಾವನ್ನೇ
ಹೆಚ್ಚು ಜನರು ಕೊಳ್ಳುತ್ತಾರೆ !

ರೈತರ ಸಾಲಕ್ಕೆ ತಾತ್ಕಾಲಿಕ ತಡೆಯಾಜ್ಞೆ

ಈಗಿನ ಶಾಸನ ಮುಂದುವರಿಯ ಬೇಕೇ, ಬೇಡವೆ?

ಮದ್ರಾಸು ಸರಕಾರವು ಸಾಲದಿಂದ ಪೀಡಿತರಾದ ರೈತರಿಗೆ ತಾತ್ಕಾಲಿಕ ಸಂರಕ್ಷಣೆಯನ್ನು ಕೊಡುವ ಉದ್ದೇಶದಿಂದ ತಂದ ಮಸೂದೆಗೆ ಜೀವದಾನ ಮಾಡಬೇಕೋ ಬೇಡವೊ ಎಂಬ ವಿಷಯವನ್ನು ಈಗ ಪರಿಶೀಲಿಸುತ್ತಿದೆಯೆಂದು ತಿಳಿದು ಬರುತ್ತದೆ. ಕಳೆದ ದಶಂಬರ ತಿಂಗಳಲ್ಲಿ ಮದ್ರಾಸು ರಾಜ್ಯದ ಗವರ್ನರರು ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿ ಸಾಲಗಾರರಾದ ರೈತರ ಮೇಲೆ ಸಾಲದ ಹಣವನ್ನು ಪಾವತಿ ಮಾಡಬೇಕೆಂಬ ದಬ್ಬಾಳಿಕೆಗಾಗಿ, ದಾವೆಗಳನ್ನು ಹೂಡಲಾಗದೆಂದು ವಿಧಿಸಿದರು. ಫೆಬ್ರುವರಿ ತಿಂಗಳಲ್ಲಿ ಶಾಸನ ಸಭೆಯ ಅಧಿವೇಶನವು ಜರಗಿದಾಗ ಇದಕ್ಕೆ ಮನ್ನಣೆಯು ಕೊಡಲ್ಪಟ್ಟಿತು. ಈಗ ಮಾಡಲಾದ ಟೀಕೆಗಳನ್ನು ಉತ್ತರಿಸುತ್ತಾ ಅಂದು ಮುಖ್ಯಮಂತ್ರಿಗಳಾಗಿದ್ದ ಶ್ರೀ. ರಾಜಗೋಪಾಲಾಚಾರಿಯವರು ಇದು ಕೇವಲ ತಾತ್ಕಾಲಿಕ ರಕ್ಷಣೆಯನ್ನು ಕೊಡುವ ಶಾಸನವಾಗಿದೆಯೆಂದೂ ರೈತರ ಸಾಲಗಳನ್ನೆಲ್ಲ ಮನ್ನಾಮಾಡುವ ಉದ್ದೇಶ ಎಳ್ಳಷ್ಟೂ ಇಲ್ಲವೆಂದೂ ಸ್ಪಷ್ಟೀಕರಣವನ್ನು ಕೊಟ್ಟಿದ್ದರು. ಗ್ರಾಮಾಂತರ ಪ್ರದೇಶಗಳಲ್ಲಿನ ಆರ್ಥಿಕ ರಚನೆಯ ಮೇಲೆ ದುಷ್ಪರಿಣಾಮ ಮಾಡುವುದಕ್ಕೆ ಸರಕಾರ ಸ್ವಲ್ಪವೂ ಇಚ್ಛಿಸುವುದಿಲ್ಲವೆಂದೂ ಅವರು ಹೇಳಿದ್ದರು.

ಆದರೆ ಕಳೆದ ಹತ್ತು ತಿಂಗಳ ಅನುಭವವನ್ನು ಹೇಳುವುದಾದರೆ, ರಾಜಗೋಪಾಲಾಚಾರಿಯವರ ಭರವಸೆಯು ಮಾತುಗಳು ಸಾಕಷ್ಟು ಗಾಢವಾದ ಪರಿಣಾಮವನ್ನು ಮಾಡಿದಂತೆ ಕಂಡು ಬರುವುದಿಲ್ಲ. ಸಾಲವನ್ನು ಮುಳುಗಿಸುವ ಉದ್ದೇಶ ಸರಕಾರಕ್ಕೆ ತಿಲಾಂಶದಷ್ಟೂ ಇಲ್ಲವೆಂದು ಅಧಿಕಾರ ಸ್ಥಾನದಲ್ಲಿದ್ದವರು ಹೇಳಿದ್ದರೂ ಹೆಚ್ಚಿನ ರೈತರು ಕಾವು ಮಾಡಿದ ಸಾಲವನ್ನು ಮರುಪಾವತಿ ಮಾಡುವ ಆವಶ್ಯಕತೆಯೆ ಇಲ್ಲವೆಂದು ನಂಬಿಕೊಂಡು ಕುಳಿತಿರುವಂತೆ ತೋರುತ್ತದೆ. ತಾತ್ಕಾಲಿಕವಾಗಿ ನೀಡಲಾದ ರಕ್ಷಣೆಗೆ ಬೇಗನೆ ಶಾಶ್ವತ ಸ್ವರೂಪವನ್ನು ಸರಕಾರ ಕೊಟ್ಟೇ ತೀರುವುದೆಂದು ಅವರು ನಂಬಿರುವಂತೆ ಭಾಸವಾಗುತ್ತದೆ. ಇದರಷ್ಟು ತಪ್ಪು ನಿರ್ಣಯವು ಬೇರೊಂದಿಲ್ಲವೆಂಬ ಸಂಗತಿಯನ್ನು ರೈತರಿಗೆ ಮನವರಿಕೆ ಮಾಡಿಸಿಕೊಡಲು ನಡೆಸಿದ ಪ್ರಯತ್ನಗಳು ಬಹಳ ವಿರಳ. ಪರಿಹಾರವನ್ನು ಕೊಡದೆಯೇ ಬೇನಾಯದ ಭೂಮಿಯನ್ನು ರೈತರಿಗೆ ಬಿಟ್ಟು ಬಿಡಬೇಕಾದದ್ದು ಯುಗಧರ್ಮವೆನಿಸಿರುವ ಈ ಕಾಲದಲ್ಲಿ, ರೈತರ ತಪ್ಪು ನಿರ್ಣಯಕ್ಕೆಯೇ ಸರಕಾರ ಶಾಸನದ ಮುದ್ರೆಯೊತ್ತಬಹುದೆಂಬ ಅಂಜಿಕೆಯು ಕೆಲವರಲ್ಲಿ ಉಂಟಾಗಿದ್ದರೆ ಆಶ್ಚರ್ಯವೇನೂ ಇಲ್ಲ

ಹೀಗೆ ಹೆದರಿದವರು ಪತ್ರಿಕೆಗಳಲ್ಲಿಯೂ ಮತ್ತಿತರ ಮಾಧ್ಯಮಗಳ ಮೂಲಕವೂ ತಾತ್ಕಾಲಿಕವಾಗಿ ನೀಡಲಾದ ರಕ್ಷಣಾ ಶಾಸನವು ಅವಧಿ ಮುಗಿದೊಡನೆಯೇ ರದ್ದಾಗಬೇಕೆಂದು ಏಕಕಂಠರವಿಂದ ಹೇಳುತ್ತಿದ್ದಾರೆ. ಅವರು ಸ್ವಾರ್ಥಕ್ಕಾಗಿ ಇಂಥ ಪ್ರಚಾರವನ್ನು ಕೈಗೊಂಡಿರುವರಿಂದು ತೋರಿದರೂ ಅವರು ಮುಂದಿಡುವ ಕಾರಣಗಳಲ್ಲಿ ಹುರುಳಿಲ್ಲದಿಲ್ಲ ಅವರ ಹೇಳಿಕೆಯನ್ನು ವಿಮರ್ಶಿಸಿದರೆ, ರೋಗದ ಪರಿಹಾರಕ್ಕೋಸ್ಕರ ಕೊಡಲಾದ ಔಷಧವು ಇನ್ನಷ್ಟು ಕೆಟ್ಟ ಪರಿಣಾಮವನ್ನೆ ಮಾಡಿರುವಂತೆ ಕಂಡು ಬರುತ್ತದೆ ಸಾಲಗಾರ ರೈತರು ಅಧಿಕ ಉತ್ಪಾದನೆಯಲ್ಲಿ ಆಸಕ್ತಿ ವಹಿಸುವಂತಾಗಬೇಕೆಂಬುದೇ ತಾತ್ಕಾಲಿಕ ರಕ್ಷಣೆಯ ಉದ್ದೇಶವೆಂದು ಸರಕಾರದವರು ಹೇಳಿದ್ದರು ಆದರೆ ಇದರಿಂದ ಆತ್ಕಾರೋತ್ಪಾದನೆಯ ಮೇಲೆ ಎಷ್ಟರ ಮಟ್ಟಿಗೆ ವಿಶೇಷ ಪರಿಣಾಮವಾಯಿತೆಂದು ತಿಳಿಯದು. ನಿಜ ಹೇಳಬೇಕೆಂದರೆ, ಅದು ತೋರಿಕೆಗಾಗಿ ಕೊಟ್ಟ ನೆವನವಾಗಿದ್ದಿತು. ಬರಗಾಲದ ದೆಸೆಯಿಂದ ತಮಗು ನಾಡಿನ ಕೆಲವು ಜಿಲ್ಲೆಗಳಲ್ಲಿ ರೈತರಿಂದ ವಸೂಲಾಗದೆಉಳಿದಿದ್ದ ಕಂದಾಯವನ್ನು ಯಾವ ತರದ ಆತಂಕವೂ ಇಲ್ಲದಂತೆ ಸಂಗ್ರಹಿಸಲಿಕ್ಕೆಂದೇ ಸುಗ್ರೀವಾಜ್ಞೆಯನ್ನು ಹೊರಡಿಸಲಾಯಿತೆಂದರೆ, ಅದು ಹೆಚ್ಚು ಯಥಾರ್ಥವಾದ ಕಾರಣವೆನಿಸುತ್ತದೆ.

ಇದರಿಂದ ಹಳ್ಳಿಗಳಲ್ಲಿ ಹಣವನ್ನು ಬಡ್ಡಿಗೆ ಕೊಡುತ್ತಿದ್ದವರಿಗೆ ಕೊಂದರೆಗಳನ್ನು ಉಂಟು ಮಾಡಿ, ತನ್ನ ಬೊಕ್ಕಸವನ್ನು ತುಂಬಿಸಲು ಪ್ರಯತ್ನಿಸಿತೆಂಬ ಆರೋಪವು ಸರಕಾರದ ಮೇಲೆ ಬೀಳುತ್ತದೆ. ಪರಿಸ್ಥಿತಿಯನ್ನು ಹೀಗೆಯೇ ಮುಂದುವರಿಸಿದರೆ, ಪ್ರಜೆಗಳಲ್ಲಿನ ಒಂದು ವರ್ಗಕ್ಕೆ ಅನ್ಯಾಯವಾಗುವುದಿಲ್ಲವೆ ಎಂಬ ಪ್ರಶ್ನೆಯನ್ನು ಸರಕಾರ ಉತ್ತರಿಸಬೇಕಾಗುತ್ತದೆ. ಹಣವನ್ನು ಸಾಲವಾಗಿ ಕೊಡುವವರೆಲ್ಲರೂ ಸಾಕಷ್ಟು ಉಳ್ಳವರಲ್ಲವೆಂದೂ ಎಲ್ಲರೂ ರೈತರನ್ನು ತೊಂದರೆ ತಾಪತ್ರಯುಗಳಿಗೆ ಸಿಲುಕಿಸುವ ಮನೋಭಾವದವರಲ್ಲವೆಂದೂ ಮುಂಡಿಸಲಾಗುವ ವಾದವನ್ನು ಬಲವಾದ ಕಾರಣವಿಲ್ಲದೆ ಉಪೇಕ್ಷಿಸುವುದು ಸರಿಯಾಗದು. ತಾತ್ಕಾಲಿಕವಾಗಿ ಹಣದ ವಸೂಲಿಗೆ ತಡೆಯಾಜ್ಞೆಯನ್ನು ವಿಧಿಸಿದವರಿಂದ ಪರಸ್ಪರ ಒಪ್ಪಂದ ಮತ್ತು ವಿಶ್ವಾಸದ ಮೇಲೆ ಕೊಡಕೊಳ್ಳುವ ವ್ಯವಹಾರವನ್ನು ನಡೆಯುವ ಸಂಪ್ರದಾಯಕ್ಕೆಯೇ ಪ್ರಬಲ ಆಘಾತ ಸಂಭವಿಸಿತೆಂಬುದೂ ಕೇಳಿ ಬರುತ್ತದೆ. ಪರಿಣಾಮದಲ್ಲಿ ರೈತರಿಗೆ ಎಷ್ಟೇ ಅಗತ್ಯ ಬಿದ್ದರೂ ಹಣದ ಸಹಾಯವು ಸಿಗದ ಪರಿಸ್ಥಿತಿ ನಿರ್ಮಾಣವಾಯಿತೆಂದು ಹೇಳಲಾಗುತ್ತದೆ

ಸರಕಾರವು ಇದನ್ನು ಉತ್ತರಿಸದೆ ಕುಳಿತಿರಲಾರದು – ರೈತರಿಗೆ ಎತ್ತು, ಕೋಣ, ಗಳಿಗೆ, ಬೀಜ ಮತ್ತಿತರ ಬೇಸಾಯದ ಕರ್ಚುಗಳಿಗಾಗಿ ಹಣವು ಅಗತ್ಯವೆನಿಸುತ್ತದೆ. ಸಾಮಾನ್ಯವಾಗಿ ಅವರು ತಾವು ಬೇಸಾಯ ಮಾಡುವ ಭೂಮಿಯ ಒಡೆಯರಿಂದ ಅದನ್ನು ಸಾಲವಾಗಿ ಪಡೆಯುತ್ತಾರೆ. ಸ್ವಲ್ಪ ಸ್ಥಿತಿವಂತರಾದ ರೈತರು ಮಿತ್ರ ವರ್ಗದಿಂದ ಅದನ್ನು ದೊರಕಿಸಿಕೊಳ್ಳುತ್ತಾರೆ—ಆಂತೂ ಹೊರಗಿನಿಂದ ಹಣ ಬಂದೇ ಬೇಸಾಯದ ಕೆಲಸವನ್ನು ಮಾಡಬೇಕಾಗುತ್ತದೆ. ಹೊರಗಿನ ಹಣವು ಸಾಲ ರೂಪದಲ್ಲಿ ಸಿಗಲಾರದ ಪರಿಸ್ಥಿತಿಯನ್ನು ಸರಕಾರ ಉಂಟು ಮಾಡಿದರೆ ರೈತರ ಬವಣೆಯನ್ನು ವರ್ಣಿಸಿ ಮುಗಿಯದು. ಕಳೆದ ಹತ್ತು ತಿಂಗಳ ಅನುಭವ ಇದೇ ಮಾತನ್ನು ಪುಷ್ಟೀಕರಿಸುತ್ತದೆ ರೈತರಿಗೆ ಹಣ ಕೊಡುವುದೆಂದರೆ ಯಾರಿಗೂ ಧೈರ್ಯವಿಲ್ಲ; ಬೇಂಕಿನವರೂ ಸುಲಭದಲ್ಲಿ ಸಾಲ ಕೊಡುವುದಿಲ್ಲ ಗ್ರಾಮಾಂತರ ಪ್ರದೇಶಗಳ ಜನರಿಗಾದ ದುರವಸ್ಥೆಯನ್ನು ನಿವಾರಿಸಲು ಸರಕಾರ ಯಾ

THE CANARA MUTUAL ASSURANCE COMPANY, LTD.,

Managing Director. T. R. A. PAI

Head Office. **UDIPI**, S INDIA.] [Estd: 1935

ಅತ್ಯುತ್ತಮ ಬೋನಸ್

ಲಾಭಸಹಿತ ಪೋಲಿಸಿಗಳಿಗೆ ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ. 18/- ಹೋಲ್ ಲೈಫ್ ಎಶ್ಯೂರೆನ್ಸಿಗೆ

ರೂ. 15/- ಎಂಡೋಮೆಂಟ್ ಎಶ್ಯೂರೆನ್ಸಿಗೆ

31-12-1953ನೇ ತಾರೀಕಿನಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ. ೧೯೩೫

ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಪಂಚಿದ ಕಂಪೆನಿ.

CHIEF AGENTS:

THE COMMERCIAL CORPORATION OF INDIA, LTD ,

UDIPI, S India

ನಂಬಿಕೆಗೆ ಅರ್ಹತೆ!

ಅತ್ಯುತ್ತಮ ಟಾಯಲೆಟ್ ಸಾಬೂನಿನಲ್ಲಿ ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ ಅವೆಲ್ಲಾ

ಮೈಸೂರು ಸ್ಯಾಂಡಲ್ ಸೋಪಿನಲ್ಲಿ

ಇರುವವು ಎಂದು ಖಚಿತವಾಗಿ ಹೇಳುತ್ತೇನೆ.

* * *

— ಎಲ್ಲಾ ಕಡೆಗಳಲ್ಲೂ ದೊರಕುವುದು —

ಗೌರ್ವಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು.

Member: I. S. T. M. A.


ಪೈಲ್‌ವಾನನ ಆಕೃತಿ
ಕಟ್ಟುಮಸ್ತಾದ ಮಂಡಗಳು ಅವನನ್ನು ದಬ್ಬ ಪೈಲ್‌ವಾನನನ್ನಾಗಿ ಮಾಡಿತು ಪ್ರತಿದಿನವೂ ಅವನು ತೆಗೆದುಕೊಳ್ಳುವ ಪ್ರಿಯವಾದ ಟಾನಿಕ್ ಆ ವೀರತೆಯಾಗುವುದಕ್ಕೆ ಸಮಾಜಕಾರಿಯಾಗಿರುವುದು ಅವನು ಪ್ರತಿದಿನಾ ತೆಗೆದುಕೊಳ್ಳುವ ಟಾನಿಕ್
ಜೀವಾಮೃತಂ
ಶರೀರಕ್ಕೆ ಬಲವರ್ಧಿನಿ
ಆಯುರ್ವೇದಾಲಯಂ ಲಿಮಿಟೆಡ್ ಮೈಸೂರು-17

ವ ಕ್ರಮವನ್ನೂ ಕೈಗೊಳ್ಳಲಿಲ್ಲ. ಸಹಕಾರಿ ಸಂಘಗಳಿಂದಲೇ ಸ್ವಲ್ಪ ವ ಟ್ಟಿಗಾದರೂ ರೈತರಿಗೆ ಸಹಾಯ ಲಭಿಸಿತು. ಆದರೆ ಆಲ್ಲಿ ಸಹ ಅರ್ಜಿನಾರರ ಸಂಖ್ಯೆ ವಿಪರೀತವಾಗಿ ಹೆಚ್ಚಿದ ದೆಸೆಯಿಂದ ನಿರಾಶರಾಗಿ ಮರಳಿದವರ ಉದಾಹರಣೆಗಳೂ ಸಿಗುತ್ತವೆ. ಮೇಲಾಗಿ ಪ್ರತಿಯೊಂದು ಹಳ್ಳಿಯಲ್ಲಿ ಸಹಕಾರಿ ಬ್ಯಾಂಕುಗಳು ಇಲ್ಲವಲ್ಲ!

ಸಹಜವಾಗಿ ಉಂಟಾದಮೇಲಿನತೊಡಕುಗಳನ್ನು ಇನ್ನಷ್ಟು ಹೆಚ್ಚಿಸುವ ಕೆಲವು ವಿಷಯಗಳೂ ಈಗಿನ ಶಾಸನದಲ್ಲಿಕಾಣಿಸುತ್ತವೆ: ರೈತ ಅಥವಾ ಕೃಷಿಕ ಶಬ್ದಕ್ಕೂ ಸಾಲವೆಂಬ ಶಬ್ದಕ್ಕೂ ನೀಡಲಾದ ಅರ್ಥವು ಬಹಳ ವ್ಯಾಪಕವಾಗಿದ್ದು, ಶಾಸನದ ಉದ್ದೇಶಕ್ಕೆ ವ್ಯತಿರಿಕ್ತವಾದ ಪರಿಣಾಮಗಳನ್ನುಂಟುಮಾಡುವುದಕ್ಕೆ ಇದು ಪ್ರಮುಖವಾದ ಕಾರಣವೆಂದರೆ ತಪ್ಪಾಗದು. ಈಗಿನ ಶಾಸನದ ಪ್ರಕಾರ, ಒಂದು ತುಂಡು ಕೃಷಿ ಭೂ ಮಿ ಯ ನ್ನು ಸ್ವಂತವಾಗಿ ಹೊಂದಿದ ಯಾರೇ ಆಗಲಿ ರೈತನೆಂದು ಪರಿಗಣಿಸಲ್ಪಡುವನು. ಕೃಷಿಯಿಂದಲೇ ಅವನ ಜೀವನೋಪಾಯ ನಡೆಯುಬೇಕೆಂಬ ನಿರ್ಬಂಧನೇನೂ ಈಗ ಇರುವುದಿಲ್ಲ. ಇದು ಬಹಳ ಕೆಟ್ಟಸಂಗತಿ: ಮುಖ್ಯ ಉದ್ಯೋಗವಾಗಿ ವ್ಯಾಪಾರ ಮತ್ತಿತರ ವೃತ್ತಿಗಳನ್ನು ಅವಲಂಬಿಸಿ, ಎಲ್ಲೋ ಹಿರಿಯರಿಂದ ಬಂದ (ಅಥವಾ ಸ್ವತಃ ಸಂಪಾದಿಸಿದ) ತುಣುಕು ಭೂಮಿಯನ್ನು ಕೃಷಿ ಮಾಡುತ್ತಿದ್ದಷ್ಟಕ್ಕೆ ಅವನನ್ನು ರೈತನೆಂದು ಪರಿಗಣಿಸುವುದು ಸರಿಯಾಗಲಾರದು. ದೊಡ್ಡ ದೊಡ್ಡ ಪರ್ಗದಾರರು ಮತ್ತು ಭೂಮಾಲಿಕರಿಗೆ ಹಡೆಯಾಜ್ಞೆಯನ್ನು ಅನ್ವಯಿಸಿರುವುದೂ ಯೋಗ್ಯವೆನಿಸದು. ಅವರು ಸ್ವತಃ ಬೇಸಾಯಮಾಡುವುದಿಲ್ಲವಾದರೆ, ಮಾಡಿದರೂ ಸಾಕಷ್ಟು ಹೆಚ್ಚು ಹುಟ್ಟುವಳಿ ಬರುತ್ತಿದ್ದ ಪಕ್ಷಾದರೆ ಅವರಿಗೆ ಇನ್ನು ಮುಂದೆಯೂ ಛಡಿಯೆ ತೋರಿಸುವುದು ಇಷ್ಟವಲ್ಲ.

ಸಾಲ ವಸೂಲಿಗೆ ತಡೆಯಾಜ್ಞೆ ವಿಧಿಸಿದುದರ ಉದ್ದೇಶವು ಅಧಿಕ ಆಹಾರದ ಉತ್ಪಾದನೆಗೆ ಎಂದಿರುವುದರಿಂದ, ಕೃಷಿಗಾಗಿ ವಿನಿಯೋಗವಾಗುವ ಹಣಕ್ಕೆ ಮಾತ್ರ ಶಾಸನವನ್ನು ಅನ್ವಯಿಸುತ್ತಿದ್ದರೆ ಉಚಿತವಾಗುತ್ತಿತ್ತೆಂದು ಹೇಳಲಾಗುತ್ತದೆ. ಅನ್ಯಥಾ ವ್ಯಾಪಾರ ವ್ಯವಹಾರಗಳಿಗೋ ಮೊದುವೆ ಮುಂಜಿಗಳಿಗೋ ಇತರ ವಿಲಾಸೋಪಭೋಗಗಳಿಗೋ ಹಣವನ್ನು ಉಪಯೋಗಿಸಿ ಬಿಟ್ಟು, ಈ ಸಾಲದ ಮರುಪಾವತಿಗಾಗಿ ಒತ್ತಾಯ ಬಂದಾಗ, ಈಗಿನ ಶಾಸನದ ಆಶ್ರಯದಲ್ಲಿ ರೈತನಾದವನು ತೆಪ್ಪಗೆ ಕುಳಿತಿರಬಹುದಾಗುತ್ತದೆ. ಸರಕಾರವು ಇಂಥದಕ್ಕೆ ಉತ್ತೇಜನೆಯನ್ನು ಕೊಡುವುದು ಅನೇಕ್ಷಣೀಯವೆನಿಸದು. ಆದರೆ ಇಲ್ಲಿ ವ್ಯಾವಹಾರಿಕವಾದ ಜೊಂದರೆಯೊಂದು ಕಾಣಿಸುತ್ತದೆ — ವಿದ್ಯಾಭ್ಯಾಸದ ಸೋಂಕೂ ತಗಲದ ಸಾಮಾನ್ಯ ರೈತನು ತಾನು ಸಾಲವಾಗಿ ಪಡೆದ ಹಣವನ್ನು ಬೇಸಾಯಕ್ಕಾಗಿಯೇ ವಿನಿಯೋಗಿಸಿರುವೆನೆಂದು ದೈನಂದಿನ ಲೆಕ್ಕ ಪತ್ರಗಳನ್ನಿಟ್ಟು ರುಜುವಾತುಪಡಿಸುವುದು ಎಷ್ಟಾದರೂ ಕಷ್ಟದ ಕೆಲಸ.

ಇದಕ್ಕೋಸ್ಕರ ಬೇರೇನಾದರೂ ಉಪಾಯವನ್ನು ಕಂಡು ಹಿಡಿದರೆ ಒಳಿತಾ ದೀತು — ನನ್ನ ಅಭಿಪ್ರಾಯದಲ್ಲಿ ಸರಕಾರದವರು ತಗಾಯಿ ಸಾಲದ ಮಾದರಿಯಲ್ಲಿ ಹಳ್ಳಿಯ ರೈತರಿಗೆ ಸಾಕಷ್ಟು ಹೆಚ್ಚು

(೧೨ನೇ ಪುಟ ನೋಡಿರಿ)

ಸಾಮಾಜಿಕ ಅಧಃಪತನ

ನೈತಿಕ ಸ್ವಾಸ್ಥ್ಯ ರಕ್ಷಣೆಯಲ್ಲಿ ಸ್ತ್ರೀಯರ ಪಾತ್ರ

ಪೂರ್ವ ಪಂಜಾಬಿನ ರಾಜಧಾನಿಯಾದ ಚಂಡೀಗಡದಲ್ಲಿ ಭಾರತದ ಸಾಮಾಜಿಕ ಮತ್ತು ನೈತಿಕ ಸ್ವಾಸ್ಥ್ಯ ಸಂಘದ ನಾಲ್ಕನೇ ವಾರ್ಷಿಕ ಅಧಿವೇಶನವು ಮೊನ್ನೆ ದಿನಾಂಕ ೩ರಂದು ಜರಗಿತು. ಇದನ್ನು ಉದ್ಘಾಟಿಸಿದ ಗವರ್ನರ ಶ್ರೀ. ಪಿ. ಎನ್. ಸಿಂಗರು "ಸಾಮಾಜಿಕ ಮತ್ತು ನೈತಿಕ ಅಧಃಪತನವನ್ನು ಹೋಗಲಾಡಿಸಲು ಸ್ತ್ರೀಯರೇ ಹೋರಾಡುವುದು ಅಪೇಕ್ಷಣೀಯ" ಎಂದರು. ಅನೇಕ ಸ್ತ್ರೀಯರು ತಮ್ಮನ್ನು ವ್ಯಾಪಾರ ವಸ್ತುಗಳಂತೆ ಮಾರಿಕೊಳ್ಳುವ ಪರಿಸ್ಥಿತಿಯನ್ನು ಕಾಣುತ್ತಿದ್ದೇವೆ. ಗಂಡಂದಿರ ಕಾಟ, ಅತ್ತೇಸ್ಸರ ದುಷ್ಟ ಬುದ್ಧಿ, ದಾರುಣವಾದ ಬಡತನ ಮತ್ತು ಒನ್ಮೆ ತಪ್ಪು ಹೆಜ್ಜೆ ಇಟ್ಟವರನ್ನು ಕ್ಷಮಿಸದಿರುವ ಸಾಮಾಜಿಕ ಮನೋಭಾವಗಳು ವೇಶ್ಯಾ ವೃತ್ತಿಯನ್ನು ಕೈಗೊಳ್ಳುವಂತೆ ಸ್ತ್ರೀಯರನ್ನು ಒತ್ತಾಯಿಸುತ್ತವೆ. ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಸಾಮಾಜಿಕ ಕಲ್ಯಾಣ ಕಾರ್ಯಗಳನ್ನು ಕೈಗೊಂಡು ಇವರೆಲ್ಲರ ಉದ್ಧಾರಕ್ಕೆ ಪ್ರಯತ್ನಿಸುವುದು ವಿಹಿತ ಎಂದವರು ಹೇಳಿದರು.

ಸ್ವಾಸ್ಥ್ಯ ರಕ್ಷಣೆಯ ಮಹತ್ವ

ಮುಂದಿನ ವರ್ಷ ವೇಶ್ಯಾ ವೃತ್ತಿಯಿಂದ ಮುಕ್ತರಾದ ಸ್ತ್ರೀಯರಿಗೆ ಉಚಿತ ಉದ್ಯೋಗಗಳನ್ನು ಕಲಿಸಿ ಶಿಕ್ಷಣವನ್ನಿತ್ತು ಪೋಷಿಸುವ ಕೇಂದ್ರ ಸಂಸ್ಥೆಯೊಂದು ಸ್ಥಾಪಿಸಲ್ಪಡುವುದಾಗಿ ಅವರು ತಿಳಿಸಿದರು. ಪರಿಷತ್ತಿನ ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು ಸಾಮಾಜಿಕ ಮತ್ತು ನೈತಿಕ ಸ್ವಾಸ್ಥ್ಯಕ್ಕೆ ಸಂಬಂಧಿಸಿದ ಅಂಕೆ ಸಂಖ್ಯೆಗಳನ್ನು ಆವಶ್ಯಕ ಸಾಹಿತ್ಯವನ್ನೂ ಸಂಗ್ರಹಿಸುವುದಕ್ಕಾಗಿ ಧನಸಹಾಯ ಮಾಡಲು ಒಂದು ಸಂಸ್ಥೆಯನ್ನು ಸ್ಥಾಪಿಸಲಾಗುವುದು ಎಂದರು. ವೇಶ್ಯಾ ವೃತ್ತಿಯನ್ನು ಪ್ರತಿಬಂಧಿಸುವುದಕ್ಕೋಸ್ಕರ ಶಾಸನವನ್ನು ಮಾಡಲು ಕೇಂದ್ರಸರಕಾರವನ್ನು ಆನರು ಒತ್ತಾಯಿಸಿದರು. ಇದನ್ನು ಪ್ರತ್ಯೇಕವಾಗಿ ವಿಂಗಡಿಸುವ ಅಗತ್ಯವಿಲ್ಲವೆಂದೂ ಸಾಮಾಜಿಕ ಮತ್ತು ಕೌಟುಂಬಿಕ ಭದ್ರತೆಯನ್ನೂ ಕ್ಷೇಮವನ್ನೂ ರಕ್ಷಿಸುವ ಕಾರ್ಯಕ್ರಮದ ಅಂಗವೆಂದೇ ಇದನ್ನು ಭಾವಿಸುವುದೊಳಿತೆಂದೂ ಅವರು ಅಭಿಪ್ರಾಯಪಟ್ಟರು.

ಗ್ರಾಮೋದ್ಯೋಗ ಪರಿಷತ್ತು

ಪುಣೆಯಲ್ಲಿ ದಿನಾಂಕ ೧೭ರಂದು ಅಖಿಲಭಾರತ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳದವರು ಕರೆದಿದ್ದ ವಿಧಾಯಕ ಕಾರ್ಯಕರ್ತರ ಪರಿಷತ್ತನ್ನು ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ಉದ್ಘಾಟಿಸಿದರು. ಅವರು ತಮ್ಮ ಭಾಷಣದಲ್ಲಿ ದೇಶದಲ್ಲಿನ ನಿರುದ್ಯೋಗ ಪರಿಸ್ಥಿತಿಯ ವಿಶ್ಲೇಷಣೆಯನ್ನು ಮಾಡುತ್ತಾ ಔದ್ಯೋಗೀಕರಣದಿಂದ ಇದನ್ನು ಸುಧಾರಿಸಲಾರೆನೆಂದು ಅಭಿಪ್ರಾಯಪಟ್ಟರು. ಆದಷ್ಟು ಹೆಚ್ಚು ಜನರಿಗೆ ಕೆಲಸವನ್ನೊದಗಿಸುವುದು ಇಂದಿನ ಆವಶ್ಯಕತೆ ಎಂದು ಹೇಳುತ್ತಾ ಇದಕ್ಕಾಗಿ ಕೆಲವು ವಸ್ತುಗಳಿಗೆ ತುಸು ಹೆಚ್ಚು ಬೆಲೆಯನ್ನು ಕೊಡಬೇಕಾಗಿ ಬಂದರೆ ಅದಕ್ಕೆ ಸಾಮಾಜಿಕರು ಹಿಂಜರಿಯಬಾರದೆಂದು ಉಪದೇಶಿಸಿದರು. ದೊಡ್ಡ ಉದ್ದಿಮೆಗಳಿಗೆ ಸಂರಕ್ಷಣೆಯನ್ನು ಕೊಡುವುದಕ್ಕಿಂತ ಕೈಮಗ್ಗದ ಬಟ್ಟೆಗೂ ಖಾದಿಗೂ ಗ್ರಾಮೋದ್ಯೋಗಗಳಿಗೂ ಉತ್ಪಾದನಾ ಕ್ಷೇತ್ರವನ್ನು ಕಾಯ್ದಿಡಬೇಕೆಂದು ಅವರು ಅಪೇಕ್ಷಿಸಿದರು.

ಸ್ವಾವಲಂಬನ ಸೂತ್ರ

ಪರಿಷತ್ತು ಸ್ವೀಕರಿಸಿದ ಗೊತ್ತುವಳಿಗಳಲ್ಲಿ ಒಂದು ಸ್ವಾವಲಂಬನ ಸಿದ್ಧತೆಯಿಂದ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವುದು ಸರಕಾರದ ಘೋರಣವಾಗಿರಬೇಕೆಂದು

ZANDU'S THREE GEMS of AYURVEDIC MEDICINES

ಝಂಡೂರವರ ಮಕರಧ್ವಜ ಪಿಲ್ಸ್ (ಸುವರ್ಣ ಮಿಶ್ರಿತ)
ದೀರ್ಘಾವಧಿಯ ಕೆಮ್ಮು, ನರಗಳ ನಿಸ್ತ್ರಾಣ ಮತ್ತು ಸರ್ವಸಾಮಾನ್ಯ ಅಶಕ್ತತೆ ಹಾಗೂ ಇತರ ಎದೆಯ ಬೇನೆಗಳಿಗೆ ಅತ್ಯಧಿಕ ಗುಣಕಾರಿ. ಬೆಲೆ: 1 ಡಬ್ಬಿಗೆ ರೂ. 9—0—0

ಝಂಡೂರವರ ವಸಂತ ಕುಸುಮಾಕರ ರಸ—ಮೂತ್ರಾತಿಸಾರ, ಸಿಹಿಮೂತ್ರ, ನಿಸ್ಸತ್ವ ಇತ್ಯಾದಿ ಬಹುಕಾಲದ ಮೂತ್ರ ದೋಷಗಳಿಗೆ ಡಾಕ್ಟರುಗಳಿಂದ ವಿಶಿಷ್ಟ ತರದಲ್ಲಿ ಶಿಫಾರಸು ಮಾಡಲ್ಪಟ್ಟಿದೆ. ಬೆಲೆ: ಕಾಲು ಡಬ್ಬಿಗೆ ರೂ. 6—0—0.

ಝಂಡೂರವರ ಸುವರ್ಣ ಮಿಶ್ರಿತ ಚ್ಯವನಪ್ರಾಶ—ಸರ್ವರಿಗೂ ರುಚಿಕರವಾದ ಟಾನಿಕ್ ಆಹಾರ. ಬಂಗಾರ ಮತ್ತು ಇತರ ಭಸ್ಮಗಳ ಮಿಶ್ರಣ ವಿರುವುದರಿಂದ ಶೀತ, ಕಫ, ಕೆಮ್ಮುವಿಗೆ ಅತ್ಯಂತ ಪರಿಣಾಮಕಾರಿ.
ಬೆಲೆ: 1 ಡಬ್ಬಿಗೆ ರೂ. 7—8—0. ಕಾಲು ಡಬ್ಬಿಗೆ ರೂ. 2—0—0.

ಝಂಡೂರವರ ಔಷಧಿಗಳು ವ.ಕ.ಜಿಲ್ಲೆಯ ಅಧಿಕೃತ ವಿಜಂಟರಲ್ಲಿ ದೊರೆಯುವುವು

ಕ್ಯಾಟಲಾಗಿಗೆ ಕೆಳಗಿನ ಸೋಲ್ ವಿಜಂಟರಿಗೆ ಬರೆಯಿರಿ.

DAMODAR & CO.,
113 Nainiappa Naicken Street, P. T.—MADRAS-3.

(ಉತ್ತಮ ಸಾರಸ್ವತ ಬ್ರಾಹ್ಮಣರ ಅಡಿಗೆ, ಶುಚಿ ರುಚಿಯಾದ ವೈಸ್‌ಪ್ಲೇಟ್)
ರುಚಿಕರವಾದ ಊಟ— ಹವೇಶೀರ್ (Airy) ವಸತಿ,
ಎರಡು ಊಟ, ಕೋಟ್ (Cot) ಇತ್ಯಾದಿ ಸೌಕರ್ಯ.
ತಿಂಗಳೊಂದರ ರೂ. 52/- ಮಾತ್ರ.
ವಿಶೇಷ ಮಾಹಿತಿಗೆ ಪ್ರತ್ಯಕ್ಷ ವಿಚಾರಿಸಿರಿ.

ಸದ್ಗುರು ಬೋರ್ಡಿಂಗ್ ಎಂಡ್ ಲೋಜಿಂಗ್
ಹಿಂದ್ ಮಾತಾ ಸಿನೇಮದ ಸಮೀಪ, ದಾದರ್, ಮುಂಬಯಿ ೧೪.
ವ್ಯವಸ್ಥಾಪಕ: ವಿ. ಯಸ್. ಪ್ರಭು.

ಎಸ್ಟೇಟ್ ಡ್ಯೂಟಿಯ ತೊಂದರೆಯನ್ನು ತಪ್ಪಿಸಿಕೊಳ್ಳಬೇಕೆಂದಿರುವಿರಾ?

ಅದರಸಂಬಂಧವಾದ ಸಮಸ್ಯೆಗಳನ್ನು ಯೂನೈಟೆಡ್ ಇಂಡಿಯಾ ನಿಮ್ಮ ಸಂಗಡ ಚರ್ಚಿಸಲು ಸಂತೋಷದಿಂದ ಸಿದ್ಧವಿದ್ದಾರೆ.
ವಿಮಾ ಪಾಲಿಸಿಗಳಿಗೆ ಎಸ್ಟೇಟ್ ಡ್ಯೂಟಿಯಿಂದುಂಟಾಗುವ ನ್ಯೂನಾತಿರೇಕಗಳನ್ನು ಚರ್ಚಿಸಲು ನಮ್ಮ ಪ್ರಧಾನ ಕಛೇರಿಯಲ್ಲಿ ಇದಕ್ಕಾಗಿಯೇ ಪ್ರತ್ಯೇಕವಾದ ವಿಶೇಷ ವಿಭಾಗವು ತೆರೆಯಲ್ಪಟ್ಟಿದೆ. ಮತ್ತು ಆಲ್ಲಿ ಇದರ ಸಂಬಂಧವಾಗಿ ವಿಚಾರವಿನಿಮಯ ಮಾಡಬಹುದು.

ನಮ್ಮ ಗೋಪ್ಯ ಸಲಹೆಯನ್ನು ಮತ್ತು ಸೇವೆಯನ್ನು ನೀವು ಉಚಿತವಾಗಿ ಪಡೆಯಬಹುದು. ಮತ್ತು ಇದಕ್ಕೆ ನೀವು ಯಾವ ವಿಧದಲ್ಲಿಯೂ ದಾಕ್ಷಿಣ್ಯಬದ್ಧರಾಗುವುದಿಲ್ಲ.



ದಿ ಯುನೈಟೆಡ್ ಇಂಡಿಯಾ
ಲೈಫ್ ಎಶ್ಯೂರೆನ್ಸ್ ಕಂಪೆನಿ
ಲಿ ಮಿ ಟೆ ಡ್
ಪ್ರಧಾನ ಕಛೇರಿ:
ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್ಸ್,
ಪೋಸ್ಟ್ ಬಾಕ್ಸ್ 281, ಮದರಾಸು-1.
UI 160

ಸೂಚಿಸುತ್ತದೆ. ಎರಡನೆಯ ಪಂಚ ವಾರ್ಷಿಕ ಯೋಜನೆಯ ತಳಹದಿ ಇದಾಗಿರ ಬೇಕೆಂದು ಪರಿಷತ್ತಿನ ಅಭಿಪ್ರಾಯ. ನಿರುದ್ಯೋಗ ಸಮಸ್ಯೆಯ ನಿವಾರಣೆಗೆ ಗ್ರಾಮೋದ್ಯೋಗಗಳ ಪ್ರಯೋಜನವನ್ನು ಎಷ್ಟರ ಮಟ್ಟಿಗೆ ಪಡೆಯಬಹುದೆಂದು ಪ್ರಯತ್ನಿಸಬೇಕಾಗಿ ಅದು ಸಲಹೆ ಮಾಡಿತು. ಸ್ವಾವಲಂಬನ ಪದ್ಧತಿಗೆ ಸಂರಕ್ಷಣೆಯನ್ನೊದಗಿಸುವುದಕ್ಕೊಸ್ಕರ ಉತ್ಪಾದನೆಯ ಕ್ಷೇತ್ರಗಳನ್ನು ಕಾಯ್ದಿಡುವುದು, ಸಣ್ಣ ಪ್ರಮಾಣದ ಉತ್ಪಾದಕರ ಹಿತಕ್ಕಾಗಿ ದೊಡ್ಡ ಉತ್ಪಾದಕರ ಚಟುವಟಿಕೆಗಳನ್ನು ನಿಯಂತ್ರಿಸುವುದು, ಕೋಷಣೆಯನ್ನು ತಡೆಗಟ್ಟಲು ಮತ್ತು ಪೂರ್ಣೋದ್ಯೋಗವನ್ನು ಒದಗಿಸಲು ಅರ್ಥಿಕ ರಂಗದ ಸ್ಪರ್ಧೆಯನ್ನು ತಪ್ಪಿಸುವುದು ಮುಂತಾದ ವಿಷಯಗಳನ್ನು ಸರಕಾರ ವಿಚಾರಿಸಬೇಕೆಂದು ಪರಿಷತ್ತು ಸೂಚಿಸಿತು.

ಹಣಕಾಸಿನ ಸಹಾಯ

ನಮ್ಮ ದೇಶದಲ್ಲಿ ಖಾಸಗಿ ಉದ್ದಿಮೆಗಳು ಜೆನ್ನಾಗಿ ಅಭಿವೃದ್ಧಿ ಹೊಂದುವಂತೆ ನೋಡಿಕೊಳ್ಳುವುದಕ್ಕಾಗಿ ಭಾರತ ಸರಕಾರವು ಹಣಕಾಸುಗಳ ಸಹಾಯವನ್ನು ನೀಡುವ ಸಂಸ್ಥೆಯೊಂದನ್ನು ಸ್ಥಾಪಿಸಿದ್ದು, ಡಾ. ರಾಮಸ್ವಾಮಿ ಮುದಲಿಯಾರರಂಥ ಅನುಭವಿಕ ಆಡಳಿತದಾರರು ಅದಕ್ಕೆ ಯೋಗ್ಯ ಮಾರ್ಗದರ್ಶನವನ್ನು ಮಾಡುವರು. ವಿಶ್ವ ಬೇಂಕಿನವರಿಂದಲೂ ಅಮೇರಿಕ ಹಾಗೂ ಬ್ರಿಟನುಗಳಿಂದಲೂ ಸಂಸ್ಥೆಗೆ ಬಂಡವಾಳ ದೊರೆತಿರುವುದರಿಂದ ವಿದೇಶಗಳ ತಜ್ಞರ ಸಹಕಾರವನ್ನು ನಮ್ಮ ಉದ್ದಿಮೆದಾರರು ಪಡಕೊಳ್ಳುವ ಕೆಲಸ ಸುಲಭವಾಗಿರುವುದು. ಉದ್ದಿಮೆಗಳ ಕಾರ್ಯಕ್ಷೇತ್ರವನ್ನು ವಿಸ್ತರಿಸಲೂ ಪುನರ್ಘಟಿಸಲೂ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲೂ ಸಂಸ್ಥೆಯು ಸಾಲ ರೂಪದಲ್ಲಿ ಹಣವನ್ನು ಒದಗಿಸುವುದು. ಒಟ್ಟು ಹದಿನೇಳೂವರೆ ಕೋಟಿ ರೂಪಾಯಿ ಬಂಡವಾಳದ ಈ ಸಂಸ್ಥೆಯಲ್ಲಿ ಭಾರತ ಸರಕಾರದ ಪಾಲು ಏಳೂವರೆ ಕೋಟಿ ರೂಪಾಯಿಯಷ್ಟಿರುವುದು.

ಲೋಕಸಭೆಯ ಕಾರ್ಯಕಲಾಪಗಳು

ಪ್ರತಿಪಕ್ಷದವರೊಡನೆ ಕಾಂಗ್ರೆಸಿಗರ ಸ್ವರ

ಮಹತ್ವದ ವಿಷಯಗಳಲ್ಲಿ ಸಾಮಾನ್ಯವಾಗಿ ಕಾಂಗ್ರೆಸು ಸದಸ್ಯರಷ್ಟೇಯೇ ಭಿನ್ನಾಭಿಪ್ರಾಯವುಂಟಾಗುವುದು ಲೋಕ ಸಭೆಯ ಅನುಭವಕ್ಕೆ ಹಿಂದೆ ಅನೇಕ ಸಲ ಬಂದಿದ್ದಿತು—ಕಳೆದ ವಾರ ಪರೀಕ್ಷಿಲಕ ಸಮಿತಿಯಿಂದ ಪರಿಷ್ಕರಿಸಲ್ಪಟ್ಟು ಮುಂಡಿ ಸಲಾದ ಕೈಮಿನಲ್ ಪ್ರೊಸೀಜರ್ ಕೋಡಿನ ವಿಷಯದಲಲ್ಲಿ ಇದು ಸತ್ಯವಾಯಿತು. ಗೃಹ ಮಂತ್ರಿ ಕಟಜುಗಳೂ ಉಪ ಮಂತ್ರಿ ದಾತಾರರೂ ಈ ತಿದ್ದುಪಡಿ ಕಾಯಿದೆಯು ತಪ್ಪಿಸ್ಥರುಗಳನ್ನು ಬೇಗನೆ ತೀರ್ಮಾನಿಸುವುದಕ್ಕೆ ಸಹಕಾರಿಯಾಗಿದೆ ಯೆಂದು ಸಮರ್ಥಿಸಿಕೊಂಡರೂ ಅನೇಕ ಸದಸ್ಯರು ಅದನ್ನು ಒಪ್ಪಲಿಲ್ಲ. ಆಕ್ಷೇಪಿಗಳಿಗೆ ಮಹತ್ವದ ಕೆಲವು ಸವಲತ್ತುಗಳನ್ನು ಈ ಕಾಯಿದೆಯು ಕೊಟ್ಟಿರುವುದಾಗಿ ಸರಕಾರದ ಪರವಾಗಿ ಹೇಳಿದಾಗ, ಟೀಕಾಕಾರರು ಇತರ ಅನೇಕ ಸವಲತ್ತುಗಳನ್ನು ಅದು ಕಸಿದುಕೊಂಡಿದೆ ಎಂದು ಆಕ್ಷೇಪಿಸಿದರು.

ಖಂಡ ತುಂಡ ಟೀಕೆ

ಮಸೂದೆಯನ್ನು ಟೀಕಿಸಿದವರು ಮುಖ್ಯವಾಗಿ ಸರಕಾರಿ ನೌಕರರ ಮತ್ತು ಮಂತ್ರಿಗಳ ಟೀಕೆಯನ್ನು ಮಾನಹಾನಿಕರವಾಗಿ ವೃತ್ತಪತ್ರಿಕೆಗಳು ಮಾಡಿದಾಗ, ಸರಕಾರವೇ ಟೀಕಾಕಾರರ ವಿರುದ್ಧ ಕ್ರಮ ತೆಗೆದುಕೊಳ್ಳುವ ಪದ್ಧತಿಗೆ ಪ್ರಬಲ ವಿರೋಧವನ್ನು ವ್ಯಕ್ತಪಡಿಸಿದರು. ಸಾಮಾನ್ಯ ನಾಗರಿಕನಿಗಿಂತ ಹೆಚ್ಚು ಔದಾರ್ಯದಿಂದ ಸರಕಾರದ ಆಧಿಕಾರಿ ನರ್ಗವನ್ನು ನಡೆಸಿಕೊಳ್ಳುವುದು ಇಷ್ಟವಲ್ಲವೆಂದು ಅವರೆಲ್ಲರೂ ಪ್ರತಿಭಟಿಸಿದರು. ಮಸೂದೆಯ ಕೆಲವೊಂದು ಕಲಮುಗಳು ಸಂವಿಧಾನದಂತೆ ಪ್ರಾಪ್ತವಾದ ನಾಗರಿಕರ ಮೂಲಭೂತ ಹಕ್ಕುಗಳಿಗೆ ವ್ಯತಿರಿಕ್ತವಾಗಿವೆಯೆಂಬ ಅಂಶವನ್ನು ಪ್ರತಿಪಕ್ಷದವರು ಹೊರಗೆಡಹಿದರು. ಕಾಂಗ್ರೆಸು ಪಕ್ಷದ ಅನೇಕ ಸದಸ್ಯರು ಕಾಯಿದೆಗಳನ್ನೆಲ್ಲ ಪರಿಶೀಲಿಸಿ ಯೋಗ್ಯ ತಿದ್ದುಪಡಿಯನ್ನು ಮಾಡುವ ದಕ್ಕೋಸ್ಕರ ವಿಚಾರಣಾ ಮಂಡಳವನ್ನು ನೇಮಿಸಿ ಅದರ ವರದಿ ಬರುವ ವರೆಗೆ ಈಗಿನ ತಿದ್ದುಪಡಿಯನ್ನು ತಡೆಹಿಡಿಯ ಬೇಕೆಂದು ಪ್ರತಿವಾದಿಸಿದರು. ಕೊನೆಯಲ್ಲಿ ಗೃಹಮಂತ್ರಿಗಳ ವಾದಕ್ಕೆಯೇ ಸಭೆಯ ಬಹುಮತದ ಬೆಂಬಲ ಸಿಕ್ಕಿತು.

ರಾಷ್ಟ್ರಾಧ್ಯಕ್ಷರ ಕ್ರಮ

ಆಂಧ್ರದಲ್ಲಿ ರಾಷ್ಟ್ರಾಧ್ಯಕ್ಷರ ಆಳ್ವಿಕೆಯನ್ನು ಹೇರಿದ ಘೋಷಣೆಯು ಚರ್ಚೆ ನಡೆದಾಗಲೂ ಸರಕಾರವು ಬಲವಾಗಿ ಆತ್ಮ ಸಮರ್ಥನೆಯನ್ನು ಮಾಡಿಕೊಂಡೇ ಪ್ರತಿಪಕ್ಷದವರ ಟೀಕೆಯಲ್ಲಿ ಹುರುಳಿಲ್ಲವೆಂದು ಸಿದ್ಧಪಡಿಸಬೇಕಾಯಿತು. ಗೃಹ ಮಂತ್ರಿ ಕಟಜುಗಳು ಘೋಷಣೆಯ ಹಿನ್ನೆಲೆಯನ್ನು ವಿವರಿಸುತ್ತಾ ಪ್ರಕಾಶವರ ಮಂತ್ರಿಮಂಡಳದ ಪತನದ ಬಳಿಕ ಕಮ್ಯುನಿಸ್ಟ ಪಕ್ಷವೊಂದೇ ಸರಕಾರವನ್ನು ರಚಿಸುವ ಆತುರವನ್ನು ತೋರಿಸಿತು. ಪ್ರಜಾ ಸಮಾಜವಾದಿಗಳು ಹೊಸ ಚುನಾವಣೆ ನಡೆಯಲೆಂದು ಹೇಳಿದರು. ಅವಿಶ್ವಾಸ ಗೊತ್ತುವಳಿಯನ್ನು ಮಂಡಿಸಿದ ಲೋಕಸಭಾಧ್ಯಕ್ಷರ ಲಚ್ಚಣ್ಣನವರು ಇತರ ಸದಸ್ಯರೊಡನೆ ಕೂಡಿ ಸರಕಾರ ರಚಿಸುವ ವಿಷಯದಲ್ಲಿ ಯಾವ ನಿರ್ಧಾರಕ್ಕೂ ಬಂದಿಲ್ಲವೆಂದರು. ಕಮ್ಯುನಿಸ್ಟ ಧುರೀಣನಾಗಿ ರೆಡ್ಡಿಯವರು ಮಾತ್ರ ಸ್ವತಂತ್ರರನ್ನಾಗಿ ಬೇರೆ ಪಕ್ಷದ ಕೆಲವು ಸದಸ್ಯರನ್ನೂ ಅಧಿಕಾರದ ಆಮಿಷ ತೋರಿಸಿ ತಮ್ಮ ಬೆಂಬಲಕ್ಕೆ ಜೊರಕಿಸಿಕೊಳ್ಳುವ ಮನೋಭಾವವನ್ನು ಪ್ರಕಟಿಸಿದರು ಇದು ಇಷ್ಟವಲ್ಲವೆಂದು ತೋರಿದುದರಿಂದ, ರಾಷ್ಟ್ರಾಧ್ಯಕ್ಷರ ಆಳ್ವಿಕೆಯನ್ನು ಸಾರಲಾಯಿತು ಎಂದರು.

ಗೋಪಾಲನ್ನರ ಬೇಡಿಕೆ

ಕಮ್ಯುನಿಸ್ಟ ಪಕ್ಷದ ನಾಯಕರಾದ ಗೋಪಾಲನ್ನರು ಸರಕಾರದ ನೀತಿಯನ್ನು ಕಟು ಮಾತಿನಲ್ಲಿ ಖಂಡಿಸಿದರು. ಮಂತ್ರಿ ಮಂಡಳದ ಪತನದ ಬಳಿಕ ಪ್ರತಿಪಕ್ಷದ ನಾಯಕರಿಗೆ ಹೊಸ ಸರಕಾರ ರಚಿಸುವುದಕ್ಕೆ ಆಹ್ವಾನ ನೀಡುವುದು ಪ್ರಜಾಸ್ವಾಮ್ಯದ ಲಕ್ಷಣವೆಂದು ಹೇಳುತ್ತಾ ಜಾಗೆ ಮಾಡದ ಗವರ್ನರರ ನೀತಿಯನ್ನು ಅವರು ಆಕ್ಷೇಪಿಸಿದರು. ಮಂತ್ರಿ ಮಂಡಳದ ಪತನಾನಂತರದ ಪರಿಸ್ಥಿತಿಯು ಕುರಿತು ಗವರ್ನರರು ಕೇಂದ್ರಕ್ಕೆ ಕಳಿಸಿದ ವರದಿಯನ್ನು ಲೋಕ ಸಭೆಯ ಮುಂದಿಡಬೇಕೆಂದು ಅವರು ಒತ್ತಾಯಿಸಿದರು ಆದರೆ ಇನ್ನು ಅತ್ಯಂತ ಗೋಪ್ಯವಾದ ವರದಿಯಾಗಿರುವುದರಿಂದ ಅದನ್ನು ಬಹಿರಂಗಪಡಿಸುವುದು ಅಸಾಧ್ಯವೆಂದು ಕಟಜುರವರು ಸಭಾಧ್ಯಕ್ಷರು ಸಹ ತಾವು ನಿರುಪಾಯನಿದ್ದೇವೆಂದು ಹೇಳಿದರು. ಪ್ರಜಾ ಸಮಾಜವಾದಿ ಪಕ್ಷದ ಆಲೋಕ ಮೆಹರೂ ರಾಷ್ಟ್ರಾಧ್ಯಕ್ಷರ ಕ್ರಮವನ್ನು ಟೀಕಿಸಿ, ಆಂಧ್ರ ರಾಜ್ಯ ಸ್ಥಾಪನೆಯಾಗಿ ಕೂಡಲೆ ಚುನಾವಣೆಗಳನ್ನು ನಡೆಸಬೇಕಾಗಿದ್ದಿತೆಂದೂ ಆಗ ಹಾಗೆ ಮಾಡದೆ, ಪ್ರಕಾಶಮರನ್ನು ಕಾಂಗ್ರೆಸಿನ ಸಹ ಸದಸ್ಯರಾಗುವಂತೆ ಒಲಿಸಿಕೊಂಡ ನೆಹರುಗಳೇ ಇಂದಿನ ಬಿಕ್ಕಟ್ಟಿಗೆ ಜವಾಬ್ದಾರರೆಂದೂ ದೂಷಿಸಿದರು.

ಚುನಾವಣೆಗೆ ತಯಾರಿ

ಹೀಗೆ ಟೀಕೆಗಳದ್ದೂ ಲೋಕ ಸಭೆಯು ರಾಷ್ಟ್ರಾಧ್ಯಕ್ಷರ ಕ್ರಮಕ್ಕೆ ಬಹುವತದ ಸಮ್ಮತಿಯನ್ನು ನೀಡಿತು. ಇತ್ತ ಆಂಧ್ರದಲ್ಲಿ ದಿನಾಂಕ ೨೮ರಂದು ಪ್ರದೇಶ ಕಾಂಗ್ರೆಸಿನ ಮತ್ತು ವಿಸರ್ಜಿತ ಶಾಸನ ಸಭೆಯ ಕಾಂಗ್ರೆಸು ಹಾಗು ಸ್ವತಂತ್ರ ಸದಸ್ಯರ ಮತ್ತು ಸರಕಾರಿಪರ ಗುಂಪುಗಳ ಸಭೆಯೊಂದು ಜರಗಿ ಮುಂಬರುವ ಚುನಾವಣೆಯಲ್ಲಿ ಕಮ್ಯುನಿಸ್ಟರೊಡನೆ ಪ್ರಬಲ ಜೋರಾಟವನ್ನು ಕೊಡಲಾಗುವಂತೆ ಪರಸ್ಪರ ಸಂಘಟನಾ ಕ್ರಮವನ್ನು ರೂಪಿಸಲಾಯಿತು. ಮತದಾರ ಕ್ಷೇತ್ರಗಳಲ್ಲಿ ಸಂಚಾರವನ್ನು ಕೈಗೊಂಡು ಸಮರ್ಥ ಹುರಿಯಾಳುಗಳನ್ನು ನೇಮಿಸುವುದಕ್ಕೋಸ್ಕರ ಹನ್ನೊಂದು ಮಂದಿಯ ಸಮಿತಿಯೊಂದು ರಚಿಸಲ್ಪಟ್ಟಿತು. ಇಪ್ಪರ ಸರೆಗೆ ಕಾಂಗ್ರೆಸಿನ ಸಹ ಸದಸ್ಯರು ಮಾತೃವಾಗಿದ್ದ ಪ್ರಕಾಶಮರು ಈಗ ಪುನಃ ಸಂಪೂರ್ಣವಾಗಿ ಕಾಂಗ್ರೆಸು ಪಕ್ಷವನ್ನು ಸೇರಿದರೆಂದು ಸಾರಲಾಯಿತು. ಇದರಿಂದ ಕಾಂಗ್ರೆಸಿಗೆ ವಿಶೇಷ ಬೆಂಬಲ ದೊರಕಿರುವುದೆಂದೂ ಹಿಂದಿನ ಚುನಾವಣೆಯಲ್ಲಿ ಪ್ರಕಾಶಮರು ಕಾಂಗ್ರೆಸಿಗೆ ವಿರುದ್ಧ ಕೆಲಸ ಮಾಡಿದ್ದರಿಂದಲೇ ಕಮ್ಯುನಿಸ್ಟರು ಪ್ರಬಲಿಸಿದ್ದರೆಂದೂ ಈ ಸಲ ಅವರ ಆಟ ನಡೆಯದೆಂದೂ ಕಾಂಗ್ರೆಸು ವರ್ತುಲಗಳು ಹೇಳುತ್ತವೆ.

ಊಹಾಪೋಹಗಳು

ಕೇಂದ್ರ ಮಂತ್ರಿ ಮಂಡಳವನ್ನು ಪುನರ್ಘಟಿಸುವ ವಿಚಾರವನ್ನು ಪ್ರಧಾನ ಮಂತ್ರಿಗಳು ಚೀನ ಸಂಚಾರದಿಂದ ಮರಳಿದ ವರೇ ಕೈಗೆತ್ತಿ ಕೊಂಡಿದ್ದು, ಈಗ ಉತ್ತರ ಪ್ರದೇಶದ ಮುಖ್ಯ ಮಂತ್ರಿಗಳಾಗಿರುವ ಪಂಡಿತ ಗೋವಿಂದ ವಲ್ಲಭ ಪಂತರನ್ನು ಕೇಂದ್ರ ಗೃಹ ಮಂತ್ರಿ ಹುದ್ದೆಯನ್ನು ಸ್ವೀಕರಿಸುವಂತೆ ಮನವೊಲಿಸಲಾಗುತ್ತಿದೆಯೆಂದು ಅನಧಿಕೃತ ವರದಿಗಳು ತಿಳಿಸುತ್ತವೆ. ಪಂಡಿತ ಪಂತರು ತರುವಾಯ ಉತ್ತರ ಪ್ರದೇಶದ ಮುಖ್ಯ ಮಂತ್ರಿಗಳು ಯಾರಾದಾರೆಂಬ ವಿಷಯವನ್ನೂ ಊಹೆಯಲ್ಲೆದ್ದು ಈಗಲೇ ಏನೂ ಹೇಳುವಂತಿಲ್ಲ. ನೆಹರುಗಳು ದಿವಂಗತ ಕೆಡಾಲ್ವಯಿಯವರ ಸ್ಥಳಕ್ಕೆ ಒಬ್ಬ ಮುಸ್ಲಿಂ ಮಂತ್ರಿಯನ್ನು ನೇಮಿಸುವ ಇಚ್ಛೆಯನ್ನು ಹೊಂದಿರುವರೆಂದೂ ಇದಕ್ಕಾಗಿ ಉತ್ತರ ಪ್ರದೇಶದಲ್ಲಿ ಮಂತಿ ಗಳಾಗಿರುವ ಸಯ್ಯದ ಅಜಹರ್ ಮತ್ತು ಹಫೀಜ ಇಬ್ರಾಹಿಮ ಸಯ್ಯದ ಅಲಿ ಇವರಲ್ಲಿ ಯಾರಾದರೊಬ್ಬರನ್ನು ಆರಿಸಬಹುದೆಂದೂ ಇವೇ ಸುದ್ದಿಗಳು ತಿಳಿಸುತ್ತವೆ. ಕೇಂದ್ರದಲ್ಲಿ ಕಾಯಿದೆ ಮಂತ್ರಿಗಳಾಗಿರುವ ಶ್ರೀ. ಚಾರುಚಂದ್ರ ವಿಶ್ವಾಸರಿಗೆ ನೆಹರ ಗಳೊಡನೆ ಭಿನ್ನಾಭಿಪ್ರಾಯ ಬಂದಿವೆಯೆಂದೂ ಅವರು ನಿವೃತ್ತರಾಗಿ ಕೆ. ಸಿ. ನಿಯೋಗಿ, ಬರುವಂಬವ ಮುಂತಾದ ಅಥವಾ ಕೃಷ್ಣಮೆನೊನ್ನರಲ್ಲಿ ಯಾರಾದರೊಬ್ಬರು ನೇಮಿಸಲ್ಪಡಬಹುದೆಂದೂ ವದಂತಿಯುಂಟು.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ).

ಅಧಿಕೃತ ಭಂಡವಾಳ ...	...	ರೂ. 25,00,000
ಚಂದಾ ಆರಿಸಿ, ತೆತ್ತು ಬಂದ ಭಂಡವಾಳ	...	ರೂ. 20,00,000
ಕ್ಷೇಮ ನಿಧಿ ...	...	ರೂ. 10,50,000
ಠೇವಣಾತಿಗಳು ...	...	ರೂ. 2,98,19,000
ಒಟ್ಟು ವಿಲಾವಣಿ ಭಂಡವಾಳ	...	ಸುಮಾರು ರೂಪ್ಯಾ 4 ಕೋಟಿ
ಒಟ್ಟು ಶಾಖೆಗಳು ...	...	38

(31—12—1953ರಲ್ಲಿ)

THE CANARA BANKING CORPORATION LIMITED

Estd:- 1906] [H. O. UDIPI (S. India).

BHUVANENDRA PRODUCTS LTD., KATAPADI, S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:—

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್ ಕಟಪಾಡಿ, ದ. ಕ.

ಡಿಪೋ:— (1) ಉಡುಪಿ (2) ಮಂಗಳ ಗಲ್ಲಿ, ಹುಬ್ಬಳ್ಳಿ.

NAVAYUGA
Popular Kannada Weekly
Founder:—
Sri **A. B. SHETTY**, *M.L.A.*
Minister for Public Health,
Govt. of Madras.

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೪	೨೫–೧೧–'೫೪	೧೩

ದ್ವಿತೀಯ ವ್ಯೂಹ

ಭಾರತದಲ್ಲಿ ಸೊನ್ನೆ ದಿನಾಂಕ ೨೦ ರಂದು ಪ್ರಾದೇಶಿಕ ಸೈನ್ಯದ ದಿನಾಚರಣೆಯನ್ನು ಮಾಡಲಾಯಿತು. ಆಪತ್ಕಾಲದಲ್ಲಿ ದ್ವಿತೀಯ ವ್ಯೂಹವಾಗಿ ಅತ್ಯಮೂಲ್ಯವಾದ ಸಹಾಯವನ್ನು ಸೈನ್ಯಪಡೆಗೆ ಒದಗಿಸುವ ಪ್ರಾದೇಶಿಕ ಸೈನ್ಯ ಪಡೆಯಲ್ಲಿ ನಾಗರಿಕರು ಹೆಚ್ಚು ಆಸಕ್ತಿಯನ್ನು ವಹಿಸಬೇಕೆಂದು ಅಂದಿನ ಕಾರ್ಯಕ್ರಮದಲ್ಲಿ ಭಾಗವಹಿಸಿದ ಪ್ರಭೃತಿಗಳು ವಿನಂತಿಸಿದರು. ಸ್ವಾತಂತ್ರ್ಯ ಪ್ರಾಪ್ತಿಯ ಬಳಿಕ ರಾಷ್ಟ್ರದ ರಕ್ಷಣೆಯನ್ನು ಮಾಡಿಕೊಂಡು ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳುವುದು ಸರಕಾರದ ಹಾಗೂ ಪ್ರತಿನಿಧೀಕರಿಸುವ ಜನತೆಯ ಆದ್ಯ ಕರ್ತವ್ಯಗಳಲ್ಲಿ ಒಂದಾಗಿರುತ್ತದೆ. ನಾವಿಂದು ಇತರ ರಾಷ್ಟ್ರಗಳ ಸೈನ್ಯವನ್ನು ನಂಬಿ ಕುಳಿತಿರುವುದು ಸಾಧ್ಯವಿಲ್ಲ—ಲೋಕದಲ್ಲಿ ಯುದ್ಧ ಅಥವಾ ಇತರ ಗಂಡಾಂತರ ಪರಿಸ್ಥಿತಿಗಳು ಏಳಲಾರವೆಂದು ಸುಮ್ಮನೆ ಕುಳಿತಿರುವುದಕ್ಕೂ ಬರುವುದಿಲ್ಲ. ಆದುದರಿಂದ ನಮ್ಮ ಸೈನ್ಯ ಪಡೆಯನ್ನು ಸದಾ ಸುಸಜ್ಜಿತ ರೀತಿಯಲ್ಲಿ ಇಟ್ಟಿರಬೇಕಾಗುತ್ತದೆ. ಇದಕ್ಕೋಸ್ಕರ ಪ್ರತಿಯೊಬ್ಬ ವಯಸ್ಸಿನವರೂ ಕಡ್ಡಾಯದ ಸೈನಿಕಶಿಕ್ಷಣವನ್ನು ಕೊಡಬೇಕೆಂದು ಹೇಳುವವರೂ ನಮ್ಮಲ್ಲಿ ಇದ್ದಾರೆ. ಆದರೆ ಅನೇಕ ಕಾರಣಗಳಿಂದ—ಮುಖ್ಯವಾಗಿ ಆರ್ಥಿಕ ಅಡಚಣಿಯ ದೆಸೆಯಿಂದ—ವ್ಯಾಪಕವಾದ ಸೈನಿಕ ಶಿಕ್ಷಣದ ಯೋಜನೆಯನ್ನು ಕಾರ್ಯಗತ ಗೊಳಿಸುವುದು ಅಸಾಧ್ಯವೆನಿಸಿದೆ. ಆದಾಗ್ಯೂ ರಾಷ್ಟ್ರದ ಅವಶ್ಯಕತೆಯನ್ನು ಪೂರೈಸುವುದಕ್ಕೋಸ್ಕರ ಪ್ರಾದೇಶಿಕ ಸೈನ್ಯಪಡೆ ಮುಂತಾದ ಅನೇಕ ಯೋಜನೆಗಳನ್ನು ಕೈಗೊಂಡು, ನಾಗರಿಕರಿಗೆ ಯೋಗ್ಯ ರೀತಿಯ ಸೈನಿಕ ತರಬೇತಿಯನ್ನು ಕೊಡುವ ವ್ಯವಸ್ಥೆಯನ್ನು ಸರಕಾರ ಕೈಗೊಳ್ಳದಿರಲಿಲ್ಲ. ಕಳೆದ ಐದು ವರ್ಷಗಳಲ್ಲಿ ಇವು ಸಾಕಷ್ಟು ಹೆಚ್ಚು ಜನಪ್ರಿಯತೆಯನ್ನು ಸಂಪಾದಿಸಿರುತ್ತವೆ. ಹಿಂದಿನ ವರ್ಷಕ್ಕಿಂತ ಈ ವರ್ಷ ಪ್ರಾದೇಶಿಕ ಸೈನ್ಯ ಪಡೆಯಲ್ಲಿ ಭರ್ತಿಯಾದವರ ಸಂಖ್ಯೆಯು ನೂರರಲ್ಲಿ ಒಂದಂಶದಷ್ಟು ಹೆಚ್ಚಿದ್ದು, ನಿಶ್ಚಿತ ಗುರಿಯಲ್ಲಿ ನೂರಕ್ಕೆ ತೊಂಬತ್ತಾರರಷ್ಟು ಉಮೇದ್ವಾರರು ಬಂದಿರುವರು. ಸೈನಿಕ ಶಿಕ್ಷಣವನ್ನು ನೀಡುವ ಈ ಪಡೆಗಳಲ್ಲಿ ಸೇರುವ ನಾಗರಿಕರು ತಮ್ಮ ನಿತ್ಯದ ಕೆಲಸಕ್ಕೆ ತಿಲಾಂಜಲಿಯನ್ನು ಕೊಡಬೇಕಾಗುವುದಿಲ್ಲ ರಾಷ್ಟ್ರದ ಗಂಡಾಂತರ ಪರಿಸ್ಥಿತಿಯಲ್ಲಿ ಮಾತ್ರ ಅವರನ್ನು ಯೋಗ್ಯ ಕಾರ್ಯಾಚರಣೆಗಾಗಿ ಕರೆಯಲಾಗುತ್ತದೆ. ಸೈನಿಕ ಶಿಕ್ಷಣದಿಂದ ಶಿಸ್ತು ಮತ್ತು ಪರಿಶ್ರಮ ಬುದ್ಧಿಗಳು ಜಾಗೃತವಾಗುತ್ತವಲ್ಲದೆ ದೈಹಿಕ ದಾರ್ಢ್ಯವೂ ಗಣನೀಯವಾಗಿ ಬಲಿಯುತ್ತದೆ. ನಾಗರಿಕರಿಗೆ ಇದು ಪ್ರಯೋಜನಕಾರಿಯಾದ ವಿಷಯ. ಸರಕಾರಕ್ಕಾದರೆ, ಸಂಬಳ ತಿನ್ನುವ ಸ್ಥಿರ ಸೈನ್ಯವನ್ನು ಕಟ್ಟಿಕೊಳ್ಳುವ ಬದಲು, ಗಂಡಾಂತರ ಕಾಲದಲ್ಲಿ ನೆರವಾಗಬಲ್ಲ ಸಿಳವೊಂದು ಅಸ್ತಿತ್ವದಲ್ಲಿ ಉಳಿದಂತಾಗುತ್ತದೆ. ಇಬ್ಬಗೆಯ ಲಾಭ ಮಾಡಿಕೊಡುವ ಈ ಯೋಜನೆಯನ್ನು ನಾವೆಲ್ಲರೂ ಪ್ರೋತ್ಸಾಹಿಸುವುದು ಅಪೇಕ್ಷಣೀಯ. ಒತ್ತಾಯದ ಸೈನಿಕ ಶಿಕ್ಷಣಕ್ಕಿಂತಲೂ ನಾಗರಿಕರು ಸ್ವಯಂಪ್ರೇರಣೆಯಿಂದ ಸ್ವೀಕರಿಸುವ ಈ ತರಬೇತಿಯು ಹೆಚ್ಚು ಶಾಶ್ವತವಾದ ಪರಿಣಾಮವನ್ನುಂಟುಮಾಡಬಲ್ಲುದೆಂದು ಹೇಳಿದರೆ ತಪ್ಪಾಗದು. ಸರಕಾರದೊಡನೆ ಎಂಥವನಿಗೂ ಸಹಕರಿಸಲಾಗುವಂತೆ ಕೇವಲ ೩೦ ದಿನಗಳ ಅಲ್ಪಾವಧಿ ತರಬೇತಿಯ ಯೋಜನೆಯನ್ನೂ ತಯಾರಿಸಲಾಗಿರುವುದು. ನಮ್ಮ ಯುವಕರು ಇದರಲ್ಲಿ ಭರ್ತಿಯಾಗಿ ರಾಷ್ಟ್ರದ ಸೇವೆ ಮಾಡಲು ಕಟಿಬದ್ಧರಾಗಲೆಂದು ಕೋರುತ್ತೇವೆ.

ಪ್ರಾಥಮಿಕ ಶಿಕ್ಷಣ

ಮದ್ರಾಸು ರಾಜ್ಯದ ವಿದ್ಯಾ ಮಂತ್ರಿ ಶ್ರೀ. ಸಿ. ಸುಬ್ರಹ್ಮಣ್ಯಮರು ಇಷ್ಟರಲ್ಲಿಯೇ ಪ್ರಾಥಮಿಕ ಶಿಕ್ಷಣ ವಿಷಯದಲ್ಲಿ ಯೋಗ್ಯ ಸಂಪಗೆಗಳನ್ನು ಮಾಡುವುದಕ್ಕೋಸ್ಕರ ಸಮಿತಿಯೊಂದನ್ನು ನೇಮಿಸುವುದಾಗಿಹೇಳಿರುವರು. ಸರಕಾರದ ಇಂದಿನ ಆರ್ಥಿಕ ಪರಿಸ್ಥಿತಿಯಲ್ಲಿ ಶಾಲಾ ಪ್ರಾಯದ ಮಕ್ಕಳಲ್ಲಿ ನೂರಕ್ಕೆ ಐವತ್ತು ಮಂದಿಗಿಪ್ಪೇ ಪ್ರಾಥಮಿಕ ಶಿಕ್ಷಣದ ಸೌಲಭ್ಯಗಳನ್ನೊದಗಿಸುವುದು ಸಾಧ್ಯವಾಗಿದೆಯೆಂದೂ ಇನ್ನು ಐದಾರು ವರ್ಷಗಳಲ್ಲಿ ಆರ್ಥಿಕ ಪರಿಸ್ಥಿತಿ ಸುಧಾರಿಸುವ ಲಕ್ಷಣಗಳೇನೂ ಇಲ್ಲವೆಂದೂ ಅವರು ತಿಳಿಸಿದರು. ಆದುದರಿಂದ ನೇಮಿಸಲ್ಪಡುವತ ಜ್ಞರ ಸಮಿತಿಗೆ ಈಗಿನ ಹಣ ಕಾಸಿನ ಮಿತಿಯಲ್ಲಿಯೇ ಎಲ್ಲ ಮಕ್ಕಳಿಗೂ ಪ್ರಾಥಮಿಕ ಶಿಕ್ಷಣದ ಸೌಕರ್ಯವನ್ನು ಕಲ್ಪಿಸಿಕೊಡುವ ಬಗೆಯನ್ನು ಸೂಚಿಸಲು ಕೇಳಿಕೊಳ್ಳಲಾಗುವುದೆಂದು ಅವರು ತಿಳಿಸಿದರು. ಇದಕ್ಕೋಸ್ಕರ ಈಗಿನ ಶಿಕ್ಷಣ ಪದ್ಧತಿಯಲ್ಲಿ ಏನಾದರೂ ಪರಿಷ್ಕಾರ ಮಾಡಬೇಕೋ ಹೇಗೆಂದು ಸಮಿತಿಯನ್ನು ಕೇಳಲಾಗುವುದು. ಮಂತ್ರಿಗಳ ಮಾತನ್ನು ನೋಡಿದರೆ, ಹಳ್ಳಿ ಮತ್ತು ಪಟ್ಟಣಗಳ ಮಕ್ಕಳಿಗೆ ಬೇರೆ ಬೇರೆ ರೀತಿಯ ಪ್ರಾಥಮಿಕ ಶಿಕ್ಷಣವನ್ನು ಕೊಡಬೇಕೆಂಬ ವಾದದ ವಿಮರ್ಶೆಯನ್ನೂ ಸಮಿತಿಯು ಮಾಡಬೇಕಾಗುತ್ತದೆ; ಆದೇ ಕಾಲಕ್ಕೆ ರಾಷ್ಟ್ರದ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ಮುಂದಿನ ಜನತಾಂಗವನ್ನು ರೂಪಿಸುವ ಮಕ್ಕಳು ಯೋಗ್ಯ ಪಾಠ್ಯವನ್ನು ಸರ್ವತೋಮುಖವಾಗಿ ಸಿಸುವಂತೆ ಶಿಕ್ಷಣ ಕ್ರಮವನ್ನು ಅಳವಡಿಸಿಕೊಳ್ಳುವ ಆಗತ್ಯವೂ ಬರುತ್ತದೆ. ಇದಕ್ಕಾಗಿ ವಿಷಯದ ಒಳ ಹೊರಗನ್ನು ಸಮಿತಿಯವರು ವಿಚಾರಿಸುವಾಗ, ಮದ್ರಾಸಿನ ಹಿಂದಿನ ಮುಖ್ಯಮಂತ್ರಿಗಳು ತಂದಿದ್ದ ವಿದ್ಯಾಭ್ಯಾಸನ ಪದ್ಧತಿಯ ಲಾಭ ಹಾನಿಗಳನ್ನು ವಿಮರ್ಶಿಸಬೇಕೆಂದು ನಾವು ಸೂಚಿಸುತ್ತೇವೆ. ಆ ಪದ್ಧತಿಯನ್ನು ಜ್ಯಾರಿಗೆ ತರುವಾಗಲೂ ಈಗ ಸುಬ್ರಹ್ಮಣ್ಯಮರು ಹೇಳಿದ್ದ ಧ್ಯೇಯಗಳನ್ನೆ ವಿವರಿಸಿದ್ದರು. ಆದರೆ ಅದು ಜನತೆಯ ಪ್ರತಿನಿಧಿಗಳಿಗೆ ಬೇಡವಾಯಿತು. ಶಿಕ್ಷಣ ವಿಷಯದಲ್ಲಿ ತಜ್ಞರಲ್ಲದ ಶಾಸನ ಸಭೆಯ ಪ್ರತಿನಿಧಿಗಳ ಮನಸ್ಸಿಗೆ ಒಪ್ಪುವ ಯೋಗ್ಯ ಪದ್ಧತಿಯನ್ನು ಹೊಸ ಸಮಿತಿಯವರು ರೂಪಿಸುವುದು ಸುಲಭವಲ್ಲ: ಆದರೂ ಅವರ ಪ್ರಯತ್ನ ಸಫಲವಾಗಲೆಂದು ನಾವು ಆಶಿಸುತ್ತೇವೆ.

ನಮ್ಮ ಚಂದಾದಾರರಲ್ಲಿ ವಿನಂತಿ

ಚಂದಾಹಣಕ್ಕಾಗಿ ಆಗಾಗ್ಗೆ ವಿನಂತಿಸುವುದು, ಕಾರ್ಡು ಬರೆಯುವುದು ಕೆಲವರಿಗೆ ಬೇಸರವೆನಿಸಬಹುದು. ಆದರೆ ನಮ್ಮ ಗೋಳಾಟವು ಇನ್ನೂ ಹೆಲವರಿಗೆ ಕೇಳಿಸಲಿಲ್ಲವೆಂಬುದು ಅತ್ಯಂತ ವಿಷಾದಕರವಿದೆ. ಮುನ್ಸೂಚನೆ ಕೊಟ್ಟು, ಯಾವ ತರದ ಉತ್ತರವೂ ಇಲ್ಲದ್ದರಿಂದ ನಾವು ಮಾಡಿದ ವಿ. ಪಿ.ಯನ್ನು ಹೆಲವರು ಹಿಂದೆ ಬಿಟ್ಟು ನಮ್ಮನ್ನು ಇನ್ನಷ್ಟು ನಷ್ಟಕಷ್ಟಕ್ಕೆ ಗುರಿಪಡಿಸಿದ್ದಾರೆ. ಸಹೃದಯರಾದ ಚಂದಾದಾರ ಬಂಧುಗಳು ಕನ್ನಡ ಪತ್ರಿಕಾ ವ್ಯವಸಾಯದ ಪರಿಸ್ಥಿತಿಯನ್ನು ಗಮನಿಸಿ ಇನ್ನಾದರೂ ತಮ್ಮ ಬಾಕಿಯನ್ನು ದಯಮಾಡಿ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ಕೇಳಿಕೊಳ್ಳುತ್ತೇವೆ. ಮುಂದಕ್ಕೆ ಪತ್ರಿಕೆ ಎವ್ವಕ್ಕೂ ಬೇಡವಾದವರು ಒಂದು ಕಾರ್ಡು ಬರೆದು ಹಾಗೆಯೇ ತಿಳಿಸುವಂತೆಯೂ ಆದರೆ ಈ ವರೆಗಿನ ಬಾಕಿಯನ್ನು ಮಾತ್ರ ಕಳುಹಿಸಿ ಕೊಡುವಂತೆಯೂ ಅಸ್ಟು ಮಾನವೀಯತೆಯನ್ನಾದರೂ ತೋರಿಸುವಂತೆಯೂ ವಿನಂತಿಸುತ್ತೇವೆ.

ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನ ಶಾಖೆಗಳಲ್ಲೆಲ್ಲ ನವಯುಗದ ಚಂದಾಹಣವನ್ನು ಯಾವದೊಂದು ಖರ್ಚು ಇಲ್ಲದೆ ಕೊಡಬಹುದು.

ಜಿ. ಬ್ರೋ. ಅಧ್ಯಕ್ಷ ಡಾ। ಕೆ. ಕೆ. ಹೆಗ್ಡೆಯವರಿಗೆ
ಅಭಿನಂದನಾ ಸಮಾರಂಭಗಳು

ಅಲೆವೂರಲ್ಲಿ ರಸ್ತೆ, ಕಟ್ಟೆಗಳ ಉದ್ಘಾಟನೆ ಮತ್ತು ಜಿಲ್ಲಾ ಬೋರ್ಡು ಅಧ್ಯಕ್ಷರಿಗೆ ಮಾನಪತ್ರ ಸಮರ್ಪಣೆ–

ಊರವರ ಪರಿಶ್ರಮದಿಂದ ಸಜ್ಜುಗೊಳಿಸಲ್ಪಟ್ಟ ಅಲೆವೂರು ಮಣಿಪಾಲ ಹೊಸ ರಸ್ತೆಯನ್ನು ಉಡುಪಿ ತಹಸೀಲ್ದಾರ್ ಶ್ರೀ ಟಿ. ಲಿಂಗಪ್ಪಯ್ಯನವರೂ, ಅಲೆವೂರಲ್ಲಿ ಕಟ್ಟಿಸಲಾದ ಗಿರಿಜಾ ಸರ್ಕಲ್ ಎಂಬ ಆಕರ್ಷಕ ಕಟ್ಟೆಯನ್ನು ಶ್ರೀ ಟಿ. ಎ. ಪೈ, ಎಂ. ಎಲ್. ಎ. ಅವರೂ ಉದ್ಘಾಟಿಸುವ ಸಮಾರಂಭಗಳು ತಾ. ೨೦ರಲ್ಲಿ ದ. ಕ. ಜಿಲ್ಲಾ ಬೋರ್ಡು ಅಧ್ಯಕ್ಷ ಡಾ। ಕೆ. ಕೆ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿದವು.

ಅರಂಭದಲ್ಲಿ ಬಾಲಕಿಯರಿಂದ ಪ್ರಾರ್ಥನೆ ನಡೆದು ಶ್ರೀ ಬಾಂತಿ ಮಾಸ್ತರರಿಂದ ಸ್ವಾಗತ ಭಾಷಣವಾಯಿತು. ಅಲೆವೂರು ಮತ್ತು ಬೈಲೂರು ಪಂಚಾಯತ ಬೋರ್ಡುಗಳ ಕಡೆಯಿಂದ ಶ್ರೀ ಕೆ. ರಂಗಣ್ಣ ಭಟ್ಟರು ಡಾ। ಹೆಗ್ಡೆಯವರಿಗೆ ಮಾನಪತ್ರ ಒಪ್ಪಿಸಿದರು. ಅಲೆವೂರು–ಮಣಿಪಳ ರಸ್ತೆ ರಚನಾ ಕಮಿಟಿ ಕಾರ್ಯದರ್ಶಿ ಶ್ರೀ ಎಚ್. ಆರ್. ಹೆಗ್ಡೆಯವರು ರಸ್ತೆ ವರದಿಯನ್ನೋದಿದರು. ತಹಸೀಲ್ದಾರ್ ಶ್ರೀ ಕೆ. ಲಿಂಗಪ್ಪಯ್ಯನವರು ತಮ್ಮ ಭಾಷಣದಲ್ಲಿ ಸ್ಥಾನಿಕ ಅಭಿವೃದ್ಧಿ ಯೋಜನೆಗಳನ್ನು ಯಶಸ್ವಿಗೊಳಿಸುವಲ್ಲಿ ಆಗತಕ್ಕ ಕೆಲಸಗಳಿಗೆ ಸ್ಥಳೀಯ ಮಹಾಜನರು ಭುಜಕ್ಕೆ ಭುಜಕೊಟ್ಟು ಸಹಕರಿಸಬೇಕೆಂದರು. ಶ್ರೀ ಟಿ.ಎ. ಪೈಗಳು ತಮ್ಮ ಭಾಷಣದಲ್ಲಿ ಎಸೆಂಬ್ಲಿ, ಪಾರ್ಲಿಮೆಂಟ್ ಹುರಿಯಾಳುಗಳು ಸರ್ವ ಸಾಮಾನ್ಯ ಎಲ್ಲಾ ಮತದಾರರೆ ಸಂಪರ್ಕವನ್ನಿಟ್ಟುಕೊಳ್ಳುವ ಆವಶ್ಯಕತೆ ಇತ್ಯಾದಿ ಪೂರ್ವಪೀಠಿಕಾರೂಪದಲ್ಲಿ ಹೇಳಿ ಗ್ರಾಮಾಂತರಗಳಲ್ಲಿ ಗ್ರಾಮಸ್ವರಾಜ್ಯಸ್ಥಾಪನೆಗೆ ಸಾಹಾರ್ದದಿಂದಿದ್ದರೆ ಎಂತಹ ಮಹತ್ಕಾರ್ಯಗಳನ್ನು ಸಾಧಿಸಲು ಬರುವುದೆಂದರು. ಸಭಿಕರ ಪರವಾಗಿ ಶ್ರೀಗಳಾದ ಶ್ರೀಪತಿ ಆಚಾರ್ ಎ. ಜಿ. ಆಳ್ವ ಮತ್ತು ಎ. ಮೋಹನ್ ರಾಯರು ಗ್ರಾಮಸ್ವರಾಜ್ಯ ಉತ್ಸಾಹ, ಕಾರ್ಯಶಕ್ತಿಯನ್ನು ಕೊಂಡಾಡಿ ಕಾಲೋಚಿತ ಮಾತುಗಳನ್ನಾಡಿದರು. ಸಭಾಧ್ಯಕ್ಷ ಹೆಗ್ಡೆಯವರು ತಮಗಿತ್ತ ಮಾನಪತ್ರಕ್ಕೆ ಉತ್ತರವಿಯತ್ತಾ, ತಾನು ಈ ಮತದಾರ ಕ್ಷೇತ್ರದಿಂದ ಆರಿಸಿ ಬೋರ್ಡಿನ ಸದಸ್ಯನಾದಾಗ್ಲೂ ಮಾನಪತ್ರದಲ್ಲಿ ಹೇಳಲಾದ ಎಲ್ಲಾ ಬೇಡಿಕೆಗಳನ್ನು ಪೂರಾಯನೆ ಎಂದು ಭರವಸೆಕೊಡಲು ಬರುವುದಿಲ್ಲವೆಂದೂ ಸಾಧ್ಯವಾದುದನ್ನು ಮಾಡಲು ಪ್ರಯತ್ನಿಸಲಾಗುವುದೆಂದೂ ಹೇಳಿ ಊರವರ ಸ್ವಪ್ರಯತ್ನವನ್ನು ಶ್ಲಾಘಿಸಿದರು. ಅಲೆವೂರು ಶ್ರೀ ಸರ್ವೋತ್ತಮ ಕಿಣಿಯವರಿಂದ ಧನ್ಯವಾದ, ಉಪಾಹಾರ ಸತ್ಕಾರಗಳಿಂದ ಸಮಾರಂಭ ಮುಕ್ತಾಯವಾಯಿತು. ರಾತ್ರಿ ಶ್ರೀ. ಕೆ. ಕೇಶವ ಸೈಗಳಿಂದ ಪರಿಕತೆ ನಡೆಯಿತು.

ಸರ್ಕಲ್ ಕಾಂಗ್ರೆಸ್ ಕಮಿಟಿ ಅಧೀನದಲ್ಲಿ ಇದೇ ದಿನ ಸಂಜೆ ಅಲೆವೂರು ಸಂಕ ನಿರ್ಮಾಣ ಸಮಿತಿಯ ಅಧ್ಯಕ್ಷ ಶ್ರೀ ಕಲ್ಯಂಜೆ ಶ್ರೀನಿವಾಸ ಆಚಾರ್ಯರು ಜಿಲ್ಲಾ ಬೋರ್ಡು ಅಧ್ಯಕ್ಷ ಡಾ। ಕೆ. ಕೆ. ಹೆಗ್ಡೆಯನರಿಗೆ ಉಪಾಹಾರ ಸತ್ಕಾರವಿತ್ತರು. ಆಕ್ಷಮಹನೀಯರನೇಕರು ಆಮಂತ್ರಿತರಾಗಿದ್ದರು. ಆಂತ್ಯದಲ್ಲಿ 'ಗ್ರೂಪ್ ಫೋಟೊ' ತೆಗೆಯಲಾಯಿತು.

ಇದೇ ದಿನ ಮಧ್ಯಾಹ್ನ ಹಿರಿಯಡ್ಕ ಬೋರ್ಡು ಹೈಸ್ಕೂಲಿನಲ್ಲಿ ಶ್ರೀ ಜಗಂಜೀವ ಆಳ್ವರ ಆಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಡಾ। ಕೆ. ಕೆ. ಹೆಗ್ಡೆಯವರನ್ನು ಅಭಿನಂದಿಸಲಾಯಿತು. ಶ್ರೀ ಬಿ. ಎಸ್. ಆಚಾರ್ಯರು ಅಭಿನಂದನಾ ಪತ್ರವನ್ನರ್ಪಿಸಿದರು. ಡಾ। ಬಿ. ಜಿಂಡಯ್ಯ ಹೆಗ್ಡೇರು ಧನ್ಯವಾದವಿತ್ತರು. ನುರುದಿನ ಬೆಳಿಗ್ಗೆ ಸ್ಥಳೀಯ ಬೋರ್ಡು ಹೈಸ್ಕೂಲಿನಲ್ಲಿ ಪ್ರಧಾನ ಅಧ್ಯಾಪಕ ಶ್ರೀ ಬಿ. ಆನಂತಕೃಷ್ಣ ಸಾಮುಗರಿಂದ ಸ್ವಾಗತಿಸಲ್ಪಟ್ಟು ಅಧ್ಯಾಪಕ ವೃಂದದ ಸತ್ಕಾರ ಪಡೆದು ಫಲಿತಾಂಶಗಳಿಗೆ ತೆರಳಿದರು. ಅಲ್ಲಿ ಊರವರಿಂದ ಸ್ವಾಗತಿಸಲ್ಪಟ್ಟು ಡಾ। ಎ ಶಾಲೆಯನ್ನು ಸಂದರ್ಶಿಸಿ ಮನವಿ ಸ್ವೀಕರಿಸಿ ಮಧ್ಯಾಹ್ನ ಹಿಂತಿರುಗಿ ಬಂದರು.

ಪರ್ಕಳದಲ್ಲಿ ಮಾನಪತ್ರ— ಜಿಲ್ಲಾ ಬೋರ್ಡಿನ ಅಧ್ಯಕ್ಷ ಡಾ। ಕೆ. ಕೆ. ಹೆಗ್ಡೆಯವರನ್ನು ಸ್ವಾಗತಿಸಿ ಸತ್ಕರಿಸಲು ಡಾ। ಪಿ. ಆರ್. ನಾಯಕರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಶ್ರೀ. ಎಚ್. ಆರ್. ಹೆಗ್ಡೆಯವರು ಸ್ವಾಗತ ಭಾಷಣ ನುಡಿದರು. ಪರ್ಕಳ ಪಂಚಾಯತ ಬೋರ್ಡಿನ ಅಧ್ಯಕ್ಷ ಶ್ರೀ ಎಚ್. ಸದಾಶಿವ ಹೆಗ್ಡೆಯನರು ಪಂಚಾಯತ ಬೋರ್ಡಿನ ಪರವಾಗಿ ಮಾನಪತ್ರವನ್ನರ್ಪಿಸಿದರು. ಸಭಿಕರ ಭಾಷಣವಾದ ಮೇಲೆ ಮುಮ್ಮ ಆತಿಥಿಗಳು ಮಾನಪತ್ರದಲ್ಲಿಯ ಕೇಳಿಕೆಯ ಕುರಿತು ಸಾಧ್ಯವಾದ ಕೆಲಸ ಮಾಡುವುದಾಗಿ ತಿಳಿಸಿ ಅಭಾರ ವ್ಯಕ್ತಪಡಿಸಿದರು. ಅಧ್ಯಕ್ಷರು ಭಾಷಣ ಮಾಡುತ್ತಾ ಬೋರ್ಡಿನವರು ರಸ್ತೆ ಮಾಡಿಕೊಟ್ಟರೆ ಊರವರು ಉತ್ತಮ ಮಾರ್ಗದಲ್ಲಿ ನಡೆಯುವರೆಂದರು. ಧನ್ಯವಾದವಾಗಿ ಸಭಾಂತ್ಯವಾಯಿತು. ಆನಂತರ ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ಕರವಾಗಿ ಏರ್ಪಡಿಸಿದ ಸಭೆಯು ಶ್ರೀ ಯು. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಾಳ್ಕಟ್ಟಿ ಬೀಡು ಕೃಷ್ಣಯ್ಯ ಹೆಗ್ಡೆಯವರು ಕಾಂಗ್ರೆಸ್ ಕಮಿಟಿಯ

ಆಫ್ರೇಸ್ಯ ರಾಷ್ಟ್ರಗಳ ಸಮ್ಮೇಳನ

ರಶಿಯದ ಪ್ರತಿನಿಧಿ ವಿಶಿಂಸ್ಕಿಯವರ ನಿಧನ

ಇಂಡೋನೇಶಿಯದ ಪ್ರಧಾನ ಮಂತ್ರಿ ಜೋಜೋರವರು ಒಂದು ಪ್ರಸಾರ ಭಾಷಣದಲ್ಲಿ ಆಫ್ರೇಸ್ಯ ರಾಷ್ಟ್ರಗಳ ವು ಧಾನ ಮಂತ್ರಿಗಳ ಸಮ್ಮೇಳನವನ್ನು ಕರೆಯುವ ಸಿದ್ಧತೆಗಳು ತುಂಬ ಪ್ರಗತಿಯನ್ನು ಹೊಂದಿರುವುದಾಗಿ ತಿಳಿಸಿರುವರು. ಅನೇಕ ರಾಷ್ಟ್ರಗಳಿಂದ ಇಂಥ ಸಮ್ಮೇಳನವನ್ನು ಜರಗಿಸುವುದಕ್ಕೆ ಸಮ್ಮತಿ ಸೂಚಿಸುವ ಪತ್ರಗಳು ಬಂದಿವೆಯೆಂದು ಅವರು ಹೇಳಿದರು. ಕೆಂಪು ಚೀನಕ್ಕೆ ಈ ಸಮ್ಮೇಳನದಲ್ಲಿ ಭಾಗ ವಹಿಸಲು ಆಮಂತ್ರಣ ಹೋಗಿರುವುದೇ ಏನೆಂಬುದನ್ನು ಅವರು ಬಹಿರಂಗಗೊಳಿಸಲಿಲ್ಲ. ಬಹುಕಃ ಮುಂದಿನ ತಿಂಗಳು ಜಕಾರ್ತದಲ್ಲಿ ಸೇರಲಿರುವ ಕೊಲೊಂಬೋ ರಾಷ್ಟ್ರಗಳ ಪ್ರಧಾನ ಮಂತ್ರಿಗಳ ಪರಿಷತ್ತಿನಲ್ಲಿ ಈ ಕುರಿತು ಕೊನೆಯ ನಿರ್ಣಯ ಕೈಗೊಳ್ಳಲಾಗುವುದು ಕೊಲೊಂಬೋ ರಾಷ್ಟ್ರಗಳಲ್ಲಿ ಭಾರತ,ಪಾಕಿಸ್ತಾನ,ಬರ್ಮ ಮತ್ತು ಇಂಡೋನೇಶಿಯಗಳು ಕೆಂಪು ಚೀನದೊಡನೆ ರಾಯಭಾರ ಸಂಬಂಧವನ್ನು ಇಟ್ಟುಕೊಂಡಿವೆ ಸಿಂಹಳವಾದರೂ ವ್ಯಾಪಾರಿ ಒಪ್ಪಂದವನ್ನು ಮಾಡಿಕೊಂಡಿದೆ. ಆದುದರಿಂದ ಏಶ್ಯಾರಾಷ್ಟ್ರಗಳಲ್ಲಿ ಪ್ರಬಲವಾಗಿರುವ ಚೀನವನ್ನು ಸಮ್ಮೇಳನಕ್ಕೆ ಆಮಂತ್ರಿಸುವುದು ನಿಶ್ಚಯವೆಂದು ಊಹಿಸಲಾಗುತ್ತದೆ. ಇದರಂತೆ ಲೈಬೀರಿಯ, ಇಥಿಯೋಪಿಯ, ಜೋರ್ಡಾನ, ಸೈಬೀರಿಯ, ಗೋಲ್ಡ್ ಕೋಸ್ಟ್ ಮುಂತಾದ ಮಧ್ಯಪೂರ್ವ ಹಾಗು ಆಫ್ರಿಕದ ರಾಷ್ಟ್ರಗಳಿಗೂ ವಿನಂತಿ ಹೋಗಬಹುದು.ಎಲ್ಲವೂ ಸುಗಮವಾದರೆ ಮುಂದಿನ ಪೂರ್ವಾರ್ಧದಲ್ಲಿ ಸಮ್ಮೇಳನ ಜರಗಬಹುದು.

ವಿಶಿಂಸ್ಕಿಯವರ ನಿಧನ

ಜಾಗತಿಕ ಶಾಂತಿಯನ್ನು ಸ್ಥಾಪಿಸುವ ವಿಷಯದಲ್ಲಿ ಈಚೆಗೆ ರಶಿಯ ಮತ್ತು ಅಮೇರಿಕಗಳು ಉದಾರವಾಗಿ ವರ್ತಿಸಿರುವ ಲಕ್ಷಣಗಳು ಅನೇಕ ಕಂಡುಬಂದಿವೆ. ಸಂಯುಕ್ತ ರಾಷ್ಟ್ರ ಸಂಘದಲ್ಲಿ ಸಹ ರಶಿಯದ ಪ್ರತಿನಿಧಿ ಆಂದ್ರೆ ವಿಶಿಂಸ್ಕಿಯವರು ತಮ್ಮ ಸರಕಾರದ ನಿಲುಮೆಯನ್ನು ಬಹಿರಂಗ ಗೊಳಿಸುತ್ತಾ ಪಶ್ಚಿಮ ರಾಷ್ಟ್ರಗಳೊಡನೆ ಸಾಧ್ಯವಾದಷ್ಟು ಸಹಕರಿಸುವ ಮನೋಭಾವವನ್ನು ಕಾರ್ಯತಃ ಪ್ರಕಟಿಸಿದರು. ಈ ಪ್ರಯತ್ನ ಇನ್ನೂ ಮುಗಿಯದಿರುವಾಗಲೇ ವಿಶಿಂಸ್ಕಿಯವರು(ದಿನಾಂಕ೨೨ ರಂದು.) ಒಕಸ್ಮಾತ್ತಾಗಿ ಹೃದ್ರೋಗದಿಂದ ತಮ್ಮ ೭೧ನೇ ವಯಸ್ಸಿನಲ್ಲಿ ನಿಧನಹೊಂದಿದ್ದು ವಿಷಾದಕರ. ಸಂಯುಕ್ತ ರಾಷ್ಟ್ರ ಸಂಘದಲ್ಲಿ ದಿವಂಗತರ ಕುರಿತು ಅನೇಕರು ಒಳ್ಳೆಯ ಮಾತುಗಳನ್ನು ಆಡಿದರು. ಭಾರತದ ಪ್ರತಿನಿಧಿ ಶ್ರೀ ಕೃಷ್ಣಮೆನೆನ್ನರು ವಿಶಿಂಸ್ಕಿಯವರನ್ನು ಪರಮಮಿತ್ರನೆಂದು ಕರೆದರು. ರಶಿಯವ ಶ್ರೇಷ್ಠ ರಾಜಕಾರಣಿಗಳಿಂದು ಅವರು ವಿಶಿಂಸ್ಕಿಯವರನ್ನು ಪ್ರಶಂಸಿಸಿದರು. ಅಮೇರಿಕದ ಪ್ರತಿನಿಧಿಗಳು ರಾಜಕೀಯ ಭಿನ್ನಾಭಿಪ್ರಾಯಗಳೇನೆ ಇರಲಿ, ವಿಶಿಂಸ್ಕಿಯವರು ತಮ್ಮ ರಾಷ್ಟ್ರದ ಧೋರಣೆಗೆ ನಿಷ್ಠೆಯಿಂದ ಅಂಟಿಕೊಳ್ಳುತ್ತಿದ್ದರೆಂದೂ ಆದನ್ನು ಮಂಡಿಸುವಲ್ಲಿ ಚಾತುರ್ಯದಿಂದ ವರ್ತಿಸುತ್ತಿದ್ದರೆಂದೂ ನುಡಿದರು ಈಚೆಗೆ ಅಣುಶಕ್ತಿಯನ್ನು ಶಾಂತಿಕಾಲದ ಉಪಯೋಗಕ್ಕಾಗಿ ಬಳಸಿ ಪ ಕುರಿತು ವಿಶಿಂಸ್ಕಿಯವರೊಡನೆ ತಾವು ನಡೆಸಿದ ಮಾತುಗಳಲ್ಲಿ ಹಿಂದೆಲ್ಲೂ ಇಲ್ಲದ ಸೌಹಾರ್ದ ಭಾವನೆಯು ವ್ಯಕ್ತಗೊಂಡಿತ್ತೆಂದರು. ವಿಶಿಂಸ್ಕಿಯವರ ಮೃತ ಶರೀರವನ್ನು ಮೋಸ್ಕೋದಲ್ಲಿ ಲೆನಿನ್ ಸಮಾಧಿಯ ಬಳಿಯಲ್ಲಿಯೇ ಅಂತ್ಯ ಸಂಸ್ಕಾರಕ್ಕೆ ಗುರಿಪಡಿಸಲಾಗುವುದೆಂದು ರಶಿಯದ ಪ್ರಕಟಣೆ ತಿಳಿಸುತ್ತದೆ. ಆ ಸೋದರ ರಾಜಕಾರಣದಲ್ಲಿ ಮಹತ್ವದ ಸ್ಥಾನವನ್ನು ವಹಿಸಿ ಅನೇಕ ಹೊಣೆಗಾರ ಸ್ಥಾನಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ಮಾಜಾ ಜೀವಕ್ಕೆ ಈ ರೀತಿಯ ಗೌರವ ಸಲ್ಲಿಕೆಗಳ್ದೇ ನಿಜ.

ಅಣು ಶಕ್ತಿಯ ಉಪಯೋಗ

ಅಣು ಶಕ್ತಿಯನ್ನು ಶಾಂತಿ ಕಾಲದ ಉಪಯೋಗಕ್ಕೋಸ್ಕರ ಒಪ್ಪಿಸುವ ವಿಷಯದಲ್ಲಿ ವಿಶ್ವ ಸಂಸ್ಥೆಯಲ್ಲಿ ಪಶ್ಚಿಮ ರಾಷ್ಟ್ರಗಳ ಗೊತ್ತುವಳಿಯಲ್ಲಿ ರಶಿಯ, ಹಾಗು ಭಾರತದ ಪ್ರತಿನಿಧಿಗಳ ಭಾಷಣವನ್ನು ಕೇಳಿದ ಬಳಿಕ, ಅವುಗಳಲ್ಲಿ ವ್ಯಕ್ತವಾದ ಅನೇಕ ಸೂಚನೆಗಳನ್ನು ಒಳಗೊಳ್ಳುವಂತೆ ಸಾಕಷ್ಟು ಪರಿಷ್ಕಾರವನ್ನು ಮಾಡಲಾಯಿತು. ಪರಿಷ್ಕೃತ ಗೊತ್ತುವಳಿಯ ಪ್ರತಿಯೊಂದೂ ಅಂಶವು ರಶಿಯಕ್ಕೆ ಒಪ್ಪಿಗೆಯಾಗಲಾರದಾದರೂ ಸಮಾಮಾನ್ಯವಾಗಿ ಆದನ್ನು ಸ್ವೀಕರಿಸಬಹುದೆಂದು ವಿಶಿಂಸ್ಕಿ ಅಭಿಪ್ರಾಯಪಟ್ಟರು. ಕೆಂಪು ಚೀನಕ್ಕೆ ಮುಂದಿನ ಬೇಸಗೆಯಲ್ಲಿ ಕರೆಯಲಾಗುವ ವೈಜ್ಞಾನಿಕ ಪರಿಷತ್ತಿನಲ್ಲಿ ಭಾಗವಹಿಸುವಂತೆ ಆ ಮಂತ್ರಣವನ್ನು ಕಳುಹಿಸಬೇಕೆಂಬ ತಿದ್ದುಪಡಿಯನ್ನು ಅವರು ಸೂಚಿಸಿದರು. ಭಾರತದ ಪ್ರತಿನಿಧಿಗಳು ಸಹ ಒಂದು ತಿದ್ದುಪಡಿಯನ್ನು ಮುಂಡಿಸಿ ಅಣು ಶಕ್ತಿಯ ವಿಷಯದಲ್ಲಿ ಪೂಹಿತಿಯನ್ನು ನೀಡಬಲ್ಲ ಸರ್ವ ಯಾವುದೇ ಸದಸ್ಯ ರಾಷ್ಟ್ರಕ್ಕೆ ಸಲಹಾ ಸಮಿತಿಯಲ್ಲಿ ಸೇರುವ ಅರ್ಹತೆ ಇರಬೇಕೆಂದು ಪ್ರತಿಪಾದಿಸಿದರು. ಇತ್ತ ರಾಷ್ಟ್ರ ಸಂಘದ ಆರ್ಥಿಕ ಮಂಡಳದಲ್ಲಿ ಇನ್ನೊಂದುವಿಜಯವುಪ್ರಾಪ್ತವಾಯಿತು. ಇಲ್ಲಿ ಸಹ ಭಾರತದ ಪ್ರತಿನಿಧಿಗಳಾದ ಅಲಿಯವರ್ ಜಂಗರ ಮತ್ತು ಕೆ. ಸದಾನಂದ ಹೆಗ್ಡೆಯವರ ಪ್ರಯತ್ನ ವಿಶೇಷವಾಗಿ ಕಂಡು ಬಂತು. ಇದರ ಪ್ರಕಾರ ಹಿಂದುಳಿದ ನುತ್ತು ಬಡತನದ ಪ್ರದೇಶಗಳಿಗೆ ಸಂಪತ್ಸಮೃದ್ಧ ರಾಷ್ಟ್ರಗಳು ನೇರವಾಗುವ ಯೋಜನೆಯೊಂದು ಬರುವ ವರ್ಷದಲ್ಲಿ ರಾಷ್ಟ್ರ ಸಂಘದ ಒಪ್ಪಿಗೆ ಪಡೆಯುವ ಸಂಭವಕಾಣುತ್ತದೆ.

ಭಾರತಕ್ಕೆ ಸ್ನೇಹ ಹಸ್ತ

ಪಾಕಿಸ್ತಾನವು ಭಾರತದೊಡನೆ ಸ್ನೇಹ ಸಂಬಂಧವನ್ನು ಬೆಳೆಸಿಕೊಂಡು ನೇಹಾದ ಮಾತುಕತೆಗಳ ಮೂಲಕ ಎಲ್ಲಾ ವಿವಾದಗಳನ್ನೂ ಶೀಘ್ರವಾಗಿ ಪರಿಹರಿಸುವ ಉತ್ಸುಕತೆಯನ್ನು ಮುರಳಿ ತೋರಿಸುತ್ತಿದೆ ಎಂದು ವರದಿಗಳು ತಿಳಿಸುತ್ತಿವೆ. ಕಳೆದವಾರ ಪಾಕಿಸ್ತಾನದ ಗವರ್ನರ ಜನರಲ್ಲರೂ ಗೃಹ ಮಂತ್ರಿಗಳೂ ಕಾಶ್ಮೀರ ಪ್ರಶ್ನೆಯನ್ನೊಳಗೊಂಡು ಎಲ್ಲಾ ವಿವಾದಗಳನ್ನೂ ಸಂಧಾನದಿಂದ ಬಗೆಹರಿಸುವ ಮನೋಭಾವವನ್ನು ಪ್ರಕಟಿಸಿದರು. ಭಾರತದಲ್ಲಿ ಪಾಕಿಸ್ತಾನದ ರಾಯಭಾರಿಯಾಗಿರುವ ರಾಜಾ ಗಜನಫರಖಾನರು ದಿನಾಂಕ ೩೦ರಂದು ಇದನ್ನು ಪುನಃ ದೃಢೀಕರಿಸಿದರಷ್ಟೇ ಅಲ್ಲ ಕರಾಚಿಯಲ್ಲಾಗಲೀ ಪೊಸ ದೆಹಲಿಯಲ್ಲಾಗಲೀ ಉಭಯ ರಾಷ್ಟ್ರಗಳ ಪ್ರಧಾನ ಮಂತ್ರಿಗಳು ಸಮಾಲೋಚನೆ ನಡೆಸುವುದು ಇಷ್ಟವೆಂದೂ ಹೇಳಿದರು. ಪಾಕಿಸ್ತಾನದಲ್ಲಿ ದಿನ ದಿನಕ್ಕೂ ವಿಷಮಿಸುತ್ತಿರುವ ಆಂತರಿಕ ಪರಿಸ್ಥಿತಿಯೂ ಭಾರತದ ನ್ಯಾಯಪೂರ್ಣವಾದ ನಿಲುಮೆಯೂ ಪಾಕಿಸ್ತಾನದ ಧುರೀಣರ ಮನಃಪರಿವರ್ತನೆಗೆ ಕಾರಣವಾಗಿರಬಹುದೆಂದು ಊಹಿಸಿದರೆ ತಪ್ಪಾಗಲಾರದು ಪಾಕಿಸ್ತಾನದಲ್ಲಿ ಪ್ರಾಂತೀಯ ಭಾವನೆಯನ್ನು ನಾಶಗೊಳಿಸಿ,ನ ಸಲುವಾಗಿ ಪಶ್ಚಿಮ ಪಾಕಿಸ್ತಾನದ ಈಗಿನ ಪ್ರಾಂತಗಳನ್ನೆಲ್ಲ ಒಂದು ಗುಡಿಸಿ ಏಕ ಘಟಕವನ್ನು ರಚಿಸುವ ನಿರ್ಧಾರವನ್ನು ಸರಕಾರ ಮಾಡಿರುವುದಾಗಿ ದಿನಾಂಕ ೩೦ರಂದು ಪ್ರಧಾನಿ ಮಹಮ್ಮದಾಲಿಯವರು ರಾಷ್ಟ್ರಕ್ಕೆ ಸಾರಿದರು. ಇದರ ವಿವರಗಳನ್ನು ಸಿದ್ಧಪಡಿಸಲು ಸಮಿತಿಯೊಂದು ನೇಮಕ ಗೊಂಡಿರುವುದಾಗಿಯೂ ಅವರು ಹೇಳಿದರು, ಏಕ ಘಟಕವು ಎಂದು ಅಸ್ತಿತ್ವಕ್ಕೆ ಬರುವುದೆಂದು ಅವರು ನಿಶ್ಚಿತವಾಗಿ ಹೇಳಲಿಲ್ಲ. ಆದರೆ ಪಾಕಿಸ್ತಾನದ ಘಟನೆಯನ್ನು ಸಿದ್ಧಪಡಿಸಬೇಕಾದರೆ ಈ ಕೆಲಸ ನೆರವೇರುವುದು ಅಗತ್ಯವೆಂದು ಅವರು ಅಭಿಪ್ರಾಯ.ಪಟ್ಟರು.

ಜಗುಂಬೆ—ಮೈಸೂರಿನ ಸ್ಥಳೀಯ ಶಾಖೆಯ ಮಾನ್ಯಮಂತ್ರಿ ಶ್ರೀ ಟಿ. ಚನ್ನಯ್ಯ ಮತ್ತು ಕಂದಾಯ ಮಂತ್ರಿ ಮಾನ್ಯ ಕಡಿದಾಳ ಮಂಜಪ್ಪ, ಆವರು ತಾ. 18ರಲ್ಲು ಆಗುಂಬೆಗೆ ಆಗಮಿಸಿದರು. ಶ್ರೀ ಟಿ. ಚನ್ನಯ್ಯನವರು ಆಗುಂಬೆ ರಸ್ತೆಯ ಬಡಾವಣೆಯ ವ್ಯಾಪಾರೋತ್ಸವವನ್ನು ನೆರವೇರಿಸಿದರು. ಸುತ್ತಿಗೇಪುರದಿಂದಲೂ ಆಗುಂಬೆ ನಿವಿಜ್ ಪಂಚಾಯತ ಅಧ್ಯಕ್ಷ ಶ್ರೀ ಡಿ. ಎಸ್. ವಿಜಯೇಂದ್ರ ರಾಯರು ವಿನ್ನವತ್ತಳೆಗಳನ್ನರ್ಪಿಸಿದರು. ರವಿ ಸ್ಮೃ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ತಮ್ಮ ಉತ್ತರದಲ್ಲಿ ಆಗುಂಬೆ ಘಾಟಿಯಲ್ಲಿ ಬಸ್ಸು, ಲೋರಿ, ಸೈಸುಗಳು ತಿರುಗಾಡಲು ಅನುಕೂಲವಾಗುವಂತೆ ರಸ್ತೆಯ ಕಾದಲಾಪಕೆ ಕಾರ್ಯವು ಮುಂಬರುವ ಜನವರಿ ತಿಂಗಳಿಂದ ಕೈಗೊಳ್ಳಲಾಗುವುದೆಂದು ಬೀಳಿದರು. ಅಲ್ಲದೆ ಅಗುಂಬೆಯು ಇನ್ನೊಂದು ವರ್ಷದೊಳಗೆ ವಿದ್ಯುದ್ದೀಪಗಳಿಂದ ಬೆಳಗಿಸಲಾಗುವುದೆಂದರು. ಉಡುಪಿಯ ಶ್ರೀ ಟಿ. ಎ. ಪೈ, ಎಸ್. ಎಲ್. ಎ. ಆವರು ಮಾನ್ಯ ಮಂತ್ರಿಗಳಿಬ್ಬರನ್ನೂ ಭಿಬ್ಬೆಯಾಗಿ ಆಗುಂಬೆ ಘಾಟಿ ರಸ್ತೆಯ ವಿಸ್ತರಣೆಯು ತೀವ್ರ ಆಗಬೇಕಾದ ಜರೂರಾತಿಯನ್ನು ತಿಳಿಸಿದರು.

ಪರವಾಗಿ ಡಾ! ಹೆಗ್ಡೆಯವರಿಗೆ ಮಾನಪತ್ರವನ್ನರ್ಪಿಸಿದರು. ಡಾ! ಹೆಗ್ಡೆಯವರ ಮತ್ತು ಅಧ್ಯಕ್ಷರ ಭಾಷಣಗಳಾಗಿ ಸಭಾಂತ್ಯವಾಯಿತು. ರಾತ್ರಿ ಮುಖ್ಯ ಅತಿಥಿಗಳಿಗೂ ಇತರ ಮಹಾಜನರಿಗೂ ಬಾರ್ಕಬ್ಬಿ ಬೀಡು ಕೃಷ್ಣಯ್ಯ ಹೆಗ್ಡೇರು ಭೋಜನ ಸತ್ಕಾರವಿತ್ತರು.

ಎಸ್. ಜಿ. ಎಸ್. ಕಾಲೇಜಿನಲ್ಲಿ

ತಾ. 17ರಲ್ಲು ಅಲ್ಲಿಯ ಎಕನಾಮಿಕ್ಸ್ ಎಸೋಸಿಯೇಶನಸ ನೇತೃತ್ವದಲ್ಲಿ ಪ್ರಿನ್ಸಿಪಾಲ್ ಎಚ್. ಸುಂದರರಾಯರ ಆಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಶ್ರೀ ಟಿ.ಎ. ಪೈ, ಎಸ್. ಎಲ್.ಎ. ಆವರು 'ಕಮರ್ಶಿಯಲ್ ಬ್ಯಾಂಕು' ಗಳ ಕುರಿತು ಮಾತನಾಡುತ್ತಾ, ಉಳಿತಾಯ ಮಾಡುವುದು ಪ್ರತಿಯೊಬ್ಬ ವ್ಯಕ್ತಿಯ ಹಿತದೃಷ್ಟಿಯಿಂದ ಒಳ್ಳೆಯದೆಂದೂ, ಬ್ಯಾಂಕುಗಳು ಸಾರ್ವಜನಿಕರಲ್ಲಿ ಉಳಿಸುವ ಬುದ್ಧಿಯನ್ನು ಬೆಳೆಸುತ್ತವೆಂದೂ, ಬ್ಯಾಂಕುಗಳು ಕೈಗಾರಿಕೆಗಳಿಗೆ ಧಂಡವಾಳವನ್ನು ಒದಗಿಸಿ, ದೇಶದ ಅಭಿವೃದ್ಧಿ ಕಾರ್ಯದಲ್ಲಿ ನೆರವಾಗುತ್ತವೆಂದೂ, ಬ್ಯಾಂಕುಗಳ ರಾಷ್ಟ್ರೀಕರಣವು ಸಮಾಜದ ಹಿತದೃಷ್ಟಿಯಿಂದ ಸ್ತುತ್ಯೋಜನಕಾರಿಯಾಗಲಾರದೆಂದೂ ಹೇಳಿದರು. ಅರಂಭದಲ್ಲಿ ಪ್ರೊಫೆಸರ್ ತ್ಯಾಗರಾಜ್, ಆವರು ಸ್ವಾಗತ ಭಾಷಣ ಮಾಡಿದರು. ಕೊನೆಯಲ್ಲಿ ಕಾರ್ಯದರ್ಶಿ ಶ್ರೀ ಡಿ. ಫೆರ್ನಾಂಡಿಸರು ಧನ್ಯವಾದಗಳನ್ನಿತ್ತರು.

ಉಪಾಧ್ಯಕ್ಷರ ಚುನಾವಣೆ— ಉಡುಪಿ ಮುನಿಸಿಪಲ್ ಕೌನ್ಸಿಲಿನ ವಿಶೇಷ ಸಭೆಯು ತಾ ೨೭ರಲ್ಲು ಪೂರ್ವಾಹ್ನ ೧೦! ಸಿ.ವಿ. ವ್ಯಾಸರಾಯರ ಆಧ್ಯಕ್ಷತೆಯಲ್ಲಿ ಒರಿಗಿ ಕಾಂಗ್ರೆಸ್ ಪಕ್ಷದ ಶ್ರೀಯು.ಎಸ್.ಇಮಾಮ್ ಸಾಹೇಬರು ಬಹುಮತದಿಂದ ಕೌನ್ಸಿಲಿನ ಉಪಾಧ್ಯಕ್ಷರಾಗಿ ಆರಿಸಲ್ಪಟ್ಟಿರು. ಶ್ರೀ ಪಾಡುರಂಗ ಶೆಣೈಯವರುಸ್ವತಂತ್ರ ಪಕ್ಷದ ಪ್ರತಿಸ್ಪರ್ಧಿಯಾಗಿದ್ದರು.

ಯಕ್ಷಗಾನ ಕಲಾಮಂಡಲದ ನಾರ್ಷಿಕೋತ್ಸವವು ತಾ. ೨೦ರಂದು ಶ್ರೀ ಪರ್ಯಾಯ ಮಠದ ಶೀಮದ್ವಿಶ್ವೇಶತೀರ್ಥ ಶ್ರೀ ಪಾದಂಗಳವರ ಆಧ್ಯಕ್ಷತೆಯಲ್ಲಿ ನಸಂತ ಮಹಾಲಿನಲ್ಲಿ ಜರಗಿತು. ಸಂಘದ ಕಾರ್ಯದರ್ಶಿ ಶ್ರೀ ಕೆ. ನಾರಾಯಣ ಸೆಟ್ಟರು ಸಭಿಯನ್ನೋದಿದರು. ಶ್ರೀ ಕೋಣಿ ಅಣ್ಣಪ್ಪ ಕಾಂತರು "ಕರ್ನಾಟಕವಲ್ಲಿ ಯಕ್ಷಗಾನಕಲೆ" ಯಕುರಿತೂ ಶ್ರೀಪಾ. ಲ. ನಾ. ಉದಾಧ್ಯಾಯರು "ಯಕ್ಷಗಾನದಲ್ಲಿ ಬಿಳಕು" ಎಂಬ ವಿಷಯವಾಗಿಯೂ ಭಾಷಣ ಮಾಡಿದರು ಅಧ್ಯಕ್ಷರು ಮೈಸೂರು ಮತ್ತು ಪಟ್ಟಣಗೆರೆಯ ಬಿಲ್ಲೆಯ ಯಕ್ಷಗಾನ ಕಲೆಯು ವಿಚಾರವಾಗಿ ಬೊಧಪ್ರದ ಭಾಷಣಮಾಡಿದರು.

ನಂತರ "ಅರ್ಜುನಪ್ರತಿಜ್ಞೆ"ಎಂಬ ಯಕ್ಷಗಾನ ಕೂಟವು ಶ್ರೀಗಳಾದಕಾಡಸ್ಪರ್ಯ, ಶಿವಪುರ ಶ್ರೀನಿವಾಸ ಪಂಡಿತರು,ಎಮ್ಪೆ ಸುಬ್ರಾಯರ ಮೆಯ ಶ್ರೀ ಪೊಳ್ಳು ಜೀವಪ್ಪ ಸೆಟ್ಟರೇ ಮೊದಲಾದವರ ಸಹಾಯಕಾರಕತೆಯಿಂದಲೂ ಶ್ರೀ ಕೋಟ ಶ್ರೀನಿವಾಸ ನಾಯಕರ ಹಾದಾಗಾರಿಕೆಯಿಂದಲೂ ಯಶಸ್ವಿಯಾಗಿ ಜರಗಿತು. ಕಾರ್ಯದರ್ಶಿಗಳ ಧನ್ಯವಾದಾರ್ಪಣೆಯೊಂದಿಗೆ ಉತ್ಸವವು ಕೊನೆಗೊಂಡಿತು.

ಸೆಕೆಂದರಿ ಶಾಲೆಗಳೂ ಜಿಲ್ಲಾ ಲೈಬ್ರೆರಿಗಳೂ

'ನವಯುಗ'ನನ್ನು ತರಿಸಿಕೊಳ್ಳುವಂತೆ ಮಂಜೂರಾಗಿದೆ.

ಸೆಕೆಂದರಿ ಶಾಲೆಗಳ ಉಪಯೋಗಾರ್ಥವಾಗಿ ಮುಖ್ಯಾಸನ ನಿರ್ದ್ದೇಶಕರಿಂ, ಜಿಲ್ಲೆಯ ಲೈಬ್ರೆರಿಗಳ ಉಪಯೋಗಾರ್ಥವಾಗಿ ದ. ಕ. ಜಿಲ್ಲಾ ಲೋಕಲ್ ಲೈಬ್ರೆರಿ ಅಫೀಲಿಯೆಟ್ ಕಮಿಟಿಯವರೂ 'ನವಯುಗ' ವಾರಪತ್ರಿಕೆಯನ್ನು ಮಂಜೂರು ಮಾಡಿರುತ್ತಾರೆ.

1931ರಲ್ಲಿ ಆರೋಗ್ಯಮಂತ್ರಿ ಶ್ರೀ ಎ. ಬಿ. ಶೆಟ್ಟಿಯವರಿಂದ ಸ್ಥಾಪಿಸಲ್ಪಟ್ಟು ಆವಿರತವಾಗಿ ಜನಸೇವೆ ಮಾಡುತ್ತಿರುವ ಏಕೈಕ ವಾರಪತ್ರಿಕೆ **'ನವಯುಗ'**ಕ್ಕೆ ಎಲ್ಲಾ ಸೆಕೆಂದರಿ ಶಾಲೆಗಳೂ, ಜಿಲ್ಲೆಯ ಎಲ್ಲಾ ಲೈಬ್ರೆರಿಗಳೂ, ಚಂದಾದಾರರಾಗಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮೆನೆಜರ್,

ವಾರ್ಷಿಕ ಚಂದಾ ರೂ. 5-12-0 ಮಾತ್ರ. **ನವಯುಗ, ಉಡುಪಿ.**

ಮಂಗಳೂರು

ಮಂಗಳೂರಿನ ನೀರು ಸರಬರಾಯಿಗೆ ರೂಪಾಯಿ 82.85 ಲಕ್ಷ!— ನಗರಗಳಲ್ಲಿ ಕುಡಿಯುವ ನೀರೊದಗಿಸುವಯೋಜನೆಗಳಿಗೆ ಯೋಜನಾ ಸಮಿತಿಯು ಮದ್ರಾಸು ಸರಕಾರಕ್ಕೆ ರೂಪಾಯಿ ಎರಡೂವರೆ ಕೋಟಿ ಸಹಾಯ ಕೊಡಲು ನಿರ್ಧರಿಸಿಯಿದೆ. ಈ ಹಣದಿಂದ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿಗೆ ರೂ. ೮೨.೮೫ ಲಕ್ಷ ಕೊಡಲಾಗುವುದು. ಮದ್ರಾಸು ರಾಜ್ಯದಲ್ಲಿಯ ಜಿಲ್ಲೆಗಳಿಗೆ ನೀರು ಸರಬರಾಯಿ ಬಗ್ಗೆ ಮೊದಲಿಯುವ ಹಣದ ವಿವರ ಹೀಗಿದೆ: ಕೊಯಮುತ್ತೂರು ಜಿಲ್ಲೆಯಲ್ಲಿ ತಿರುಪುರ್ (೧೨ ಲಕ್ಷ), ಮಧುರಾ ಜಿಲ್ಲೆಯಲ್ಲಿ ದಿಂಡಿಗಲ್ (೪೭ ಲಕ್ಷ); ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುರಗೊರು (೮೨.೮೫ ಲಕ್ಷ), ಸೇಲಂ (೪೨ ಲಕ್ಷ) ಮತ್ತು ಕೊಯಮುತ್ತೂರಿಗೆ (೫೭ ಲಕ್ಷ).

ವರ್ಧಂತಿ ಸಮಾರಂಭ— ಬೆಸೆಂಟ್ ರಾಷ್ಟ್ರೀಯ ಬಾಲಿಕಾ ಪ್ರೌಢಶಾಲೆಯ ವಿದ್ಯಾರ್ಥಿನಿ ಭವನದ ಪದ್ಮ ವಿಹಾರದ ವರ್ಧಂತಿ ಮತ್ತು ಥಿಯೊಸೋಫಿಕಲ್ ಸೊಸ್ಯಾಟಿ ಸ್ಥಾಪನೆಯ ದಿನಾಚರಣೆಯು ತಾ. 17ರಲ್ಲು ಸಂಜೆ ಡಾ। ಎಮ್. ಆಣ್ಣಪ್ಪ ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ಆನಂತ ರಾಯರು ಸ್ವಾಗತ ಮಾತುಗಳನ್ನಾಡಿದರು. ಪದ್ಮ ವಿಹಾರದ ವಾರ್ಡನ್ ಶ್ರೀಮತಿ ಕೆ. ಹೀರಾ, ಅವರು ವರದಿಯನ್ನೋದಿದರು. ಶ್ರೀಮತಿ ಕೃಷ್ಣಾ ಬಾಯಿಯವರು ಪ್ರಶಸ್ತಿ ಭಾಷಣ ಮಾಡಿದರು. ಶ್ರೀ ಎನ್. ಶ್ರೀನಿವಾಸ ರಾಯರ ಕಾರ್ಯೋಚಿತ ಮಾತುಗಳು, ಅಧ್ಯಕ್ಷ ಭಾಷಣವಾಗಿ ವಿವಿಧ ವಿನೋದಾವಳಿಗಳಾದುವು.

ರಾಷ್ಟ್ರೀಯ ವಿಸ್ತರಣಾ ಕ್ಷೇತ್ರದ ಸಲಹಾ ಸಮಿತಿ ಸಭೆಯು ತಾ. 15ರಲ್ಲು ಮಂಜೇಶ್ವರ ಉಪ್ಪಾವರ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಬ್ಲಾಕ್ ಡೆವಲಪ್‌ಮೆಂಟ್ ಆಫೀಸರರು ಅಭಿವೃದ್ಧಿ ಕಾರ್ಯಗಳ ವರದಿಯನ್ನೋದಿದರು. ವರದಿ ಕಾಲದಲ್ಲಿ 1 ಮೈಲು 21 ಫರ್ಲಂಗು ರಸ್ತೆ ಪೂರ್ಣಗೊಳಿಸಲಾಗಿತ್ತು. 3 ಭಾವಿ ಕೆಲಸ ಕೈಗೊಳ್ಳಲಾಗಿತ್ತು. ಇದಲ್ಲದೆ ರಸ್ತೆ ಸಾರಿಗೆ, ಕಾಲು ಸಂಕ ಇತ್ಯಾದಿ ಹಲವು ಕಾರ್ಯಗಳನ್ನು ಕೈಗೊಳ್ಳಲಾಗಿತ್ತು.

ಧರ್ಮಾರ್ಥ ಹಂಚಲು ಹಾಲಿನ ಪುಡಿ— ಬಡಬಗ್ಗರಿಗೆ ಧರ್ಮಾರ್ಥ ಹಂಚು ವುದಕ್ಕಾಗಿ ಕೇಂದ್ರ ಸರಕಾರವು ದೀನಬಂಧು ಸೇವಾ ಸಂಘಕ್ಕೆ 35 ಮಣ 10 ಸೇರು ಹಾಲಿನ ಪುಡಿಯನ್ನು ಒದಗಿಸಿದೆ ಎಂದು ತಿಳಿದು ಬರುತ್ತದೆ.

ಮಿರಾಜ್‌ಕಾರ್ ಬಂಗಲೆಯನ್ನು ಕೊ— ಮಿರಾಜ್‌ಕಾರರು ತಮ್ಮ ತಾಯಿಯ ಸ್ಮಾರಕಾರ್ಥವಾಗಿ ಮದ್ರಾಸು ಸರಕಾರಕ್ಕೆ ದಾನ ಮಾಡಿರುವರು. ಈ ಬಂಗಲೆಯನ್ನು [illegible] ಲಾ ಪ್ರದರ್ಶನ ಭವನಕ್ಕಾಗಿ ಉಪಯೋಗಿಸ ಬಹುದೆಂದು ಹೇಳಲಾಗಿದೆ.

ಬೇಂಕುಗಳ ಮನವಿ— ಸ್ಥಳೀಯ ಜಯಲಕ್ಷ್ಮಿ ಬೇಂಕ್, ನಗರ್‌ಕಾರ್ ಬೇಂಕ್, ಪೈಮನಿ ಬೇಂಕ್, ವಿಜಯಾ ಬೇಂಕ್, ಮಂಗಳೂರು ಬೇಂಕ್, ಕಥೋಲಿಕ್ ಬೇಂಕ್ ಮತ್ತು ಕರ್ನಾಟಕ ಬೇಂಕುಗಳು ಮದ್ರಾಸು ಸರಕಾರಕ್ಕೆ ಒಂದು ಮನವಿಯನ್ನು ಕಳುಹಿಸಿವೆ. ಕಳೆದ ಫೆಬ್ರವರಿಯಲ್ಲಿ ಮಾನ್ಯ ವಾದ ಕೃಷಿಕರ ಸಾಲ ಮರುಪಾವತಿಯ ತಾತ್ಕಾಲಿಕ ತಡೆ ನುಸೂನೆಯು ಯಾವ ಪರಿಸ್ಥಿತಿಯನ್ನು ಪ್ರತಿಫಟಿಸುವುದಕ್ಕಾಗಿ ಮುಂತರಲ್ಪಟ್ಟಿತೋ ಆ ಪರಿಸ್ಥಿತಿ ಈಗಿರುವುದಿಲ್ಲ. ಆಲ್ಲದೆ, ಮುಸೂಜೆ ಮುಂದುನರಿಂದರೆ ಸಾಲ ಪಡೆದ ಬೇಸಾಯಗಾರರಿಗೂ ಕಷ್ಟ, ಬೇಂಕಿನ ಹಣವೂ ಸ್ಥಿರೀಕರಿಸಲ್ಪಟ್ಟು ಪಹಿವಾಟಿಗೆ ತೊಡಕಾಗುವುದು ಎಂದು ಮನವಿಯಲ್ಲಿ ಹೇಳಲಾಗಿದೆ.

ಸನ್ಮಾನ ಸಮಾರಂಭ— ಕೆನರಾ ಹ್ಯಾಸ್ಕೂಲಿನ ಮೆನೇಜರರೂ, ಕೆನರಾಹ್ಯಾಸ್ಕೂಲ್ ಎಸೋಸಿಯೇಶನ್ನಿನ ಕಾರ್ಯದರ್ಶಿಗಳೂ ಆಗಿದ್ದು, ಈಗ ಈ ಸ್ಥಾನಗಳಿಂದ ನಿವೃತ್ತರಾಗಿರುವ ಶ್ರೀ ಎಮ್. ಮಾಧವರಾಯರಿಗೆ ತಾ. 21ರಲ್ಲು ಡಾ। ಎಮ್. ಕೇಶವ ಪೈಗಳ ಅಧ್ಯಕ್ಷತೆಯಲ್ಲಿ ಸ್ವಾಗತ ಸತ್ಕಾರ ಕೂಟವೊಂದು ಜರಗಿತು. ಸಭಿಕರಲ್ಲಿ ಶ್ರೀಗಳಾದ ಕೆ. ಸೂರ್ಯನಾರಾಯಣ ಆಡಿಗ, ಕೆ. ಶ್ರೀನಿವಾಸ ಕಿಣಿ, ಬಿ. ಆಚ್ಯುತ ಬಾಳಿಗ, ಜಿ. ಕೆ. ಶೆಣೈ, ಕೆ. ಬೇನಡಾಸ ನಾಯಕ್, ಕೆ. ವಾಸುದೇವ ಕಿಣಿ, ಎಮ್. ದಾಮೋದರ ಕಿಣಿ ಮೊದಲಾದ ವರು ಕಾಲೋಚಿತ ಮಾತುಗಳನ್ನಾಡಿದರು. ಅಧ್ಯಕ್ಷ ಭಾಷಣದೊಡನೆ ಸಭಾಂಕ್ಯವಾಯಿತು.

ಹಳೆ ವಿದ್ಯಾರ್ಥಿ ದಿನೋತ್ಸವ— ಕದ್ರಿ ವಿದ್ಯಾದಾಯಿನಿ ಪ್ರಾ ಎ ಶಾಲೆಯ ಹಳೆ ವಿದ್ಯಾರ್ಥಿಗಳ ದಿನೋತ್ಸವವು ತಾ. 21 ರಲ್ಲು ಡಾ। ಕೆ. ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ವಿಠಲನವರು ಸ್ವಾಗತ ಭಾಷಣ ಮಾಡಿದರು. ಡಾ। ನಾರಾಯಣ ರಾವ್ ನೂಮದವರು ಮಾತನಾಡಿದರು.

ತಂತಿ ಸೌಕರ್ಯ— ಸಾರ್ವಜನಿಕರಿಗೆ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವ ದೃಷ್ಟಿಯಿಂದ ಹಂಪನಕಟ್ಟೆ, ಕೊಡಿಯಾಲಬೈಲು ಮತ್ತು ಕಂಕನಾಡಿಗಳಲ್ಲಿರುವ ಟಪ್ಪಾಲು ಆಫೀಸುಗಳ ತಂತಿಶಾಖೆಯನ್ನು ಅನುಕ್ರಮವಾಗಿ ಬೆಳಿಗ್ಗೆ 7ರಿಂದ ರಾತ್ರಿ 9; ಬೆಳಿಗ್ಗೆ 7ರಿಂದ ಸಂಜೆ 6 ನುತ್ತು ಬೆಳಿಗ್ಗೆ 6.30ರಿಂದ ಸಂಜೆ 6ರ ತನಕ ತೆರೆದಿರಲಾಗಿದೆ ಎಂದು ತಿಳಿದು ಬರುತ್ತದೆ.

ಸ್ವದೇಶಕ್ಕೆ ಸುಖಾಗಮನ— ದಿನಂಗತ ಡಾ। ಬೆಳ್ಳೆ ರಾಮಣ್ಣ ಶೆಟ್ಟಿ ಪುತ್ರ ಶ್ರೀಯುಸ್ ಎಮ್. ಹರೀಂದ್ರನಾಥ ಶೆಟ್ಟರು ತನ್ನ ಪತ್ನಿ ಶ್ರೀಮತಿ ಸುಮಲತಾ, ಬಿ. ಎ. ಆನರೊಂದಿಗೆ ಇಂಡಿಯಾ ಸರಕಾರದಿಂದ ವಾಯರ್‌ಲೆಸ್ ಟೆಲಿಗ್ರಾಫಿಯಲ್ಲಿ ಉಚ್ಚ ತರಬೇತಿಗಾಗಿ ಇಂಗ್ಲೆಂಡಿಗೆ ಕಳುಹಿಸಲ್ಪಟ್ಟಿದರು. ಎರಡುವರ್ಷ ಕಾಲ ಶಿಕ್ಷಣವನ್ನು ಪೂರ್ಣಗೊಳಿಸಿಕೊಂಡು ಇದೀಗ ಸ್ವದೇಶಕ್ಕೆ ಹಿಂತಿರುಗಿ ಬಂದಿರುವರು. ಇವರು ಮೊದಲು ಲೆಫ್ಟಿನೆಂಟ್ ಆಗಿದ್ದು ಈಗ ಕೆಪ್ಟನ್ ಪದವಿ ಹೊಂದಿರುವರು.

ಬೈಂದೂರು— ತಾ. 14ರಲ್ಲು ನೆಹರೂ ಜಯಂತಿ ದಿನಾಚರಣೆ ಸಂದರ್ಭದಲ್ಲಿ ಇಲ್ಲಿಯ ಮಕ್ಕಳ ಮೇಳವೊಂದು ರಾಷ್ಟ್ರೀಯ ಬಡಾವಣಾ ಯೋಜನೆಯ ಅಂಗವಾಗಿ ಆಚರಿಸಲ್ಪಟ್ಟತು. ಪ್ರಾತಃಕಾಲದಲ್ಲಿ ಪ್ರಭಾತಫೇರಿ ನಡೆದು ಟೋರ್ಡು ಹೈಸ್ಕೂಲು ವಠಾರದಲ್ಲಿ ಶಾಲಾ ಹೆಡ್ಮಾಸ್ಟರ್ ಶ್ರೀ ಶ್ರೀನಿವಾಸ ಆಚಾರ್ಯರ ನೇತೃತ್ವದಲ್ಲಿ ಧ್ವಜವಂದನೆ ಆಯಿತು. ಸಂಜೆ ಬೈಂದೂರು ಕೇಂದ್ರದ ಸರ್ವಸಾಧಾರಣ ಎಲ್ಲಾ ಶಾಲೆಗಳ ಬಾಲಕ ಬಾಲಕಿಯರು, ಸ್ಕೌಟ್‌ದಳದವರೇ ಮೊದಲಾದವರು ಚಾಚಾ ನೆಹರೂ ಜಿಂದಾಬಾದ್' ಜಯಘೋಷಗಳೊಡಿಗೆ ಪುರಮೆರವಣಿಗೆ ತೆಗೆದರು. ನಂತರ ಶ್ರೀ ವೈ. ಮಂಜಯ್ಯ ಶೆಟ್ಟಿ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯು ಜರಗಿತು. ಶ್ರೀಗಳಾದ ಕೆ. ರಾಮಚಂದ್ರ ಉಪಾಧ್ಯ, ತಹಶೀಲ್ದಾರ್ ವೆಂಕಟರಮಣಯ್ಯ, ಎಮ್. ಎಸ್. ಹೆಗ್ಡೆ, ಆರ್. ಕೆ. ಸಂಜೀವರಾವ್ ಮತ್ತು ಲೆ ಫಾ ಸುರ್ಬಾಡೋರವರು ಕಾಲೋಚಿತ ಮಾತುಗಳನ್ನಾಡಿದರು. ಶ್ರೀ ಟಿ. ಜಂಗಯ್ಯ ಶೆಟ್ಟರು ತನ್ನು ಗ್ರಾಮದಲ್ಲಿ ಶಾಲೆಯೊಂದನ್ನು ತೆರೆಯುನರೆ ಸ್ಥಳ ಮತ್ತು ಕಟ್ಟೋಣವನ್ನು ದಾನಕೊಡುವುದಾಗಿ ಜಾಹೀರುಮಾಡಿದರು. ಮೇಗಸೀರ ಸಪೂಜದವರು ತಮಗಾಗಿ ದುಡಿಯುತ್ತಿರುವ ಜನಪ್ರಿಯ ಶ್ರೀ ವೈ. ಮಂಜಯ್ಯ ಶೆಟ್ಟಿ, ಎಮ್. ಎಲ್. ಎ. ಅವರಿಗೆ ಗುರಾಣಿಯೊಂದನ್ನು ಕಾಣಿಕೆಯಿತ್ತರು. ಶ್ರೀ ಶೆಟ್ಟರು ಆಪನ್ನು ಕುಂದಾಪುರ ತಾಲೂಕಿನಲ್ಲಿ ನಾಲಿಬೋಲ್ ಸ್ಪರ್ಧೆಯಲ್ಲಿ ಗೆದ್ದ ಹೈಸ್ಕೂಲಿಗೆ ಬಹುಮಾನ ಕೊಡುನರೆ ಬೈಂದೂರು ಹೈಸ್ಕೂಲ್ ಹೆಡ್ಮಾಸ್ಟರರ ಪಪ ಕೊಟ್ಟರು. ಮಕ್ಕಳಿಗೆ ತಿಂದಿ ಪಂಬೋಣ, ಅಧ್ಯಕ್ಷ ಭಾಷಣವಾಗಿ ಶ್ರೀ ಪತ್ತಾರಾವು ರಾಯರು ಧೈರ್ಯವಾದಗಳನ್ನರ್ಪಿಸಿದರು. ಸ್ಕೌಟ್‌ದಳದ ಪಿಟಿರಚ್ಚಿ ಕಾರ್ಯಕ್ರಮವೂ ನಡೆಯಿತು.

ಮೂಲೂರು— ಸ್ಥಳೀಯ ಪಾಪಿಳ್ಳೆ [illegible] ಎಲಿಮೆಂಟರಿ ಶಾಲೆಯ ಸಹಾಯಕ ಅಧ್ಯಾಪಕ ಜನಾಬ್ ಮಹಮ್ಮದ್ ಶಾಬಾನರು ತಮ್ಮ ಕೆಲಸದಿಂದ ನಿವೃತ್ತರಾದ ಬಗ್ಗೆ ಅವರನ್ನು ಬೀಳ್ಕೊಡುವ ಸಮಾರಂಭವು ತಾ 18 ರಲ್ಲು ಪಂಚಾಯತಬೋರ್ಡು ಪ್ರೆಸಿಡೆಂಟ್ ಶ್ರೀ ಎಮ್. ಭೋಜ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ವೈ. ಎಮ್. ಅಬ್ದುಲ್ ಖಾದರ್, ಯು. ನರ್ಸಪ್ಪಯ್ಯ ನಾಷೆ, ಡಿ. ಡಿ. ಆನಂದ ಪೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು. ಕೊನೆಯಲ್ಲಿ ಶಾಲಾ ಹೆಡ್ಮಾಸ್ತರ್ ಶ್ರೀ ಕೆ. ಉಮ್ಮು ರಬ್ಬಸನರು ಧನ್ಯವಾದಗಳನ್ನರ್ಪಿಸಿದರು.

ಕುಂಬಳೆ— ಬೇಳದ ಕಲ್ಲಕೂಟದಲ್ಲಿ ತಾ. 18ರಲ್ಲು ಶ್ರೀ ಕುಮಾರಸ್ವಾಮಿ ಎಯಿಜೆಡ್ ಬುನಾದಿ ಪ್ರಾಥಮಿಕ ಶಾಲೆಯೊಂದು ಶ್ರೀ ಕೆ. ಗಣಪತಿ ಭಟ್ಟರಿಂದ ಉದ್ಘಾಟಿಸಲ್ಪಟ್ಟಿತು. ಮಾಯಿಪಾಡಿ ಶ್ರೀಣಿಯ ಪರೀಕ್ಷಾಧಿಕಾರಿ ಶ್ರೀ ವಿ. ತಿಮ್ಮಪ್ಪ ಶೆಟ್ಟರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಮಂಜೇಶ್ವರ ಬ್ಲೋಕಿನ ಸೋಸಿಯಲ್ ಎಜ್ಯುಕೇಶನಲ್ ಆರ್ಗನೈಜರ್ ಶ್ರೀ ಕೆ. ಎಮ್. ಮೋಪನ ಶೆಟ್ಟಿ ಮೊದಲಾದವರು ಮಾತನಾಡಿದರು.

ಮಾಯಿಪಾಡಿ— ಸ್ಥಳೀಯ ಸರಕಾರಿ ಬುನಾದಿ ತರಬೇತಿ ಶಾಲೆಯಲ್ಲಿ ತಾ. 14ರಲ್ಲಿ ನೆಪರೂ ಜಯಂತಿಯು ಶಾಲಾ ಡಿ ಇನ್ಸ್‌ಪೆಕ್ಟರ್ ಶ್ರೀ ವಿ. ತಿಮ್ಮಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಅಂದು ಬೆಳಿಗ್ಗೆ ಪ್ರಭಾತಫೇರಿ, ಧ್ವಜವಂದನೆ, ಗ್ರಾಮಸೇವೆ ಇತ್ಯಾದಿ ಕಾರ್ಯಕ್ರಮಗಳು ಶಾಲಾ ಹೆಡ್ಮಾಸ್ತರ್ ಶ್ರೀ. ರಾಮಕೃಷ್ಣ ಶೆಟ್ಟರ ನೇತೃತ್ವದಲ್ಲಿ ಜರಗಿದುವು. ಮತ್ತು ಪ್ರೌಢಶಾಲೆಯೂ ಜರಗಿಸಲಾಯಿತು. ಸಂಜೆ ಹಳಿಕಟ್ಟಿ ಕಾಲಕ್ಷೇಪವು ಕಾಸರಗೋಡಿನ ಜ್ಯೂನಿಯರ್ ಮೆಜಿಸ್ಟ್ರೇಟ್ ಶ್ರೀ ರಂಗರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕಾಸರಗೋಡಿನ ಡಿ ಮುನ್ಸಿಫ್ ಶ್ರೀ ಸೀತಾರಾಮ ರಾಯರು ಪ್ರಮುಖ ಭಾಷಣ ಕರ್ತರಾಗಿದ್ದರು. ಯಕ್ಷಗಾನ ಕಾಲಕ್ಷೇಪದೊಂದಿಗೆ ಸಮಾರಂಭ ಕೊನೆಗೊಂದಿತು.

ಕಾರ್ಕಳ ಮದ್ರಾಸು ಎಸೆಂಬ್ಲಿಯ ಕಾರ್ಕಳ ಮತದಾರ ಮಲಯದ ಜಾಗೂರು ಲಿಮಿಟೆಂಟ್ ಮತದಾರ ಕ್ಷೇತ್ರಕ್ಕೊಳಪಟ್ಟ ಕಾರ್ಕಳಭಾಗದಲ್ಲಿ ಮತದಾರರ (ಸೇನಾನಿಗಳು ಮತ್ತು ಗೈರ ಹಾಜರಿ ನೌಕರರು ಹೊರತು) ಅಬ್ಸೆರ್ವರ್ ಟ್ಟಿಯು ಇದೇ ತಾ. 15ರಲ್ಲು ಪ್ರಕಟವಾಗಿದೆ ಎಂದೂ ಈ ತಾರೀಕಿನಿಂದ 15ದಿವಸಗಳ ತನಕ ಕಾರ್ಕಳ ತಾಲೂಕಾಫೀಸಿನಲ್ಲಿ ತೂಗಿಸಲಾಗುವುದೆಂದೂ ಕಾರ್ಕಳ ತಹಶೀಲ್ದಾರರು ತಿಳಿಸುತ್ತಾರೆ.

ವಂಡಾರು— ಇಲ್ಲಿ ನರ್ಸಪ್ಪಯ್ಯ ನಡೆಯತಕ್ಕ ಶ್ರೀ ಜನಪೇವತಾ ಕಂಬಳವು ಗು. 6-12-54ನೇ ಚಂದ್ರವಾರ ಜರಗಲಿರುವುದೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.



ತಲ್ಲೂರು— ತಾ. 20ರಲ್ಲಿ ಶ್ರೀ ರುಜಾರಿಯೋ ಫೆರ್ನಾಂಡಿಸರ ಅಧ್ಯಕ್ಷತೆಯಲ್ಲಿ ಜರಗಿದ ಅಧ್ಯಾಪಕರ ಸಭೆಯಲ್ಲಿ ಮಿ- ಕೆಡ್ಡಾಯರ ನಿಧನಕ್ಕೆ ಸಂತಾಪ ಸೂಚಿಸಲಾಯಿತ್ತಲ್ಲದೆ ಜಿಲ್ಲಾ ಬೋರ್ಡು ಅಧ್ಯಕ್ಷರಾಗಿ ಆರಿಸಲ್ಪಟ್ಟ ಡಾ। ಕೆ. ಕೆ. ಹೆಗ್ಡೆಯವರನ್ನು ಅಭಿನಂದಿಸ ಲಾಯಿತು.

ಕೊಯಮುತ್ತೂರು— ಸ್ಥಳೀಯ ಕರ್ನಾಟಕ ಸಂಘದ ಸದಸ್ಯರ ಬಹಿರಂಗ ಸಭೆಯೂ, ತ್ರೈಮಾಸಿಕ ಕಾರ್ಯಕ್ರಮವೂ ತಾ. 14ರಲ್ಲಿ ಪುಡ್ಡಂಡ್ಡಿನಲ್ಲಿ ಜರಗಿತು. ಅರಂಭದಲ್ಲಿ ಸಂಘದ ಅಧ್ಯಕ್ಷ ಶ್ರೀ ಎಚ್. ಪಿ. ಕೊಲಾಸೊ, ಅವರು ಸ್ವಾಗತ ಸೂತಕಗಳನ್ನಾಡಿದರು. ಕಾರ್ಯದರ್ಶಿ ಶ್ರೀ ಸಿ. ವಿ. ರಾಮರಾಜರು ವರದಿಯನ್ನೋದಿದರು. ಸಂಘಕ್ಕೆ ಸ್ವಂತ ಕಟ್ಟಡ ಕಟ್ಟುವ ಬಗ್ಗೆ ಸ್ಥಳೀಯ ಮುನಿಸಿಪಾಲಿಟಿಯಿಂದ ಸ್ಥಳ ಕೇಳಿಕೊಳ್ಳಬೇಕೆಂಬ ನಿರ್ಣಯವಾಯಿತು. ನಂತರ ಸಂಗೀತ, ಗಾಯನ ಗಳಾದುವು. ಕಾರ್ಯಕ್ರಮಗಳಿಗೆ ಭೇಟಿ ಕೊಟ್ಟ ಪದ್ರಾಸು ಸರಕಾರದ ಮಾನ್ಯಮಂತ್ರಿ ಶ್ರೀ ಎ. ಬಿ. ಶೆಟ್ಟರು ಸಂಗೀತದಲ್ಲಿ ಭಾಗ ವಹಿಸಿದ ಬಾಲಿಕೆಯರಿಗೆ ಬಹುಮಾನ ವಿತರಣೆ ಮಾಡುತ್ತಾ, ಸಂಘವು ನಡೆಸುತ್ತಿರುವ ಚಟುವಟಿಕೆಗಳನ್ನು ಪ್ರಶಂಶಿಸಿದರು. ಡಿ. ಕೆ. ಜಿಲ್ಲೆಯವರು ಈ ಸ್ಥಳದಲ್ಲಿ ಸರಕಾರದ ದೊಡ್ಡ ಹುದ್ದೆಗಳಲ್ಲಿರುವುದೂ ಅವರಿಲ್ಲಿರೂ ಇಂಥ ಸಂಘಗಳಲ್ಲಿ ಭಾಗನಹಿಸುತ್ತಿರುವುದೂ ಸಂತೋಷಕರವೆಂದರು. ಡಾ। ಸಿ. ವಿ. ರಾಮರಾಜರ ವಂದನಾರ್ಪಣೆಯೊಂದಿಗೆ ಸಮಾರಂಭ ಯಶಸ್ವಿಯಾಗಿ ಕೊನೆಗೊಂದಿತು.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

R. E. P. No. 229/1954.

O.S No. 587/1917.

ಪದ್ಮಾವತಿ ಅಂಮ —ಅರ್ಜಿದಾರಳು.

ಮತ್ತು

ರಾಮಪ್ಪ ಕೂಡಾ —ಎದ್ರಿರು.

ಯಿನರೊಳಗೆ

ಸದ್ರಿ ಆಮಲಜ್ಜಾರಿಯ 1 ಮತ್ತು 2ನೇ ಎದ್ರಿರು:—

1. ರಾಮಪ್ಪ, 2. ಸರ್ವೋತ್ತಮ— ಪಯಗ್ರೀವಯ್ಯನವರ ಮಕ್ಕಳು, ಮಟ್ಟು ಗ್ರಾಮ.

ಇವರಿಗೆ ಈ ಮೂಲಕ ತಿಳಿಸುವುದೇ ನಂದ್ರೆ—

ಮೆಲ್ಕಂಡ ಆಮಲಜ್ಜಾರಿಯಲ್ಲಿ ಡಿಕ್ರಿದಾರಳಾದ ಅರ್ಜಿದಾರಳು ಸ್ಥಿರಾಸ್ತಿ ವಿಕ್ರಯದ ಬಗ್ಗೆ ಅರ್ಜಿಮಾಡಿಕೊಂಡಿರುವುದ್ರಿಂದ ವಿಕ್ರಯದ ಇಸ್ತಿಹಾರಿನ ಪರತೆಗಳನ್ನು ನಿರ್ಣಯಿಸಲಿಕ್ಕೆ 1954ನೇ ಇಸವಿ ದಶಂಬರ 3ರಂಗಳ ತಾ. 10 ನಿಶ್ಚಯಿಸೋಣಾಗಿಯದೆಂತ ನಿಮಗೆ ಈ ಮೂಲಕ ತಿಳಿಸೋಣಾಗುತ್ತ ನೆ.

(By order of the Court.)

P. V. Acharya,
Vakil for Petitioners.

ಉಡ್ಪಿ, ತಾ. 20-11-54.

ಸಡಿಯುವ ಚಿತ್ರ—

ನೀಲಾ ಪ್ರೊಡಕ್ಷನ್ಸ್‌ನವರ

ಇರುಳುಕ್ಕಿನ್ (ತಮಿಳು)

ಲಲಿತ, ರಾಗಿಣಿ, ಭಾರತಿ, ಪ್ರೇಮ ನಾಸೀರ್, ಮುದುಕುಳಂ

ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ

ಬರುವ ಚಿತ್ರ:—

ಆರ್ ಪಾರ್ (ಹಿಂದಿ)

ನಿರೀಕ್ಷಿಸಿ— ಬೆಲಾದ್, (ಹಿಂದಿ) ನಟಿಬೇಬಿ (ಕನ್ನಡ)

(ಂನೇ ಪುಟದಿಂದ)

ದ ಒಳಗೆ ಅಧಿಕಾರ ಸ್ಥಾನಕ್ಕಾಗಿ ಗುದ್ದಾಡುತ್ತಿರುವ ಸದಸ್ಯರ ಮನೋಭಾವಕ್ಕೆ ಸಾಕ್ಷಿ ಕೊಡುತ್ತವೆ! ಕಾಂಗ್ರೆಸು ಪವಿತ್ರರು ಸಂಧಾನದ ತೇಪೆ ಹಚ್ಚುತ್ತಾರೆ; ಪ್ರಜಾಪ್ರಭುತ್ವಕ್ಕೆ ಸಮ್ಮತವಾದ ಸೂತ್ರದಂತೆ ಪಕ್ಷದ ಹೆಚ್ಚಿನ ಸದಸ್ಯರ ವಿಶ್ವಾಸವನ್ನು ಗಳಿಸಿಕೊಳ್ಳಿ ಎಂದು ಉಪದೇಶ ಮಾಡುತ್ತಾರೆ. ಆದರೆ ಒಂದು ವಿಾನು ಕನ್ನೊಂದನ್ನು ನುಂಗಿ ಕುಳಿತ ಗಳಿಗೆಯಲ್ಲಿ ಅದನ್ನು ಗಿಳಿಂಕರಿಸಲು ನುತ್ತೊಂದು ವಿಾನು ಕಾದು ಕುಳಿತಿರುತ್ತದೆ! ಹಾವು ಕಪ್ಪೆಯನ್ನು ಕಚ್ಚಿ ಎಳೆಯುತ್ತಿರುವಾಗ ಗಿಡುಗವೊಂದು ಹಾವನ್ನೆ ಕಚ್ಚಿಟ್ಟು ನೋಡುತ್ತಿರುವಂತೆ ಕಾಂಗ್ರೆಸಿನ ಅಧಿಕಾರ ಸ್ಥಾನದ ಮೇಲೆಲ್ಲ ಹದ್ದುಗಣ್ಣು ಇಟ್ಟವರು ಬಹಳ. ಅದು ಇಲ್ಲಿಗೆ ನಿಂತಿತೆಂದು ಹೇಳದಷ್ಟು ಪ್ರಬಲಿಸಿರುವುದನ್ನು ಕಂಡೂ ಕುರುಡರಂತೆ ಕುಳಿತಿರುವುದು ಮೂರ್ಖತನ.

ಪರಿಸ್ಥಿತಿಯನ್ನು ಹೀಗೆಯೇ ಬೆಳೆಯಗೊಡಬಾರದು—ಕಾಂಗ್ರೆಸಿನಲ್ಲಿ ನವ ಜೀವ ಚೈತನ್ಯವನ್ನು ತುಂಬುವ ಕೆಲಸವನ್ನು ಶೀಘ್ರದಲ್ಲಿಯೇ ಕೈಗೊಂಡು, ಈಗಿನ ಹೊಲಸನ್ನು ದೂರ ಮಾಡುವಲ್ಲಿ ವಿಳಂಬ ಸಲ್ಲದು. ಕಾಂಗ್ರೆಸು ಅಧಿಕಾರ ಸ್ಥಾನಕ್ಕಾಗಿ ಬಾಯಿ ಬಿಡುವವರ ಸಂಸ್ಥೆಯಾಗಿರುವ ಇಂದಿನ ವಾತಾವರಣದ ಬದಲು ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಕ್ರಿಯಾತ್ಮಕ ಪಾತ್ರ ವಹಿಸುವ ಆದರ್ಶ ಕೇಂದ್ರವಾಗುವುದು ಇಷ್ಟವಾದ ವಿಷಯ. ಕಾಂಗ್ರೆಸಿನ ಮೇಲೆ ಶಾಸನಿಕವಾದ, ಆಡಳಿತ ಸ್ವರೂಪದ ಹೊಣೆ ಬಿದ್ದಿದೆಯೆಂಬುದು ನಿಜ—ಆದು ವಿಧಾಯಕ ಕೆಲಸಗಳ ಕಡೆಗಿನ ಆಕರ್ಷಣೆಯನ್ನು ಕಡಿಮೆ ಮಾಡಲಾಗದು. ಸ್ವಾತಂತ್ರ್ಯೋತ್ತರದಲ್ಲಿ ನಮಗೆ ಮಾಡಲು ಬಹಳಷ್ಟು ಕೆಲಸಗಳುಂಟು. ಇವುಗಳಲ್ಲಿ ಕ್ರಿಯಾತ್ಮಕ ಪಾತ್ರವನ್ನು ಕಾಂಗ್ರೆಸಿಗರು ವಹಿಸಿ ಜನತೆಯೊಡನೆ ಅತಿ ನಿಕಟವಾದ ಸಂಪರ್ಕವನ್ನೂ ತನ್ಮೂಲಕ ಅವರ ಗೌರವಾದರಗಳನ್ನೂ ಗಳಿಸಿಕೊಳ್ಳದಿದ್ದರೆ, ಸಂಸ್ಥೆಯ ಭವಿಷ್ಯ ಮಸುಕಾಗುತ್ತಾ ಹೋಗುವುದು ಖಂಡಿತ.

ನೊನ್ನೆ ಪ್ರಧಾನ ಮಂತ್ರಿ ನೆಹರುಗಳ ಜನ್ಮದಿನದಂದು ದೇಶದ ನಾನಾ ಮೂಲೆಗಳ ರಾಷ್ಟ್ರೀಯ ಪಿಸ್ತರಿಡಾ ಕ್ಷೇತ್ರಗಳಿಂದಲೂ ಜನಪದ ಅಭಿವೃದ್ಧಿ ಯೋಜನೆಯ ವಲಯಗಳಿಂದಲೂ ಸುಮಾರು ೫೦ ಲಕ್ಷ ರೂಪಾಯಿ ನೊತ್ತದ ಬೇರೆ ಬೇರೆ ವಿಧಾಯಕ ಕಾರ್ಯಗಳ ಕಾಣಿಕೆ ಬಂದುದನ್ನು ನೋಡಿದರೆ ಜನತೆಯು ಅಧಿಕಾರ ಪಿಪಾಸೆಯುಳ್ಳವರಿಗಿಂತಲೂ ಸೇವಾಪರಾಯಣರನ್ನೆ ಅತ್ಯಧಿಕ ಪ್ರೀತಿಸುತ್ತಿದೆಯೆಂಬ ಸಂಗತಿ ಸ್ಪಷ್ಟವಾಗುತ್ತದೆ. ಕಾಂಗ್ರೆಸಿನ ಪ್ರತಿಯೊಬ್ಬ ಸದಸ್ಯನೂ ಜನರ ನಡುವೆ ಬೆರೆತು, ಇಷ್ಟು ದೊಡ್ಡ ಮೊತ್ತದ ಸೇವೆಯನ್ನೆಲ್ಲದಿದ್ದೂ, ತನ್ನ ಕೈಲಾದಷ್ಟು ಅಭಿವೃದ್ಧಿ ಪ್ರಯತ್ನಗಳಲ್ಲಿ ಸಹಕರಿಸಿ ಭಾಗಿಯಾಗುವ ಸಂಕಲ್ಪವನ್ನು ಕೈಗೊಂಡರೆ, ಸಂಸ್ಥೆಯ ಬಲ ಬೆಳೆಯುತ್ತದೆ. ಅಧಿಕಾರ ಲಾಲಸೆಯು ಜನತೆಯ ವಿಶ್ವಾಸವನ್ನು ನಷ್ಟಪಡಿಸುತ್ತದೆ; ಆದರೆ ಸೇವಾಪರಾಯಣತೆಯು ಶ್ರದ್ಧೆಯನ್ನು ಉತ್ಕೃಷ್ಟಿಸುತ್ತದೆ. ಕಾಂಗ್ರೆಸಿಗರು ಇದನ್ನು ಸದಾಕಾಲ ಜ್ಞಾಪಿಸಿಕೊಳ್ಳುತ್ತಿರುವುದೂ ಅಂತಃ ಕಲಹದಿಂದ ದೂರವಿರುವುದೂ ಅಧಿಕಾರದ ಹಂಬಲವ ಬದಲು ಅರ್ಥಿಕ ಪುನಾರಚನೆಯ ಆತುರವನ್ನು ತೋರಿಸುವುದೂ ಇಷ್ಟವೆಂದು ನಮ್ರವಾಗಿ ಸೂಚಿಸುತ್ತೇವೆ.

—ಕಾರ್ತಿಕೇಯ.

ಸಾಲ ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ. ಸುಲಭ ಕಂತಿನ ಮರುಪಾವತಿ. ಇಂದಿನಿಸಿಸಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿ ಮಾಡಿಕೊಳ್ಳುವುದು.

P. o. Box No. 3219, BOMBAY 3.



ಪ್ರಾಂತೀಯ ನಗರ ಸಭಾಪತಿಗಳ ಸಂಸ್ಥದ ಸಭೆ

ಪ್ರಾಂತೀಯ ನಗರ ಸಭಾಪತಿಗಳ ಸಂಘದ ಕಾರ್ಯಕಾರೀ ಸಮಿತಿಯ ಸಭೆಯು ಇಂದೇ ತಾ. 17ರಂದು ಬೆಳಿಗ್ಗೆ ಸುಂಗ ಳೂರಿನ ಮೊಸ್ಮಾಲರ್ ಕಟ್ಟಡದಲ್ಲಿ ಸಂಘದ ಅಧ್ಯಕ್ಷ ಶ್ರೀ ಎ. ಚಿದಂಬರಂ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕೊಯಮತ್ತೂರು, ಪೆಲ್ಲಾರಿ, ತಂಜಾವೂರು, ಕಂಜೀವರಂ, ಬೊಬ್ಬಿಲಿ ನಾಯಕನಕೊರ್, ಸೇಲಂ, ಸುಂಗಳೂರು, ಸಭಾಪತಿಗಳೂ ಸಂಘದ ಕಾರ್ಯದರ್ಶಿ ಶ್ರೀ ಪಿ. ರಾಮ ಲಿಂಗಂ, ಅವರೂ ಉಪಸ್ಥಿತರಿದ್ದರು.

ದ್ವಿತೀಯ ಪಂಚ ವಾರ್ಷಿಕ ಯೋಜನೆಯಲ್ಲಿ ಇರುವ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತ ಮಾಡುವರೆ ಮತ್ತು ನಳ್ಳಿ ನೀರಿನ ಸರಬರಾಯಿ, ಚರಂಡಿ ಇತ್ಯಾದಿ ಜನಹಿತ ಯೋಜನೆಗಳನ್ನು ಕೈಗೊಳ್ಳುವರೆ ನಗರ ಸಭೆಗಳಲ್ಲಿ ಸ್ಥಾನಿಕಸಂಸ್ಥೆಗಳಲ್ಲಿ ಹಣವಕೊರತೆಯು ದುಪ್ಪದಂದಿ ಕೇಂದ್ರ ಮತ್ತು ಪ್ರಾಂತೀಯ ಸರಕಾರಗಳು, ಅರ್ಧ ಗ್ರಾಂಟು ಮತ್ತು ಅರ್ಧ ಸಾಲದ ರೂಪದಲ್ಲಿ ಸಾಯಧನ ಒದಗಿಸಬೇಕೆಂಬ ನಿರ್ಣಯ ಸ್ವೀಕೃತವಾಯಿತು.

ನಗರ ಸಭೆಗಳು ಪಡೆಯುವ ಮನೋರಂಜನೆ ತೆರಿಗೆಯ ಮೇಲೆ ಈಗ ಸರಕಾರವು ಪಸಾಲಿ ಚಾರ್ಜು ಎಂಬುದಾಗಿ ಸಂಚಯಿಸುತ್ತಿರುವ ಸೇಕಡಾ 10ನ್ನು ಸೇಕಡಾ 2½ಗೆ ಇಳಿಸಬೇಕೆನ್ನುವ ಮಧುರೈ, ಕೊಯಮತ್ತೂರುಗಳಂತಹ ದೊಡ್ಡ ನಗರ ಸಭೆಗಳಲ್ಲಿ ಅಸಿಸ್ಟಾಂಟ್ ಎಂಜಿನಿಯರುಗಳನ್ನು ನೇಮಕಮಾಡುವ ಅಧಿಕಾರವನ್ನು ಕೊಡುವಂತೆ ಮುಂದಿನ ವಿಸೆಂಬ್ಲಿ ಅಧಿವೇಶನದಲ್ಲಿ ವಿಧೇಯಕ ಮುಖಾಪಾಲಿಟೀಸ್ ಕಾನೂನಿನಲ್ಲಿ ಅವಶ್ಯಕವಿರುವ ತಿದ್ದುಪಡಿ ಮಾಡಬೇಕೆನ್ನುವ, ಮದ್ರಾಸು ಮೊಲಸುಗಳ್ಳಿ ಅಭಿವೃದ್ಧಿ ಕಾರ್ಯಾಲಯವನ್ನು ಇತರ ನಗರಸಭೆಗಳಿಗೂ ವಿಸ್ತರಿಸಬೇಕೆನ್ನುವ, ಇಂಗ್ಲಾಂಡು ಮತ್ತು ಐರೋಪ್ಯದೇಶಗಳಲ್ಲಿನ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಕಾರ್ಯಗಳನ್ನು ಅಭ್ಯಸಿಸಿ ಅಭಿಪ್ರಾಯವರಿ ಭಾರತ ಸರಕಾರವು ತಿದ್ದುಪಡಿ ಅಧಿನಿಯಮಗಳನ್ನು ಜಾರಿಗೆ ತರಬೇಕೆಂಬ ಶಿಫಾರಸುಗಳನ್ನು ಸೇರಿಸಿ-ಕೊಡಲು ಭಾರತ ಸರಕಾರವನ್ನು ವಿನಂತಿಸುವ ಕರಡು ವರದಿಗಳಾಯಿತು. ನಗರಪಾಲಿಕೆಗಳಲ್ಲಿ ಕೆಳಸ್ತರದ ಸಿಬ್ಬಂದಿಗಳ ಪತ್ತು ಸಚಿವಾಲಯ ಕಾರ್ಯಸ್ಥಾನಗಳನ್ನು ಸಡಿಸುವಂತಹ ವಿಷಯಗಳ ತಿದ್ದುಪಡಿ ಮಾಡುವ ಕುರಿತು ಸರಕಾರಕ್ಕೆ ಸಲಹೆಸಲ್ಲಿಸಲು, ಸಂಘದ ಅಧ್ಯಕ್ಷ, ಕಾರ್ಯದರ್ಶಿ ಮತ್ತು ಶ್ರೀಗಳಾದ ಕೆ. ಸಾರ್ಯ ನಾರಾಯಣ ಆಡಿನ್, ಎಸ್. ಆರ್. ಪಿ. ಮೊನ್ನು ಸ್ವಾಮಿ ಚೆಟ್ಟಿಯಾರ್, ಪಿ. ಆರ್. ಸೀತಾಪತಿ ಮತ್ತು ಎಸ್ಸೆಸ್ಸ್ ಮುದಲಿಯರರಿರಿಂದ ಉಪಸಮಿತಿಯೊಂದು ರಚಿಸಲ್ಪಟ್ಟಿತು. ಇದೇ ಸಮಿತಿಯು ಸಂಘದ ನಿಯಮಾವಳಿಗಳಲ್ಲಿ ಸೂಕ್ತ ತಿದ್ದುಪಡಿಗಳನ್ನು ಮಾಡಿ ಮುಂದಿನ ಅಧಿವೇಶನದ ಮುಂದೆ ಇಡಲು ಅಧಿಕಾರ ಕೊಡಲಾಯಿತು.

ಕೆಲವು ಉತ್ತಮ ಪುಸ್ತಕಗಳು.

ಬದುಕು ಬಂಗಾರ (ಕುಮಾರಸ್ವಾಮಿ)	1	8
ಯುಗವಾಣಿ (ಕು. ಶಿ. ಹರಿದಾಸಭಟ್)	0	8
ಘಂಟಮಾರಾ (,,)	2	0
ಪತಿಯೆದ ಸಂಪತ್ತು (,,)	2	0
ಪ್ರಜಾಪ್ರಭುತ್ವನನ್ನು ಕುರಿತು (ಶಿವರಾಮು ಕಾರಂತ)	0	8
ಅಂತರಂಗದ ಕತೆಗಳು (ಸಂಕಲನ)	1	4
ಸ್ವಪ್ನಯೋಗ (ಕಾರ್ತಿಕೇಯ)	0	8
ಪ್ರತಿವಿನೋದ ಕತೆಗಳು	0	12
ಸೇವಾಪಥ (ನೇಟ್ ಗೊವಿಂದಾಸ್)	0	6
ಸರಸ್ವತಿ (ಡಾ॥ ಎಂ. ಮಾಧವಾಚಾರ್ಯ)	0	12
ಗೀತೆಯ ಕೈಗನ್ನಡಿ (ವಿದ್ವಬರಯ್ಯ)	0	8
ಭಾರತದ ಕರ್ಣ ಎಸ್ ಎಸ್. ಕಲ್ಲೆ)	0	6
ಪ್ರಾಚೀನ ತುಳುನಾಡು (,,)	2	0
ಮುರಲಿ (,,)	0	12
ಮಧುವನ (ಸಂಕಲನ)	3	0
ಕಾಸ್ಮೆಸಾಮ್ರಾಜ್ಯ (,,)	1	8
ಶರಗಳ ಸಾಗಾಟ (ಕೆರ್ಕ್ಕ ಪೇಟೆ)	0	10
ಕವಿತಾಕಾಮಿನಿ (ಎಸ್. ವೆಂಕಟರಾಜ)	2	8
ಆಕಾಶಗಂಗೆ	1	12
ಜೀವನ ಸಂಗ್ರಾಮ (ಪಿ. ಶೀನ ಶೆಟ್ಟಿ)	1	8
ದೇಶಭಕ್ತ (ಕೆ. ಕೆ. ಶೆಟ್ಟಿ)	1	4
ಪ್ರೇಮವಿಜಯ ,,)	1	0

ನಿಜಂಟುಗಳು ಜೀಕು. ಕರ್ನಾಟಕಕ್ಕೂ ನಮ್ಮಲ್ಲಿ ಹೊಸೆಯುವ ಎಲ್ಲಾ ಕಡೆಗಳ ಪುಸ್ತಕಗಳ ಕೆಟಲಾಗಿಗೂ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರಾಂತೀಯ ನಗರ ಸಭಾಪತಿಗಳ ಸಂಸ್ಥದ ಸಭೆ

ಅಧಿವೃದ್ಧಿ ಕಾರ್ಯಾಲಯವನ್ನು ಇತರ ನಗರಸಭೆಗಳಿಗೂ ವಿಸ್ತರಿಸಬೇಕೆನ್ನುವ, ಇಂಗ್ಲಾಂಡು ಮತ್ತು ಐರೋಪ್ಯದೇಶಗಳಲ್ಲಿನ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಕಾರ್ಯಗಳನ್ನು ಅಭ್ಯಸಿಸಿ ಅಭಿಪ್ರಾಯವರಿ ಭಾರತ ಸರಕಾರವು ತಿದ್ದುಪಡಿ ಅಧಿನಿಯಮಗಳನ್ನು ಜಾರಿಗೆ ತರಬೇಕೆಂಬ ಶಿಫಾರಸುಗಳನ್ನು ಸೇರಿಸಿ-ಕೊಡಲು ಭಾರತ ಸರಕಾರವನ್ನು ವಿನಂತಿಸುವ ಕರಡು ವರದಿಗಳಾಯಿತು. ನಗರಪಾಲಿಕೆಗಳಲ್ಲಿ ಕೆಳಸ್ತರದ ಸಿಬ್ಬಂದಿಗಳ ಪತ್ತು ಸಚಿವಾಲಯ ಕಾರ್ಯಸ್ಥಾನಗಳನ್ನು ಸಡಿಸುವಂತಹ ವಿಷಯಗಳ ತಿದ್ದುಪಡಿ ಮಾಡುವ ಕುರಿತು ಸರಕಾರಕ್ಕೆ ಸಲಹೆಸಲ್ಲಿಸಲು, ಸಂಘದ ಅಧ್ಯಕ್ಷ, ಕಾರ್ಯದರ್ಶಿ ಮತ್ತು ಶ್ರೀಗಳಾದ ಕೆ. ಸಾರ್ಯ ನಾರಾಯಣ ಆಡಿನ್, ಎಸ್. ಆರ್. ಪಿ. ಮೊನ್ನು ಸ್ವಾಮಿ ಚೆಟ್ಟಿಯಾರ್, ಪಿ. ಆರ್. ಸೀತಾಪತಿ ಮತ್ತು ಎಸ್ಸೆಸ್ಸ್ ಮುದಲಿಯರರಿರಿಂದ ಉಪಸಮಿತಿಯೊಂದು ರಚಿಸಲ್ಪಟ್ಟಿತು. ಇದೇ ಸಮಿತಿಯು ಸಂಘದ ನಿಯಮಾವಳಿಗಳಲ್ಲಿ ಸೂಕ್ತ ತಿದ್ದುಪಡಿಗಳನ್ನು ಮಾಡಿ ಮುಂದಿನ ಅಧಿವೇಶನದ ಮುಂದೆ ಇಡಲು ಅಧಿಕಾರ ಕೊಡಲಾಯಿತು.

ಮೊಗವೀರ ವ್ಯವಸ್ಥಾಪಕ ಮಂಡಳಿ, ಬೊಂಬಾಯಿ

ಇದರ ವಾರ್ಷಿಕೋತ್ಸವವು ಇದರ ನೈಷ್ಕರ್ಷದಲ್ಲಿ ನಡಿಸಲ್ಪಡುವ ಮೊಗವೀರ ಫ್ರೀ ಸ್ಕೂಲ್ ಬ್ಯಾಸ್ಕಾಲಿನ ಪಾರಿತೋಷಕ ವಿತರಣ ಸಮಾರಂಭವು ಇದೇ ತಾ. 21ರಲ್ಲಿ ಸರ್ ಕಾವಸ್ಜಿ ಜಹಂಗೀರ್ ಸಾರ್ವಜನಿಕ ಸಭಾ ಸದನದಲ್ಲಿ ಬಹುಸಜ್ಜಂಭಣೆಯಿಂದ ಜರಗಿತು. ರಾಜ್ಯ ಸಭೆಯ ಉಪಸಭಾಪತಿಗಳಾದ ಶ್ರೀ ಎಸ್. ವಿ. ಕೃಷ್ಣ ಮೂರ್ತಿಯವರು ಅಧ್ಯಕ್ಷತೆ ವಹಿಸಿದ್ದರು. ಜೆಸಭಾ ಪ್ರಾರ್ಥನಾನಂತರ ಮಂಡಳಿಯ ಅಧ್ಯಕ್ಷ ಶ್ರೀ ಎಮ್. ಪಿ. ಕಿಕೇರರು ಸ್ವಾಗತ ಭಾಷಣ ಮಾಡಿದರು. ಜತೆ ಕಾರ್ಯದರ್ಶಿ ಶ್ರೀ ಚಿನ್ನಯ್ಯ ಆರ್. ಸಾಲಿಯಾನರು ಸಂಘ ಸಂಸ್ಥೆಗಳಿಂದ ಶುಭ ಸಂದೇಶಗಳನ್ನು ಓದಿದರು. ಬಳಿಕ ಅಧ್ಯಕ್ಷರ ಪಸ್ತದಿಂದ ಶಾಲಾ ವಿದ್ಯಾರ್ಥಿಗಳಿಗೂ ಕೆಲಸಗಾರರಿಗೂ ಬಹುಮಾನ ವಿತರಣೆ ನಡೆಯಿತು. ನಂತರ ಮುಂಬಯಿ ನರಕಾರದ ಉಪಸಂಪ್ರಿ ಶ್ರೀ ವಿ. ಡಿ. ಜಟ್ಟಿ, ಶ್ರೀಗಳಾದ ಆರ್. ಆರ್. ಮೇಲ್ಮನೆ, ಎಚ್. ವಿ. ಇನಾಯತಿ, ವಿ. ಎಸ್. ನೈಕ್ಯ, ನಾಥಾ ಆಲಿ, ಡಿ. ಪಾರಿಜ್, ಬಿ. ಎಸ್. ಕೋಡಿ ಕಲ್ ಮೊದಲಾದವರು ಮಂಡಳಿಯ ಕಾರ್ಯ ಕಲಾಪಗಳನ್ನು ಸ್ತುತಿಸಿ ಉತ್ತರೋತ್ತರ ಅಭಿವೃದ್ಧಿಯನ್ನು ಹಾರೈಸಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಈ ಸಂಘದ ಕಚೆಯಿಂದ ಕನ್ನಡಿಗರ ಪಾಲಿಗೂ ಕನ್ನಡದ ಮೇಲ್ಮೆಗಾಗಿ ಅವಿಶ್ರಾಂತ ಕಾರ್ಯ ನಡೆಯುತ್ತಿರುವುದು ಅಭಿನಂದನೀಯವೆಂದರು. ಹಿಂದುಳಿದವರೆಂಬ ಭಾವನೆಯನ್ನು ವರ್ಜಿಸಿ, ಜಾತೀಯತೆಯ ಸಂಕೋಚಭಾವನೆಯ ಮೂರೀಕರಿಸಿ ಸ್ವತಂತ್ರ ಭಾರತದ ಅಭಿವೃದ್ಧಿಗಾಗಿ ಸರ್ವರೂ ದುಡಿಯಬೇಕೆಂದರು. ಮಂಡಳಿಯ ಕಚೆಯಿಂದ ಶ್ರೀ ಬಿ. ಎ. ಕರ್ಕೇರರು ಸರ್ವರಿಗೂ ಧನ್ಯವಾದಗಳನ್ನರ್ಪಿಸಿದರು. ಅಭಿನಿಧಿ ಕನ್ನಡ ನಾಟಕಾಭಿನಯದೊಂದಿಗೆ ಸಮಾರಂಭವು ಯಶಸ್ವಿಯಾಗಿ ಕೊನೆಗೊಂಡಿತು.

ಭತ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವ್ಸ ಸೇವಿಸಿದರೆ ಮುಂದೆ ಪಿಂಡಿತಾ ಮಕ್ಕಳಾಗುವ ದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ಡಾವಣಗೇರಿ ಆಯುರ್ವೇದ ಔಷಧಾಲಯ, ಗದಗ.



ಕುಮಾರಿ ಬಿಲ್ಲೆಗಳು (ಸರಕಾರ ರಿಜಸ್ಟರ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಪತೋಟಿಗೆ ತರುವೆವು.

ಈ ಔಷಧ ಸೇವನೆಯಿಂದ ಯಾವ ಭಾದಕತೆಯೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/-

Mrs. P. DEVEE, F. Ds. (N. J.) (ವಿ. ಪಿ. ಪಿ. ಪ್ರತ್ಯೇಕ)

CALCUTTA—40 ಸ್ವಾಕಿಸ್ಟರು: ಶಹಾಕಂಪೆನಿ, ಮಂಗಳೂರು

ಪಡುಬಿದ್ರಿ ಕಂಬಳ

ಪ್ರಿಯ ಮಹಾಶಯರೇ, ಪಡುಬಿದ್ರಿ ತಾ. 15-11-54.

ವರ್ಷಂಪ್ರತಿ ಜರಗತಕ್ಕ ಉಡುಪಿ ತಾಲೂಕು ಪಡುಬಿದ್ರಿ ಕಂಬಳವನ್ನು ಈ ವರುಷ ಇದೇ ಬುಧವ ತಾರೀಕು 28—11—54ನೇ ಆದಿತ್ಯವಾರ ದಿವಸ ಜರಗಿಸಬೇಕಾಗಿಯೂ ವೆಚ್ಚಿನ ಜತೆ ಓಟದ ಕೋಣಗಳನ್ನು ಬರವಾಡಿಸಬೇಕಾಗಿಯೂ ನಿರ್ಣಯಿಸಿದ್ದೇವೆ. ಮಾತಾಜನರ ಉತ್ತೇಜನದ ಬಲವಾಗಿ ವಿಶುಕೋಲು ನಿವಾಸಿಗೆ ನೀಡುತ್ತಾ ಎಲೆಗೆಯಷ್ಟೆ ಪ್ರಥಮ ಬಂದ ಕೋಣಗಳಿಗೂ, ಹಿಗ್ಗದಲ್ಲಿ ಪ್ರಥಮ ಬಂದು ಜಯಶೀಲವಾದ ಕೋಣಗಳಿಗೂ ಎರಡು ಸುವರ್ಣ ಪದಕಗಳನ್ನು ಒದಗಿಸಿಕೊಡುವುದಾಗಿಯೂ ನಿರ್ಣಯಿಸಿದ್ದೇವೆ. ಆದ ಪ್ರಯುಕ್ತ ಮಾತಾರಯರೆಲ್ಲರೂ ತಮ್ಮ ಮಾ ಬಂಧುಮಿತ್ರರ ಓಟದ ಕೋಣಗಳ ಸಮೇತ ದಯಮಾಡಿ ಬಂದು ನಮ್ಮೂ ಕಂಬಳವನ್ನು ಯಶಸ್ವಿಗೊಳಿಸಬೇಕಾಗಿ ಆಪೇಕ್ಷಿಸುವ.

ಯೋಳ ಮಂಜಯ್ಯ ಶೆಟ್ಟಿ.

ಭಾರತದ ಬಿ. ಸಿ. ಜಿ. ಚಳವಳ

ವಿಶ್ವದಲ್ಲೇ ದೊಡ್ಡದು

ಭಾರತದ ಇಡೀ ತರುಣ ವರ್ಗವನ್ನು ಕ್ಷಯ ರೋಗದ ಹಾವಳಿಯಿಂದ ಪಾರು ಮಾಡುವುದು ಪಂಚ ವಾರ್ಷಿಕ ಯೋಜನೆಯ ಗುರಿಗಳಲ್ಲೊಂದಾಗಿದೆ. ಕ್ಷಯ ರೋಗವು ಭಾರತದಲ್ಲಿ ಸರಾಸರಿ ಪ್ರತಿ ನಿಮಿಷಕ್ಕೊಬ್ಬನನ್ನು ಆಹುತಿ ತೆಗೆದುಕೊಳ್ಳುತ್ತಿದೆ. ಈ ಉದ್ದೇಶದಿಂದ ಬಿ. ಸಿ. ಜಿ. ಚಳವಳವನ್ನು ವಿಶ್ವ ಆರೋಗ್ಯ ಸಂಸ್ಥೆಯ ಸಹಕಾರದೊಂದಿಗೆ 1948ರ ಆಗಸ್ಟ್ ತಿಂಗಳಲ್ಲಿ ಆರಂಭಿಸಲಾಯಿತು. ಈ ಚಳವಳವು ವಿಶ್ವದಲ್ಲೇ ದೊಡ್ಡ ಪ್ರಮಾಣದ ಚಳವಳವಾಗಿದ್ದು ಅದರ ವಾರ್ಷಿಕೋತ್ಸವವನ್ನು ನವೆಂಬರ ಮಾಸದಲ್ಲಿ ಆಚರಿಸಲಾಯಿತು.

ಈ ರೋಗ ನಿರೋಧಕ ಚಳವಳಕ್ಕೆ ಪೆಟ್ಟಿನ ಮಹತ್ವ ದೊರೆತಿದೆ. ನಿಮಿಷಕ್ಕೆ ಸರಾಸರಿ 40 ಜನರಿಗೆ ಈ ರೋಗದ ಸೋಂಕು ತಗಲದಂತೆ ರಕ್ಷೆ ನೀಡಲಾಗುತ್ತಿದೆ. ದೇಶೋ ವಿಶಾಲದ ಈ ಕಾರ್ಯಕ್ರಮದ ಮುಖ್ಯೋದ್ದೇಶವಿಷ್ಟು— ಜನಸಾಮಾನ್ಯರಿಗೆ ಕ್ಷಯ ರೋಗದ ಭೀಕರತೆಯನ್ನು ತಿಳಿಯಪಡಿಸಿ ತನ್ಮೂಲಕ ಕ್ಷಯ ರೋಗ ನಿರೋಧ ಚಳವಳವನ್ನು ಜನಸ್ತೋಮ ಗೊಳಿಸುವುದು.

ಭಾರತದ ಎಲ್ಲಾ ರಾಜ್ಯಗಳಲ್ಲಿಯೂ ಬಿ. ಸಿ. ಜಿ. ಚಳವಳ ನಡೆದಿದೆ. ಅಂಡಮಾನ್ ಮತ್ತು ನಿಕೋಬರ್ ದ್ವೀಪಗಳಲ್ಲಿಯೂ ಈ ಚಳವಳವನ್ನು ಇತ್ತೀಚೆಗಷ್ಟೇ ಆರಂಭಿಸಲಾಗುವುದು. 20 ವರ್ಷದ ವಯಸ್ಸಿನೊಳಗಿರುವ ಯುವಕರೆಲ್ಲರಿಗೂ ಮುಂದಿನ ನಾಲ್ಕೈದು ವರ್ಷಗಳಲ್ಲಿ ವ್ಯಾಪಕವಾಗುವಂತೆ ಈ ಚಳವಳವನ್ನು ನಡೆಸಲಾಗುವುದು. ಇಂತಹ ಯುವಕರ ಸಂಖ್ಯೆ 1700 ಲಕ್ಷವಿರುವುದೆಂದು ಅಂದಾಜು ಮಾಡಲಾಗಿದೆ. 1948ರಿಂದೀಚೆಗೆ 400 ಲಕ್ಷ ಜನರು ಕ್ಷಯ ರೋಗದ ಪರೀಕ್ಷೆ ಮಾಡಿಸಿಕೊಂಡಿದ್ದಾರೆ. ಅವರಲ್ಲಿ 130 ಲಕ್ಷ ಜನರಿಗೆ ಈ ರೋಗದ ದಾಳು ಹಾಕಲಾಗಿದೆ. ಪ್ರಸಕ್ತದಲ್ಲಿ ಪ್ರತಿ ತಿಂಗಳೂ 20 ಲಕ್ಷ ಜನರ ಪರೀಕ್ಷೆ ನಡೆಯುತ್ತಿದೆ. 700000 ಜನರಿಗೆ ಈ ರೋಗದ ದಾಳು ಹಾಕಲಾಗುವುದು.

110 ಗುಂಪುಗಳು ಭಾರತದ ಆದ್ಯಂತ ಈ ಚಳವಳವನ್ನು ನಡೆಸುತ್ತಿವೆ. ಇವರಲ್ಲಿ 150 ಜನ ವೈದ್ಯರೂ 800 ಜನ ತಾಂತ್ರಿಕರೂ ಇರುವರು. ಪ್ರತಿಯೊಂದು ರಾಜ್ಯದ ಆರೋಗ್ಯ ಶಾಖೆಗೆ ಸಂಬಂಧಪಟ್ಟಂತೆ ಬಿ. ಸಿ. ಜಿ. ಪರಿಶ್ರಮ ಪಡೆದ ವಿಭಾಗ ವಿರುವುದು. ಅದರಲ್ಲಿ ಒಬ್ಬ ಬಿ. ಸಿ. ಜಿ. ಅಧಿಕಾರಿಯೂ, ಒಬ್ಬ ವೈದ್ಯರೂ, ಆರು ಜನ ತಾಂತ್ರಿಕರೂ ಇರುವರು.

1951ರಿಂದೀಚೆಗೆ ಈ ಚಳವಳಕ್ಕೆ ಪೆಟ್ಟಿನ ಮಹತ್ವ ಬಂದಿದೆ. ಆಗ 3717069 ಜನರನ್ನು ಪರೀಕ್ಷಿಸಲಾಯಿತು. ಈ ವರ್ಷ 17,00,000 ಜನರಿಗೆ ಪರೀಕ್ಷೆ ನಡೆಸುವ ಯೋಜನೆಯಿದೆ. 1951ರಲ್ಲಿ ಪ್ರತಿ ಪರೀಕ್ಷೆಗೂ 8 ಆಣೆ ವೆಚ್ಚವಾಗುತ್ತಿತ್ತು; 1954ರಲ್ಲಿ 2¼ ಆಣೆಗಳಾಗುತ್ತಿದೆ.

ಈ ಚಳವಳವನ್ನು ನಡೆಸುವುದಕ್ಕಾಗಿ ವಿಶ್ವ ಆರೋಗ್ಯ ಸಂಸ್ಥೆಯವರು ವಾಹನಗಳನ್ನೂ 50 ಲಕ್ಷ ರೂಪಾಯಿಗಳಷ್ಟು ಬೆಲೆ ಬಾಳುವ ಉಪಕರಣಗಳನ್ನೂ ಕೊಟ್ಟಿರುವರು. ಈ ವರ್ಷದ ಹಣಕಾಸಿನ ವರ್ಷದಲ್ಲಿ ರಾಜ್ಯ ಸರಕಾರಗಳು 3000000 ರೂ.ಗಳನ್ನು ಮೀಸಲಾಗಿಟ್ಟಿವೆ. ಕೇಂದ್ರ ಬಿ. ಸಿ. ಜಿ. ಕಾರ್ಪೊರೇಷನ್ 500000 ರೂ.ಗಳನ್ನು ಈ ಚಳವಳಕ್ಕಾಗಿ ಕೊಟ್ಟಿದೆ.

ಪುನಃ ಈ ರೋಗದ ದಾಳು ಹಾಕಿಸಿಕೊಳ್ಳಬೇಕಾದುದು ಅಗತ್ಯವೆ? ಈ ಪ್ರಶ್ನೆ ಸ್ವಲ್ಪ ಕಾಲದಿಂದ ಭಾರತ ಸರಕಾರದ ಪರಿಶೀಲನೆಯಲ್ಲಿದೆ. ಭಾರತದ ನೈದ್ಯಕೀಯ ಸಂಸ್ಥೆಯು ಈ ಹಾದಿಯಲ್ಲಿ ಸಂಶೋಧನೆ ನಡೆಸುತ್ತಿದೆ. ಈ ವರ್ಷದ ಕೊನೆಯಲ್ಲಿ ಈ ಸಂಶೋಧನೆಯ ಪ್ರಥಮ ಫಲಿತಾಂಶವು ಸಿದ್ಧಗೊಳ್ಳುವುದು.

———

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

ಚಿತ್ತೂರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

!! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !!

"ರಿಕರಿಂಗ್" ಠೇವಣಾತಿ.

ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ಸೇ॥ 4½%.

ಬಡವ ಬಲ್ಲಿದರೆಂಬ ಭೇದವಿಲ್ಲದ ಪ್ರತಿಯೊಬ್ಬರಿಗೂ ಅನುಕೂಲವಾದ ಯೋಜನೆ.

ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ.

ದಿ ವಿಜಯ ಬೇಂಕ್ ಲಿಮಿಟೆಡ್.

ಪಶ್ಚಿಮ ಭಾರತದ ಸಂಸ್ಕೃತಿ

ಒಂದು ವಿಹಂಗಮ ನೋಟ

ಭಾರತ ಸರ್ಕಾರದ ವಾರ್ತಾ ಮತ್ತು ಪ್ರಸಾರ ಶಾಖೆಯವರು ಪ್ರಕಟಿಸಿರುವ "ಭಾರತದ ಮುನ್ನಡೆ" ಎಂಬ ವಿಶೇಷ ಸಂಚಿಕೆಯಲ್ಲಿ ಪಶ್ಚಿಮ ಭಾರತದ ಸಂಸ್ಕೃತಿ ಸಮೀಕ್ಷೆ, ಅದರ ಐತಿಹಾಸಿಕ ಪರಂಪರೆ, ಅಲ್ಲಿಯಇತ್ತೀಚಿನ ಆರ್ಥಿಕ ಪ್ರಗತಿಯನ್ನು ಕುರಿತಾದ ಲೇಖನಗಳನ್ನು ಕಾಣಬಹುದು.

ಐತಿಹಾಸಿಕ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ಸಮುದ್ರವು ಅತಿ ಮುಖ್ಯವಾದ ಪಾತ್ರ ವಹಿಸಿದೆ. ಬಾರುಕಚ್ಚ ಮತ್ತು ಸೋಪಾರ ಬಂದರುಗಳು ಅತ್ಯಂತ ಉಜ್ಜ್ವಲಸ್ಥಿತಿಯಲ್ಲಿದ್ದವೆಂಬುದನ್ನು ಬಾದ್ಧ ಗ್ರಂಥಗಳು ತಿಳಿಸುತ್ತವೆ. ಈ ಬಂದರುಗಳಿಂದ ಮೆಡಿಟರೇನಿಯನ್ ಸಮುದ್ರದ ರೇವು ಪಟ್ಟಣಗಳಿಗೆ ಭಾರತದ ವಸ್ತುಗಳನ್ನು ಹಡಗುಗಳು ಕೊಂಡೊಯ್ಯುತ್ತಿದ್ದವು. ಈ ಕ್ಷೇತ್ರದಿಂದ ಸಾಹಸಿಗಳ ನೇಕರು ದೂರದ ಕಾಣದ ಸಮುದ್ರಗಳ ಮೇಲೆ ಪ್ರಯಾಣ ಮಾಡಿ ಆಗ್ನೇಯ ಏಷ್ಯಾ ರಾಷ್ಟ್ರಗಳೊಂದಿಗೆ ವಾಣಿಜ್ಯ ಮತ್ತು ಪಾಂಡಿತ್ಯಗಳ ವಿನಿಮಯ ನಡೆಸಿದ ಉದಾಹರಣೆಗಳಿವೆ.

ಪಶ್ಚಿಮ ಭಾರತದಲ್ಲಿ ಈಗ ಎರಡು ದೊಡ್ಡ ಬಂದರುಗಳೂ, 10 ಮಧ್ಯಮ ತರಗತಿಯ ಬಂದರುಗಳೂ, 50 ಸಣ್ಣ ಬಂದರುಗಳೂ, 92 ಉಪ ಬಂದರುಗಳೂ ಇವೆ. ದೇಶದ ಒಟ್ಟು ಆಮದು ರಫ್ತಿನ ವ್ಯಾಪಾರದಲ್ಲಿ ಕ್ರಮವಾಗಿ ನೂರಕ್ಕೆ 33 ನುತ್ತು 40 ರಷ್ಟು ಅಥವಾ ಆಧುನಿಕ ರೀತಿಯಲ್ಲಿ ಸಜ್ಜುಗೊಳಿಸಲಾಗಿರುವ ಮುಂಬಯಿ ಬಂದರಿನಲ್ಲಿಯೇ ನಡೆಯುವುದು. ಮುಂಬಯಿ ಬಂದರಿನ ಹಿನ್ನೆಲೆ 700 ಮೈಲು ಗಳಿಗೂ ಉದ್ದವಾಗಿದ್ದು ಅನೇಕ ವಿಧ ಹಿಡಿಯುವ ಬಂದರುಗಳನ್ನೂ ಹೊಂದಿದೆ. 1951ರ ಜನಗಣತಿಯ ಪ್ರಕಾರ ಮೀನು ಹಿಡಿಯುವ ಉದ್ಯಮದಲ್ಲಿ ಸುಮಾರು 175,000 ಜನರು ಕೆಲಸ ಮಾಡುತ್ತಿದ್ದರು. ಮೀನು ಹಿಡಿಯುವ ದೋಣಿಗಳ ಯಾಂತ್ರೀಕರಣದ ಪ್ರಗತಿ ಇಲ್ಲಿ ತೀವ್ರವಾಗಿ ನಡೆಯುತ್ತಿದೆ. 1947-48ರಲ್ಲಿ ಇಲ್ಲಿ ಒಂದೇ ಒಂದು ಮೀನು ಹಿಡಿಯುವ ಹಡಗು ಯಾಂತ್ರೀಕರಣವನ್ನು ಪಡೆದಿತ್ತು. 1953-54ರಲ್ಲಿ ಈ ಸಂಖ್ಯೆಯು 250ಕ್ಕೆ ಏರಿದೆ.

ಇತಿಹಾಸವನ್ನು ಅವಲೋಕಿಸಿದರೆ, ಪಶ್ಚಿಮ ಭಾರತವು ಮೂಲತಃ ಯಾರಿಗೂ ಗೊತ್ತಿಲ್ಲದ ತೀರ ಪ್ರದೇಶ. ಕಂಜಾಬಿಗೆ ಆರ್ಯರು ಪ್ರವೇಶಿಸಿ ಮುಖ್ಯ ಭಾರತದಲ್ಲೆಲ್ಲಾ ಹರಡಿಕೊಂಡಾಗಲೂ ಇದು ಯಾರೂ ಒಳಹೊಕ್ಕಿಲ್ಲದ ಸರಹದ್ದಿನ ಪ್ರವೇಶವನ್ನಿತ್ತು ಪಾರ್ಶಿಯರು, ಗ್ರೀಕರು, ಶಕರು, ಶಕವಾಹನರು, ಗುಪ್ತರು, ವೈತ್ರಕರು, ಚಾಲುಕ್ಯರು, ಸೊಲಂಕಿಸರು, ಖಿಲ್ಜಿಗಳು, ತೊಗಲಕ್ಕರು, ಮೊಘಲರು, ಪೋರ್ಚುಗೀಸರು ಈ ಭೂಮಿಯಲ್ಲಿ ತಮ್ಮ ಕಾರ್ಯ ಸಾಹಸದಿಂದ ಇತಿಹಾಸವನ್ನು ರೂಪಿಸಿದರು. ಶಿವಾಜಿಯಂಥ ಮಹಾವೀರನು ಈ ಭೂಮಿಯಲ್ಲಿ ಜನ್ಮವೆತ್ತಿದನು. ಯುದ್ಧಗಳ ಝುಂಝೂಟದಲ್ಲಿಯೇ ಇಲ್ಲಿಯ ನಾಗರಿಕತೆಯ ಪರಂಪರೆ ಪಾಲಿಸಲ್ಪಟ್ಟಿತು ನರ್ಸಿ ಮೆಹ್ತ, ಹಂಸದೇವಜಿ, ಸಾಯಿಬಾಬಾ ಮತ್ತು ಲಿಪಾಸನಿ ಬಾಬಾಗಳಂತಹ ಮತ ಪ್ರಚಾರಕರು ಕಂಸ್ಕೃತಿಯ ಪ್ರಚಾರವನ್ನು ಇಲ್ಲಿ ಸತತವಾಗಿ ನಡೆಸಿಕೊಂಡುಬಂದರು. ಶೌರ್ಯ, ಪರಾಕ್ರಮಗಳ ನೆಲೆವೀಡಾಗಿದ್ದ ಈ ಸ್ಥಳದಲ್ಲಿಯೇ ಮಹಾತ್ಮಾ ಗಾಂಧೀಜಿಯವರಂತಹ ಮಹಾ ಮಹಿಮರೂ ಜನಿಸಿದರು.

ಪಶ್ಚಿಮ ಭಾರತದ ಪ್ರಾಕೃತಿಕ ಸಂಪತ್ತನ್ನೂ ಅದರ ಅಭಿವೃದ್ಧಿಗೆ ಸಾಧಕವಾಗುವ ಇತರ ಅಂಶಗಳನ್ನೂ ಪಂಚ ವಾರ್ಷಿಕ ಯೋಜನೆಯಲ್ಲಿ ಪೂರ್ಣವಾಗಿ ಅಳವಡಿಸಿಕೊಳ್ಳಲಾಗಿದೆ. ರಾಜಾಸ್ಥಾನ್, ಕಚ್, ಸೌರಾಷ್ಟ್ರ ಮತ್ತು ಮುಂಬಯಿಗಳ ಅಭಿವೃದ್ಧಿ ಯೋಜನೆಗೆ 1950—51ರಲ್ಲಿ 2363 ಲಕ್ಷ ರೂ. ಗಳ ವೆಚ್ಚ ಮಾಡಲಉಗಿದೆ. ಪಂಚವಾರ್ಷಿಕ ಯೋಜನೆಯಲ್ಲಿ ಒಟ್ಟು 19045 ಲಕ್ಷ ರೂ.ಗಳನ್ನು ಮೀಸಲಾಗಿಡಲಾಗಿದೆ.

ವಾಸ್ತು ಶಿಲ್ಪ, ವರ್ಣ ಶಿಲ್ಪ, ಸಂಗೀತ —ಈ ಕಲೆಗಳಲ್ಲಿ ಪಶ್ಚಿಮ ಭಾರತವು ದೊಡ್ಡ ಪರಂಪರೆಯನ್ನೇ ಪಡೆದಿದೆ. ಮುಂಬಯಿಗೆ 80 ಮೈಲು ದೂರದಲ್ಲಿ ಪುಣೆಯ ಸಮೀಪದಲ್ಲಿರುವ ಗುಹಾಂತರ ದೇವಾಲಯಗಳೇ ಇದಕ್ಕೆ ಸಾಕ್ಷಿ— ನಾಸಿಕ್ ಔರಂಗಾಬಾದ್, ಸಿನ್ನಾರ್, ಕನ್ಹೇರಿ ಮತ್ತು ಬೇಡಾಸ್ಸಾ ಇವು ಇನ್ನೂ ಕೆಲವು ಉದಾಹರಣೆಗಳಾಗುತ್ತವೆ. ಮುಂಬಯಿಗೆ 250 ಮೈಲುಗಳ ದೂರದಲ್ಲಿನ ಅಜಂತ ಮತ್ತು ಎಲ್ಲೋರಾ ಗುಹಾಂತರ ದೇವಾಲಯಗಳವು ಪ್ರಾಚೀನ ಭಾರತದ ವೈಭವವನ್ನು ಸಾರುತ್ತವೆ.

ವರ್ಣ ಶಿಲ್ಪದಲ್ಲಿಯೂ ಪಶ್ಚಿಮ ಭಾರತವು ಪ್ರಸಿದ್ಧವಾಗಿದೆ. ರಜಪೂತ ವರ್ಣ ಚಿತ್ರಗಳನ್ನು ಕೊಂಡಾಡದ ಜನರಿಲ್ಲ. ಮಹಾರಾಷ್ಟ್ರ, ಗುಜರಾತ್ ಮತ್ತು ಸೌರಾಷ್ಟ್ರಗಳಲ್ಲಿನ ಹರಿಕೀರ್ತನೆಗಳು ಅತ್ಯಂತ ಜನಪ್ರಿಯವಾಗಿವೆ. ಪಶ್ಚಿಮ ಭಾರತವು ಸಾರಂಗದೇವ, ಕಲ್ಲಿನಾಥ ಭಾವ ಭಟ್ಟ ಮತ್ತು ಪುಂಡರೀಕ ವಿಠಲ್—ಇಂತಹ ಸಂಗೀತ ವಿದ್ವಾಂಸರನ್ನು ನಮಗಿತ್ತಿದೆ. ಅವರು ಕೇವಲ ಪಶ್ಚಿಮ ಭಾರತಕ್ಕೇ ಅಲ್ಲ, ಇಡೀ ಭಾರತದಲ್ಲೇ ಖ್ಯಾತನಾಮರು.

———

ವಿವಿಧ ಪಾತ್ರೆಗಳು

ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನ್ಯಿಗಳೂ ರಿಯಿಂಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತಿವೆ.

ಕಲ್ಕಂಜೆ ವ್ಯಾಸಾಚಾರ್ಯರ
ಪಾತ್ರೆ ಭಂಡಾರ,
ರಥಬೀದಿ ಉಡುಪಿ.

ಹೈನ ಕೇಂದ್ರಗಳ ಅಭಿವೃದ್ಧಿಯ ಪ್ರಯತ್ನ

(೨ನೇ ಪುಟದಿಂದ)

ದಾರ್ಥಗಳನ್ನು ತಿನ್ನಿಸಿ ಮೇಯಲು ಹಸಿರಾದ ಹುಲ್ಲುಗಾವಲನ್ನು ಒದಗಿಸಿಕೊಟ್ಟರೆ, ನಮ್ಮ ದನಗಳು ಬರಡು ದನಗಳಾಗಿಯೇ ಉಳಿಯದೆ, ಹೆಚ್ಚು ಹಾಲನ್ನು ಹಿಂಡುವುದು ನಿಶ್ಚಿಯ.

ಪಶ್ಚಿಮ ದೇಶಗಳಲ್ಲಿ ಹಾಲನ್ನು ಹಿಂಡದ ಬರಡು ದನಗಳನ್ನೂ ಕೃಷಿಯೋಗ್ಯ ವಲ್ಲದ ಎತ್ತುಗಳನ್ನು ಚರ್ಮಕ್ಕಾಗಿಯೂ ಮೂಳೆಕ್ಕಾಗಿಯೂ ಕೊಲ್ಲಲಾಗುತ್ತದೆ, ನಮ್ಮ ದೇಶದಲ್ಲಿ ಜನಾಭಿಪ್ರಾಯವು ಇದಕ್ಕೆ ಅನುಕೂಲವಾಗಿಲ್ಲ. ಗೋ ಪೂಜೆಯನ್ನು ಮಾಡುವ ಉದಾತ್ತವಾದ ಸಂಪ್ರದಾಯದಲ್ಲಿ ಬೆಳೆದ ಭಾರತೀಯರು ಗೋವಧೆಯನ್ನು ಶಾಸನದ ಮೂಲಕ ನಿರೋಧಿಸಬೇಕೆಂಬ ಚಳವಳಿದಲ್ಲಿ ತೊಡಗಿರುವುದನ್ನು ಕಾಣಬಹುದು. ಆದರೆ ಸಮಸ್ಯೆಯ ನಿವಾರಣೆಗೆ ಇದು ವಿಧಾಯಕವಾದ ಮಾರ್ಗವನ್ನೆಸಲಾರದು- ನಿರುಪಯುಕ್ತವಾದ ಜಾನುವಾರುಗಳ ಪ್ರಮಾಣವನ್ನು ಮುಂದಕ್ಕಾದರೂ ಕಡಿಮೆ ಮಾಡುವಂತೆ ಪ್ರಯತ್ನಿಸುವುದಕ್ಕೆ ನಾವು ಪ್ರಥಮ ಪ್ರಾಶಸ್ತ್ಯವನ್ನು ಸಲ್ಲಿಸದೆ, ಅದರಿಂದ ಗೋವಧ ನಿರೋಧ ಆಂದೋಲನಕ್ಕಿಂತಲೂ ಹೆಚ್ಚು ಒಳ್ಳೆಯ ಪರಿಣಾಮವಾಗುತ್ತದೆ. ಈ ಸಂಧಾರಣೆಯನ್ನು ನಾವು ಈ ದೃಷ್ಟಿಯಿಂದ ವಿಚಾರಿಸಬೇಕು: ರೂಢ ಮೂಲವಾದ ಹೇಯ ಭಾವನೆಯನ್ನು ಬಿಟ್ಟು ಗೊಟ್ಟರೆ, ಪಾಶ್ಚಾತ್ಯ ದೇಶಗಳಲ್ಲಿ ಕಂಡು ಬಂದಷ್ಟೇ ಒಳ್ಳೆಯ ಪರಿಣಾಮವನ್ನು ನಮ್ಮ ದೇಶದಲ್ಲಿಯೂ ಪಡೆಯಬಹುದೆಂದು ಮನವರಿಕೆಯಾಗದಿರದು. ಕೃತಕ ಗರ್ಭಾಧಾನ ಕ್ರಮದಿಂದ ಹತ್ತು ಬೀಜದ ಹೋರಿಗಳ ಕೆಲಸವನ್ನು ಒಂದೇ ಹೋರಿಯಿಂದ ನಿರ್ವಹಿಸುವುದು ಸಾಧ್ಯವೆನಿಸಿದೆಯಲ್ಲದೆ, ನಮ್ಮ ಉಪಯೋಗಕ್ಕೆ ಹೆಚ್ಚಾಗಿ ಬೀಳುವ ಪೀಳಿಗೆಯನ್ನು ಪಡೆಯುವುದೂ ಶಕ್ಯವೆಂದು ಕಂಡು ಬಂದಿದೆ.

ಕೊನೆಯದಾಗಿ ಹಾಲಿನ ಪೂರೈಕೆಯ ಪ್ರಶ್ನೆ ಬರುತ್ತದೆ. ನಮ್ಮ ದೇಶದಲ್ಲಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿರುವಂತೆ ಹಾಲಿನ ಸಂಗ್ರಹ ಮತ್ತು ಪೂರೈಕೆಯ ವ್ಯವಸ್ಥೆಯನ್ನು ಮಾಡುವ ಕೇಂದ್ರಗಳು ಹೆಚ್ಚು ಸಂಖ್ಯೆಯಲ್ಲಿ ಸ್ಥಾಪನಗೊಂಡಿಲ್ಲ. ಹಾಲನ್ನು ಸಂಗ್ರಹಿಸಿ ಇಡುವುದೇ ಕಷ್ಟದಿಂದ ಅಭಿಜ್ಞಾಯ ನಮ್ಮದು ಅಮೃತತುಲ್ಯವಾದ ವಸ್ತುವೆಂದು ಕ್ಷೀರವನ್ನು ಕರೆದ ನಮ್ಮವರು ಆರು ತಾಸಿಗಿಂತಲೂ ಹೆಚ್ಚು ಸಮಯ ಅದನ್ನು ಹಾಗೆಯೇ ಇರಗೊಳಿಸಿದರೆ, ಅದು ಕೆಟ್ಟು ಹೋಗುವುದೆಂದು ಕಂಡು ಕೊಂಡರು. ಆ ಮೇಲೆ ಅದನ್ನು ಮೊಸರು, ಪಜ್ಜಿಗೆ ಮುಂತಾದವುಗಳಾಗಿ ಬಳಸಬಹುದೇ ಹೊರತು; ಇದ್ದುದಿದ್ದಂತೆ ಅದನ್ನು ಉಪಯೋಗಿಸಲಾಗದೆಂದು ಅವರು ತೀರ್ಮಾನಿಸಿದರು. ಇದು ತಪ್ಪು ನಿರ್ಣಯವಲ್ಲವೆಂಬುದನ್ನು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸಂಶೋಧನೆ ನಡೆಸಿದ ವಿಜ್ಞಾನಿಗಳ ಅಭಿಪ್ರಾಯದಿಂದ ಮನಗಾಣಬಹುದು: ಆದರೆ ಅವರು ಇಷ್ಟಕ್ಕಾಗಿಯೇ ಸಂಗ್ರಹ ವ್ಯವಸ್ಥೆ ಮಾಡಬಾರದೆಂದು ಭಾವಿಸಿ, ಸುಮ್ಮನೆ ಕುಳಿತುಕೊಳ್ಳಲಿಲ್ಲ. ಆರು ತಾಸಿನ ಅವಧಿಯು ಬಳಿಕವೂ ಹಾಲು ಕೆಡದಂತೆ ಅದನ್ನು ಕಾಪಾಡುವ ಬಗೆ ಏನೆಂದು ಅವರು ಪ್ರಯೋಗಗಳನ್ನು ನಡೆಸಿದರು. ತತ್ಫಲವಾಗಿ, "ಪಾಶ್ಚ್ಯರೈಜೇಶನ್" ಎಂಬ ವಿಧಾನವು ಉಪಯುಕ್ತವೆಂದು ಪರಿಗಣಿಸಲಾಯಿತು.

ಹಾಲಿನ ಸಾರವನ್ನು ನಷ್ಟಗೊಳಿಸದೆಯೂ ಸಾಕಷ್ಟು ದೀರ್ಘಕಾಲದವರೆಗೆ ಅದನ್ನು ಸಂಗ್ರಹಿಸಬಹುದೆಂದು ಕಂಡುಕೊಂಡಂದಿನಿಂದ ಹೈನ ವ್ಯವಸಾಯದ ಕೇಂದ್ರಗಳು ಪಶ್ಚಿಮ ದೇಶಗಳಲ್ಲಿ ಬಹಳವಾಗಿ ಹೆಚ್ಚಿಕೊಂಡು, ಭಾರತಕ್ಕೂ ಇವುಗಳ ಗಾಳಿ ಬೀಸತೊಡಗಿತು. ಮುಂಬಯಿ ಸರಕಾರವು ಆದಿಯಲ್ಲಿ ಐದು ಕೋಟಿ ರೂಪಾಯಿಗಳ ಬಂಡವಾಳವನ್ನು ಹಾಕಿ ಏರ್ಪಾಡಲ್ಲಿಯೇ ಆತ್ಯಧುನಿಕ ಸ್ವರೂಪದ ಹೈನ ಕೇಂದ್ರವನ್ನು ಸ್ಥಾಪಿಸಿತು. ಇಲ್ಲಿ ಗೌಳಿಗರ ಸಾವಿರಾರು ಕುಟುಂಬಗಳು ನೆಲೆಸಿದ್ದು, ವಿಸ್ತಾರವಾದ ಹುಲ್ಲುಗಾವಲುಗಳಲ್ಲಿ ದನಗಳೂ ಎಮ್ಮೆಗಳೂ ಸ್ವಚ್ಛಂದವಾಗಿ ಮೇಯುತ್ತಿರುತ್ತವೆ. ಹಿಂಡಿದ ಹಾಲನ್ನೆಲ್ಲ ಸರಕಾರವು ಕೊಂಡು ಕೊಂಡು, ಅತ್ಯಾಧುನಿಕ ರೀತಿಯಲ್ಲಿ ಅದನ್ನು ಕುದ್ದುಗೊಳಿಸಿ, ಕೆಡದಂತೆ ಇಡಲು ಮಾಡಬೇಕಾದ ಸಂಸ್ಕಾರವನ್ನು ಸೂರೈಸಿ, ಬಾಟ್ಲಿಗಳಲ್ಲಿ ಶುಂಬಿಸಿ, ೨೦ ಮೈಲು ದೂರದ ಮುಂಬಯಿ ನಗರದಲ್ಲಿರುವ ಹತ್ತು ಲಕ್ಷ ಜನರಿಗೆ ವಿತರಿಸುತ್ತದೆ. ಆರೆಯ ಕೇಂದ್ರವು ಅಂತಾರಾಷ್ಟ್ರೀಯ ಖ್ಯಾತಿಯನ್ನು ಗಳಿಸಿದುದನ್ನು ಕಂಡು, ಇದೀಗ ಇದಕ್ಕಿಂತ ಸಣ್ಣದಾದ ಇನ್ನೂ ಎರಡನ್ನು ಸ್ಥಾಪಿಸಲಾಗಿದೆ. ಇವುಗಳಿಗೆ ಅಮೆರಿಕದ ಸರಕಾರದಿಂದ ೨,೦೦,೦೦೦ ರೂಪಾಯಿ ಬೆಲೆಯ ಯಂತ್ರ ಸಾಮಗ್ರಿಗಳೂ ದೊರಕುತ್ತವೆ.

ಯೋಜನೆಯು ಕಾರ್ಯಗತಗೊಂಡಾಗ ಪ್ರತಿ ದಿನಕ್ಕೆ ಮೂರು ಲಕ್ಷ ರಾತಲು ಹಾಲನ್ನು ಪ್ಯಾಶ್ಚ್ಯ ರೈಜೇಶನ್ ವಿಧಾನಕ್ಕೆ ಗುರಿಪಡಿಸಿ, ವಿತರಿಸಲಾಗುವುದಲ್ಲದೆ, ೧೦,೦೦೦ ರಾತಲು ಬೆಣ್ಣೆಹಣ್ಣನ್ನೂ ೧೫೦೦ ರಾತಲು ತುಪ್ಪವನ್ನೂ ತಯಾರಿಸಲಾಗುವುದು. ಫೆಬ್ರಿಫೂಡಿತವಾದ ಹಾಲು, ಮಕ್ಕಳಿಗೆ ತಿನಿಸು, ಮತ್ತಿತರ ಪದಾರ್ಥಗಳನ್ನು ಸಿದ್ಧಗೊಳಿಸುವ ವ್ಯವಸ್ಥೆಯನ್ನೂ ಕೈಗೊಂಡಿದ್ದು, ಭವಿಷತ್ತಿನಲ್ಲಿ ಈ ದಿಸೆಯಲ್ಲಿ ಇದೇ ನೊತ್ತಮೊದಲನೆಯ ಪ್ರಯತ್ನವಾಗಿರುವುದು. ನ್ಯೂಜಿಲೆಂಡಿನ ಸಹಾಯದಲ್ಲಿ ಅರ್ಧದಷ್ಟು ದಾನವಾಗಿಯೂ ಉಳಿದ ಅರ್ಧ ಬಡ್ಡಿ ತೆರಬೇಕಾಗಿಲ್ಲದ ಸಾಲವಾಗಿಯೂ ದೊರಕಿರುವುದು; ಸಂಯುಕ್ತ ರಾಷ್ಟ್ರ ಸಂಘದಿಂದ ಪಡೆದ ಸಹಾಯಕ್ಕೆ ಪ್ರತಿಯಾಗಿ ಬೇಡಾ ಜಿಲ್ಲೆಯ ಮಕ್ಕಳಿಗೂ ಗರ್ಭಿಣಿಯರಿಗೂ ೧೨ ಲಕ್ಷ ರೂಪಾಯಿ ಬೆಲೆ ಬಾಳುವ ಹಾಲನ್ನು ವಿತರಿಸಬೇಕಾಗುವುದು. ಇಂಥ ಹೈನ ಕೇಂದ್ರಗಳು ಹೆಚ್ಚಿದಂತೆಲ್ಲ ಭಾರತದ ಪಶು ಸಂಪತ್ತಿಯೂ ಹಾಲಿನ ಉತ್ಪಾದನೆಯೂ ಸುಧಾರಿಸುವುದು ಸಾಧ್ಯವಾದೀತು.

ಯಂ. ಗಣಪ್ಪಯ್ಯ ಎಂಡ್ ಸನ್ಸ್

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು ಇವರ

ಅಶೋಕಾರಿಷ್ಟ ನುತ್ತು ಮಾತ್ರೆ—ಯೋನಿಸಂಬಂಧ ಗರ್ಭಾಶಯ ರೋಗಗಳಿಗೆ ಸಂಜೀವನ. ಅಕಾಲ ಬಸಿಸ್ಥೆ. ಋತುಸ್ರಾವವು ಜಾಸ್ತಿಯಾಗಿಯೂ, ಕಡಿಮೆಯಾಗಿಯೂ ಹೋಗುವುದು, ಬಿಳಿಸೆರಗು, ಸಂತಾನ ಹೀನತೆ, ರಕ್ತಹೀನತೆ ಇತ್ಯಾದಿ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು. ಬಾಟ್ಲಿ 1ಕ್ಕೆ ರೂ. 3-೦-೦.

ಗರ್ಭ ರಕ್ಷಕ್- ಗರ್ಭಿಣಿಯರಿಗೆ ಅತ್ಯಂತ ಪಲಕಾರಿಯಾದ ಔಷಧ. ಚಕ್ಕರ್ ಬರುವಿಕೆ, ಗರ್ಭಕೋಶನಾಳಿಕೆ, ವಾಂತಿ, ಆರುಚಿ, ಅರಕ್ತತೆ, ಮಲಬದ್ಧತೆ, ಹಾಯು ಉಪದ್ರವ, ಕೈ ಕಾಲುಬಾವು ಇವುಗಳನ್ನೆಲ್ಲಾ ಹೋಗಲಾಡಿಸುವುದು. ಬಾಟ್ಲಿ 1ಕ್ಕೆ ರೂ. 3-೦-೦. ಇವಲ್ಲದೆ ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗ್‌ಗೆ ಬರೆಯಿರಿ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ, ಕೋಗಕ್ಕೆ ತಕ್ಕ ಔಷಧಿಯನ್ನು ಕಳಿಸಲಾಗುವುದು.

ಯೊರನಾಡಿನವರಿಗೆ ಮಾತ್ರ

ರಂಗಭೂಮಿಯಲ್ಲಿ ಅಭಿನಯಿಸಲು ನಟನಟಿಯರಿಗೆ ಬೇಕಾಗುವ ೩೦ ರುಜುಲುಗಳು. ಕ್ರಾಪ್ ಕೂದಲು, ಕಿವಿ ಮೆಂತೋಲೆ ಜತೆಗಳು, ತುಟಿಗೆ ಹಚ್ಚುವ ಬಾಟ್ಲಿ, ಮೇಕ್‌ಅಪ್ ಬೌರಿ, ತಲೆಸೂದಿ ಸುತ್ತುವ ಬಲೆ ಇತ್ಯಾದಿ ವೇಷಭೂಷಣಗಳಿಗೆ ಬೇಕಾಗುವ ಜಾವತ್ತೂ ಸಾಮಾನುಗಳು ಸೊರೆಯುತ್ತವೆ ಸವಿವರ ಕ್ರಯದ ಪಟ್ಟಿಗೆ ಬರೆಯಿರಿ.

Dharamshi Mulji Dresswala

132-C, Bhagat Wadi
Bhuleshwar Road,
BOMBAY-2

(ಅನಂ ಸುಬ್ರಾಯ)

ಹಣವನ್ನು ಒಂದಗಿಸಿಕೊಟ್ಟು ಮಿತವಾದ ಬಡ್ಡಿಯನ್ನು ಪೇರಿ ನಿಶ್ಚಿತ ಕಂತುಗಳಲ್ಲಿ ಮರು ವಾವತಿಯನ್ನು ಪಡೆಯುವುದು ವಿಹಿತ. ಸಾಲದ ನಿಬಂಧನೆಗಳನ್ನು ಈಗಿನದಕ್ಕಿಂತ ಹೆಚ್ಚು ಉದಾರವಾಗಿ ಮಾಡಿದರೆ ಅದರಿಂದ ಪ್ರಯೋಜನ ಪಡೆಯುವ ರೈತರ ಸಂಖ್ಯೆಯೂ ಅಧಿಕವಾದೀತು. ಸರಕಾರದಿಂದ ಇಂಥ ನೆರವು ದೊರಕುವ ಸಕ್ಷದಲ್ಲಿ ಅತ್ಯಧಿಕ ಬಡ್ಡಿಯನ್ನು ಕೇಳುವ ಮತ್ತು ನಿರ್ದಯ ರೀತಿಯಲ್ಲಿ ವರ್ತಿಸುವ ಹಳ್ಳಿಯ ಶ್ರೀಮಂತ ವರ್ಗವನ್ನೂ ಬಡ್ಡಿಗೆ ಸಾಲ ಕೊಡುವವರನ್ನೂ ಶರಣಾಗುವ ಪ್ರಮೇಯ ರೈತರಿಗೆ ಉಳಿಯಲಾರದು. ನಗದಿ ಪಡದ ಜೊತೆಗೆ ಸರಕಾರವು ವಸ್ತುಗಳ ರೂಪದಲ್ಲಿಯೂ ಸಾಲವನ್ನು ನೀಡಬಲ್ಲುದು. ರೈತರಿಗೆ ಬೇಕಾದ ರಾಸಾಯನಿಕ, ಗೊಬ್ಬರ, ಸುಧಾರಿತ ಬೀಜ, ಜೇಸಾಯದ ಉಪಕರಣ ಮುಂತಾದವನ್ನು ಕೃಷಿ ಇಲಾಖೆಯವರು ಧರ್ಮಾರ್ಥ ಸಹಾಯವಾಗಿಯಲ್ಲವಾದರೂ ಸಾಲ ರೂಪದಲ್ಲಿಯಾದರೂ ಕೊಟ್ಟರೆ, ಅದರಿಂದ ಲಾಭವಾಗುವುದರಲ್ಲಿ ಸಂದೇಹವಿಲ್ಲ.

ಸರಕಾರದವರು ಹಣದ ಅಭಾವದಿಂದ ತತ್ತರಿಸುತ್ತಿರುವಾಗ ಮೇಲಿನ ಸೂಚನೆಗಳನ್ನು ಕಾರ್ಯಗತಗೆಳಿಸಬಲ್ಲರೇ ಎಂಬ ಅನುಮಾನ ಮೂಡುತ್ತದೆ. ನಮ್ಮ ರೈತರನ್ನು ಪೀಡಿಸುವ ಕೊರತೆಯ ರೋಗವೇ ಸರಕಾರದ ಅನುಭವಕ್ಕೂ ಬರುವುದರಿಂದ ರೈತರ ವಿಷಯದಲ್ಲಿ ಹೆಚ್ಚಿನ ಸಹಾನುಭೂತಿಯನ್ನು ತೋರಿಸಬೇಕಾದದ್ದು ಆಗತ್ಯ. ಈ ದೃಷ್ಟಿಯಿಂದ ವಿಚಾರಿಸಿದರೆ ಸ್ವತಃ ತಾನು ನೆರವಾಗುವ ಅನುಕೂಲತೆಯನ್ನು ಸರಕಾರ ಹೊಂದಿರದಿದ್ದರೆ, ರೈತರಿಗೆ ಸಹಾಯ ದೊರಕುವ ಮಾರ್ಗವನ್ನಾದರೂ ತೆರೆದಿಡಬೇಕೆಂದು ತೋರುತ್ತದೆ. ನಮ್ಮ ಹಳ್ಳಿಗಳಲ್ಲಿ ಎಲ್ಲಿ ನೋಡಿದರಲ್ಲಿ ಶೋಷಣೆಯೇ ಕಂಡು ಬರುತ್ತಿರುವುದು ನಿಜ ಅದನ್ನು ನಿಲ್ಲಿಸಿ ಬಿಡುವ ಉತ್ಸಾಹದಲ್ಲಿ ದಿನಗಳೆಯುವುದೇ ಸಾಧ್ಯವಿಲ್ಲದ ಪರಿಸ್ಥಿತಿಯನ್ನು ನಿರ್ಮಾಣ ಮಾಡುವುದು ಮಾತ್ರ ಸೂಕ್ತವಲ್ಲ ಅದು ತೀರ ಅಪಾಯಕರವಾದ ಚಪಲ ನಂಬಿಗೆ ಸಾಲವೆ ಧನಿಕರು ಸಾಲಕೊಡಲು ನಿರಾಕರಿಸಿದುದರಿಂದ ಬವನೆಗೀಡಾದ ರೈತರು ತಮ್ಮ ಜಿರಾಸ್ತಿಗಳನ್ನು ಸಿಕ್ಕಿದ ಕ್ರಯಕ್ಕೆ ಮಾರಿ ದಿನ ತಳ್ಳುವ ಪ್ರಸಂಗ ಈಗಲೇ ಬಂದಿರುತ್ತದೆ. ಇದನ್ನು ಮುಂದಿರಿಯಗೊಡುವುದು ತಪ್ಪು. ಆದುದರಿಂದ ಸಾಲಗಾರ ರೈತರ ಪಕ್ಷಪಾತಿಗಳೂ ಅವರಮೇಲೆ ಸಹಾನುಭೂತಿ ಉಳ್ಳವರೂ ಸಾಲಕೊಡುವವನ ನಂಬಿಕೆ ಕೆಡದಂತೆ ಹಾಗು ಕೊಂಡವನು ತೊಂದರೆಗೀಡಾಗದಂತೆ ಮಧ್ಯವರ್ತಿಯಾದ ಹೊಸ ಕ್ರಮವೊಂದನ್ನು ಕೈಗೊಳ್ಳುವುದು ಶ್ರೇಯಸ್ಕರ.

—ಕು

ಸ್ವೀಕಾರ—ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. —ಸಂ. ನ.)

ನೌಕಾಘಾತ—

ಅನುವಾದಕರು: ಎಚ್.ವಿ. ಸಾವಿತ್ರಮ್ಮ. ಪ್ರಕಾಶಕರು: ಕಾವ್ಯಾಲಯ, ಸೈಸೂರು. ಬೆಲೆ: ರೂ. ೧—೪—೦.

ವಿಶ್ವಸಾಹಿತ್ಯಕ್ಕೆ ಅಮರ ಕಾಣಿಕೆಯೆನ್ನಿಸಿದ ಕವೀಂದ್ರ ರವೀಂದ್ರರ ಸೀಳ್ಗತೆಯೊಂದರ ಸಂಕ್ಷಿಪ್ತ ಅನುವಾದವೇ "ನೌಕಾಘಾತ". ಬಿರುಗಾಳಿಯ ದೆಸೆಯಿಂದೆ ಮದುವೆ ಮುಗಿಸಿ ವಧೂವರರೊಡನೆ ಹಿಂದಿರುಗುತ್ತಿದ್ದ ದೋಣಿಯೊಂದು ಬುಡಮೇಲಾಗುತ್ತದೆ. ವರನಾದ ರಮೇಶ ಪ್ರವಾಹದಿಂದ ನಡುಗಡ್ಡೆಯೊಂದರ ಮೇಲೆ ಬಗೆಯಲ್ಪಡುವನು. ಅನಂತರ ಎಚ್ಚರವಾದಾಗ ಹಾಗೆಯೇ ಆಘಾತ ಕ್ಕೊಳಗಾಗಿ ಅನತಿ ದೂರದಲ್ಲಿ ಬಿದ್ದಿದ್ದ ಕಮಲೆ ಎಂಬ ನವವಧುವನ್ನೆಬ್ಬಳು ಕಣ್ಣಿಗೆ ಬೀಳುವಳು. ಆಸಳನ್ನೆ ತನ್ನ ಪತ್ನಿ ಎಂದು ಅವನು ತಪ್ಪು ತಿಳಿದು, ನುನೆಗೆ ಕರೆದೊಯ್ಯುವನು ಆದರೆ "ಸುಶೀಲಾ" ಎಂದು ರಮೇಶ ಕರೆದಾಗ ತನ್ನ ಹೆಸರು ಆದಲ್ಲವೆಂದು ಆಕಳು ಹೇಳಲು, ನಿಧಾನವಾಗಿ ಆಕೆ ಬೇರೆ ಯಾರೋ ನಳಿನಾಕ್ಷ ಎಂಬವನ ಹೆಂಡತಿಯೆಂದು ಗೊತ್ತಾಗುವುದು ರಮೇಶನು ಆ ನಳಿನಾಕ್ಷನನ್ನು ಪತ್ತೆಹಚ್ಚುವ ಪ್ರಯತ್ನ ನಡೆಸಿದರೂ ಅದು ಯಶಸ್ವಿಯಾಗುವುದಿಲ್ಲ ಈಗ ಅವನ ಮತ್ತು ಕಮಲೆಯ ಸಂಬಂಧ ಹೇಗಿರಬೇಕು? ಅವನು ಬುದ್ಧಿವಂತನಾಗಿದ್ದರೆ, ಕಮಲೆಗೆ ನಿಜ ಹೇಳಿ, ಆಸಳ ಭವಿಷ್ಯವನ್ನು ದೂರದೆನಿಳಿಸಬಹುದಾಗಿದ್ದಿತು. ಹಾಗೇನೂ ಅವನು ಮಾಡಲಿಲ್ಲ. ಇದರಿಂದ ಕಮಲೆ-ರಮೇಶರ ಸಂಬಂಧವು ಗಂಡ ಹೆಂಡತಿಯೆಂದು ಜನ ಜನಿತವಾಯಿತು. ಪರಿಣಾಮವೆಲ್ಲಿ ರಮೇಶನ ಆಸುರಾಗಕ್ಕೆ ಪಾತ್ರಳಾಗಿದ್ದ ಹೇಮಳಿನಿಯು ಪರಿವಾರದೊಡನೆ ಶ್ಲೇಷವೇ ಘಟಿಸಿತು. ರಮೇಶನ ಈ ವಿಷಾದಾನುಭವ ಕೊನೆಯವರೆಗೂ ಉಳಿಯುತ್ತದೆ. ಘಟನಾ ಪ್ರವಾಹಗಳ ದೆಸೆಯಿಂದ ಕೊನೆಗೆ ಕಮಲೆ-ನಳಿನಾಕ್ಷರ ಮಿಲನವಾಗುತ್ತದೆ:ಹೇಮ ನಳಿನಿ-ರಮೇಶರೂ ಸುಮುನೆಯಾಗುವರೆಂದು ಊಹಿಸಬಹುದು, ಆದನ್ನು ಕತೆ ಹೇಳುವುದಿಲ್ಲ ಒಟ್ಟಾರೆ, ದೋಣಿ ಮುಳುಗಿದ ಘಟನೆಯೂ ಕಮಲೆ-ರಮೇಶರು ಪತಿ ಪತ್ನಿಯರೆಂಬ ಭ್ರಾಂತಿಯೂ ಇದೀ ಕತೆಗೆ ತಳಹದಿಯಾಗಿ ನಿಲ್ಲುತ್ತವೆ; ಆದರೆ ಇದು ಭದ್ರವಾದ ಬುನಾದಿಯಾಗಿಲ್ಲ. ದೋಣಿ ಮುಳುಗಿನ್ದು ಆಕಸ್ಮಿಕ ನಿಜ. ಆದರೆ, ನಳಿನಾಕ್ಷನ ಮುಖವನ್ನು ಕಮಲೆ ನಾಚಿಕೆಯಿಂದ ಮದುವೆಯ ಕಾಲಕ್ಕೆ ನೋಡಿದಿದ್ದರೂ ಆನನ ಸ್ವರ, ಉಶ್ಚಾಸ ತೊಡುಸ್ಸು, ನಡಿಗೆ ಮುಂತಾದ ಯಾವುದರ ಪರಿಚಯವೂ ಆಕೆಗಿರಲಿಲ್ಲವೆನ್ನುವುದು ಆಥವಾ ರಮೇಶ-ನಳಿನಾಕ್ಷರಲ್ಲಿ ಆಷ್ಟು ಸಾನ್ಯವಿದ್ದಿತೆಂದು ಭಾವಿಸುವುದು ಕಸ್ಟ. ಹೀಗೆ ಕತೆಯ ಚೌಕಟ್ಟು ಶಿಥಿಲವಾಗಿದೆಯೆಂಬ ಸಂಗತಿಯನ್ನು ರವೀಂದ್ರರೇ ಒಪ್ಪಿರುವರು. ಆನರ ಅಭಿಪ್ರಾಯದಂತೆ, ನನ್ಮ ಸಂಸ್ಕಾರವು ಗಂಡನ ಸಂಬಂಧ ಎಷ್ಟುಶಾಶ್ವತೆನಾದುದೆಂಬ ತಿಳಿವಳಿಕೆಯನ್ನು ಪಡುಗಿಯರಲ್ಲಿ ಮೂಡಿಸಿರುವುದೆಂಬುದೇ ಇಲ್ಲಿನ ಮಹತ್ತಿದ ವಿಷಯ. ಈ ದೃಷ್ಟಿಯಿಂದ ಎಳದು ತಂದ ಘಟನೆಗಳು ಗೌಣವಾಗುತ್ತವೆ—ನುನಸ್ಸಿನ ವಿಪ್ಲವ ಮತ್ತು ವಿಶ್ಲೇಷಣೆಗೆಳಿಗೆ ಸ್ರಾಧಾನ್ಯ ಬರುತ್ತದೆ. ರಮೇಶ, ಕಮಲೆ ಮತ್ತು ಹೇಮನಳಿನಿಯರ ಪಾತ್ರ ಚಿತ್ರಣಬದಲ್ಲಿ ಇದನ್ನು ಸ್ಪಷ್ಟವಾಗಿ ಕಾಣಬಯಸುವು. ನಳಿನಾಕ್ಷನ ಪಾತ್ರವು ಪರಿಣಾಮಕಾರಿಯಾಗಿ ಪೋಷಿಸಲ್ಪಟ್ಟಿಲ್ಲವೆಂದೇ ತೋರುತ್ತದೆ; ಆದರೆ ಈ ಕೊರತೆಯನ್ನು ತ್ರಿಲೋಕ್ಯ ಚಕ್ರವರ್ತಿಯ ಪಾತ್ರ ಸಂಪೂರ್ಣ ತುಂಬಿಕೊಡುತ್ತದೆ. ತೈಲಚಿ ಮತ್ತು ಆನಂದ ಬಾಬುಗಳ ಚಿತ್ರಣವು ಚೆನ್ನಾಗಿಯೇ ಬಂದಿದೆ. ರವೀಂದ್ರರು ಅನುಸಂಗಿಕವಾಗಿ ಬ್ರಹ್ಮಸಮಾಜ ಮತ್ತು ಹಿಂದೂ ಮತದ ಆಚಾರ ವಿಚಾರಗಳ ಸಜಾನುಭೂತಿಪರ ಚರ್ಚೆಯನ್ನು ಮಾಡಿದ್ದರು ಆದರೆ ಅದು ಈ ಅನುವಾದದಲ್ಲಿ ಸಾಕಷ್ಟು ಹೆಚ್ಚಾಗಿ ಬಂದಿರುವುದಿಲ್ಲ. ಸಂಕ್ಷೇಪಿಸಿದುದರ ದೆಸೆಯಿಂದ ಮೂಲ ಗ್ರಂಥದ ಸೌಂದರ್ಯ ಕೆಲಮಟ್ಟಿಗೆ ನಷ್ಟವಾಗಿದೆಯೆಂದನಿಸುತ್ತದೆ. ಅವಾಗ್ಯೂ ಸಾವಿತ್ರಮ್ಮನವರ ಈ ಅನುವಾದದಿಂದ ರವೀಂದ್ರರ ಸಾಹಿತ್ಯದ ಹೆಚ್ಚಿನ ಪರಿಚಯವನ್ನು ಮಾಡಿಕೊಳ್ಳುವುದಕ್ಕೆ ಅನಕಾಶವಾಯಿತೆಂಬುದು ಸತ್ಯ. ಹಾಗೆ ನೋಡಿದರೆ, ಕನ್ನಡದಲ್ಲಿ "ಮುಳುಗಿದ ದೋಣಿ" ಎಂಬ ಹೆಸರಿನಲ್ಲಿ ಇದರ ಇಮ್ಮಡಿ ಗಾತ್ರದ ಅನುವಾದವೊಂದು ಮೊದಲೇ ಪ್ರಕಟವಾಗಿದೆ ಆದರೆ ಅಲ್ಲಿನದಕ್ಕಿಂತ ಇಲ್ಲಿನ ಭಾಷೆ ನಯವಾಗಿದೆ, ಸೊಗಸಾಗಿದೆ. ಬೆಲೆಯೂ ಕಡಿಮೆ ಇದಕ್ಕಾಗಿ ನಾವು ಸಂತೋಷಿಸಬೇಕು.

ಸಿಹಿಮೂತ್ರ

ರೋಗ ನಿವಾರಣೆ.

(DIABETES)

ಏಳು ದಿನಗಳಲ್ಲಿ ಗುಣವಾಗುತ್ತದೆ

ಮೂತ್ರದಲ್ಲಿ ಸಕ್ಕರೆ ಹೆಚ್ಚು ಹೋಗುವ ವಕ್ಕೆ ಸಿಹಿಮೂತ್ರ ರೋಗ (Diabetes) ಎಂದು ಕರೆಯುತ್ತಾರೆ. ಎಂಥ ಭಯಂಕರ ರೋಗವೆಂದರೆ, ಇನಕ್ಕೆ ಇದು ಬಲಿಯಾಪ ಹೋಗಿಯು ದಿನದಿನಕ್ಕೆ ಸಾವಿನತ್ತ ಸಾಗುತ್ತಿರುತ್ತಾನೆ. ಇದರ ಚಿಕಿತ್ಸೆಗೆ ಡಾಕ್ಟರು ಇಂಜಕ್ಷನ್ ಕಂಡುಹಿಡಿದಿದ್ದಾರೆ.ಆದರೆ ಇದರಿಂದ ರೋಗ ಸಂಪೂರ್ಣವಾಗಿ ವಾಸಿಯಾಗುವುದಿಲ್ಲ. ಇಂಜಕ್ಷನ್ನಿನ ಪರಿಣಾಮ ಇರುವವರೆಗೆ ಸಕ್ಕರೆ ಅಂಶ ಸ್ವಲ್ಪ ಕಡಿಮೆಯಾಗುತ್ತದೆಯಷ್ಟೆ.

ಈ ಪಾರುಣ ಖಾಹಿಲೆಯ ಮುಖ್ಯ ಲಕ್ಷಣಗಳಾವುವೆಂದರೆ ಪಸಿವು ನೀರದಿಕೆ ಆತಿಹೆಚ್ಚಾಗುವುದು, ಮೂತ್ರದಲ್ಲಿ ಹೆಚ್ಚು ಸಕ್ಕರೆ ಹೋಗುವಿಕೆ ಮತ್ತು ನವೆಯಾಗುವುದು ಇತ್ಯಾದಿ

ಈ ಖಾಹಿಲೆ ಉಲ್ಬಣಾವಸ್ಥೆಗೆ ಹೋದಾಗ ಹುಣ್ಣು, ಗುಳ್ಳೆ, ಕಣ್ಣಿನಲ್ಲಿ ಪೊರೆ ಮತ್ತು ಇತರೆ ತೊಡಕುಗಳು

ವೀನಸ್ ಚಾರ್ಮ್ ಆಧುನಿಕ ಕಾಲದ ವೈದ್ಯಕೀಯ ಸಂಶೋಧನೆ ಇದರಿಂದ ಸಾವಿರಾರು ಜನರು ಮೃತ್ಯುವಿನ ದವಡೆಯಿಂದ ಪಾರಾಗಿದ್ದಾರೆ, "ವೀನಸ್ ಚಾರ್ಮ್" ಸೇವನೆಯಿಂದ ಎರಡನೆ ಆಥವಾ ಮೂರನೆಯ ದಿನದಿಂದ ಮೂತ್ರದಲ್ಲಿ ಸಕ್ಕರೆ ಹೋಗುವಿಕೆ ಕಡಿಮೆ ಆಗುವುದು. ಹೆಚ್ಚು ಸಲ ಮೂತ್ರಕ್ಕೆ ಹೋಗುವುದು ಕಡಿಮೆಯಾಗುತ್ತದೆ. ನಾಲ್ಕನೆಯ ದಿನದಿಂದ ನೀವು ಆರ್ಥ ಗುಣಾಯಿತೆಂದು ಭಾವಿಸುವಿರಿ. ನೀವು ಯಾವ ಪಥ್ಯಗಳನ್ನು ಮಾಡಬೇಕಾಗಿಲ್ಲ. ಸವರೆಗಾತ್ಮಕ ಕೈಪಿಡಿಗೆ ಬರೆಯಿರಿ. 50 ಮಾತ್ರೆಗಳ ಬಂದು ತೀಸೆಗೆ, ರೂಪಾಯಿ 6-12-0. ಪ್ಯಾಕಿಂಗ ಮತ್ತು ಅಂಚೆ ವೆಚ್ಚ ಉಚಿತ.

Venus Research Laboratory (N. W.)
Post Box No. 587, CALCUTTA.

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ
ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಜೀಫ್ ಏಜಂಟ್ಸ್, ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್.
ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ, ದ. ಕ.

ಆಥವಾ ಶಾಖೆ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು

The Bombay Life Assurance Co., Ltd., Bombay.

—ಕನ್ನಡದಲ್ಲಿ ಹೊಸ ಬಗೆಯ ಗ್ರಂಥ—

(ಬರೆದವರು: ಕುಮಾರಸ್ವಾಮಿ)

- ಬಾಳ್ವೆಯ ಹಲವು ಪ್ರಶ್ನೆಗಳನ್ನು ದಿಟ್ಟತನದಿಂದ ಉತ್ತರಿಸಿ ಚೈತನ್ಯ ಪೂರ್ಣ ವ್ಯಕ್ತಿತ್ವಕ್ಕೆ ಒಪ್ಪುವಿದುವ ಪುಸ್ತಕ.
- ಪ್ರತಿಯೊಬ್ಬನೂ ಸಂಗ್ರಹಿಸಬೇಕಾದ ಸುಬಜೀವನದ ಕೈಗನ್ನಡಿ.

ಕಟಲಾಗೆ ಬರೆಯಿರಿ—
1. ನವಯುಗ ಪ್ರೆಸ್, ಉಡುಪಿ. 2. ನವಭಾರತ ಪುಸ್ತಕಭಂಡಾರ, ಉಡುಪಿ.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

ಕರ್ನಾಟಕದಲ್ಲೆಲ್ಲ ಜನಪ್ರಿಯವಾದ ಆತಿ ಕಡಿಮೆ ಬೆಲೆಯ ಕೈ ಹೊತ್ತಿಗೆ—

ಗೀತೆಯ ಕೈಗನ್ನಡಿ

ಹೊಸಕೆರೆ ಚಿದಂಬರಯ್ಯನವರ ಸರಳ ಕನ್ನಡ ಅರ್ಥಸಹಿತವಾದ ಭಗವದ್ಗೀತೆ

ಬೆಲೆ: ೦—೮—೦

ನವಯುಗ ಪ್ರೆಸ್, ಉಡುಪಿ. ಆಥವಾ ನವಭಾರತ ಬುಕ್ ಡಿಪೊ, ಉಡುಪಿ.

Edited, Printed & Published By K. H. Shetty at the Navayuga Press, Udipi, S. India

M. 3616

ನವಯುಗ

ಸಂಪುಟ ೩೪ ಉಡುಪಿ, 2—12—1954 ಸಂಚಿಕೆ ೧೪

VOL. 34 NO. 14

ಸಾರ್ವಜನಿಕ ಆಡಳಿತ

ಗಿರಿಜನರಲ್ಲಿ ಕೆಲಸಮಾಡುತ್ತಿದ್ದ ಹುಡುಗನ ಬೆರಳುಗಳಿಗೆ ಪಟ್ಟಾಯಿತು. ಬ್ಯಾಂಡೇಜು ಕಟ್ಟುತ್ತಾ ಡಾಕ್ಟರರು "ಹೆದರಬೇಡ, ನಿನ್ನ ಕೈ ಸರಿಯಾಗುವುದು" ಎಂದು ಧೈರ್ಯ ಕೊಟ್ಟರು.

"ನಾನು ಬೆರಳುಗಳನ್ನು ಸರಿಯಾಗಿ ಉಪಯೋಗಿಸಲು ಸಾಧ್ಯವಾದೀತೇ?" ಎಂದು ಹುಡುಗ ಆಶ್ವಾಸನೆಯನ್ನು ಕೇಳಿದ. ಡಾಕ್ಟರರು "ಓಹೋ" ಎಂದರು. "ಆವಗಳಿಂದ ನಾನು ಹಾರ್ಮೋನಿಯಂ ಬಾರಿಸಲು ಬಂದೀತೇ?" ಎಂದು ಹುಡುಗ ಮರಳಿ ಕೇಳಿದ. "ಬಂಡಿತವಾಗಿ" ಎಂಬ ಉತ್ತರಬಂತು.

"ಇದು ನಿಜಕ್ಕೂ ಆಶ್ಚರ್ಯ! ನನಗೀಗ ಹಾರ್ಮೋನಿಯಂ ಬಾರಿಸಲು ಬರುತ್ತಿಲ್ಲ"ಎಂದು ಹುಡುಗ ಹೇಳಿದಾಗ ಡಾಕ್ಟರರು ಪತರಪ್ರಳಾದರು.

ಮೈಸೂರಿನ ಮುಖ್ಯ ಮಂತ್ರಿ ಹನುಮಂತಯ್ಯನವರು ಸರಕಾರದ ಆಡಳಿತ ವರ್ಗದ ಅಧಿಕಾರಿಗಳಿಗೆ ಸತ್ಕಾರ ಕೂಟಗಳನ್ನು ಏರ್ಪಡಿಸುವ ಪದ್ಧತಿಯು ನಿಷ್ಪಕ್ಷಪಾತ ಆಳ್ವಿಕೆಗೆ ಪೋಷಕವಾದುದಲ್ಲ ಎಂದು ಈಚೆಗೆ ಅಭಿಪ್ರಾಯ ವ್ಯಕ್ತಗೊಳಿಸಿದರು. ಸತ್ಕಾರ ಕೂಟಗಳನ್ನು ಏರ್ಪಡಿಸುವವರು ಅಧಿಕಾರಿಗಳ ಪ್ರೀತಿ ಪಾತ್ರರೆಂದೂ ಹಾಗೆ ಮಾಡದಿರುವವರು ಅವರ ಅನುಗ್ರಹ ಹೊಂದುವುದಿಲ್ಲವೆಂದೂ ಅಭಿಪ್ರಾಯವನ್ನು ಜನರಲ್ಲಿ ಮೂಡಿಸುವುದು ಸರಿಯಲ್ಲ. ಅದುದರಿಂದ ಅಧಿಕಾರಿಗಳು ಸತ್ಕಾರ ಕೂಟಗಳನ್ನು ಒಪ್ಪಿಕೊಳ್ಳದಿರುವುದೇ ಸೂಕ್ತ— ಎಂದವರು ಹೇಳಿದರು. ಎರಡು ವಾರಗಳ ಹಿಂದೆ ಪ್ರಧಾನಮಂತ್ರಿ ನೆಹರುಗಳು ರಾಜ್ಯದ ಕೂಲಿಕಾರ ಮಂತ್ರಿಗಳ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದಾಗ ಸರಕಾರದ ಅಪ್ಪಣೆ ವಿಧಿಸಿ ಕೆಲಸ ಮಾಡಿಸುವ ಆಡಳಿತ ಪದ್ಧತಿಯನ್ನು ಖಂಡಿಸಿದರು ಸಾರ್ವಜನಿಕ ಆಡಳಿತದ ಈಗಿನ ಕೆಲವು ಕ್ರಮಗಳೂ ಪದ್ಧತಿಗಳೂ ತಮಗೆ ಸೇರುವುದಿಲ್ಲವೆಂದು ಅವರು ಹೇಳಿದರು. "ವಿಷಯದಿಂದ ಕಾರ್ಯಸಾಧನೆಯಾಗುತ್ತದೆ. ಹಿಂದಿನ ಆಜ್ಞೆ ವಿಧಿಸಿ ಕೆಲಸ ಮಾಡಿಸುವ ಪದ್ಧತಿಗೆ ಇಂದು ಸ್ಥಾನವಿಲ್ಲ. ನಾವು ಜನತೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು" ಎಂದವರು ಸಾರಿದರು.

ಮೇಲಿನೆರಡು ಅಭಿಪ್ರಾಯಗಳನ್ನು ಮಥಿಸಿ ನೋಡಿದಲ್ಲಿ ನಮ್ಮ ಜನರು ಸಾಮಾನ್ಯವಾಗಿ ಪರಿಶುದ್ಧ ಆಡಳಿತವನ್ನು ಅಪೇಕ್ಷಿಸುತ್ತಿದ್ದಾರೆಂದೂ ವಾಸ್ತವ್ಯಸ್ಥಿತಿಯನ್ನು ಪ್ರಜಾಪ್ರಭುತ್ವಕ್ಕೆ ಒಗ್ಗುವ ರೀತಿಯಲ್ಲಿ ಪುನರ್ಘಟಿಸುವ ಆವಶ್ಯಕತೆ ಇದೆಯೆಂದೂ ಸ್ವಯಮೇವ ವ್ಯಕ್ತವಾಗುತ್ತದೆ. ಸಾಮಾನ್ಯ ನಾಗರಿಕನು ಸರಕಾರದಲ್ಲಿ ಹೆಚ್ಚಿನ ಕಾರ್ಯಕ್ಷಮತೆ ಇರಬೇಕೆಂದು ಅಪೇಕ್ಷಿಸುತ್ತಾನೆ. ತಾನು ತೆಗೆದುಕೊಂಡು ಹೋದ ಅರ್ಜಿಯು ಪರಿಶೀಲನೆ ಬೇಗನೆ ಆಗಬೇಕೆಂದು ಅವನು ಬಯಸುತ್ತಾನೆ. ನ್ಯಾಯ ತೀರ್ಮಾನ ವ್ಯವಸ್ಥೆಯಲ್ಲಿಯೂ ತೀಕ್ಷ್ಣ ನಿರ್ಣಯಕ್ಕೆ ಮಹತ್ವವಿಲ್ಲಬೇಕೆಂದು ಅವನು ಇಚ್ಛಿಸುತ್ತಾನೆ. ಆದರೆ ಇಂದು ನಾವು ಕಾಣುತ್ತಿರುವ ಪರಿಸ್ಥಿತಿ ಮಾತ್ರ ಹೀಗಿಲ್ಲ—ನ್ಯಾಯಸ್ಥಾನಗಳಲ್ಲಿ ಖಟ್ಲೆ ತೀರ್ಮಾನವಾಗುವುದಕ್ಕೆ ಕೆಲವು ವರ್ಷಗಳು ಹಿಡಿಯುತ್ತವೆ. ರೈತನ ಅರ್ಜಿಯೊಂದು ವಿಚಾರಣೆಗೆ ತೆಗೆದುಕೊಳ್ಳಲ್ಪಡಬೇಕಾದರೆ ಬಾಗಿಲು ಕಾಯುವ ಪೇದೆಯಿಂದ ಹಿಡಿದು ಅಧಿಕಾರಿಗಳವರೆಗೆ ಎಲ್ಲರ ಕೈಯನ್ನೂ ಬಿಸಿ ಮಾಡಿ, ಮನಸ್ಸನ್ನು ಖುಷಿ ಮಾಡಬೇಕಾಗುತ್ತದೆ ಸ್ವರಾಜ್ಯ ಬಂದ ಬಳಿಕ ಲಂಚಗುಳಿತನಕ್ಕೆ ಸರಕಾರ ಅಂತ್ಯ ತಂದೀತೆಂದು ಎಲ್ಲರೂ ಆಶಿಸಿದ್ದರು. ಆದರೆ ಸಾರ್ವಜನಿಕ ಆಡಳಿತ ವರ್ಗದಲ್ಲಿ ಲಂಚ ಸ್ವೀಕರಿಸುವುದು ಅಪರಾಧ ಎಂಬ ಮನೋಭಾವ ಮೂಡಿಯೇ ಇಲ್ಲ. ಸರಕಾರ ಲಂಚಗುಳಿತನವನ್ನು ನಿರ್ಮೂಲಗೊಳಿಸಲು ಉಪಾಯಗಳನ್ನು ಯೋಜಿಸುವುದಕ್ಕೋಸ್ಕರ ಆಚಾರ್ಯ ಕೃಪಲಾನಿಯವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ನೇಮಿಸಿರುವುದೂ ಅದು ಕಾರ್ಯಪ್ರವೃತ್ತವಾಗಿರುವುದೂ ನಿಜ. ಆದರೆ ಅದರ ವರದಿ ಬರುವುದಕ್ಕೆ ಮುಂಚೆಯೇ ಕ್ರಿಮಿನಲ್ ಪ್ರೊಸೀಜರ್ ಕೋಡಿಗೆ ತಿದ್ದುಪಡಿಯೊಂದನ್ನು ತಂದಿಳಿ, ಸರಕಾರದ ನೌಕರ ವರ್ಗದವರಿಗೆ ಶಿಕ್ಷೆ ವಿಧಿಸುವ ಅಧಿಕಾರವನ್ನು ಕೋರ್ಟುಗಳಿಂದ ಕಿತ್ತುಕೊಳ್ಳುವ ಪ್ರಯತ್ನವೂ ಆಗಿದೆ. ಆದರೆ ಈ ಪ್ರಯತ್ನ ಫಲಿಸಲಿಲ್ಲ. ಸಾರ್ವಜನಿಕ ಆಡಳಿತದಲ್ಲಿ ಲಂಚಗುಳಿತನಕ್ಕೆ ಎಡೆಯೇ ಸಿಗಬಾರದು. ವ್ಯಾಪಾರಿಕತೆಯೇ ಮೂಲಭೂತ ವಿಷಯವಾಗಿರಬೇಕು. ಕಲ್ಯಾಣ ರಾಷ್ಟ್ರ ಕಟ್ಟುವ ಧ್ಯೇಯವುಳ್ಳ ಸರಕಾರದ ಆಡಳಿತ ವರ್ಗವು ಜನತೆಯ ಪ್ರೀತಿ ವಿಶ್ವಾಸಗಳಿಗೆ ಪಾತ್ರವಾಗದಿದ್ದರೆ, ತನ್ನ ಉದ್ದೇಶದಲ್ಲಿ ಸರಕಾರವು ಸಫಲವಾಗಲಾರದು. ಸರಕಾರದ ಅಧಿಕಾರಿಗಳು ಸಾರ್ವಜನಿಕ ಅಭಿಪ್ರಾಯದ ಭೀತಿಯನ್ನು ಪಡೆದಿರುವುದು ಒಳಿತು; ಲಂಚಗುಳಿತನದ ವಿರುದ್ಧ ನಾಗರಿಕರಲ್ಲಿ ಒಟ್ಟಿಗೆ ಘೋಷಣೆ ಹೊರಡಿಸಿದರೆ, ಲಂಚ ಸ್ವೀಕರಿಸಿದ ಅಧಿಕಾರಿಯ ವರ್ತನೆಯನ್ನು ಪತ್ರಿಕೆಗಳು ಖಂಡಿಸಿದರೆ, ಸರಕಾರ ಹಾಗೆ ಆಕ್ಷೇಪಿಸಿದವರ ಮೇಲೆ ಹರಿಹಾಯ್ದು ಖಟ್ಲೆ ಹಾಕಗೊಡುವ ಈಗಿನ ಸ್ಥಿತಿಯ ಪರಿಸ್ಥಿತಿಯನ್ನು ಇನ್ನಷ್ಟು ಕೆಡಿಸುತ್ತದೆ; ಲಂಚಗುಳಿ ಅಧಿಕಾರಿಯ ಪಕ್ಷವನ್ನೆ ಅದು ಬಲಗೊಳಿಸುತ್ತದೆ. ದೇಶದ ಪುನಾರಚನೆಗಾಗಿ ಕೈಗೊಂಡ ಹಲವಾರು ಯೋಜನೆಗಳಲ್ಲಿ ಹಣವ ಅಪವ್ಯಯವಾಗುತ್ತಿದೆಯೆಂದೂ ಅಪ್ರಾಮಾಣಿಕ ರೀತಿಯಲ್ಲಿ ಆಡಳಿತ ವರ್ಗ ನಡೆದುಕೊಂಡ ಉದಾಹರಣೆಗಳು ಕಣ್ಣಿಗೆ ಬೀಳುತ್ತವೆಂದೂ ಲೆಕ್ಕಪತ್ರ ಸಂಶೋಧಕ ಸಮಿತಿಯೇ ಮುಂತಾದ ಅಧಿಕೃತ ಸ್ರೋತಗಳು ತಿಳಿಸುತ್ತವೆ. ಇದನ್ನೆ ಪತ್ರಿಕೆಯೊಂದು ಬರೆವ ಪಕ್ಷದಲ್ಲಿ ಸರಕಾರ ಖಟ್ಲೆಗಳನ್ನು ಆತೀಕ್ಷ್ಣವಲ್ಲದಲ್ಲಿ ತೀರ್ಮಾನ ಮಾಡುವುದು, ಅಧಿಕಾರಿಗಳು ಸಂಪೂರ್ಣವಾಗಿ ಪ್ರಾಮಾಣಿಕತೆಯಿಂದವರ್ತಿಸುವುದು ಮತ್ತು ಸಕಾಲದಲ್ಲಿ ತಮ್ಮ ಕುಂದುಕೊರತೆಗಳು ನಿವಾರಿಸಲ್ಪಡುತ್ತವೆಂಬ ಅಭಿಪ್ರಾಯವನ್ನು ನಾಗರಿಕರಲ್ಲಿ ಮೂಡಿಸುವುದು ಈ ಮೂರು ಸಂಗತಿಗಳು ಸಾರ್ವಜನಿಕ ಆಡಳಿತವನ್ನು ಹೆಚ್ಚು ಕಾರ್ಯಕ್ಷಮವಾಗಿಯೂ ಪರಿಣಾಮ ಕಾರಿಯಾಗಿಯೂ ಮಾಡುತ್ತವೆ. ಸಾರ್ವಜನಿಕರಿಗಾದ ಸಂತುಷ್ಟಿಯ ಪ್ರಮಾಣವೇ ಆಡಳಿತದ ಕಾರ್ಯಕ್ಷಮತೆ ಮತ್ತು ಪರಿಣಾಮಕಾರಿ ಬಗೆಯ ಅಳತೆಗೋಲು.

—ಮುರಾರಜಿ ದೇಸಾಯಿ.

ಆದರೆ ವಿರುದ್ಧ ಖಟ್ಲೆ ಹಾಕಿದರೆ, ಸಾರ್ವಜನಿಕ ಅಭಿಪ್ರಾಯಕ್ಕೆ ಏನು ಬೆಲೆ ಬಂದೀತು? ಸರಕಾರದ ನೌಕರ ವರ್ಗಕ್ಕೆ ಜನತೆಯ ಹೆದರಿಕೆ ಇಲ್ಲದೆ ಹೋದರೆ, ಆದು ಕಾರ್ಯಕ್ಷಮ ರೀತಿಯಲ್ಲಿ ಪ್ರಾಮಾಣಿಕತೆಯಿಂದ ಕೆಲಸ ಮಾಡಲಾರದು.

ಇದ್ದಿ ಇನ್ನೊಂದು ಮಾತನ್ನು ಪ್ರಸ್ತಾಪಿಸುವುದೂ ಯೋಗ್ಯ: ಅದೆಂದರೆ ನೌಕರಿಗಳ ಪುನಾರಚನೆ; ಅರ್ಥಾತ್ ಆಡಳಿತ ವರ್ಗದ ಪರಿಷ್ಕಾರ. ಆಜ್ಞೆ ವಿಧಿಸಿ ಕೆಲಸ ಮಾಡಿಸುವ ಸ್ಥಾನದಲ್ಲಿ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಉದ್ದೇಶ ಸಾಧಿಸುವ ಪ್ರಯತ್ನ ಪರಕೀಯರ ಆಡಳಿತಕ್ಕೂ ಇಂದಿನ ಆಡಳಿತಕ್ಕೂ ವ್ಯತ್ಯಾಸವನ್ನುನಾವು ಇಲ್ಲಿ ಗುರುತಿಸಬೇಕಾಗುತ್ತದೆ. ಹಿಂದಿನ ನೌಕರ ವರ್ಗದವರು ಪರಿವರ್ತನೆಯೊಂದಿದ ಇಂದಿನ ಪದ್ಧತಿಗೆ ಎಷ್ಟು ಮಟ್ಟಿಗೆ ಅರ್ಹರೆಂದು ನಿಶ್ಚಯಿಸಬೇಕಾಗುತ್ತದೆ. ನಿರಂಕುಶ ರೀತಿಯಲ್ಲಿ ಆಡಳಿತ ನಿರ್ವಹಿಸುತ್ತಿದ್ದವರೇ ಪ್ರಜಾಪ್ರಭುತ್ವ ಪದ್ಧತಿಯ ಹೊಣೆಗಾರಿಕೆಗಳನ್ನೂ ನಿರ್ವಹಿಸಿಯಾರೆಂಬ ಭಾವಿಸುವುದು ತಪ್ಪಾದೀತು. ಓ, ಅದೂ ಸ್ವಾ" ಎಂದು ಹೇಳುವವರು ಬಹಳ ಸುಲಭವಾದ ಕೆಲಸವೆಂದು ತಿಳಿದಂತೆ ತಾಣಾತ್ತದೆ. ಆದರೆ ನಿಜವಾಗಿ ಹಾಗಿಲ್ಲ—ಸರಕಾರದ ನಿಯಂತ್ರಣದಲ್ಲಿ ನಡೆಯುವ ಉದ್ದಿಮೆಗಳು, ಆಕರ್ಷಕ್ಟುಗಳು, ಮಾರ್ಗಗಳು, ಇನ್ನೂ ಅನೇಕ ಅಭಿವೃದ್ಧಿ ಯೋಜನೆಗಳ. ಬಾಗಿಲು ಕ್ಷೇತ್ರದಲ್ಲಿ ಕಂಡು ಬರುವಷ್ಟಾದರೂ ಕಾರ್ಯಕ್ಷಮತೆ ಮೂಡಬೇಕಾದರೆ ಹೊಸ ರಕ್ತದ ಸಂಚಾರ ಅವಶ್ಯವೆನಿಸುತ್ತದೆ. ಆಡಳಿತ ವಿಧಾನದ ಪರಿಣತರೂ ತಾಂತ್ರಿಕ ವಿಷಯಗಳಲ್ಲಿ ತಜ್ಞರೂ ಉದ್ದಿಮೆಗಳ ಕುರಿತಾದ ವ್ಯವಹಾರಜ್ಞರೂ ಸರಕಾರದ ಆಡಳಿತ ವರ್ಗದಲ್ಲಿ ಸೇರಬೇಕಾಗುತ್ತದೆ. ಕೇಂದ್ರ ಸರಕಾರ ನೇಮಿಸಿರುವ ಸಾರ್ವಜನಿಕ ಆಡಳಿತ ಮಂಡಳ ಇದೆಲ್ಲವನ್ನೂ ಪರಿಶೀಲಿಸಲೆಂದು ತಾವೈನುತ್ತೇನೆ.

—ಕಾರ್ತಿಕೇಯ.

THE CANARA INDUSTRIAL & BANKING SYNDICATE LTD.
Estd: 1925 H. O: UDIPI, S. India

ನಿಮ್ಮ ಹಣವು ಮಾತನಾಡಬಲ್ಲುದಾದರೆ.

ಎಲ್ಲರಂತೆ ನಿಮಗೂ ಸಂದರ್ಭಾನುಸಾರ ನಗದು ಹಣದ ಆವಶ್ಯಕತೆ ಬೀಳುವುದು. ಆ ಕಾಲಕ್ಕೆ ನೀವು ಸ್ವಲ್ಪ ಹಣವನ್ನು ಕೂಡಲೇ ಪಡೆಯಬಲ್ಲಿರಿ. ವಿನಾಕಾರಣ ಹಣವನ್ನು ಮನೆಯಲ್ಲೇ ಇರಿಸಿಕೊಳ್ಳುವುದಕ್ಕೆ ಬದಲಾಗಿ ರಾತ್ರಿ ಹಗಲೂ ಸುರಕ್ಷಿತ ಭದ್ರತೆಯಲ್ಲಿದಲೂ ನೀವು ಅಪೇಕ್ಷಿಸುವಿರಿ. ಹಣವನ್ನು ಠೇವಣಿಗಿರಿಸಲು ನೀವು ತಯಾರಿಲ್ಲವಾದರೂ ಅದಕ್ಕೆ ಬಡ್ಡಿ ಸಿಕ್ಕದಿರಾಗಬಹುದೆಂಬ ಆಪೇಕ್ಷೆ ನಿಮಗಿದೆ. ನೀವು ಸಾಲ ಪಡೆಯಲು ಸೌಕರ್ಯಗಳಿರುವ ಬೇಂಕಿನಲ್ಲಿ ನಿಮ್ಮ ಹಣವನ್ನು ಠೇವಣಿಸಿದಲೂ ನೀವ ಇಚ್ಛಿಸುವಿರಿ. ಬೇಂಕಿನಲ್ಲಿ ತೆರೆಯಲಾಗುವ ಲೆಕ್ಕವೇ ನಿಮಗೆ ಯಾವ ಕಾಲದಲ್ಲೂ ಎಲ್ಲಾ ಸೌಕರ್ಯವನ್ನು ಒದಗಿಸಬಲ್ಲುದು. ಚೆಕ್ ಕಾಣಾ ಕಟೀರಿಗಳನ್ನು ನಿಮ್ಮ ಬ್ಯಾಂಕು ಶಿಸ್ತು ರೀವಾದೇವಿ ಸೌಲಭ್ಯಗಳನ್ನು ಒದಗಿಸಬಲ್ಲುದು. ನಿಮ್ಮ ಅನುಕೂಲತೆಗಳಿಗಾಗಿ ವಿವಿಧ ಬೇಂಕಿಂಗ್ ಸೇವೆಗಳನ್ನು ಕ್ರೋಡೀಕರಿಸಿರುವಾಗಿದೆ. ಆದುದರಿಂದ ನಮ್ಮ ಬ್ಲಿಯೇ ಬೇಂಕಿಂಗ್ ವ್ಯವಹಾರವನ್ನು ಮಾಡಿ ಆಮೂಲ್ಯ ಸಮಯವನ್ನು ಉಳಿಸಿಕೊಳ್ಳಿರಿ.

ಚಲಾವಣೆ ಭಂಡವಾಳ ರೂ. ೬,೫೦,೦೦,೦೦೦

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ.

ಸ್ಥಾಪನೆ: ೧೯೨೫] [ಪ್ರಧಾನ ಕಚೇರಿ: ಉಡುಪಿ, ದ. ಭಾರತ.

ಬೀಸುವ ಗಾಳಿಯ ಆರ್ಥಿಕ ಮುಖ

ವಿದ್ಯುತ್ತಿನ ಉತ್ಪಾದನೆಗೆ ಪವನ ಶಕ್ತಿ

ನವಂಬರ ೩೬ ನುತ್ತು ೨೬ನೇ ದಿನಾಂಕಗಳಲ್ಲಿ ಹೊಸದೆಹಲಿಯಲ್ಲಿ ಪ್ರಧಾನ ಮಂತ್ರಿ ನೆಹರುಗಳ ಅಧ್ಯಕ್ಷತೆಯಲ್ಲಿ ಅಣುಶಕ್ತಿಯನ್ನು ಶಾಂತಿಕಾಲದ ಉಪ್ಪೇಶಗಳಿಗಾಗಿ ಭಾರತದಲ್ಲಿ ಬಳಸುವ ಬಗೆಯನ್ನು ಕುರಿತು ವೈಜ್ಞಾನಿಕ ಪರಿಷತ್ತು ಜರಗಿತು. ಇದರಲ್ಲಿ ಸರಕಾರದ ಪ್ರತಿನಿಧಿಗಳಲ್ಲದೆ ವೈಜ್ಞಾನಿಕ, ತಾಂತ್ರಿಕ ಹಾಗು ಔದ್ಯೋಗಿಕ ಕ್ಷೇತ್ರಗಳಲ್ಲಿ ತಜ್ಞರಾದ ಹತ್ತೈವತ್ತು ಮಂದಿ ವ್ಯಕ್ತಿಗಳು ಭಾಗವಹಿಸಿದರು. ಅಣು ಶಕ್ತಿಯನ್ನು ಜೊಕ್ಕ ರೀತಿಯಲ್ಲಿ ಉಪಯೋಗಿಸುವ ಸಮಸ್ಯೆಯ ನಾನಾ ಮುಖಗಳನ್ನು ಇವರೆಲ್ಲರೂ ಚರ್ಚಿಸಿದರು. ಆಹಾರ ಧಾನ್ಯಗಳನ್ನು ಅತ್ಯಧಿಕ ಪ್ರಮಾಣದಲ್ಲಿ ಉತ್ಪಾದಿಸುವುದಕ್ಕೂ ಆದನ್ನು ಕೆಡದಂತೆ ರಕ್ಷಿಸುವುದಕ್ಕೂ ರೋಗ ನಿದಾನ ಮಾಡಿ ತಕ್ಕ ಚಿಕಿತ್ಸೆಯನ್ನು ಕೈಗೊಳ್ಳುವುದಕ್ಕೂ ಯಂತ್ರ ಹಾಗು ಮಾಪನಗಳನ್ನು ಚಲಿಸುವಂತೆ ಮಾಡುವುದಕ್ಕೂ ಅಣುಶಕ್ತಿಯು ಇಂದು ಅತ್ಯುಪಯುಕ್ತವೆಂದು ಸಂಶೋಧನೆಗಳು ತಿಳಿಸುತ್ತವೆ. ಹಿಂದುಳಿದ ರಾಷ್ಟ್ರಗಳ ಅಭಿವೃದ್ಧಿಗೆ ಅಣುಶಕ್ತಿಯು ನೀರದಬಹುದಾದ ನೆರವನ್ನು ಮನಗಂಡೇ ಸಂಯುಕ್ತ ರಾಷ್ಟ್ರಸಂಘದಲ್ಲಿ ಕಳೆದ ವಾರ ಮಹತ್ವದ, ಸರ್ವಾನುಮತದ ಗೊತ್ತುವಳಿಯೊಂದನ್ನು ಸ್ವೀಕರಿಸಲಾಯಿತು.

ಭೂಗರ್ಭದಲ್ಲಿನ ನಿಕ್ಷೇಪದಿಂದ ಯಂತ್ರಚಾಲಕ ಶಕ್ತಿಯನ್ನು ಪಡೆಯುವ ನಮ್ಮ ಇಂದಿನ ಅಭ್ಯಾಸವು ಅನೂಚಾನವಾಗಿ ಮುಂದರಿಯಲಾರದೆಂಬ ಅಂಜಿಕೆಯೇ ಅಣುಶಕ್ತಿ ಮುಂತಾದ ಹೊಸ ಸ್ರೋತಗಳನ್ನು ಹುಡುಕುವಂತೆ ವಿಜ್ಞಾನಿಗಳನ್ನು ಪ್ರೇರಿಸಿರುತ್ತದೆ. ಅವರು ಈ ದಿಸೆಯಲ್ಲಿ ಅದ್ಭುತ ಪ್ರಯೋಗಗಳನ್ನು ನಡೆಸಿ, ಸೂರ್ಯ ಶಕ್ತಿ ಹಾಗು ವಾಯು ಬಲವನ್ನು ಅಭಿವೃದ್ಧಿ ಪ್ರಯತ್ನಗಳಿಗೆ ನೆರವಾಗುವ ರೀತಿಯಲ್ಲಿ ಉಪಯೋಗಿಸುವ ಬಗೆಯನ್ನು ಕಂಡುಕೊಳ್ಳುವಲ್ಲಿ ಸಾಕಷ್ಟು ಯಶಸ್ಸನ್ನು ಸಂಪಾದಿಸಿರುವರು. ಭಾರತದಲ್ಲಿಯೇ ಅಕ್ರೋಬರ ತಿಂಗಳ ೨೬ರಂದು ಮುಕ್ತಾಯವಾದ ವೈಜ್ಞಾನಿಕ ಪರಿಷತ್ತೊಂದು ಈ ದಿಸೆಯಲ್ಲಿ ಮುಂದಿಡಬೇಕಾದ ಹೆಜ್ಜೆಗಳನ್ನು ಪರ್ಯಾಲೋಚಿಸಿತು. ಹೈಸ್ಕೂಲುಗಳಲ್ಲಿ ಓದಿದ ಹುಡುಗರಿಗೆ ಡಾನ್ ಕ್ವಿಕ್ಸಟನೆಂಬ ಶೂರನು ತನ್ನ ಸಂಚಾರ ಕಾಲದಲ್ಲಿ ಗಾಳಿಯ ಗಿರಣಿಯೊಡನೆ ಯುದ್ಧ ಮಾಡಿದ ಕತೆಯೊಂದು ನೆನಪಿರಬಹುದು. ವಾಯುಬಲದಿಂದ ನಡೆಯುವ ಹತ್ತಾರು ಕೈಗಳ ಆ ಯಂತ್ರವನ್ನು ಕಂಡು ಕ್ವಿಕ್ಸಟನು ರಾಕ್ಷಸನೇ ಎದುರಾದನೆಂದು ಖಡ್ಗ ನೆತ್ತಿದ್ದನು.

ಯುರೋಪಿನ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದ ಮೇಲಿನ ಕತೆಯಂತೆ, ಅಲ್ಲಿ ವಾಯುಬಲವನ್ನು ನಿತ್ಯದ ಕೆಲಸಗಳಿಗಾಗಿ ಬಳಸುವ ಕ್ರಮವೂ ಲೋಕ ವಿಖ್ಯಾತವಾಗಿದೆ. ಹೊಲ್ಲೆಂಡು, ಡೆನ್ಮಾರ್ಕುಗಳಲ್ಲಿ ಕೆಲವು ಶತಕಗಳ ಸೂರ್ವದಲ್ಲಿ ನೀರನ್ನೆತ್ತುವ ಮತ್ತು ಕಾಳು ಬೀಸುವ ಯಂತ್ರಗಳನ್ನು ಸಜ್ಜಿಸ ಸಂಖ್ಯೆಯಲ್ಲಿ ಕಾಣಬಹುದಾಗಿದ್ದಿತು. ಕಳೆದ ಶತಮಾನದಲ್ಲಿ ಉಗಿಶಕ್ತಿಯಿಂದ ಕೆಲಸ ಮಾಡುವ ಯಂತ್ರಗಳನ್ನು ಸಿದ್ಧಗೊಳಿಸಿದ ತರುವಾಯ, ಇವುಗಳ ವ್ಯಾಪಬಲ್ಯ ಕೆಲಮಟ್ಟಿಗೆ ತಗ್ಗಿತು. ಆದಾಗ್ಯೂ ಜನರು ಆವುಗಳ ಉಪಯುಕ್ತತೆಯನ್ನು ಮರೆಯಲಿಲ್ಲ. ಅಣುಶಕ್ತಿಯು ಈ ಕಾಲದಲ್ಲಿ ಸಹ ವಿದ್ಯುಚ್ಛಕ್ತಿಯ ಪೂರೈಕೆಯನ್ನು ಪಡೆದಿರದ ಒಳನಾಡುಗಳಲ್ಲಿ ವಾಯುಬಲದಿಂದ ಚಲಿಸುವ ಯಂತ್ರಗಳು ಉಪಯೋಗಿಸಲ್ಪಡುತ್ತವೆ. ನಾರ್ವೆ, ಸ್ವೀಡನು, ಡೆನ್ಮಾರ್ಕು, ಹೊಲ್ಲೆಂಡುಗಳಲ್ಲಿ ಇವು ವಿಶೇಷವಾಗಿ ಕಂಡುಬರುತ್ತವೆ ಆ ನೀರಿಕದಲ್ಲಿ ಸಹ ನೀರನ್ನೆತ್ತುವ ಮೂರು ಲಕ್ಷ ಯಂತ್ರಗಳನ್ನೂ ವಿದ್ಯುತ್ತನ್ನು ಉತ್ಪಾದಿಸುವ ಐವತ್ತು ಸಾವಿರ ಕೇಂದ್ರಗಳನ್ನೂ ವಾಯುಬಲದಿಂದ ನಡೆಸಲಾಗುತ್ತದೆ.

ಪೆಟ್ರೋಲಿಣ್ಣೆ, ಕಲ್ಲಿದ್ದಲು ಮುಂತಾದ ಇಂಧನಗಳ ಅಭಾವವನ್ನು ವಾಯುಬಲವು ತುಂಬಿ ಕೊಡುವ ದಿನ ಬಹಳ ದೂರ ವಿಲ್ಲವೆಂದ ಇಷ್ಟರ ವರೆಗಿನ ಅನ್ವೇಷಣೆಗಳು ತೋರಿಸಿ ಕೊಡುತ್ತವೆ, ಹತ್ತು ಮೈಲು ಉದ್ದ ಹಾಗು ಹತ್ತು ಅಡಿ ಅಗಲದ ಆಯತ ಪ್ರದೇಶದಲ್ಲಿ ತಾಸಿಗೆ ಹದಿನೇಳು ಮೈಲಿಯ ಸಾಮಾನ್ಯ ವೇಗದಲ್ಲಿ ಬೀಸುವ ಗಾಳಿಯಲ್ಲಿ ೨೫ ಕೋಟಿ ಕಿಲೋವಾಟು ಶಕ್ತಿ ತುಂಬಿದೆಯೆಂದರೆ ನಂಬುವುದೇ ಕಷ್ಟ. ಇಷ್ಟೆಲ್ಲವನ್ನು ಅಲ್ಲವಾದರೂ ಸ್ವಲ್ಪಾಂಶವನ್ನಾದರೂ ನಾವು ವಿದ್ಯುತ್ತು ನುತ್ಪಿತರ ಯಂತ್ರಜಾಲಕ ಶಕ್ತಿಯ ರೂಪದಲ್ಲಿ ಪಡೆಯಬಲ್ಲೆವಾದರೆ ಆದರಿಂದ ದೊರಕುವ ಪುಯೋಜನದ ಪ್ರಮಾಣವನ್ನು ವರ್ಣಿಸಿ ಮುಗಿಯದು. ಲೋಕದ ಯಾವ ಕಡೆಯಲ್ಲಿಯೂ ಬೀಸುವ ಗಾಳಿಯ ಕೊರತೆ ಇರಲಾರದು. ಆಸ್ಟ್ರೇಲಿಯದ ವಿಜ್ಞಾನಿಗಳು ಕಂಡು ಹಿಡಿದ ಪ್ರಕಾರ ಬೀಸುವ ಗಾಳಿಯ ವೇಗದ ಪರಿಣಾಮವನ್ನು ಲಕ್ಷಿಸಿದರೆ, ಆದನ್ನು ಸಾಧ್ಯವಾದಷ್ಟು ವೇಗನೆ ಉಪಯೋಗಕ್ಕೆ ಒನುವು ಮಾಡಿಕೊಳ್ಳುವ ಹಂಬಲ ತೀವ್ರವಾಗುತ್ತದೆ. ಇಷ್ಟಿದ್ದರೂ ಕೆಲವು ಅಡಚಣೆಗಳನ್ನು ನಾವು ಎದುರಿಸ ಬೇಕಾಗುವುದು: ಗಾಳಿಯ ಗಿರಣಿಗಳು ಹೇಗೊ ವಾಯು ಬಲದಿಂದ ಕೆಲಸ ಮಾಡುವ ವಿದ್ಯುದುತ್ಪಾದಕ ಕೇಂದ್ರಗಳೂ ಗಾಳಿ ಬೀಸುವಾಗ ಮಾತ್ರ ಕೆಲಸ ಮಾಡಿಯಾವು; ಆವು ಇಂತಿಷ್ಟೇ ಶಕ್ತಿಯನ್ನು ಉತ್ಪಾದಿಸುವವೆಂದು ನಿಶ್ಚಿತವಾಗಿ ಹೇಳಲಾಗುವುದಿಲ್ಲ. ಗಾಳಿಯ ವೇಗವನ್ನು ಅದು ಹೊಂದಿಕೊಂಡಿದೆಯಾಗಿ ಗ್ರಾಹಕನ ಇಚ್ಛೆಯನುಸಾರ ಅದು ಉಪಯೋಗಕ್ಕೆ ಬೀಳುವುದು ಸಂಶಯ.

ಮೇಲಿನ ಅಡಚಣೆಗಳಿದ್ದಾಗ್ಯೂ ವಿಜ್ಞಾನಿಗಳು ಸಂಶೋಧನೆಯನ್ನು ಮುಂದುವರಿಸುತ್ತಿದ್ದು. ಮೂರು ಬಗೆಯ ವಿದ್ಯುದುತ್ಪಾದಕ ಯಂತ್ರಗಳನ್ನು ವಾಯು ಬಲದಿಂದ ಚಲಿಸುವ ರೀತಿಯಲ್ಲಿ ಕಟ್ಟಿರುವರು. ಸುಮಾರು ಹತ್ತು ಕಿಲೋವಾಟು ಶಕ್ತಿಯನ್ನು ಉತ್ಪಾದಿಸಬಲ್ಲ ಯಂತ್ರವು ಗ್ರಾಮಾಂತರ ಪ್ರದೇಶಗಳಲ್ಲಿ ಜನಪ್ರಿಯತೆಯನ್ನು ಪಡೆದಿರುವುದು. ದ್ವಿತೀಯ ಮಹಾಯುದ್ಧಕಾಲದಲ್ಲಿ ಇಂಧನ ಪದಾರ್ಥಗಳ ಅಭಾವ ತೀವ್ರವಾದಾಗ, ಡೆನ್ಮಾರ್ಕುದೇಶವು ಸುಮಾರು ೧೦೦ ಕಿಲೋವಾಟು ಶಕ್ತಿಯನ್ನು ಕೊಡಬಲ್ಲ ಗಾಳಿಯಂತ್ರಗಳನ್ನು ಸೃಷ್ಟಿಸಿತು. ರಷಿಯದ ಯೂಲ್ಟಾದಲ್ಲಿ ೧೯೩೧ರಷ್ಟು ಹಿಂದೆಯೇ ಇಂಥ ಯಂತ್ರವನ್ನು ನೆಲೆಗೊಳಿಸಿದ್ದರು. ಈಗ ಅವರು ೬೦೦೦೦ ಕಿಲೋವಾಟು ಶಕ್ತಿಯನ್ನು ಉತ್ಪಾದಿಸಬಲ್ಲ ಹೊಸ ಯಂತ್ರವನ್ನು ಕಟ್ಟುತ್ತಿರುವರೆಂದು ತಿಳಿದು ಬರುತ್ತದೆ. ಅಮೇರಿಕದಲ್ಲಿಯೂ ಫ್ರಾನ್ಸಿನಲ್ಲಿಯೂ ದ್ರುತಗತಿಯಲ್ಲಿ ಸರ್ವೇಕ್ಷಣೆ ನಡೆಸಲ್ಪಡುತ್ತವೆ; ಮತ್ತು ಹೊಸ ಕೇಂದ್ರಗಳು ತೆರೆಯಲ್ಪಡುತ್ತವೆ. ಬ್ರಿಟನಿನಲ್ಲಿ ಕರಾವಳಿ ಪ್ರದೇಶಗಳಲ್ಲಿ ವರ್ಷವಿಡೀ ಗಾಳಿ ಬೀಸುವುದರಿಂದ ಈ ಕುರಿತು ಅಭ್ಯಾಸಗಳು ನಡೆಸಲ್ಪಡುತ್ತಿವೆ.

ನಮ್ಮ ದೇಶದಲ್ಲಿ ಕೇಂದ್ರ ಜಲ ಹಾಗು ವಿದ್ಯುಚ್ಛಕ್ತಿ ಮಂಡಳಿಯು ಪ್ರಾಸ್ತಾವಿಕ ಅಧ್ಯಯನವನ್ನು ನಡೆಸಿರುವುದು. ವೈಜ್ಞಾನಿಕ ಹಾಗು ಔದ್ಯೋಗಿಕ ಸಂಶೋಧನಾ ಮಂಡಳಿಯು ಒಂದು ಉಪಸಮಿತಿಯನ್ನು ನೇಮಿಸಿ, ವಾಯು ಬಲವನ್ನು ನಮ್ಮ ಹಳ್ಳಿಗಳಲ್ಲಿ ಹೇಗೆ ಉಪಯೋಗಿಸಬಹುದೆಂದು ಸರ್ವೇಯನ್ನು ಪ್ರಾರಂಭಿಸಿರುವುದು. ವಿದ್ಯುಚ್ಛಕ್ತಿ ಹಾಗು ಯಂತ್ರಜಾಲಕ ಶಕ್ತಿ ಇನ್ನೊಂದೂ ರೂಪದಲ್ಲಿ ವಾಯು ಬಲವನ್ನು ಬಳಸಲಾಗುವ ಬಗೆಯನ್ನೆದು ವಿಮರ್ಶಿಸುತ್ತದೆ. ಇಷ್ಟರ ವರೆಗೆ ನಡೆಸಿದ ಪ್ರಯತ್ನಗಳು ನೀರೆತ್ತುವ ಕಾಳು ಬೀಸುವ ಮುಂತಾದ ಸಾಮಾನ್ಯ ಕೆಲಸಗಳಿಗೆಷ್ಟೇ ಅಲ್ಲ, ಅದಕ್ಕೂ ಕಠಿಣವಾದ ಕಾರ್ಯಗಳಿಗೂ ವಾಯುಬಲವನ್ನು ಉಪಯೋಗಿಸ ಬಹುದೆಂದು ತೋರಿಸಿರುತ್ತವೆ. ಮುಂದಿನ ಹೆಜ್ಜೆ ಇಡುವುದಕ್ಕೆ ಮುಂಚೆಕೆಲವು ಆಯ್ದ ಪ್ರದೇಶಗಳಲ್ಲಿ ಬೀಸುವಗಾಳಿಯ ನೇಗ ಮತ್ತು ಗತಿಯ ನಿಶ್ಚಿತ ಜ್ಞಾನವನ್ನು ಪಡೆಯುವುದು ಇಷ್ಟವೆಂದು ಹೇಳಲಾಗುತ್ತಿದೆ. ವ್ಯಾಪಕವಾದ ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕೆ ಮುಂಚೆ ಆರ್ಥಿಕ, ಔದ್ಯೋಗಿಕ ಹಾಗು ತಾಂತ್ರಿಕ ಅಂಶಗಳನ್ನು ಪರಿಶೀಲಿಸುವುದೂ ಆವೇಕ್ಷಣೀಯ.



ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಪೆಡಿಕೇಟಿಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. ೩—೪—೦
ಸಣ್ಣ ಬಾಟ್ಲಿಗೆ ರೂ. ೨—೦—೦

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ZANDU'S THREE GEMS of AYURVEDIC MEDICINES

ಝಂಡೂರವರ ಮಕರಧ್ವಜ ಪಿಲ್ಸ್ (ಸುವರ್ಣ ಮಿಶ್ರಿತ)
ದೀರ್ಘಾವಧಿಯ ಕೆಮ್ಮು, ನರಗಳ ನಿಸ್ತ್ರಾಣ ಮತ್ತು ಸರ್ವಸಾಮಾನ್ಯ ಆರಕ್ತತೆ ಹಾಗೂ ಇತರ ಎದೆಯ ಬೇನೆಗಳಿಗೆ ಅತ್ಯಧಿಕ ಗುಣಕಾರಿ. ಬೆಲೆ: 1 ತೊಲೆಗೆ ರೂ. ೨—೦—೦

ಝಂಡೂರವರ ವಸಂತ ಕುಸುಮಾಕರ ರಸ—ಸೂತ್ರಾತಿಸಾರ.
ಸಿಹಿಮೂತ್ರ, ನಿಸ್ಸತ್ವ ಇತ್ಯಾದಿ ಬಹುಕಾಲದ ಮೂತ್ರ ದೋಷಗಳಿಗೆ ಡಾಕ್ಟರುಗಳಿಂದ ವಿಶಿಷ್ಟ ತರದಲ್ಲಿ ಶಿಫಾರಸು ಮಾಡಲ್ಪಟ್ಟಿದೆ. ಬೆಲೆ: ಕಾಲು ತೊಲೆಗೆ ರೂ. ೪—೦—೦.

ಝಂಡೂರವರ ಸುವರ್ಣ ಮಿಶ್ರಿತ ಚ್ಯವನಪ್ರಾಶ—
ಸರ್ವರಿಗೂ ರುಚಿಕರವಾದ ಟಾನಿಕ್ ಆಹಾರ. ಬಂಗಾರ ಮತ್ತು ಇತರ ಭಸ್ಮಗಳ ಸಮ್ಮಿಶ್ರಣ ವಿರುವುದರಿಂದ ಶೀತ, ಕಫ, ಕೆಮ್ಮುವಿಗೆ ಅತ್ಯಂತ ಪರಿಣಾಮಕಾರಿ.
ಬೆಲೆ: 1 ರಾತ್ರಿಗೆ ರೂ. ೭—೮—೦. ಕಾಲು ರಾತ್ರಿಗೆ ರೂ. ೨—೦—೦.

ಝಂಡೂರವರ ಔಷಧಿಗಳು ದ.ಕ.ಜಿಲ್ಲೆಯ ಅಧಿಕೃತ ಏಜೆಂಟರಲ್ಲಿ ದೊರೆಯುವುವು

ಕ್ಯಾಟಲಾಗಿಗೆ ಕೆಳಗಿನ ಸೋಲ್ ಏಜಂಟರಿಗೆ ಬರೆಯಿರಿ.

DAMODAR & CO.,
113 Nainiappa Naicken Street, P. T.-MADRAS-3.

ನ್ಯಾಯವಾದ ಗೇಣಿ ನಿರ್ಣಯ ಕ್ರಮ

ಜಿಲ್ಲೆಯ ಒಕ್ಕಲುಗಳ ಸ್ವರಕ್ಕೆ ಮಹತ್ವ ಹೆಚ್ಚಲಿ

ಮದ್ರಾಸು ಸರಕಾರದವರು ಹೋದ ೬ನವಂ ತಿಂಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಕ್ಕಲೆಬ್ಬಿಸುವುದನ್ನು ತಡೆಗಟ್ಟಲು ಶಾಸನ ಬದ್ಧಕ್ರಮವೊಂದನ್ನು ಕೈಗೊಂಡರು. ಅದರಂತೆ, ಜಾಲ್ತಿಗೇಣಿಯನ್ನು ಶಾಸನವು ಜ್ಯಾರಿಗೆ ಬಂದ ಒಂದು ತಿಂಗಳೊಳಗಾಗಿ ಪಾವತಿ ಮಾಡಿದ ಯಾವ ಒಕ್ಕಲನ್ನೂ ಒಂದು ವರ್ಷದ ಪರಿಗೆ ಭೂಮಿಯಿಂದ ಬಿಡಿಸಬಾರದೆಂದಾಯಿತು. ಶಾಸನ ಸಭೆಯು ನಮ್ಮ ಪ್ರತಿನಿಧಿಗಳೆಲ್ಲರೂ ಇದನ್ನು ಹೃತ್ಪೂರ್ವಕ ಸ್ವಾಗತಿಸಿ, ಬೆಂಬಲಿಸಿದರು. ರೈತರಾದರೂ ತಮ್ಮ ಹಲವು ಬೇಡಿಕೆಗಳಲ್ಲಿ ಒಂದಾದರೂ ಪೂರೈಸಿದ್ದಕ್ಕೆ ತೃಪ್ತರಾದರು. ಈ ಶಾಸನದ ಅವಧಿ ಮುಗಿಯುವುದಕ್ಕೆ ಮುಂಜೆವ್ಯಾಪಕವಾದ ಇನ್ನೊಂದು ಶಾಸನವನ್ನು ಮಾಡಿ, ಒಕ್ಕಲುಗಳ ಹಕ್ಕು ಬಾಧ್ಯತೆಗೆ ತಕ್ಕ ಮನ್ನಣೆ ಕೊಡುವ ಕ್ರಮವನ್ನು ಕೈಗೊಳ್ಳುವುದಾಗಿ ಆಗ ಕಂದಾಯ ಮಂತ್ರಿಗಳಾಗಿದ್ದ ಶ್ರೀ ಮೊಣಿಕ್ಯವೇಲು ನಾಯ್ಕರರು ಭರವಸೆ ಕೊಟ್ಟುದರಿಂದ ಉಗ್ರ ಚಳವಳವನ್ನು ಮುಂದಕ್ಕೂ ನಡೆಸುವುದು ಬೇಡವೆಂಬ ಅಭಿಪ್ರಾಯ ಸಾಮಾನ್ಯವಾಗಿ ಜನರಲ್ಲಿ ಮೂಡಿತು.

ಇಷ್ಟರಲ್ಲಿಯೇ ಅವಧಿ ಮುಗಿಯಲಿರುವ ಒಕ್ಕಲೆಬ್ಬಿಸುವುದನ್ನು ತಡೆಗಟ್ಟುವ ಶಾಸನದ ಸ್ಥಾನದಲ್ಲಿ ಸರಕಾರ ಶಾಶ್ವತವಾದ ಒಕ್ಕಲು ಹಿತ ಮಸೂದೆಯನ್ನು ಈ ತಿಂಗಳಲ್ಲಿ ಜರಗುವ ಶಾಸನ ಸಭೆಯ ಅಧಿವೇಶನದಲ್ಲಿ ಮಂಡಿಸುವುದೆಂದು ತಿಳಿದು ಬರುತ್ತದೆ. ಮದ್ರಾಸು ರಾಜ್ಯದಲ್ಲಿ ಭೂಸುಧಾರಣೆಯ ರೂಪರೇಷೆಗಳನ್ನು ಕೊನೆಯದಾಗಿ ನಿರ್ಣಯಿಸುವುದರಲ್ಲಿ ತಮಿಳು ನಾಡು ಪ್ರದೇಶ ಕಾಂಗ್ರೆಸಿನ ಉಪಸಮಿತಿಯೊಂದು ತತ್ಪರವಾಗಿದೆಯೆಂದೂ ಅದರ ಸಿಫಾರಸುಗಳು ಬರುವ ವರೆಗೆ ವ್ಯಾಪಕವಾದ ಶಾಸನ ಕ್ರಮಗಳೇನನ್ನೂ ಕೈಗೊಳ್ಳುವುದಿಲ್ಲವೆಂದೂ ಮುಖ್ಯ ಮಂತ್ರಿ ಶ್ರೀ ಕಾಮರಾಜ ನಾಡರರು ಈಚೆಗೆ ಹೇಳಿದಾಗ, ನಮ್ಮ ಜಿಲ್ಲೆಯ ರೈತರು ನಿರಾಶರಾಗಿದ್ದರು. ಆದರೆ, ಮುಖ್ಯ ಮಂತ್ರಿಗಳ ಮಾತು ದಕ್ಷಿಣ ಕನ್ನಡ ಜಿಲ್ಲೆಯ ಒಕ್ಕಲು ಹಿತ ಮಸೂದೆಗೆ ಸಂಬಂಧಿಸಿಲ್ಲವೆಂದು ಹಿಂದಿನಿಂದ ಕೆಲವರು ಸ್ಪಷ್ಟೀಕರಣವನ್ನು ಕೊಟ್ಟರು. ಆದುದರಿಂದ ಮುಂಬರುವ ಒಕ್ಕಲುಹಿತ ಮಸೂದೆಯ ಸ್ವರೂಪವನ್ನು ಕುರಿತು ನಮ್ಮ ಆಸ್ಥೆ ಮರಳಿ ಜಾಗೃತವಾಗಿರುವುದು ಸಹಜ.

ಕೆಲವು ವಿಶ್ವಸನೀಯ ಮೂಲಗಳಿಂದ ತಿಳಿದುಬಂದ ಪ್ರಕಾರ, ಒಕ್ಕಲುಹಿತ ಮಸೂದೆಯಲ್ಲಿ ನ್ಯಾಯವಾದ ಗೇಣಿ ಎಂಬ ಶಬ್ದದ ಅರ್ಥವು ಉತ್ಪಾದನೆಯಲ್ಲಿ ಬೇಸಾಯದ ಕರ್ಚನ್ನು ಕಳೆದು ಉಳಿದುದರ ಅರ್ಧವೆಂದು ಕೊಡಲಾಗಿರುವುದು. ಸಾಮಾನ್ಯವಾಗಿ ಉತ್ಪಾದನೆಯಲ್ಲಿ ನೂರರಲ್ಲಿ ಒಂದು ಪಾಲು ಬೇಸಾಯದ ಕರ್ಚು ಎಂದು ಇಟ್ಟುಕೊಂಡರೆ, ಮೂರರಲ್ಲಿ ಒಂದಂಶ ಧನಿಗೆ ಗೇಣಿಯಾಗಿ ಸಲ್ಲಬೇಕಾಗುವುದು. ಆದರೆ ಮಸೂದೆಯ ಕರಡಿನಲ್ಲಿ ಬೇಸಾಯದ ಕರ್ಚನ್ನು ನಿರ್ಧರಿಸುವ ಕ್ರಮವು ಹೇಗೆ ವಿಚರಿಸಲ್ಪಟ್ಟಿದೆಯೋ ತಿಳಿದುಬಂದಿಲ್ಲ. ಆ ವಿವರಣೆಯ ಸ್ವರೂಪವನ್ನು ನೋಡಿದೆ ನಾವು ಗೇಣಿ ನಿರ್ಣಯವು ನ್ಯಾಯವಾಗಿದೆಯೋ ಅಧಿಕ ಅಥವಾ ಕಡಿಮೆಯೋ ಎಂದು ಹೇಳುವುದು ಸರಿಯಾಗಲಾರದು. ಬೇಸಾಯದ ಕರ್ಚಿನಲ್ಲಿ ಯಾವ್ಯಾವ ಅಂಶಗಳನ್ನು ಲೆಕ್ಕಕ್ಕೆ ಹಿಡಿದುಕೊಳ್ಳಲಾಗುವುದೆಂಬುದನ್ನು ತಿಳಿಯುತ್ತ ಒಕ್ಕಲುಗಳಬ್ಬರೂ ನ್ಯಾಯವಾದ ಗೇಣಿಗೆ ಬದ್ಧರಾಗಿರುವಂತೆ ನೋಡಿಕೊಳ್ಳುವವರು ಯಾರೆಂಬುದೂ ತಿಳಿಯಬೇಕಾದದ್ದು ಮುಖ್ಯವಾದ ವಿಚಾರ. ಒಟ್ಟು ಉತ್ಪಾದನೆಯ ಅಂದಾಜನ್ನು ಮಾಡುವವರು ಯಾರು ಮತ್ತು ಹೇಗೆ ಎಂಬ ಅಂಶವನ್ನೂ ಇಲ್ಲಿ ವಿಚಾರಿಸ ಬೇಕಾಗುತ್ತದೆ.

ತೆಂಗಿನ ಮರವೊಂದರ ವರ್ಷಕ್ಕೆ ೫೦ ತೆಂಗಿನ ಕಾಯಿಗಳು, ಅಡಿಕೆ ಮರವೊಂದರ ವರ್ಷಕ್ಕೆ ೩೦ ಅಡಿಕೆ ಗೇಣಿಯಾಗಿ ಕೊಡಲ್ಪಡಬೇಕೆಂಬ ಮಸೂದೆಯಲ್ಲಿರುವುದಾಗಿ ಕೇಳುತ್ತೇವೆ. ಇದು ಬಹಳ ಹೆಚ್ಚಿನ ಗೇಣಿಯೆನಾಯಿಂದು ಈಗಾಗಲೇ ಆಕ್ಷೇಪಗಳು ಬಂದಿರುತ್ತವೆ. ಗೇಣಿಯ ಈ ಪ್ರಮಾಣವನ್ನು ಗಣನೀಯವಾಗಿ ತಗ್ಗಿಸಬೇಕೆಂಬ ಬಗ್ಗೆ ರೈತರಿಂದ ಒತ್ತಾಯ ಬರುತ್ತಿದ್ದು, ಮುಖ್ಯ ಮಂತ್ರಿನಾಡರರ ವರೆಗೆ ಮನವಿಗಳು ಹೋಗಿವೆಯೆಂದೂ ತಿಳಿಯುತ್ತೇವೆ. ರೈತರ ಹೇಳಿಕೆಗಳ ಪ್ರಕಾರ, ವೆಲಿನವರ ಕಾಲಂರವನ್ನು ಗೇಣಿಯಾಗಿ ನಿರ್ಣಯಿಸಿದರೆ ಒದು ನ್ಯಾಯವಾಗಬೇಕಿತ್ತು. ಇಲ್ಲಿ ಸಹ, ಮರಗಳನ್ನು ಲೆಕ್ಕಕ್ಕೆ ಹಿಡಿದು ಕೊಳ್ಳುವ ಕ್ರಮದ ಕುರಿತು ವಿವರಗಳು ಸ್ಪಷ್ಟವಾಗಿ ತಿಳಿದು ಬರಬೇಕಾದದ್ದು ಆ ಪೇಕ್ಷಣೀಯ. ಎಷ್ಟೋ ತೆಂಗಿನ ಮರಗಳು ಉದ್ದವಾಗಿ ಬೆಳೆದಿದ್ದರೂ ಕಾಯಿ ಗಳನ್ನು ಕೊಡದಿರಬಹುದು; ಕೆಲವು ಮರಗಳು ಕಾಯಿಗಳನ್ನು ಕೊಡುವಷ್ಟು

(೧೦ನೇ ಪುಟ ನೋಡಿರಿ)

THE CANARA MUTUAL ASSURANCE COMPANY, LTD.,
Managing Director: T. R. A. PAI
Head Office: **UDIPI**, S. INDIA.] [Estd: 1935
ಅತ್ಯುತ್ತಮ ಬೋನಸ್
ಲಾಭಸಹಿತ ಪೋಲಿಸಿಗಳಿಗೆ ವಿಮಾ ಪೊಬಲಿಗಿಸ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ
ರೂ. 18/- ಹೋಲ್ ಲೈಫ್ ಎಶ್ಯೂರೆನ್ಸಿಗೆ
ರೂ. 15/- ಎಂಡೋಮೆಂಟ್ ಎಶ್ಯೂರೆನ್ಸಿಗೆ
31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.
ಕಂಪೆನಿಯ ಸೊತ್ತುಗಳ ಮೊತ್ತವು ಒಂದು ಕೋಟಿ ರೂಪಾಯಿಗಳನ್ನು ಮೀರಿರುತ್ತದೆ.
ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಸ್ಥಾಪನೆ: ೧೯೩೫. [ಸ್ಥಾನ ಕಾರ್ಯಾಲಯ: ಉಡುಪಿ, ದ. ಭಾರತ.]
ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಪಡೆದ ಕಂಪೆನಿ.
CHIEF AGENTS:
THE COMMERCIAL CORPORATION OF INDIA, LTD.,
UDIPI, S. India

ನಂಬಿಕೆಗೆ ಅರ್ಹತೆ!
ಅತ್ಯುತ್ತಮ ಟಾಯಲೆಟ್ ಸಾಬೂನಿನಲ್ಲಿ ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ ಅವೆಲ್ಲಾ
ಮೈಸೂರು ಸ್ಯಾಂಡಲ್ ಸೋಪಿನಲ್ಲಿ
ಇರುವವು ಎಂದು ಖಚಿತವಾಗಿ ಹೇಳುತ್ತೇವೆ.
* * *
— ಎಲ್ಲಾ ಕಡೆಗಳಲ್ಲೂ ದೊರಕುವುದು —
ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ
ಬೆಂಗಳೂರು.
Member: I. S. T. M. A.

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಬಾಲ ಸುಧ

ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣದಾಗುವಿಕೆ, ಜಿಲ್ಲ್ ಬೆಳೆಯುವುದು, ಈ ಎಲ್ಲಾ ವ್ಯಾಧಿಗಳಿಗೆ ನಿಜಾಯುಧವಾಗಿದೆ. ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಬೀಳಬಹುದು. ಈ ಔಷಧಕ್ಕೆ ಮಿತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವದಲ್ಲದೆ ಸೇವೆಯಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿ ಹೋಗುವ ೫೦ ಸಾಶ್ಚೆಗಳ ಸೀಸೆ ೧ ಕ್ಕೆ ರೂ. 1—0—0.

ನಮ್ಮ ಸ್ವಾಟಕೆಸ್ಟರು:
(1) ಸುದರ್ಶನ ಆಯುರ್ವೇದ ವೈದ್ಯಶಾಲಾ—ಬೆಂಗಳೂರು 2.
(2) ಪಾ ಕಂಪನಿ—ಮಂಗಳೂರು 1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

THE JUPITER GENERAL INSURANCE CO., LTD.
ದಿ ಜುಪಿಟರ್ ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.
1919ರಲ್ಲಿ ಸ್ಥಾಪಿತ] [ಪ್ರಧಾನ ಕಾರ್ಯಾಲಯ. ಬೇಂಕ್ ಸ್ಟ್ರೀಟ್, ಬೊಂಬಾಯಿ 1.
ಸಮರ್ಪಕ ಸೇವೆ ಮತ್ತು ಸುಭದ್ರತೆಯನ್ನು ಕೊಡುತ್ತದೆ.
ತೆತ್ತ ಪಾಲು ಬಂಡವಾಳ ... ರೂ. 23,74,800
ಒಟ್ಟು ಆಸ್ತಿ ಬಾಬುಗಳು ... (ಮುಕ್ಕಿದ) ರೂ. 3,50,53,478
ಯಾರ್ಜಿತವಿರುವ ವಿಮಾವ್ಯವಹಾರ ... ,, ರೂ. 7,50,00,000
1953ರಲ್ಲಿ ಶೂರಾನಾಗ ವಿಮಾವ್ಯವಹಾರ .. ,, ರೂ. 1,06,00,000
ಜೀನ, ಜೀಪು, ಲಾರಿಯಾಕ, ನೋಟಾರ್, ಮಾಯುಯಾನ, ಸ್ಕೃಷ್ಟಿಗತ ಕಾಯಿಲೆ, ಆಕಸ್ಮಿಕ ಘಟನೆ, ಕಳ್ಳಾಕಾರ ಪಾಲಾಗುವಿಕೆ, ವ್ಯಾಪಾರದಂತುಗಳು ಇತ್ಯಾದಿ ಸಂಬಂಧಗಳಲ್ಲಿ ವಿಮೆ ಇಳಿಸಲಾಗುವುದು ಹೆಂಡಾಸ್ಥಾನ, ನಾಕ್ಸ್ಥಾನ, ಬಡಾ. ಸಿತೋಷ್, ಪ್ರೆಟಿಷ್ ಪೂರ್ವ ಆಫ್ರಿಕ ಮತ್ತು ಪರದೇಶಗಳಲ್ಲಿ ಶಾಖೆಗಳೂ ಏಜನ್ಸಿಗಳೂ ಇವೆ.
ತಾ ೫೧—೧೦೧೨ ಜೀವನವೂ ಪ್ರಮಿಯಂ ಪರಿಮಿತಿಯನ್ನು ಸಮೃದ್ಧಿಯಾಗಿ ಇಳಿಸಲಾಗಿದೆ ಎಂಬುದನ್ನು ಸಾರ್ವಜನಿಕರಿಗೆ ತಿಳಿಸಲು ತುಂಬಾ ಸಂತೋಷಪಡುತ್ತೇವೆ.
ಹೆಚ್ಚಿನ ಮಾಹಿತಿಗೂ ಪ್ರಾತಿನಿಧ್ಯಕ್ಕೂ ಬರೆಯಿರಿ:—
ಶ್ರೀ. ಎಸ್.ಎ. ಜೆನ್ಸ್, ಸುಪರಿಂಟೆಂಡೆಂಟ್ ಆಫ್ ಏಜನ್ಸೀಸ್,
ದಿ ಜುಪಿಟರ್ ಜನರಲ್ ಇನ್ಶೂರೆನ್ಸ್ ಕೊ. ಲಿಮಿಟೆಡ್, ಶಿವಮೊಗ್ಗ (ಪಶ್ಚಿಮ ಕನ್ನಡ).

ಪ್ರಜಾಸಮಾಜವಾದಿಗಳ ನಾಗಪುರ ಪರಿಷತ್ತು

ಕಮ್ಯುನಿಸ್ಟರ ಕುಹಕದ ಮೇಲೆ ಜಯಸೂರ್ಯರ ಪ್ರಕಾಶ

ಪ್ರಜಾಸಮಾಜವಾದಿ ಪಕ್ಷದಲ್ಲಿ ಉಂಟಾಗಿದ್ದ ತೀವ್ರಬಿಕ್ಕಟ್ಟನ್ನು ಪರಿಹರಿಸಲು ಆಚಾರ್ಯ ನರೇಂದ್ರದೇವರು ಬಹಳವಾಗಿ ಪ್ರಯತ್ನಿಸಿದರೂ ಅವರು ಯಶಸ್ಸು ಪಡೆಯಲಾರದಾದರು. ತಿರುವಾಂಕೂರು-ಕೊಚ್ಚಿ ರಾಜ್ಯದಲ್ಲಿ ಪಟ್ಟಂತಾನು ಪಿಳ್ಳೈಯವರ ಪ್ರಸವಾ ಸರಕಾರವು ಗೋಳಿಬಾರು ಮಾಡಿದ ವಿಷಯದಲ್ಲಿ ಲೋಹಿಯಾ ಗುಂಪಿನವರ ಮನವೊಲಿಸುವುದು ಕೊನೆಗೂ ಸಾಧ್ಯವಾಗಲಿಲ್ಲ. ಹೀಗಾಗಿ ನಾಗಪುರದಲ್ಲಿ ಐನೂರಕ್ಕೂಹೆಚ್ಚುಮಂದಿ ಪ್ರತಿನಿಧಿಗಳು ಬಂದಿದ್ದ ಪ್ರಜಾಸಮಾಜವಾದಿಗಳ ಪರಿಷತ್ತು ಪ್ರಾರಂಭವಾದಾಗ ಪ್ರಕ್ಷುಬ್ಧಪರಿಸ್ಥಿತಿಯೇ ಕಂಡುಬಂತು. ಪದ್ಧತಿಯಂತೆ ಪಕ್ಷದ ಅಧ್ಯಕ್ಷ ಆಚಾರ್ಯ ಕೃಪಲಾನಿಯವರು ಆಗ್ರಾ ಸನ್ನಿವನ್ನು ವಹಿಸಿದ್ದರು. ಅವರ ಭಾಷಣ ಹಾಗು ಬೇರೆ ಮಾತುಗಳಿಂದ ತಮ್ಮ ಬಗೆಗೆ ಪಕ್ಷವು ತೋರಿಸುತ್ತಿರುವ ತಿರಸ್ಕಾರ ಹಾಗೂ ಪಕ್ಷದ ಪ್ರತಿಷ್ಠೆಗೆ ಧಕ್ಕೆ ತಗಲಿಸುವಂಥ ಮತಭೇದ ಇವು ಅವರ ಮನಸ್ಸನ್ನು ನೋಯಿಸಿವೆಯೆಂಬುದು ಸ್ಪಷ್ಟವಾಯಿತು.

ಕೃಪಲಾನಿಯವರ ಭಾಷಣ

ತಮ್ಮ ಪಕ್ಷವು ರಾಷ್ಟ್ರಸೇವೆಯಲ್ಲಿ ತೊಡಗಬೇಕೋ ಅಥವಾ ಪರಸ್ಪರ ಕಲಹದಲ್ಲಿ ಎಲ್ಲ ಉತ್ಸಾಹವನ್ನೂ ವ್ಯರ್ಥಗೊಳಿಸಬೇಕೋ ಎಂಬ ಪ್ರಶ್ನೆಯನ್ನು ಅವರು ಪ್ರತಿನಿಧಿಗಳ ಮುಂದೆ ಮಂಡಿಸಿದರು. ಈಗ ಕೂಡಲೇ ಬಿಡಿಸಲ್ಪಡಬೇಕಾದ ಅನೇಕ ವ್ಯಾವಹಾರಿಕ ಸಮಸ್ಯೆಗಳ ಪರಿಚಯವನ್ನು ಅವರು ಸಭಿಕರಿಗೆ ಮಾಡಿಸಿಕೊಟ್ಟರು—ಆಂಧ್ರದಲ್ಲಿ ಚುನಾವಣೆ ನಡೆಯಲಿದೆಯಲ್ಲದೆ ಬೇರೆ ರಾಜ್ಯಗಳ ಶಾಸನ ಸಭೆ ಮತ್ತು ಸಂಸತ್ತುಗಳಿಗೂ ಉಪಚುನಾವಣೆಗಳು ಇಷ್ಟರಲ್ಲಿಯೇ ಜರಗುತ್ತವೆ. ಇವುಗಳಲ್ಲಿ ತಮ್ಮ ಪಕ್ಷವು ವಹಿಸತಕ್ಕ ಪಾತ್ರವನ್ನು ನಿರ್ಧರಿಸುವುದು ಆಗತ್ಯವಿದೆ; ಈ ಕಾಲದಲ್ಲಿ ಕರ್ತವ್ಯಚ್ಯುತರಾಗುವುದೆಂದರೆ ಪಕ್ಷನನ್ನೆ ನಂಬಿ ಕುಳಿತ ಜನತೆಯ ವಿಭಾಗಕ್ಕೆ ದ್ರೋಹಮಾಡಿದಂತೆಯೇ ಆಗುತ್ತದೆ. ದೇಶದ ಬಡತನ ಹಾಗು ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸುವುದಕ್ಕೂ ಆರ್ಥಿಕ ಹಾಗು ಸಾಮಾಜಿಕ ವಿಷಮತೆಯನ್ನು ದೂರೀಕರಿಸುವುದಕ್ಕೂ ಪಕ್ಷವು ಸಾಕಷ್ಟು ಪ್ರಯತ್ನಿಸಿಸೆ ಅಂತಃಕಲಹದಲ್ಲಿಯೇ ಪ್ರತಿನಿಧಿಗಳು ಮುಳುಗಿದರೆ ಜನತೆಯು ಕಮ್ಯುನಿಸ್ಟರ ಹಾಗು ಇತರ ಉಗ್ರವಾದಿಗಳ ಪಲ್ಲವಿಗೆ ಮಾರುಹೋದೀತು ಎಂದವರು ಎಚ್ಚರಿಸಿದರು.

ಪಶ್ಚಾಸದ ಪ್ರಶ್ನೆ

ಪರಿಷತ್ತಿನಲ್ಲಿ ತಿರುವಾಂಕೂರು - ಕೊಚ್ಚಿಯಲ್ಲಿ ನಡೆಸಲಾದ ಗೋಳೀಬಾರಿನ ಪ್ರಶ್ನೆಯೇ ಮುಖ್ಯವಾಗಿದ್ದಿತು. ಹೊಸದೆಹಲಿಯಲ್ಲಿ ಸೇರಿದ್ದ ಪಕ್ಷದ ರಾಷ್ಟ್ರೀಯ ಸಮಿತಿಯು ತಾನು ಪಿಳ್ಳೈಯವರ ಸರಕಾರ ಗೊಳೀಬಾರು ನಡೆಸಿದ್ದಕ್ಕೆ ಜನತೆಯ ಕ್ಷಮೆಯನ್ನು ಯಾಚಿಸಿ, ಈ ಬಗ್ಗೆ ನಿಷ್ಪಕ್ಷಪಾತ ವಿಚಾರಣೆ ನಡೆಸಬೇಕೆಂದು ಸೂಚಿಸಿದ್ದಿತು. ಸರಕಾರ ರಾಜೀನಾಮೆ ಕೊಡಬೇಕು—ಎಂಬ ಲೋಹಿಯರ ವಾದವನ್ನು ಅದು ಪುರಸ್ಕರಿಸಿರಲಿಲ್ಲ. ಇದರಿಂದ ಮತ ಭೇದ ಉಂಟಾಗಿ, ಲೋಹಿಯಾ, ಮಧು ಲಿಮಯೆ ಮುಂತಾದವರು ರಾಷ್ಟ್ರೀಯ ಸಮಿತಿಗೆ ರಾಜೀ ನಾಮೆಯನ್ನು ಒಪ್ಪಿಸಿದ್ದರು. ಪಕ್ಷದ ಒಡಕಿಗೆ ಮೂಲ ಕಾರಣವೇ ಗೋಳೀಬಾರಿನ ಪ್ರಕರಣವಾಗಿದ್ದುದರಿಂದ ರಾಷ್ಟ್ರೀಯ ಸಮಿತಿಯ ಹೊಸದೆಹಲಿಯ ನಿರ್ಣಯವನ್ನು ಎತ್ತಿ ಹಿಡಿಯುವ ಗೊತ್ತುವಳಿಯೊಂದನ್ನು ಪರಿಷತ್ತಿನಲ್ಲಿ ಮಂಡಿಸಲಾಯಿತು. ಇದಕ್ಕೆ ಐವತ್ತು ತಿದ್ದುಪಡಿಗಳು ಮಂಡಿಸಲ್ಪಟ್ಟರೂ ಆಧ್ಯಕ್ಷರು ತಾನು ಪಿಳ್ಳೈಯವರ ಮಂತ್ರಿ ಮಂಡಳ ರಾಜೀನಾಮೆ ಸಲ್ಲಿಸಲೆಂಬ ಲೋಹಿಯರ ತಿದ್ದುಪಡಿಗೆ ಮಾತ್ರ ಅನುಮತಿ ಕೊಟ್ಟರು. ಇದರ ಮೇಲಿನ ಮತದಾನವನ್ನು ವಿಶ್ವಾಸದ ಪ್ರಶ್ನೆಯಾಗಿ ಪರಿಗಣಿಸುವುದಾಗಿಯೂ ಅವರು ಸೂಚಿಸಿದರು.

ಲೋಹಿಯರ ನಿಲುಮೆ

ತಿದ್ದುಪಡಿಯನ್ನು ವಿರೋಧಿಸಿ, ಮೂಲ ಗೊತ್ತುವಳಿಯನ್ನು ಪುರಸ್ಕರಿಸಿದವರು ತಿರು ಕೊಚ್ಚಿಯ ಪ್ರಜಾ ಸಮಾಜವಾದಿ ಮಂತ್ರಿ ಮಂಡಲವು ರಾಜಿನಾಮೆ ಸಲ್ಲಿಸಿದರೆ, ಆದರ ಪರಿಣಾಮವು ರಾಷ್ಟ್ರದ ಮೇಲೆ ಹೇಗಾದೀತೆಂಬ ಅಂಶವನ್ನು ನಿರ್ವಿಕಾರ ಚಿತ್ತದಿಂದ ವಿಮರ್ಶಿಸಬೇಕು ಎಂದು ಸ್ಮರಿಸಿದ್ದಿಗಳನ್ನು ವಿನಂತಿಸಿದರು. ಮಂತ್ರಿಮಂಡಲದ ಕೀರ್ತಿ ಪಕ್ಷದ ಗೌರವ ಹಾಗು ವ್ಯಕ್ತಿಗತವಾಗಿ ತನ್ನ ಪ್ರತಿಷ್ಠೆಯ ಸಂಗತಿಯನ್ನು ರಾಜೀನಾಮೆಯ ಬೇಡಿಕೆಯೊಂದಿಗೆ ತೂಗಿ ನೋಡಬೇಕೆಂದು ತಾನು ಪಿಳ್ಳೈ ನಿವೇದಿಸಿದರು. ಜಯಪ್ರಕಾಶ ನಾರಾಯಣರು ತಪ್ಪು ಭಾಷಣದಲ್ಲಿ ಪಕ್ಷದ ಪ್ರತಿಷ್ಠೆಗೆ ಕುಂದಾಗುವಂತೆ ನಡೆಯುಬಾರದೆಂದು ಕೋರಿದರು. ಲೋಹಿಯರು ತಮ್ಮ ನಿಲುಮೆಯನ್ನು ಹೀಗೆ ವಿವರಿಸಿದರು—ನಾನು ನನ್ನ ತತ್ವಗಳಿಗಾಗಿ ಹೋರಾಡುತಿದ್ದೇನೆ. ಕ್ರಾಂತಿ ಅಥವಾ ಜನತೆಯಿಂದ ಕೊಲೆ ಹಿಂಸೆಗಳು ನಡೆದ ಹೊರತು ಉಳಿದ ಪ್ರಸಂಗಗಳಲ್ಲಿ ಗೋಳಿಬಾರು ನಡೆಸಬಾರದು. ಜನಾಭಿಪ್ರಾಯವನ್ನು ಹತ್ತಿಕ್ಕಲು ಗೋಳಿಬಾರು ನಡೆಸುವುದು ಎಷ್ಟಕ್ಕೂ ಸರಿಯಲ್ಲ. ಆದುದರಿಂದ ಮುಂತ್ರಿ ಮಂಡಳವು ರಾಜಿನಾಮೆಯನ್ನು ಸಲ್ಲಿಸಬೇಕು. ಇದನ್ನು ಕೇವಲ ಶಿಕ್ಷೆಯ ರೂಪದಲ್ಲಿಯಷ್ಟೇ ಅಲ್ಲ ಪ್ರಜಾ ಸಮಾಜವಾದಿಗಳ ಚರಿತ್ರೆವನ್ನು ಉಜ್ವಲವಾಗಿಸಲೂಆಗತ್ಯವೆಂದು ಭಾವಿಸಬೇಕು.

ಕಾರ್ಯಸಮಿತಿಯ ರಾಜಿನಾಮೆ

ಒಟ್ಟು ಏಳು ತಾಸುಗಳ ಚರ್ಚೆಗಳಲ್ಲಿ ಇಪ್ಪತ್ತು ಮಂದಿ ಭಾಗವಹಿಸಿದ್ದರು. ತೀವ್ರಚರ್ಚೆಯ ಬಳಿಕ ತಿದ್ದುಪಡಿಯನ್ನು ಮತಕ್ಕೆ ಹಾಕಲಾಯಿತು ಇದಕ್ಕೆ ೩೧೭ ವಿರುದ್ಧ ೩೦೩ ಮತಗಳು ಬಿದ್ದು ಲೋಹಿಯರ ಗುಂಪು ಪರಾಭವವನ್ನು ಹೊಂದಿತು. ಹೀಗೆ ಗೆದ್ದುಬಂದ ಆಚಾರ್ಯ ಕೃಪಲಾನಿಯವರು ಪಕ್ಷದ ರಾಷ್ಟ್ರೀಯ ಸಮಿತಿಯ ರಾಜೀನಾಮೆಯನ್ನು ಪೂರ್ವ ನಿಶ್ಚಯದಂತೆ ಪರಿಷತ್ತಿಗೆ ಸಲ್ಲಿಸಿದರು. ತಿರುವಾಂಕೂರು ಕೊಚ್ಚಿಯಲ್ಲಿ ಗೋಳೀಬಾರು ನಡೆಸಿದ ಸ್ಪಕರಣಕ್ಕೂ ಇದಕ್ಕೂ ಎಳ್ಳಷ್ಟು ಸಂಬಂಧವಿಲ್ಲವೆಂದು ಅವರು ಸ್ಪಷ್ಟೀಕರಿಸಿದರು. ಆಧ್ಯಕ್ಷನಿಗೆ ತೋರಿಸಲ್ಪಡಬೇಕಾದ ಆದರವನ್ನೂ ಸೌಜನ್ಯವನ್ನೂ ಪಕ್ಷದ ಸದಸ್ಯರು ಪ್ರಕಟಿಸುತ್ತಿಲ್ಲವಾದುದರಿಂದ ತಾವು ಅಧ್ಯಕ್ಷನ ಹೊಣೆಗಾರಿಕೆಯನ್ನು ನಿರ್ವಹಿಸಲು ಅಶಕ್ತರಾಯಿತೆಂದು ಅವರು ತಿಳಿಸಿದರು. ಅಶೋಕಮೆಹತಾರವರು ಹಿಂದಿನಿಂದ ರಾಜೀನಾಮೆಯ ಕುರಿತು ವಿಶೇಷ ಬೆಳಕನ್ನು ಜೆಲ್ಲುತ್ತ, ಅಲಕಾಬಾದಿನಲ್ಲಿ ಪರಸ್ಪರತಿಳಿವಳಿಕೆಯ ವಾತಾವರಣದಲ್ಲಿ ರಾಷ್ಟ್ರೀಯ ಸಮಿತಿಯನ್ನು ರಚಿಸಲಾಗಿದ್ದಿತು. ಆದರೆ ಮತಭೇದದ ಮೂಲಕ ಲೋಹಿಯರ ಗುಂಪು ರಾಜೀನಾಮೆ ಕೊಟ್ಟಿದ್ದರಿಂದ ಈ ಸಮಿತಿ ಸಮರ್ಥವಾಗಿ ಕೆಲಸಮಾಡಲಾರದಾಯಿತೆಂದರು.

ಅಧಿವೇಶನದ ಸಮಾರೋಪ

ಪರಿಷತ್ತು ಮುಕ್ತಾಯಗೊಳ್ಳುವ ಮುಂಚೆ ಹೊಸ ಅಧ್ಯಕ್ಷನನ್ನು ಆರಿಸುವ ಕಾರ್ಯಕ್ರಮವನ್ನು ಜರಗಿಸಲಾಯಿತು. ಭಾರತದಲ್ಲಿ ಸಮಾಜವಾದಿ ಚಳವಳದ ಮೂಲ ಪ್ರವರ್ತಕರಲ್ಲಿ ಅಗ್ರಗಣ್ಯರಾದ ಆಚಾರ್ಯ ನರೇಂದ್ರ ದೇವರನ್ನು ಈ ಹುದ್ದೆಗೆ ಒಡಂಬಡಿಸುವುದಕ್ಕೋಸ್ಕರ ಸಂಧಾನದ ಮಾತುಕತೆ ನಡೆಯಿತು. ಪ್ರತಿನಿಧಿಗಳೆಲ್ಲರೂ ಆಚಾರ್ಯ ನರೇಂದ್ರ ದೇವರ ಧೀರೋದಾತ್ತತ್ವವನ್ನು ಸ್ವಾಗತಿಸಿದರು. ಇವರಿಗೆ ಲೋಹಿಯ ಗುಂಪಿನ ಸಹಕಾರ ದೊರಕುವ ಭರವಸೆ ಇದೆಯಾಗಿ ಹೇಳಲಾಗಿರುವುದು. ನರೇಂದ್ರದೇವರು ಮುಕ್ತಾಯ ಭಾಷಣದಲ್ಲಿ ತಾನು ಶಿಸ್ತಿಗೆ ಅತ್ಯಧಿಕ ಮಹತ್ವ ಕೊಡುವೆನೆಂದೂ ವ್ಯಕ್ತಿಯ ವೈಷಮ್ಯ ಮತ್ತು ತಾತ್ವಿಕ ಭಿನ್ನಾಭಿಪ್ರಾಯಗಳನ್ನು ಪಕ್ಷದ ಪ್ರತಿಷ್ಠೆಯನ್ನು ಕೆಡಿಸಲು ಉಪಯೋಗಿಸಬಾರದೆಂದೂ ಹೇಳಿದರು. ಪರಸ್ಪರ ಚರ್ಚೆ ನಡೆಸುವುದರಿಂದ ಪಕ್ಷದ ಬೆಳವಣಿಗೆಯಾಗುವುದಾದರೆ ದೋಷವಿಲ್ಲ—ಆದರೆ ಅದು ಅತಂಕವಾಗಿ ಪರಿಣಮಿಸಿದರೆ ಮಾತ್ರ ಏನು ಕೆಲಸವೂ ಸಾಧಿಸಲಾರದು ಎಂದವರು ಸಾರಿದರು. ರಾಷ್ಟ್ರೀಯ ಕಾರ್ಯಸಮಿತಿಯನ್ನು ಇವರು ಇಪ್ಪರೆಲ್ಲೇ ರಚಿಸುವರು.

ಕಮ್ಯುನಿಸ್ಟರ ತಂತ್ರ

ಹೈದರಾಬಾದಿನಲ್ಲಿ ಕಮ್ಯುನಿಸ್ಟ್ ನಿಯಂತ್ರಿತ ಜನತಾ ಪ್ರಜಾಪ್ರಭುತ್ವ ರಂಗದ ನಾಯಕರಾಗಿದ್ದ ಡಾ॥ ಜಯಸೂರ್ಯರು ಇದೀಗ ಪಕ್ಷದಿಂದ ಹೊರಗೆ ಬಂದಿದ್ದು, ಒಂದು ಸುದೀರ್ಘ ಪ್ರಕಟಣೆಯಲ್ಲಿ ಕಮ್ಯುನಿಸ್ಟರ ಕುಟಿಲ ಕಾರಸ್ಥಾನದ ಮೇಲೆ ವಿಶೇಷವಾದ ಬೆಳಕನ್ನು ಚೆಲ್ಲಿದರು. ಕಮ್ಯುನಿಸ್ಟರು ಸೇರಿದ ಯಾವ ಸಂಯುಕ್ತರಂಗವೂ ಯಶಸ್ವಿಯಾಗಲಾರದು ಏಕೆಂದರೆ ಇವರು ಮಿತ್ರರಿಗೆ ವಚನ ಕೊಟ್ಟಂತೆ ನಡೆದು ಕೊಳ್ಳುವುದಿಲ್ಲ; ಅಧಿಕಾರದ ಕಳವು ಮಾಡುವುದಕ್ಕಾಗಿಯೇ ಸ್ನೇಹದ ನಟನೆ ಮಾಡುವರಾಗಲಿ, ಪ್ರಾಮಾಣಿಕತೆಯ ಲವಲೇಶವೂ ಕಮ್ಯುನಿಸ್ಟರಲ್ಲಿಲ್ಲ ಭಾರತಕ್ಕೂ ಚೀನ-ರಷಿಯಗಳಿಗೂ ಸಂಬಂಧ ; ಬಿಗಿಯಾಗುವುದಕ್ಕೆ ಜವಾಹರಲಾಲ ನೆಹರುಗಳ ಮೇಧಾವಿತನವೂ ಚಾರಿತ್ರಿಕ ಶಕ್ತಿಯೂ ಕಾರಣವಲ್ಲದೆ, ಕಮ್ಯುನಿಸ್ಟ್ ಪಕ್ಷದವರಲ್ಲ. ಇವರು ಮಾವೋರನ್ನು ಪ್ರತಿಗಾಮಿಯೆಂದು ಕರೆದಿದ್ದರು; ಮಾವೋ ಚೀನದ ವಿಮೋಚನೆಯನ್ನು ಮಾಡಿದ ಬಳಿಕ ತಮ್ಮ ತಪ್ಪನ್ನು ಇಲ್ಲಿಯ ಕಮ್ಯುನಿಸ್ಟರು ತಿದ್ದಿಕೊಂಡು, ಹೊಗಳಿ ಪತ್ರಿಕೆ ತಂದರು. ಶಾಖಿದಾಸನನ್ನು ಸಾಮ್ರಾಜ್ಯಶಾಹಿಗಳ ಕೈಗೂಸೆಂದು ಜರೆದ ಕಮ್ಯುನಿಸ್ಟರು ರಷಿಯದಲ್ಲಿ ಆವನ ಕೃತಿಗಳ ಅನುವಾದವಾಗುವುದನ್ನೂ ಸ್ತುತಿಪರನೆಂದು ಅಲ್ಲಿಯವರು ಹೊಗಳುವುದನ್ನೂ ಕೇಳಿ ತಾವು ಆ ದಾರಿಯನ್ನು ಅನುಸರಿಸಿದರು. ಇಲ್ಲಿಯ ಕಮ್ಯುನಿಸ್ಟರ ಕೀಳು ಪ್ರಚಾರದ ದೆಸೆಯಿಂದ ರಷಿಯ-ಚೀನಗಳಿಗೆ ಲಾಭಕ್ಕಿಂತಲೂ ಹಾನಿಯೇ ಹೆಚ್ಚು ಎಂದನರ ಅಭಿಪ್ರಾಯ.

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policy-holders and Representatives At whatever stage we welcome your association with the POPULAR.

THE
POPULAR INSURANCE CO.,LTD.
"POPULAR BUILDINGS" **MANGALORE-1**

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಿಟೇಲಾಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಕಂಜೆ ವ್ಯಾಸಾಚಾರ್ಯರ
ಪಾತ್ರೆ ಭಂಡಾರ,
ರಥಬೀದಿ ಉಡುಪಿ.

ಚಂದಾಹಣವನ್ನು ಕ್ರಮವಾಗಿ ಸಲಾಯಿಸುತಿದ್ದ ನಮ್ಮ ಮುಂಬಯಿಯ ಹಲವು ಚಂದಾದಾರ ಬಂಧುಗಳು ಇತ್ತೀಚೆಗೆ ಕುಂಬ ಬಾಕಿ ಮಾಡಿಕೊಂಡಿರುತ್ತಾರೆ. ಆಂಧವರು ಇನ್ನಾದರೂ ತಮ್ಮ ಬಾಕಿಯನ್ನು ದಯಮಾಡಿ ಕಳುಹಿಸಿ ಕೊಟ್ಟು ಸಹಕರಿಸುವಂತೆ ವಿಶೇಷತಃ ವಿಜ್ಞಾಪನೆ ಮಾಡಿಕೊಳ್ಳುತ್ತೇವೆ.

ಸಂ. ನ.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೪	ಉಡುಪಿ ೨-೧೨-'೫೪ಶಿ	ಸಂಚಿಕೆ ೧೪

ಅದ್ಭುತ ಶಕ್ತಿ ಸ್ತೋತ್ರ

ಅಂತಾರಾಷ್ಟ್ರೀಯ ರಾಜಕೀಯ ವಲಯಕ್ಕೂ ಭಾರತದ ಆರ್ಥಿಕ ಅಭಿವೃದ್ಧಿಗೂ ಶುಭಕರವಾದ ಘಟನೆಗಳನ್ನು ಕಾಣುವಂತಾದದ್ದು ಕಳೆದ ವಾರದ ವಿಶೇಷಗಳಲ್ಲಿ ಉಲ್ಲೇಖನೀಯ. ದ್ವಿತೀಯ ಮಹಾ ಯುದ್ಧದ ಬಳಿಕ ಅದ್ಭುತ ಶಕ್ತಿ ಸ್ತೋತವೆಂದು ಪರಿಗಣಿಸಲಾಗಿರುವ ಅಣು ವಿಜ್ಞಾನದ ಕುರಿತು ಸಂಯುಕ್ತ ರಾಷ್ಟ್ರ ಸಂಘದಲ್ಲಿಯೂ ಭಾರತದಲ್ಲಿಯೂ ಚರ್ಚೆಗಳು ನಡೆದು, ಶಾಂತಿ ಕಾಲದಲ್ಲಿ ಈ ಶಕ್ತಿಯನ್ನು ಯಶಸ್ವಿಯಾಗಿ ಉಪಯೋಗಿಸಲಾಗುವಂತೆ ಯೋಜನೆಗಳನ್ನು ಕೈಗೊಳ್ಳುವುದಕ್ಕೆ ಅಡಿಪಾಯವನ್ನು ಹಾಕಲಾಯಿತು. ಹೊಸದೆಹಲಿಯಲ್ಲಿ ಪ್ರಧಾನ ಮಂತ್ರಿ ನೆಹರುಗಳ ಅಧ್ಯಕ್ಷತೆಯಲ್ಲಿ ವೈಜ್ಞಾನಿಕ ಪರಿಷತ್ತೊಂದು ನೆರೆಯಿಸಲ್ಪಟ್ಟು, ಅಣು-ಶಕ್ತಿಯ ರಚನಾತ್ಮಕ ಉಪಯೋಗಕ್ಕೆ ಸಂಬಂಧಿಸಿದ ಅನೇಕ ವಿಷಯಗಳ ಮೇಲೆ ತಜ್ಞರಿಂದ ಉಪನ್ಯಾಸಗಳನ್ನು ಕೊಡಿಸಲಾಯಿತು. ಪರಿಷತ್ತನ್ನು ಉದ್ಘಾಟಿಸಿದ ಪ್ರಧಾನ ಮಂತ್ರಿಗಳು ಈ ಕ್ಷೇತ್ರದಲ್ಲಿ ಭಾರತವು ಈಗಾಗಲೇ ಸಾಕಷ್ಟು ಪ್ರಗತಿಯನ್ನು ಸಾಧಿಸಿರುವುದಾಗಿ ಅಭಿಮಾನದಿಂದ ಹೇಳಿದರು. ನಮ್ಮ ತರುಣಜನಾಂಗದ ಮೇಧಾವಿತನದ ಮೇಲೆ ಅವರು ಅತಿ ಹೆಚ್ಚಿನ ಭರವಸೆಯನ್ನು ಇಟ್ಟಿರುವಂತೆ ಕಂಡುಬಂತು. ಜಲಜನಕ ಬಾಂಬುಗಳಂಥ ವಿಧ್ವಂಸಕ ಶಸ್ತ್ರಗಳ ತಯಾರಿಕೆಗೋಸ್ಕರ ಭಾರತವು ಆತುರವನ್ನು ವ್ಯಕ್ತ ಪಡಿಸುತ್ತಿಲ್ಲವೆಂಬ ಹೇಳಬೇಕೆಂದರೆ ನೆಹರುಗಳು, ವಿಧ್ವಂಸಕ ಕೃತ್ಯಗಳಿಗಾಗಿ, ಅಣು ಸಮರಕ್ಕಾಗಿ, ಈ ಅದ್ಭುತ ಶಕ್ತಿ ಸ್ತೋತವನ್ನು ಸೂರೆಗೊಳ್ಳಬೇಕೆಂಬ ವಿಚಾರವನ್ನು ಕಟುವಾಗಿ ಟೀಕಿಸಿದರು. ಅವರೆ ವೈಜ್ಞಾನಿಕ ಕ್ಷೇತ್ರದಲ್ಲಿ ಮನವ್ಯನ ಪ್ರತಿಭೆಯೇ ಪ್ರಗತಿಯ ಸಾಧನವಾಗಿದೆಎಂಬ ಅಂಶವನ್ನು ಯಾರೂ ಪ್ರತಿಭಟಿಸಬಾರದು. ನೆಹರುಗಳು ನಮ್ಮ ವಿಜ್ಞಾನಿಗಳನ್ನುಂಟೆ ತಮ್ಮ ಪ್ರತಿಭೆಯನ್ನು ರಚನಾತ್ಮಕ ಕಾರ್ಯಗಳಿಗಾಗಿ ವಿನಿಯೋಗಿಸ ಬೇಕೆಂಬ ಉನ್ನತವಾದ ಆದರ್ಶವನ್ನು ಮಂಡಿಸಿದರು. ಅವರ ಪ್ರತಿಯೊಂದು ಮಾತುಭಾರತದಬೆಳವಣಿಗೆಯ ಬಗೆಗೆ, ಭಾರತೀಯ ವಿಜ್ಞಾನಿಗಳ ಪರಿಶ್ರಮಪೂರ್ವಕವಾದ ದುಡಿಮೆಯ ಬಗೆಗೆ ಶ್ರದ್ಧಾಂಜಲಿಯನ್ನು ಅರ್ಪಿಸುವಂತಿದ್ದಿತೆಂದರೆ ಅತಿಶಯೋಕ್ತಿಯಾಗದು. ನಮ್ಮ ವಿಜ್ಞಾನಿಗಳು ಇದಕ್ಕೆ ತಕ್ಕ ಹಕ್ಕುದಾರರೆಂಬುದರಲ್ಲಿ ನಮಗಾವ ಸಂದೇಹವೂ ಇಲ್ಲ—ಈಗಾಗಲೇ ವಿಶ್ವಕಿರಣದಂಥ ವಿಷಯದ ಕುರಿತು ನಮ್ಮಲ್ಲಿ ಪ್ರಶಂಸಾರ್ಹವಾದ ಸಂಶೋಧನೆಗಳು ನಡೆದಿರುತ್ತವೆ. ಅಣುವಿಜ್ಞಾನದಲ್ಲೂ ನಾವು ಧೈರ್ಯಂ ಎಂಬ ಧಾತು ವಿಶೇಷವನ್ನು ಉಪಯೋಗಿಸಿ ಗಣನೀಯವಾದ ಮುನ್ನಡೆಯನ್ನು ಸಾಧಿಸಿದ್ದೇವೆ. ನಮ್ಮದೇ ದಾರಿಯಲ್ಲಿ ವೈಜ್ಞಾನಿಕ ಪ್ರಯೋಗಗಳನ್ನು ನಡೆಸಿ, ಎಷ್ಟೋ ನಿಗೂಢ ತತ್ವಗಳನ್ನು ಕಂಡು ಹಿಡಿದಿದ್ದೇವೆ; ಅವುಗಳ ಆಧಾರದ ಮೇಲೆ ಇನ್ನಷ್ಟೋ ವಿಷಯಗಳ ಸತ್ಯದ ಅನುಸಂಧಾನದಲ್ಲಿ ನಾವು ಮಗ್ನರಾಗಿದ್ದೇವೆ. ನಮ್ಮ ರಾಷ್ಟ್ರೀಯ ಪ್ರಯೋಗಶಾಲೆಗಳೂ ಅಣುವಿಜ್ಞಾನ ಮಂಡಳವೂ ಅತ್ಯಂತ ತತ್ಪರತೆಯಿಂದ ಕಾರ್ಯವನ್ನು ನಿರ್ವಹಿಸಿಕೊಂಡು ಹೋಗುತ್ತಿವೆ ಅಣು ವಿಜ್ಞಾನದ ಬೆಳವಣಿಗೆಯ ಬಗ್ಗೆ ನಾವು ವೆಚ್ಚ ಮಾಡಿದ ಹಣವು ಅಮೇಲಿಕ ಮುಂತಾದುವುಗಳ ಪ್ರಮಾಣಕ್ಕಿಂತ ತುಂಬ ಕಡಿಮೆಯಾಗಿರುವುದು ನಿಜ. ಆದರೆ ಕೇಂದ್ರ ಸರಕಾರದ ಹಣಕಾಸಿನ ವಿಭಾಗವು ಅಣು ವಿಜ್ಞಾನ ಮಂಡಳದ ಕಾರ್ಯಕಲಾಪಗಳಿಗೆ ಮುಕ್ತ ಹಸ್ತದಿಂದ ಧನ ಸಹಾಯ ಮಾಡುವುದಕ್ಕೆ ಕಪ್ಪಿಲ್ಲ. ಡಾ. ಭಾಭಾರಂಥ ಪ್ರಭೃತಿಗಳು ಅಣುವಿಜ್ಞಾನದ ಪ್ರಯೋಜನವನ್ನು ಕಡಿಮೆ ಕರ್ಚಿನಲ್ಲಿ ಪಡೆಯಲು ಉಪಾಯಗಳನ್ನು ಯೋಚಿಸುತ್ತಿರುವುದೂ ಹೆಮ್ಮೆಯ ವಿಷಯ. ಸರಕಾರದವರು ಇಷ್ಟರಲ್ಲಿಯೇ ಭಾಕ್ರಾನಾಂಗಲದ ಬಳಿ ಫಲವರ್ಧಕ ಗೊಬ್ಬರದ ಕಾರ್ಖಾನೆಯೊಂದನ್ನು ಕಟ್ಟಲಿದ್ದು ಇಲ್ಲಿ ಅಣುವಿಜ್ಞಾನದ ಪ್ರಗತಿಗೆ ಉಪಯುಕ್ತವಾದ ಭಾರವಾದ ನೀರನ್ನು ಉಪವಸ್ತುವಾಗಿ ಏನೂ ಕರ್ಚಿಲ್ಲದೆ ಉತ್ಪಾದಿಸಲಾಗುವುದು. ಈಬಗೆಯ ಸುಲಭಪದ್ಧತಿಯಿಂದ ನಾವು ದ್ರುತಗತಿಯಿಂದ ಮುಂದರಿವ ದೇಶಗಳ ಪೈಪ್ಪು ಹತ್ತಿ ನಡೆಯಬಹುದು ಸಾಧ್ಯವಾದೀತು. ಮುಂದುನುರಿದ ದೇಶಗಳಾದರೂ ಹಿಂದುಳಿದ ರಾಷ್ಟ್ರಗಳಿಗೆ ನೆರವಾಗುವ ಮನೋಭಾವನೆಯನ್ನು ತೋರಿಸಿವೆಯೆಂಬುದಕ್ಕೆ ರಾಷ್ಟ್ರ ಸಂಘದಲ್ಲಿ ಅನೇಕ ನಿದರ್ಶನಗಳು ದೊರೆಕಿರುತ್ತವೆ. ಭಾರತದ ಮಟ್ಟಿಗೆ ಹೇಳುವುದಾದರೆ ಫ್ರಾನ್ಸು, ಅಮೇರಿಕ, ಬ್ರಿಟನ್ನು, ನಾರ್ವೆ ಮುಂತಾದ ದೇಶಗಳಲ್ಲಿ ನಮ್ಮಲ್ಲಿಯ ವಿಜ್ಞಾನಿಗಳು ಅಣುವಿಷಯದ ಸಂಶೋಧನೆಗಳಲ್ಲಿ ಪರಿಣಿತರಾಗುತ್ತಿರುವರು. ಅಲ್ಲಿಂದ ಮರಳಿದ ಬಳಿಕ ಭಾರತದ ಅವಶ್ಯಕತೆಯನ್ನೂ ಇಲ್ಲಿಯ ಪರಿಸ್ಥಿತಿಯನ್ನೂ ಅಭ್ಯಸಿಸಿ ಯೋಗ್ಯ ರೀತಿಯಲ್ಲಿ ಅಣುಶಕ್ತಿಯ ಲಾಭವನ್ನು ಜನರಿಗೆ ಇವರು ಒದಗಿಸಿ ಕೊಡುವರು. ರಾಷ್ಟ್ರ ಸಂಘದಲ್ಲಿ ಅಣುಶಕ್ತಿ ಮಂಡಳವನ್ನು ಹೇಗೆ ರಚಿಸಬೇಕು ಮತ್ತು ಯಾವ ರೀತಿಯ ಕಾರ್ಯ ಕಲಾಪಗಳಿಂದ ಹಿಂದುಳಿದ ರಾಷ್ಟ್ರಗಳ ಅಭಿವೃದ್ಧಿಯನ್ನು ಹೆದು ಸಾಧಿಸಬಹುದು ಎಂಬ ವಿವರಗಳನ್ನು ತೀರ್ಮಾನಿಸುವ ಪ್ರಯತ್ನ ನಡೆದಿರುವುದು. ಮುಖ್ಯವಾಗಿ ಅಣುಶಕ್ತಿಯ ಗುತ್ತಿಗೆ ಪಡೆದ ರಾಷ್ಟ್ರಗಳ ಪೆದರಿಕೆಯಿಂದ ಯಾರೂ ಭಯಗೊಳ್ಳದಂತೆ ನೋದುವುದಕ್ಕೆ ಮಹತ್ವ ಕೊಡಲಾಗಿರುವುದು. ಶಾಂತಿ ಕಾಲದ ಉಪಯೋಗಕ್ಕೋಸ್ಕರ ಅಣುಶಕ್ತಿಯನ್ನು ಬಳಸುವ ಮಂಡಳದ ಪ್ರಯತ್ನದಲ್ಲಿ ಭಾರತವ ವಾಣಿಯನ್ನು ಸದಾ ಕಾಲ ಕಿವಿಗೊಟ್ಟು ಕೇಳಲಾಗುವುದು ನಿಶ್ಚಯ. ನಮ್ಮ ವಿಜ್ಞಾನಿಗಳು ಇಮ್ಮ ಪ್ರತಿಭೆಯನ್ನು ಚೆನ್ನಾಗಿ ವ್ಯಕ್ತಗೊಳಿಸಿದ ಪಕ್ಷದಲ್ಲಿ ಭಾರತದ ವಾಣಿಯ ತೂಕ ಹೆಚ್ಚುವುದೂ ಖಂಡಿತ. ಈ ದಿಸೆಯಲ್ಲಿ ನಾವು ಮುಂದಡಿ ಇಟ್ಟು ಯಶಸ್ಸನ್ನು ಸಂಪಾದಿಸುವುದು ಅಪೇಕ್ಷಣೀಯ.

ಹಿಂದು ವಿವಾಹ ವಿಧೇಯಕ

ಪರಿಶೀಲಕ ಸಮಿತಿಯ ಸಿಫಾರಸುಗಳು

ರಾಜ್ಯಸಭೆಯ ಅಧಿವೇಶನವು ಇದೇ ೨೫ನೇ ದಿನಾಂಕ ಸೇರಿತು. ಅಂದು ದಿವಂಗತ ಕಿಡ್ವಾಯಿಯವರ ಗುಣಕಥನವನ್ನು ಮಾಡಿ, ಶ್ರದ್ಧಾಂಜಲಿಯನ್ನು ಆರ್ಪಿಸಿ, ಸಭೆಯನ್ನು ಮುಂದುವರಿಸಲಾಯಿತು. ಮರುದಿನದಿಂದ ಅದು ತನ್ನ ವ್ಯವಹಾರದಲ್ಲಿ ತೊಡಗಿತು. ಅಂದು ಹಿಂದು ವಿವಾಹ ಮತ್ತು ದಾಂಪತ್ಯ ವಿಚ್ಛೇದನ ಮಸೂದೆಯ ಕುರಿತು ಪರಿಶೀಲಕ ಸಮಿತಿಯವರು ಮಾಡಿದ ವರದಿಯನ್ನು ಸಮಿತಿಯ ಅಧ್ಯಕ್ಷರಾದ ಶ್ರೀ ಪಿ. ವಿ. ಕಾಣೆಯವರು ರಾಜ್ಯಸಭೆಗೆ ಒಪ್ಪಿಸಿದರು. ಇದರಲ್ಲಿ ಮೂಲ ಮಸೂದೆಗೆ ಹಲವು ತಿದ್ದುಪಡಿಗಳನ್ನು ಮಾಡಲಾಗಿರುವುದು ವಿವಾಹ ಯೋಗ್ಯ ಹುಡುಗ—ಹುಡುಗಿಯರ ವಯಸ್ಸನ್ನು ೨೧ ಹಾಗೂ ೧೮ ಎಂದು ನಿರ್ಧರಿಸಲಾಗಿರುವುದೂ ಬಾಲಕರ ಅನುಮತಿ ಇಲ್ಲದೆ ಆಸ್ತಿಯುದ್ದ ಹೆಣ್ಣನ್ನು ಮದುವೆಯಾಗ ಬಾರದೆಂದು ಹೇಳಿರುವುದೂ ಇವುಗಳಲ್ಲಿ ಉಲ್ಲೇಖನೀಯ. ಸಮಿತಿಯವರು ನಿಷಿದ್ಧ ಸಂಬಂಧದ ವ್ಯಾಖ್ಯೆಯನ್ನು ವಿಸ್ತರಿಸಿರುವರು; ವಿಚ್ಛೇದನವನ್ನು ಆದಷ್ಟು ವಿಳಂಬವಾಗಿಡಲು, ಆದರೆ ಯೋಗ್ಯ ಸಂದರ್ಭಗಳಲ್ಲಿ ಆದು ಸಿಗುವಂತೆಮಾಡಲು ಅನುವು ಕಲ್ಪಿಸಿರುವರು. ಸ್ವತಂತ್ರ ಉತ್ಪನ್ನವಿಲ್ಲದ ಗಂಡನು ಶ್ರೀಮಂತ ಹೆಂಡತಿಯಿಂದ ಬಿಡುಗಡೆ ಪೊಂದಿದರೆ, ಆಕೆ ಆತನಿಗೆ ಅಶನಾರ್ಥ ಕೊಡಬೇಕೆಂಬ ವಿಶೇಷ ಸಿಫಾರಸನ್ನೂ ಪರವಿಯಲ್ಲಿ ಕಾಣುತ್ತೇವೆ. ವರದಿಗೆ ಹದಿನೇಳು ಸದಸ್ಯರು ಭಿನ್ನಾಭಿಪ್ರಾಯದ ಟಿಪ್ಪಣಿ ಜೋಡಿಸಿರುವರು.

ರೈತನಿಗೆ ಯೋಗ್ಯ ಪ್ರತಿಫಲ ದೊರೆಯುವಂತೆ ಕಾರ್ಖಾನೆಯು ಸಾಮಗ್ರಿಗಳ ಬೆಲೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ನ್ಯಾಯವಸಾಯೋತ್ಪನ್ನಗಳ ಕನಿಷ್ಠ ಬೆಲೆಯನ್ನು ನಿರ್ಧರಿಸಬೇಕೆಂಬ ಬಾಸಗಿ ಗೊತ್ತುವಳಿಯೊಂದು ರಾಜ್ಯ ಸಭೆಯಲ್ಲಿ ಚರ್ಚಿಸಲ್ಪಟ್ಟಿತು. ಇಲ್ಲಿಯ ಉದ್ದೇಶವನ್ನು ಹೆಚ್ಚಿನ ಸದಸ್ಯರು ಮೆಚ್ಚಿಕೊಂಡರು. ಬೆಲೆಯು ಇಳಿಯುತ್ತಿರುವುದರಿಂದ ರೈತರಿಗೆ ಆಗುತ್ತಿರುವ ತೊಂದರೆಗಳನ್ನೂ ಸದಸ್ಯರು ಪ್ರಸ್ತಾಪಿಸಿದರು. ಆದರೆ ಸರಕಾರದ ಪರವಾಗಿ ಇದನ್ನು ವಿರೋಧಿಸಲಾಯಿತು. ಉತ್ಪಾದನಾ ವೆಚ್ಚದ ನಿಶ್ಚಿತ ಅಂದಾಜನ್ನು ಮಾಡಿಕೊಳ್ಳದೆ ಕನಿಷ್ಠ ಬೆಲೆ ನಿಗದಿ ಮಾಡುವುದು ಕಷ್ಟವೆಂಬ ಮಾತ್ತು ಗೊತ್ತುವಳಿ ಸೂಚಿಸಿದ ಮುಂಚಿತ ರಚನೆ ಅವ್ಯವಹಾರ್ಯವೆಂಬ ಕಾರಣಗಳನ್ನು ಸರಕಾರದವರು ಕೊಟ್ಟರು. ಮತದಾನದಲ್ಲಿ ಗೊತ್ತುವಳಿ ಬಿದ್ದು ಹೋಯಿತು.

ಬಳಿಕ ಆಂಧ್ರ ರಾಜ್ಯದಲ್ಲಿ ರಾಷ್ಟ್ರಾಧ್ಯಕ್ಷರ ಅಳ್ವಿಕೆಯ ಕ್ರಮದ ಜಾರಿ ನಡೆದಿರುವುದಾಗಲೂ ಸರಕಾರವೇಗದ್ದಿತು.

ಲೋಕ ಸಭೆಯಲ್ಲಿ ಪ್ರತಿ ಬಂಧಕ ಸ್ಥಾನ ಬದ್ಧತೆಯ ಕಾಯಿದೆಗೆ ಇನ್ನೂ ಮೂರು ವರ್ಷಗಳವರೆಗೆ ಜೀವದಾನ ಮಾಡಬೇಕೆಂಬ ಗೃಹ ಮಂತ್ರಿಗಳ ವಿಧೇಯಕವು ಮಂಡಿಸಲ್ಪಟ್ಟಿದ್ದು, ಅದಕ್ಕೆ ಪ್ರಾರಂಭದಲ್ಲೇ ವಿರೋಧ ವ್ಯಕ್ತನಾಯಿತು. ಪ್ರತಿ ಪಕ್ಷಗಳು ಅದನ್ನು ಪ್ರತಿ ಪಂತದಲ್ಲೂ ಪ್ರತಿಭಟಿಸುವ ನಿಶ್ಚಯಗೈದಿರುವಂತೆ ತೋರುತ್ತದೆ ಕ್ರಿಮಿನಲ್ ಪ್ರೊಸೀಜರ್ ಕೋಡಿನ ತಿದ್ದುಪಡಿ ಮಸೂದೆಯ ಕಲಮುಪಾರು ಚರ್ಚೆ ಇನ್ನೂ ಮುಗಿದಿಲ್ಲ ಈ ನಡುವೆ, ನಿರ್ಯಾತವಾಗುವ ಚಾಕೊಪ್ಪಿನ ಅಬಕಾರಿ ಸುಂಕವನ್ನು ಪೆಚ್ಚಿಸುವ, ಕಾಫಿ ಮತ್ತು ರಬ್ಬರು ಉದ್ದಿಮೆಗಳಲ್ಲಿ ಬಳಕೆಗಾರರ ಹಿತವನ್ನು ರಕ್ಷಿಸುವ ವಾಣಿಜ್ಯ ವಿಧೇಯಕಗಳನ್ನು ಮಂಡಿಸಿ, ಅವುಗಳನ್ನು ಪಾಸು ಮಾಡಿಸಿಕೊಳ್ಳಲಾಯಿತು.

ಕೇಂದ್ರ ಮಂತ್ರಿ ಮಂಡಳದಲ್ಲಿ ಪುನರ್ನಿವೇಶನ ಖಾತೆಯ ಮಂತ್ರಿ ಶ್ರೀ ಅಜಿತ ಪ್ರಸಾದ ಜೈನರನ್ನು ಆಹಾರಸಚಿವರಾಗಿಯೂ ನೇಮಿಸಿದ್ದು, ವಾಣಿಜ್ಯ ಮಂತ್ರಿ ಶ್ರೀ ಕೃಷ್ಣಮಾಚಾರಿಯವರು ಮಂತ್ರಿ ಮಂಡಳದಿಂದ ಹೊರಬರುವರೆಂದು ಹೇಳಲಾಗುತ್ತದೆ ಔದ್ಯೋಗಿಕ ಧೋರಣೆಯ ತಿದ್ದುಪಡಿಯು ಅವರ ಮನಸ್ಸಿಗೆ ಬರದಿರುವುದೇ ಇದರ ಕಾರಣ.

ಸಿಂಡಿಕೇಟ್ ಕುನ್ಹಾ ಶಾಖೆಯ ರಜತೋತ್ಸವ

ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನ ಎರಡನೆಯದಾದ ಜಿಲ್ಲೆಯ ಹೊರಗಿನ ಪ್ರಥಮದ್ದಾದ ಕುನ್ಹಾ ಶಾಖೆಯು ರಜತೋತ್ಸವವನ್ನು ತಾ. ೨೬-೧೧-೫೪ರಂದು ನಿಜ ಫೈನ್ಆರ್ಟಿನ ನರಾರವಲ್ಲಿ, ಕುನ್ಹಾ ನಗರ ಸಭಾಪತಿ ಡಾ' ಬಿ ಎಂ. ಫೈಗಳ ಅಧ್ಯಕ್ಷತೆಯಲ್ಲಿ ವೈಭವ ಪೂರ್ಣವಾಗಿ, ಯಥಾಸಾಂಗವಾಗಿ ನೆರವೇರಿತು.

ಬ್ಯಾಂಕಿನ ಅಧ್ಯಕ್ಷ ಹಾಗೂ ಮೆನೇಜಿಂಗ್ ಡೈರೆಕ್ಟರ್ ಡಾ ಟಿ. ಎಂ ಪೈಗಳು ಸ್ವಾಗತ ಭಾಷಣ ಮಾಡುತ್ತ ಸಾಮಾನ್ಯ ತರದಲ್ಲಿ ಜನ್ಮತಾಳಿದ ಸಿಂಡಿಕೇಟಿನ ಬೆಳವಣಿಗೆ, ವಿಸ್ತರಣೆ, ಇಂದಿನ ಆಕ್ಕುಚ್ಚ ಸ್ಥಾನಮಾನಗಳನ್ನು ವಿವರಿಸಿ, ಜನತೆಯ ಸಹಕಾರ, ಅಭಿಮಾನಗಳಿಗಾಗಿ ಕೃತಜ್ಞತೆ ವ್ಯಕ್ತಪಡಿಸಿದರು. ಇಂದು ಬ್ಯಾಂಕಿನ ಅಧಿಕೃತ ಭಂಡವಾಳವು ೨೬ಲಕ್ಷಕ್ಕೆ ಏರಿಸ್ಪಟ್ಟು ೧೩ಶಾಖೆಗಳಿರುವುದು ಗಣನೀಯ ಪ್ರಗತಿಯೆಂದು ಸೂಚಿಸಿದರು.

ಸಿಂಡಿಕೇಟ್ ಸಾಧನೆ ಸಲ್ಲಿಸಿದ ಸೇವೆಯನ್ನು ಪ್ರಶಂಸಿಸಿ ಸಭಿಕರಲ್ಲಿ ಕಲಸದರು ಮಾತನಾಡಿದರು. ಅಧ್ಯಕ್ಷರು ಜೆಂಕಿನ ಸರ್ವಪ್ರಗತಿಗೆ ಕಾರಣರಾದ ಡಾ ಸುಧಾಕರನೈಗಳ ಪಕ್ಷತೆ, ಆದರ್ಶಾಂಕ ದುಡಿಮೆ ಸಾಮರಸಗಳನ್ನೂ, ಜನರಲ್ ಮೆನೇಜರ್ ಶ್ರೀ. ಟಿ. ಎ. ಪೈ, ಎಂ. ಎಲ್. ಎ. ಗಳ ವಿಶಾಲ ಮನೋಭಾವ, ಕಾರ್ಯವಟುತ್ವವನ್ನೂ ಕೊಂಡಾಡಿದರು

ಶ್ರೀ. ಟಿ. ಎ. ಪೈಗಳು ಆರಂಭದಲ್ಲಿ ಸಂದೇಶ ವಾಚಿಸಿದ್ದಲ್ಲದೆ ಅಂತ್ಯದಲ್ಲಿ ಧನ್ಯವಾದಗಳನ್ನಿತ್ತರು.

ಚರ್ಚಿಲರ ಬಾಯಿತಪ್ಪಿನ ಉಪದ್ರವ

ಠಕ್ಕಿಯದ ಮನ ನೋಯಿಸುವ ಮಾತಿನ ಪರಿಣಾಮ

ಬ್ರಿಟನ್ನಿನ ವ್ಯಧಾನ ಮಂತ್ರಿ ಚರ್ಚಿಲ್ಲರು ತಮ್ಮ ಮಿತಭಾರ ಕ್ಷೇತ್ರವಾದ ವೆಸ್ಟ್ ಮೋರ್ಲಾಂಡ್‌ನಲ್ಲಿ ಕಳೆದ ವಾರ ಒಂದು ಸ್ವಾರಸ್ಯವಾದ ಭಾಷಣವನ್ನು ಮಾಡಿ ತೈ ಸುಟ್ಟುಕೊಂಡರು. ಜಾಗರಿತ್ರಿಕ ಮಹತ್ವದ ಪ್ರಮಾದವನ್ನೆ ಅವರು ಮಾಡಿದರೆಂದರೆ ತಪ್ಪಲ್ಲ. ಜರ್ಮನಿಯ ಕುರಿತು ಪಶ್ಚಿಮ ರಾಷ್ಟ್ರಗಳು ತೋರಿಸುತ್ತ ಬಂದ ಪ್ರೀತಿಯು ಅತ್ಯಂತ ಸಹಜವಾದುದೆಂಬುದನ್ನು ಸಮರ್ಥಿಸುವ ಭರದಲ್ಲಿ ದ್ವಿತೀಯ ಮಹಾಯುದ್ಧದಲ್ಲಿ ನಾಜಿಗಳನ್ನು ಸದೆಬಡಿಯುವುದರಲ್ಲಿ ತಮಗೆ ನೆರವಾದ ರಶಿಯದ ಮನನೋಯಿಸುವ ಸಂಗತಿಯೊಂದನ್ನು ಅವರು ಹೇಳಬಾರದ ಸ್ಥಳದಲ್ಲಿ, ಹೇಳಬಾರದ ಗಳಿಗೆಯಲ್ಲಿ ಹೊಗೆಡವಿದರು. ರಶಿಯನ್ನರ ಮುನ್ನಡೆಯ ಭರವನ್ನು ಕಂಡ ತಾವು ಅಗತ್ಯವೆನಿಸಿದರೆ ಅದನ್ನು ತಡೆಗಟ್ಟಲಾಗುವಂತೆ ಜರ್ಮನರಿಂದ ಕಸಿದುಕೊಂಡ ಶಸ್ತ್ರಗಳನ್ನೆಲ್ಲ ಜೋಪಾನವಾಗಿಟ್ಟುಕೊಂಡು, ಜರ್ಮನರಿಗೆಯೇ ವಾಪಸು ಕೊಡಿಸುವ ವ್ಯವಸ್ಥೆ ಮಾಡಬೇಕೆಂದು ಅವರು ಬ್ರಿಟನ್ನಿನ ಸೇನಾಪತಿಗಳಿಗೆ ಅಪ್ಪಣೆ ವಿಧಿಸಿದ್ದರೆಂಬುದೇ ಆ ಮಾತು. ಇದರಿಂದ ನಾಜಿ ಜರ್ಮನಿಗಿಂತಲೂ ಕಮ್ಯುನಿಸ್ಟ ರಶಿಯವೇ ಹೆಚ್ಚು ಭಯಕಾರಕವೆಂಬ ಅಭಿಪ್ರಾಯ ಚರ್ಚಿಲ್ಲರದೆಂದು ಸಿದ್ಧವಾಯಿತು.

ಬ್ರಿಟನ್ನಿನ ಪ್ರತಿಕ್ರಿಯೆ

ಪರಿಣಾಮದಲ್ಲಿ ಬ್ರಿಟನಿನಲ್ಲೆಲ್ಲ ಭ್ರೋಭೆ ಕಾಣಿಸಿರುವುದು—ಪ್ರಸಿದ್ಧ ಪತ್ರಿಕೆಗಳು ಜನಾಭಿಪ್ರಾಯವನ್ನು ವ್ಯಕ್ತಪಸುತ್ತಾ ಚರ್ಚಿಲ್ಲರು ತುಂಬ ದುಡುಕಿ ಮಾತನಾಡಿದರೆಂದು ಟೀಕಿಸಿರುತ್ತವೆ. ಚರ್ಚಿಲ್ಲರು ಎಲ್ಲಿ ತಲೆಯನ್ನಿಟ್ಟು ಈ ಮಾತನ್ನು ಬಹಿರಂಗಗೊಳಿಸಿದರೆಂದು ಪ್ರಶ್ನಿಸುವಷ್ಟು ಅವು ಸಿಟ್ಟನ್ನು ತೋರಿಸಿರುತ್ತವೆ. ಬ್ರಿಟನ್ನಿನ ರಾಜಕೀಯ ವಲಯಗಳಲ್ಲಿ ಚರ್ಚಿಲ್ಲರು ಅನರ್ಥ ಹೇಳಿಕೆಯನ್ನು ಕೊಟ್ಟರೆಂದು ದುಃಖದ ಉದ್ಗಾರಗಳು ಕೇಳಿಬರುತ್ತವೆ. ಚರ್ಚಿಲ್ಲರನ್ನು ಬೆಂಬಲಿಸುವ ಟೋರಿಗಳಿಗೂ ತಮ್ಮ ನಾಯಕನು ನಾಲಿಗೆತಪ್ಪಿ ಬಹಿರಂಗಗೊಳಿಸಿದ ಸಂಗತಿಯಿಂದ ಖೇದವಾಗಿದೆ. ಜರ್ಮನಿಯ ಗೋಬೆಲ್ಸನು ಮಿತ್ರರಾಷ್ಟ್ರಗಳಲ್ಲಿ ಒಗ್ಗಟ್ಟಿಲ್ಲವೆಂದು ಜರ್ಮನರನ್ನು ಹುರಿದುಂಬಿಸುತ್ತಿದ್ದುದರ ಗೂಢ ಈಗ ಅರ್ಥವಾಯಿತೆಂದು ಕೆಲವರು ಹೇಳಿರುವರು. ರಶಿಯದೊಡನೆ ಸಹಾರ್ದದ ಸಮಾಲೋಚನೆಗಳನ್ನು ನಡೆಸಲು ತಾವು ಅನುಕೂಲ ಸಮಯದ ನಿರೀಕ್ಷಣೆಯಲ್ಲಿದ್ದೇನೆ ಎನ್ನುತ್ತಿದ್ದ ಚರ್ಚಿಲ್ಲರೀ ಈಗ ರಶಿಯಕ್ಕೆ ಮಿತ್ರದ್ರೋಹ ಬಗೆದ ಘಟನೆಯ ಉಲ್ಲೇಖ ಮಾಡಿದ್ದು ಆಶ್ಚರ್ಯಕರವಷ್ಟೆ ಅಲ್ಲ, ಅಂತಾರಾಷ್ಟ್ರೀಯ ರಾಜಕೀಯದಲ್ಲಿ ಇಟ್ಟ ತಪ್ಪು ಹೆಜ್ಜೆಯೂ ಆಗಿದೆ.

ಮಿತ್ರದ್ರೋಹ ಬುದ್ಧಿ

ರಶಿಯವು ಇದರಿಂದ ಸಹಜವಾಗಿಯೇ ನೊಂದು ಕೊಂಡಿವೆ—ಪಶ್ಚಿಮ ರಾಷ್ಟ್ರಗಳೊಡನೆ ಸಹಕರಿಸುವ ಮನೋಭಾವವನ್ನು ಅದು ಈಚೆಗೆ ತೋರಿಸಿ ಕೊಡುತ್ತಾ ಬಂದಿದ್ದಿತು. ಸಂಯುಕ್ತ ರಾಷ್ಟ್ರ ಸಂಘದಲ್ಲಿ ನಾಲ್ಕು ಮಹತ್ವ ಪೂರ್ಣಗೊತ್ತುವಳಿಗಳು ರಶಿಯದ ಸಹಕಾರದಿಂದ ಸರ್ವಾನುಮತದ ಬೆಂಬಲಗಳಿಸಿದ್ದವು. ಈಗ ತಾನು ಮಾಡಿದ್ದು ತಪ್ಪಾಯಿತೇ ಎಂದು ರಶಿಯ ತನ್ನನ್ನೆ ಪ್ರಶ್ನಿಸಿಕೊಳ್ಳುವಂತಾಗಿದೆ. ಪಶ್ಚಿಮ ರಾಷ್ಟ್ರಗಳು ಶಾಂತಿಯ ಮಾತುಗಳನ್ನಾಡುವುದಲ್ಲಿ ಕಪಟವೇ ತುಂಬಿದೆಯೆಂದು ಅದು ಅಭಿಪ್ರಾಯಪಡುವುದಕ್ಕೆ ಚರ್ಚಿಲ್ಲರ ಭಾಷಣವು ಅವಕಾಶ ಮಾಡಿ ಕೊಟ್ಟಿದೆ. ಪಶ್ಚಿಮ ರಾಷ್ಟ್ರಗಳು ರಶಿಯದ ಮನೋಭಾವ ಪರಿವರ್ತನೆಯ ಸ್ಪಷ್ಟ ಲಕ್ಷಣ ಗೋಚರಿಸುತ್ತಿಲ್ಲ ಎನ್ನುತ್ತಿದ್ದುದನ್ನು ರಶಿಯದೊಡನೆ ಸಹಕರಿಸದಿರಲೂ ಇದು "ಯೋಗ್ಯ" ಕಾರಣವಾಗಿದ್ದಿತು. ಆದರೆ ಚರ್ಚಿಲ್ಲರ ಮಾತು ನೋಡಿದರೆ, ರಶಿಯದ ವಿನಾಶವನ್ನೇ ಪಶ್ಚಿಮ ರಾಷ್ಟ್ರಗಳು ಪ್ರಥಮಪೂರ್ವಕ ಬಯಸುತ್ತಿವೆ ಎಂಬ ಸಂಗತಿ ಸ್ಪಷ್ಟವಾಗುತ್ತದೆ. ಇಂಥ ಪರಿ ಸ್ಥಿತಿಯಲ್ಲಿ, ಅಂತಾರಾಷ್ಟ್ರೀಯ ಕ್ಷೋಭೆಯನ್ನು ನಿವಾರಿಸುವ ಪ್ರಯತ್ನಗಳ ಪ್ರಾಮಾಣಿಕತೆಯ ಕುರಿತು ಯಾರಿಗೂ ಭರವಸೆ ಉಳಿಯಲಾರದು. ತಮ್ಮ ಆಕ್ರಮಣ ಶೀಲ ನೀತಿಯನ್ನು ವಂಚಕ ಶಬ್ದ ಜಾಲದಲ್ಲಿ ಮರೆಸುತ್ತ ಬಂದವರ ವಿಷಯದಲ್ಲಿ ಸೌಹಾರ್ದದಿಂದ ನಡೆದುಕೊಳ್ಳುವುದು ಯಾರಿಗಾದರೂ ಕಷ್ಟ.

ರಾಷ್ಟ್ರ ಸಂಘದಲ್ಲಿ

ಭಾರತದ ಪ್ರತಿನಿಧಿ ಶ್ರೀ ಕೃಷ್ಣ ಮೆನೊನ್ನರು ಸಂಯುಕ್ತ ರಾಷ್ಟ್ರ ಸಂಘದಲ್ಲಿ ಕೊರಿಯದ ಕುರಿತು ಸೌಹಾರ್ದಪೂರ್ಣ ಮಾತು ಕತೆಗಳು ಜರಗುವಂತೆ ಈಗ ಮಾಡುತ್ತಿರುವ ಪ್ರಯತ್ನದ ಮೇಲೆಯೂ ಚರ್ಚಿಲ್ಲರ ಬಾಯಿತಪ್ಪಿನ ಪರಿಣಾಮ ಬೀಳದಿರದು. ರಶಿಯದ ಮನಸ್ಸನ್ನು ಕೆಡಿಸಿ ಬಿಟ್ಟ ಬಳಿಕ, ಅದರ ಸ್ನೇಹವನ್ನು ಸಂಪಾದಿಸುವುದು ಸುಲಭ ಸಾಧ್ಯವಲ್ಲ. ಆದರೂ ಕೊರಿಯದ ತಂಟೆಯು ಎಲ್ಲರಿಗೂ ಸಮ್ಮತವಾದ ಸುಲಭ ಸೂತ್ರದ ಪ್ರಕಾರ ಪರಿಹರಿಸಲ್ಪಡಲೆಂಬ ಆಕಾಂಕ್ಷೆಯಿಂದ ಭಾರತದ ಪ್ರತಿನಿಧಿ ಮಂಡಳಿವು ಶಕ್ತಿ ಮೀರಿ ಪ್ರಯತ್ನ ಮಾಡುತ್ತಿವೆ ಯಾಗಿವರದಿಗಳು ತಿಳಿಸುತ್ತವೆ. ರಾಷ್ಟ್ರ ಸಂಘದಲ್ಲಿ ಕಳೆದ ವಾರ ಪಶ್ಚಿಮ ನ್ಯೂಗಿನಿಯನ್ನು ಇಂಡೋನೇಶಿಯಕ್ಕೆ ಬಿಟ್ಟು ಕೊಡುವ ವಿಚಾರದಲ್ಲಿ ನೆದರ್ಲೆಂಡಿನ ಪರಕಾರ ಮಾತುಕತೆಗಳಿಗೆ ಅಣಿಯಾಗಬೇಕೆಂಬ ವಿಷಯವು ಚರ್ಚೆಗೆ ಬಂದಿತ್ತು. ಬ್ರಿಟನು ಮುಂತಾದ ವಸಾಹತುವಾದಿರಾಷ್ಟ್ರಗಳು ನೆದರ್ಲೆಂಡಿನ ಪಕ್ಷವನ್ನು ಹಿಸಿ, ಪಶ್ಚಿಮ ನ್ಯೂಗಿನಿಯನ್ನು ಬಿಟ್ಟು ಕೊಡುವ ಪ್ರಶ್ನೆಯೇ ಇಲ್ಲವೆಂದು ವಾದಿಸಿದವು. ಆದರೆ ಭಾರತದಂಥ ಸಮರ್ಥ ರಾಷ್ಟ್ರವು ಇಂಡೋನೇಶಿಯಕ್ಕೆ ಕೊಟ್ಟ ಬೆಂಬಲದಮುಂದೆ ಅದು ವಸಾಹತುವಾಗಿ ಕಂಡು ಬಂತು

ಉಡುಪಿ

ಕ್ಷಯರೋಗ ನಿವಾರಣಾ ಪ್ರಚಾರ ಕಾರ್ಯವನ್ನು ಕೈಕೊಂಡ ಡಾ|| ಕೆ. ವಾಸುದೇವ ರಾಯರು (ಮೆಡಿಕಲ್ ಸರ್ವಿಸಿನ ನಿವೃತ್ತ ಡೈರೆಕ್ಟರರು) ತಾ ೨೮ರಲ್ಲಿ ಡಾ||ಪಿ. ವಿ. ವ್ಯಾಸರಾಯರ ಆಧ್ಯಕ್ಷತೆಯಲ್ಲಿ ಬೋರ್ಡಾಯ್ಸ್ ಸ್ಕೂಲಿನ ಜನತಾ ಭವನದಲ್ಲಿಯೂ ಮರುದಿನ ಶ್ರೀ. ಟಿ. ಎ. ಪೈ, ಎಂ. ಎಲ್. ಎ ಅವರ ಅಧ್ಯಕ್ಷತೆಯಲ್ಲಿ ಮಹಾತ್ಮಾ ಗಾಂಧಿ ಎಲಿಮೆಂಟರಿ ಶಾಲೆಯಲ್ಲಿಯೂ ಕ್ಷಯರೋಗನಿವಾರಣೆಯ ತಡೆಗಟ್ಟುವ ರೀತಿನೀತಿಗಳನ್ನು ವಿವರಿಸಿ ಭಾಷಣಮಾಡಿದರು. ಕ್ಷಯರೋಗ ನಿವಾರಣಾ ಚಳವಳಿಗೆ ಸರ್ಕಾರ ಸಹಕಾರವನ್ನು ಕೋರಿ ಕ್ಷಯರೋಗ ನುಜ್ಜಗೆಗಳನ್ನು ಕೊಂಡುಕೊಳ್ಳಬೇಕೆಂದರು. ಮೊದಲ ದಿನದ ಭಾಷಣವನ್ನು ಶ್ರೀ. ಬಿ. ಆನಂತಕೃಷ್ಣ ಶಾಮಗರು ಕನ್ನಡಿಸಿದರು.

ಶ್ರೀ ಅ. ನ. ಕೃಷ್ಣರಾಯರು— ತಾ. ೨೮ರಂದು ಬೋರ್ಡಾಯ್ಸ್ ಸ್ಕೂಲಿನ ಜನತಾ ಭವನ, ಎಂ. ಜಿ. ಯಂ. ಕಾಲೇಜು, ಕರ್ನಾಟಕ ಸಂಘ, ವಸಂತ ಮಹಲುಗಳಲ್ಲಿ ಭಾಷಣಗಳನ್ನಿತ್ತರು.

ನೀರಾಅಂಗಡಿ—ಉಡುಪಿ ಶಹರಿನಲ್ಲಿ ತಾ. 29ರಲ್ಲಿ ಶ್ರೀ. ಟಿ. ಎ. ಪೈ, ಎಮ್. ಎಲ್. ಎ, ಆವರಿಂದ ತೆರೆಯಲ್ಪಟ್ಟಿತು. ಸಮಾರಂಭದ ಆಧ್ಯಕ್ಷತೆಯನ್ನು ಕುಂದಾಪುರ ಡಿಪ್ಯೂಟಿಕಲೆಕ್ಟರ್ ಶ್ರೀ. ಟಿ. ವಿ. ಪಿ. ಕುರೂಪ್, ಅವರು ವಹಿಸಿದ್ದರು. ಶ್ರೀಗಳಾದ ಎ. ಜಿ. ಆಳ್ವ, ಯು. ರಾಮರಾಯರು ಸಂದರ್ಭೋಚಿತ ಮಾತುಗಳನ್ನಾಡಿದರು.

ಸೀತಾನದಿ ಜಾನುವಾರು ಚಾತ್ರೆಯು ತಾ. 6–12–1954ರಿಂದ 17–12–1954ರ ವರೆಗೆ ಜರಗುವುದು.

---

12 ಪುಟಸಂಖ್ಯೆ ಕೊಟ್ಟಿದ್ದರೂ ಅನಿವಾರ್ಯ ಅನಾನುಕೂಲತೆಯಿಂದ ಈ ವಾರ 10 ಪುಟಗಳನ್ನು ಮಾತ್ರ ಕೊಡಲಾಗಿದೆ.

ಶ್ರೀ ರಾಮಕೃಷ್ಣಾಶ್ರಮದ ಪ್ರಕಟಣೆಗಳು, ಮೈಸೂರು.

	ರೂ.	ಆ.
ಶ್ರೀ ರಾಮಕೃಷ್ಣ ಪಜನಪೇಡ (ಉತ್ತರಾರ್ಧ) (ಅಚ್ಚಿನಲ್ಲಿದೆ)	೧೦	೦
ಕೊಲಂಬೊ ಇಂದ ಅಲ್ಮೋರಕ್	೫	೦
ಸಂವಾದ ತರಂಗಿಣಿ	೫	೦
ಶ್ರೀ ರಾಮಕೃಷ್ಣ ಉಪದೇಶಾಮೃತ	೩	೮
ಸ್ವಾಮಿ ವಿವೇಕಾನಂದ (ಕುನೆಂಪು)	೩	೮
ಭಗವಾನ್ ಶ್ರೀ ರಾಮಕೃಷ್ಣ	೩	೦
ಪತ್ರಮಾಲೆ	೩	೦
ಜ್ಞಾನಯೋಗ	೩	೦
ಗುರುವಿನೊಡನೆ ದೇವರಡಿಗೆ(ಕುವೆಂಪು)	೩	೦
ರಾಜಯೋಗ	೨	೧೦
ಶ್ರೀ ಶಾರದಾದೇವಿ ಸಂಭಾಷಣೆ	೨	೮
ಗೀತಾ ಪತ್ರಗಳು	೨	೮
ಮಂಚುನೋಟಕೆ ಹಿಂದೂಧರ್ಮ	೨	೮
ಶ್ರೀ ಶಾರದಾದೇವಿ	೨	೦
ಸಾಧಕನ ಕೈದೀವಿಗೆ	೨	೦
ಪರಮಾರ್ಥ ಪ್ರಸಂಗ	೨	೦
ಕರ್ಮಯೋಗ	೧	೮
ಬ್ರಹ್ಮಾನಂದ ವಚನ ಸುಧೆ	೧	೪
ಶ್ರೀ ರಾಮಕೃಷ್ಣ ಉಪನಿಷತ್	೧	೪
ಪರಿವ್ರಾಜಕ	೧	೪
ಪ್ರಾಚ್ಯ ಮತ್ತು ಪಾಶ್ಚಾತ್ಯ	೧	೪
ಭಕ್ತಿಯೋಗ	೧	೦
ಭಕ್ತಿ: ಗೌಣ ಮತ್ತು ಪರಾ	೧	೦
ದಾರಿಯಲ್ಲಿ ದೀಪಧಾರಿ	೧	೦
ಶ್ರೀ ಗುರುದೇವರ ವಚನ	೧	೦
ಅಮರನಾಥ ಯಾತ್ರೆ	೧	೧
ಧನ್ಯತೆಗೆ ದಾರಿ	೧	೦
ಅನುಷ್ಠಾನ ವೇದಾಂತ	೧	೦
ವೇದಾಂತ	೦	೧೦
ವಿದ್ಯಾಭ್ಯಾಸ	೦	೧೦
ಹಿಂದೂ ಧರ್ಮಸಾರ	೦	೧೦
ವರ್ತಮಾನ ಭಾರತ	೦	೧೦
ವಿವೇಕವಾಣಿ	೦	೧೦
ನನ್ನ ಗುರುದೇವ	೦	೮
ಭಕ್ತಿಮಾರ್ಗ	೦	೮
ಚಿಕಾಗೋ ಉಪನ್ಯಾಸ	೦	೬
ಆರತಿ	೦	೬
ಶ್ರೀ ರಾಮಕೃಷ್ಣ(ಸಂಕ್ಷಿಪ್ತ ಜೀವನ ತ್ರಿವೇಣಿಯಿಂದ)	೦	೫
ಸ್ವಾಮಿ ವಿವೇಕಾನಂದ ,, ,,	೦	೫
ಶ್ರೀ ಶಾರದಾದೇವಿ ,, ,,	೦	೫
ಮುಮುಕ್ಷು ಲಕ್ಷಣ	೦	೪
ನನ್ನ ಜೀವನ ಮತ್ತು ಧ್ಯೇಯ	೦	೪
ಈಶ್ವರಾನುರಾಗ	೦	೪
ಸೊಂದ ಜೀವಕ್ಕೆ ಭರವಸೆ	೦	೪
ಭಾವತ ಮಹಿಳೆ	೦	೪
ಕರ್ಮ ರಹಸ್ಯ	೦	೪
ಸಾಧನ	೦	೪
ಪವಹಾರಿಬಾಬ	೦	೪
ದೇವದೂತ ಕ್ರಿಸ್ತ	೦	೪
ಹೈಮವಾಚಲ ಸಾನ್ನಿಧ್ಯದಲ್ಲಿ(ಹರಿದ್ವಾರದಿಂದ ಕೇದಾರ ಬದರಿಗೆ)	೨	೦

ಶ್ರೀ ರಾಮಕೃಷ್ಣಾಶ್ರಮ, ಮೈಸೂರು.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.
1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ್.ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.
THE MOOLKY BANK LTD.
Moolky, S. K.



ತಾ. 3-12-1954ರಿಂದ ಅಮೋಘ ಪ್ರಾರಂಭ
ಕನ್ನಡ ಚಿತ್ರ ಪ್ರಪಂಚದಲ್ಲೊಂದು ನವ ನೂತನ ಅಧ್ಯಾಯ ಪ್ರಾರಂಭಿಸಿತು.
ಪೌರಾಣಿಕ ಚಿತ್ರಗಳಲೆಲ್ಲಾ ರತ್ನಪ್ರಾಯವೆನಿಸಿಕು
ಕಥೆ, ಸಂಭಾಷಣೆ, ಸಂಗೀತಗಳಲ್ಲಿ ಅದ್ವಿತೀಯವೆನಿಸಿತು.
ಅದೇ ಗುಬ್ಬಿ ಕರ್ನಾಟಕ ಫಿಲ್ಮ್ಸ್‌ನವರ
ಬೇಡರ ಕಣ್ಣಪ್ಪ (ಕನ್ನಡ)
(ಕಾಳಿ ಹಸ್ತಿ ಮಹಾತ್ಮೆ)
ಪಂಡರಿಬಾಯಿ, ರಾಜಕುಮಾರ್, ಸಂಧ್ಯಾ ಮೊದಲಾದವರು.
ಉಡುಪಿ ಶ್ರೀ ರಾಮಕೃಷ್ಣ ಥಿಯೇಟರ್ ಲಿ., ನಲ್ಲಿ

ಮಂಗಳೂರು

ವಾರ್ಷಿಕೋತ್ಸವ— ಕದ್ರಿ ವಿದ್ಯಾ ಪೋಷಿನಿ ಶಾಲೆಯ ವಾರ್ಷಿಕೋತ್ಸವುಕಳದ ತಾ. 20ರಲ್ಲು ಡಾ! ಯು. ಪಿ. ಉಲ್ಲಾಳರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಸುಪರಿಂಟೆಂಡೆಂಟ್ ಶ್ರೀ ದಿ. ಪಿ. ರೋಬರ್ಟ್ಸ್‌ನು ಸ್ವಾಗತ ಭಾಷಣ ಮಾಡಿದರು. ಶಾಲಾ ಹೆಡ್‌ಪೈಸ್ಟರ್ ಕುಮಾರಿ ಮೋಹಿನಿ ಭಟ್ಟರು ಶಾಲಾ ವರದಿಯನ್ನೋದಿದರು. ಶ್ರೀಮತಿ ಇ. ಎಸ್. ಲಕ್ಷ್ಮಣ್, ಆವರು ಬಾರಿತೋಷ ವಿತರಣೆ ಮಾಡಿದರು. ನುರುದಿನ ಈ ಶಾಲೆಯ ಹಳೆಯ ವಿಪ್ಯಾರ್ಥಿಗಳ ಸಂಘದ ಸಭೆಯು ಡಾ! ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಜರಗಿತು

ನಗರ ಸಭೆಯು ತಾ. 27ರಲ್ಲು ಸಭಾ ಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆ ಯಲ್ಲಿ ಜರಗಿತು. ನಳ್ಳಿ ನೀರಿನ ಬಗ್ಗೆ ಮಂಗಳೂರಲ್ಲಿ ಜಲಾಶಯವನ್ನು ಕಟ್ಟುವ ಬಗ್ಗೆ ಕಲೆಕ್ಟರರೆ ಬಂಗ್ಲೆಯ ಸಮೀಪವಿರುವ ಸುಮಾರು ಮೂರು ಎಕ್ರೆಯಷ್ಟು ಜಾಗವನ್ನು ನಗರ ಸಭೆಗೆ ಕೊಡುವ ಬಗ್ಗೆ ಸರಕಾರಕ್ಕೆ ಕೊಡಬೇಕಾದ ಪೌಲ್ಯ ನಿರ್ಣಯ ಇತ್ಯಾದಿ ವರ್ತಗಳಿಗೆ ಸಮ್ಮತಿ ಕೊಡಲಾಯಿತು. ಬಳಿಕ ಹಲವು ನಿರ್ಣಯಗಳಾದುವು.

ಕ್ಷಯ ರೋಗದ ಸಮಸ್ಯೆ ಕುರಿತು ಪ್ರಾಂತೀಯ ಕ್ಷಯ ರೋಗ ಸಂಘದ ಕಾರ್ಯದರ್ಶಿ ಡಾ! ವಾಸುದೇವರಾಯರು ಮನ ನೀಯ ಭಾಷಣವಿಯುತ್ತಾ, ಕ್ಷಯ ರೋಗ ನಿವಾರಣಾ ಜಿಲ್ಲಾಳಿಗೆ ಸಂಬಂಧಿಸಿದ ಕ್ಷಯ ರೋಗ ಮುಜ್ರೆಗಳನ್ನು ಹೆಚ್ಚು ಹೆಚ್ಚಾಗಿ ಕೊಂಡು ಕೊಂಡು ಸಹಕರಿಸಬೇಕೆಂದು ವಿನಂತಿಸಿದರು. ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಧನ್ಯವಾದಗಳರ್ಪಿಸಿದರು.

ವರ್ಷಾವಧಿ ಹಂದ್ಯಾಟ— ಜ. ಕ. ಜಿಲ್ಲಾ ಆಂಟಿ ಮತ್ತು ತಂತಿ ಶಾಖೆಯ ದ್ವಿತೀಯ ವರ್ಷಾವಧಿ ಹಂದ್ಯಾಟಗಳು ತಾ 28ರಲ್ಲು ಪೋಲೀಸ್ ಪೆರೇಡ್ ಬಯಲಲ್ಲಿ ಶ್ರೀ ಟಿ.ಎ. ಪೈ, ಎಮ್. ಎಲ್. ಎ., ಆವರ ಅಧ್ಯಕ್ಷತೆ ಯಲ್ಲಿ ಜರಗಿದವು. ಆರಂಭದಲ್ಲಿ ಜಿಲ್ಲಾ ಟಸ್ಸಾಲು ಕಟ್ಟಿಗಳ ಸುಪರಿಂಟೆಂಡೆಂಟ್ ಶ್ರೀ ಎ. ಕೆ. ನರಸಿಂಗರಾಯರು ಸ್ವಾಗತ ಭಾಷಣ ಮಾಡಿದರು. ಬಳಿಕ ಹಂದ್ಯಾಟ ಕಾರ್ಯದರ್ಶಿ ಶ್ರೀ ಬಿ. ವಾಸುದೇವರಾಯರು ವರದಿಯನ್ನೋದಿದರು. ಶ್ರೀಮತಿ ಎ. ಕೆ. ನರಸಿಂಗರಾಯರು ಬಹುಮಾನ ವಿತರಣೆ ಮಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಆಂಟಿ ಮತ್ತು ತಂತಿ ಶಾಖೆಗೆ ಸಂಬಂಧಿಸಿದ ಕೆಲವು ಉಪಯುಕ್ತ ವಿಷಯಗಳನ್ನು ತಿಳಿಸಿದರು. ಕುಮಾರಿ ಗೋನ್ಸಾಲ್ವಿಸರು ವಂದನೆಗಳರ್ಪಿಸಿದರು.

ದ. ಕ. ಜಿಲ್ಲಾ ಶಿಕ್ಷಣ ಪರಿಷತ್ತು ದ. ಕ. ಜಿಲ್ಲಾ ಶಿಕ್ಷಕರ ಸಂಘದ ಆಶ್ರಯ ದಲ್ಲಿ ತಾ. 28ರಲ್ಲಿ ಸುತ್ತೂರು ಬೋರ್ಡು ಹೈಸ್ಕೂಲಿನ ವರಾಂಡದಲ್ಲಿ ಸಂಯುಕ್ತ ರಾಷ್ಟ್ರ ಸಂಘದ ಶೈಕ್ಷಣಿಕ, ವೈಜ್ಞಾನಿಕ, ಸಾಂಸ್ಕೃತಿಕ ಶಾಖೆಯ ಉನ್ನತಾಧಿಕಾರಿಗಳಾದ ಶ್ರೀ ಜೋನ್ ಬರ್ನ್ಸ್, ಆವರ ಅಧ್ಯಕ್ಷತೆಯಲ್ಲಿ ಜರಗಿತು. ಅಂದು ಬೆಳಿಗ್ಗೆ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು ಶೈಕ್ಷಣಿಕ ಪ್ರದರ್ಶನವನ್ನು ಉದ್ಘಾಟಿಸಿದರು. ತತ್ಪೂರ್ವದಲ್ಲಿ ಶ್ರೀ ಪಿ. ಎಸ್. ಶಾಸ್ತ್ರಿಗಳು ಸ್ವಾಗತ ಭಾಷಣಗಳನ್ನಾಡಿದರು. ನಂತರ ಶ್ರೀ ಯು. ಕೇಶವರಾಯರ ಅಧ್ಯಕ್ಷತೆಯಲ್ಲಿ ಪ್ರತಿನಿಧಿಗಳ ಸಭೆ ಸೇರಿ ಅಧ್ಯಾಪಕರಿಗೆ ಸಂಬಂಧಿಸಿದ ಹಲವು ನಿರ್ಣಯಗಳ ವಿಚಾರ ವಿನಿಮಯ ಕಾರ್ಯ ಜರ್ಜರಿ ನಡೆಯಿತು.

ಮಧ್ಯಾಹ್ನ ಬಹಿರಂಗ ಅಧಿವೇಶನವು ಜರಗಿತು. ಸ್ವಾಗತಾಧ್ಯಕ್ಷ ಶ್ರೀ ಸಿ. ಎಸ್. ಶಾಸ್ತ್ರಿಗಳು ಸ್ವಾಗತ ಭಾಷಣ ಮಾಡಿದರು. ಸ್ವಾಗತ ಸಮಿತಿ ಕಾರ್ಯದರ್ಶಿ ಶ್ರೀ ಡಿ. ಡಿ. ಸೋಜರು, ಸಂದೇಶ ವಾಚನ ಮಾಡಿದರು. ಉಪಾಧ್ಯಾಯರ ವೇತನ, ಭತ್ತೆ ಇತ್ಯಾದಿ ಕೇಳಿಕೆಗಳನ್ನು ಮಾನ್ಯಮಾಡಬೇಕೆನ್ನುವ, ಸರಕಾರಿ, ಸಾರ್ವಜನಿಕ ಹಾಗೂ ಖಾಸಗೀ ಶಾಲೆಗಳ ಉಪಾಧ್ಯಾಯರ ಸಂಬಳಗಳಲ್ಲಿರುವ ವೈತ್ಯಾಸವನ್ನು ಕೊಡಲೇ ನಿವಾರಿಸಿ ಎಲ್ಲಾ ಉಪಾಧ್ಯಾಯರಿಗೂ ಒಂದೇರೀತಿಯ ಸಂಬಳ ಸಿಗುವಂತಾಗಬೇಕೆನ್ನುವ, ಸಂಸ್ಕೃತಕ್ಕೆ ಯೋಗ್ಯ ಸ್ಥಾನವನ್ನು ಕೊಟ್ಟು ಆದನ್ನು ಕಲಿಸುವ ಪಂಡಿತರ ಸ್ಥಾನಮಾನಾದಿಗಳಲ್ಲಿ ಸುಧಾರಣೆಯಾಗಬೇಕೆನ್ನುವ, ಬಾಯಂ ಆಗವ ಅಧ್ಯಾಪಕರಿಗೆ ಪ್ರೊವಿಡೆಂಟ್ ಫಂಡ್, ಭತ್ತೆ ಇತ್ಯಾದಿ ಸೌಕರ್ಯಗಳು ದೊರೆಯುವಂತೆ ಆಗತ್ಯವಿದ್ದಲ್ಲಿ ಸಂಬಂಧಪಟ್ಟ ನಿಯಮಗಳನ್ನು ತಿದ್ದಲಿಸಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು.

ಶಿರ್ವ ಪಂಚಾಯತ ಬೋರ್ಡಿನ ಸಭೆಯು ತಾ. 22ರಲ್ಲು ಶ್ರೀ ಎಸ್. ಎ. ಹೆಗ್ಡೆಯವರೆ ಅಧ್ಯಕ್ಷತೆಯಲ್ಲಿ ಜರಗಿ, ಎರಡು ಸಾರ್ವಜನಿಕ ಬಾವಿಗಳನ್ನು ಆಗಿನುನರೆ ಹಣ ಸೆಂಕ್ಷನ್ ಮಾಡಲಾಯಿತು.

ಕಡಿಯೊರು ಡಾ. ಎ ಶಾಲೆಯ ಮುಕ್ಕಳ ಚರ್ಚಾಕೂಟವು ಇತ್ತೀಚೆಗೆ ಡಾ! ಎಚ್ ಶೇಷಕೃಷ್ಣ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು.

ಕುಂಬಳೆ— ನಾರಾಯಣ ಮಂಗಲದ ಮಹಿಳಾಭಿವೃದ್ಧಿ ಕೇಂದ್ರದ ಶಾಖೆಯೊಂದು ಕುಂಬಳೆಯಲ್ಲಿ ಸ್ಥಾಪಿಸಲಾಗಿದೆ.

ಬಂಗ್ರ ಕೂಳೂರು— ಇಲ್ಲಿಯ ಶಾಲೆಯಲ್ಲಿ ತಾ. 21ರಲ್ಲು ಶ್ರೀ ಬಿ. ಆರ್. ಕರ್ಕೇರರೆ ಅಧ್ಯಕ್ಷತೆಯಲ್ಲಿ ಸ್ಥಳೀಯ ಕಾಂಗ್ರೆಸಿಗರ ಸಭೆ ಜರಗಿತು. ಗ್ರಾಮಸ್ವರೆನ್ನು ಕಾಂಗ್ರೆಸ್ ಮೆಂಬರರನ್ನಾಗಿ ಸೇರಿಸುವುದು ಕಾಂಗ್ರೆಸಿನ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರುವುದು ಇತ್ಯಾದಿ ಕುರಿತು ಅಧ್ಯಕ್ಷರು ಭಾಷಣಮಾಡಿದರು ಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿ ಶ್ರೀ ಎಮ್. ಎಲ್. ಸೆಟ್ಟರು ಸಂಘಟನಾ ಕಾರ್ಯಗಳ ಕುರಿತು ಮಾತನಾಡಿದರು. ಬಳಿಕ 31 ಮಂದಿಯನ್ನೊಳಗೊಂಡ ಕೂಳೂರು ಗ್ರಾಮದ ಕಾಂಗ್ರೆಸ್ ಎಡ್‌ಹಾಕ್ ಕಮಿಟಿ ರಚಿಸಲಾಯಿತು.

ಮಾನಂಪಾಡಿ:— ಶಾಲೆಯ ನೂತನ ಕಟ್ಟಡದ ಉದ್ಘಾಟನೆಯನ್ನು ಶ್ರೀ. ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಶ್ರೀ. ಟಿ. ಎ. ಪೈ, ಎಮ್. ಎಲ್. ಎ. ಆವರಿಂದ ತಾ. 21ರಲ್ಲಿ ನೆರವೇರಿಸಲ್ಪಟ್ಟಿತು. ಡಾ! ಚಂಪ ಡಾ' ಸಂಜೀವನಾಥ ಶ್ರೀ. ಎ. ಜೆ. ಆಳ್ವ ಮೊದಲಾದವರು ಭಾಷಣವಿತ್ತರು.

ಪುತ್ತೂರು:— ದಿ ಪೆರ್ಲ ಮಾಯಿಲ್ ದೈವಗಳ ಧರ್ಮಸತ್ರಿ ಬೈಲಾಡಿ ಲಕ್ಷ್ಮೀನಾರಾಯಣ ತಾ. 17ರಲ್ಲಿ ದೈವಾಧೀನರಾದುದು ವಿಷಾದಕರವಿದೆ.

ಮಾಯಿಸಾಡಿ— ರೇಂಜರ ಬೇಸಿಕ್ ಶಾಲೆಯ ಅಧ್ಯಾಪಕರ ಸಮ್ಮೇಳನವು ತಾ. 27ರಂದು ಶ್ರೀ. ವಿ. ತಿಮ್ಮಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಹಲವು ಕಾರ್ಯಕ್ರಮಗಳು ಚರ್ಚಿಸಲ್ಪಟ್ಟವು. ಶ್ರೀ. ಕೆ. ರಾಮಕೃಷ್ಣ ಶೆಟ್ಟರು ಧನ್ಯವಾದಗಳನ್ನಿತ್ತರು.

ಕುಂದಾಪುರ—'ರೊಸರಿಂಗ' ಎಂಬ ನಾಟ್ಯಕೂಟದ ವಾರ್ಷಿಕೋತ್ಸವವು ತಾ.28ರಲ್ಲಿ ಜೋರ್ಡನ್ ಹೈಸ್ಕೂಲ್ ವರಾಂಡದಲ್ಲಿ ಶ್ರೀ. ಕು. ಶಿ. ಹರಿದಾಸಭಟ್ಟರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿತು.



THE VIJAYA BANK LIMITED, COONDAPOOR:

ದಿ ವಿಜಯಾ ಬೇಂಕ್ ಲಿಮಿಟೆಡ್, ಕುಂದಾಪುರ.

ಏಲಂ ನೋಟೀಸು

ಈ ಕೆಳಗೆ ಜಿಸರು ಕಾಣಿಸಿದ ಮಹಾಜನರು ನಮ್ಮ ಬೇಂಕಿನಲ್ಲಿ ಚಿನ್ನಾಭರಣಗಳ ಈಡಿನ ಮೇಲೆ ಸಾಲ ಪಡಕೊಂಡು, ಕ್ಲೃಪ್ತ ವಾಯಿದೆಗೆ ಆಸಲು, ಬಡ್ಡಿ, ವಸ್ಸೆಕೆ ಕೊಡಬೆ ಬಾಕಿ ಮಾಡಿಕೊಂಡಿರುವುದರಿಂದ, ಕದ್ರಿಯವರ ಸಾಲವನ್ನು ಬರಮಾಡಿ ಕೊಳ್ಳುವರೆ ರಿಜಿಸ್ಟ್ರಿ ನೋಟೀಸು ಕೊಟ್ಟುಗಳ್ಳಿ. ಆನರು ತನ್ನು ನಗದಗಳನ್ನು ಬಿಡಿಸಿಕೊಂದು ಹೋಗುವರೆ ತಪ್ಪಿದ ಕಾರಣ, ನದ್ರಿಯವರು ಈಡಿಟ್ಟ ನಗದಗಳನ್ನು ಇದೇ ಬರುವ ತಾ. 18—12—1954ರಲ್ಲು ಹಗಲು ಗಂಟೆ 2ಕ್ಕೆ ಸರಿಯಾಗಿ ಆಧವಾ ಬೇಂಕಿನೆ ಯುಕ್ತ ಕಂಡಯಾವುದೇ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಏಲಂನಲ್ಲಿ ಪುಟ್ಟಿ ಬಂದ ಏವೇಜು ಸಾಲದೆ ಹೊಬಲಿಗೆ ಕಡಿಮೆಯಾದಲ್ಲಿ ಸಂಬಂಧಪಟ್ಟವರ ದೇಪ ಜವಾಬ್ದಾರಿಯಿಂದ ಬೇಂಕಿನ ಏವೇಜನ್ನು ವಸೂಲು ಮಾಡಲಾದೀತೆಂಬುದನ್ನು ಈ ಮೂಲಕ ತಿಳಿಸೋಣಾಗಿದೆ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು ರೂ.	ಆ.	ಪೈ
105/52	ಕೆ. ಸಣ್ಣಯ್ಯ ಸೆಟ್ಟಿಗಾರ, ಪುರುಶಯ್ಯ ಸೆಟ್ಟಿಗಾರರ ಮಗ, Retired Postman, ಕುಂದಾಪುರ	151	10	0
126/52	ನೋಮಯರ ಮನೆ ಸುಬ್ಬಯ್ಯ, ನೋಮಯ್ಯನವರ ಮಗ, ಪಡವು ಗ್ರಾಮ, ಪೋಸ್ಟ್ ನಾಡ	241	4	0
500/52	Do	54	3	0
260/52	ಎಚ್. ಹೆರಿಯಣ್ಣ ಸೆಟ್ಟಿ, ಬಿತ್ರಿ ನಾರಾಯಣ ಸೆಟ್ಟಿ ಮಗ, ಅಲೂರು, ಪಕ್ಕೀರು ಗ್ರಾಮ, ಪೋಸ್ಟ್ ಗಂಗೊಳ್ಳಿ	105	7	0
315/52	ಎಸ್. ಮಹಾಬಲ ಸೆಟ್ಟಿ, ಗಿರಿಯಣ್ಣ ಹೆಗ್ಡೇರ ಆಳಿಯ, ಕೊಯ್ತಾಡಿ ಮನೆ, ಹೊಳಹಳ್ಳಿ ಗ್ರಾಮ, ಪೋಸ್ಟ್ ಹೊಳಹಳ್ಳಿ	48	8	0
316/52	ಬಚ್ಚು, ಗಾರಿ ಹೆಂಗ್ಸಿನ ಮಗ, ತೋಟಬೆನಸೆ, ಸಟ್ಟಾಡಿ, ಕೆಂದಾಪರ ಗ್ರಾಮ, ಪೋಸ್ಟ್ ಬಸ್ರೂರು	107	9	0
365/52	Do	168	4	0
355/52	ಎಸ್. ಜಿ. ಸುಬ್ರಾಯ, ಕ್ಲಾರ್ಕ್, ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟ್, ಕುಂದಾಪುರ	62	14	0
477/52	ನೋಮ ಪೂಜಾರಿ, S/o ಅಣ್ಣಪ್ಪ ಪೂಜಾರಿ, ಕಾರ್ವಿಕೇರಿ, ಪೋಸ್ಟ್ ಕುಂದಾಪುರ	21	3	0
25/53	ರೊಕ್ಕಯ್ಯ ಸೆಟ್ಟಿ, ಕೃಷ್ಣಪ್ಪ ಸೆಟ್ಟಿ ಆಳಿಯ, ಹಲ್ಲೂರು ಕೆಳಮನೆ, ಪೋಸ್ಟ್ ತೆಕ್ಕಟ್ಟೆ, ಪ. ಕ.	53	6	0
95/53	ಸೋಸಿಂದ ಸೆಟ್ಟಿ, ಚಿನ್ನಯ್ಯ ಸೆಟ್ಟಿ ಆಳಿಯ [illegible] ಕೆರೆ, ಹೊಸೂರು ಗ್ರಾಮ, ಪೋಸ್ಟ್ ಕೊಪ್ಪಲಾಡಿ.	26	15	0
132/53	ನಾರಾಯಣ ಸೆಟ್ಟಿ, ಮಹಾಬಲ ಸೆಟ್ಟಿರ ಆಳಿಯ, ಪಟ್ಟಯಂಗಡಿ ಗ್ರಾಮದ ಸಬ್ಲಾಡಿ, ಪೋಸ್ಟ್ ತಲ್ಲೂರು	40	13	0
195/53	ಎಚ್. ನಾರಾಯಣ ಸೆಟ್ಟಿ, ಹಿರಿಯಣ್ಣ ಹೆಗ್ಡೆಮನೆ, ಹಿರಿಯಣ್ಣ ಗ್ರಾಮ. ಪೋಸ್ಟ್ ಹಾಲಾಡಿ	87	3	0
664/53	I.O	550	10	0
215/53	ಕೆ ರೇಮಯ್ಯ ಸೆಟ್ಟಿಗಾರ, ವರಮೇಶ್ವರಯ್ಯನವರ ಮಗ, ವ್ಯಾವಾರಿ, ಚಿಕ್ಕನ್ಸಾಲು ರಸ್ತೆ, ಕುಂದಾಪುರ	81	3	0
224/53	ಎಸ್. ಪಿ. ಪಡಿಯಾರ, ರಾಮಚಂದ್ರ ಪಡಿಯಾರರ ಮನೆ, ಮರವಂತೆ ಗ್ರಾಮ, ಪೋಸ್ಟ್ ನುರವಂತೆ	25	14	0
252/53	ಟಿ. ತೇಜಪ್ಪ ಸೆಟ್ಟಿ, ಮಹಾಬಲ ಸೆಟ್ಟಿ ಆಳಿಯ, ತಲ್ಲೂರು ಹೊಡ್ಡಾಣಿ, ಪೋಸ್ಟ್ ತಲ್ಲೂರು	78	9	0
321/53	ಸಿಪ್ಪು, ಚಿಕ್ಕನವರ ಆಳಿಯ, ಕ್ಷಾರಿಕ, ಪಳಿ ಪೋಸ್ಟಾಪೀಸು ರಸ್ತೆಯಪ್ಪಮನವರು, ಪೋಸ್ಟ್ ಕುಂದಾಪುರ	97	7	0
159/53	ಸಿ. ಕೊರಗಯ್ಯ ಸೆಟ್ಟಿ, ಪುಟ್ಟಯ್ಯ ಸೆಟ್ಟಿ ಆಳಿಯ, ಗುಡಿ ಕೆರೆಮನೆ, ಚಿತ್ತೂರು ಗ್ರಾಮ, ಪೋಸ್ಟ್ ನಂದ್ರೆ	15	10	0

Office of the Bank,
Coondapur.
Dated, 27—11—1954.

B. R. Adyanthaya.
Agent.

THE VIJAYA BANK, LTD., BRAHMAVAR.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್, ಬ್ರಹ್ಮಾವರ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಶಾಖೆಯಿಂದ ವಿನ್ನಾಭರಣ ನಗಗಳ ಊಡಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರಿ ಮೂಲಕ ಕೇಳಿಕೊಂಡಾಗ್ಯೂ ಅಸ್ಸಲ ಬಡ್ಡಿ ಯಾವುದನ್ನೂ ಈ ತನಕವೂ ಕೊಡದೆ ಬಾಕಿ ನೂಡಿ ಕೊಂಡಿರುವುದರಿಂದ, ನಿಬ್ರಿಯವರು ನನ್ನಲ್ಲಿ ಊಡಿಟ್ಟ ನಗಗಳನ್ನು ಇದೇ ಬರುವ ತಾ. 18-12-1954ನೇ ಶನಿವಾರ ಅಪರಾಹ್ನ ಗಂಟೆ ೩ಕ್ಕೆ ಸರಿಯಾಗಿ ಯಾ ಬ್ಯಾಂಕಿಗೆ ಯುಕ್ತ ಕಂಡ ಇತರ ಯಾವುದೇ ದಿನಗಳಲ್ಲಿ ಪುನಃ ನೋಟೀಸು ಕೊಡದೆನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು ತಿಳಿದಿರಲಿ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು ಬಡ್ಡಿ ಸಮೇತ 30-9-54ರ ವರೆಗೆ.
695/52	ಮುಗ್ಗಪ್ಪ ಸೆಟ್ಟಿ, ಶೇಷ ಸೆಟ್ರ ಮೊಮ್ಮಗ, ಚೇರ್ಕಾಡಿ ಗ್ರಾಮ ನೂಜೂರು ಬೈಲು, ಪೋಸ್ಟು ಪೇತ್ರಿ	48 9 0
529/53	ಚಿಕ್ಕ ಪೂಜಾರ್ತಿ, ಲಿಂಗಿ ಪೂಜಾರ್ತಿ ಮಗಳು, ಹಂದಾಡಿ ಗ್ರಾಮ, ಪೋಸ್ಟು ಬ್ರಹ್ಮಾವರ	30 13 0
716/53	ಬಿ. ಸಂಜೀವ ಸೆಟ್ಟಿ, ರಾಮಣ್ಣ ಸೆಟ್ರ ಮಗ, ಕೆರೆಬೆಟ್ಟು ಗ್ರಾಮ, ಪೋಸ್ಟು ಹೆಬ್ರಿ	70 11 0
795/53	ಯಜ್. ಸಂಜೀವ ಸೆಟ್ಟಿ, ಕೃಷ್ಣಯ್ಯ ಸೆಟ್ರ ಆಳಿಯ, ಹೊಸಾಳ ಗ್ರಾಮ, ಪೋಸ್ಟು ಬಾರ್ಕೂರು	67 5 0
812/53	ಶಾನು ಆಚಾರಿ, ಪದ್ದಣ್ಣ ಆಚಾರಿ ಮಗ, ವಾರಂಬಳ್ಳಿ ಗ್ರಾಮ, ಪೋಸ್ಟು ಬ್ರಹ್ಮಾವರ	61 8 0
818/53	ಅಂತಯ್ಯ ಸೆಟ್ಟಿ, ಸುಬಾಬಲ ಸೆಟ್ರ ಆಳಿಯ, ಹಂದಾಡಿ ಪ್ಲಮನೆ, ಪೋಸ್ಟು ಬ್ರಹ್ಮಾವರ	72 8 0
843/53	ಚಿಕ್ಕ ಪೂಜಾರ್ತಿ, ಲಿಂಗಿ ಪೂಜಾರ್ತಿ ಮಗಳು, ಹಂದಾಡಿ ಗ್ರಾಮ, ಪೋಸ್ಟು ಬ್ರಹ್ಮಾವರ	18 8 0
29/54	ಯು. ಶಿವರಾಮ ಸೆಟ್ಟಿ, ಟೀಚರ್, ಬೋರ್ಡು ಹಾಯರ್ ಎಲಿಮೆಂಟರಿ ಶಾಲೆ, ಬ್ರಹ್ಮಾವರ	155 0 0

Brahmavar, 23-11-1954.

ಬಿ. ಭಾಸ್ಕರ ಸೆಟ್ಟಿ, ಏಜಂಟರ್.

ನಮ್ಮ ಯಾವತ್ತೂ ಗ್ರಾಹಕರಿಗೆ

ರಂಗಭೂಮಿಯ ನಟನಟಿಯರಿಗೆ ಬೇಕಾಗುವ ಜರಿ ಶಾಲು, ಜರಿ ಜ್ಜರಿ, ಜರಿ ರವಕೆ, ಇತ್ಯಾದಿ ಜರಿ ಖಚಿತ ಪೋಷಾಕು ಗಳೂ, ತೋಪನ್, ಹಾಗೂ ಇತರ ಕುಣಿತ, ನರ್ತನ ವೇಷ ಪಲ್ಲಟಧಾರಿಗಳಿಗೆ ಬೇಕಾಗುವ ಸರ್ವವಿಧದ ಪೋಷಾಕುಗಳೂ ದೊರೆಯುತ್ತವೆ. ಇಂದೇ ಸವಿವರ ಕ್ರಯದ ಪಟ್ಟಿಗೆ ಬರೆಯಿರಿ:—

Dharamshi Mulji Dresswala

132-C, Bhagat Wadi
Bhuleshwar Road,
BOMBAY—2

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

!! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !;

"ರಿಕರಿಂಗ್" ಠೇವಣಾತಿ.

ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ನೇಕಡಾ 4½%.

ಬಡವ ಬಲ್ಲಿದರೆಂಬ ಭೇದವಿಲ್ಲದ ಪ್ರತಿಯೊಬ್ಬನಿಗೂ ಅನೂಲವಾದ ಯೋಜನೆ.

ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ.

ದಿ ವಿಜಯ ಬೇಂಕ್ ಲಿಮಿಟೆಡ್.

(೨ನೇ ಪುಟ ದಿಂದ)

ದೊಡ್ಡದಾಗಿ ಬೆಳೆದಿರಲಿಕ್ಕಿಲ್ಲ. ಇದನ್ನೆಲ್ಲ ಕೂಲಂಕಷವಾಗಿ ವಿಚಾರಿಸಿ, ನ್ಯಾಯವನ್ನು ಪರಿಪಾಲಿಸುವ ವ್ಯವಸ್ಥೆ ಹೇಗಿದೆಯೋ ಎಂಬ ಜಿಜ್ಞಾಸೆಯನ್ನು ರೈತರ ಹಿತಾಕಾಂಕ್ಷಿಗಳಲ್ಲಿ ಕಾಣುತ್ತಿದ್ದೇನೆ.

ದಶಂಬರ ತಿಂಗಳ ಅಧಿವೇಶನದಲ್ಲಿ ಒಕ್ಕಲು ಹಿತ ಮಸೂದೆ ಚರ್ಚೆಗೆ ಬಂದಾಗ ನಮ್ಮ ಪ್ರತಿನಿಧಿಗಳು ಜಿಲ್ಲೆಯ ರೈತರಿಗೆ ತೃಪ್ತಿಯಾಗುವ ರೀತಿಯಲ್ಲಿ ನಡೆದು ಕೊಳ್ಳಬೇಕೆಂದು ಪ್ರಾರ್ಥಿಸುವುದು ಅಸ್ತ್ರಸ್ತುತವಾಗಲಾರದು. ಮಸೂದೆಯು ಹೆಸರಿಗಷ್ಟೇ ಒಕ್ಕಲು ಹಿತವನ್ನು ಮಾಡದ್ದೆ ನಿಜವಾದ ಅರ್ಥದಲ್ಲಿ ಅದು ನಮ್ಮ ಕೃಷಿಕ ಬಂಧುಗಳ ಪಕ್ಷಪಾತಿಯಾಗಿರಬೇಕೆಂದು ನಾವು ಕೋರುತ್ತೇವೆ. ಕೃಷಿ ಭೂಮಿಯ ನಿಜವಾದ ಉತ್ಪನ್ನ, ಸಾಗುವಳಿಗೆ ತಗಲುವ ವೆಚ್ಚ ಮತ್ತಿತರ ಅನುಪಂಗಿಕ ವಿಚಾರಗಳನ್ನು ಏಕಪಕ್ಷೀಯವಾಗಿ ತೀರ್ಮಾನಿಸುವುದಾಗಲೀ ಗ್ರಾಮಾಧಿಕಾರಿಗಳಾದ ಪಠೇಲ ಅಥವಾ ಶ್ಯಾನುಭೋಗರ ಅಭಿಪ್ರಾಯವೇ ಸಿಂಧುವೆಂದು ಭಾವಿಸುವುದಾಗಲೀ ಇಷ್ಟವಾದುದಲ್ಲ. ಸರಕಾರದ ಅಧಿಕಾರಿಗಳು ಗ್ರಾಮಾಧಿಕಾರಿಗಳ ಪ್ರಲೋಭನೆಗೆ ಒಳಗಾಗಿರುವರೆಂದು ಈಗಾಗಲೇ ದೂರುಗಳು ಕೇಳಿ ಬರುತ್ತಿರುವಾಗ ಅವರ ಅಂದಾಜುಗಳನ್ನು ಕಣ್ಣು ಮುಚ್ಚಿ ಸ್ವೀಕರಿಸುವುದರಿಂದ ರೈತರು ಅನ್ಯಾಯಕ್ಕೆ ಗುರಿಯಾದಾರು. ಹೆಸರಿಗೆ ಪದ್ಧತಿಯು ಜ್ಯಾರಿಯಲ್ಲಿದ್ದಾಗ ಗ್ರಾಮಾಧಿಕಾರಿಗಳು ಕೊಟ್ಟ ಹಿಂಸೆಯನ್ನು ಇಲ್ಲಿ ಜ್ಞಾಪಿಸುವುದು ಅಪೇಕ್ಷಣೀಯ. ಆದುದರಿಂದ ರೈತರ ಸ್ಪರಕ್ಕೆ ಉಳಿದೆಲ್ಲರ ಧ್ವನಿಗಿಂತಲೂ ಹೆಚ್ಚು ಮಹತ್ವವನ್ನು ಒಕ್ಕಲು ಹಿತ ಮಸೂದೆಯು ಕೊಡಬೇಕಾದದ್ದು ನ್ಯಾಯ. ಅದಕ್ಕೆ ತಕ್ಕ ಅವಕಾಶವನ್ನು ಮಸೂದೆ ಕಲ್ಪಿಸಿ ಕೊಡುವಂತೆ ನೋಡಿಕೊಳ್ಳಬೇಕಾಗಿ ಶಾಸನ ಸಭೆಯ ಪ್ರತಿನಿಧಿಗಳನ್ನೂ ಸರಕಾರವನ್ನೂ ನಾವು ವಿನಂತಿಸಿಕೊಳ್ಳುತ್ತೇವೆ.

(ಬರೆದು ಬಂದುದು)

ಸಾಲ ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ. ಸುಲಭ ಕಂತಿನ ಮರುಪಾವತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿ ಮಾಡಿಕೊಳ್ಳುವುದು.

P. o. Box No. 3219, BOMBAY 3.

BHUVANENDRA PRODUCTS LTD., KATAPADI, S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು
ಜನಪ್ರಿಯವಾಗಿರುವವು.
ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು
ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:—

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್ ಕಟಪಾಡಿ, ದ. ಕ.

ಫೋನ್:— (1) ಉಡುಪಿ (2) ಮಣಿಪಾಲ ಗೆಲ್ಲಿ, ಹುಬ್ಬಳ್ಳಿ.

(ಉತ್ತಮ ಸಾರಸ್ವತ ಬ್ರಾಹ್ಮಣರ ಅಡಿಗೆ, ಶುಚಿ ರುಚಿಯಾದ ರೈಸ್‌ಪ್ಲೇಟ್)

ರುಚಿಕರವಾದ ಊಟ— ಹವೇಶೀರ್ (Airy) ವಸತಿ,
ಎರಡು ಊಟ, ಕೋಟ್ (Cot) ಇತ್ಯಾದಿ ಸೌಕರ್ಯ.

ತಿಂಗಳೊಂದರ ರೂ. 52/- ಮಾತ್ರ.

ವಿಶೇಷ ಮಾಹಿತಿಗೆ ಪ್ರತ್ಯಕ್ಷ ವಿಚಾರಿಸಿರಿ.

ಸದ್ಗುರು ಬೋರ್ಡಿಂಗ್ ಎಂಡ್ ಲೋಜಿಂಗ್

ಹಿಂದ್‌ಮಾತಾ ಸಿನೇಮದ ಸಮೀಪ, ದಾದರ್, ಮುಂಬಯಿ ೧೪.

ವ್ಯವಸ್ಥಾಪಕ: ವಿ. ಯಸ್. ಪ್ರಭು.

ಭರ್ತ ಕಂಟ್ರೋಲ

[ಮಕ್ಕಳನ್ನ ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವ್ಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವ ದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ಡಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ಪೋಷಣೆಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಭಾದಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. ೫/- ಸ್ಪೆಶಲ್ ರೂ. 8/-

Mrs. P. DEVEE, F. Ds. (N. J.) (ವಿ. ಸಿ. ಪಿ. ಪ್ರತ್ಯೇಕ)
CALCUTTA—40 ಸ್ವಾಶಿಸ್ಥರು: ಶಹಾಕಂಪೆನಿ, ಮಂಗಳೂರು

ಹಳೆಯ ಚೀನೀ ಕತೆ—

ಪಚ್ಚೆ ಕಲ್ಲಿನ ಶಿಲ್ಪ

— ೦ —

ಮಿಲಾನ ಆಗಿನ್ನೂ ಸಣ್ಣ ಪುಡುಗಿಯಾಗಿದ್ದಳು. ಕಲಿಶಪರೆ ಚಾಂಗರೆ ಈ ಒಬ್ಬಳೇ ಮಗಳು ಬಹಳ ಮುದ್ದಿನಲ್ಲಿ ಬಳೆದಿದ್ದಳು. ಅವಳ ತಂದೆ ನ್ಯಾಯ ನಿಷ್ಠುರರಾಗಿದ್ದರು; ಆದರೆ ತನ್ನ ಮಗಳ ಮಟ್ಟಿಗೆ ಮಾತ್ರ ವಾತ್ಸಲ್ಯದ ಹೊಳೆಯಾಗಿ ಹರಿಯುತ್ತಿದ್ದರು.

ದೊಡ್ಡ ಪುದ್ದಿಯಲ್ಲಿರುವ ಸುರಾತನವಾದ ಮತ್ತು ಗೌರವಾನ್ವಿತವಾದ ಮನೆತನಕ್ಕೆ ಸಲ ಜವಿಸಿಸುವಂತೆ ಚಾಂಗರ ವಿಶಾಲವಾದ ಭವನದಲ್ಲಿ ಅವರ ಹಲವಾರು ಸಂಬಂಧಿಕರು ಆಶ್ರಯವನ್ನು ಪಡೆದಿದ್ದರು. ದೂರದ ಬಂಧುಗಳು ಸಹ ಇಲ್ಲಿ ಬಂದು ಇರುತ್ತಿದ್ದರು ಅವರಲ್ಲಿ ಸುತಿಕ್ಷಿತರು ಕಮಿಶನರ ವಹೀಲಿಯಿಂದ ಸರಕಾರದಲ್ಲಿ ನೌಕರಿ ಪಡೆಯುತ್ತಿದ್ದರು; ಓದು ಬರಪ ಬಾರದವರು ಸುನೆಗೆಲಸ ಮಾಡುತ್ತಿದ್ದರು.

ಅಂದು ಹದಿನಾರು ವರ್ಷ ಪ್ರಾಯದ ತರುಣ ಹಾಗು ತೀಕ್ಷ್ಣ ಬುದ್ಧಿಯ ಚಾಂಗನೊ ಎಂಬಾತ ಕವಿಶಾನರ ಮನೆಯಲ್ಲಿ ಆಶ್ರಯವನ್ನು ಅಪೇಕ್ಷಿಸಿ ಬಂದ. ಅವನ ದೈದಯ ಮನಸ್ಸುಗಳಲ್ಲಿ ಹೊಸ ಉತ್ಸಾಹವೂ ಚೇತನವೂ ಪುಡಿಯುತ್ತಿರುವಂತೆ ಕಂಡುಬಂತು. ಅವನು ತನ್ನ ವಯಸ್ಸಿಗಿಂತಲೂ ಎತ್ತರವಾಗಿ ತೋರುತ್ತಿದ್ದ. ಮನೆಯ ಎಲ್ಲರೂ ಅವನನ್ನು ಪೆಚ್ಚಿಕೊಂಡರು. ಮಿಲಾನಳ ತಾಯಿ ಚಾಂಗಪೋಗೆ ಓದು ಬರಪ ಬರುತ್ತಿರದಿದ್ದರೂ ಮನೆಗೆ ಬರುವ ಅತಿಥಿಗಳ ಯೋಗಕ್ಷೇಮ ವಿಚಾರಿಸುವ ಕೆಲಸವನ್ನು ಅವನಿಗೆ ವಹಿಸಿಕೊಟ್ಟಳು.

ಅವನು ಮಿಲಾನಳಿಗಿಂತ ಒಂದು ವರ್ಷಕ್ಕೆ ದೊಡ್ಡವನು. ಇನ್ನೂ ಮುಕ್ತಳಿಂದೇ ಪರಿಗಣಿಸಲ್ಪಡುತ್ತಿದ್ದುದರಿಂದ ಇಬ್ಬರೂ ಒಟ್ಟಿಗೆ ಸೇರುತ್ತಿದ್ದರು; ಮಾತನಾಡುತ್ತಿದ್ದರು; ನಗುತ್ತಿದ್ದರು. ಅವನು ಹಳ್ಳಿಯ ಚಿತ್ರ ವಿಚಿತ್ರವಾದ ಕತೆಗಳನ್ನೂ ಸುದ್ದಿಗಳನ್ನೂ ವರ್ಣಿಸುತ್ತಿರುವಾಗ ಮಿಲಾನ ಉತ್ಸುಕತೆಯಿಂದ ಅದಕ್ಕೆ ಕಿವಿಗೊಡುತ್ತಿದ್ದಳು.

ಅವರೆ ಕೆಲವು ವಾರಗಳಲ್ಲಿ ಕುಟುಂಬದ ವರಿಗೆ ಚಾಂಗಪೋನ ಕುರಿತಾಗಿ ಮೊದಲಿದ್ದ ಸದಭಿಪ್ರಾಯ ಉಳಿಯಲಿಲ್ಲ. ಅವನು ನೌಕರಿಯಲ್ಲಿ ಆಸಕ್ತಿವಹಿಸಿದಂತೆ ಕಾಣಲಿಲ್ಲ; ತನ್ನ ಕೆಲಸವನ್ನು ಮರೆತುಬಿಟ್ಟು ಅನೇಕ ತಪ್ಪುಗಳನ್ನು ಮಾಡುತ್ತಿದ್ದ; ಇವಕ್ಕೋಸ್ಕರ ಹಿರಿಯರು ಸಿರುಸಿನ ಮಾತನ್ನಾಡಿದರೆ ಕೇಳಿಕೊಳ್ಳುವಷ್ಟು ಸಮಸ್ಥಿತಿ ಇರಲಿಲ್ಲ; ತಪ್ಪು ತಿದ್ದುವುದಂತೂ ದೂರ ಉಳಿಯಿತು. ಆದುದರಿಂದ ಮಿಲಾನಳ ತಾಯಿ ಅವನಿಗೆ ತೋಟವನ್ನು ನೋಡಿಕೊಂಡಿರಲು ಹೇಳಿಸಳು. ಇಲ್ಲಿ ಚಾಂಗಪೋ ಸುಬಿಯಾಗಿರುವಂತೆ ತೋರಿತು.

— ೨ —

ತೋಟಗಾರಿಕೆಯಲ್ಲಿ ಚಾಂಗಪೋ ತನ್ನ ಪ್ರತಿಭೆಯನ್ನು ಚೆನ್ನಾಗಿ ವ್ಯಕ್ತಪಡಿಸಲು ಸಮರ್ಥನಾದ: ತನಗೆ ಯಾರೂ ಕಲಿಸಬೇಕಾಗಿಲ್ಲ ವೆಂದೂ ತಾನು ನೂತನ ಸೃಷ್ಟಿಯನ್ನು ಮಾಡಬಲ್ಲ ಕಲಾವಿದನೆಂದೂ ಅವನು ತೋರಿಸಿಕೊಟ್ಟ. ಬಿಡುವಿನ ಗಳಿಗೆಯಲ್ಲಿ ಅವನು ಗುಪ್ತವಾಗಿ ಶಿಕ್ಷಕನ ಸಹಾಯವಿಲ್ಲದೆ ಸುಂದರವಾದ ಚಿತ್ರಗಳನ್ನು ರೇಖಿಸುತ್ತಿದ್ದ; ಕೊಡೆ ಮಣ್ಣನ್ನು ಪದಮಾಡಿ ಜೀವಂತ ಪ್ರಾಣಿಗಳನ್ನು ಸಂಸೂರ್ಣವಾಗಿ ಹೋಲುವ ವಸ್ತುಗಳನ್ನು ಸಿದ್ಧಗೊಳಿಸುತ್ತಿದ್ದ. ನಿಜಕ್ಕೂ ಅವನಿಗೆ ಕಲಾದೇವಿ ಒಲಿದಿದ್ದಳು.

ತನ್ನ ಪದಿನೆಂಟನೇ ವಯಸ್ಸಿನಲ್ಲಿ ಚಾಂಗ ಹೊ ನೋಡುವವರ ಮಟ್ಟಿಗೆ ಯಾವುದ ಕ್ಕೂ ಪ್ರಯೋಜನವಿಲ್ಲದ ವ್ಯಕ್ತಿಯಾಗಿಯೇ ಇದ್ದ. ಆದಾಗ್ಯೂ ಮಿಲಾನ ಅವನಲ್ಲಿ ಏನು ಆಕರ್ಷಣೆಯನ್ನು ಕಂಡುಕೊಂಡಳೆಂದು ತಿಳಿಯದು—ಅವನು ಇನ್ನುಸ್ಸು ಎತ್ತರವಾಗಿ ಸುಂದರವಾಗಿ ಬಳೆದಿದ್ದು; ನಿಜ; ತನ್ನ ಶಿಲ್ಪ ವಿದ್ಯೆಯ ಕೌಶಲ್ಯದಿಂದ ಮಿಲಾನಳ ತಂದೆಯ ಹೊರತಾಗಿ ಉಳಿದೆಲ್ಲರ ಪ್ರೀತಿ ವಿಶ್ವಾಸಗಳನ್ನು ಗಳಿಸಿದ್ದೂ ನಿಜ. ಇವುಗಳೇ ಅವರಿಬ್ಬರ ನಡುವೆ ಆನ್ಯೋನ್ಯತೆಯ ಭಾವನೆಯನ್ನು ಬಿಗಿಗೊಳಿಸಿದವೋ ಏನೋ. ಆದರೆ, ಇದು ಮದುವೆಯಲ್ಲಿ ಪರ್ಯವಸಾನ ಹೊಂದಬಹುದೆಂದು ಯಾರೂ ಯೋಚಿಸಿರಲಿಲ್ಲ. ಇಬ್ಬರ ಕುಲನಾಮವೂ ಒಂದೇ ಯಾಗಿದ್ದುದರಿಂದ ಮದುವೆ ಕಲ್ಪನಾತೀತ ನಾದ ವಿಷಯ.

ಒಮ್ಮೆ ಆಕಸ್ಮಾತ್ತಾಗಿ ಚಾಂಗಪೊ ಒಂದು ವ್ಯಾಪಾರದಲ್ಲಿ ನಿಷ್ಕಾತನಾಗುವುದಕ್ಕೋಸ್ಕರ ತಾನು ಮನೆಗೆಲಸವನ್ನು ಬಿಡುವುದಾಗಿ ಹೇಳಿದ. ಪಚ್ಚೆ ಕಲ್ಲಿನ ಶಿಲ್ಪವೊಬ್ಬನ ಬಳಿ ತಾನು ವಿದ್ಯೆ ಕಲಿಯುವೆನೆಂದು ಅವನು ತಿಳಿಸಿದ. ಮಿಲಾನಳೊಡನೆ ಅವನು ಬಸಳ ಹೆಚ್ಚಿನ ಒಡನಾಟವಿಟ್ಟುಕೊಂಡಿದ್ದುದನ್ನು ಕಂಡಿದ್ದ ತಾಯಿ ಇದಕ್ಕೆ ಒಪ್ಪಿಗೆ ನೀಡಿದಳು. ಆದರೆ ಅನಳು ಏನು ಭಾವಿಸಿದ್ದೋ ಹಾಗಾಗಲಿಲ್ಲ. ಚಾಂಗಪೋ ಪ್ರತಿದಿನ ರಾತ್ರಿ ಮನೆಗೆಯೀ ಮರಳುತ್ತಿದ್ದ; ಮಾತ್ರವಲ್ಲ; ಈಗ ಮಿಲಾನಳೊಡನೆ ಅವನಿಗೆ ಹೇಳಲು ವಿಶೇಷವಾದ ಮಾತುಗಳೂ ಇದ್ದಂತೆ ವ್ಯಕ್ತವಾಯಿತು.

ತಾಯಿ ಮಿಲಾನಳನ್ನು ಕರೆದು "ನೀನೀಗ ದೊಡ್ಡವಳಾಗಿದ್ದಿ, ಮಗೂ; ಅದುದರಿಂದ ಸೋದರ ಚಾಂಗಪೋನೊಡನೆ ಹೆಚ್ಚು ಸಲಿಗೆಯಿಂದಿರಬಾರದು" ಎಂದು ಉಪದೇಶಿಸಿದಳು. ತಾಯಿಯ ಮಾತು ಮಿಲಾನಳನ್ನು ಯೋಚಿಸುವಂತೆ ಮಾಡಿತು. ಅಂದು ರಾತ್ರಿ ಅವಳು ಚಾಂಗಪೋನನ್ನು ಕಂಡಳು. ತಾನು ಅವನನ್ನು ಪ್ರೀತಿಸತೊಡಗಿದ್ದೇನೆಂದು ಅವಳಿಗೆ ಈಗ ಸ್ಪಷ್ಟವಾಗಿದ್ದಿತು.

"ನಿನ್ನನ್ನು ನಾನು ಹೆಚ್ಚಾಗಿ ಕಾಣಬಾರದೆಂದು ತಾಯಿಯ ಅಭಿಪ್ರಾಯ. ಇದರ ಅರ್ಥವೇನು?" ಎಂದವಳು ಕೇಳಿದಳು.

"ಹೌದು, ನಾವಿಬ್ಬರೂ ದೊಡ್ಡವರಾಗಿದ್ದೇವೆ."

ಮಿಲಾನ "ಅಂದರೆ!" ಎಂಬುದನ್ನು ತ್ಕಾ ಅರ್ಥಪೂರ್ಣವಾಗಿ ಕೊರಳು ಕೊಂಕಿಸಿದಳು. ಚಾಂಗಪೋ ಅನಳ ಸೊಂಟದಲ್ಲಿ ಕೈಸುತ್ತಿ "ನಿನ್ನಲ್ಲಿ ಯಾವುದೋ ಕಕ್ಕ ಹೊಸಚೆಲುವಿಯನ್ನು ಮೂಡಿಸುತ್ತಿದೆಯಿಂದೂ ಯಾವುದೋ ಭಾವನೆ ನಿನ್ನನ್ನು ಹೆಚ್ಚು ಹೆಚ್ಚಾಗಿ ನೋಡುತ್ತಿರುವಂತೆ ನನ್ನನ್ನು ಪ್ರೇರಿಸುತ್ತಿದೆಯೆಂದೂ ನೀನು ಬರುವಾಗ ನನ್ನನ್ನು ಸಂತೋಷಗೊಳಿಸುವ, ದೂರವಾದಾಗ ದುಃಖಿತನಾಗಿ ನೂಡುವ ಅನ್ಯಕ್ತ ಶಕ್ತಿಯೊಂದು ನಿನ್ನಲ್ಲಿದೆಯೆಂದೂ ಇದರ ಅರ್ಥ' ಎಂದನು.

"ಆದರೆ ನಾವು ನುಮದೆಯೊಗುವಂತಿಲ್ಲ."

"ಹಾಗೆ ನೀನು ಹೇಳಬಾರದು: ನಿನ್ನನ್ನು ನಾನು ಸುಮ್ಮನೆ ಹೋಗಗೊಡುವುದಿಲ್ಲ. ನಿನ್ನನ್ನು ಪ್ರೀತಿಸುವುದು ತಪ್ಪಾಗಲಾರದು."

ಮಿಲಾನ ಅವನ ಆಪ್ಪುಗೆಯನ್ನು ಬಿಡಿಸಿಕೊಂಡು ಓಡಿಹೋದಳು.

— ೩ —

ಪ್ರೇಮ ಭಾವನೆಯನ್ನು ಜಾಗೃತಗೊಳಿಸಿದುದರಿಂದ ಮನಸ್ಸಿನ ಎಷ್ಟೋ ಸುಪ್ತ ಆಕಾಂಕ್ಷೆಗಳು ಕೆರಳಿ ನಿಂತಂತಾಯಿತು: ಅಂದು ಮಿಲಾನಳಿಗೆ ತನ್ನ ತಾಯಿಯ ಉಪದೇಶ ಹಾಗು ಚಾಂಗಪೋನ ಉಲ್ಲಾಸನನ್ನು ತಾಳಿ ನೋಡುವುದೇ ಕೆಲಸವಾಯಿತು. ಆ ರಾತ್ರಿಯ ಈ ಘಟನೆ ಅನರಿಬ್ಬರ ಸಂಬಂಧದಲ್ಲಿ ಹೊಸತನವನ್ನು ತಂದಿತು. ಸರಸ್ಪರರು ಕಣ್ಣಿಗೆ ಬಿಳಿ ಬಾರದೆಂದು ಪ್ರಯತ್ನಪೂರ್ವಕ ಮನಪೂರ್ವಕ ನನ್ನು ತಡೆದು ಹಿದಿಪ್ಪು ಅದು ಉತ್ಕೃಷ್ಟ ಭೋಗರಸವೆಂತೊಡಗಿತು. ತಾನಿಬ್ಬರೂ ಯಾವುದೋ ಸುಪಾ ಶಕ್ತಿಯ ಕೈಯಲ್ಲಿ ಸಿಕ್ಕಿದ ಗೊಂಬೆಗಳಂತೆ ಅವರಿಗೆ ಭಾಸವಾಯಿತು.

ಅವರು ಯಾವ ಯೋಜನೆಯನ್ನೂ ಮಾಡಿರಲಿಲ್ಲ—ಕೇವಲ ಪ್ರೀತಿಸುತ್ತಿದ್ದರು. ಆದರೆ ಮಿಲಾನಳ ತಂದೆತಾಯಿಗಳು ಅವಳಿಗಾಗಿ ವರನೊಬ್ಬನನ್ನು ಹುಡುಕುತ್ತ ತನ್ನು ಕರ್ತವ್ಯದಲ್ಲಿ ತತ್ಪರರಾಗಿದ್ದರು ಮಿಲಾನ ವರ ರೆನ್ನೆಲ್ಲ ನಿರಾಕರಿಸಿದಳು. ಒಬ್ಬಳೇ ಮಗಳು ಆದನ್ನು ಹೆಚ್ಚು ಕಾಲ ತಮ್ಮೊಂದಿಗೆ ಇರಲಿಂಬ ಅಭಿಲಾಷೆಯಿಂದ ಹೆತ್ತವರು ಅವಳ ಮೇಲೆ ಹೆಚ್ಚಿನ ಒತ್ತಾಯವನ್ನು ತರಲಿಲ್ಲ.

ಪಚ್ಚೆ ಕಲ್ಲಿನ ಶಿಲ್ಪ ವಿದ್ಯೆಯಲ್ಲಿ ಚಾಂಗಪೋ ಪ್ರಾವೀಣ್ಯವನ್ನು ಸಂಪಾದಿಸಲು ಹೆಚ್ಚು ಸಮಯ ಹಿಡಿಯಲಿಲ್ಲ. ನೈಸರ್ಗಿಕ ಪ್ರತಿಭೆಯನ್ನು ಆತನು ಇವರಲ್ಲಿ ತೋಪಾಡಿಸುತ್ತಿದ್ದುದರಿಂದ, ಆತನಿದ್ದ ಅಂಗಡಿಯ ಮ್ಯಾತಿನಾತ್ಕೆಸಿಗೂ ಪರಿತಿತು. ಸುಪಾಜಸರು ವಿಶೇಷವಾಗಿ ಆಜ್ಞೆಗೆ ವ್ಯಾಪಾರಕ್ಕಾಗಿ ಬರತೊಡಗಿದರು. ಒಂದು ದಿನ ಮಿಲಾನಳ ತಂದೆಯೂ ರಾಜನೆಗೆ ವಿಶೇಷವಾದ ಉಡುಗೊರೆಯನ್ನು ಆ ವಳ ಜನ್ಮದಿನದಂದು ನೀಡಬಯಸಿ, ಚಾಂಗಪೋ ಕೆಲಸ ಮಾಡುತ್ತಿದ್ದ ಅಂಗಡಿಗೆ ಬಂದರು. ಚಾಂಗಪೋನ ಶಿಲ್ಪ ಕಲಾ ವೈಪರಿಯನ್ನು ಕಂಡು ಅವರು ವಿಸ್ಮಿತರಾದರು. ತುಂಬ ಉತ್ತೇಜಿತರಾಗಿ ಆವರು "ಮಗನೇ, ಇದು ರಾಜನೆಗೆ ಸೇರುವ ವಿಶೇಷವಾದ ಕೆಲಸ; ನೀನು ದನ್ನು ಸಾಜೂಕಾಗಿ ಮಾಡಿದರೆ, ನಿನ್ನ ಖ್ಯಾತಿ ತುತ್ತತುದಿಗೇರುತ್ತದೆ; ಲೋಕದಲ್ಲೆಲ್ಲ ಜನ ಜಪತಪವಾಗುತ್ತದೆ" ಎಂದರು.

ಅವರು ತಂದ ಪಚ್ಚೆ ಕಲ್ಲನ್ನು ಚಾಂಗಪೋ ಪರೀಕ್ಷಿಸಿದ. ಅದು ಉತ್ಕೃಷ್ಟ ವರ್ಗಕ್ಕೆ ಸೇರಿದ ಕಲ್ಲು. ಭಗವತಿ ದಯಾಸುಯಿಯನ್ನು ಆದರಲ್ಲಿ ಕಡಿಯಲು ಅವನು ಸಂಕಲ್ಪಿಸಿದ. ಇಪ್ಪತ್ತರ ವರೆಗೆ ಯೋಚಿಸಿ ಮೂರ್ತಿಯಲ್ಲಾ ಇಲ್ಲದ ಚೆಲುವನ್ನು ಇದರಲ್ಲಿ ತುಂಬಿಸುವೆನೆಂದು ಅವನು ದೃಢಚಿತ್ತದಿಂದ ಕೆಲಸತೊಡಗಿದ. ಕೆಲಸ ಮುಗಿಯುವ ವರೆಗೆ ಅವನು ಯಾರನ್ನೂ ಬಳಿ ಬರಗೊಡಲಿಲ್ಲ. ಅವು ಸಂಸೂರ್ಣವಾಗಿ ಮೂರ್ತಿಯಲ್ಲಿ ಯೂಕೊಬ್ಬರೂ ಹೋಸನನ್ನು ಗುರುತಿಸಲಾರದಾದರು. ಕವಿಯಲ್ಲಿ ಸುತ್ತು ತಿರುಗಿಸಬಹುದಾಗಿದ್ದ ' ಬಿಡಿದು ಕವಿಯೋಲೆಗಳು ಬಹಳ ರೆಳ್ಳೆನ್ನಿದ್ದು, ಎಲ್ಲರೂ ಅವನ ಹಸ್ತಕೌಶಲ್ಯಕ್ಕೆ ತಲೆಕೊಡಿಗರಿದರು.

ಸೌಂದರ್ಯದ ಸಾಕಾರ ನೂರ್ತಿಯಂತಿದ್ದ ಇದನ್ನು ಕಂಡು ಕಮಿಶನರೆ ಚಾಂಗರೊ ಸಂಪ್ರೀತರಾದರು. ಅವರು ಮುಮಿಟನ್ನು ಕುತೊಪಲಿದಂದ ನಿರೀಕ್ಷಿಸುತ್ತ "ಇದು ಮಿಲಾನಳನ್ನು ಬಹಳವಾಗಿ ಹೋಲುತ್ತದೆ" ಎಂದರು. "ಹೌದು, ಅವಳೇ ನನ್ನ ಸ್ಫೂರ್ತಿ ಮತ್ತು ಸ್ತೋತ್" ಎಂದು ಚಾಂಗಪೋ ಹೇಳಿದಾಗ, ಅವರ ಹಿಂದಿನ ಭಾವನೆಯನ್ನು ಕಮಿಶನರು ಗುರುತಿಸಲಿಲ್ಲ. ರಾಜಯು ರಜ್ಜು ಈ ಕಾಣಿಕೆಗಾಗಿ ಪ್ರದರ್ಶಿಸಲ್ಪಡುವಾದ ಸ್ನೇಹನನ್ನೆ ಆವರು ಚಿತ್ರಿಸುತ್ತಿದ್ದರು.

ಮೊಗಳಿಕೆಯ ಯಾವ ಮಾತುಗಳೂ ಚಾಂಗಪೋನಿಗೆ ಇಷ್ಟವಾಗಲಿಲ್ಲ—ಮಿಲಾನಳ ಹೊರತಾಗಿ ಅವುಗಳ ಮಾರ್ಧುರ್ಯವನ್ನೇನನ್ನೂ ಆ ಸುಭವಿಸಲಾರನೆಂದು ಅನಸಿಗೆ ತೋರಿತು. ಅನಳಿಗೆ ಇಸ್ಪತ್ತೈದು ವರೆ ಮೆಟ್ಟಿರೆಸುತ್ತಿದ್ದಳು. ಆವಳೆಸ್ಟೇ ಬೇಡ ಬೇಡನೆಂದರೂ ಹೆತ್ತವರು ಸುಮನೆಯನ್ನು ಮುಂಜಾಡುವಂತಿರಲಿಲ್ಲ. ದೊಡ್ಡ ಮನೆತನದ ಹುಡುಗನೊಬ್ಬನೊಡನೆ ಅವಳ ಮುಮವೆ ನಿಶ್ಚಯವಾಗಿ, ಉಡುಗೊರೆಗಳ ವಿನಿಮಯವೂ ನಡೆಯಿತು. ಚಾಂಗ ಹೋನ ಮನಸ್ಸು ಬಹಳ ಬಿನ್ನವಾಯಿತು.

— ೪ —

ನಿರಾಶೆಯಲ್ಲಿ ನೊಂಪುಕೊಂಡ ಹುಡುಗನೂ ಯುಡುಗಿಯೂ ಒಂದು ರಾತ್ರಿ ಪಲಾಯನ ಸೂತ್ರವಿಸುವ ಯೋಜನೆಯನ್ನು ಮಾಡಿದರು. ಸೂಚಾನ ತನ್ನ ಅಮೂಲ್ಯ ಆಭರಣಗಳನ್ನು ತರುಸಿಕೊಂಡೂ ಅದನ್ನು ಪಾರಿ ಕೆಲಸ ಸಿಗುವನರೆಗೆ ದಿನಗಳೆಯಬಹುದೆಂದೂ ನೂಚಿಸಿದಳು. ತೋಟದ ಹಿಂಬದಿಯಿಂದ ಹಾರಿ ಹೋಗುವ ಸ್ಥಳುತ್ನದಲ್ಲಿ ಇವರಿಬ್ಬಾಗ, ರಾತ್ರಿಯ ಈ ಕತ್ತಲ್ಲಲ್ಲೂ ಅವರು ಮುಮಕ ಸೇವಕರೊಬ್ಬನ ಕಣ್ಣಿಗೆ ಬಿದ್ದರು. ಜನಿತನದ ಸುರ್ಪಾಪೆ ಕೆಬ್ಬಿಹೋಗುವುದನ್ನು ಕಂಡ ಅವನು, ದುಡುಗಿರುವನ್ನು ತಡೆದು ನಿಲ್ಲಿಸಿದ. ಚಾಂಗನೋ ಅವನಿಗೆರೆಯು ಗುದ್ದಿ, ಕೆಳಗೆ ನೂಕಿದ. ಕೊಟ್ಟ ಗುದ್ದು ಮರ್ಮಸ್ಥಾನಕ್ಕೆ ತಗಲಿದುದರಿಂದ ಮುಮಕನ ಪ್ರಾಣ ಹಾರಿ ಬೋಯಿತು

ಇದು ಇಬ್ಬರಲ್ಲೂ ಹೊಸ ಭಯವನ್ನುರಿಟುಮಾಡಿತು. ಅವರಿಬ್ಬರೂ ಓಡಿದರು. ರಾಜಧಾನಿಯನ್ನು ಬಿಟ್ಟು ದೂರ ನಡೆದರು. ಯಂಗತ್ಸೆ ನದಿಯನ್ನೂ ದಾಟಿ ದಕ್ಷಿಣ ಚೀನಕ್ಕೆ ಆ ನರು ಬಂದರು. "ಕಿಯಾಂಗ್ಸೇಯಲ್ಲಿ ಪಚ್ಚೆ ಕಲ್ಲುಗಳ ಕೆಲಸ ನಡೆಯುತ್ತದೆಂದು ಕೇಳಿದ್ದೇನೆ" ಎಂದು ಚಾಂಗಪೋ ಹೇಳಿದ. "ಏನು, ಪುನಃ ಅದೇ ಉದ್ಯೋಗ ಮಾಡುತ್ತೀಯಾ?" ಎಂದು ಮಿಲಾನ ಕಳವಳಿಸಿದಳು "ಆ ಮುಮಕ ಸತ್ತುಹೋದ—ಈಗ ನೀನು ಚೀರೇನಾದರೂ ಉದ್ಯೋಗ ನಾಡಬೇಕು; ಇಲ್ಲಿದ್ದರೆ ಆಧಿಕಾರಿಗಳಿಗೆ ಪತ್ತೆಯಾಗುತ್ತದೆ" ಎಂದೆನಳು ತಿಳಿಸಿ ಹೇಳಿದಳು.

ಚಾಂಗಪೋ ಮಬ್ಬಿ ಕಚ್ಚಬೇಕಾಯಿತು: ಅವನು ತನ್ನ ಕೌಶಲ್ಯವನ್ನು ಪ್ರಕಟಿಸದೆ ಸುಮ್ಮನೆ ಕೂತಿರಲಾರ. ಆದರೆ ಅವಕ್ಕೆ ಮಾರ್ಗವಿರಲಿಲ್ಲ. ಕಮಿಶನರ ಚಾಂಗ ಮುಗಳನ್ನು ಹುಡುಕಿಕೊಂಡು ಹೋದ ಮತ್ತು ಮುಮಕ ನನ್ನು ಹೊಡೆದುಕೊಂಡ ಸುದ್ದಿ ತಿಳಿದೊಡನೆಯೇ ಲೋಕವಲ್ಲಿ ಎಲ್ಲೇ ಆಡಿದ್ದರೂ ಆ ಮಸ್ಟರನ್ನು ಹಿಡಿಯ ತಂದು ಶಿಕ್ಷಿಸಬೆ ಇರೆ ಆಠರೆನೆಂದು ಪ್ರತಿಜ್ಞೆ ಮಾಡಿದ್ದರು. ಅದು ಇವರಿಗೆ ಗೊತ್ತಿಲ್ಲದಿದ್ದರೂ ಯಾರೂ ಊಹಿಸಬಹುದಾದಷ್ಟು ಸರಳವಾದ ವಿಷಯ ಅದು.

ಗಂದನ ಉದಾಸೀನತೆ ನಿಲುವುಗಳನ್ನು ಮಾಟಗೊರಿಸಿತು. ಅವರು ಇನ್ನೂ ದೂರ ನಡೆದರು. ಆದರೆ ಚಾಂಗಪೋನನ್ನು ಕಿಯಾಂಗ್ಸೆಯ ಪಚ್ಚೆ ಕಲ್ಲಿನ ಶಿಲ್ಪಿ ಕೇಂದ್ರ ಆಕರ್ಷಿಸುತ್ತಿರುವುದು ಮಿಲಾನಳಿಗೆ ಸ್ಪಸ್ಟವಾಯಿತು. ಕಿಯಾಂಗ್ಸೇ ಉತ್ತಮ ರೀತಿಯ ಪಿಂಗಾಣಿ ಪಾತ್ರೆಗಳಿಗೂ ಹೆಸರುವ ಊರು. ಅಲ್ಲಿಯ ಕೊಡೆಮನೆಯನ್ನೆಗೆ ಸಾಟಿ ಇರಲಿಲ್ಲ ಚಾಂಗಪೋ ಪಿಂಗಾಣಿಯ ಸರಕುಗಳನ್ನು ತಯಾರಿಸಬಹುದೆಂದು ಅವಳು ಅಕಾವದನ್ನಿಂದಿದೆ ನುಡಿದಳು. ಚಾಂಗಪೋ ಅತ್ತ ಗಮನಿಸಲಿಲ್ಲ. "ಇಲ್ಲಿ, ನಾನು ಆ ಉದ್ಯೋಗ ಮಾಡಿದರೂ, ಹಿಂದೆ ಯಾರೂ ಕೋರಿಸಿರದ ಸೈಚಿತ್ರ ತೋರಿಸುವುದು ನಿಶ್ಚಯ. ಜಗ ತಾನಾಗಲೇ ನನ್ನ ಪತ್ತೆ ಪ್ರಕಟವಾಗುತ್ತದೆ" ಎಂದನವ.

ಸ್ತ್ರೀ ಸಹಜ ಭಾವನೆಗಳು ಮಿಲಾನಳನ್ನು ಭಯಕ್ಕೆ ಗುರಿಮಾಡಿದವು. "ನಿನಗೆ ಹೆಸರಿನ ನೋವನ್ನು ತೊರೆಯಲಾಗುವೆದಿಲ್ಲವೇ? ನಾವೀಗ ತೊಂದರೆಯಲ್ಲಿದ್ದೇವೆ. ನಮ್ಮ ಸರ್ವನಾಶವಾಗುತ್ತೆ" ಎಂದವಳು ಆನುನಯ ವಿನಯದಿಂದ ಬೇಡಿದಳು. ಆದರೆ ಗಂಡಸಿಗೆ ಸಾಮಾನ್ಯ ಕೆಲಸಗಳಲ್ಲಿ ಏನು ಮಟ್ಟುಗೂ ತೃಪ್ತಿ ಯಾಗಲಾರದೆಂಬುದನ್ನು ಅವಳು ಯಚಿತವಾಗಿ ತಿಳಿದಿದ್ದಳು.

ಯಂ. ಗಣಪ್ಪಯ್ಯ ಎಂಡ್ ಸನ್ಸ್

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮೈಂಗಳೂರು ಇವರ

ಅಶೋಕಾರಿಷ್ಟ ಮತ್ತು ಮಾತ್ರೆ—ಮೈಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಆಕಾಲ ಬಿಳಿಪ್ಪೆ, ಮುಮುಸ್ರಾವವು ಜಾಸ್ತಿಯಾಗಿಯೂ, ಕವಿಸೆಯಾಗಿಯೂ ಹೋಗುವುದು; ಬಿಳಿಸೆರೆಗು, ಸಂತಾಸ ಹೀನತೆ, ರಕ್ತಹೀನತೆ ಮುತಮಾಲೆ, ನೋವಲಾಪೆ ಸ್ತ್ರೀಯರಿಗೆ ಗಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು. ಬಾಟ್ಲೆ 1ಕ್ಕೆ ರೂ. 3-8-0.

ಗರ್ಭ ರಕ್ಷಣೆ—ಗರ್ಭಿಣಿಯರಿಗೆ ಅತ್ಯಂತ ಫಲಕಾರಿಯಾದ ಔಷಧಿ. ಜಿವಿಮೋಷ, ಗರ್ಭಸಂತನವಾಗುನಿಕೆ, ವಾಂತಿ, ಅರಿತಿ, ಅರಕ್ತತೆ, ನುಲಬದ್ಧತೆ, ನಾಯು ಉಪಪ್ರು, ಕೈ ಕಾಲುಬಚ್ಚುವುದು ಇವುಗಳಿಲ್ಲವೆಲ್ಲಾ ಹೋಗಲಾಡಿಸುವುದು. ಬಾಟ್ಲೆ 1ಕ್ಕೆ ರೂ. 3-8-0.

ಇವಲ್ಲದೆ ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿನ ಬರೆಯಿರಿ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ, ಯೋಗಕ್ಕೆ ತಕ್ಕ ಔಷಧಿಯನ್ನು ರವಾನಿಸಬಹುದು.

ಪಚ್ಚೆಕಲ್ಲಿನ ತಿಲ್ಲಿ

(ಹಿಂದಿನ ಪುಟದಿಂದ)

— ೫ —

ಪೆಂಡತಿಯ ಅಭರಣಗಳನ್ನು ಮಾರಿಬಂದ ಹಣದಿಂದ ಚಾಂಗಪೋ ಕೆಲವು ಸಾಮಾನ್ಯ ಕಲ್ಲುಗಳನ್ನು ತೆಗೆದುಕೊಂಡು ಅಂಗಡಿಯನ್ನು ಬ್ರಾರಂಭಿಸಿದನಾದರೂ ಅವನ ಕೈಚಳಕ ಸರಕುಗಳಲ್ಲಿ ಉತ್ತಮ ಕೌಶಲ್ಯದ ಮುದ್ರೆಯನ್ನೊತ್ತದಿರಲಿಲ್ಲ. ಎಲ್ಲರೂ ನೂಡುತ್ತಿದ್ದ ಸಾಮಾನ್ಯ ಒಡವೆಗಳನ್ನೆ ಇವನು ತಯಾರಿಸುತ್ತಿದ್ದರೂ ಅವುಗಳಲ್ಲಿ ತಮ್ಮದೇ ವೈಶಿಷ್ಟ್ಯವಿರುವುದನ್ನು, ಕಲಾವಿದನ ಪ್ರತಿಭೆ ಬೆಲೆಯುಳ್ಳ ಹೊರಸೂಸುತ್ತಿರುವುದನ್ನು ಕಂಡ ಮಹಾ ಜನರು, ಅವನ ಒಡವೆಗಳಿಗಾಗಿ ಮುತ್ತಿದರು.

"ನನಗೆ ತುಂಬ ಚಿಂತೆಯಾಗುತ್ತಿದೆ—ನಿನಗೆ ಹೆಸರು ಬರುವುದನ್ನು ಕೇಳಿ ನಾನು ಸಂತೋಷಿಸಲಾರದವಳಾಗಿದ್ದೇನೆ. ನಮಗೊಂದು ಮಗುವಾಗುವ ದಿನ ಬಹಳ ದೂರವಿಲ್ಲ" ಎಂದು ಮಿಲಾನ ಒಮ್ಮೆ ಅವನಿಗೆ ಹೇಳಿದಳು. ಚಾಂಗಪೋ ಮಾತ್ರ ಬಹಳ ಸಂತೋಷಗೊಂಡವನಂತೆ ಅವಳನ್ನು ಚುಂಬಿಸಿ, "ಹಾಗಾದರೆ ನನ್ನ ಕುಟುಂಬವೂ ಬೆಳೆಯುತ್ತದೆ" ಎಂದು ನಕ್ಕು ನುಡಿದ.

ಅವರು ನೆಲಸಿದ್ದ ಕೊಕೂಂ ನಗರದ ಮೇರೆ ದಾಟ್ಟು ಚಾಂಗಪೋನ ಪಾಪೋಪೋ ಶಿಲ್ಪಗಳ ಖ್ಯಾತಿಯು ದೂರ ದೂರ ಪಸರಿಸಿತು. ಒಂದೇ ವರ್ಷದಲ್ಲಿ-ನಗರಗಳಿಗೆ ಈ ಮಾರ್ಗವಾಗಿ ತೆರಳುತ್ತಿದ್ದ ಎಲ್ಲ ಸುಪಾಜನರೂ ಪಾಪೋಪೋ ಶಿಲ್ಪ ಕೃತಿಗಳಿಗಾಗಿ ಚಾಂಗಪೋನ ಅಂಗಡಿಯನ್ನು ಸುತ್ತುವರಿಯುವ ದೃಶ್ಯ ನಿತ್ಯದ್ದಾಯಿತು. ಹಾಗೆ ಅಂಗಡಿಗೆ ಬಂದವ ನೊಬ್ಬನು ಶಿಲ್ಪ ಕೃತಿಗಳನ್ನೆಲ್ಲ ಸೂಕ್ಷ್ಮವಾಗಿ ನೀಕ್ಷಿಸಿ ,,ಕಮಿಶನರ ಚಾಂಗರೆ ಸಂಬಂಧಿ ಚಾಂಗಪೋ ನೀನಲ್ಲವೆ?" ಎಂದು ಕೇಳಿದ.

ಚಾಂಗಪೋ ಗೊಂದಲದಲ್ಲಿ ಬೀಳುವಂತಾಯಿತು. ,,ಇಲ್ಲಿ, ನನಗದೇನೂ ತಿಳಿಯದು'' ಎಂದವನು ನಿಂತಕಡೆಯಿಂದ ಅವನ ಮಾತಿನಿಂದ ಬಂದವನ ಕುತೂಹಲ ಹೆಚ್ಚಿತು. ,,ನೀವು ಉತ್ತರ ಚೀನದ ಭಾಷೆಯ ಪ್ರಭಾವಕ್ಕೆ ಬಿದ್ದಿದ್ದೀರಿ. ನೀವು ಅಲ್ಲಿಂದ ಬಂದವರೇ ನಿಜ. ಇರಲಿ, ನಿಮ್ಮ ಮದುವೆಯಾಗಿದೆಯೆ?" ಎಂದು ಸುನಃ ಪ್ರಶ್ನಿಸಿದ. ,,ಅದು ನಿಮ್ಮ ಕೆಲಸವಲ್ಲ" ಎಂಬುವಾಗ ಚಾಂಗಪೋ ನಿಸ್ಧುರದಿಂದ ನಡಕೊಳ್ಳುವುದು ಅನಿವಾರ್ಯವಾಯಿತು.

ಮಿಲಾನ ಇದನ್ನೆಲ್ಲ ಮನೆಯೊಳಗಿಂದಲೇ ಕೇಳುತ್ತಿದ್ದಳು. ಬಂದವನು ತಂದೆಯ ಆಪ್ತ ಪಗಡದ ಸೇವಕರಲ್ಲಿ ಒಬ್ಬನೆಂದು ಅವಳು ತಿಳಿದುಕೊಂಡಳು. ಪಾಪೋಪೋ ಶಿಲ್ಪ ಕೃತಿಗಳು ತಮ್ಮನ್ನು ಸುಳುಗಿಸಿ ಬಿಟ್ಟವೆಂದು ಅವಳು ಆಸುಪಾಸಿನಿದಳು.

ಮರುದಿನವೂ ಆ ವ್ಯಕ್ತಿ ಬಂದು, ಏನೇನೋ ಪ್ರಶ್ನೆ ಕೇಳಿ ತಿರುಗಿದಾಗ ,,ನೀನು ಏನು ಹೇಳುತ್ತಿಯೋ, ನನಗದರ ಸುದ್ದಿಯೇ ಗೊತ್ತಿಲ್ಲ'' ಎಂದ. ,,ಹಾಗೆ ನನ್ನನ್ನು ನೋಸ ಗೊಳಿಸಬೇಡ: ಚಾಂಗಪೋನ ಮೇಲೆ ಸೇನಕ ನನ್ನು ಕೊಂದು ಹಾಕಿದ, ಕಮಿಶನರ ಮಗಳನ್ನು ಹಾರಿಸಿಕೊಂಡು ಹೋದ ಮತ್ತು ಮನೆಯ ಆಭರಣಗಳನ್ನು ಕಳವು ಮಾಡಿದ ಆಪಾದಿನಿವೆ. ನೀವು ಚಾಂಗಪೋ ಅಲ್ಲವೆಂದಾದರೆ, ನಿಮ್ಮ ಪೆಂಡತಿಯ ಕೈಯಲ್ಲಿ ಬಂದು ಲೋಟೆ ಬಾ ಕಳಿಸಿ ಕೊಡಿ—ನಾನು ಅವನನ್ನು ನೋಡಿ, ಕಮಿಶನರ ಮಗಳು ಅವಳಲ್ಲವೆಂದು ಖಚಿತಮಾಡಿಕೊಳ್ಳುತ್ತೇನೆ" ಎಂದನು ಗದರಿಸಿದ.

,,ನಾನಿಲ್ಲಿ ಅಂಗಡಿ ಇಟ್ಟು ಕೊಂಡಿದ್ದೇನೆ. ನೀವು ಉಪದ್ರವೀಯುವ ಪಕ್ಷದಲ್ಲಿ ಹೊರಗೆ ಹೋಗಿರೆಂದು ಹೇಳುತ್ತೇನೆ" ಎಂದು ಚಾಂಗ ಪೋ ಸಿಟ್ಟಿನಿಂದ ನುಡಿದ. ಬಂದವನು ವ್ಯಂಗ್ಯವಾಗಿ ನಕ್ಕು ಹೊರಟು ಹೋದ. ಇನ್ನು ಅಪತ್ತು ಬಹಳ ದೂರವಿಲ್ಲವೆಂದು ಗ್ರಹಿಸಿದ ದಂಪತಿಗಳು ಕೂಡಲೇ ಗಂಟು ಮೂಟೆ ಕಟ್ಟಿದರು. ಮೂರು ತಿಂಗಳ ತಮ್ಮ ಮಗುವಿನೊಡನೆ ಕತ್ತಲಲ್ಲಿ ಓಡಿ ಹೋದರು. ಆದರೆ ದೈವ ಮುನಿದಿತ್ತೋ, ಯಾರು ಬಲ್ಲರು? ಕಾಂಶೀನದಲ್ಲಿ ಮಗುವಿಗೆ ಕಾಹಿಲೆಯಾಯಿತು. ಒಂದು ತಿಂಗಳ ಸ್ರಯಾಣದಲ್ಲಿ ಕೈಯಲ್ಲಿದ್ದ ಕಾಸು ಮುಗಿದುದರಿಂದ, ಚಾಂಗಪೋ ಅಂಗಡಿಕಾರನೊಬ್ಬನಿಗೆ ತನ್ನ ಕೃತಿಯೊಂದನ್ನು ಮಾರಿದ. ,,ಓ, ಇದು ಪಾಪೋಪೋ ಕೃತಿ: ಬೇರೆ ಯಾರೂ ಮಾಡುವಂಥದಲ್ಲ" ಎಂದು ಅಂಗಡಿಕಾರ ಸಂತೋಷದಿಂದ ಅದನ್ನು ನರು ಕಿಸುತ್ತಿದ್ದಾಗ ಚಾಂಗಪೋನ ಮುಖದಲ್ಲಿ ವಿಷಾದದ ನಗು ಸುಳಿಯಿತು.

— ೬ —

ಕಾಂಶೀನವು ಒಳನಾಡಿನಲ್ಲಿ ಪರ್ವತದ ತಪ್ಪಲಲ್ಲಿ ನೆಲೆಸಿದ್ದ ವ್ಯಾಪಾರ ಕೇಂದ್ರ. ನಿಸರ್ಗ ಸೌಂದರ್ಯವು ಚಾಂಗಪೋನನ್ನು ಉಲ್ಲಾಸಗೊಳಿಸಿತು. ಅದಕ್ಕೂ ಇನ್ನೂ ಒಳನಾಡಿಗೆ ಹೋಗುವುದು ಇವ್ಯವೆಂದು ಭಾವಿಸಿ, ಅವರು ಇಪ್ಪತ್ತು ಮೈಲು ದೂರ ನಡೆಯಲು ನಿಶ್ಚಯಿಸಿದರು. ಅಲ್ಲಿ ಅಂಗಡಿಯೊಂದನ್ನು ಪುನಃ ಪ್ರಾರಂಭಿಸಲಾಗುವಂತೆ ಚಾಂಗಪೋ ತನ್ನ ಇನ್ನೊಂದು ಕೃತಿಯನ್ನು ವಿಕ್ರಯಿಸುವಂತಾಯಿತು.

ಮಿಲಾನ "ಅದನ್ನೇಕೆ ಮಾರಿದ್ದು? ನಾವು ಈ ಸಲ ಪಿಂಗಾಣಿಯ ಸರಕುಗಳನ್ನು ತಯಾರಿಸುವುದೇ ಲೇಸು.'' ಎಂದಳು. ,,ಏಕೆ?'' ಎಂದು ಚಾಂಗಪೋ ತಿಳಿದಿದ್ದರೂ, ಪ್ರಶ್ನಿಸಿದ ,,ಅಯ್ಯೋ, ನಾವು ಈಗಲೇ ಸಿಕ್ಕಿ ಬಿದ್ದಿದ್ದೇ ವೆ...ಪಚ್ಚೆ ಕಲ್ಲುಗಳಲ್ಲದಿದ್ದರೆ ನಿನಗೆ ಕೆಲಸ ಮಾಡಲು ಸಾಧ್ಯವೇ ಇಲ್ಲವೆ, ಪೋ? ನಿನಗೆ ನಿನ್ನ ಹೆಂಡತಿ ಮತ್ತು ಮಗುವಿಗಿಂತಲೂ ಆದು ದೆಚ್ಚಿನಿಸುತ್ತದೆಯೆ?" ಎಂದು ಮಿಲಾನ ಮರುಗಿದಳು. ,,ಇನ್ನೂ ಕೆಲವು ಸನಯ ಕಳೆಯಲಿ: ಪರಿಸ್ಥಿತಿ ನಿನಗೆ ಅನುಕೂಲವಾಗಿ ತಿರುಗಿ ಕೊಂಡೀತು. ಅಲ್ಲಿಯ ವರೆಗೆ ಸುಮನೆ ತೋರಿಸಲಾರೆಯಾ?'' ಎಂದವಳು ವಿನಂತಿಸಿದಳು.

ತನ್ನ ಇಚ್ಛೆಗೆ ವಿರುದ್ಧವಾಗಿ ಚಾಂಗಪೋ ಕಪ್ಪು ಮಣ್ಣಿನ ವಿಗ್ರಹಗಳನ್ನು ಮಾಡಲು ಪ್ರಯತ್ನಿಸಿದ. ನೂರಾರು ಬುದ್ಧನ ವಿಗ್ರಹಗಳನ್ನು ಅವನು ತಯಾರಿಸಿದ. ಕೆಂಪುನಿನ ಪಚ್ಚೆಕಲ್ಲಿನ ವ್ಯಾಪಾರಿಗಳು ಈ ಮಾರ್ಗವಾಗಿ ಹೋಗುತ್ತಿದ್ದಾಗ, ಅವನ ಪನಸ್ಸು ಆವರನ್ನು ತಡೆದು ನಿಲ್ಲಿಸೆಂದು ಹೇಳುತ್ತಿದ್ದಿತು. ಪಚ್ಚೆಕಲ್ಲಿನ ಅಂಗಡಿಗಳ ಮುಂದೆ ಅವನು ನಿಂತಾಗ, ಕಣ್ಣುಗಳು ಅತಾಂತಿಯಿಂದ ತುಳುಕಾಡುತ್ತಿದ್ದವು. ಮನೆಗೆ ಮರಳಿದವನೇ ಮಣ್ಣನ್ನು ಕೈಯಿಂದ ತಿಕ್ಕಿ ನಜ್ಜುಗುಜ್ಜು ಮಾಡುತ್ತಿದ್ದ—"ಥೂ, ಹಾಳು ಮಣ್ಣು! ಪಚ್ಚೆ ಕಲ್ಲಿನಲ್ಲಿ ಕೆಲಸ ಮಾಡುವ ನನಗಿದು ಗಂಟು ಬಿದ್ದದ್ದು ದೊಡ್ಡದು" ಎಂದವನು ವಿಕಟವಾಗಿ ನಗುತ್ತಿದ್ದ.

ಕಿಡಿಯುಗುಳುವ ಅವನ ಕಣ್ಣುಗಳು ಮಿಲಾನಳನ್ನು ಹೆದರಿಸುತ್ತಿದ್ದವು. "ನಿನ್ನ ಸರತಿಯೂ ಬರುತ್ತದೆ; ಅಲ್ಲಿಯ ವರೆಗೆ ದಯವಿಟ್ಟು ಕಾದಿರು" ಎಂದವಳು ಸಮಾಧಾನ ಪಡಿಸುತ್ತಿದ್ದಳು.

ಕೆಲವು ದಿನಗಳಲ್ಲಿ ಹೊಗಳಿಕೆಯ ಸುರಿಮಳೆಗರೆದಿದ್ದ ಆ ವ್ಯಾಪಾರಿ ತಾನಾಗಿಯೇ ಚಾಂಗಪೋ ಇದ್ದಲ್ಲಿಗೆ ಬಂದು ಇನ್ನು ಕೆಲವು ಸಹೋದ್ಯೋ ಶಿಲ್ಪ ಕೃತಿಗಳನ್ನು ಪಡೆಯಲು ಬಯಸಿದ. ''ನಾನು ಕಿಯಾಫಗೆ ಹೋಗಿ ಬಂದಿದ್ದೇನೆ. ಈಗ ಪಹೋಪೊ ಆಂಗಡಿಯವರ ಕೃತಿಗಳು ಅಪ್ಪು ಚೆನ್ನಾಗಿಲ್ಲ" ಎಂದವನು ಪುಂಗನ ಮೂರ್ತಿಯೊಂದನ್ನು ಹೊರತೆಗೆದ. ಅದನ್ನು ನೋಡಿದವನೇ ಚಾಂಗಪೋ ''ಕೃತಕ, ಕೇವಲ ಕೃತಕ" ಎಂದು ಉದ್ಗರಿಸಿದ. "ಓ, ನಿನಗೆ ಶಿಲ್ಪವಿದ್ಯೆ ತಿಳಿದ ಹಾಗೆ ತೋರುತ್ತದೆ" ಎಂದು ವ್ಯಾಪಾರಿ ಹೇಳಿದಾಗ, ಚಾಂಗಪೋ "ಥೂ'' ಎಂದು ವಿಷಾದದಿಂದ ನಿಟ್ಟುಸಿರುಬಿಟ್ಟ.

ಹಾಗೆ ಬಂದ ವ್ಯಾಪಾರಿ, ಚಾಂಗಪೋನನ್ನು ಉಬ್ಬಿಸಿ,ಇನ್ನೊಂದು ಪಾಪೋಪೋ ಶಿಲ್ಪ ಕೃತಿಯನ್ನು ಆಪಸಿಂದ ಪಡೆದುಕೊಂಡ. ತಾನು ನಾಂಚಂಗಕ್ಕೆ ಮುಂದಿನ ಸಲ ಪ್ರಯಾಣಿಸಿದಾಗ, ಸಾಮಾನ್ಯ ಕೊಡೆಮಣ್ಣಿನ ಅಂಗಡಿಕಾರನೊಬ್ಬನಿಂದ ತಾನು ಕ್ರಯಕ್ಕೆ ಪಡೆದುಕೊಂಡ ಪಾಪೋಪೋ ಶಿಲ್ಪಕೃತಿಗಳ ವರ್ಣನೆಯನ್ನು ಅತ ಮಾಡಿದ. "ಅಂಥವನೊಬ್ಬನ ಬಳಿ ಅಮೂಲ್ಯವಾದ ಶಿಲ್ಪ ಕೃತಿಗಳಿರುವುದು ಆಶ್ಚರ್ಯ" ಎಂಬ ಅವನ ಮಾತಿಗೆ ಎಲ್ಲ ಸ್ನೇಹಿತರೂ ಧ್ವನಿಗೂಡಿಸಿದರು.

— ೭ —

ಆರು ತಿಂಗಳು ಕಳೆಯುವಷ್ಟರಲ್ಲಿ ಕೆಲವು ಯೋಧರು ಚಾಂಗಪೋನನ್ನು ದಸ್ತಗಿರಿಮಾಡುವ ಆಜ್ಞೆಯೊಡನೆ ಬಂದರು. ಕಮಿಶನರ ಚಾಂಗರ ಕಾರ್ಯದರ್ಶಿಯೇ ಚಾಂಗಪೋಗೆ ಬಂಧ ಉದ್ವೇಪನವನ್ನು ವಿವರಿಸಿ ಹೇಳಿದ.

"ಅಯಿತು, ಆದರೆ ಕೆಲವು ಸಾಪಾನುಗಳನ್ನು ಕಟ್ಟಿಕೊಳ್ಳಲು ನಮ್ಮನ್ನು ಬಿಡಿ'' ಎಂದು ಚಾಂಗಪೋ ವ್ಯಾರ್ಥಿಸಿದ; ಮಿಲಾನಳೂ "ಮಗುವಿಗಾಗಿ ನಾವು ಈ ಕಷ್ಟವನ್ನು ಪಹಿಸಬೇಕಾಗಿದೆ" ಎಂದಳು. "ಹೌದು, ಹೌದು, ಕಮಿಶನರ ಪೊಮ್ಮಗನಿಗೇನೂ ತೊಂದರೆಯಾಗಬಾರದು. ಅವಶ್ಯನೀನಾದರೂ ಜದ್ದು ಹಿಡಿದರೆ ನಮಗೆಯೇ ತೊಂದರೆ" ಎಂದು ಅಧಿಕಾರಿ ಇದಕ್ಕೆ ಸಮ್ಮತಿಸಿದ.

ಒಬ್ಬರನ್ನೊಬ್ಬರು ಅಗಲುವ ತೀವ್ರಯಾತನೆಯನ್ನು ದಂಪತಿಗಳು ಅನುಭವಿಸಿದರು. ತನ್ನ ಮಡದಿಯನ್ನೂ ಮಗುವನ್ನೂ ಮುದ್ದಿಸಿ ಚಾಂಗಪೋ ಹಿತ್ತಿಲಿಗೆ ಕಿಟಕಿಯ ಮೂಲಕ ಹಾರಿದ. ಆವರನ್ನು ಅವನಿನ್ನು ಪುನಃ ನೋಡುವಂತಿಲ್ಲ. ಮಿಲಾನಳೂ ಹಾಗೆಯೇ—"ನಾನು ನಿನ್ನನ್ನು ಎಂದೆಂದಿಗೂ ಪ್ರೀತಿಸುತ್ತೇನೆ; ಆದರೆ ನೀನು ಪಚ್ಚೆಕಲ್ಲಿನ ವ್ಯಾಪಾರ ಪಕ್ಕೆ ಮಾತ್ರ ಬೀಳಬಾರದು" ಎಂದವಳು ಅಗಲೂ ಎಚ್ಚರಿಕೆ ಹೇಳಿದಳು

ಚಾಂಗಪೋ ಕೊನೆಯದಾಗಿ ಮಿಲಾನಳ ಮೇಲೆ ದೃಷ್ಟಿಕ್ಷೇಪ ನೂಡಿದಾಗ ಅವಳು ಬೀಳ್ಕೊಡಲು ಕೈ ಎತ್ತಿದಳು. ಅವಸರ ದಿಂದ ದೂರಾದ ಮೇಲೆ ಮಿಲಾನ ಗಂಟು ಕಟ್ಟುವುದರಲ್ಲಿಯೇ ಸಮಯ ಕಳೆದಳು. ಯೋಧರಿಗೆ ಸಂಶಯವಾಯಿತು. ಆವರು ಚಾಂಗಪೋನಿಗಾಗಿ ಪ್ರಶ್ನಿಸಿದರು. ಆದರೆ ಅವನು ನಗರವನ್ನು ಬಿಟ್ಟು, ಪರ್ವತಗಳ ಮರೆಯಲ್ಲಿ ಎಲ್ಲಿ ಹೋದನೋ ತಿಳಿಯಲಿಲ್ಲ.

ಮಗುವಿನೊಡನೆ ನಿಲಾನ ತಂದೆಯ ಮನೆ ಸೇರಿದಳು. ಮುದುಕನು ಮಗಳನ್ನು ಸ್ವಾಗತಿಸುವಾಗ ಕ್ಷಮೆಯ ಮನೋಭಾವ ವಾಗಲೀ ಪ್ರೀತಿಯ ನಸುನಗೆಯಾಗಲೀ ಕಾಣಲಿಲ್ಲ. ಮಗುವಿನ ಮೇಲೆ ದೃಷ್ಟಿ ಬೀರಿದಾಗ ಮಾತ್ರ ಮುದುಕನಿಗೆ ತುಸು ಸಮಾಧಾನವಾದಂತೆ ಭಾಸವಾಯಿತು. "ಚಾಂಗಪೋ ತಪ್ಪಿಸಿಕೊಂಡು ಓಡಿ ಹೋದದ್ದೇ ಒಳ್ಳೆಯದಾಯಿತು. ಅವನನ್ನು ಹಿಡಿದು ತರುತ್ತಿದ್ದರೆ ಪರಿಸ್ಥಿತಿಯನ್ನು ಎದುರಿಸುವುದಾಗುತ್ತಿರಲಿಲ್ಲ"ಎಂದು ಮದುಕನ ಮನಸ್ಸು ಹೇಳುತ್ತಿದ್ದರೂ, ಚಾಂಗಪೋನ ಅಪರಾಧವನ್ನು ಕ್ಷಮಿಸಲು ಅವನು ಸಿದ್ಧನಿರಲಿಲ್ಲ.

ವರ್ಷಗಳು ಉರುಳಿದರೂ ಚಾಂಗಪೋನ ಸುದ್ದಿ ಬರಲಿಲ್ಲ. ಒಮ್ಮೆ ಗವರ್ನರರು ಕಮಿಶನರ ಚಾಂಗರ ಮನೆಗೆ ಅತಿಥಿಯಾಗಿ ಬಂದರು. ಮಾತುಕತೆಯ ನಡುವೆ ಚಾಂಗರು ಹಿಂದೆ ರಾಜಗೆ ಉಡುಗೊರೆಯಾಗಿ ಅರ್ಪಿಸಿದ್ದ ಭಗವತಿ ದಯಾಮಯಿಯ ಮೂರ್ತಿಗಿಂತಲೂ ಸುಂದರವಾದ ಒಡವೆಯನ್ನು ತಾವೀಗ ತಂದಿರುವುದಾಗಿ ಅವರು ಹೇಳಿದರು.

— ೮ —

ಭೋಜನದ ತರುವಾಯ ಗವರ್ನರರು ಮೂರ್ತಿಯನ್ನು ಎಲ್ಲರ ಮುಂದೆ ಹೊರತೆಗೆದಾಗ ಆವಾಕ್ಕಾದವರೇ ಹೆಚ್ಚು: ಇಲ್ಲಿ ಅವರ ಮುಂದೆ ವಿಶ್ವದಲ್ಲಿಯೇ ಶ್ರೇಷ್ಠ ಚಿಮತ್ಕಾರದ ಕೃತಿಯನ್ನು ಕಂಡರು. ಸೇವಕಿಯೊಬ್ಬಳು ಮಿಲಾನಳಿಗೆ ಸುದ್ದಿ ಮುಟ್ಟಿಸಿದಾಗ, ಅವಳು ಕಿಟಕಿಯ ಕಂಡಿಯಿಂದಲೇ ಮೂರ್ತಿಯನ್ನು ನೋಡಿದಳು. "ಓ, ಇದು ಅವನ ಕೆಲಸ: ಹೌದು, ಅವನದ್ದೇ ಚಿಮತ್ಕಾರ" ಎಂದವಳು ಬಿಸು ಸುಯ್ದಳು. ಹಾಗಾದರೆ ಚಾಂಗಪೋ ಇನ್ನೂ ಬದುಕಿರುವನೆಂದು ಅಗಲು ಸಂತೋಷಿಸಿದಳು.

ಗವರ್ನರರನ್ನು ಕಲಾವಿದನ ಪರಿಚಯಕ್ಕಾಗಿ ನೆರೆದವರು ಆಗ್ರಹಪಡಿಸಿದರು. "ಆದೊಂದು ಕತೆ—ನನ್ನ ಸೊಸೆಯ ಪತ್ತಿರವಿದ್ದ ನಿಗ್ರಯಗಳಲ್ಲಿ ಒಂದರ ಕೈಬಳೆ ಮುರಿಯಿತು. ಆದು ಶ್ರೀಸ್ಥ ಕೃತಿ—ಮರಳಿ ಅದನ್ನು ತೊಡಿಸುವ ಕುಶಲರು ಯಾರೂ ಇರಲಿಲ್ಲ. ಹೀಗಾಗಿ ದೂರ ದೂರದ ಕಲಾವಿದರಿಗೂ ಆವಳಾಶ ನೀಡಲು ಅವಳು ಬಯಸಿದಳು. ಆಗೊಬ್ಬ ಆಕ್ಷವ್ಯಸ್ತವಾಗಿ ಉಡುಪು ಧರಿಸಿದ್ದ ವನು ಬಂದು, ಈ ಕೆಲಸವನ್ನು ಪೂರ್ತಿಮಾಡಿದನು ಅವನಲ್ಲಿ ಕಲಾದೇವಿ ಪ್ರಸನ್ನಳಾಗಿದ್ದಳು. ರಾಣಿಗೆ ಉಡುಗೊರೆ ನೀಡುವ ಆಲೋಚನೆ ಬಂದಾಗ, ನಾನು ಅವನನ್ನು ಮರಳಿ ತರಿಸಿದೆನು. ಕೋಡೆಯೊಂದನ್ನು ಅವನಿಗೆ ಬಿಟ್ಟು ಕೊಟ್ಟು ಕೆಲಸಕ್ಕೆ ಆಣಿಗೊಳಿಸಿದೆನು. ಅವನ ಕೌಶಲ್ಯದ ಜ್ಯೋತಕವೇ ಇದು. ಸಂಭಾವನೆಕೊಡ ಹೋದಾಗ, ಬೇಡ ಸ್ವಾಮಿ, ನನ್ನ ಜೀವನ ಇಂದು ಸಫಲವಾಯಿತು" ಎಂದವನು ಹೊರಟು ಹೋದ. ಎಲ್ಲಿಗೆಂದು ತಿಳಿಯಲಿಲ್ಲ."

ಅತಿಥಿಗಳಿಗೆ ಹೆಣ್ಣು ಧ್ವನಿಯು "ಅಯ್ಯೋ" ಎಂದು ಉದ್ಗರಿಸಿ, ಡಬ್ಬನೆ ಬಿದ್ದ ಶಬ್ದ ಕೇಳಿಸಿತು: ಆದು ಮಿಲಾನ. ಎಲ್ಲರೂ ಅವಳನ್ನು ಎಪೆಯಕ್ಕಡೆ ನೋಡಿದರು.ಆ ಮೂರ್ತಿಗೂ ಆ ನವಿಗೂ ವ್ಯತ್ಯಾಸ ಕಾಣಲಿಲ್ಲ. ,,ಸರಿ, ಇದು ನಮ್ಮ ಆಳಿಯ ಚಾಂಗಪೋನ ಕೃತಿಯೇ ನಿಜ" ಎಂದು ಗವರ್ನರರು ಸಾರಿದರು.

ಮೂರ್ಛೆ ತಿಳಿದು ಮಿಲಾನ ಎದ್ದು ಕುಳಿತವಳೇ ನಿಟ್ಟಿಗೆ ಎಲ್ಲರ ಮುಂದೆ ಆ ಮೂರ್ತಿಯನ್ನು ಸಸೂಹದಿಂದೆ ನೋಡಲು ಧಾವಿಸಿದಳು. ಆದರೆ ಸ್ಪರ್ಶ ಮತ್ತು ದರ್ಶನ ಚಾಂಗಪೋನ ನೆನಪು ಕೂಟ್ಟವೆಂದು ಕಾಣುತ್ತದೆ. ಎಲ್ಲರ ಮುಖದಲ್ಲೂ ವಿಷಾದ ಕವಿದಿನ್ನಾಗ, ಅವಳ ಮುಖ ಅರಳಿತು. ಗವರ್ನರರು ಇದನ್ನು ಅರ್ಥ ಮಾಡಿಕೊಂಡರು. ,,ಮಗಳೇ, ಈ ಮೂರ್ತಿ ನಿನ್ನಲ್ಲಿರಲಿ. ನನಗಿರು ಸಮಾಧಾನ ಕೊಟ್ಟೀತು. ರಾಣಿಗೆ ನಾನು ಬೇರೆ ಉಡುಗೊರೆ ಕೊಡುತ್ತೇನೆ. ಇದು ನಿನಗೆ ಸೇರತಕ್ಕ ಪ್ರಿಯ ವಸ್ತು" ಎಂದರು. — ಕೆ.

(ವಿಶೇಷದ ಆರ್ಥಿಕ ಸ್ಥಿತಿ ಚಿತ್ರ)

ಇಂದಿನ ರಾಜಕೀಯದಲ್ಲಿ ಚರ್ಚಾಸ್ಪದ ಭೂಮಿಂಡವಾದ ವಿಶೇಯದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಚಿತ್ರವನ್ನು ಸರಳನಾಗಿಯೂ, ವಿಶದವಾಗಿಯೂ, ಸಚಿತ್ರವಾಗಿಯೂ ವಿವರಿಸುವ ವಿಕಮಾತ್ರ ಗ್ರಂಥ

ವಾಚನಾಲಯಗಳಿಗೆ ಅತ್ಯಗತ್ಯವಾದದ್ದು.

Edited, Printed & Published By K. H. Shetty at the Navayuga Press, Udipi, S. India

M. 3618

Licensed to Post without Prepayment

ನವಯುಗ

ಸಂಪುಟ ೩೪ — ಉಡುಪಿ, 9—12—1954 — ಸಂಚಿಕೆ ೧೫

VOL. 34 — NO. 15

ಒಂದೇ ಲಿಪಿಯ ಮೋಹ

ಪ್ರಾದೇಶಿಕ ಭಾಷೆಗಳು ಕೆಲವರ ಮಾತೃಭಾಷೆಯಾಗಿಯಷ್ಟೇ ಈಗ ಉಳಿದಿಲ್ಲ; ಬಾಧ್ಯಕ ಹಾಗು ಸಾಹಿತ್ಯಿಕ ಚಟುವಟಿಕೆಯ ಮಹಾಸಾಧನವಾಗಿ ಅವು ಪರಿಣಮಿಸಿವೆ. ಅವುಗಳಲ್ಲಿ ಕೆಲವು ಆತ್ಯಮೂಲ್ಯವಾದ ಶಾಸ್ತ್ರೀಯ ಗ್ರಂಥಸಂಪತ್ತನ್ನು ಹೊಂದಿದ್ದರೆ ಇನ್ನು ಕೆಲವು ಜಗತ್ತಿನ ಲಕ್ಷ್ಯವನ್ನು ಈಚೆಗೆ ಸೆಳೆದುಕೊಂಡ ಕೃತಿಗಳ ರಚನೆ ನಡೆದಿವೆ. ಭಾರತೀಯ ಸಾಹಿತ್ಯದ ಕ್ರಿಯಾತ್ಮಕ ಅಂಗವು ಈ ಭಾಷೆಗಳ ಮೂಲಕವೇ ಸಾಕಷ್ಟು ಪ್ರಕಟನೆಯನ್ನು ಹೊಂದಿದಿಯೆಂದು ಹೇಳಿದರೆ ತಪ್ಪಾಗದು. ಭಾರತದ ಮಾನಸಿಕ ಚಟುವಟಿಕೆಗಳು ಸಂಸ್ಕೃತದಿಂದ ಪೋಷಣೆಹೊಂದಿದ್ದರೂ ಕೆಲಮಟ್ಟಿಗೆ ಅಂಗ್ಲಿಸುಭಾಷೆಯಿಂದ ಪ್ರಭಾವಿತವಾಗಿದ್ದರೂ—ಭಾರತೀಯ ಭಾಷೆಗಳಲ್ಲಿಯೇ ಬದುಕಿಕೊಂಡಿರುವುದು.

—ಸರೆದಾರ ಪಜಕ್ಕರ.

ಮದ್ರಾಸು ಹೈಕೋರ್ಟಿನ ನ್ಯಾಯಮೂರ್ತಿಗಳಾದ ಶ್ರೀ. ಪಿ. ಗೋವಿಂದ ಮೆನೊನ್ನರು ತಿರುವಾಂಕೂರು ವಿಶ್ವವಿದ್ಯಾಲಯದ ಇಪ್ಪತ್ತೊಂದನೆಯ ಪದವೀದಾನ ಸಮಾರಂಭದಲ್ಲಿ ಮಾತನಾಡುತ್ತಾ ಹಿಂದಿ ಮತ್ತು ಇತರ ಪ್ರಾದೇಶಿಕ ಭಾಷೆಗಳನ್ನು ಒಂದೇ ಪರಿಧಿಯೊಳಗೆ ತರಬಲ್ಲಂತೆ ಒಂದೇ ಲಿಪಿಯನ್ನು ಸ್ವೀಕರಿಸುವುದರಿಂದ ಮಹಾಲಾಭವಿದೆಯೆಂದು ಹೇಳಿದರಾಗಿ ತಿಳಿದು ಬರುತ್ತದೆ. ತಪ್ಪು ವಿಚಾರವನ್ನು ವಿಷದೀಕರಿಸುತ್ತಾ, ಅವರಾಡಿದ ಮಾತುಗಳನ್ನು ಕೆಳಗಿನಂತೆ ಸಂಗ್ರಹಿಸಬಹುದು—"ತಮಿಳೊಂದನ್ನು ಬಿಟ್ಟು ಉಳಿದೆಲ್ಲ ಪ್ರಾದೇಶಿಕ ಭಾಷೆಗಳಲ್ಲೂ ದೇವನಾಗರಿಯಲ್ಲಿರುವ ಅಕ್ಷರ ಮತ್ತು ಉಚ್ಚಾರಗಳೇ ಕಂಡು ಬರುತ್ತವೆ. ಆದುದರಿಂದ ಸಂಸ್ಕೃತ ಅಥವಾ ಹಿಂದಿಯನ್ನು ನಾನೆಷ್ಟು ಸುಲಭವಾಗಿ ಬರೆದು ಓದಬಲ್ಲೆನೋ ಮಲೆಯಾಳ ಮುಂತಾದ ಪ್ರಾದೇಶಿಕ ಭಾಷೆಗಳನ್ನೂ ದೇವನಾಗರಿ ಲಿಪಿಯಲ್ಲಿ ಆಷ್ಟೇ ಚೆನ್ನಾಗಿ ಬರೆದು ಓದುವುದು ಕಷ್ಟವಲ್ಲ. ಹೀಗೆ ಮಾಡಿದ ಪಕ್ಷದಲ್ಲಿ ಭಾಷೆಯ ಸಮಸ್ಯೆಯೊಂದನ್ನು ಯಾವ ತಿಕ್ಕಾಟವೂ ಇಲ್ಲದೆ ಪರಿಹರಿಸಿದಂತಾಗುವುದು."

ನ್ಯಾಯ ಮೂರ್ತಿಗಳು ತಮ್ಮ ವಾದವನ್ನು ಪುಷ್ಟೀಕರಿಸಲು ಕೆಲವು ಊನಾಸರಣೆಗಳನ್ನು ಕೊಟ್ಟರು— "ಯುರೋಪಿನಲ್ಲಿ ಪ್ರತಿಯೊಂದು ರಾಜ್ಯದ ಭಾಷೆಯು ಪ್ರತ್ಯೇಕವಾಗಿದ್ದರೂ ರೋಮನ ಲಿಪಿಯನ್ನೆ ಎಲ್ಲರೂ ಬಳಸುವರು. ಜೆನಿವದಲ್ಲಿ ಬೇರೆ ಬೇರೆ ಭಾಗಗಳಲ್ಲಿ ಭಾಷೆಗಳು ಭಿನ್ನವಾಗಿದ್ದರೂ ನಾಡಿನಲ್ಲೆಲ್ಲ ಒಂದೇ ಲಿಪಿಯನ್ನು ಅನುಸರಿಸುವುದರಿಂದ ದಕ್ಷಿಣ ಚೀನದವನೊಬ್ಬನು ನುಂಚೂರಿಯದ ಭಾಷೆಯನ್ನು ಓದಲೂ ಬರೆಯಲೂ ಸಮರ್ಥನಾಗುವನು. ಒಂದೇ ಲಿಪಿಯನ್ನು ಅನುಸರಿಸುವುದರ ದೆಸೆಯಿಂದಲೇ ಏರೋಪ್ಯರಿಗೆ ತಮ್ಮ ಮಾತೃ ಭಾಷೆಯನ್ನು ಬಿಟ್ಟು ಉಳಿದ ಭಾಷೆಗಳನ್ನು ಅಭ್ಯಸಿಸುವುದು ಬಹಳ ಸುಲಭವೆನಿಸಿದೆ. ಭಾರತದಲ್ಲಿ ಎಲ್ಲ ಪ್ರಾದೇಶಿಕ ಭಾಷೆಗಳಿಗೂ ಸಂಸ್ಕೃತವೇ ಆಧಾರ ಭೂತವಾಗಿರುವುದರಿಂದ ದೇವನಾಗರಿ ಲಿಪಿಯನ್ನು ಬಳಸುವುದಕ್ಕೆ ತೊಡಗಿದರೆ ಪ್ರಾದೇಶಿಕ ಭಾಷೆಗಳ ಪರಸ್ಪರ ಅಧ್ಯಯನಕ್ಕೆ ಹೆಚ್ಚಿನ ಸಹಾಯವಾಗುತ್ತದೆ." ಹೀಗೆ ಅಭಿಪ್ರಾಯಪಟ್ಟು ನ್ಯಾಯಮೂರ್ತಿಗಳು ಪ್ರತಿಯೊಂದು ಪ್ರಾದೇಶಿಕ ಭಾಷೆಯ ಅಮೂಲ್ಯ ಸಾಹಿತ್ಯ ಕೃತಿಗಳನ್ನು ದೇವನಾಗರಿ ಲಿಪಿಯಲ್ಲಿ ಬರೆದು, ಆ ಲಿಪಿಯ ಪರಿಚಯವುಳ್ಳ ಅನ್ಯಾ ಭಾಷಾಜ್ಞಾನಿಗಳು ಕೃತಿಯ ರಸಾಸ್ವಾದನೆಯನ್ನು ಸುಲಭದಲ್ಲಿ ಮಾಡಲಾಗವಂತೆ ನೋಡಬೇಕೆಂದು ಸೂಚಿಸಿದರು.

ಭಾರತೀಯ ಭಾಷೆಗಳಿಗೆ ಒಂದೇ ಲಿಪಿಯನ್ನು ಬಳಸುವ ನೋಹ ಈಚೆಗೆ ಕೆಲ ಸಮಯದಿಂದ ಬಲವತ್ತರವಾಗುತ್ತ ಬರುತ್ತಿದೆ. ನ್ಯಾಯ ಮೂರ್ತಿ ಮೆನೊನ್ನರು ದೇವನಾಗರಿ ಲಿಪಿಯನ್ನು ನಾವೆಲ್ಲರೂ ಅನುಸರಿಸ ಬಹುದೆಂದು ಅಭಿಪ್ರಾಯ ಪಟ್ಟರೂ ರೋಮನ ಲಿಪಿಯನ್ನೇಕೆ ಬಳಸಬಾರದು ಎಂದು ಕೇಳುವ ಜನರೂ ಇಲ್ಲದಿಲ್ಲ. ದೇವನಾಗರಿ ಲಿಪಿಯ ಬಳಕೆಗೆ ಔತ್ತರೇಯರ ಬೆಂಬಲ ಸಿಗುವ ಹಾಗೆ ಕಾಣುತ್ತದೆ. ಏಕ ಲಿಪಿಯ ಬಳಕೆಯು ಕಂರಿತಾಗಿ ಕಳೆದ ವರ್ಷ ಲಕ್ನೋದಲ್ಲಿ ಪರಿಷತ್ತೊಂದನ್ನು ನೆರೆಯಿಸಿದ್ದ ಆನರ ಉತ್ಸಾಹವನ್ನು ನಾವಿನ್ನೂ ಮರೆತಿಲ್ಲ. ಭಾರತೀಯ ಭಾಷೆಗಳೆಲ್ಲ ಸಂಸ್ಕೃತಿವೇ ಮಾತೃ ಸ್ಥಾನದಲ್ಲಿರುವುದರಿಂದ ಮತ್ತು ಈ ಭಾಷೆಗಳ ಅಕ್ಷರ ಹಾಗು ಉಚ್ಚಾರಗಳನ್ನು ದೇವನಾಗರಿ ಲಿಪಿಯ ಬಳಕೆ ಕೆಡಿಸುವುದಿಲ್ಲವಾದುದರಿಂದ ಪ್ರಾದೇಶಿಕ ಭಾಷೆಗಳ ಪ್ರೇಮಿಗಳು ನೋಂದು ಕೊಳ್ಳ ಬೇಕಾದ ಅಂಶವೇನೂ ಇಲ್ಲವೆಂದು ಹೇಳಲಾಗುತ್ತದೆ.

ರೋಮನ ಲಿಪಿಯ ಪುರಸ್ಕರ್ತರು ಸೈನ್ಯದಲ್ಲಿ ಭರ್ತಿ ಯಾದವರಿಗೆ ಹಿಂದಿಯನ್ನು ಕಲಿಸಲು ಈ ಲಿಪಿಯನ್ನು ಬಳಸಿದುದರಿಂದ ದೊರಕಿದ ಅನುಭವನ್ನು ಬಣ್ಣಿಸಿ, ರೋಮನ ಲಿಪಿಯನ್ನೇಕೆ ಪ್ರಾದೇಶಿಕ ಭಾಷೆಗಳು ಅನುಸರಿಸ ಬಾರದು ಎಂದು ಪ್ರಶ್ನಿಸುತ್ತಾರೆ. ಸಂವಿಧಾನದಲ್ಲಿ ದೇವನಾಗರಿ ಲಿಪಿಯ ಹಿಂದಿಯನ್ನು ರಾಷ್ಟ್ರ ಭಾಷೆಯಾಗಿ ಅಂಗೀಕರಿಸಲಾಗಿದೆಯೆಂಬ ಅಂಶವನ್ನೂ ದೇವನಾಗರಿ ಲಿಪಿಯು ಭಾರತೀಯ ಭಾಷೆಗಳ ಜಾಕಟ್ಟಿಗೆ ಹೊಂದಿಕೊಳ್ಳುವುದೆಂಬುದನ್ನೂ ಹೊರತು ಪಡಿಸಿ, ವೈಜ್ಞಾನಿಕ ದೃಷ್ಟಿಯಿಂದ ನೋಡಿದ ಪಕ್ಷದಲ್ಲಿ ರೋಮನ ಲಿಪಿಯನ್ನು ಬಳಸುವುದರಿಂದ ನಾವು ಎಷ್ಟೋ ಲಾಭವನ್ನು ಪಡೆಯಬಹುದೆಂದು ವಾದಿಸಲಾಗುತ್ತದೆ. ಸಾಮಾನ್ಯ ಟೈಪ್‌ರೈಟರ್ ಯಂತ್ರದಿಂದ ತೊಡಗಿ ಲಿನೋ ಟೈಪ ಮುಂತಾದ ಕೆಲಸಗಳಿಗೂ ಮುದ್ರಣಕ್ಕೂ ವಾರ್ತೆಗಳನ್ನು ಕಳುಹಿಸುವುದಕ್ಕೂ ಏಕ ಫೈಲೇಖನಕ್ಕೂ ರೋಮನ ಲಿಪಿಯಲ್ಲಿ ಇಷ್ಟರ ವರೆಗಾದ ಪ್ರಗತಿಯ ಪ್ರಯೋಜನವನ್ನು ಆ ಲಿಪಿಯ ಬಳಕೆಯಿಂದ ಭಾರತೀಯ ಭಾಷೆಗಳು ಪಡೆಯಬಹುದೆಂಬ ಪ್ರಲೋಭನೆಯನ್ನು ಒಡ್ಡಲಾಗುತ್ತದೆ.

ಇಲ್ಲಿ ನಾವು ಇನ್ನೂ ಮುಖ್ಯವಾದ ವಿಷಯವೊಂದನ್ನು ಗಮನಿಸಬೇಕಾಗುತ್ತದೆ. ದೇವನಾಗರಿ ಲಿಪಿಯಲ್ಲಿದ್ದ ಅನುಕೂಲತೆಗಳು ರೋಮನ ಲಿಪಿಯಲ್ಲಿಲ್ಲ; ರೋಮನ ಲಿಪಿಯಲ್ಲಿದ್ದ ಸೌಕರ್ಯಗಳು ದೇವನಾಗರಿ ಲಿಪಿಯಲ್ಲಿಲ್ಲ. ಆದುದರಿಂದ ಇವೆರಡರಲ್ಲಿ ಯಾವುದಾದರೊಂದನ್ನು ಆರಿಸಿದರೂ ನಾವು ಹೆಚ್ಚು ಪ್ರಯೋಜನವನ್ನು ಹೊಂದುವಂತೇನು ಕಾಣಿಸುವುದಿಲ್ಲ. ಒಂದೇ ಲಿಪಿಯನ್ನು ಅನುಸರಿಸುವುದರಿಂದ ದೊರಕುವ ಲಾಭಗಳೇನೆಂದು ಯಾರೂ ಸ್ಪಷ್ಟವಾಗಿ ವಿವರಿಸಿರುವುದಿಲ್ಲ. ದೇಶ ಭಾಷೆಗಳನ್ನು ಕಲಿಯಲು ಇದರಿಂದ ಸುಲಭವಾಗುತ್ತದೆ ಎಂದು ಮಾತ್ರ ಹೇಳಲಾಗುತ್ತದೆ. ಅದು ಹೇಗೆಂದು ಪ್ರಶ್ನಿಸಿದ ಪಕ್ಷದಲ್ಲಿ ಲಿಪಿ ಒಂದೇಯಾದುದರಿಂದ "ದಕ್ಷಿಣ ಚೀನದವನು ನುಂಚೂರಿಯದ ಭಾಷೆ ಬೇರೆಯಾಗಿದ್ದರೂ ಅದನ್ನು ಓದಬಲ್ಲನು, ಬರೆಯಬಲ್ಲನು" ಎಂಬ ಉತ್ತರ ಸಿಗುತ್ತದೆ.

ನಾವು ಬೇರೆ ಭಾಷೆಯನ್ನು ಕೇವಲ ಓದಲು ಅಥವಾ ಬರೆಯಲು ಬಲ್ಲವರಾದ ಮಾತ್ರಕ್ಕೆ ಆ ಭಾಷೆಯು ಇಷ್ಟಾದರವು ನಮಗಾಗುತ್ತದೆಯೆ? "ಸೀತಾ ಗಾತೀ ಹ್ಯೆ" ಎಂದು ಹಿಂದಿಯನ್ನು ಕನ್ನಡ ಲಿಪಿಯಲ್ಲಿ ಬರೆಯ ಬಸುದು; ಹಿಂದಿಯ ಉಚ್ಚಾರಕ್ಕೆ ವ್ಯತ್ಯಾಸ ಬಾರದಂತೆ ಕನ್ನಡ ಬಲ್ಲವನು ಇದನ್ನು ಓದಲೂ ಸಾಧ್ಯ. ಆದರೆ ಮೂತಿನ ಅರ್ಥ ಹಾಗೆ ಓದಿದವನಿಗೆ ಅಥವಾ ಬರೆದವನಿಗೆ ಆಯಿತೇ ಎಂದು ಕೇಳಿದರೆ

(೧೨ನೇ ಪುಟ ನೋಡಿರಿ)

ಇಬ್ಬರು ಗೆಳತಿಯರು ತಮಗೆ ಬಿದ್ದ ಕನಸನ್ನು ಕುರಿತು ಮಾತನಾಡುತ್ತಿದ್ದರು. ಮೊದಲ ನೆಯವಳು ತನ್ನ ಸ್ವಪ್ನವನ್ನು ವಿವರಿಸಿದ ಬಳಿಕ

ಇನ್ನೊಬ್ಬಳು "ಈಗ ನಿನ್ನ ಕನಸನ್ನು ಹೇಳು, ನೋಡೋಣ" ಎಂದಳು.

"ಬರೇ ಉಪ್ಪಸಪ್ಪೊಂದನ್ನು ತೊಟ್ಟುಕೊಂಡು ತುಂಬಿದ ಬೀದಿಯಲ್ಲಿ ಓಡಾಡಿದಂತೆ ನನಗೆ ಕನಸಾಯಿತು."

"ಆಗ ನಿನಗೆ ತುಂಬಾ ನಾಚಿಕೆಯಿರಬೇಕು, ಅಲ್ಲವೆ?"

"ನಿಜವಾಗಿಯೂ ನಾಚಿಗೆಯಾಯಿತು—ಎಲ್ಲರೂ ಅರಿತೋಳಿನ ಅರಿವೆಯಂತೆ ಪಕ್ಕೆ ತೊಟ್ಟುಕೊಂಡಿದ್ದಾಗ ನಾನೊಬ್ಬಳೇ ಅಜ್ಜಯಕಾಲದ ಕುಪ್ಪಸವನ್ನು ತೊಟ್ಟುಕೊಂಡು ಆಡ್ಡಾಡುವುದೆಂದರೆ ನಾಚಿಗೆಯಾಗದಿರುತ್ತದೆಯೇ?"

THE CANARA INDUSTRIAL & BANKING SYNDICATE LTD.
Estd: 1925 H. O. UDIPI, S. India

ನಿಮ್ಮ ಹಣವು ಮಾತನಾಡಬಲ್ಲುದಾದರೆ.

ಎಲ್ಲರಂತೆ ನಿಮಗೂ ಸಂದರ್ಭಾನುಸಾರ ನಗದು ಹಣದ ಅವಶ್ಯಕತೆ ಬೀಳುವುದು. ಆ ಕಾಲಕ್ಕೆ ನೀವು ಸ್ವಲ್ಪ ಹಣವನ್ನು ಕೂಡಬೇ ಪಡೆಯಬಲ್ಲಿರಿ, ಏನಾಕಾರಣ ಹಣವನ್ನು ಮನೆಯಲ್ಲೇ ಇರಿಸಿಕೊಳ್ಳುವುದಕ್ಕೆ ಬದಲಾಗಿ ರಾತ್ರಿ ಹಗಲೂ ಸುರಕ್ಷಿತ ಭದ್ರತೆಯಲ್ಲಿದಲು ನೀವು ಅಪೇಕ್ಷಿಸುವಿರಿ. ಹಣವನ್ನು ಠೇವಣಿಗಿಸಲು ನೀವು ತಯಾರಿಲ್ಲವಾದರೂ ಅದಕ್ಕೆ ಬಡ್ಡಿ ಸಿಕ್ಕಿದರಾಗಬಹುದೆಂಬ ಅಪೇಕ್ಷೆ ನಮಗಿದೆ. ನೀವು ಸಾಲ ಪಡೆಯಲು ಸೌಕರ್ಯಗಳೇನಿವೆ ಬೇಂಕಿನಲ್ಲಿ ನಿಮ್ಮ ಹಣವನ್ನು ಠೇವಣಿಸಿದಲು ನೀವು ಇಚ್ಛಿಸುವಿರಿ. ಬೇಂಕಿನಲ್ಲಿ ತೆರೆಯಲಾಗುವ ಚೆಕ್ಕ್‌ವೇ ನಿಮಗೆ ಯಾವ ಕಾಲದಲ್ಲೂ ಎಲ್ಲಾ ಸೌಕರ್ಯವನ್ನು ಒದಗಿಸಬಲ್ಲುದು. ೧೨ ಶಾಖಾ ಕಛೇರಿಗಳುಳ್ಳ ನಮ್ಮ ಬ್ಯಾಂಕು ಕೀಸ್ಸ್ ಲೇವಾದೇವಿ ಸೌಲಭ್ಯಗಳನ್ನು ಒದಗಿಸಬಲ್ಲುದು ನಮ್ಮ ಅನುಕೂಲತೆಗಳಿಗಾಗಿ ವಿವಿಧ ಬೇಂಕಿಂಗ್ ಸೇವೆಗಳನ್ನು ಕ್ರೋಢೀಕರಿಸಲಾಗಿದೆ. ಆದುದರಿಂದ ನಮ್ಮಲ್ಲಿಯೇ ಬೇಂಕಿಂಗ್ ವ್ಯವಹಾರವನ್ನು ನಡಾಯಿಸಿ ಅಮೂಲ್ಯ ಸಹಯವನ್ನು ಉಳಿಸಿಕೊಳ್ಳಿರಿ.

ಚಲಾವಣೆ ಭಂಡವಾಳ ರೂ. ೬,೫೦,೦೦,೦೦೦

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ.

ಸ್ಥಾಪನೆ: ೧೯೨೫] [ಪ್ರಧಾನ ಕಚೇರಿ: ಉಡುಪಿ, ದ. ಭಾರತ.

ವಾರ್ಷಿಕ ಚಂದಾ: NAVAYUGA WEEKLY, UDIPI. ಬಿಡಿ ಸಂಚಿಕೆ

ಅಧ್ಯಕ್ಷ ಟಿಟೋರ ಯುಗೊಸ್ಲಾವಿಯ

ಭಾರತ—ಬರ್ಮಗಳಿಗೆ ಅವರ ಸೌಹಾರ್ದ ಸಂದರ್ಶನ

ಇನ್ನು ಕೆಲವೇ ದಿನಗಳಲ್ಲಿ ನಮ್ಮ ದೇಶಕ್ಕೆ ಸನ್ಮಾನ್ಯ ಅತಿಥಿಯೊಬ್ಬರು ಬರುವರು: ಅವರೇ ಯುಗೊಸ್ಲಾವಿಯದ ಅಧ್ಯಕ್ಷ ಮಾರ್ಷಲ್ ಟಿಟೊ. ಯುರೋಪಿನಿಂದ ಬರುವ ಈ ಅತಿಥಿಗಳ ವಿಷಯದಲ್ಲಿ ನಮ್ಮ ಪ್ರಧಾನ ಮಂತ್ರಿಗಳು ಸಾರ್ವಜನಿಕ ಭಾಷಣವೊಂದರಲ್ಲಿ ಹೀಗೆ ಹೇಳಿದರು-"ಕಳೆದ ಮಹಾ ಯುದ್ಧದಲ್ಲಿ ಜರ್ಮನರು ಯುಗೊಸ್ಲಾವಿಯವನ್ನು ಆಕ್ರಮಿಸಿದರೆಂದೂ ಜರ್ಮನರನ್ನು ಪ್ರತಿಭಟಿಸುವುದರಲ್ಲಿ ಯುಗೊಸ್ಲಾವಿಯದ ನಾಲ್ಕರಲ್ಲಿ ಒಂದಂಶ ಜನರು ಹತರಾದರೆಂದೂ ಕೊನೆಗೆ ಯುಗೊಸ್ಲಾವಿಯದ ಜನರು ತಮ್ಮ ನಾಡನ್ನು ಬಿಡಿಸಿಕೊಂಡು ಸ್ವತಂತ್ರರಾದರೆಂದೂ ನಾನು ನಿಮಗೆ ಹೇಳಬಯಸುತ್ತೇನೆ. ಹೀಗೆ ಯುಗೊಸ್ಲಾವಿಯದ ಚರಿತ್ರೆಯು ಕುತೂಹಲದಾಯಕವಾಗಿದೆ: ಅದು ಹೆಚ್ಚುಕಡಿಮೆ ಕಮ್ಯೂನಿಸ್ಟ ರಾಷ್ಟ್ರವೇ ಆಗಿದೆ ಆದರೆ, ಅಲ್ಲಿಯ ಕಮ್ಯುನಿಸ್ಟ ಸಿದ್ಧಪತಿಗೂ ರಷಿಯದಕ್ಕೂ ತುಂಬ ವ್ಯತ್ಯಾಸ ಕಂಡುಬರುತ್ತದೆ. ಇದರಿಂದಾಗಿಯೇ ಕೆಲವು ಸಮಯದ ಹಿಂದೆ ರಷಿಯ ಹಾಗು ಯುಗೊಸ್ಲಾವಿಯಗಳಲ್ಲಿ ತಿಕ್ಕಾಟ ಹಾಗು ಮನಸ್ತಾಪಗಳು ನಡೆದಿದ್ದವು."

ಆದರೆ ಈಚೆಗೆ ಈ ಘರ್ಷಣೆ ಕಡಿಮೆಯಾಗಿರುವುದು. ರಷಿಯವು ಯುಗೊಸ್ಲಾವಿಯದ ಅಸ್ತಿತ್ವವನ್ನು ಮನಗಂಡಂತೆ ಕಂಡು ಬರುವುದು. ಮೊನ್ನೆ ನವೆಂಬರ ತಿಂಗಳಲ್ಲಿ ಯುಗೊಸ್ಲಾವಿಯವು ರಾಷ್ಟ್ರೀಯ ಸ್ವಾತಂತ್ರ್ಯದ ಹೆಸ್ಮೊಂದು ವರ್ಷಗಳನ್ನು ಯಶಸ್ವಿಯಾಗಿ ಕಳೆದ ನೆನಪಿಗೆ ಉತ್ಸವವನ್ನು ಆಚರಿಸಿತು. ಮೋಸ್ಕೋದಲ್ಲಿರುವ ಯುಗೊಸ್ಲಾವಿಯದ ರಾಯಭಾರಿಗಳೂ ಒಂದು ಸಮಾರಂಭವನ್ನು ಏರ್ಪಡಿಸಿದ್ದರು. ಇದರಲ್ಲಿ ಭಾಗವಹಿಸಿದ ರಷಿಯದ ಪ್ರಧಾನ ಮಂತ್ರಿ ಮೆಲೆಂಕೋವರು ಕಾಮ್ರೇಡ್ ಟಿಟೊ, ಯುಗೊಸ್ಲಾವಿಯದ ಕಮ್ಯುನಿಸ್ಟ ಪಕ್ಷ ಹಾಗು ಯುಗೊಸ್ಲಾವಿಯದ ಜನತೆಯ ಹಿಸರಿನಲ್ಲಿ ಪೇಯವನ್ನು ಸ್ವೀಕರಿಸಿ, ಶುಭಕೋರಿದರು. ಉಭಯ ರಾಷ್ಟ್ರಗಳ ನಡುವೆ ಶಾಂತಿ ಹಾಗು ಸೌಹಾರ್ದ ಸಂಬಂಧವು ಗಾಢವಾಗಲೆಂದು ಹಾರೈಸಿದರು. ಇದೇ ಸಭೆಯಲ್ಲಿ ರಷಿಯದ ಇತರ ಮಂತ್ರಿಗಳೂ ಕಮ್ಯುನಿಸ್ಟ ಪಕ್ಷದ ಪ್ರಭೃತಿಗಳೂ ಉಪಸ್ಥಿತರಿದ್ದರು. ಎಲ್ಲರೂ ತುಂಬ ಸಂತೋಷದಿಂದ ಸಮಯ ಕಳೆದರು.

ಟಿಟೋರವರು ರಾಷ್ಟ್ರೀಯ ಸ್ವಾತಂತ್ರ್ಯದಿನೋತ್ಸವದ ನಿಮಿತ್ತ ಆಧಿಕೃತ ಸತ್ಕಾರಕೂಟವನ್ನು ಜರಗಿಸಿದ ಬಳಿಕ, ಒಡನೆಯೇ ಭಾರತ ಹಾಗು ಬರ್ಮ ದೇಶಗಳಿಗೆ ಪ್ರಯಾಣ ಹೊರಟರು. ಅವರೊಡನೆ ಇಷ್ಟರವರೆಗೆ ಹೊರಗೆಲ್ಲಿಯೂ ತಿರುಗಾಡಲು ಹೋಗಿರದ ಮತ್ತು ಅಂತರಿಕ ಭದ್ರತೆ ಹಾಗು ವ್ಯವಹಾರದಲ್ಲಿ ಬಲಗೈ ಬಂಟನಂತಿರುವ ಉಪಾಧ್ಯಕ್ಷ ಅಲೆಕ್ಸಾಂಡರ್ ರಾನ್‌ಕೋವಿಕ್, ವಿದೇಶ ಕಾರ್ಯದರ್ಶಿ ಕೊಕಾ ಪೊಪೋವಿಕ್, ಬರ್ಮಯಾ ಸರಕಾರದ ಅಧ್ಯಕ್ಷ ಜೋವಾನ್ ಮೆನೆಲಿಸೋನ್, ಕ್ರೋಶಿಯಾ ಸರಕಾರದ ಉಪಾಧ್ಯಕ್ಷ ಐವಾನ್ ಕ್ರಾಜಾಸಿಕ್—ಇಷ್ಟು ಮಂದಿ ಇರುವರು. ನಿಲ್ದಾಣದಲ್ಲಿ ಇವರನ್ನು ಭಾರತದ ರಾಯಭಾರಿ ಶ್ರೀ ರಾಜೇಶ್ವರ ದಯಾಳರೂ ಬರ್ಮದ ಪ್ರತಿನಿಧಿಗಳೂ ಬೀಳ್ಕೊಟ್ಟರು. ರಾಜಧಾನಿಯಾದಬೆಲ್ಗ್ರೇಡಿನಿಂದ ರೈಲಿನಲ್ಲಿ ಹೊರಟ ಟಿಟೋರವರು ಎಡ್ರಿಯಾಟಿಕ್ ಸಮುದ್ರ ತೀರದಲ್ಲಿ ಪಡಗವನ್ನೇರಿ, ಭಾರತವನ್ನು ಸೇರುವರು. ಟಿಟೋರವರ ಪ್ರಯಾಣದ ಸಂದರ್ಭದಲ್ಲಿ ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ಒಂದು ಸಂದೇಶವನ್ನು ಕಳಿಸಿ ಅತಿಥಿಗಳಿಗೆ ಶುಭವನ್ನೂ ಸ್ವಾಗತವನ್ನೂ ಕೋರಿದ್ದಲ್ಲದೆ ನಮ್ಮ ನಡುವೆ ಸ್ನೇಹ ಭಾವನೆಯು ಇನ್ನಷ್ಟು ಸಂವರ್ಧಿಸಲೆಂದು ಹಾರೈಸಿದರು.

ಬಾಸ್ತವದಲ್ಲಿ ಭಾರತಕ್ಕೂ ಯುಗೊಸ್ಲಾವಿಯಕ್ಕೂ ನಡುವೆ ಗಾಢವಾದ ಸ್ನೇಹ ವಿದೆ. ವ್ಯಾಪಾರ ಒಡಂಬಡಿಕೆಯೊಂದನ್ನು ನಾವು ಮಾಡಿಕೊಂಡಿದ್ದು ಅದು ಇಷ್ಟರಲ್ಲೇ ಊರ್ಜಿತಗೊಳಿಸಲ್ಪಡುವ ನೀರೀಕ್ಷೆ ಇದೆ. ಶ್ರೀಮತಿ ವಿಜಯ ಲಕ್ಷ್ಮಿ ಪಂಡಿತರು ಸಂಯುಕ್ತ ರಾಷ್ಟ್ರ ಸಂಘದ ಅಧ್ಯಕ್ಷೆ ರೆಂದು ಕೆಲವು ತಿಂಗಳ ಹಿಂದೆ ಯುಗೊಸ್ಲಾವಿಯಕ್ಕೆ ಭೇಟಿ ಕೊಟ್ಟಾಗ ಆ ಪರಿಗೆ ಅಭೂತ ಪೂರ್ವವಾದ ಸ್ವಾಗತವನ್ನು ಟಿಟೋ ನೀಡಿದ್ದರು. ಈ ಸಲ ಅವರು ಭಾರತದಲ್ಲಿ ಆಷ್ಟೇ ವೈಭವದ ಸ್ವಾಗತವನ್ನು ಪಡೆಯುವುದರಲ್ಲಿ ಸಂದೇಹವಿಲ್ಲ. ಇದರಿಂದ ಸಂತೋಷಗೊಳ್ಳುವುದರ ಜೊತೆಗೆ, ಕಮ್ಯುನಿಸ್ಟ ಚೀನಕ್ಕೆ ಪ್ರವಾಸ ಮಾಡಿ ಬಂದಿರುವ ನೆಹರುಗಳು ಆ ದೇಶದ ಬಗೆಗೆ ಏನು ಅಭಿಪ್ರಾಯ ಹೊಂದಿರುವರೆಂಬುದನ್ನು ಅರಿಯಬೇಕೆಂಬ ತಮ್ಮ ಜಿಜ್ಞಾಸೆಯನ್ನೂ ಟಿಟೋ ತಣಿಸಿಕೊಳ್ಳಬಹುದು.

ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಯುಗೊಸ್ಲಾವಿಯ ಅನುಭವಿಸಿದ ಕಷ್ಟ ನಷ್ಟಗಳೂ ಹೂಡಿದ ಹೋರಾಟವೂ ಆ ದೇಶದ ಕುರಿತಾಗಿ ನಮ್ಮ ಸದ್ಭಾವನೆಯನ್ನು ಜಾಗೃತಗೊಳಿಸುತ್ತವೆಂಬ ಅಂಶವನ್ನು ಮೊದಲಲ್ಲಿ ಉದ್ಧರಿಸಲಾದ ನೆಹರುಗಳ ಮಾತು ಸ್ಪಷ್ಟಗೊಳಿಸುತ್ತವೆ. ಫಾಸಿಸ್ಟರ ಆಕ್ರಮಣವನ್ನು ಸಹಿಸದ ಸ್ವಾತಂತ್ರ್ಯಪ್ರಿಯ ಯುಗೊಸ್ಲಾವರು ಮಾರ್ಷಲ್ ಟಿಟೋರ ನೇತೃತ್ವದಲ್ಲಿ ೧೯೪೬ರಲ್ಲಿ ಬಿಡುಗಡೆಯನ್ನು ಸಾಧಿಸಿದರು ಅರಸು ಪೀಟರನ ಹಾಗು ಆವನ ಸರಕಾರದ ಎಲ್ಲ ಅಧಿಕಾರವೂ ಟಿಟೋರ ಕೈಗೆ ಬಂತು. ೧೭ ಮಂದಿ ಸದಸ್ಯರುಳ್ಳ ಪ್ರಜಾಸತ್ತಾತ್ಮಕ ಸಾಮ್ಯವಾದಿ ಸರಕಾರವು ಸ್ಥಾಪನೆಗೊಂಡಿತು. ಯುಗೊಸ್ಲಾವಿಯದ ಬೇರೆ ಬೇರೆ ಭೂಭಾಗಗಳನ್ನು ಒಂದುಗೂಡಿಸಿ ರಾಷ್ಟ್ರವನ್ನು ಮರಳಿ ಕಟ್ಟುವ ಮಹತ್ಕಾರ್ಯವನ್ನು ಮೊತ್ತಮೊದಲಾಗಿ ಸಾಧಿಸಲಾಯಿತು ಹೋರಾಟದಲ್ಲಿ ಅಗ್ರ ಭಾಗವನ್ನು ಜನತೆಯೇ ವಹಿಸಿದ್ದರಿಂದ ಜನತೆಯ ಹಿತದೃಷ್ಟಿಯಿಂದಲೇ ಸರಕಾರ ಕಲಸಮಾಡಿತು. ಎರಡು ವರ್ಷಗಳಿಗಿಂತಲೂ ಕಡಿಮೆ ಅವಧಿಯಲ್ಲಿ ೪೯ ಶಾಸನ ಹಾಗು ಇಳ ಸನದುಗಳ ಮೂಲಕ ರಾಷ್ಟ್ರೀಯ ಪುನಾರಚನೆಗೆ ಅಡಿಗಲ್ಲನ್ನು ಪಾಕಲಾಯಿತು. ಇವುಗಳಲ್ಲಿ ಯುದ್ಧಕಾಲದಲ್ಲಿ ಗಳಿಸಿದ್ದ ಆಭವನ್ನು ಸರಕಾರವೇ ವಶಪಡಿಸಿಕೊಳ್ಳುವ ಮತ್ತು ಧಾರ್ಮಿಕ, ಸಾಮಾಜಿಕ ಹಾಗು ರಾಷ್ಟ್ರೀಯ ದ್ವೇಷ ಹಾಗು ಭೇದಗಳನ್ನು ನಿಷೇಧಿಸುವ ಶಾಸನಗಳು ಉಲ್ಲೇಖನೀಯ.

ಯುದ್ಧೋತ್ತರದ ಅಭಿವೃದ್ಧಿ ಪ್ರಯತ್ನಗಳನ್ನು ಕೈಗೊಳ್ಳುವಾಗ ಟಿಟೋರವರು "ಬಂಡವಾಳಶಾಹಿಗಳ ಶೋಷಣೆಗೆ ಗುರಿಯಾಗಬೇಕೆಂದು ನಾವು ರಾಜಸತ್ತೆಯನ್ನು ನಿರ್ಮಾಲಿಸಿದ್ದಲ್ಲ; ಉದ್ಯೋಗಶೀಲ ಜನರ ಕೈಗೆ ಸಂಪತ್ತು ಬರಬೇಕೆಂಬುದೇ ನಮ್ಮ ಉದ್ದೇಶ"ಎಂಬ ಆದರ್ಶವನ್ನು ಇಟ್ಟುಕೊಂಡರು ಇದಕ್ಕಾಗಿ ಸಮಾಜವಾದದ ತತ್ವಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ಅವರು ಬಯಸಿದರು. ಪರಿಣಾಮದಲ್ಲಿ ಎಲ್ಲ ಔದ್ಯೋಗಿಕ ಕೇಂದ್ರಗಳೂ ಬೇಂಕುಗಳೂ ವಿಮಾ ಕಂಪೆನಿಗಳೂ ಸರಕಾರದ ವಶಕ್ಕೆ ಹೋಗ ಬೇಕಾಯಿತು. ಖಾಸಗಿ ಹಾಗು ವಿದೇಶಿ ಬಂಡವಾಳವು ಹೀಗೆ ಸರಕಾರದ ಬೊಕ್ಕಸದಲ್ಲಿ ಸೇರಿ ಹೋಯಿತು. ಇದರ ಜೊತೆಗೆ ಭೂಸುಧಾರಣೆಯು ಶಾಸನಗಳನ್ನೂ ಕೈಗೊಂಡು ರೈತರಿಗೂ ಆವರು ಸದಸ್ಯರಾಗಿರುವ ಸಹಕಾರ ಸಂಘಗಳಿಗೂ ಭೂಮಿಯನ್ನು ಹಂಚುವ ಕೆಲಸ ನಡೆಯಿತು. ೧೯೪೬ರ ಸುಮಾರಿಗೆ ಸರಕಾರವೇ ಎಲ್ಲ ಚಟುವಟಿಕೆಗಳ ಮೂಲಸ್ಥಾನವಾಗಿ ಪರಿಣಮಿಸಿತು. ಸರಕಾರದ ಆರ್ಥಿಕ ಯೋಜನೆಯಂತೆ ಎಲ್ಲ ಆರ್ಥಿವೃದ್ಧಿ ಪ್ರಯತ್ನಗಳೂ ನಡೆಯ ತೊಡಗಿ, ದೊಡ್ಡ ದೊಡ್ಡ ಔದ್ಯೋಗಿಕ ಯೋಜನೆಗಳನ್ನೂ ಮೂಲ ಉದ್ಯೋಗ ಕೇಂದ್ರಗಳನ್ನೂ ತೆರೆಯುವುದು ಸಾಧ್ಯವಾಯಿತು

ಆದರೆ ಇಷ್ಟು ಹೊತ್ತಿಗೆ ಇನ್ನೊಂದು ಅನರ್ಥ ಪರಿಣಾಮವೂ ಗೋಚರಕ್ಕೆ ಬರಹತ್ತಿತು—ಸಾಮಾಜಿಕ ಪ್ರಜ್ಞೆಯನ್ನು ಸಮಾಜಾಗೃತಗೊಳಿಸಬೇಕಾಗಿರುವ ಸಮಾಜವಾದಿ ರಾಷ್ಟ್ರದಲ್ಲಿ ಬಂಡವಾಳಶಾಹಿಗಳ ಕೈವಾಡ ನುಸಿಬರೂ ಸರಕಾರದ ಆಡಳಿತಾಧಿಕಾರಿಗಳಪ್ರಭುತ್ವವು ಜನಹಿತವನ್ನು ಕಡೆಗಣಿಸುವಂತೆ ಭಾಸವಾ

(೧೩ನೇ ಪುಟ ನೋಡಿರಿ)

THE CANARA MUTUAL ASSURANCE COMPANY, LTD.,
Managing Director T. R. A. PAI
Head Office: **UDIPI**, S INDIA.] [Estd. 1935

ಅತ್ಯುತ್ತಮ ಬೋನಸ್

ಲಾಭಸಹಿತ ಪೋಲಿಸಿಗಳಿಗೆ ವಿಮಾ ನೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ. 18/- ಹೋಲ್ ಲೈಫ್ ಎಶ್ಯೂರೆನ್ಸಿಗೆ
ರೂ. 15/- ಎಂಡೋಮೆಂಟ್ ಎಶ್ಯೂರೆನ್ಸಿಗೆ

31-12-1953ನೇ ತಾರೀಕಿನಾದ 1951ರಿಂದ 1953ರ ವರೆಗಿನ ಆವಧಿಯ ವಿಮಾಗಣನೆಯ ಫಲಿತಾಂಶ.

ಕಂಪೆನಿಯ ಸೊತ್ತುಗಳ ಮೊತ್ತವು ಒಂದು ಕೋಟಿ ರೂಪಾಯಿಗಳನ್ನು ಮೀರಿರುತ್ತದೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಪ್ರಧಾನ ಕಾರ್ಯಾಲಯಃ ಉಡುಪಿ, ದ ಭಾರತ] [ಸ್ಥಾಪನೆ. ೧೯೩೫.

ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಪಂಚಿದ ಕಂಪೆನಿ.

CHIEF AGENTS:
THE COMMERCIAL CORPORATION OF INDIA, LTD.,
UDIPI, S India

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ



ಸ್ತ್ರೀ ಸುಧ

ಸ್ತ್ರೀಯರ ಸಮಸ್ತ ವ್ಯಾಧಿಗಳಿಗೆ ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು, ಋತು ದೋಷಗಳನ್ನು, ಋತು ಚಕ್ರ, ಸರಿಯಾಗಿ ಬಹಿಷ್ಕೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು. ಸಂತಾನವನ್ನು ಕಲಗಿಸುವುದು. ಒಂದು ತಿಂಗಳಿಗೆ ಸರಿ ಹೋಗುವ ೧ ತೊಲದ ಡಿಬ್ಬಿಗೆ ರೂ. ೪-೦-೦

ನಮ್ಮ ಸ್ವಾಕೆಸ್ಟರುಃ

(1) ಸುದರ್ಶನ ಆಯುರ್ವೇದ ವೈದ್ಯಶಾಲ—ಬೆಂಗಳೂರು 2.
(2) ಷಾ ಕಂಪೆನಿ—ಮಂಗಳೂರು-1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

ಸಿಂಧ್ರಿಯಲ್ಲಿ ಸ್ವಯಂಪೂರ್ಣತೆಯ ಇನ್ನೊಂದು ಉದ್ಯಮ

ಕಲ್ಲಿದ್ದಲಿನ ಕಿಟ್ಟವನ್ನು ಉತ್ಪಾದಿಸುವ ಕೇಂದ್ರ

ಬಿಹಾರಿನ ಸಿಂಧ್ರಿಯಲ್ಲಿರುವ ಗೊಬ್ಬರದ ಕಾರ್ಖಾನೆಯು ವಿಶ್ವದಲ್ಲಿಯೇ ಹಿರಿದೆನಿಸಿದೆಯಲ್ಲದೆ ಭಾರತವನ್ನು ಸ್ವಯಂಪೂರ್ಣ ಮಾಡುವಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಲಿದೆ. ಮೂರು ವರ್ಷಗಳ ಹಿಂದೆ ಉತ್ಪಾದನೆಯನ್ನು ತೊಡಗಿದ ಈ ಕಾರ್ಖಾನೆಯು ಇಷ್ಟರವರೆಗೆ ೬೪೦೦೦೦ ಟನ್ನುಗಳಷ್ಟು ಗೊಬ್ಬರವನ್ನು ಉತ್ಪಾದಿಸಿ ಹೊರದೇಶಗಳಿಗೆ ಹರಿಯುತ್ತಿದ್ದ ೩೨ ಕೋಟಿ ರೂಪಾಯಿಗಳನ್ನು ಉಳಿಸಿದೆಯಲ್ಲದೆ ೪೯ಕೋಟಿ ರೂಪಾಯಿ ಬೆಲೆಬಾಳುವ ೧೨ ಲಕ್ಷ ಟನ್ನು ಆಹಾರ ಧಾನ್ಯಗಳನ್ನು ಹೆಚ್ಚಾಗಿ ಬೆಳೆಸುವುದಕ್ಕೂ ನೆರವಾಯಿತು. ಸಿಂಧ್ರಿಯಲ್ಲೀಗ ವರ್ಷಕ್ಕೆ ಮೂರು ಲಕ್ಷ ಟನ್ನುಗಳಷ್ಟು ಗೊಬ್ಬರ ಉತ್ಪಾದಿಸಲ್ಪಡುತ್ತದೆ. ಭಾರತದ ಗೊಬ್ಬರ ಕಾರ್ಖಾನೆಗಳೆಲ್ಲವೂ ಪೂರ್ಣ ಪ್ರಮಾಣದಲ್ಲಿ ಕೆಲಸಮಾಡಿದರೆ ೪೬೦೦೦೦ ಟನ್ನು ಗೊಬ್ಬರವನ್ನು ಉತ್ಪಾದಿಸುವುದು ಸಾಧ್ಯ. ಆದರೆ ನಮ್ಮ ದೇಶದ ಇಂದಿನ ಪರಿಸ್ಥಿತಿಯಲ್ಲಿ ಇಷ್ಟೆಂದು ಕೋಟಿ ಟನ್ನುಗಳಷ್ಟು ಗೊಬ್ಬರ ಉತ್ಪಾದನೆ ಹೊಂದಿದರೂ ಸಾಕಾಗಲಿಕ್ಕಿಲ್ಲವೆಂದು ತಜ್ಞರ ಅಭಿಪ್ರಾಯ. ಸಿಂಧ್ರಿಯ ಎಲ್ಲ ಉತ್ಪಾದನೆಯನ್ನೂ ಆಹಾರ ಧಾನ್ಯಗಳಗಾಗಿಯೇ ಉಪಯೋಗಿಸಿದರೆ,ಇವರೆಲ್ಲಷ್ಟನ್ನು ಗೊಬ್ಬರಗಳಷ್ಟು ಅಧಿಕ ಧಾನ್ಯವನ್ನು ಪ್ರತಿ ವರ್ಷ ಪಡೆಯಬಹುದು; ಇದು ೪೦ ಲಕ್ಷ ಜನರ ಹಸಿವನ್ನು ಹಿಂಗಿಸಲು ಸಾಕು. ಈಗಿನ ಮಾಹಿತಿಗನುಸಾರ ನಮ್ಮಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಯು ಇದೇ ಮಿತಿಯಲ್ಲಿ ಇರುತ್ತದೆ.

ನಮ್ಮಲ್ಲಿ ಹತ್ತು ಕೋಟಿ ಎಕ್ಕರೆ ಪ್ರದೇಶದಲ್ಲಿ ಭತ್ತ ಮತ್ತು ಗೋಧಿಯನ್ನು ಬೆಳೆಯಲಾಗುತಿದ್ದರೂ ರಸಾಯನಿಕ ಗೊಬ್ಬರದ ದಫೂರೈಕೆಯನ್ನು ಹೊಂದುವ ಹೊಲಗಳ ಪ್ರಮಾಣವು ನೂರಕ್ಕೆ ಐದರಷ್ಟೂ ಇರುವುದಿಲ್ಲ. ಸಿಂಧ್ರಿಯಲ್ಲಿ ಉತ್ಪಾದನಾ ವೇಗವು ಹೆಚ್ಚಿದಂತೆ ಗೊಬ್ಬರದ ಬೆಳೆಯನ್ನು ಇಳಿಸುತ್ತಾ ಬರಲಾಗಿರುವುದು. ಆದರೂ ಸಮ್ಮೆ ರೈತರು ಅವನ್ನು ಕೊಂಡುಕೊಳ್ಳುವುದು ಸ್ಥಿತಿವಂತರಾಗಿರುವುದಿಲ್ಲವೆನ್ನುವುದು ಶೋಚನೀಯವಾದ ವಿಚಾರ. ಉತ್ಪಾದನೆಯ ವೆಚ್ಚವನ್ನು ಇನ್ನೂ ಕಡಿಮೆ ಮಾಡುವ ಸ್ವಯತ್ನಗಳನ್ನು ಕೈಗೊಂಡದ್ದಾದರೆ ಅದರಿಂದ ರೈತರಿಗೆ ಪ್ರಯೋಜನವಾಗುವುದು ನಿಶ್ಚಯ. ಇಂಥ ದೊಂದು ಹೆಜ್ಜೆಯನ್ನು ಎರಡು ವಾರಗಳ ಪೂರ್ವದಲ್ಲಿ ಮುಂದಿಡಲಾಯಿತು: ಬಿಹಾರಿನ ಮುಖ್ಯ ಮಂತ್ರಿ ಶ್ರೀಕೃಷ್ಣಸಿಂಹರು ಕಲ್ಲಿದ್ದಲಿನ ಕಿಟ್ಟವನ್ನು ತಯಾರಿಸುವ ೬೦ ಒಲೆಗಳ ಗುಂಪನ್ನು ಔಪಚಾರಿಕವಾಗಿ ಇದೇ ನವಂಬರ ೫ರಂದು ಉದ್ಘಾಟಿಸಿದರು. ಜರ್ಮನಿಯ ಸಂಸ್ಥೆಯೊಂದರ ನೆರವಿನಿಂದ ಕಟ್ಟಲಾದ ಈ ಹೊಸ ಕಾರ್ಖಾನೆಯು ಸಿಂಧ್ರಿ ಚಟುವಟಿಕೆಗಳ ವಿಸ್ತರಣದಲ್ಲಿ ಪ್ರಥಮ ಕ್ರಮವಾಗಿದೆ. ೩೫೫ ಲಕ್ಷ ರೂಪಾಯಿಗಳ ವೆಚ್ಚದಿಂದ ಕಟ್ಟಿಸಲಾಗಿರುವ ಈ ಕಾರ್ಖಾನೆಯು ದೆಸೆಯಿಂದ ದಿನಕ್ಕೆ ೩೫೫ ಟನ್ನುಗಳಷ್ಟು ಕಲ್ಲಿದ್ದಲಿನ ಕಿಟ್ಟವು ಉತ್ಪಾದಿಸಲ್ಪಟ್ಟು ಇಷ್ಟರ ವರೆಗೆ ಹೊರಗಿನವರಿಗೆ ಪ್ರತಿ ವರ್ಷ ಕೊಡುತ್ತ ಬಂದ ೭೦ ಲಕ್ಷ ರೂಪಾಯಿಗಳ ಉಳಿತಾಯವಾಗುತ್ತದೆ.

ಅಮೋನಿಯಂ ಸಲ್ಫೇಟು ಎಂಬ ಹೆಸರಿನ ಕೃತಕ ರಸಾಯನಿಕ ಗೊಬ್ಬರವನ್ನು ಉತ್ಪಾದಿಸುವಲ್ಲಿ ಕಲ್ಲಿದ್ದಲಿನ ಕಿಟ್ಟ ಹಾಗು ಜಿಪ್ಸಂ ಆದುರುಗಳೇ ಮುಖ್ಯವಾದ ಕಚ್ಚಾ ಪದಾರ್ಥ. ಕಲ್ಲಿದ್ದಲಿನ ಕಿಟ್ಟವನ್ನು ಎಷ್ಟು ಅಗ್ಗದರದಲ್ಲಿ ದೊರಕಿಸಿಕೊಳ್ಳುವುದು ಸಾಧ್ಯವಾಯಿತೋ ಗೊಬ್ಬರದ ಬೆಲೆಯನ್ನು ಅಷ್ಟುಮಟ್ಟಿಗೆ ಇಳಿಸುವುದ ಕೈ ಅನುಕೂಲವಾಗುತ್ತದೆ. ಕಲ್ಲಿದ್ದಲಿನ ಕಿಟ್ಟವನ್ನು ಸಿಂಧ್ರಿಯಲ್ಲಿಯೇ ಭಟ್ಟಿಇಳಿಸುವುದರಿಂದ ಕೆಲವು ಉಪನಸ್ತುಗಳ ಲಾಭವನ್ನೂ ಹೊಂದಿ, ಅವುಗಳ ಸಾಗಾಟದಿಂದ ಬರುವ ಹಣವನ್ನು ದೃಷ್ಟಿಯಲ್ಲಿಟ್ಟುಕೊಂಡು, ಗೊಬ್ಬರದ ಬೆಲೆಯನ್ನು ಇಳಿಸುವುದು ಸಾಧ್ಯವಾಗುತ್ತದೆ. ಈಗ ಕಟ್ಟಲಾಗಿರುವ ಹೊಸ ಕಾರ್ಖಾನೆಯು ಕಲ್ಲಿದ್ದಲಿನ ಕಿಟ್ಟದ ಹೊರತಾಗಿ ಒಂದು ಕೋಟಿ ಘನ ಅಡಿಯಷ್ಟು ಅನಿಲವನ್ನೂ ೩೫ ಟನ್ನುಗಳಷ್ಟು ತಾರೆಣ್ಣೆಯನ್ನೂ ಎರಡು ಟನ್ನುಗಳಷ್ಟು ಅಮೋನಿಯವನ್ನೂ ಒಂಭತ್ತು ಟನ್ನುಗಳಷ್ಟು ಕಚ್ಚಾ ಬೆಂಜಾಲನ್ನೂ ಪ್ರತಿದಿನ ಉತ್ಪಾದಿಸುತ್ತದೆ. ಬಣ್ಣದ ಕೈಗಾರಿಕೆ, ಪ್ಲಾಸ್ಟಿಕ್ಕಿನ ಉಪಕರಣಗಳು, ರಾಸಾಯನಿಕ ಹಾಗು ಔಷಧ ದ್ರವ್ಯಗಳು, ಚರ್ಮ ಹದಗೊಳಿಸುವಿಕೆ ಮುಂತಾದ ಉದ್ಯೋಗಗಳಲ್ಲಿ ಉಪಯುಕ್ತವಾದ ದ್ರವ್ಯವನ್ನು ತಾರೆಣ್ಣೆಯಿಂದ ಪಡೆಯಬಹುದು. ಬೆಂಜಾಲು ಒಳ್ಳೆಯ ಇಂಧನವಾಗಿದೆಯಲ್ಲದೆ ರಾಸಾಯನಿಕ ಕೈಗಾರಿಕೆಗಳಲ್ಲಿಯೂ ಬಳಸಲ್ಪಡುತ್ತದೆ. ಅಮೋನಿಯದಿಂದ ಆದರ ಸಲ್ಫೇಟನ್ನು ಪಡೆಯಬಹುದು.

ಕಾರ್ಖಾನೆಯನ್ನು ಕಟ್ಟಿದ ಜರ್ಮನ ತಜ್ಞರ ಬುದ್ಧಿವಂತಿಕೆಯು ಪರಿಣಾಮವಾಗಿ ಭಾರತಕ್ಕೆ ಇನ್ನೊಂದು ಬಗೆಯಿಂದಲೂ ಲಾಭವಾಗುವಂತೆ ಇಲ್ಲಿ ಹೊಸ ಕ್ರಮವು ಅನುಸರಿಸಲ್ಪಡುತ್ತದೆ— ಇಲ್ಲಿ ಬಳಕೆ ಗಟ್ಟಿಯಾದ ಕಲ್ಲಿದ್ದಲಿನ ಕಿಟ್ಟಕ್ಕಿಂತಲೂ ಮಿಶ್ರ ಜಾತಿಯ, ಆದರೆ ಹೆಚ್ಚು ಪ್ರತಿ ಕ್ರಿಯೆಯನ್ನು ತೋರಿಸಬಲ್ಲ ಮಾದರಿಯು ಒಲೆಯ ಪ್ರಯೋಜನವನ್ನು ಮಾಡುತ್ತದೆ. ಗಟ್ಟಿ ಜಾತಿಯ ಕಲ್ಲಿದ್ದಲಿನ ಕಿಟ್ಟವನ್ನು ಉಕ್ಕು ಮತ್ತು ಕಬ್ಬಿಣದ ಕೈಗಾರಿಕೆಗಳಲ್ಲಿ ಲಾಭದಾಯಕವಾಗಿ ಉಪಯೋಗಿಸಬಹುದು. ಭಾರತದಲ್ಲಿ ಈ ಜಾತಿಯ ಆದುರುಗಳ ನಿಕ್ಷೇಪ ಬಹಳ ಮಿತವಾಗಿರುವುದರಿಂದ ಗೊಬ್ಬರ ಕಾರ್ಖಾನೆಗೆ ಆದನ್ನು ಬಳಸಿದರೆ ಉಕ್ಕು ಮತ್ತು ಕಬ್ಬಿಣದ ಕೈಗಾರಿಕೆಗೆ ಪೆಟ್ಟು ತಗಲುತ್ತದೆ. ಆದುದರಿಂದ ಜರ್ಮನಿ, ಫ್ರಾನ್ಸ್ ಗಳಲ್ಲಿ ಅನುಸರಿಸಲಾಗುವ ಹೊಸ ಪದ್ಧತಿಯೊಂದನ್ನು ಸಿಂಧ್ರಿಯ ಹೊಸ ಕಾರ್ಖಾನೆಯಲ್ಲಿ ಅನುಸರಿಸಲು ನಿಶ್ಚಯಿಸಿ, ಸಾಮಾನ್ಯ ಜಾತಿಯ ಕಲ್ಲಿದ್ದಲಿನಿಂದಲೇ ಯೋಗ್ಯ ಕೆಲಸ ತೆಗೆದುಕೊಳ್ಳುವ ಕ್ರಮವನ್ನು ಆಳವಡಿಸಲಾಗಿರುವುದು. ಇಲ್ಲಿಯ ೬೦ ಒಲೆಗಳಲ್ಲಿ ಪ್ರತಿಯೊಂದೂ ೪೦ ಅಡಿ ಉದ್ದ ೧೦ ಅಡಿ ಎತ್ತರ ಮತ್ತು ೧೪ ಅಂಗುಲ ಅಗಲವಾಗಿದ್ದು ಇವುಗಳ ನಡುವೆ ಒಲೆಯನ್ನು ಬಿಸಮಾಡುವ ಅನಿಲಗಳ ಸಂಚಾರಕ್ಕೆ ತಕ್ಕ ವ್ಯವಸ್ಥೆ ಏರ್ಪಟ್ಟಿರುವುದು.

ಒಂದು ಕೋಟಿ ಘನ ಅಡಿಯಷ್ಟು ಕಲ್ಲಿದ್ದಲಿನ ಕಿಟ್ಟದ ಅನಿಲವನ್ನು ಈ ಒಲೆಗಳು ದಿನವೂ ಉತ್ಪಾದಿಸುವುದರಿಂದ ಅದನ್ನು ಯೂರಿಯಾ ನುತ್ತು ಅಮೋನಿಯಂ ಸಲ್ಫೇಟು—ನೈಟ್ರೇಟುಗಳೆಂಬ ಬೇರೆ ಎರಡು ರಾಸಾಯನಿಕ ಕೃತಕ ಗೊಬ್ಬರದ ಉತ್ಪಾದನೆಗೆ ವಿನಿಯೋಗಿಸುವ ವಿಚಾರವನ್ನು ಸರಕಾರ ಮಾಡುತ್ತದೆ. ಇದಕ್ಕಾಗಿ ವಿದೇಶಗಳಲ್ಲಿ ತಜ್ಞರುಗಳನ್ನು ಕರೆದಿರುವರು. ಸಿಂಧ್ರಿಯಲ್ಲಿ ಉತ್ಪಾದಿಸಲ್ಪಡುವ ಇನ್ನೊಂದು ಉಪವಸ್ತುವಿನ ಲಾಭ ಹೊಂದುವುದಕ್ಕೋಸ್ಕರ ದಿನಕ್ಕೆ ೬೦೦ ಟನ್ನುಗಳಷ್ಟು ಸಿಮೆಂಟನ್ನು ಉತ್ಪಾದಿಸಬಲ್ಲ ಕಾರ್ಖಾನೆಯೂ ಕಟ್ಟಲಾಗುವುದು. ಹೀಗೆ ದಿನೇ ದಿನೇ ವಿಸ್ತರಣೆ ಹೊಂದುವ ಸಿಂಧ್ರಿಯಲ್ಲಿ ರಾಸಾಯನಿಕ ಯಂತ್ರ ವಿಜ್ಞಾನದಲ್ಲಿ ಹೊಸ ಸಂಶೋಧನೆಗಳನ್ನು ನಡೆಸುವುದಕ್ಕೆ ಸಹ ಅನುಕೂಲತೆ ಕಲ್ಪಿಸಲ್ಪಟ್ಟಿರುವುದು. ವಿಶ್ವವಿದ್ಯಾಲಯಗಳಂದಲೂ ಔದ್ಯೋಗಿಕ ಕೇಂದ್ರಗಳಂದಲೂ ಬಂದ ಯಂತ್ರ ಕುಶಲರು ಇಲ್ಲಿ ವೈಜ್ಞಾನಿಕ ರಹಸ್ಯಗಳನ್ನು ಬಿಡಿಸುವ ಸಾಹಸದಲ್ಲಿ ಮಗ್ನರಾಗಿರುವುದನ್ನು ಕಾಣಬಹುದು. ಈ ಪ್ರಕಾರವಾಗಿ ಬಿಹಾರಿನ ಒಂದು ಮೂಲೆಯಲ್ಲಿರುವ ಸಿಂಧ್ರಿಯು ಭಾರತೀಯರೆಲ್ಲರಿಗೂ ಜಿಗಿ ಮಾನಾಶ್ಚರ್ಯವಾದ ರಾಷ್ಟ್ರೀಯ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವುದು.

ಎಸ್ಟೇಟ್ ಡ್ಯೂಟಿಯ ತೊಂದರೆಯನ್ನು ತಪ್ಪಿಸಿಕೊಳ್ಳಬೇಕೆಂದಿರುವಿರಾ?

ಆದರಸಂಬಂಧವಾದ ಸಮಸ್ಯೆಗಳನ್ನು ಯುನೈಟೆಡ್ ಇಂಡಿಯಾ ನಿಮ್ಮ ಸಂಗಡ ಚರ್ಚಿಸಲು ಸಂತೋಷದಿಂದ ಸಿದ್ಧವಿದ್ದಾರೆ.

ವಿವಿಧ ಶಾಲಿಸಿಗಳಿಗೆ ಎಸ್ಟೇಟ್ ಡ್ಯೂಟಿಯುಂಟುಬಾಗುವ ನ್ಯೂನಾತಿರೇಕಗಳನ್ನು ಚರ್ಚಿಸಲು ನಮ್ಮ ಪ್ರಧಾನ ಕಛೇರಿಯಲ್ಲಿ ಇದಕ್ಕಾಗಿಯೇ ಪ್ರತ್ಯೇಕವಾದ ವಿಶೇಷ ವಿಭಾಗವು ಏರ್ಪಡಿಸಲ್ಪಟ್ಟಿದೆ. ಮತ್ತು ಎಲ್ಲ ಇದರ ಸಂಬಂಧವಾಗಿ ನಿರಾವರಣೆಯನ್ನು ಮಾಡಬಹುದು.

ನಮ್ಮ ಗೋಪ್ಯ ಸಲಹೆಯನ್ನು ಮತ್ತು ಸೇವೆಯನ್ನು ನೀವು ಉಚಿತವಾಗಿ ಪಡೆಯಬಹುದು. ಮತ್ತು ಇದಕ್ಕೆ ನೀವು ಯಾವ ವಿಧದಲ್ಲಿಯೂ ದಾಕ್ಷಿಣ್ಯಬದ್ಧರಾಗುವುದಿಲ್ಲ.



ದಿ ಯುನೈಟೆಡ್ ಇಂಡಿಯಾ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಪ್ರಧಾನ ಕಛೇರಿ:
ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್ಸ್,
ಪೋಸ್ಟ್ ಬಾಕ್ಸ್ 281, ಮದರಾಸು-1.

UI 160

ನಂಬಿಕೆಗೆ ಅರ್ಹತೆ!

ಅತ್ಯುತ್ತಮ ಟಾಯಲೆಟ್ ಸಾಬೂನಿನಲ್ಲಿ ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ ಅವೆಲ್ಲಾ

ಮೈಸೂರು ಸ್ಯಾಂಡಲ್ ಸೋಪಿನಲ್ಲಿ

ಇರುವವು ಎಂದು ಖಚಿತವಾಗಿ ಹೇಳುತ್ತೇನೆ.

* * *

— ಎಲ್ಲಾ ಕಡೆಗಳಲ್ಲೂ ದೊರಕುವುದು —

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.

Member: I. S. T. M. A.

ಆರ್ಥಿಕ ಧೋರಣೆಯ ಮೇಲೆ ವಿಶೇಷ ಬೆಳಕು

ಔದ್ಯೋಗಿಕ ನೀತಿಗೆ ೧೯೪೮ರ ಘೋಷಣೆಯೇ ಅಡಿಗಲ್ಲು

ಪಾರ್ಲಿಮೆಂಟು ಈ ತಿಂಗಳ ಮಧ್ಯದಲ್ಲಿ ವಿದೇಶ ಧೋರಣೆಯನ್ನು ಚರ್ಚಿಸಬೇಕೆಂದು ಮೊದಲು ನಿಶ್ಚಯಿಸಿದ್ದರು. ಆದರೆ ಈಗ ಆ ಸಮಯವನ್ನು ಸರಕಾರದ ಆರ್ಥಿಕ ಹಾಗು ಔದ್ಯೋಗಿಕ ಧೋರಣೆಯ ಚರ್ಚೆಗೆ ವಿನಿಯೋಗಿಸಬೇಕೆಂದು ಸರ್ವ ಪಕ್ಷಗಳ ಸಮ್ಮತಿಯಿಂದ ನಿರ್ಧರಿಸಲಾಗಿದೆ. ಸರಕಾರದ ಧೋರಣೆಗನುಸಾರವಾಗಿ ಖಾಸಗಿ ಉದ್ದಿಮೆದಾರರ ವಾತ್ಸಲ್ಯದ ಅಭಿವೃದ್ಧಿಯಲ್ಲಿ ಆವರಿಗೆ ಕೊಡಲ್ಪಡುವ ಅವಕಾಶ,ನಿರುದ್ಯೋಗ ನಿವಾರಣೆಗೆ ನೆರವಾಗುವಂತೆ ವಿವಿಧಯೋಜನೆಗಳ ಪರಿಶೀಲನೆ,ಚೆಕ್ಕ ಹಾಗು ದೊಡ್ಡ ಉದ್ದಿಮೆಗಳ ನಡುವಣ ಸಂಬಂಧ ಮುಂತಾದ ವಿಷಯಗಳನ್ನು ಕುರಿತು ಸದಸ್ಯರು ನಡೆಸಲಿರುವ ಚರ್ಚೆಯು ಪಂಚವಾರ್ಷಿಕ ಯೋಜನೆಯ ಪ್ರಗತಿಯ ಸಿಂಹಾವಲೋಕನದೊಂದಿಗೆ ಕೊನೆಗೊಳ್ಳುವುದು. ಬಿಲ್ಗಾರರವರು ಕಲ್ಕತ್ತೆಗೆ ಸವಿೂಪದ ದುರ್ಗಾಪುರದಲ್ಲಿ ಉಕ್ಕಿನ ಕಾರ್ಖಾನೆಯೊಂದನ್ನು ತೆರೆಯಲು ಸರಕಾರದ ಅನುಮತಿ ಕೇಳಿದ್ದರೆಂದೂ ೧೯ಳಲನೇ ಇಸವಿಯಲ್ಲಿ ಸಾರಲಾದ ಸರಕಾರದ ಔದ್ಯೋಗಿಕ ನೀತಿಯನ್ವಯ ಕಬ್ಬಿಣ ಮತ್ತು ಉಕ್ಕಿನ ಕ್ಷೇತ್ರವು ಸರಕಾರದ ನೇರವಾದ ಹತೋಟಿಗೆ ಒಳಪಡುವುದರಿಂದ ಬಿಲ್ಗಾರ ಬೇಡಿಕೆಯನ್ನು ಮನ್ನಿಸುವುದಕ್ಕೆ ಸಾಧ್ಯವಾಗುತ್ತಿಲ್ಲವೆಂದೂ ಇದಕ್ಕಾಗಿಯೇ ಸರಕಾರದ ನೀತಿಯ ಚರ್ಚೆಯನ್ನು ನಡೆಸಲು ಪಾರ್ಲಿಮೆಂಟು ಆತುರ ವ್ಯಕ್ತಪಡಿಸುತ್ತಿದೆಂದೂ ತಿಳಿದುಬರುತ್ತದೆ.

ನೆಹರೂರ ಹೇಳಿಕೆ

ಬಿಲ್ಗಾರ ಪ್ರಕರಣದಿಂದ ಉಂಟಾದ ಗೊಂದಲಮಯ ವಾತಾವರಣವನ್ನು ಸರಿಪಡಿಸುವುದಕ್ಕೋಸ್ಕರ ಪ್ರಧಾನ ಮಂತ್ರಿಗಳು ಕಾಂಗ್ರೆಸು ಸದಸ್ಯರ ಸಭೆಯಲ್ಲಿ ಸರಕಾರದ ಔದ್ಯೋಗಿಕ ನೀತಿಯನ್ನು ವಿವರಿಸಿ ಮಾತನಾಡಿದರು. ೧೯ಳಲರಲ್ಲಿ ಹೊರಡಿಸಲಾದ ಘೋಷಣೆಯೇ ಔದ್ಯೋಗಿಕ ನೀತಿಯು ತಳಪದಿಯೂಗಿದೆ ಎಂಬುದನ್ನು ಅವರು ನೆನಪಿಗೆ ತಂದುಕೊಟ್ಟು ಸರಕಾರದ ಮುಂದೆ ಬರುವ ಪ್ರತಿಯೋದೂ ಸೂಚನೆಯನ್ನು ಈ ಒರೆಗಲ್ಲಿಗೆ ಹಚ್ಚಿ ಯೋಗ್ಯ ಕ್ರಮ ತೆಗೆದು ಕೊಳ್ಳಲಾಗುವು. ದೆಂದು ಹೇಳಿದರು. ಸಾಮಾನ್ಯವಾಗಿ ಇಂದು ಪ್ರಮುಖ ಉದ್ಯಮಗಳನ್ನು ಖಾಸಗಿ ಕಂಪೆನಿಗಳಿಗಿಂತಲೂ ಸರಕಾರವೇ ತನ್ನ ಕೈಯಲ್ಲಿಟ್ಟುಕೊಂಡು ನಡೆಸುವುದು ಇಷ್ಟವೆಂಬ ಧ್ವನಿಯನ್ನು ಅವರು ಹೊರಡಿಸಿದರು. ಈಗ ಖಾಸಗಿ ಜನರ ಕೈಯಲ್ಲಿರುವ ಉದ್ದಿಮೆಗಳನ್ನು ರಾಷ್ಟ್ರೀಕರಿಸುವುದಿಲ್ಲ. ಆದರೆ ಭಾರತದ ಅಭಿವೃದ್ಧಿಗಾಗಿ ಹೊಸ ಯೋಜನೆಗಳನ್ನು ಕೈಗೊಳ್ಳುವಾಗ ಸಮಾಜವಾದಿ ಆರ್ಥಿಕ ರಚನೆಯನ್ನು ಸಾಧಿಸುವುದಕ್ಕೆ ಮಹತ್ವ ಕೊಡಲ್ಪಡುವುದೆಂದು ಅವರು ತಿಳಿಸಿದರು. ರಾಜ್ಯ ಸಭೆಯಲ್ಲಿ ಆವರು ಹೆಚ್ಚು ಕಡಿಮೆ ಇದೇ ವಿಷಯಕ್ಕೆ ಸಂಬಂಧಿಸಿದ ಇನ್ನೊಂದು ಪ್ರಶ್ನೆಯನ್ನು ಉತ್ತರಿಸುವಾಗ ನಮಗೆ ಬೇಕಾಗುವ ಯಂತ್ರ ಸಾಮಗ್ರಿಗಳನ್ನು ಆಯಾತ ಮಾಡದೆ ಸಾಧ್ಯವಾದಷ್ಟು ಮಟ್ಟಿಗೆ ಇಲ್ಲಿಯೇ ಕಟ್ಟಿಕೊಳ್ಳಬೇಕೆಂದು ಸರಕಾರ ಬಯಸುತ್ತದೆ; ನಮ್ಮ ಅಭಿವೃದ್ಧಿ ಪ್ರಯತ್ನಗಳಿಗೆ ಸಂಪೂರ್ಣವಾಗಿ ವಿದೇಶಗಳ ನೆರವನ್ನು ಅವಲಂಬಿಸುವ ಪರಿಸ್ಥಿತಿಯನ್ನು ಹೋಗಲಾಡಿಸುವುದೇ ಸರಕಾರದ ಉದ್ದೇಶ ಎಂದರು.

ಪಾರ್ಲಿಮೆಂಟಿನ ಕಾರ್ಯಕಲಾಪ

ರಾಜ್ಯ ಸಭೆಯಲ್ಲೀಗ ಹಿಂದು ವಿವಾಹ ಮತ್ತು ದಾಂಪತ್ಯ ವಿಚ್ಛೇದನ ಮಸೂದೆಯು ಚರ್ಚಿಸಲ್ಪಡುತ್ತಿದೆ. ಸೋಮವಾರ (ದಿನಾಂಕ ೬) ಇದನ್ನು ಕಾನೂನು ಸಚಿವರ ಪರವಾಗಿ ವಾಣಿಜ್ಯ ಮಂತ್ರಿ ಶ್ರೀ. ದ ಪ. ಕರಮರಕರರು ಮಂಡಿಸುತ್ತಾ ಹಿಂದು ಸಮಾಜದ ಖಾಸಗೀನ ವ್ಯವಸ್ಥೆಯನ್ನು ಪೋಷಿಸುತ್ತಿದ್ದಂತೆಯೇ ವಿಧೇಯಕವು ಪ್ರಗತಿಪರ ವಿಚಾರಗಳಿಗೂ ಅವಕಾಶ ಮಾಡಿಕೊಟ್ಟಿದೆಯಾಗಿ ಹೇಳಿದರು. ಲೋಕ ಸಭೆಯಲ್ಲಿ ಆಂಧ್ರ ರಾಜ್ಯಕ್ಕೆ ಬೇಕಾಗುವ ಕಾಯಿದೆಗಳನ್ನು ರಚಿಸುವ ಅಧಿಕಾರವನ್ನು ರಾಷ್ಟ್ರಾಧ್ಯಕ್ಷರಿಗೆ ನೀಡುವ ಮಸೂದೆಯನ್ನು ಗೃಹ ಮಂತ್ರಿಗಳು ಮಂಡಿಸಿದಾಗ ಡಾಲಂಕಾ ಸುಂದರಮ್ಮರು ಒಂದು ತಿದ್ದುಪಡಿಯನ್ನು ಸೂಚಿಸಿದರು. ಇದರಂತೆ ದಶಂಬರ ೫೦ನೇ ತಾರೀಕಿನ ತರುವಾಯ ರಾಷ್ಟ್ರಾಧ್ಯಕ್ಷರು ಆಂಧ್ರಕ್ಕೆ ಸಂಬಂಧಿಸಿದ ಶಾಸನಗಳನ್ನು ಮಾಡುವಾಗ ಲೋಕ ಸಭೆಯ ಹತ್ತು ಮಂದಿ ಮತ್ತು ರಾಜ್ಯ ಸಭೆಯ ಐದು ಮಂದಿ ಸದಸ್ಯರುಳ್ಳ ಸಮಿತಿಯೊಂದರ ಸಲಹೆ ಪಡೆಯಬೇಕೆಂಬ ಸೂಚನೆಯನ್ನು ಮಂಡಿಸಿದರು. ಇದನ್ನು ಗೃಹ ಮಂತ್ರಿಗಳು ಒಪ್ಪಿಕೊಂಡರು. ರಾಜ್ಯ ಸಭೆಯೂ ಇದಕ್ಕೆ ಹಿಂದಿನಿಂದ ಅನುಮೋದನೆ ನೀಡಿತು. ಮಣಿಪುರದಲ್ಲಿ ಶಾಸನ ಸಭೆಯನ್ನು ಮರಳಿ ಅಸ್ತಿತ್ವಕ್ಕೆ ತಂದು ಅಲ್ಲಿ ಹೊಣೆಗಾರ ಸರಕಾರವನ್ನು ಸ್ಥಾಪಿಸಬೇಕೆಂದು ಪ್ರಜಾ ಸಮಾಜವಾದಿ ಪಕ್ಷದವರು ಸಕಾರ್ಯಗ್ರಹ ನಡೆಸುತ್ತಿದ್ದಾಗ ಸೌಮ್ಯ ಲಾಠೀ ಪ್ರಹಾರ ನಡೆಸಿದ ಕುರಿತು ಲೋಕ ಸಭೆಯ ಮುಂದೆ ನಿಲುವಳಿ ಸೂಚನೆಯೊಂದನ್ನು ಪ್ರಸವಾ ಪಕ್ಷದ ಗುರು ವಾದ ಸ್ವಾಮಿಯವರು ಮಂಡಿಸಿದರು. ಗೃಹ ಮಂತ್ರಿಗಳು ಈ ಕುರಿತು ಕೊಟ್ಟ ಹೇಳಿಕೆಯನ್ನು ಕೇಳಿಕೊಂಡ ಬಳಿಕ ಅಧ್ಯಕ್ಷರು ನಿಲುವಳಿ ಸೂಚನೆಯನ್ನು ಕಿತ್ತು ಹಾಕಿದರು. ಸರಕಾರದ ಹೇಳಿಕೆ ಅಧಿಕೃತ ಸ್ವರೂಪದ್ದಿದೆಯೆಂದೂ ಹಾಗಿಕೆಯ ಸುದ್ದಿಗಳನ್ನು ಚರ್ಚಿಸಲು ತಾನು ಅವಕಾಶ ಕೊಡುವುದಿಲ್ಲವೆಂದೂ ಅಧ್ಯಕ್ಷರು ಹೇಳಿದುದಕ್ಕೆ ಪ್ರತಿ ಭಟನೆ ವ್ಯಕ್ತಮಾಡಿ ಪ್ರತಿ ಪಕ್ಷದವರು ಸಭೆಯನ್ನು ತ್ಯಜಿಸಿದರು.

ಬೇಂಕು ನೌಕರರ ಸಂಪು

ಮುಂಬರುವ ಬೇಂಕು ನೌಕರರ ನಾಮೂಹಿಕ ಸಂಪು ಲೋಕ ಸಭೆಯಲ್ಲಿ ಇನ್ನೊಂದು ನಿಲುವಳಿ ಸೂಚನೆಯ ವಿಷಯವಾಯಿತು. ಭಾರತ ಸರಕಾರದವರು ಒಂದು ಪ್ರಕಟಣೆಯನ್ನು ಹೊರಡಿಸಿ ಬೇಂಕುಗಳ ೬೫ಸಾವಿರ ನೌಕರರು ದಶಂಬರ ೧೫ನೇತಾರೀಕಿನಿಂದ ತೊಡಗಬೇಕೆಂದಿರುವ ಮುಷ್ಕರವು ಅನಗತ್ಯವೂ ಅನ್ಯಾಯವೂ ಆಗಿದೆಯೊಗಿ ಹೇಳಿ, ನೌಕರರು ಯಾರೂ ಮುಷ್ಕರದಲ್ಲಿ ತೊಡಗಬಾರದೆಂದು ಎಚ್ಚರಿಸಿದ್ದರೂ ಬೇಂಕು ನೌಕರರ ಮೇಲೆ ಇವರಿಂದ ಒಳ್ಳೆಯಪರಿಣಾಮವಾಗುತೆ ಕಂಡು ಬಂದಿಲ್ಲ. ನೆಹರುಗಳ ಮತ್ತು ಭಾರತ ಸರಕಾರದ ಪೆದರಿಕೆಯು ಮಾತುಗಳಿಗೆ ಬೇಂಕು ನೌಕರರು ಅಂಜಿ ಕುಳಿತಿರ ಬಾರದೆಂದು ಕಾರ್ಮಿಕಮುಖಂಡರು ಭರದಿಂದ ಪ್ರಚಾರವೂಡುತ್ತಿದ್ದಾರೆ. ರಾಮ ಮನೋಹರ ಲೋಹಿಯವಂಥವರ ಬೆಂಬಲವೂ ಇವರಿಗೆ ದೊರಕಿರುತ್ತದೆ. ಲೋಕ ಸಭೆಯ ಮುಂಜೆ ನಿಲುವಳಿ ಸೂಚನೆಯನ್ನು ಮಂಡಿಸಿದ ಶ್ರೀ ಎ. ಕೆ. ಗೋಪಾಲನ್ನರು ಸರಕಾರದ ನ್ಯಾಯ ನಿರ್ಣಯ ಕ್ರಮದಲ್ಲಿ ಬೇಂಕು ನೌಕರರಿಗೆ ವಿಶ್ವಾಸವೇ ತಪ್ಪಿ ಹೋಗಿವೆ ಯಾಗಿ ಅಭಿಪ್ರಾಯಪಟ್ಟರು. ಈಗಲಾದರೂ ತಡ ಮಾಡದೆ ಸಂಧಾನದಿಂದ ಮುಷ್ಕರವನ್ನು ತಪ್ಪಿಸಲು ಪ್ರಯತ್ನಿಸಬೇಕೆಂದು ಅನೇಕ ಸದಸ್ಯರು ಚರ್ಚೆಯ ಕಾಲದಲ್ಲಿ ಸಲಹೆಮಾಡಿದರು. ನಿಲುವಳಿಸೂಚನೆಯನ್ನು ವಿರೋಧಿಸಿದ ಕೂಲಿಕಾರ ಸಚಿವರೂ ಪ್ರಧಾನ ಮಂತ್ರಿಗಳೂ ರಾಜಾಧ್ಯಕ್ಷ ಸಮಿತಿಯ ವರದಿಯನ್ನು ಸರಕಾರ ಪ್ರತೀಕ್ಷೆಸುತ್ತಿದೆಯೆಂದೂ ೧೯ಳಲನೇ ಮಾರ್ಚಿ ತಿಂಗಳಲ್ಲಿ ಬೇಂಕು ನೌಕರರಿಗೆ ಸಿಗುತ್ತಿದ್ದ ಒಟ್ಟು ವೇತನ ಪ್ರಮಾಣವನ್ನು ೧೯೫೫ನೇ ಆಗೋಸ್ತು ತಿಂಗಳವರೆಗೆ ಕಡಿಮೆ ಮಾಡ ತಕ್ಕದಲ್ಲವೆಂದು ಸರಕಾರವಿಧಿಸಿದೆಯೆಂದೂ ಹೀಗಾಗಿ ನೌಕರರು ಮುಷ್ಕರ ಹೂಡತಕ್ಕ ಆಗತ್ಯವೇನೂ ಇಲ್ಲವೆಂದೂ ಹೇಳಿದರು. ನಿಲುವಳಿ ಸೂಚನೆಯು ಕೆಳ್ತು ಹಾಕಲ್ಪಟ್ಟಿತು.

ಮಂತ್ರಿ ಮಂಡಲದ ವಿಸ್ತರಣೆ

ಕೇಂದ್ರ ಮಂತ್ರಿ ಮಂಡಲದ ವಿಸ್ತರಣೆಯ ಸಂಬಂಧದಲ್ಲಿ ಒಟ್ಟು ಮೂರು ಪ್ರಕಟನೆಗಳನ್ನು ಕಳೆದವಾರ ಹೊರಡಿಸಲಾಯಿತು. ಪಂಡಿಡಗೋವಿಂದ ವಲ್ಲಭಸಂತರು ಕೇಂದ್ರದಲ್ಲಿ ಮಂತ್ರಿಗಳಾಗಿ ನೇಮಕ ಹೊಂದಿಯವರಲ್ಲದೆ, ಈಗಾಗಲೇ ಉಪ ಮಂತ್ರಿಗಳಾಗಿರುವ ಶ್ರೀಅರಿಣಚಂದ್ರಗುಪ್ತಮಣಿಲಾಲ ಚತುರ್ಭಾಯಿಶಮಸ್ತು, ಕೇಶವ ದೇವ ನೂಲವೀಯರನ್ನು ಮಂತ್ರಿಗಳಾಗಿ ರಾಷ್ಟ್ರಾಧ್ಯಕ್ಷರು ನೇಮಿಸಿರುವರು. ಲೋಕ ಸಭಾ ಸದಸ್ಯರಾಗಿರುವ ಡಾ। ಸೈಯದ್ ಮಹಮ್ಮದ್ರವರೂ ಶ್ರೀ. ಪರಿ ವಿನಾಯಕ ವಾಟಸ್ಕರರೂ ಹಿಂದೆ ವಾಯವ್ಯ ಸರಹದ್ದಿನ ಪ್ರಾಂತದಲ್ಲಿ ಡಾ।ಖಾನ ಸಾಹೇಬರ ಮಂತ್ರಿ ಮಂಡಳದಲ್ಲಿ ಮಂತ್ರಿಯಾಗಿದ್ದ ಹಾಗುಈಗಕೇಂದ್ರಮರುವಸತಿ ಇಲಾಖೆಯ ಸಲಹಿಗಾರರಾಗಿರುವ ಮೆಹರ ಚಂದಕನ್ನರೂ ಮಂತ್ರಿಗಳಾಗಿ ಅಧಿಕಾರ ವಹಿಸುವರು. ಇವರಿಗೆ ಯಾವ ಖಾತೆಗಳನ್ನು ಕೊಡಬಾಗುವುದೆಂದು ತಿಳಿದಿಲ್ಲ ಉತ್ತರ ಪ್ರದೇಶದ ಮುಖ್ಯ ಮಂತ್ರಿತ್ವ ಬಿಟ್ಟು ಕೊಡುವ ಪಂಕರ ಸ್ಥಾನಕ್ಕೆ ಆಲ್ಲಿ ಈಗ ಗೃಹಮಂತ್ರಿಗಳಾಗಿರುವ ಡಾ. ಸಂಪೂರ್ಣಾನಂದರು ಬರುವರೆಂದು ವಿಚಿತವಾಗಿ ತಿಳಿಯುತ್ತದೆ

ZANDU'S THREE GEMS of AYURVEDIC MEDICINES

ಝಂಡೂರವರ ಮಕರಧ್ವಜ ಪಿಲ್ಸ್ (ಸುವರ್ಣ ಮಿಶ್ರಿತ)
ದೀರ್ಘಾವಧಿಯ ಕೆಮ್ಮು, ನರಗಳ ನಿಸ್ತೂಕ ಮತ್ತು ಸರ್ವಸಾಮಾನ್ಯ ಆಶಕ್ತತೆ ಹಾಗೂ ಇತರ ಎಡೆಯ ಬೇನೆಗಳಿಗೆ ಅತ್ಯಧಿಕ ಗುಣಕಾರಿ. ಬೆಲೆ: 1 ತೊಲೆಗೆ ರೂ. ೨—೦—೦

ಝಂಡೂರವರ ವಸಂತ ಕುಸುಮಾಕರ ರಸ—ಮೂತ್ರಾತಿಸಾರ, ಸಿಹಿಮೂತ್ರ, ನಿಸ್ಸತ್ವ ಇತ್ಯಾದಿ ಬಯಸಾಲದ ಮೂತ್ರ ದೋಷಗಳಿಗೆ ಜಾಕ್ಪರುನಲ್ಲಿಂದ ವಿಶಿಷ್ಟ ತರದಲ್ಲಿ ಶಿಫಾರಸು ಮಾಡಲ್ಪಟ್ಟಿದೆ. ಬೆಲೆ: ಕಾಲು ತೊಲೆಗೆ ರೂ. ೪—೦—೦.

ಝಂಡೂರವರ ಸುವರ್ಣ ಮಿಶ್ರಿತ ಚ್ಯವನಪ್ರಾಶ—ಸರ್ವರಿಗೂ ರುಚಿಕರವಾದ ಟಾನಿಕ್ ಆಹಾರ. ಬಂಗಾರ ಮತ್ತು ಇತರ ಭಸ್ಮಗಳ ಮಿಶ್ರಣ ವಿರುವುದರಿಂದ ಶೀತ, ಕಫ, ಕೆಮ್ಮುವಿಗೆ ಅತ್ಯಂತ ಪರಿಣಾಮಕಾರಿ.
ಬೆಲೆ: 1 ರಾತ್ಲಿಗೆ ರೂ. 7—೮—೦. ಕಾಲು ರಾತ್ಲಿಗೆ ರೂ. ೨—೦—೦.

ಝಂಡೂರವರ ಔಷಧಿಗಳು ದ.ಕ.ಜಿಲ್ಲೆಯ ಅಧಿಕೃತ ಏಜಂಟರಲ್ಲಿ ದೊರೆಯುವುವು

ಕ್ಯಾಟಲಾಗಿಗೆ ಕೆಳಗಿನ ಸೋಲ್ ಏಜಂಟರಿಗೆ ಬರೆಯಿರಿ.

DAMODAR & CO.,
113 Nainiappa Naicken Street, P. T.-MADRAS-3.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.
ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ).

ಅಧಿಕೃತ ಭಂಡವಾಳ ...	...	ರೂ. 25,00,000
ಚಂದಾ ಆಪಿಸಿ, ತೆತ್ತು ಬಂದ ಭಂಡವಾಳ	...	ರೂ. 20,00,000
ಕ್ಷೇಮ ನಿಧಿ ...	...	ರೂ. 10,50,000
ಠೇವಣಾತಿಗಳು ...	...	ರೂ. 2,98,19,000
ಒಟ್ಟು ವಲವಣೆ ಭಂಡನಾಳ	...	ಸುಮಾರು ರೂಪ್ಯಾ 4 ಕೋಟಿ
ಒಟ್ಟು ಶಾಖೆಗಳು ...	...	38

(31—12—1953ರಲ್ಲಿ)
THE CANARA BANKING CORPORATION LIMITED
Estd:- 1906] [H. O. UDIPI (S. India).

ಮದ್ರಾಸು ಶಾಸನ ಸಭೆಯ ಅಧಿವೇಶನ ಪ್ರಾರಂಭ

ಕೃಷಿ ಕ್ಷೇತ್ರದ ಅಭಿವೃದ್ಧಿಗಾಗಿ ಪ್ರತಿನಿಧಿಗಳ ಆಗ್ರಹ

ಗವರ್ನರರಾದ ಶ್ರೀ ಪ್ರಕಾಶರು ದಿನಾಂಕ ೧೭ರಂದು ಮದ್ರಾಸು ಶಾಸನ ಸಭೆಗಳ ಸಂಯುಕ್ತ ಅಧಿವೇಶನವನ್ನು ಉದ್ಘಾಟಿಸಿದರು. ಇದರಲ್ಲಿ ಹಿಂದಿನ ಮುಖ್ಯ ಮಂತ್ರಿಗಳಾದ ಶ್ರೀ ರಾಜಗೋಪಾಲಾಚಾರಿಯವರೂ ಮೇಲ್ಮನೆಯ ಸದಸ್ಯನೆಂಬ ಕಾರಣದಿಂದ ಉಪಸ್ಥಿತರಿದ್ದರು. ಮೊನ್ನೆ ಸದಸ್ಯರೂ ಮಂತ್ರಿ ವರ್ಗದವರೂ ಅವರನ್ನು ಅಕ್ಕರೆಯಿಂದ ಸ್ವಾಗತಿಸಿದರು. ಗವರ್ನರರು ತಮ್ಮ ಭಾಷಣದ ಪ್ರಾರಂಭದಲ್ಲಿಯೇ ರಾಜಾಜಿಯವರು ರಾಜ್ಯಕ್ಕೆ ಬಂದೊದಗಿದ್ದ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಸರಕಾರವನ್ನು ದಕ್ಷತೆಯಿಂದ ನಡೆಸಿಕೊಂಡು ಹೋದುದಕ್ಕೆ ಆಭಾರ ಸೂಚಿಸಿದರು. ಮದ್ರಾಸು ರಾಜ್ಯಕ್ಕೆ ಹೊಂದಿಕೊಂಡಂತೆ ಭಾರತದಲ್ಲಿದ್ದ ಫ್ರೆಂಚರ ಸ್ವಾಧೀನ್ಯಗಳು ಸಂಧಾನ ಮಾರ್ಗದ ಮೂಲಕ ಮಾತೃ ಭೂಮಿಗೆ ಹಸ್ತಾಂತರಿಸಲ್ಪಟ್ಟುದಕ್ಕೆ ಗವರ್ನರರು ಸಂತೋಷವನ್ನು ವ್ಯಕ್ತಪಡಿಸಿದ್ದರು. ಜಿಲ್ಲಾ ಬೋರ್ಡು ಚುನಾವಣೆಗಳು ಶಾಂತವಾಗಿ ಜರಗಿಸಲ್ಪಟ್ಟು ಚುನಾಯಿತ ಪ್ರತಿನಿಧಿಗಳು ಅಧಿಕಾರವನ್ನು ನಿರ್ವಹಿಸುವಂತಾದುದಕ್ಕೆ ಅವರು ಸಂತೋಷ ಸೂಚಿಸುತ್ತಾ ಸ್ಥಳೀಯ ಸಂಸ್ಥೆಗಳ ಆಡಳಿತದ ದೃಢತೆಯಲ್ಲಿ ಕೈ ಗೊಳ್ಳಬೇಕಾದ ಸುಧಾರಣೆಗಳ ಕುರಿತು ಸದಸ್ಯರಿಂದ ಸೂಚನೆಗಳನ್ನು ಸ್ವಾಗತಿಸಿದರು.

ತೃಪ್ತಿಕರ ಪರಿಸ್ಥಿತಿ

ಆಹಾರ ಪರಿಸ್ಥಿತಿಯ ವರ್ಣನೆಯನ್ನು ಮಾಡುತ್ತಿದ್ದಾಗ ಗವರ್ನರರು ದಿನಂಗತ ಕೆಡ್ಡಾಯಿ ಯವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದರು. ಮಳೆ ಬೆಳೆಗಳು ತೃಪ್ತಿಕರ ವಿನೆಯೆಂದೂ ಅವರು ಅಭಿಪ್ರಾಯಪಟ್ಟರು. ಸರಕಾರದವರು ಕೃಷಿಕರಿಗೆ ಅನುಕೂಲವಾಗಲೆಂದೆ. ಜ್ಯಾರಿಗೆ ತಂದಿರುವ ಸಾಲದ ವಸೂಲಿಗೆ ತಾತ್ಕಾಲಿಕ ತಡೆಯನ್ನು ವಿಧಿಸುವ ಆಜ್ಞೆಯನ್ನು ಇನ್ನೂ ಊರ್ಜಿತಗೊಳಿಸಬೇಕೋ ಏನೆಂಬ ವಿಷಯ ಸರಕಾರದ ಪರ್ಯಾಲೋಚನೆಯಲ್ಲಿದೆಯೆಂದು ತಿಳಿಸಿದರು. ರಾಜ್ಯದಲ್ಲಿ ಕೈಗೊಳ್ಳಲಾದ ನೀರಾವರಿ ಮತ್ತು ವಿದ್ಯುಚ್ಛಕ್ತಿ ಯೋಜನೆಗಳ ಪ್ರಗತಿಯನ್ನೂ ಗವರ್ನರರು ವಿವರಿಸಿದರು. ಹಳ್ಳಿಗಳಿಗೆ ವಿದ್ಯುತ್ತನ್ನು ಒದಗಿಸುವ ಕೆಲಸವನ್ನು ಮತ್ತಷ್ಟು ತೀವ್ರಗೊಳಿಸುವುದಾಗಿ ಅವರು ಹೇಳಿದರು. ಕೃಷಿ ಇಲಾಖೆಯು ರೈತರಿಗೆ ಸುಧಾರಿತ ಬೀಜವನ್ನೂ ಕೃತಕ ಗೊಬ್ಬರವನ್ನೂ ಒದಗಿಸಿ ನೆರವಾಗುವುದರಲ್ಲಿ ಸದಾ ತತ್ಪರವಾಗಿದೆಯೆಂದೂ ಅವರು ವಿದಿತಪಡಿಸಿದರು. ಇಪ್ಪತ್ತರಲ್ಲಿಯೇ ತೆರೆಯಲಾದ ೧೩೭೦ ಹೊಸ ಪ್ರಾಥಮಿಕ ಶಾಲೆಗಳಲ್ಲದೆ ೫೦೦-೧೦೦೦ ನವೆಗೆ ಜನವಸತಿ ಇರುವ ಹಳ್ಳಿಗಳಿಗೆಲ್ಲ ಪ್ರಾಥಮಿಕ ವಿದ್ಯಾಭ್ಯಾಸದ ಪ್ರಯೋಜನ ದೊರಕುವಂತೆ ಇನ್ನೂ ೧೫೫೦ ಶಾಲೆಗಳನ್ನು ತೆರೆಯಲಾಗುವುದೆಂದು ಅವರು ಪ್ರಕಟಿಸಿದರು. ರಾಷ್ಟ್ರೀಯ ವಿಸ್ತರಣಾ ಯೋಜನೆ ಕಾರ್ಯ ಜನಪದ ಅಭಿವೃದ್ಧಿ ಕೇಂದ್ರಗಳು ಕಚ್ಚು ಪೆಚ್ಚಾಗಿ ನಡೆಸಲ್ಪಡಿದೆ ಪ್ರೋತ್ಸಾಹನೆಗಳನ್ನು ಪಡೆಯುತ್ತಿವೆಯೆಂದು ಹೇಳುತ್ತಾ ಸದ್ಯ ನೀರಿನ ವ್ಯವಸ್ಥೆಗೆ ಸರಕಾರವು ಮಹತ್ವವನ್ನು ಸಲ್ಲಿಸುವುದೆಂದು ಸಾರಿದರು.

ಪ್ರತಿನಿಧಿಗಳ ಅಭಿಪ್ರಾಯ

ಸಂಯುಕ್ತ ಅಧಿವೇಶನವನ್ನು ಉದ್ದೇಶಿಸಿ ಮೇಲಿನಂತೆ ಭಾಷಣ ಮಾಡಿದುದಕ್ಕೆ ಗವರ್ನರರಿಗೆ ಆಭಾರ ಸೂಚಿಸುವ ಗೊತ್ತುವಳಿಗಳನ್ನು ದಿನಾಂಕ ೫ರಂದು ಉಭಯ ಸಭೆಗಳಲ್ಲೂ ಚರ್ಚೆಗೆ ಮಂಡಿಸಲಾಯಿತು. ಆಗ ಭಾಷಣ ಮಾಡಿದ ಸದಸ್ಯರಲ್ಲಿ ರಾಜ್ಯದ ಪ್ರಗತಿಯ ಕುರಿತು ಸಂತೋಷವನ್ನು ಹೆಚ್ಚಿನವರು ವ್ಯಕ್ತಪಡಿಸಿದರೂ ಅಗತ್ಯವಸ್ತು ಮಹತ್ವದ ಕೆಲವು ವಿಷಯಗಳಲ್ಲಿ ಗವರ್ನರರ ಭಾಷಣವು ಯಾವ ಪ್ರಸ್ತಾಪನೆಯನ್ನೂ ಮಾಡದಿರುವುದಕ್ಕೆ ವಿಷಾದಿಸಿದರು. ಭೂಸುಧಾರಣಾ ಶಾಸನವನ್ನು ಜ್ಯಾರಿಗೆ ತರುವ ಸದ್ದಿಯೇ ಭಾಷಣದಲ್ಲಿಲ್ಲದುದಕ್ಕೆ ಅನೇಕ ಸದಸ್ಯರು ಟೀಕಿಸಿದರು. ದಕ್ಷಿಣ ಕನ್ನಡ ಜಿಲ್ಲೆಯ ಪ್ರತಿನಿಧಿಗಳು ಒಕ್ಕಲು ಹಿತ ಮಸೂದೆಯ ಉಲ್ಲೇಖವನ್ನೆ ಗವರ್ನರರ ಭಾಷಣದಲ್ಲಿ ಮಾಡದುದಕ್ಕೆ ಅಸಂತೋಷವನ್ನು ಸೂಚಿಸಿದರು ಬರುವ ಫೆಬ್ರುವರಿ ತಿಂಗಳಲ್ಲಿ ಈಗ ಜ್ಯಾರಿಯಲ್ಲಿರುವ ಒಕ್ಕಲೆಬ್ಬಿಸುವುದನ್ನು ತಡೆಗಟ್ಟುವ ಮಸೂದೆ ರದ್ದಾಗುತ್ತದೆ. ಆ ಬಳಿಕ ಒಕ್ಕಲುಗಳ ಸ್ಥಿತಿ ಏನೆಂದು ಗವರ್ನರರ ಭಾಷಣದಿಂದ ಗೊತ್ತಾಗುದಿಲ್ಲ. ಇಂಥ ಮಸೂದೆಯನ್ನು ತರಲು ವಿಳಂಬಿಸುವುದೆಂದರೆ ಪರಮ ಅನ್ಯಾಯವೆಂದು ಮುಂತಾಗಿ ನಮ್ಮ ಪ್ರತಿನಿಧಿಗಳು ಕೇಳಿದರು. ಪ್ರಾಥಮಿಕ ಶಿಕ್ಷಣದ ಪದ್ಧತಿಯಲ್ಲಿ ಯಾವ ಸುಧಾರಣೆ ಅಗತ್ಯವೆಂದು ಸೂಚಿಸಲು ನೇಮಕಗೊಂಡ ಸಮಿತಿಯು ಅಧ್ಯಾಪಕರ ವೇತನ ಪ್ರಮಾಣವನ್ನು ಪೆಚ್ಚಿಸುವುದಕ್ಕೂ ಅವರಿಗೆ ಕೆಲವು ಸೌಕರ್ಯಗಳನ್ನು ಕೊಡುವುದಕ್ಕೂ ಗಮನ ನೀಡಬೇಕೆಂದು ಒತ್ತಾಯಿಸಿದನು. ರೈತರ ಸಾಲವನ್ನು ಸುಲಭ ಕಂತುಗಳಲ್ಲಿ ಪಾವತಿ ಮಾಡಿಗೊಡುವಂತೆ ಈಗಿನ ತಡೆಯಾಜ್ಞೆಯನ್ನು ತಕ್ಕ ರೀತಿಯಲ್ಲಿ ಪರಿಷ್ಕರಿಸಬೇಕೆಂದು ಅವರು ಅಭಿಪ್ರಾಯಪಟ್ಟರು. ನೀರಾವರಿಯ ಪ್ರಯೋಜನವನ್ನು ಪಡೆತ್ತೂರು ತಾಲೂಕು ಮುಂತಾದೆಡೆಯ ರೈತಾಗಿ ಒದಗಿಸಬೇಕೆಂದೂ ಸರಕಾರವನ್ನು ಕೇಳಿಕೊಳ್ಳಲಾಯಿತು.

ಭೂ ಸುಧಾರಣೆಯ ವಿಧೇಯಕ

ಸೋಮವಾರದಿನ ಚರ್ಚೆಗೆ ಸರಕಾರದ ಪರವಾಗಿ ಉತ್ತರಗಳನ್ನು ಕೊಟ್ಟರು. ಶಾಸನ ಸಭೆಗಳ ಪ್ರಸಕ್ತ ಅಧಿವೇಶನದ ಕೊನೆಯಲ್ಲಿ ಭೂಸುಧಾರಣಾ ಮಸೂದೆಯನ್ನು ಮಂಡಿಸುವುದಾಗಿ ಮೇಲ್ಮನೆಯ ಧುರೀಣರಾದ ಭಕ್ತವತ್ಸಲಮರು ತಿಳಿಸಿದರು. ಕೆಳಮನೆಯ ಧುರೀಣರಾದ ಶ್ರೀ ಸುಬ್ರಹ್ಮಣ್ಯಮರು ಸರಕಾರವನ್ನು ಅಸಮರ್ಥನೆಂದು ಬಲವಾಗಿ ಹಳಿದು ಘೋರಣೆಯನ್ನು ಖಂಡಿಸಿ ಮಾತನಾಡಿದ ಪ್ರತಿಪಕ್ಷದನಕ ಆಕ್ಷೇಪಗಳಿಗೆ ತಕ್ಕ ಉತ್ತರಗಳನ್ನು ಕೊಟ್ಟು, ಸರಕಾರದ ನೀತಿಯನ್ನು ದಕ್ಷತೆಯಿಂದ ಪ್ರತಿಪಾದಿಸಿದರು ಸಮಸ್ಯೆಗಳನ್ನು ನೋಡುವ ಮನೋಧರ್ಮವನ್ನು ರಚನಾತ್ಮಕ ದೃಷ್ಟಿಗೆ ಅನುಗುಣವಾಗಿ ರೂಪಿಸಿಕೊಂಡರೆ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಪ್ರತಿಪಕ್ಷಗಳು ಸಹಕರಿಸುವುದು ಕಷ್ಟವಲ್ಲ ಎಂದನರು ಹೇಳಿದರು. ಗವರ್ನರರಿಗೆ ಕೃತಜ್ಞತೆ ವ್ಯಕ್ತಪಡಿಸುವ ಗೊತ್ತುವಳಿಯು ಹೀಗೆ ಸ್ವೀಕಾರಗೊಂಡಿತು. ಇದಕ್ಕೆ ಮುಂಚೆ ಪ್ರಜಾ ಸಮಾಜವಾದಿ ಪಕ್ಷದವರು ಮೊಲಬಾಣಿನಲ್ಲಿ ದಸ್ತಗಿರಿ ಕೃಷ್ಣಪ್ಪೊಂದು ನಡೆದ ಕುರಿತು ಸಿಲುವಳಿ ಸೂಚನೆಯನ್ನು ಪಂಡಿಸಲು, ಪ್ರಶ್ನೆಯು ನ್ಯಾಯಸ್ಥಾನದ ಮುಂಪೆ ವಿಚಾರಣೆಯುಲ್ಲಿರುವುದರಿಂದ ಇದ್ದಿ ಜರ ಚರ್ಚೆ ನಡೆಸಲು ಬಾರದೆಂಬ ಆರ್ಥ ಸಚಿವರು. ವಾದಿಸಿದರೆ. ಸಭಾಧ್ಯಕ್ಷರು ಇದನ್ನು ಮನ್ನಿಸಿ, ಸಿಲುವಳಿ ಸೂಚನೆಯನ್ನು ತಳ್ಳಿ ಹಾಕಿದರು. ಇದಕ್ಕೆ ಪ್ರತಿಷ್ಠಪನೆ ಸೂಚಿಸುವುದಕ್ಕೂ ಕೋಲ್ಕರ್ ಪ್ರಜಾಸಮಾಜವಾದಿಗಳು ಸಭೆಯಿಂದ ಹೊರನಡೆದರು. ಪ್ರಸಕ್ತ ಅಧಿವೇಶನವು ಇನ್ನು ಮುಂದೆ ಬೇರೆ ಬೇರೆ ಮಹಾದಿಗಳನ್ನು ಕೈಗೆತ್ತಿಕೊಂಡು ಈ ತಿಂಗಳ ಮೂರನೇ ವಾರದ ವರೆಗೆ ಅವನ್ನು ಪರಿಶೀಲಿಸುವುದ..

ಮುಂಬಯಿ ಚಂದಾದಾರರಲ್ಲಿ

ಚಂದಾವಣವನ್ನು ಕ್ರಮವಾಗಿ ನೆಲಾಯಿಸುತ್ತಿಲ್ಲ ನುಂಬಯಿಯ ನಮ್ಮ ಹಲವು ಚಂದಾದಾರ ಬಂಧುಗಳು ಇತ್ತೀಚೆಗೆ ತುಂಬ ಬಾಕಿ ಮಾಡಿಕೊಂಡಿರುತ್ತಾರೆ. ಅಂಥವರು ಇನ್ನಾದರೂ ತಮ್ಮ ಬಾಕಿಯನ್ನು ದಯವಾಡಿ ಕಳುಹಿಸಿ ಕೊಟ್ಟು ಸಹಕರಿಸುವಂತೆ ವಿಶೇಷತಃ ವಿಜ್ಞಾಪನೆ ಮಾಡಿಕೊಳ್ಳುತ್ತೇನೆ.

—ಸಂ. ನ.

ಓದಲೇಬೇಕಾದ ದಿ! ಕಿಲ್ಲೆಯವರ ಮೂರು ಪುಸ್ತಕಗಳು

ಪ್ರಾಚೀನ ತುಳುನಾಡು

(ಎಸ್. ಎಸ್. ಕಿಲ್ಲೆ ಮತ್ತು ಎಸ್. ಎ. ಕೃಷ್ಣಪ್ಪ ಹೆಗ್ಡೆ)

ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ. (ಶ್ರೀ. ಸುಂಟೀರ್ ಗೋವಿಂದ ಭೈಗಳ ಮುನ್ನುಡಿ)

150 ಪುಟಗಳು. ಬಿಳಿ ಕಾಗದ, ಆಕರ್ಷಕ ರಕ್ಷಾಪತ್ರ. ಬೆಲೆ 2-0-0.

ಭಾರತದ ಕರ್ಣ

"ಭಾರತದ ಕರ್ಣನು ದಿ! ಕಿಲ್ಲೆಯವರಿಗೆ ಒಲಿದಿದ್ದ..ಇದು ಅವರ ಕರ್ಣನ ಪಾತ್ರವನ್ನು ನೋಡಿದೆನರೇನೇ ಗೊತ್ತು. ಆ ಮುತ್ತಾತ ಕರ್ಣನಚಿತ್ರ ಎಂಬೆಯೂ ಜನಮನದಿಂದ ಮಾಸಿ ಹೋಗದು". (ಪ್ರೊ! ಎಂ. ಆರ್. ಶಾಸ್ತ್ರಿಗಳ ಮುನ್ನುಡಿಯಿಂದ) ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0-6-0

ಮುರಲಿ

ಮೇಲ್ಮರೆಗಳ ಕವಿತೆಗಳ ಸಂಗ್ರಹ. ಬೆಲೆ 0-12-0.

(ಮುನ್ನುಡಿಕಾರರು: ಶ್ರೀ. ಕಯ್ಯಾರ ಕಿಞ್ಞಣ್ಣ ರೈ)

ಮೂರೂ ಪುಸ್ತಕಗಳನ್ನೂ ದಿ! ಕಿಲ್ಲೆಯವರ ಧರ್ಮಪತ್ನಿ ಶ್ರೀಮತಿ ಇಂದಿರಾ ಕಿಲ್ಲೆ, ಮಂಗಳೂರು—ಅವರು ಪ್ರಕಟಿಸಿದ್ದಾರೆ.

ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:

ನವಭಾರತೆ ಪುಸ್ತಕ ಭಂಡಾರ, ಉಡುಪಿ


ಪೌಷ್ಟಿಕವಾದ ಆಕೃತಿ
ಕಟ್ಟುನುಸ್ಸಾದ ಬಂಡಿಗಳು ಅವಶ್ಯವನ್ನು ಪಟ್ಟು ಸಯಲ್‌ವಾನಸನ್ನಾಗಿ ಮಾಡಿತು. ಪ್ರತಿದಿನವೂ ಅನಸು ಕೆಗೆಮಕೊಳ್ಳುವ ಪ್ರಯುವಾದ ಟಾನಿಕ್ ಆ ರೀತಿಯಾಗುತ್ತಿದ್ದಕ್ಕೆ ಸಹಾಯಕಾರಿಯಾಗಿರುವುದು. ಅವನು ಪ್ರತಿದಿನಾ ತೆಗೆದುಕೊಳ್ಳುವ ಟಾನಿಕ್
ಜೀವಾಮೃತಂ
ಆರೋಗ್ಯಕ್ಕೆ ಬಲವೃದ್ಧಿಗೆ
ಆಯುರ್ವೇದಾಶ್ರಮಂ ಲಿಮಿಟೆಡ್ ಮದ್ರಾಸ್-17

NAVAYUGA
Popular Kannada Weekly
Founder:—
Sri **A. B. SHETTY**, *M.L.A.*
Minister for Public Health,
Govt. of Madras.

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೪	೯-೧೨-'೫೫	೧೫

ಕಾಯಿದೆ ಆಯೋಗ

ಲೋಕ ಸಭೆಯಲ್ಲಿ ಕಾಂಗ್ರೆಸು ಸದಸ್ಯ ರಾದ ಶ್ರೀ ದೊಡ್ಡ ತಿಮ್ಮಯ್ಯನವರು ಇಂದಿನ ಕಾಯಿದೆಗಳ ಪುನರ್ವಿಮರ್ಶೆಯನ್ನು ನಡೆಸುವುದಕ್ಕೋಸ್ಕರ ಒಂದು ಆಯೋಗವನ್ನು ನೇಮಿಸಬೇಕೆಂದು ಗೊತ್ತುವಳಿಯನ್ನು ತಂದಾಗ, ಪ್ರಧಾನ ಮಂತ್ರಿಗಳು ಸರಕಾರವು ಇದನ್ನು ಎಂದೋ ಒಪ್ಪಿದೆಯೆಂದೂ ಆಯೋಗದ ಕಾರ್ಯಕ್ಷೇತ್ರ ಹಾಗು ಸದಸ್ಯರ ಬಗ್ಗೆ ತಮ್ಮ ಸಹೋದ್ಯೋಗಿಗಳಲ್ಲಿ ಇನ್ನೂ ಮಾತುಕತೆ ನಡೆದಿರುವುದರಿಂದ ಆಯೋಗವು ಇದಕ್ಕೆ ಮುಂಚೆ ಅಸ್ತಿತ್ವದಲ್ಲಿ ಬರಲಿಲ್ಲವೆಂದೂ ಹೇಳಿಕೆಯನ್ನು ಕೊಟ್ಟರು. ಅಖಿಲ ಭಾರತ ಕಾಂಗ್ರೆಸು ಸಮಿತಿಯು ಇಂಥ ಕಾಯಿದೆ ಆಯೋಗವನ್ನು ನೇಮಿಸಬೇಕೆಂದು ಹಿಂದೆಯೇ ಸಿಫಾರಸು ಮಾಡಿದ್ದಿತು—ಅಂದಿನಿಂದ ಸರಕಾರದ ಗಮನವು ಈ ವಿಷಯದ ಮೇಲೆ ವಿಶೇಷವಾಗಿ ಬಿದ್ದಿತು. ಖಾಸಗಿಯಾಗಿ ಶ್ರೀ ದೊಡ್ಡ ತಿಮ್ಮಯ್ಯನವರು ಗೊತ್ತುವಳಿಯನ್ನು ಮಂಡಿಸಿದುದರಿಂದ, ಈ ವಿಷಯದ ಕುರಿತು ಇನ್ನಷ್ಟು ಹೆಜ್ಜಾಗಿ ಸರಕಾರದ ಲಕ್ಷ್ಯವನ್ನು ಸೆಳೆಯುವುದು ಸಾಧ್ಯವಾಯಿತು. ಕಾಯಿದೆ ಆಯೋಗದ ನೇಮಕವನ್ನು ಕುರಿತು ಪ್ರಧಾನ ಮಂತ್ರಿಗಳು ಕೊಟ್ಟ ಹೇಳಿಕೆಯನ್ನು ಎಲ್ಲ ಸದಸ್ಯರೂ ಸಂತೋಷದಿಂದ ಸ್ವಾಗತಿಸಿರುವರಲ್ಲದೆ ಆಯೋಗದ ಚಟುವಟಿಕೆಗಳು ಹೇಗಿರ ಬೇಕೆಂಬ ಬಗ್ಗೆ ವಿಚಾರವಿನಿಮಯ ಮುಂತಾದವುಗಳ ಮೂಲಕ ಕುತೂಹಲವನ್ನು ತೋರಿಸುತ್ತಲೂ ಇರುವರೆಂದು ತಿಳಿಯುತ್ತದೆ ಕಾಯಿದೆ ಆಯೋಗವು ತಾತ್ಕಾಲಿಕ ಸ್ವರೂಪದ್ದಿರಬೇಕೋ ಅಥವಾ ಶಾಶ್ವತವಾಗಿ ಅಸ್ತಿತ್ವದಲ್ಲಿ ಉಳಿಯ ಬೇಕೊ ಎಂಬುದಿನ್ನೂ ನಿಶ್ಚಿತವಾಗಿಲ್ಲ— ಮೊದಲು ತಾತ್ಕಾಲಿಕವಾಗಿಯೇ ನೇಮಿಸಿ ಹಿಂದಿನಿಂದ ಶಾಶ್ವತ ರೂಪವನ್ನು ಕೊಡಬಹುದೆಂದು ಹಲವರು ಅಭಿಪ್ರಾಯಪಟ್ಟಂತೆ ಕಾಣುತ್ತದೆ. ಭಾರತದಲ್ಲಿ ಪೋಲೀಸು ಆಡಳಿತದಬದಲು ಕಲ್ಯಾಣ ರಾಜ್ಯವನ್ನು ನೆಲೆಗೊಳಿಸಿದಂದಿನಿಂದ ನಮ್ಮ ಶಾಸನಗಳಲ್ಲಿಯೂ ಕಾನೂನುಗಳಲ್ಲಿಯೂ ಬಹಳಷ್ಟು ಮಾರ್ಪಾಡುಗಳಾಗುವುದು ಅವಶ್ಯವೆನಿಸಿರುತ್ತದೆ. ಪವಿತ್ರವಾದ ನಮ್ಮ ಘಟನೆಯನ್ವಯ ನಾಗರಿಕರಿಗೆ ಮೂಲ ಭೂತ ಅಧಿಕಾರಗಳನ್ನು ದಯಪಾಲಿಸಲಾಗಿದ್ದರೂ ಇಂದು ಜ್ಯಾರಿಯಲ್ಲಿರುವ ಅನೇಕ ಕಾಯಿದೆಗಳು ವ್ಯಕ್ತಿಯು ಹಕ್ಕು ಬಾಧ್ಯತೆಗಳನ್ನು ಕಡೆಗಣಿಸಿದಂತೆ ತೋರುತ್ತದೆ. ನ್ಯಾಯ ಸ್ಥಾನಗಳ ಮುಂದೆ ಪ್ರಶ್ನೆಯನ್ನೊಯ್ದೇ ವ್ಯಕ್ತಿಯು ತನ್ನ ಹಕ್ಕು ಬಾಧ್ಯತೆಗಳನ್ನು ರಕ್ಷಿಸಿಕೊಳ್ಳಬೇಕಾದ ಪರಿಸ್ಥಿತಿಯನ್ನು ನಾವಿಂದು ಕಾಣುತ್ತಿದ್ದೇವೆ. ಇದು ಎಲ್ಲರಿಗೂ ಸುಲಭದಲ್ಲಿ ನ್ಯಾಯ ದೊರಕಿಸಿ ಕೊಡುವ ದೃಷ್ಟಿಯಿಂದ ಇಷ್ಟವಾದುದಲ್ಲವೆಂದು ನಮ್ಮ ಅಭಿಪ್ರಾಯ. ಘಟನೆಯ ಆಶಯಕ್ಕೆ ವ್ಯತಿರಿಕ್ತವಾದ ಕಾಯಿದೆ ಕಾನೂನುಗಳನ್ನು ಜ್ಯಾರಿಯಲ್ಲಿಟ್ಟು, ನ್ಯಾಯ ಸ್ಥಾನಗಳು ಒಂದೊಂದೇ ಕಲಮಿನ ದೋಷವನ್ನು ಎತ್ತಿ ತೋರಿಸಿದ ಹಾಗೆಲ್ಲ ತಿದ್ದುಪಡಿಯನ್ನು ಮಾಡುವುದೆಂದರೆ ಬಹಳ ವಿಳಂಬತಗಲುವುದಷ್ಟೇ ಅಲ್ಲ, ನಾಗರಿಕರಿಗೆ ವ್ಯರ್ಥ ತ್ರಾಸವನ್ನುಂಟು ಮಾಡಿದ ಹಾಗೆಯೂ ಆಗುತ್ತದೆ ಇದಲ್ಲದೆ, ತಿದ್ದುಪಡಿ ಮಾಡುವಾಗಲಾಗಲೀ ಹೊಸತಾಗಿ ಮಸೂದೆಯನ್ನು ಮಂಡಿಸುವಾಗಲಾಗಲೀ ಆದರಲ್ಲಿ ಗಟ್ಟಿ ಪ್ರಯೋಗ ದೋಷಗಳೇ ಉಂಟಾದ ನ್ಯೂನತೆಗಳು ಈಗ ಹೇರಳವಾಗಿ ಸಿಗುತ್ತವೆ. ಶಾಸನಕರ್ತರು ತಪ್ಪು ರಾಜಕೀಯ ಉದ್ದೇಶದಿಂದ ಪ್ರೇರಿತರಾಗಿ ಕಾನೂನು ದೃಷ್ಟಿಯಿಂದ ಪುದ್ಧವಲ್ಲದ ವಾಕ್ಯಸರಣಿಗಳನ್ನೆ ತಿದ್ದುಪಡಿಯಾಗಿ ಅವಸರದಿಂದ ಪಡೆಮಂಡಿಸುವ ಮತ್ತಿದನ್ನು ಕಾನೂನು ತಜ್ಞರ ಪಲಹೆಗಳನ್ನು ಕೇಳದೆಯೇ ಸಂಬಂಧಿಸಿದ ಮಂತ್ರಿಗಳು ಸ್ವೀಕರಿಸುವ ಸಂಪ್ರದಾಯವೊಂದು ಹೆಚ್ಚು ಹೆಚ್ಚಾಗಿ ಬಳಕೆಯಲ್ಲಿದ್ದಂತೆ ಕಾಣುತ್ತದೆ. ಇಂಥ ತಪ್ಪುಗಳನ್ನು ಸರಿಪಡಿಸುವುದು ನ್ಯಾಯಸ್ಥಾನಗಳ ಕೆಲಸವೆಂದು ಭಾವಿಸುವುದು ಎಷ್ಟು ಪ್ರಮಾದಕರವಾಗುತ್ತದೆಯೋ ಜ್ಯಾರಿಯಲ್ಲಿರುವ ಕಾಯಿದೆಗಳು ಇಂದಿನ ವಾತಾವರಣಕ್ಕೆ ಹೊಂದಿಕೊಳ್ಳುವುದಿಲ್ಲವಾದರೆ ತೊಂದರೆಗೀಡಾದ ನಾಗರಿಕರು ನ್ಯಾಯಸ್ಥಾನದ ಮುಂದೆ ದೂರಿಯ್ದು, ಜಲ್ಲಿ ತಕ್ಕ ಪರಿಹಾರಪಡೆಯಲೆನ್ನುವ ವಾದವೂ ಇಷ್ಟೇ ಕೆಟ್ಟದ್ದು. ಕಾಯಿದೆ ಆಯೋಗದ ನೇಮಕದಿಂದ ಕುಂದು ಕೊರತೆಗಳು ನಿವಾರಣೆ ಹೊಂದಿ ನ್ಯಾಯದಾನವನ್ನು ಹೊಂದಲು ವ್ಯಕ್ತಿಗೆ ಸುಲಭ ಸಾಧ್ಯವಾಗುವುದು; ಮಾತ್ರವಲ್ಲ ಕಲ್ಯಾಣ ರಾಷ್ಟ್ರದ ಉದ್ದೇಶವನ್ನು ಜೊಕ್ಯ ರೀತಿಯಲ್ಲಿ ನೋಷಿಸಿಕೊಂಡು ಹೋಗುವುದಕ್ಕೂ ಅದು ನೆರವಾಗುವುದು.

ಬೇಂಕು ನೌಕರರ ತಂಟೆ

ಇದೇ ದಶಂಬರ ೧೫ನೇ ತಾರೀಕಿನಿಂದ ಬೇಂಕುಗಳಲ್ಲಿ ಕೆಲಸ ಮಾಡುವ ನೌಕರರಲ್ಲಿ ಹೆಚ್ಚಿನವರು ಸರಕಾರದವರು ನ್ಯಾಯ ಮಂಡಳಿಯು ನೀಡಿದ್ದ ಎವಾರ್ಡನ್ನು ತಿದ್ದುಪಡಿ ಮಾಡಿದುದಕ್ಕೆ ಪ್ರತಿಭಟನೆ ವ್ಯಕ್ತಮಾಡಿ ಮುಷ್ಕರವನ್ನು ಹೂಡುವರೆಂದು ತಿಳಿದು ತುಂಬ ವಿಷಾದವೆನಿಸುತ್ತದೆ. ಸರಕಾರದವರು ನ್ಯಾಯ ಮಂಡಳದ ತೀರ್ಮಾನವನ್ನು ಏಕಾಗಿ ಸರಿಪ್ಪರಿಸಿದರೆಂಬುದನ್ನು ನೌಕರರು ತಿಳಿದು ಕೊಂಡಿದ್ದರೆ ಇಷ್ಟು ಉಗ್ರಕ್ರಮವನ್ನು ಕೈಗೊಳ್ಳುವ ನಿರ್ಣಯಕ್ಕೆ ಅವರು ಬರುತ್ತಿರಲಿಲ್ಲ. ಇದನ್ನು ಬಿಟ್ಟರೂ ಸರಕಾರದವರಿಂದ ತಪ್ಪು ಸಂಭವಿಸಿದೆಯೆಂದೇ ಕಟ್ಟಿಕೊಂಡರೂ—ರಾಜಾಧ್ಯಕ್ಷ ಸಮಿತಿಗೆ ವಿಷಯವನ್ನೀಗ ಒಪ್ಪಿಸಿಕೊಟ್ಟರುವುದರಿಂದ ಇದರ ತೀರ್ಮಾನವಾದರೂ ಏನೆಂದು ಬೇಂಕು ನೌಕರರು ಕಾಯುತ್ತಿದ್ದರೆ ಅದರಿಂದ ನಷ್ಟವಾಗುತ್ತಿರಲಿಲ್ಲ. ಹೇಗೂ ಐದು ವರ್ಷಗಳಿಂದ ಈ ತಂಟೆ ಅಸ್ತಿತ್ವದಲ್ಲಿದ್ದು ಇನ್ನು ಮೂರು ತಿಂಗಳು ಕಾಯುತ್ತಿದ್ದರೆ ಹೆಚ್ಚಿನ ತೊಂದರೆಯೇನೂ ಆಗುತ್ತಿರಲಿಲ್ಲ. ಬೇಂಕು ನೌಕರರಿಗೆ ತಿದ್ದುಪಡಿಯಿಂದ ತೊಂದರೆಯಾಗಿದೆಯೆಂಬ ಅಂಶ ಮನವರಿಕೆಯಾದುದರಿಂದಲೇ ಪ್ರಧಾನ ಮಂತ್ರಿಗಳು ರಾಜಾಧ್ಯಕ್ಷ ಸಮಿತಿಯನ್ನು ನೇಮಿಸಲು ನಿರ್ಧಾರ ಕೈಗೊಂಡರು; ಸರಕಾರವು ತುಸು ಅವಸರದಿಂದ ತಿದ್ದುಪಡಿ ಮಾಡಿತೆಂಬ ಭಾವನೆಯನ್ನು ಸಭಾ ಅವರು ಬಿಂಬಿಸಿದ್ದರು. ವಿಷಯದ ಪೂರ್ವಾಪರ ವಿವೇಚನೆ ಮಾಡುವ ವರೆಗೆ ಬೇಂಕು ನೌಕರರಿಗೆ ತೊಂದರೆಯಾಗಬಾರದೆಂದು ಒಟ್ಟು ಮೇ ತನ ಪ್ರಮಾಣದಲ್ಲಿ ಹೆಚ್ಚು ಕಡಿಮೆಯಾಗದಂತೆ ವ್ಯವಸ್ಥೆಯನ್ನೂ ಮಾಡಲಾಯಿತು. ರಾಜಾಧ್ಯಕ್ಷ ಸಮಿತಿಯ ತೀರ್ಪನ್ನು ಹಿಂದಿನ ಕಾಲಕ್ಕೂ ಅನ್ವಯಿಸಿಲಾಗುವುದೆಂದೂ ಹೀಗೆ ನೌಕರರಿಗೆ ಬೋನಸು, ಪ್ರಾವಿಡೆಂಟು ಫಂಡು ಮುಂತಾದುವುಗಳ ಬಗೆಗೆ ಉಂಟಾಗಬಹುದಾದ ನಷ್ಟವನ್ನು ತುಂಬಿ ಕೊಡಲಾಗುವುದೆಂದೂ ಸರಕಾರ ಹೇಳುತ್ತದೆ. ಮಾತ್ರವಲ್ಲದೆ ತಮ್ಮ ಆದೇಶಕ್ಕೆ ವ್ಯತಿರಿಕ್ತ ನಡೆದ ಬೇಂಕುಗಳ ವಿರುದ್ಧ ಕ್ರಮ ತೆಗೆದುಕೊಳ್ಳುವ ಆಶ್ವಾಸನೆಯನ್ನೂ ಅದು ಕೊಟ್ಟಿರುತ್ತದೆ. ಆದರಿಂದ ತುಸು ಸಹನೆಯಿಂದ ನೌಕರರು ವರ್ತಿಸಬೇಕೆಂದು ಯಾರಿಗಾದರೂ ಅನಿಸುತ್ತದೆ. ಬೇಂಕು ನೌಕರರ ತಂಟೆಗಳನ್ನು ಮುಖ್ಯರ ಮುಂತಾದ ವಿಧಾನಗಳಿಗಿಂತಲೂ ಸಂಧಾನದಿಂದ ಬಿಡಿಸುವ ಉಪಾಯವನ್ನು ರಾಷ್ಟ್ರ ಕಲ್ಯಾಣದ ದೃಷ್ಟಿಯಿಂದ ಅವಲಂಬಿಸಬೇಕೆಂದು ಜನ ಸಾಮಾನ್ಯರ ಅಭಿಪ್ರಾಯ. ಎಂಥ ಸ್ಥಿತಿಯಲ್ಲೂ ಸಂಪನ್ನ ಆಯುಧವನ್ನು ಝಳಪಿಸುವುದು ಅಷ್ಟು ಇಷ್ಟವಾದುದಲ್ಲ.

ರಶಿಯ-ಅಮೇರಿಕಗಳೊಳಗೆ ಮರಳಿ ವಿರಸ

ವ್ಯೂಹಕ್ಕೆ ಪ್ರತಿವ್ಯೂಹ ಕಟ್ಟುವ ಉತ್ಸಾಹ

ಜಾಗತಿಕ ವಾತಾವರಣವು ಈಜಿಗೆ ಕೆಲವು ದಿನಗಳಿಂದ ಸುಧಾರಿಸಿದಂತೆ ಕಂಡುಬರುತ್ತಿದ್ದಿತು. ಆದರೆ ಕಳೆದವಾರದ ಕೆಲವು ಘಟನೆಗಳು ಆಶಾವಾದಕ್ಕೆ ಪುಷ್ಟಿಯನ್ನಿತ್ತ ಆಂಶಗಳನ್ನೆಲ್ಲ ನಷ್ಟಪಡಿಸಿವೆ ಎಂದು ಹೇಳಿದರೆ ಅತಿಶಯೋಕ್ತಿಯಾಗದು. ಸಂಯುಕ್ತ ರಾಷ್ಟ್ರ ಸಂಘದಲ್ಲಿ ನಿಶ್ಯಸ್ತ್ರೀಕರಣ, ಅಣುಶಕ್ತಿಯ ಶಾಂತಿಕಾಲದ ಉಪಯೋಗ ಮುಂತಾದ ಮಹತ್ವದ ವಿಷಯಗಳ ಬಗ್ಗೆ ರಶಿಯ ಅಮೇರಿಕ ಬಣಗಳಲ್ಲಿ ಒಮ್ಮತವೇರ್ಪಟ್ಟು ಸಾಕಷ್ಟು ಸೌಹಾರ್ದಪೂರ್ಣ ವರ್ತನೆಯ ವಿನಿಮಯವಾದುದನ್ನು ಕಂಡು ಸಂತೋಷಿಸಿದ ಶಾಂತಿಪ್ರಿಯರಿಗೆ ಕಳೆದವಾರ ಉಭಯ ಪಕ್ಷಗಳೂ ಒಬ್ಬರಿನ್ನೊಬ್ಬರ ಚಿಂತೆಬಿಟ್ಟು, ತಮ್ಮನ್ನೇ ದಾರಿಹಿಡಿದು ಸಾಗಿದಂತೆ ಕಂಡುಬಂತು.

ಮೋಸ್ಕೋ ಪರಿಷತ್ತು

ಪಾಶ್ಚಾತ್ಯರು ಬಹಳ ಕಾಲದವರೆಗೆ ಪ್ರಯತ್ನವನ್ನು ನಡೆಸಿದ ಪರಿಣಾಮವಾಗಿ ಪಶ್ಚಿಮಜರ್ಮನಿಗೆ ಸೈನ್ಯ ಕಟ್ಟಿಕೊಳ್ಳುವ ಅಧಿಕಾರವನ್ನು ನೀಡಿ,ಐರೋಪ್ಯ ಸಂರಕ್ಷಣ ಒಪ್ಪಂದವನ್ನು ರೂಪಿಸುವಲ್ಲಿ ಯಶಸ್ಸನ್ನು ಪಡೆದರು. ಜರ್ಮನರ ಕೈಗೆ ಶಸ್ತ್ರಾಸ್ತ್ರಗಳನ್ನು ಕೊಡುವುದಕ್ಕೆ ಅಸಮ್ಮತಿಯನ್ನು ಸೂಚಿಸುತ್ತ ಬಂದಿದ್ದ ಫ್ರಾನ್ಸು ಸಹ ಕೊನೆಗೆ ತನ್ನ ಆಕ್ಷೇಪವನ್ನು ಹಿಂದೆಗೆಯಿತು. ಜರ್ಮನಿಗೂ ಫ್ರಾನ್ಸಿಗೂ ಮನಸ್ತಾಪವಿರುವಷ್ಟು ದಿನವತನಗೇನೂ ಭಯವಿಲ್ಲವೆಂದುಕೊಂಡಿದ್ದ ರಶಿಯಕ್ಕೆ ಫ್ರಾನ್ಸಿನ ಒಪ್ಪಿಗೆಯಿಂದ ಭಯವಾಯಿತು. ಆದುದರಿಂದ ಅದು ಇಡೀ ಯುರೋಪಿನ ರಕ್ಷಣೆಯ ಉದ್ದೇಶದಿಂದ ಹೊಸತಾಗಿ ಮಾತುಕತೆಯನ್ನು ತೆಗೆಯೋಣವೆಂದು ಪಾಶ್ಚಾತ್ಯಗುಂಪನ್ನು ಆಹ್ವಾನಿಸಿತು. ಆದರೆ ಜರ್ಮನಿಯನ್ನು ಸಶಸ್ತ್ರೀಕರಿಸುವ ಹಿಂದಿನ ನಿರ್ಣಯಕ್ಕೆಸಂಬಂಧಿಸಿದ ಪಾಶ್ಚಾತ್ಯ ರಾಷ್ಟ್ರಗಳೆಲ್ಲವೂ ವಿಧ್ಯುಕ್ತ ಒಪ್ಪಿಗೆಯನ್ನು ಕೊಟ್ಟ ಹೊರತು ಅಂಥ ಪರಿಷತ್ತಿನಲ್ಲಿ ಭಾಗ ವಹಿಸಲಾರವೆಂದು ರಶಿಯ್ಯಕ್ಕೆ ಉತ್ತರ ಕಳಿಸಲಾಯಿತು. ಪಾಶ್ಚಾತ್ಯ ರಾಷ್ಟ್ರಗಳ ದೃಢಮನಸ್ಸನ್ನು ಕಂಡ ರಶಿಯವು ಪೂರ್ವ ಯುರೋಪಿನ ಕಮ್ಯುನಿಸ್ಟ ವರ್ಚಸ್ಸುಳ್ಳ ಹತ್ತು ರಾಷ್ಟ್ರಗಳ ಪ್ರತಿನಿಧಿಗಳನ್ನು ಮೋಸ್ಕೋ ನಗರಕ್ಕೆ ಬರಮಾಡಿಕೊಂಡು ಪಾಶ್ಚಾತ್ಯರ ಸಂರಕ್ಷಣಾವ್ಯೂಹಕ್ಕೆ ಪ್ರತಿವ್ಯೂಹವನ್ನು ಕಟ್ಟಿಕೊಳ್ಳಲು ತೀರ್ಮಾನಿಸಿತು. ಪಶ್ಚಿಮ ಜರ್ಮನಿಗೆ ಸೈನ್ಯ ಕಟ್ಟಿಕೊಳ್ಳಗೊಡುವ ಒಪ್ಪಂದಕ್ಕೆ ಕಂಬಂಧಿಸಿದ ಪಾಶ್ಚಾತ್ಯ ರಾಷ್ಟ್ರಗಳು ಮನ್ನಣೆಯನ್ನು ನೀಡಿದ ಬೆನ್ನಿಗೆಯೇ ಪೂರ್ವ ಜರ್ಮನಿಯನ್ನು ಸಶಸ್ತ್ರೀಕರಿಸುವ ರಶಿಯದ ಆಲೋಚನೆಯು ಕಾರ್ಯಗತಗೊಳ್ಳುವುದು.

ಚಿಯಾಂಗರಿಗೆ ನೆರವು

ಇದರಿಂದ ಸೈನ್ಯಕಟ್ಟಿ ಕಾದಾಡುವ ಮನೋಭಾವವೂ ಗುಂಪುಗಳಲ್ಲಿ ಹೊಡೆದಾಡಿಕೊಳ್ಳುವ ದ್ವೇಷ ಬುದ್ಧಿಯೂ ಬಿಳೆದಂತಾಯಿತು. ಯುರೋಪಿನ ಈ ಘಟನೆಯಂತೆ ಏಶ್ಯಾದಲ್ಲಿಯೂ ಇನ್ನೊಂದು ಆಪ್ರಿಯ ಒಪ್ಪಂದ ಕಾರ್ಯರೂಪದಲ್ಲಿ ಇಳಿಯಿತು. ಕೆಂಪು ಚೀನದ ಆಕ್ರಮಣ ಭಯಕ್ಕೊಳಗಾಗಿದ್ದ ಚಿಯಾಂಗರ ಫೊರ್ಮೊಸಾ ಸರಕಾರದೊಡನೆ ಅಮೇರಿಕವು ಒಡಂಬಡಿಕೆಯೊಂದನ್ನು ಮಾಡಿಕೊಂಡು ಆ ದ್ವೀಪದ ಮೇಲೆ ಕಮ್ಯುನಿಸ್ಟರು ದಾಳಿ ನಡೆಸಿದರೆ ಯುದ್ಧ ಹೂಡುವುದಕ್ಕೆ ಮುಂದಾಗಿರುವುದು. ಹಿಂದಿನ ಅಂತಾರಾಷ್ಟ್ರೀಯ ಒಪ್ಪಂದಗಳಿಗನುಸಾರವಾಗಿ ಫೊರ್ಮೊಸಾ ಮತ್ತು ಅಸುಪಾಸಿನ ದ್ವೀಪಗಳು ಚೀನಕ್ಕೆ ನ್ಯಾಯವಾಗಿ ಸೇರಬೇಕೆಂದಿರುವಾಗ, ಆವುಗಳನ್ನು ಹಸ್ತಗತ ಮಾಡಲು ಕೆಂಪು ಚೀನ ಪ್ರಯತ್ನ ನಡೆಸಿದರೆ, ಅಮೇರಿಕವು ಅದಕ್ಕೆ ಪ್ರತಿಭಟಿಸುವುದು ಸರಿಯಲ್ಲವೆಂದು ಹೇಳಲಾಗುತ್ತದೆ. ಕೆಂಪು ಚೀನಕ್ಕೆ ಮನ್ನಣೆ ನೀಡಿರುವ ಬ್ರಿಟಿಸ ಸರಕಾರವೂ ಅಮೇರಿಕದ ಬೆನ್ನು ಚಪ್ಪರಿಸುವುದನ್ನು ಕಂಡರೆ, ಚೀನವು ಕಮ್ಯುನಿಸ್ಟರಿಗೆ ಸೇರಿದುದಲ್ಲ, ಚಿಯಾಂಗರ ಹಕ್ಕಿನ ನೆಲವದು ಎಂಬ ಅಮೇರಿಕದ ವಾದವೇ ಬಲಗೊಂಡೀತು ಚೀನಜೊಡನೆ ಅಮೇರಿಕ

ವು ಇಷ್ಟು ನಿಸ್ಕಾರದಿಂದ ನಡೆದುಕೊಳ್ಳುವುನಕ್ಕೆ ಚಿಯಾಂಗರ ಮೇಲಿನ ಪ್ರೀತಿಯೊಂದೇ ಕಾರಣವಲ್ಲ-ಕೊರಿಯ ಯುದ್ಧದ ಕೈದಿಗಳೆಂದು ಅಮೇರಿಕದ ಸರಕಾರ ಹೇಳುವ ೧೩ ಮಂದಿ ಅಮೇರಿಕನ್ನರನ್ನು ಗುಪ್ತಚಾರರೆಂಬ ಆರೋಪ ಹೊರಿಸಿ, ಕಮ್ಯುನಿಸ್ಟ ಚೀನವು ಸೆರೆಮನೆಗೆ ಹಾಕಿರುವುದು. ಇವರನ್ನು ಬಿಟ್ಟು ಬಿಡಬೇಕೆಂದು ಅಮೇರಿಕ ಅಗ್ರಹದಿಂದ ಹೇಳಲು ಚೀನವು ಬೇಡಿಕೆಯನ್ನು ನಿರಾಕರಿಸಿತು. ಕೊರಿಯದ ಯುದ್ಧ ವಿರಾಮ ಒಪ್ಪಂದಕ್ಕೆ ಕಮ್ಯುನಿಸ್ಟ ಚೀನದ ಕೆಲಸವು ವ್ಯತಿರಿಕ್ತವಾಗಿರುವುದರಿಂದ ಸಂಯುಕ್ತ ರಾಷ್ಟ್ರಕ್ಕೆ ಅಮೇರಿಕ ದೂರುಕೊಟ್ಟಿದ್ದು, ಅಲ್ಲಿ ಪ್ರಶ್ನೆಯು ಇತ್ಯರ್ಥ ಹೊಂದದಿದ್ದರೆ ಚೀನದ ಮೇಲೆ ತಾನು ನೌಕಾ ದಿಗ್ಬಂಧನವನ್ನು ಹೇರುವುದಕ್ಕೂ ಹಿಂಜರಿಯೆನೆಂದು ಅಮೇರಿಕ ಹೇಳುತ್ತದೆ.

ವರ್ಣ ಭೇದ ನೀತಿ

ದಕ್ಷಿಣ ಆಫ್ರಿಕದಲ್ಲಿ ಮಲಾನರ ಸರಕಾರ ಅನುಸರಿಸುತ್ತಿರುವ ವರ್ಣ ದ್ವೇಷ ಧೋರಣೆಯ ಭೀಕರ ಪರಿಣಾಮಗಳನ್ನು ಪರಿಸ್ಥಿತಿಯ ಬಗ್ಗೆ ವರದಿ ಮಾಡಲು ನೇಮಿಸಿದ್ದ ಸಮಿತಿಯ ಅಧ್ಯಕ್ಷ ಸಂತಾಕ್ರೂಜರು ಸಂಯುಕ್ತ ರಾಷ್ಟ್ರ ಸಂಘಕ್ಕೆ ವಿದಿತ ಪಡಿಸಿದರು. ತಮ್ಮ ದೇಶದ ರಾಷ್ಟ್ರೀಯ ಜೀವನಕ್ಕೂ ವಿದೇಶವ್ಯವಹಾರಕ್ಕೂ ಭಿನ್ನ ಭಿನ್ನ ಜನಾಂಗಗಳಲ್ಲಿ ಸೌಹಾರ್ದಸಂಬಂಧವನ್ನು ಕಾಯ್ದುಕೊಂಡು ಹೋಗುವುದಕ್ಕೂ ವರ್ಣಭೇದ ಧೋರಣೆಯಿಂದ ಗಂಡಾಂತರವಾಗುವುದಾಗಿ ಸಮಿತಿಯು ಖಚಿತ ಅಭಿಪ್ರಾಯವನ್ನು ವ್ಯಕ್ತ ಪಡಿಸಿರುವುದು. ಆದರೆ ದಕ್ಷಿಣ ಆಫ್ರಿಕದ ಪ್ರತಿನಿಧಿಗಳು ಇದರ ಚರ್ಚೆ ನಡೆಸುವುದು ರಾಷ್ಟ್ರ ಸಂಘದ ಕೆಲಸವಲ್ಲವೆಂಬ ತಮ್ಮ ಹಿಂದಿನ ವಾದವನ್ನೆ ಈಗಲೂ ಮುಂದೊಡ್ಡಿದರು. ಇಂಥ ಪರಿಸ್ಥಿತಿಯಲ್ಲಿ ಭಾರತವು ಲೋಕದ ನೈತಿಕ ವರ್ಚಸ್ಸಿನ ಪರಿಣಾಮವಾಗಿಯೇ ದಕ್ಷಿಣ ಆಫ್ರಿಕದ ಧೋರಣೆಯಲ್ಲಿ ಪರಿವರ್ತನೆ ಕೈಗೂಡಬೇಕಾಗಿದೆಯಾಗಿ ಭಾವಿಸುವನರ ಹೊರತು ಬೇರೇನು ಉಪಾಯವೂ ತೋರುವುದಿಲ್ಲ. ರಾಷ್ಟ್ರ ಸಂಘದಲ್ಲಿ ಈ ವಿಷಯವನ್ನು ಆಗಿಂದಾಗ್ಗೆ ಚರ್ಚಿಸುತ್ತಿದ್ದ ಕೃಷ್ಣಮೆನನ್ ಅವರ ಸ್ಥಾನದಲ್ಲಿ ನಿಧಾನವಾಗಿಯಾದರೂ ದಕ್ಷಿಣ ಆಫ್ರಿಕ ಸರಕಾರದ ಧೋರಣೆ ಬದಲಾಗಬಹುದು. ಇದಕ್ಕಾಗಿಯೇ ರಾಷ್ಟ್ರ ಸಂಘವು ವಿಷಯವನ್ನು ಬಿಟ್ಟುಗೊಡದಕೈಕ್ಕೆದ್ದಲ್ಲವೆಂದು ಅದರ ಅಭಿಪ್ರಾಯ. ದಕ್ಷಿಣ ಆಫ್ರಿಕದಲ್ಲಿ ಮಲಾನರು ಮುಖ್ಯ ಮಂತ್ರಿ ಸ್ಥಾನದಿಂದ ನಿವೃತ್ತಿ ಹೊಂದುವ ಇಚ್ಛೆವ್ಯಕ್ತ ಪಡಿಸಿದಾಗ ಅವರ ಉತ್ತರಾಧಿಕಾರಿಯಾಗಿ ಜಾವೆಂಜರು ಬಂದಾರೆಂದು ಕೆಲವರು ಆಶಿಸಿದ್ದರು. ಆದರೆ ವರ್ಣ ಭೇದ ನೀತಿಯ ಉಗ್ರ ಪ್ರತಿಪಾದಕರಾಗಿರುವ ಸ್ಟೈಜೋಮರೇ ನಾಯಕರಾಗಿ ಆಯ್ಕೆ ಹೊಂದಿರುವರು ಮಲಾನರು ಪ್ರಾರಂಭಿಸಿದ ದುಷ್ಟ ಕಾರ್ಯವನ್ನು ಇನ್ನಷ್ಟು ಒತ್ತಡದಿಂದ ಮುಂದುವರಿಸಿಕೊಂಡು ಹೋಗುವುದೇ ಉದ್ದೇಶವಿದ್ದಂತೆ ಅವರ ಭಾಷಣದ ವರದಿಗಳಿಂದ ಸ್ಪಷ್ಟವಾಗುತ್ತದೆ.

ಏಕ ಘಟಕ ವಾದ

ಪಾಕಿಸ್ತಾನದ ಮಹಮ್ಮದಾಲಿಗಳು ಪಶ್ಚಿಮ ಪಾಕಿಸ್ತಾನದಲ್ಲಿರುವ ಈಗಿನ ಪ್ರಾಂತಗಳನ್ನೆಲ್ಲ ಅಂತ್ಯಗೊಳಿಸಿ ಏಕ ಘಟಕವನ್ನು ಸ್ಥಾಪಿಸುವ ತಮ್ಮ ವಿಚಾರವನ್ನು ಹೆಚ್ಚು ಜನಪ್ರಿಯಗೊಳಿಸುವ ಹಂಚಿಕೆಯನ್ನು ಮಾಡಿರುವರೆಂದು ಈಜೆಗೆ ಮಾಡಿದ ಭಾಷಣದಿಂದ ವ್ಯಕ್ತವಾಯಿತು. ಪೂರ್ವ ಬಂಗಾಲಿಗಳ ಪ್ರಾಬಲ್ಯವನ್ನು ಹತ್ತಿಕ್ಕಲು ಪಶ್ಚಿಮ ಪಾಕಿಸ್ತಾನವನ್ನೆಲ್ಲಿ ಒಂದೇ ಘಟಕವಾಗಿ ರೂಪಿಸುವ ಯೋಜನೆ ಮಾಡಲಾಯಿತು. ಆದರೆ ಆಗ ಪಶ್ಚಿಮ ಪಾಕಿಸ್ತಾನದಲ್ಲಿ ಈಗ ಇರುವ ಪ್ರಾಂತಗಳ ಅಸ್ತಿತ್ವವು ಅಳಿದು ಹೋಗಿ, ಪಂಜಾಬಿಗಳ ಪ್ರಾಬಲ್ಯವುಂಟಾಗುವುದೆಂಬ ಅಂಜಿಕೆಯು ಸಿಂಧ್ ಪ್ರಾಂತದ ಜನರೇ ಮುಂತಾದವರಲ್ಲಿ ಬಲಿಯಿತು. ಇದನ್ನು ಹೋಗಲಾಡಿಸಲು ಈಗ ಹೊಸ ಉಪಾಯವೊಂದನ್ನು ಕಂಡು ಹಿಡಿದಿದ್ದು, ಇದರನ್ವಯ ಪಂಜಾಬಿಗಳಿಗೆ ನ್ಯಾಯವಾಗಿ ನೂರಕ್ಕೆ ೫೬ ಸ್ಥಾನಗಳು ಸಲ್ಲಬೇಕಾಗಿದ್ದರೂ ಹತ್ತು ವರ್ಷಗಳ ವರೆಗೆ ೪೦ ಸ್ಥಾನದಿಂದಲೇ ಅವರು ತೃಪ್ತರಾಗುವರೆಂದು ಮಹಮ್ಮದಾಲಿಗಳು ಹೇಳಿದರು. ಪ್ರಾಂತಗಳನ್ನೆಲ್ಲ ಒಂದುಗೂಡಿಸುವುದರಿಂದ ತಮ್ಮ ಮಾತಿಗೆ ಬೆಲೆ ಬಾರದೆ ಹೋದೀತೆಂಬ ಸಿಂಧ್ ಹಾಗು ಇತರ ಪ್ರಾಂತಗಳ ಜನರು ಇದರಿಂದ ಶಮನ ಸಮಾಧಾನ ಹೊಂದಿದಂತೆ ಕಾಣುತ್ತದೆ. ಹೀಗೆ ರೂಪು ಗೊಳಿಸುವ ಪಶ್ಚಿಮ ಪಾಕಿಸ್ತಾನವೆಂಬ ಏಕ ಘಟಕವನ್ನು ಆಡಳಿತ ಸೌಕರ್ಯದ ದೃಷ್ಟಿಯಿಂದ ಕರಾಚಿಯನ್ನೊರತು ಪಡಿಸಿ ಉಳಿದ ಆಡಳಿತದ ಕುರಿತು ಮೂಸ್ಕ ಗವರ್ನರರು ಉಲ್ಲೇಖಿಸಿರುವುದು ಅಭಿನಂದನೀಯ. ಅಶಾಂತಿ, ಆರ್ಥಿಕ ಮುಗ್ಗಟ್ಟು ಇತ್ಯಾದಿ ಮೇಳೆ ಅವರು ಅಧಿಕಾರ ಪಡೆದು ಆಡಳಿತವನ್ನು ಸುಗಮವಾಗಿ ನಡೆಸಿದುದಕ್ಕೆ ನಾವು ಆಭಾರಿಗಳಾಗಿದ್ದೇವೆ.

ಜಿಲ್ಲಾ ಬೋರ್ಡು ಚುನಾವಣೆಗಳು ಈಗ ತಾನೇ ಶಾಂತ ರೀತಿಯಲ್ಲಿ ಕೊನೆಗೊಂಡಿವೆ. ಹೆಚ್ಚಿನ ಜಿಲ್ಲಾ ಬೋರ್ಡುಗಳ ಆರ್ಥಿಕ ಪರಿಸ್ಥಿತಿಯು ಸಮಾಧಾನಕರವಲ್ಲ. ದ. ಕ. ಜಿಲ್ಲಾ ಬೋರ್ಡು ಈ ಅಸವಾದಕ್ಕೆ ಬಿಟ್ಟಲ್ಲ. ಸರಕಾರವು ಜಿಲ್ಲಾ ಬೋರ್ಡುಗಳಿಗೆ ಸಾಲ ಕೊಟ್ಟರುವುದಾಗಿ ನಾನು ತಿಳಿಯುತ್ತೇನೆ. ದ. ಕ. ಜಿಲ್ಲಾ ಬೋರ್ಡು ಎರಡು ಲಕ್ಷ ರೂಪಾಯಿ ಸಾಲವನ್ನು ಅಪೇಕ್ಷಿಸಿಯಿದೆ. ಇದನ್ನು ಸಹಾನುಭೂತಿಯಿಂದ ಸರಕಾರವು ಪರಿಶೀಲಿಸುವುದಾಗಿ ನನಗೆ ಭರವಸೆಯಿದೆ. ಜಿಲ್ಲಾ ಬೋರ್ಡುಗಳನ್ನು ರದ್ದುಗೊಳಿಸಿ ತಾಲೂಕು ಬೋರ್ಡು, ತಾಲೂಕು ಪಂಚಾಯತ್, ಗ್ರಾಮ ಪಂಚಾಯತುಗಳ ಸ್ಥಾಪನೆ ಬಗ್ಗೆ ಜನತೆಯ ದೃಷ್ಟಿ ಪರಿದಿರುವುದು. ಇವು ಕಾರ್ಯಗತವಾದರೆ ಸಮಾಜ ವಿಕಾಸ ಹಾಗೂ ರಾಷ್ಟ್ರೀಯ ವಿಸ್ತರಣಾ ಯೋಜನೆಗಳು ಯಶಸ್ವಿಯಾಗಲು ಸಹಕಾರಿಯಾಗುವುದು. ವಿನಿಯಂತ್ರಣದ ಬಳಿಕ ರಾಜ್ಯದಲ್ಲಿ ಧಾರಾಳ ಅಕ್ಕಿ ದೊರೆಯುತ್ತಿರುವುದಾದರೂ ಬೆರೆಯ ನುಟ್ಟಿಗೆ ಸುಧಾರಣೆಯಾಗಬೇಕು. ಬಡಕೃಷಿಕರೆ, ರೈತರ ಸಹಾಯಾರ್ಥವಾಗಿ ಸರಕಾರವು ರೈತರ ಪರಿಹಾರ ಕಾನೂನನ್ನು ಹಂಗಾಮಿಯಾಗಿ ತಂದಿರುವುದಾದರೂ ಅದರ ಅವಧಿ ಮುಂದಿನ ಫೆಬ್ರುವರಿಗೆ ಆಂತ್ಯಮಾಡಲಿರುವುದರಿಂದ ರೈತರ ಸಾಲಸಂದಾಯ ಮಾಡುವ ಅವಧಿಯನ್ನೂ ೬ವರ್ಷ 10 ವರ್ಷಗಳ ಮಟ್ಟಿಕ್ಕೆತಂದು ನರ್ವಹಣಧಿ ಕಂತುಗಳಿಂದ ಸಾಲ ಸಂದಾಯ ಮಾಡುವ ಸವಲತ್ತು ದೊರೆಯುವಂಥಹ ಕಾನೂನು ಉದಯವಾಗ ಬೇಕಾಗಿದೆ. ಓಗಾಗಿದ್ದರೆ ಸಾಲಗಾರರೇ ಹಿಡಿತದಲ್ಲಿ ಬೇಸಾಯ ಗಾರರು ಸಿಲುಕಿ ಅವರ ಉಳಿಗಾಲ ವಿರಲಾರದು.

ಗವರ್ನರರ ಭಾಷಣದಲ್ಲಿ ಪ್ರಸ್ತಾಪವಿದ್ದರೂ ದ. ಕ. ಜಿಲ್ಲೆಯ ಕುರಿತು ವಿಶೇಷ ಹೇಳಲಾಗದಿದ್ದುದು ಶೋಚನೀಯ. ಹೊಲಾಡಿ ಮತ್ತು ಬಿಜೂರು ಯೋಜನೆಗಳು ತೀರ್ಪು ಫಲಕಾರಿಯಾಗದೇ ಕೆಂದು ನಾನು ಒತ್ತಿ ಹೇಳುತ್ತೇನೆ. ದ. ಕ. ಜಿಲ್ಲೆಯ ಎಲ್ಲಾ ಯೋಜನೆಗಳೂ ಕಾರ್ಯಗತ ಪಾದಲ್ಲಿ ಈ ಜಿಲ್ಲೆಯ ಉಪಾಧಿಕಾರದ ನುಟ್ಟಿಗೆ ಸ್ವಾವಲಂಬಿಯಾಗಿ ಕೊರತೆ ಜಿಲ್ಲೆಗಳಿಗೂ ಸಹಾಯ ನೀಡಲು ಸಾಧ್ಯವಾಗುವುದು.

ವೈದ್ಯಕೀಯ ಕ್ಷೇತ್ರದಲ್ಲಿ ಸರಕಾರವು ಸಾಧ್ಯ ವಿದ್ದಷ್ಟನ್ನು ಸಾಧಿಸುತ್ತಿದೆಯಾದರೂ ಗ್ರಾಮಾಂತರಗಳಲ್ಲಿ ಜೀವಿಸುವ ಬಡ ಜೀವಿಗಳಿಗೆ ಇನ್ನೂ ಸೌಕರ್ಯಗಳು ಲಭಿಸುವಂತಾಗಲು ಎರಡು ಮೂರು ಗ್ರಾಮಗಳಿಗೊಂದರಂತೆ ಯಾದರೂ ರೂರಲ್ ಡಿಸ್ಪೆನ್ಸರಿ ಮತ್ತು ಪೆರಿಫೆರಿ ಕೇಂದ್ರ ಸ್ಥಾಪನೆಯು ತೀರ್ತ ಜರೂರು ವುದು. ಪ್ರಾಥಮಿಕ ವಿದ್ಯಾ ಕ್ಷೇತ್ರವಲ್ಲೂ ಅಲ್ಲಿ ಮಡಿಯುವ ಬಡ ಉಪಾಧ್ಯಾಯರ ಜೀವನ ಮಟ್ಟವು ಸುಧಾರಿಸಬೇಕಾಗಿದೆಯಾದುದರಿಂದ ಸರಕಾರವು ಆ ಕುರಿತ ನಿಗಾ ತೆಗೆದುಕೊಳ್ಳುವುದೆಂದು ಭರವಸೆ ಇದೆ.

ದ. ಕ. ಜಿಲ್ಲೆಯಲ್ಲಿ ಒಕ್ಕಲು ಹಿತ ಸುಧಾರಣೆಯ ಆವಶ್ಯಕತೆ ತುಂಬಾಯಿರುವುದು. ಸರಕಾರವು ಜೀಗನೆ ಮಸೂದೆಯನ್ನು ತರದಿದ್ದರೆ ಧನ ಮತ್ತು ಒಕ್ಕಲುಗಳೊಳಗಿನ ಘರ್ಷಣೆಯು ಇಳಿಮುಖವಾಗಿ ಅಶಾಂತಿಗೆ ಕಾರಣವಾಗುವುದು. ದ. ಕ. ಜಿಲ್ಲೆಯಲ್ಲಿ ನೀರಾ ಅಂಗಡಿಗಳ ಸಂಖ್ಯೆ ಜಾಸ್ತಿಯಾಗಬೇಕಾಗಿದೆ. ಈ ಕಾರ್ಯ ನಿಧಾನವಾಗಿ ಆಗುವುದರ ವಿರುದ್ಧವಾಗುವುದಿಲ್ಲ.

ನಾವು ವರ್ಷಕ್ಕೊಮ್ಮೆ ರಜೆ ಪಡೆದೆ ವಾಡಿಕೆಯಂತೆ ಬರುವ ವಾರದ ತಾ. (16-12-55) ಸಂಚಿಕೆಯನ್ನು ನಿಲ್ಲಿಸಿದ್ದೇವೆ. ವಾಚಕರು ಗಮನಿಸಬೇಕಾಗಿ ಕೋರಿದೆ.

—ಮೆನೇಜರ್.

ಡಾ. ಯಕ್ಷೀಂದ್ರನಾಥರೈಗಳ ಯಶಸ್ಸು

—ಇತ್ತೀಚೆಗೆ ಕೊಲೊಂಬೋದಲ್ಲಿ ಜರಗಿದ ಇಂಗ್ಲೆಂಡಿನ ಪ್ರೈಮರಿ ಎಫ್.ಆರ್.ಸಿ.ಎಸ್.ಪರೀಕ್ಷೆಯಲ್ಲಿ ಪಾಸಾಯತೀರ್ಪು ನಾಳೆರೈ, ಎಂ. ಬಿ. ಬಿ. ಎಸ್. ಅವರು ಉತ್ತೀರ್ಣರಾಗಿರುವುದೆಂದೂ ಈ ಪರೀಕ್ಷೆಗೆ ಕುಳಿತ 143 ಉಮೇದ್ವಾರರಲ್ಲಿ ಪಾಸಾದ 24 ಮಂದಿಯಲ್ಲಿ ಇವರೊಬ್ಬರೆಂದೂ ತಿಳಿದುಬರುತ್ತದೆ. ಇವರ ತಂದೆ ಸುಬ್ರಾಯಿಸ ಡಾ! ಕೆ. ಯಂ ರೈಗಳು ಬಂಟಸಮಾಜದ ಸ್ಮರಣಸಾ ಎಫ್. ಆರ್. ಸಿ. ಎಸ್, ಆದರೂ ಇವರು ಲಂಡನಿನ ಪ್ರೈಮರಿ ಎಫ್. ಆರ್. ಸಿ. ಎಸ್. ಪಾಸಾದ ಪೊಲಿಸ ಬಂಟಸಮಾಜಸ್ಥರಿದುವರು. ಇವರು ಇನ್ನು ಬೆಚ್ಚಿನ ವೈದ್ಯಶಿಕ್ಷಣಕ್ಕಾಗಿ ಇಂಗ್ಲೇಂಡಿಗೆ ಹೋಗಲಿರುವರೆಂದೂ ಕೇಳುತ್ತೇನೆ.

ಉಡುಪಿ

ಬೀಡಿ ಮಜೂರರ ಕನಿಷ್ಟಕೂಲಿ ವಿರೋಧಧಿನಾಚರಣೆ:—

ಸರಕಾರವು ಬೀಡಿ ಮಜೂರರ ಕನಿಷ್ಟ ಕೂಲಿಯು 1000 ಬೀಡಿಗಳಿಗೆ 1-4-3 ಆಗಬಹುದೆಂದು ಸೂಚಿಸಿದ ಸೂಚನೆಯನ್ನು ವಿರೋಧಿಸಿ, ದ. ಕ. ಜಿಲ್ಲಾ ಬೀಡಿ ಮತ್ತು ಟೋಬೆಕೋ ವರ್ಕರ್ಸ್ ಯೂನಿಯನಿನ ನಿರ್ದೇಶನದಂತೆ ಉಡುಪಿ ಬೀಡಿ ಲೇಬರ್ ಯೂನಿಯನಿನ ಆಶ್ರಯದಲ್ಲಿ ತಾ. 30 ರಂದು ಪಿರೋಧ ದಿನಾಚರಣೆಯು ಆಚರಿಸಲ್ಪಟ್ಟಿತು. ಸಂಜೆ ರಥಬೀದಿಯಲ್ಲಿ ಕಾ! ಬಂತಾರಾಮ ಪೈಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯರಿಗಿ ಬಲವರ ಭಾಷಣಗಳಾದುವು.

ಉಪಾಹಾರ—

ಜನರಲ್ ಸ್ಟೋರ್ಸಿನ ಶ್ರೀ. ಕೆ. ಆರ್. ಬಾಳಿಗರವರನ್ನು ಪುತ್ರಿ ಸಾಮಾಂತ ವಿವಾಹವು ಶ್ರೀ. ನೆಬೆಸಿನದಾಸ ನಾಯಕರೊಡನೆ ತಾ. 27ರಲ್ಲಿ ಜರಗಿದ ಸಂತೋಷಾರ್ಥವಾಗಿ ಮರುದಿನವೂರ ಪರಪೂರ ಮನೆಯವರ ನೇಕರಿಗೆ ಉಪಾಹಾರವೂಟ ಏರ್ಪಡಿಸಿದ್ದರು.

ನಗರಸಭೆಯು—

ತಾ. 27ರಲ್ಲಿ ಡಾ! ಪಿ. ವಿ. ವ್ಯಾಸರಾಯರ ಅಧ್ಯಕ್ಷತೆಯಲ್ಲಿ ಜರಗಿ ಪಜೆಯಾಡಿ ವಾರ್ಡಿನ ಹೊಸರಸ್ತೆಯನ್ನು ಪೂರ್ಣಗೊಳಿಸಲು ರೂ500/- ಮಂಜೂರು ಮಾಡಲಾಯಿತು. ಎಮ್ಮೆಕೇರಿನ್, ಪಬ್ಲಿಕ್ ಹೆಲ್ತ್ ಫ್ಯಾನಿನ್ಸ್, ಆಟೀಲ್, ಲ್ಯಾಟಿಂಗ್ ಕಮಿಟಿಗಳನ್ನು ರದ್ದುಗೊಳಿಸಿ ಹೊಸ ಕಮಿಟಿಗಳನ್ನು ರಚಿಸಬೇಕೆನ್ನುವ ಶ್ರೀ ಕೆ. ದೇವೇಂದ್ರ ಕಿಣ್ಯರವರ ನಿರ್ಣಯವು ಪಾಸಾಯಿತು. ಜನಸ್ವಾಸ್ಥ್ಯಕಮಿಟಿಯ ರದ್ದತಿ ಹಾಗೂ ಪುನರ್ರಚನೆ ಕುರಿತು ಚರ್ಚಿಸಲಿಕ್ಕಾಗಿ ಮೇಳೆ ವಿಶೇಷಸಭೆಯನ್ನು ಮುಂದರಿಸಲಾಯಿತು. ಇದೇ ತಾ. 28ರಲ್ಲಿ ಜರಗಿದ ಸಭೆಯಲ್ಲಿ ಕಂಟ್ರಾಕ್ಟು ಕಮಿಟಿಗೆ ಶ್ರೀ. ಕೆ. ಕೆ. ವೈಗಳನ್ನೂ ಸದಸ್ಯರಾಗಿ ಶ್ರೀ. ಪಿ. ಪಿ. ಆಚಾರ್ಯರ ಸೂಚನೆ, ಶ್ರೀ. ಕೆ. ದೇವೇಂದ್ರ ಕಿಣ್ಯರವರ ಅನುಮೋದನೆಯಂತೆ ಆರಿಸಲಾಯಿತು.

ಜುಡೀಶಿಯಲ್ ಮೆಜಿಸ್ಟ್ರೇಟ್

ನೇಮಕೋನ್ಸಾ ಆವರಿಗೆ ತಾ. 28ರಲ್ಲಿ ಸ್ಥಳೀಯ ಬಾರ್ ಎಸೊಸಿಯೇಶನಿನವರು ಚಹಾಕೂಟವನ್ನಿತ್ತರು. ಕ್ರಿಮಿನಲ್ ವ್ಯವಹಾರಗಳಿಗೆ ಸಂಬಂಧಿಸಿದ ಕಾರ್ಯಕ್ಷೇತ್ರದಲ್ಲಿ ಕೆಲವೊಂದು ತಿದ್ದುಪಡಿಗಳಾಗ ಬೇಕೆಂದು ಸೂಚಿಸಿದ ಮನವಿಯನ್ನೂ ಅವರಿಗೆ ಕೊಡಲಾಯಿತು. ಮನ್ಸ್ಯ ಅಧಿಕಾರಿಗಳು ಆ ಭಾಗದಲ್ಲಿ ಸಾಧ್ಯವಿದ್ದುದೆನ್ನು ಸಾಧಿಸಲಾಗುವುದೆಂದರು.

ಚಂದಾ ಹಣ ಬಾಕಿ ಇರುವವರು ನಾವು ಕಳುಹಿಸಿರುವ ವಿ. ಪಿ. ಪಿ. ಯನ್ನಾದರೂ ದಯವಾಡಿಸ್ವೀಕರಿಸಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

—ಸಂಚಾಲಕ.

ಹೆಚ್ಚು ಹಬ್ಬುವ ಪುಸ್ತಕಗಳನ್ನು ಓದಿದವನ್ನು ವಿರಾಲ ವೈದಯಿಗಳಾಗುತ್ತೇವೆ.

ಎಂ ಜವಾದರಲಾಲ.

ವೈಷ್ಣವ ಶಿಖಾಮಣಿ
ಕನಕದಾಸ ವಿರಚಿತ

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ವೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ.

ಬೆಲೆ: 0—2—0 ಮೂರಾಣೆ ಸ್ಟಾಂಪು ಕಳಿಸಿದರೆ ಪ್ರತಿಯೊಂದನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು. ನೂರು ಪ್ರತಿಗಳಿಗೆ ರಿಯಾಯಿತಿ ನರವಿದೆ.

ನವಯುಗ ಪ್ರೆಸ್, ಉಡುಪಿ.

ಮದ್ರಾಸು ಎಸೆಂಬ್ಲಿಯಲ್ಲಿ ಭಾಷಣವಿತ್ತ ಗವರ್ನರರಿಗೆ ಅಭಿನಂದನಾ ಠರಾವನ್ನು ಅನುಮೋದಿಸುವ ಕಾಲಕ್ಕೆ ಶ್ರೀ ವೈ. ಮಂಜಯ್ಯ ಶೆಟ್ಟಿ ಎಮ್ಸ್. ಎಲ್.ಎ. ಅವರು ಮಾಡಿದ ಭಾಷಣದ ಸಾರಾಂಶ:—

ಮದ್ರಾಸು ಸರಕಾರವು ಈ ತನಕ ಸಾಧಿಸಿದ ಇನ್ನೂ ಸಾಧಿಸಲಿರುವ ಯೋಜನೆಗಳ ಯಥಾರ್ಥತೆಯನ್ನು ಗವರ್ನರರು ತಮ್ಮ ಭಾಷಣದಲ್ಲಿ ಸೂಚಿಸಿದ ಬಗ್ಗೆ ಪುಂಡಾ ಮುನಿಯರುನೆನು. ನಮ್ಮ ಸಂಸ್ಥಾನಕ್ಕೆ ಶ್ರೀ ಪ್ರಿಪ್ರಕಾಶರು ಗವರ್ನರರಾಗಿ ಬೊರೆತುದು ನಮ್ಮ ಭಾಗ್ಯ. ರಾಜ್ಯದ ಮಾಜಿ ಪ್ರಧಾನ ಮಂತ್ರಿಗಳಾಗಿದ್ದ ಶ್ರೀ ಸಿ. ರಾಜಗೋಪಾಲಾಚಾರಿಯವರ ಸಮರ್ಥ ಆಡಳಿತದ ಕುರಿತು

ಶ್ರೀ ಧರ್ಮಸ್ಥಳದಲ್ಲಿ ಧರ್ಮ, ಸಾಹಿತ್ಯ ಸಮ್ಮೇಳನಗಳು— ಕಳೆದ ತಾ. 23, 24ರಲ್ಲಿ ಯಶಸ್ವಿಯಾಗಿ ಜರಗಿದವು. ಪ್ರಥಮ ದಿವಸ ಶ್ರೀ ಧರ್ಮಸ್ಥಳ ಸುಂಜಯ್ಯ ಹೆಗ್ಡೆಯವರು ಸಮ್ಮೇಳನದ ಉದ್ಘೋಷಗಳನ್ನು ವಿವರಿಸಿ ಸ್ವಾಗತ ಭಾಷಣಮಾಡಿದರು. ಮೈಸೂರು, ಹೈದರಾಬಾದು, ಜಂಷಪುರ ಸಂಸ್ಥಾನಗಳ ಮಾಜಿದಿವಾನರಾದ ಸರ್ ಮಿರ್ಜಾಸ್ಮಾಯಿಲ್ ಮತ್ತು ಈದಿನದ ಅಧ್ಯಕ್ಷರಾದ ಶ್ರೀ. ಸುತ್ತೂರು ವೀರ ಸಿಂಹಾಸನಾಧೀಶ್ವರ ಜಗದ್ಗುರು ಶ್ರೀ ಶಿವರಾತ್ರಿ ಸ್ವಾಮಿಗಳವರ ಪರಿಚಯವನ್ನು ಮಾಡಿ ಕೊಟ್ಟರು. ಸರ್ ಮಿರ್ಜಾರವರಿಗೆ ಧರ್ಮ ಸಮ್ಮೇಳನ ಸ್ವಾಗತ ಸಮಿತಿ ವತಿಯಾಗಿ ಮೂನ ಪತ್ರವನ್ನು ಶ್ರೀ. ಕೆ. ಯಸ್. ಧರಣೇಂದ್ರಯ್ಯನವರು ಒಪ್ಪಿಸಿದರು. ಅಂತೆಯೇ ಸಭಾಧ್ಯಕ್ಷರಿಗೆ ಶ್ರೀ. ಡಿ. ಪುಟ್ಟುಸಾಮಿಯವರು ಮೂನ ಪತ್ರ ಅರ್ಪಿಸಿದರು. ಸಮ್ಮೇಳನ ಉದ್ಘಾಟಕರ ಭಾಷಣಾ ನಂತರ ಅಧ್ಯಕ್ಷರಭಾಷಣವಾಯಿತು. ನಂತರ 'ಪಾಪಪುಣ್ಯ' ಗಳ ಕುರಿತು ಶ್ರೀ ಗಳಾದ ನೇಮಿಸಾಗರ ವರ್ಣ, ದೇವುದು ನರಸಿಂಹ ಶಾಸ್ತ್ರಿ, ಮೌಲ್ಕಿ ಕಾಸಿಮ್ ಸಾಯೇಜ್, ಕೆ. ಶಿವರಾಮ ಕಾರಂತ, ಲಕ್ಷ್ಮೀನಾರಾಯಣ ಉರಾಧ್ಯಾಯ, ಶಿವಮೂರ್ತಿ ಶಾಸ್ತ್ರಿ, ಜನಚಂದಶಾಸ್ತ್ರಿ ಸಂಜುಂಡರಾಧ್ಯ, ಅ. ನ. ಕೃಷ್ಣರಾವ್, ಚೆನ್ನಬಸವೇಶ್ವರ, ಸ್ವಾಮಿವಾಸ್, ನಾಗೇಶ್ ಅಯ್ಯರ್‌ಮೊದಲಾದವರುಉಪನ್ಯಾಸಗಳಾಮಷ್ಟೆ.

ಎರಡನೆದಿನವಸದ ಸಾಹಿತ್ಯ ಸಮ್ಮೇಳನವು ಶ್ರೀ. ದೇವುದು ನರಸಿಂಹ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಜೆಡ್ಡಿಯನರಿಂದ ಸ್ವಾಗತ ಭಾಷಣ, ಶ್ರೀ ಶಿವಮೂರ್ತಿ ಶಾಸ್ತ್ರಿಗಳಿಂದ ಅಧ್ಯಕ್ಷರ ಪರಿಚಯ ನಂತರ ಗಣ್ಯರಿಗೆ ಮೂನಪತ್ರ ಪ್ರೊಂದನ್ನು ಶ್ರೀ ಕೆ. ಎಸ್. ಧರಣೇಂದ್ರಯ್ಯನವರು ಅರ್ಪಿಸಿದರು. ಸಾಹಿತ್ಯದ ರೂಪರೇಷೆ ಅದರ ಭವಿಷ್ಯ ಜೋಗಾಗಬೇಕು ಎಂಬಿತ್ಯಾದಿ ಕುರಿತು ಹಲವರ ಭಾಷಣಗಳಾದುವು. ಶ್ರೀ. ಕೆ. ಎಸ್ ಧರಣೇಂದಯ್ಯನವರು ಕಾರ್ಕಳದ ರತ್ನಾಕರ ಮುಖಾಕವಿ, ಶ್ರೀಗಳಾದ ತಿಪ್ಪೆರುದ್ರಯ್ಯನವರು ಧರ್ಮ ಮತ್ತು ಸಾಹಿತ್ಯ, ಎಸ್. ಆರ್. ಭಟ್ಟರು ಸಾಹಿತ್ಯ ಧರ್ಮದಕುರಿತೂ, ಗಂಗಾಧರ, ಮಿರ್ಜಿ ಅಣ್ಣಾಜಿರಾವ್, ಬಿ ಚೆನ್ನ ಬಸವೇಶ್ವರ, ಶಿವಮೂರ್ತಿಶಾಸ್ತ್ರಿ, ರುದ್ರಯ್ಯಸ್ವಾಮಿ, ಅ. ನ. ಕೃಷ್ಣರಾವ್, ಲಕ್ಷ್ಮೀನಾರಾಯಣ ಉಪಾಧ್ಯಾಯ, ಜೈನ ವೀರೇಶ್ವರ ಇತ್ಯಾದಿ ನಾನಾ ಸಾಹಿತ್ಯ ವಿಚಾರಗಳ ಕುರಿತು, ಕಾಂತರ್ಕ್ಕಿ, ಎಸ್. ಕೃಷ್ಣ ಭಟ್ಟ ಅವರು ದ. ಕ. ಜಿಲ್ಲೆಯ ಇತರ ಕವಿ ಲೇಖಕರ ಕುರಿತೂ ಭಾಷಣವಿತ್ತರು. ಶ್ರೀ. ಬಿ. ಶಂಕರ ಭಟ್ಟರು ಧನ್ಯವಾದಗಳನ್ನರ್ಪಿಸಿದರು. ಎರಡು ದಿವಸಗಳಲ್ಲಿ ಜನ ಮನರಂಜನೆಯ ಕಾರ್ಯಕ್ರಮಗಳಿದ್ದುವು.

ತಾ 24 ರಲ್ಲು ಬೆಳಿಗ್ಗೆ ಗೋ ಸಂರಕ್ಷಣಾ ಸಮ್ಮೇಳನವು ಮೌಲ್ಕಿ ಕಾಸಿಂ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಡಿ. ನೋಹನ ರಾಯರ ಸ್ವಾಗತ, ಶ್ರೀ. ಎಸ್. ಎಸ್. ಎ. ಕರ್ಮರಿಂದ ಸಮ್ಮೇಳನದ ಧ್ಯೇಯ ಧೋರಣೆ ಸ್ಪಷ್ಟೀಕರಣಗಳಾದ ಬಳಿಕ ಶ್ರೀಗಳಾದ ರೇಷಣ ಸಿದ್ಧ ಸ್ವಾಮಿ, ಪದ್ಮನಾಭಯ್ಯ, ದೇವುದು ನರಸಿಂಹ ಶಾಸ್ತ್ರಿಗಳನರು ಭಾಷಣ ವಿತ್ತರು.

ಶಿರ್ವ:— ಬಂಟರ ಯಾನೆ ನಾಡವರ ವಿದ್ಯಾವರ್ಧಕ ಸಂಘದ ವಿಶೇಷ ಸಾಧಾರಣ ಸಭೆಯು ತಾ 28—11—54 ರಲ್ಲು ಹಿಂದೂ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ. ಎಸ್. ಸಂಜೀವ ಶೆಟ್ಟಿ ಅಧ್ಯಕ್ಷತೆಯಲ್ಲಿ ಜರಗಿತು. 1954-55 ನೇ ಪರ್ಷದ ಕಾರ್ಯಕಾರಿ ಮಂಡಳದ ಮೆಂಬರರನ್ನಾಗಿ ಈ ಕೆಳಗಿನವರನ್ನು ಆರಿಸಲಾಯ್ತು.

ಶ್ರೀ ಕೆ. ಮುದ್ದು ಶೆಟ್ಟಿ (ಅಧ್ಯಕ್ಷ) ಶ್ರೀ ಯುರ. ನಾರಾಯಣ ಹೆಗ್ಡೆ (ಉಸಾಧ್ಯಕ್ಷ) ಶ್ರೀ ಯನ್. ಸಂಜೀವ ಶೆಟ್ಟಿ (ಕೋಶಾಧಿಕಾರಿ) ಶ್ರೀ. ಯನ್. ಎಸ್. ಕುತ್ಯಾರ್ (ಕಾರ್ಯದರ್ಶಿ) ಶ್ರೀಮತಿ ಲೀಲಾವತಿ ಕೆ. ರೈ, ಕುತ್ಯಾರುಗುತ್ತು. ಶ್ರೀಗಳಾದ ಸದಾಶಿವ ಶೆಟ್ಟಿ ಆವ್ಜೆ ಪರೇಲ್, ಮೊದ್ದಣ್ಣ ಶೆಟ್ಟಿ, ಮೂಳ್ಯೂರು ಬೊಮ್ಮಯ್ಯ ಶೆಟ್ಟಿ, ಎಲ್ಲೂರು ಲಕ್ಷ್ಮಣ ಶೆಟ್ಟಿ, ಇನ್ನ ವೀರಪ್ಪ ಶೆಟ್ಟಿ, ಪಿಲಾಮು ಪರೇಲ ಎಲ್ಲಪ್ಪ ಶೆಟ್ಟಿ, ಕೇಪ್ಟನ್ ವೈ. ಆರ್. ಶೆಟ್ಟಿ, ಬಿ. ಜಂದ್ರಯಾಸ ಹೆಗ್ಡೆ, ಕೋಡು ತಿಮ್ಮಪ್ಪ ಹೆಗ್ಡೆ, ಕಾರ್ಕಳ ಡಾ! ಬಿ. ರಾಘು ಪ ಜೆಗ್ಡೆ, ಸೂಡಾಕಲ್ಲಬೆಟ್ಟುಗುತ್ತು ಪಾಸು ಶೆಟ್ಟಿ—ಪೊಂಬರೆಂತ ಅಧ್ಯಕ್ಷ ಶ್ರೀ ಕೆ. ಮುದ್ದು ಶೆಟ್ಟು ತಿಳಿಸುತ್ತಾರೆ.

ಕುಂಬಳೆ— ಸ್ಥಳೀಯ ಪಂಚಾಯತ್‌ಬೋರ್ಡಿನ ಸಭಯು ಕಳೆದ ತಾ. 30ರಲ್ಲಿ ಅಧ್ಯಕ್ಷ ಶ್ರೀ. ಕೆ. ಕಣ್ಣಪ್ಪ ನವರ ಹಿರಿತನದಲ್ಲಿ ಜರಗಿತು. ಬೋರ್ಡಿನಕ್ಷೇತ್ರಕ್ಕೆ ಸಂಬಂಧಿಸಿದ ಕೆಲವು ಶೌಕರ್ಯಗಳ ಕುರಿತು ನಿರ್ಣಯಗಳಾದುವು.

ಶೀರೂರು— ಉಡುಪಿತಾಲೂಕಿನ ಶೀರೂರು ಎಯಿಡೆಡ್ ಶಾಲಾ ಹಳೆವಿದ್ಯಾರ್ಥಿಸಂಘದವರು ಸದ್ರಿಶಾಲಾಕಟ್ಟಡವ ಸಮರ್ಪಣಾರ್ಥವಾಗಿ ಮುಂದಿನ ಜನವರಿ ತಿಂಗಳ ತಾ. 16ರಲ್ಲಿ ರಾತ್ರಿ 'ಭಕ್ತವಿಜಯ' ಎಂಬ ಯಕ್ಷಗಾನ ನಾಟಕವನ್ನು ಅಭಿನಯಿಸಲಿರುವರು.

ನಿಂಜೂರು:— ಸ್ಥಳೀಯ ನಿವೇಕಾನಂದ ಗ್ರಾಮಸೇವಾಸಂಘದ ವಿಶೇಷ ಮಹಾಸಭೆಯು ತಾ. 5ರಲ್ಲು ಶ್ರೀ ಎಸ್. ರಾಮು ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು ಸಂಘದ ಕಳೆದ 19ವರ್ಷಗಳ ಕಾರ್ಯಕಲಾಪಗಳನ್ನು ಶ್ರೀ. ಸಂಜೀವ ಶೆಟ್ಟರು ವಿವರಿಸಿ ಸಂಘದ ಅಭಿವೃದ್ಧಿಗೆ ಜನತೆಯ ಸಹಕಾರವನ್ನು ಬಯಸಿದರು. ಅಲ್ಲದೆ ನಿಂಜೂರಿನ ಎಲಿಮೆಂಟರಿ ಶಾಲೆಯನ್ನೂ ಹಾಗೂ ಎ! ಶಾಲೆಯನ್ನಾಗಿ ಮಾರ್ಪಡಿಸಲು ಸಂಘದ ಹಾಗೂ ಗ್ರಾಮಸ್ಥರ ಬೆಂಬಲವನ್ನು ಅಪೇಕ್ಷಿಸಿದರು. ಶ್ರೀಗಳಾದ ರಾಜು ಶೆಟ್ಟಿ, ವಿಠಲಶೆಟ್ಟಿ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಕಾರ್ಯದರ್ಶಿ ಶ್ರೀ. ಹಿರಿಯಣ್ಣ ಶೆಟ್ಟಿರಿಂದ ವಂದನಾರ್ಪಣೆಯೊಂದಿಗೆ ಸಭೆ ಪರ್ಯವಸಾಯಿತು ಬೋರ್ಡು ಅಧ್ಯಕ್ಷ ಶ್ರೀ. ರಾಜು ಶೆಟ್ಟರು ಉಸಾಹಾರವಿತ್ತರು.

ಹಿರಿಯಡಕ— ಸ್ಥಳೀಯ ಬೋರ್ಡು ಹೈಸ್ಕೂಲಲ್ಲಿ ತಾ. 4ರಲ್ಲು ಶ್ರೀ. ಕು. ಶಿ. ಹರಿದಾಸ ಭಟ್ಟರು ಕರ್ನಾಟಕದ ಏಕೀಕರಣದ ವಿಷಯದಲ್ಲಿ ಉಪನ್ಯಾಸನಿತ್ತರು. ಶಾಲಾ ಹೆಡ್ಮಾಸ್ಟರ್ ಶ್ರೀ. ಬಿ. ಎನ್. ಆಚಾರ್ಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀ. ಎಚ್. ಕೆ. ರಾಮಚಂದ್ರ ಮೂರ್ತಿಗಳು ಕಾರಂತರ ಗೀತಾ ನಾಟಕಗಳಿಂದ ಕೆಲವು ಪದ್ಯಗಳನ್ನು ಹಾಡಿದರು. ಶಾಲಾ ನಾಯಕ ಶ್ರೀ. ಅಣ್ಣಪ್ಪನವರು ಧನ್ಯವಾದಗಳನ್ನರ್ಪಿಸಿದರು.

ಸಡುಬಿದ್ರೆ— ತಾ 1 ರಂದ. ಶ್ರೀ.ಟಿ ಎ. ಪೈ. ಎಸ್. ಎಲ್. ಎ. ಗಳಿಂದ ಸೀರಾ ಕೇಂದ್ರವೊಂದು ಕುಂಡಾಪುರ ರವಿನ್ಯೂ ಡಿ! ಆ! ಶ್ರೀ ಟಿ. ವಿ. ಪಿ. ಕುರುಪರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಲ್ಪಟ್ಟಿತು ಸುತ್ತಮಾನಪ್ರದೇಶದ ಮಾಡುವಾಗಲೇ ನೀರಾ ಕೇಂದ್ರಗಳನ್ನೂ ಸರಕಾರ ತೆರೆಯಂತೆ ನೂಡಿದ್ದರೆ ಪ್ರೊಹಿಬಿಷನಿನ ಕುರಿತಾದ ಹಲವೊಂದು ತಕರಾರುಗಳಿಗೆ ಅಸ್ಪದವೇ ಇರುತ್ತಿದ್ದಿಲ್ಲವೆಂದೂ ಪ್ರೊಹಿಬಿಷನಿನ ಮತ್ತು ಪೋಲಿಸ್ ಶಿಬಂದಿಯನ್ನು ಒಂದಾಗಿ ಸುವುದರಿಂದ ಆಡಳಿತ ಜೆಚ್ಚ ಕಡಿಮೆಯಾಗುವುದೆಂದು ಮುಂತಾಗಿ ಉದ್ಘಾಟಕರು ಜೋಳಿದರು.

ಯೇಣಗುಡ್ಡೆ:— ಸ್ಥಳೀಯ ಶ್ರೀ. ದುರ್ಗಪರಮೇಶ್ವರೀ ಪ್ರಾಥಮಿಕ ಶಾಲಾ ಹಳೇ ವಿದ್ಯಾರ್ಥಿ ಸಂಘವು ದಿನಾಂಕ 5 ರಲ್ಲು ಶ್ರೀ. ಬಿ. ಕೃಷ್ಣಾನಂದ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಲ್ಪಟ್ಟಿತು. ಶ್ರೀ. ಕೆ. ರಾಮುದಾಸ್ ಭಟ್ಟರು ಸ್ವಾಗತ ಭಾಷಣ ಮಾಡಿದರು, ಶ್ರೀ. ಗಳಾದ ನಾರಾಯಣ ಭಟ್ಟ, ಶ್ಯಾಮ ಶೆಟ್ಟಿ ನೆಂಕಪ್ಪ ಮಾಸ್ತರ್, ವೈ. ಜಾಣು ಪೂಜಾರಿ ಮೊದಲಾದವರು ಬಾಷಣ ಪಿತ್ತರು. ಸಂಘದ ಕಾರ್ಯ ನಿರ್ವಾಹಕರಾಗಿ ಶ್ರೀ. ಜಗನ್ನಾಥ ಹೆಗ್ಡೆ, ಪರೆಲ್—ಅಧ್ಯಕ್ಷ, ಸಿ ನಾರಾಯಣ ಭಟ್ಟ ಉಪಾಧ್ಯಾಕ್ಷ, ವೈ. ನಂದಪ್ಪ ಹೆಗ್ಡೆ— ಕೋಶಾಧಿಕಾರಿ, ವೈ. ನಾರಾಯಣ ಭಟ್ಟ, ಹಾಗೂ ವಿತ್ತನಾಥ. ಜತೆಕಾರ್ಯದರ್ಶಿಗಳು, ಇವರನ್ನು ಆರಿಸಲಾಯಿತು. ಕೊನೆಗೆ ಶಾಲಾ ವ್ಯವಸ್ಥಾಪಕರಾದ ಶ್ರೀ. ವೈ. ನಂದಪ್ಪ ಹೆಗ್ಡೆಯವರು ದನ್ಯವಾದಗಳನ್ನಿತ್ತರು.

ಬೊಂಬಾಯಿ ಬಗ್ವಾದಿ ಹೋಬಳಿ ಮೊಗವೀರ ಮಾಹಾಜನ ಸಂಘದ ನೇತೃತ್ವದಲ್ಲಿ ಕಳೆದ ತಾ. 28ರಲ್ಲು ಶ್ರೀ ಜಿ. ಎನ್. ಅಯ್ಯರ್, ಅವರು 'ಬಗ್ವಾದಿ ಮೊಗವೀರ ಧರ್ಮಾರ್ಥ ವಾಚನಾಲಯ ಮತ್ತು ಪುಸ್ತಕ ಭಂಡಾರ' ದ ಉದ್ಘಾಟನೆಯನ್ನು ನೆರವೇರಿಸಿದರು. ಶ್ರೀ ಎಮ್. ಪಿ. ಹೊಳಿಮೊಗೆಯನರು ಸ್ವಾಗತ ಘೋತಗಳನ್ನಾಡಿದ ಬಳಿಕ ಹಲವರ ಭಾಷಣಗಳಾಯ್ತು. ದಿನ ದಿನಕ್ಕೆ ವೃದ್ಧಿಯಾಗುತ್ತಲಿರುವ ಈ ಸಂಘದ ಕಾರ್ಯಕಲಾಪಗಳನ್ನು ಸ್ಥಾಪಿಸಿ ಅಧ್ಯಕ್ಷರು ಸೂತನಾಡಿದರು. ಶ್ರೀ ನೀಲ ಬಿ. ಮೊದಲನೆಂದ ವಿವಿಧ ವಿಸ್ತೋದಾ ಪಳಿಗಳಾಗಿ ಲಕ್ಷಂ ಉಸಹಾರದೊಂದಿಗೆ ಸಭಾರಂಭ ಕೊನೆಗೊಂಡಿತು.

ಕೆಲವು ಉತ್ತಮ ಪುಸ್ತಕಗಳು.

ಬಪಹು ಬಂಗಾರ	(ಕುಮಾರಸ್ವಾಮಿ)	1 8
ಯುಗವಾಣಿ	(ಕು. ಶಿ. ಹರಿದಾಸಭಟ್ಟ)	0 8
ಘಂಟಿನಾದ	(,,)	2 0
ಏಶಿಯದ ಸಂಪತ್ತು	(,,)	2 0
ಪ್ರಜಾಪ್ರಭುತ್ವವನ್ನು ಕುರಿತು	(ಶಿವರಾಮ ಕಾರಂತ)	0 8
ಅಂತರಂಗದ ಕತೆಗಳು	(ಸಂಕಲನ)	1 4
ಸ್ವಪ್ನಲೋಕ	(ಕಾರ್ತಿಕೇಯ)	0 8
ಜೀತಿವಿನೋದ ಕತೆಗಳು		0 12
ನೇವಾಪಥ	(ಸೇಟ್ ಗೊವಿಂದಾಸ್)	0 8
ಸರಸ್ವತಿ	(ಡಾ! ಎಂ. ಮಾಧವಾಚಾರ್ಯ)	0 12
ಗೀತೆಯ ಕೈಗನ್ನಡಿ	(ಚಿದಂಬರಯ್ಯ)	0 8
ಭಾರತದ ಕರ್ಣ	(ಎಸ್. ಎಸ್. ಕಲ್ಲೆ)	0 6
ಪ್ರಾಚೀನ ತುಳುನಾಡು	(,,)	2 0
ಮುರಳಿ	(,,)	0 12
ಮಧುವನ	(ಸಂಕಲನ)	8 0
ಶಾಸ್ಯಸಾಮ್ರಾಜ್ಯ	(,,)	1 8
ಶವಗಳ ಸಾಗಾಟ	(ಕಳ್ಳ ಪೀಟೆ)	0 10
ಕವಿತಾಕಾಮಿನಿ	(ಎಸ್. ವೆಂಕಟರಾಜ)	2 8
ಆಕಾಶಗಂಗೆ		1 12
ಜೀವನ ಸಂಗ್ರಾಮ	(ಪಿ. ತೀನ ಶೆಟ್ಟಿ)	1 8
ವೇಶಭಕ್ತ	(ಕೆ. ತೀ. ಶೆಟ್ಟಿ)	1 4
ಪ್ರೇಮವಿಜಯ	,,)	1 0

ಏಜಂಟರು ಬೇಕು. ರತ್ನಗಳಿಗೂ ನಮ್ಮಲ್ಲಿ ದೊರೆಯುವ ಎಲ್ಲಾ ಕತೆಗಳ ಪುಸ್ತಕಗಳ ಕೆಟಲಾಗಿಗೂ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಏಶಿಯದ ಸಂಪತ್ತು

(ಏಶಿಯದ ಆರ್ಥಿಕ ಸ್ಥಿತಿ ಚಿತ್ರ)

ಬರೆದವರು: ಕು. ಶಿ. ಹರಿದಾಸ ಭಟ್ಟ, ಎಂ. ಎ.

*

ಇಂದಿನ ರಾಜಕೀಯದಲ್ಲಿ ಜರ್ಜಾಸ್ಪದ ಭೂಖಂಡವಾದ ಏಶಿಯದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಚಿತ್ರವನ್ನು ಸರಳವಾಗಿಯೂ, ವಿಶದವಾಗಿಯೂ, ಸಚಿತ್ರವಾಗಿಯೂ ವಿವರಿಸುವ ಏಕಮಾತ್ರ ಗ್ರಂಥ

ಏಶಿಯದ ಎಲ್ಲ ವಿದ್ಯಾರ್ಥಿಗಳೂ, ರಾಜಕೀಯಜ್ಞರೂ, ಓದಬೇಕಾದ ಪುಸ್ತಕ. ಬೆಲೆ: ಎರಡು ರೂಪಾಯಿ.

ವಾಚನಾಲಯಗಳಿಗೆ ಅತ್ಯಗತ್ಯವಾದದ್ದು.

—ಕನ್ನಡದಲ್ಲಿ ಹೊಸ ಬಗೆಯ ಗ್ರಂಥ—

ಬದುಕು ಬಂಗಾರ

(ಬರೆದವರು: ಕುಮಾರಸ್ವಾಮಿ)

- ಬಾಳ್ವೆಯ ಹಲವು ಪ್ರಶ್ನೆಗಳನ್ನು ದಿಟ್ಟತನದಿಂದ ಉತ್ತರಿಸಿ ಜೈತನ್ಯ ಪೂರ್ಣ ವ್ಯಕ್ತಿತ್ವಕ್ಕೆ ಒಪ್ಪವಿಡುವ ಪುಸ್ತಕ.
- ಪ್ರತಿಯೊಬ್ಬನೂ ಸಂಗ್ರಹಿಸಬೇಕಾದ ಸುಖಜೀವನದ ಕೈಗನ್ನಡಿ.

ಬೆಲೆ: ಒಂದೂವರೆ ರೂಪಾಯಿ.

ಕರ್ನಾಟಕದ ಎಲ್ಲಿ ಕಡೆಗಳ ಪುಸ್ತಕಗಳೂ ಸಿಗುತ್ತವೆ. ವಿಶೇಷ ಸವಲತ್ತುಗಳಿಗೂ ಕೆಟಲಾಗಿಗೂ ಬರೆಯಿರಿ—

೧. ನವಯುಗ ಪ್ರೆಸ್, ಉಡುಪಿ.
೨. ನವಭಾರತ ಪುಸ್ತಕ ಭಂಡಾರ, ಉಡುಪಿ.

ತಾ 10—12—54 ರಿಂದ ಅನೋಘ 2 ನೇ ವಾರ
ಒಮ್ಮೆ ನೋಡಿದವರು ನೂಲ್ಬುಬಾರಿ—ಎಂಟು ಬಾರಿ ನೋಡುತ್ತಾರೆ...
ಮತ್ತೂ ಮತ್ತೂ ಧಾವಿಸಿ ಬರುತಿದ್ದಾರೆ...
ಕಿಕ್ಕಿರಿದ ಜನಸಂದಣಿಯಲ್ಲಿ ಪ್ರದರ್ಶಿತ ವಾಗುತ್ತಿರುವ
ಅನೋಘ ಭಕ್ತಿ ರಸ ಚಿತ್ರ

ಬೇಡರ ಕಣ್ಣಪ್ಪ (ಕನ್ನಡ)

ಪಂಡರಿ ಬಾಯಿ, ರಾಜ ಕುಮಾರ್, ಸಂಧ್ಯಾ ಮೊದಲಾದವರು
ಶ್ರೀ ರಾಮ ಕೃಷ್ಣ ಥಿಯೇಟರ್, ಲಿಮಿಟೆಡ್

ಮಂಗಳೂರು

ಜಿಲ್ಲಾ ಬೋರ್ಡು ಕಾಂಗ್ರೆಸ್ ಪಕ್ಷದ ಸಭೆಯು— ತಾ. 1ರಲ್ಲು ಜರಗಿ ಶ್ರೀ ಗಳಾದ ಬಿ. ಸುಂಜಯ್ಯ ಹೆಗ್ಡೆ ಮತ್ತು ಕೆ. ನಜೀರಸಾಯರು ಪಕ್ಷದ ನಾಯಕ ಮತ್ತು ಉಪನಾಯಕರಾಗಿ ಆರಿಸಲ್ಪಟ್ಟರು.

ಗೇರುಬೀಜ ಮುಜುರೆಯ ವಿವಾದ— ಕುರಿತು ಸಲಹೆಗಳನ್ನೀಯಲು ನೇಮಿಸಲ್ಪಟ್ಟ ಕಮಿಟಿಯವರು ಉಭಯಪಕ್ಷಗಳ ಜೇಳಿಕೆಗಳನ್ನು ಪಡದು ವಿಚಾರಿಸಿ ಕಳದ ತಾ. 30ರಂದು ಪ್ರಕಟಿಸಿದ ತಮ್ಮ ಎವಾರ್ಡಿನಲ್ಲಿ ನಿರುದ್ಯೋಗದ ಪ್ರಶ್ನೆಯಿಲ್ಲವೆಂದೂ ರೂ ಸಾಯಿ ಪಡಿಸ್ಪೆದು ಮುಂಗಡಕೊಡುವ ಆಗತ್ಯ ವಿಲ್ಲವೆಂದೂ, ಸೂಲಿಕೆರು ತಾವು ಕೊಡುವೆ ವೆಂದು ಜೇಳಿದ ರಜೆ ಸಂಬಳಕೊಟ್ಟು ಇಾರ್ಖಾನೆಗಳನ್ನು ಆದಷ್ಟು ಬೇಗನೆ ತೆರೆಯಬೇ ಕೆಂದೂ ಸಲಹೆ ಕೊಟ್ಟಿರುವರು.

ಧ್ವಜದಿನಾಚರಣೆಯು— ತಾ. 7 ರಂದು ಯಶಸ್ವಿಯಾಗಿ ಜರಗಿತು. ಅಂದು ಧ್ವಜಗಳ ಸೂರಾಟದ ಕಾರ್ಯಕ್ರಮವಿತ್ತು.

ದ. ಕ. ಜಿಲ್ಲಾ ಲೋಕಲ್ ಬೋರ್ಡ್ ಮತ್ತು ಮುನಿಸಿಪಲ್ ವರ್ಕರ್ಸ್ ಯೂನಿಯನ್— ಮಹಾಸಭೆಯು ಕಳದ ತಾ. 28ರಲ್ಲು ಶ್ರೀ ಎ. ಶಾಂತಾರಾಮ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಕೆ. ಮೋನಪ್ಪ ಸೆಟ್ಟರು ವರದಿಯನ್ನೊಪ್ಪಿಸಿದರು. ಬಳಿಕ ಕೆಲ ಸೆನ್ಸಿಟರ್ ಇನ್ಸ್‌ಪೆಕ್ಟರರು ಮಜೂರರನ್ನು ಸಸ್ಪೆಂಡ್ ಮಾಡುವುದು, ವರ್ಗಾಯಿಸುವುದು, ಕೆಲಸ ಬದಲಿಸುವುದು ಇತ್ಯಾದಿ ಕಾರ್ಯಕ್ರಮಗಳನ್ನು ಕೂಡಲೇ ನಿಲ್ಲಿಸಬೇಕೆನ್ನುವ ನಿರ್ಣಯವಾಯಿತು.

ಜಿಲ್ಲಾ ಬೋರ್ಡು ಉಪಾಧ್ಯಕ್ಷರ ಚುನಾವಣೆಯು— ತಾ. 2ರಲ್ಲು ಅಧ್ಯಕ್ಷ ಡಾ। ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ ಆರ್. ಕರ್ಕೇರರು ಒನ್ಮತದಿಂದ ಉಪಾಧ್ಯಕ್ಷರಾಗಿ ಆರಿಸಲ್ಪಟ್ಟರು. ಶ್ರೀಗಳಾದ ಬಿ. ಸುಂಜಯ್ಯ ಹೆಗ್ಡೆ, ಎನ್.ಎಸ್. ಪರಮೇಶ್ವರಯ್ಯ, ಕೃಷ್ಣ ಸೆಟ್ಟಿ, ಡಾ। ಕೆ. ನಾಗಪ್ಪ ಆಳ್ವ, ಡಾ। ಕೆ. ಕೆ. ಹೆಗ್ಡೆ, ಶ್ರೀಮತಿ ಉಮಾ. ವಿ. ಕಾಮತ್ ಮೊದಲಾದವರು ಶ್ರೀ. ಕರ್ಕೇರರನ್ನು ಅಭಿನಂದಿಸಿ ಮಾತನಾಡಿದರು. ನಂತರ ಸ್ಥಾಯಿ ಸಮಿತಿಗಳ ಸದಸ್ಯರ ಚುನಾವಣೆಯು ಕೆಲವೊಂದು ಟೀಕೆಗಳಿಗೊಳಗಾಗಿ ನಡೆಯಿತು.

ಬಳಿಕ ಜಿಲ್ಲಾ ಬೋರ್ಡಿನ ಸಾಮಾನ್ಯ ಸಭೆಯು ಜರಗಿತು. ಅಧ್ಯಕ್ಷ ಡಾ। ಹೆಗ್ಡೆಯವರು ಬೋರ್ಡಿನ ಆರ್ಥಿಕ ಪರಿಸ್ಥಿತಿಯ ಕುರಿತು ಮಾತನಾಡುತ್ತಾ ಬೋರ್ಡಿನಲ್ಲಿ ಈಗ ಒಟ್ಟು ರೂ 2, 87, 887 ರೆಸ್ಪು ಕೊರತೆ ಇರುವುದೆಂದೂ ಆ ಪೈಕಿ ರೂಪಾಯಿ 1, 46, 422 ಸರಕಾರದಿಂದ ಗ್ರಾಂಟು ಬರಬೇಕಾಗಿದೆಯೆಂದೂ ಈ ಕೊರತೆ ಹೋಗಲಾಡಿಸಲು ಸರಕಾರದಿಂದ 1,50,000 ಸಾಲ ಕೇಳಬೇಕೆಂದೂ ಸೂಚನೆ ಯಿತ್ತರು. ಸಕ್ಸಂಬಂಧ ಮಂತ್ರಿಗಳ ನ್ನೂ ಅಧಿಕಾರಿಗಳನ್ನೂ ಭೇಟಿಯಾಗಲು ಡಾ। ಕೆ. ಕೆ. ಹೆಗ್ಡೆ ಮತ್ತು ಶ್ರೀ. ಬಿ. ಸುಂಜಯ್ಯ ಹೆಗ್ಡೆ ಮೊದಲಾದವರಿರುವ ಒಂದು ಕಮಿಟಿಯ ನೇಮಕವಾಯಿತು. ನಂತರ ಜಿಲ್ಲಾ ಬೋರ್ಡಿನ 1954—55 ರ ಪರಿಷ್ಕೃತ ಆಂದಾಜು ಪಟ್ಟಿಯನ್ನು ಹಾಗೂ 1955—56 ರ ಮುಂಗಡ ಆಂದಾಜು ಪಟ್ಟಿಯನ್ನು ತಯಾರಿಸುವುದಕ್ಕೂ ಬೋರ್ಡಿನಆರ್ಥಿಕ ಸ್ಥಿತಿ ಗತಿಯ ಕುರಿತು ಪರಿಶೀಲನೆ ಮಾಡಲಿಕ್ಕೂ ಕಮಿಟಿಯೊಂದು ನೇಮಿಸಲಾಯಿತು ಜಿಲ್ಲೆಯ ಸ್ವಾದೇಶಿಕ ಸಾರಿಗೆ ಸಮಿತಿಗೆ ಬೋರ್ಡು ಅಧ್ಯಕ್ಷರನ್ನೂ ಸೇರಿಸಬೇಕೆಂದು ಸರಕಾರವನ್ನು ಕೇಳಿ ಕೊಳ್ಳುವ, ಮೂಡಬಿದಿರೆ ಹೊಸ್ಮಾರು ರಸ್ತೆಯನ್ನು ಸರ್ವಕಾಲೀನ ರಸ್ತೆಯಾಗಿ ಮಾಡುವುದಕ್ಕೆ ರೂ 63, 000 ಆಂದಾಜು ವೆಚ್ಚವನ್ನು ಯುದ್ಧಾ ನಂತರ ಯೋಜನೆಗಳ ಕೆಲಸದೊಂದಿಗೆ ಸೇರಿಸುವಂತೆ ಸರಕಾರವನ್ನು ಕೇಳಿಕೊಳ್ಳುವ ನಿರ್ಣಯಗಳಾದುವು. ಕುಂದಾಪುರ ಬೋರ್ಡ್ ಹೈಸ್ಕೂಲಿಗೆ ಸಭಾಭವನಕ್ಕಾಗಿ ರೂ. 33,000 ನ್ನು ಮಂಜೂರು ಮಾಡಲಾಯಿತು. ಈ ಪೈಕಿ ರೂ 16,300 ಸರಕಾರದಿಂದಲೂ ರೂ 10, 000 ಅಲ್ಲಿಯ ಹಳೇ ವಿದ್ಯಾರ್ಥಿ ಸಂಘದಿಂದಲೂ ಸಿಕ್ಕುವುದೆನ್ನು ನಿರೀಕ್ಷಿಸಿ ತರಲಾಯಿತು.

ವಿದ್ಯಾಪಂತರಲ್ಲಿ ನಿರುದ್ಯೋಗ ನಿವಾರಣೆ ಮಾಡುವ ಯೋಜನೆಯಂತೆ ಬೆಲ್ತಂಗಡಿಯಲ್ಲಿ 67 ಹೊಸ ಶಾರೆಗಳನ್ನು ತೆರೆಯುವ ನಿರ್ಧಾರವಾಯಿತು.. ಈ ಯೋಜನೆಗನುಸಾರವಾಗಿ ಈಗಾಗಲೇ ತೆರೆದ 76 ಶಾರೆಗಳಿಗೆ ಉಪಕರಣಗಳಿಗಾಗಿ ರೂ. 16,148ನ್ನು ಮಂಜೂರು ಮಾಡಲಾಯಿತು. ಈ ಭಾಗದಲ್ಲಿ ಸರಕಾರದಿಂದ ರೂ. 15,200 ಸಹಾಯ ಧನ ಮೊರೆಯುವುದು.

ವಿದಾಯ ಸತ್ಕಾರ ಲೆಫ್ಟೋರ್ ಟ್ರಸ್ಟಿನ ಆಟೀವ ಕಾರ್ಯಕರ್ತರಾಗಿ, ಅದರ ಆಶ್ರಯದಲ್ಲಿ ಅಂಕೋಲೆಯಲ್ಲಿ ಪ್ರಕಟವಾಗಲಿರುವ 'ಜನ ಸೇವಕ' ಸಪ್ತಾಹಿಕದ ಸಂಪಾದಕರಾಗಿ ಹೋಗಲಿರುವ ಶ್ರೀ ಆಪ್ಪಾಂಬಳಿ ಆನಂದ ಮತ್ತು ಆವರ ಪತ್ನಿ ಶ್ರೀಮತಿ ಗಂಗಾ ಇವರಿಗೆ ತಾ. 5ರಲ್ಲು ಡಾ। ಕೆ. ನಾಗಪ್ಪ ಆಳ್ವರ ಆಧ್ಯಕ್ಷತೆಯಲ್ಲೊಂದು ನಿಧಾಯ ಸತ್ಕಾರ ಕೂಟವು ತರುಣ ಕಲಾವೃಂದದ ನೇತೃತ್ವದಲ್ಲಿ ಜರಗಿತು.

ವಾರ್ಷಿಕೋತ್ಸವ ಉರ್ವ ಸೆಂಟರಿನ ಉಪಾಧ್ಯಾಯ ಸಂಘದ ವಾರ್ಷಿಕೋತ್ಸವವು ತಾ. 4ರಲ್ಲು ಮಂಗಳೂರು ಸಂಪ್ರಲ್ ರೀಂಜಿನ ಜೂನಿಯರ್ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ. ಟಿ. ಮಹಾಲಿಂಗಸಯರ ಅಧ್ಯಕ್ಷತೆಯಲ್ಲಿ ಜರಗಿತು.

ಅವೋನಿಯಂ ಸಲ್ಫೇಟ್ ಮಾರಾಟದ ನಿರ್ಬಂಧಗಳ ರದ್ದತಿ ಸರಕಾರವು ಆಜ್ಞೆಯೊಂದನ್ನು ಹೊರಡಿಸಿ ಇನ್ನು ಮುಂದೆ ಯಾವುದೊಂದು ಜಿಲೆಯ ಬಗ್ಗೆ ಗೊಬ್ಬರ ಪಾಕುವ ಉದ್ದೇಶಗಳ ಬಗ್ಗೆ ಸ್ವಾತಂತ್ರ್ಯವಿರುವ ರೈತರಿಗೆ, ತೇದಾತಿಗೆ ಸಂಬಂಧಪಟ್ಟ ಯಾವು ದೊಂದು ನಿರ್ಬಂಧವಿಲ್ಲದೆ ಮತ್ತು ಗ್ರಾಮ ಉದ್ಯೋಗಸ್ಥರಿಂದ ಅದರ ಬಗ್ಗೆ ಸರ್ಟಿಫಿಕೇಟು ಇಲ್ಲದೆಯೇ ಮಾರಾಟ ಮಾಡಬಹುದೆಂದು ಸೂಚಿಸಿಯಿದೆ.

ಬೆಂಗರೆ ಮಹಾ ಜನರ ಸಭೆಯೊಂದು ತಾ 28-11-54 ರಂದು ಮಂಗಳೂರು ಸರ್ಕಲ್ ಕಾಂಗ್ರೆಸ್ ಸಮಿತಿಯ ಆಧ್ಯಕ್ಷೆ ಶ್ರೀ. ಬಿ. ಆರ್. ಕರ್ಕೇರರ ಅಧ್ಯಕ್ಷತೆಯಲ್ಲಿ ಜರಗಿತು. ಕಾಂಗ್ರೆಸ್ ಸಂಘಟನೆಯ ಮತ್ತು ಕಾಂಗ್ರೆಸ್ ಜನತೆಯೊಳಗಿನ ಪರಸ್ಪರ ಸಂಬಂಧದ ಕುರಿತು ಶ್ರೀ. ಗಳಾದ ಬಿ. ಬಿ. ಶೆಟ್ಟಿ, ಎಚ್. ಕೆ. ತಿಂಗಳಾಯ, ಎಸ್. ಎನ್ ಹೊಳ್ಳ, ನಾಗಪ್ಪ ಕರ್ಕೇರ, ಎನ್. ಎಲ್. ಶೆಟ್ಟಿ, ಎಸ್. ಕೆ. ಅಮೀನ್, ಮತ್ತು ಶ್ರೀಮತಿ ಕಾವೇಳಿಭಟ್ಟ ಹೊಳ್ಳ ಅನುಭವಗಳು ಭಾಷಣವಿತ್ತರು. 81 ಜನರಿಂದ ಕೂಡಿದ ಮಂಗಳೂರು ಏರಿಯಾ ಪ್ರದೇಶ ಬೆಂಗರೆ ಕಾಂಗ್ರೆಸ್ ಕಮಿಟಿಯನ್ನು ರೂಪಿಸಲಾಯಿತು. ಈ ಸಮಿತಿಯ ಆಧ್ಯಕ್ಷರಾಗಿ ಶ್ರೀ. ಎಸ್ ಕೆ. ಅಮೀನ್, ಉಪಾಧ್ಯಕ್ಷರಾಗಿ ಶ್ರೀ. ಚಂದಪ್ಪ ಕರಿಯದನ್, ಕಾರ್ಯದರ್ಶಿಗಳಾಗಿ ಶ್ರೀ. ಉಮೇಶ ಕರ್ಕೇರ ಮತ್ತು ಜೀವರಾಯ ಸಂಗೊಳ್ಳಿ, ಕೋಶಾಧಿಕಾರಿಯಾಗಿ ಶ್ರೀ. ಜನಾರ್ದನ ಕಾಂಚಿನ್ ಹಾಗೂ ಇತರ 6 ಮಂದಿ ಸದಸ್ಯರನ್ನೊಳಗೊಂಡ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು. ಸಭಾಧ್ಯಕ್ಷರ ಭಾಷಣದ ತರುವಾಯ ಶ್ರೀ. ಎಸ್. ಕೆ. ಅಮೀನ್ ರವರು ಧನ್ಯವಾದಗಳನ್ನಿತ್ತು, ಲಘುಪಹಾರದೊಂದಿಗೆ ಸಭಾ ಕಾರ್ಯ ಕೊನೆಗೊಂಡಿತು.

ಪತ್ರಿಕೋದ್ಯೋಗಿಗಳ ಸಂಘದ ಆಶ್ರಯದಲ್ಲಿ ತಾ. 7ರಂದು ಶ್ರೀ. ನಾಡಿಗ ಕೃಷ್ಣ ಮೂರ್ತಿ ರಾಯರು ಧಿಯೋಸಾಫಿಕಲ್ ಸೊಸೈಟಿಯಲ್ಲಿ ಪತ್ರಿಕಾಕರ್ತರನ್ನುದ್ದೇಶಿಸಿ ಭಾಷಣ ವಿತ್ತರು.

ಕಥೆ, ಕಾದಂಬರಿ, ಕವಿತೆ, ನಾಟಕ ಮೊದಲಾದ ನಾನಾ ಪುಸ್ತಕಗಳು

1	ಸ್ವತಂತ್ರ ಜೀವನೋಪಾಯ	0 4
2	ಸಂಶಯ ಪಿಶಾಚಿ	0 10
3	ನಾಡ ಕತೆಗಳು	0 3
4	ಕುಲಲವ	0 6
5	ಕಾವ್ಯ ಸಾಮ್ರಾಜ್ಯ	1 8
6	ಮಧುವನ	3 0
7	ಮುಂದಿನ ದೇವರು	0 4
8	ವೈಭಿಚಾರಿಣಿ ಯಾರು	1 4
9	ಪೆಂಡ್ತಿ ಗೆಂದನಾದರೆ	0 4
10	ಪುರುಷ ಬಭು	0 4
11	ಸನ್ಯಾಸಿಯು ಸೋಗಿನಲ್ಲಿ	0 12
12	ನವದಾಂಪತ್ಯ	0 1
13	ಪೇಲಭಕ್ತ	1 4
14	ಪ್ರೇಮ ವಿಜಯ	1 4
15	ರಂಗಭೂಮಿ	0 10
16	ನೇಪಾಪಥ	0 0
17	ನಾರೀ ಹೃದಯ	1 8
18	ಭಾರತೀಯ ಕತೆಗಳು	1 12
19	ಪ್ರಕಾಶ	2 4
20	ಮೂರು ಪ್ರಪಸನಗಳು	1 4
21	ನಗೆ ನೋಟಗಳು	1 4
22	ಆನ್ನಪೇನರು ಮತ್ತು ಕತೆಗಳು	1 0
23	ಭಾರತದಲ್ಲಿ ಜಾತಿಭೇದ	1 0
24	ಪಿಸ್ಟೊಪೆನ ದಶಾವತಾರ ಆರ್ಡಾರ್ ದಶಾವತಾರ	0 12
25	ಅಕಾರ ಗಂಗೆ	2 8
26	ಸ್ವಾತಂತ್ರ್ಯಸೇರೆ ಸಾಮರಿಕರಿಲೆ	1 4
27	ಜೀವನ ಸಂಗ್ರಾಮ	1 8

ಪಾರಸಾಲ ಕೆಟಲಾಗಿಗೆ ಬರೆಯಿರಿ.
ಎಲ್ಲೆಲ್ಲಿಯೂ ಸ್ಟಾಕಿಸ್ಟರು ಬೇಕಾಗಿದ್ದಾರೆ.
ಕಿರಿಯರ ಪ್ರಪಂಚ ಉಡುಪಿ.
ಅಥವಾ
ನವಭಾರತ ಬುಕ್ ಡಿಪೊ, ಉಡುಪಿ.

ಏಲಂ ನೋಟೀಸು

ದಿ ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಉಡುಪಿ.

The Karnataka Bank Ltd, Udipi.

ಈ ಮೂಲಕ ಸರ್ವರಿಗೂ ತಿಳಿಯಪಡಿಸುವದೇನಂದರೆ:—

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬ್ಯಾಂಕಿನಿಂದ ಚಿನ್ನಾಭರಣಗಳ ಆಡಿನಿಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ, ಬಡ್ಡಿಯನ್ನಾಗಲೀ, ಮಾಯಿದಿಗೆ ಕೊಡದಿದ್ದು ವರಿಂದ ಸದ್ರಿಯವರಿಗೆ ಕ್ರಮದಂತೆ ರಿಜಿಸ್ಟ್ರಿನೋಟೀಸನ್ನು ಕೊಟ್ಟುಗ್ಯೂ ಕೂಡಾ ಪಾವತಿ ಮಾಡದಿದ್ದುನರಿಂದ, ಬೇಕಿಗೆ ಬರತಕ್ಕ ಅಸ್ಸು, ಬಡ್ಡಿ ಖರ್ಚು ವಗೈರೆ ಯನ್ನು ಇದೇ ತಾ. 14—12—1954ನೇ ಮಂಗಳವಾರ ಬೇಂಕಿಗೆ ಪಾವತಿಸಾಡಿ ಈಡಿಟ್ಟ ನಗವನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದಲ್ಲಿ ಸದ್ರಿ ನಗವನ್ನು ತಾ. 21—12—1954 ನೇ ಮಂಗಳವಾರ ಪೂರ್ವಾಹ್ನ 1 ಗಂಟೆಗೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು. ಆಗತ್ಯಪಟ್ಟಲ್ಲಿ ಏಲಂಮಾಡುವ ತಾರೀಕನ್ನು ಮುನಾ ನೋಟೀಸು ಕೊಡದೇನೇ ಮುಂದುವರಿಸಲಾಗುವದು. ತಿಳಿದಿರುವದು.

ಲೋನಿನ ನಂಬ್ರ	ಆಸಾಮಿಗಳ ಹೆಸರು ಮತ್ತು ವಿಳಾಸ.	ಬೇಂಕಿಗೆ ಬರತಕ್ಕ ಮೊಬಲಗು
289/51	ಕೆ. ಶ್ಯಾಮರಾಯ ಸೆಟ್ಟಿ, ಕೆ. ವೀರಯ್ಯ ಸೆಟ್ಟಿ ಆಳಿಯ, ಕೊಡಪೂರು, ಕೊಡಪೂರು ಪೋಸ್ಟು. ದ. ಕ.	ಅಸ್ಸು ಪೂರ್ತಿ ರೂ. 123/-ಮತ್ತು ಇದರ ಮೇಲಣ ತಾ. 1—11—53ರಿಂದ ಸೇ. 9ರ ಸತೆಯಲ್ಲಿ ವಸೂಲು ಆರಿಗೆ ಬಡ್ಡಿ.

ಬೇಂಕಿನ ಆಫೀಸು ತೆಂಕಪೇಟೆ, ಉಡುಪಿ, ದ. ಕ.
ತಾ. 6—12—1954

P. Madhava Rao,
Agent.

NAVAYUGA WEEKLY

ADVERTISEMENT RATES

Display Advertisements:— Rs. 2/-8 per column inch for contracts of 50" or more and Rs.3/-per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and sperial positions, please write to:
ADVERTISEMENT MANAGER,
'NAVAYUGA'
Post Box No. 22, UDIPI, S. K.

ತರುಣ ತರುಣಿಯರಿಗೆ ಅತ್ಯಂತ ಬೋಧಪ್ರದನಾದಆಧುನಿ ನಾಟಕ

ಅಂಧ ಸಮಾಜದ ನಿರೂಪನವನ್ನು, ನ್ಯಾಯವು ಅನ್ಯಾಯವನ್ನು ಗೆದ್ದುಬರುವುದಕ್ಕೆ ಅಧಿಕಾರ, ಧನಲಾಲಸೆಯಲ್ಲ—ಪವಿತ್ರ ಪ್ರೇಮವೊಂದೇ ಶಾಂತಿಯಿಂಯುವ ದೆಂಬುದನ್ನು ಕಾಣಬಹುದಾದ ಏಕವಾತ್ರ ಸಾಮಾಜಿಕ ನಾಟಕ—

ವ್ಯಭಿಚಾರಿಣಿ ಯಾರು?

100 ಪುಟಗಳಿಗೂ ಮಿಕ್ಕಿದಪುಸ್ತಕ!

ನಾಮಾಜಿಕ ಕ್ರಾಂತಿಕಾರಕ ನಾಟಕಗಳನ್ನು ಬರೆದು ಹೆಸರುಗೊಂಡ

ಶ್ರೀ. ಕೆ. ಕೆ. ಶೆಟ್ಟರೇ ಇದರ ಲೇಖಕರು!!

ಬೆಲೆ: 1—4—0 ಮಾತ್ರ.] [ಟ್ಯಾಕ್ಸು ಬೇರೆ.

ಸಿಗುವ ಸ್ಥಳಗಳು:—

ಕಿರಿಯರ ಪ್ರಪಂಚ ಉಡುಪಿ.. ನವಭಾರತ ಪುಸ್ತಕ ಭಂಡಾರ, ಉಡುಪಿ. ದ. ಕ.

ಮದ್ರಾಸು ರಾಜ್ಯದಲ್ಲಿ ಔದ್ಯೋಗಿಕ ಪ್ರಗತಿ

ಔದ್ಯೋಗಿಕ ಕ್ಷೇತ್ರವಲ್ಲಿ ಮುನ್ನಡೆಯನ್ನು ಸಾಧಿಸಿರುವ ರಾಜ್ಯಗಳಲ್ಲಿ ಮದರಾಸು ಮೂರನೆಯ ಸ್ಥಾನವನ್ನು – ಮುಂಬಯಿ ಮತ್ತು ಪಶ್ಚಿಮ ಬಂಗಾಳಗಳ ತರುವಾಯ— ಪಡೆಯುತ್ತಿದೆ. ವ್ಯವಸ್ಥಿತವಾದ ಉದ್ದಿಮೆಗಳಲ್ಲಿ ಸುಮಾರು ೬೨ ಕೋಟಿ ರೂಪಾಯಿಗಳು ಇಲ್ಲಿ ತೊಡಗಿಸಲ್ಪಟ್ಟಿದ್ದು ವರ್ಷಕ್ಕೆ ೧೪ ಕೋಟಿ ರೂಪಾಯಿಯನ್ನು ಸಂಬಳ ರೂಪದಲ್ಲಿ ಪಡೆಯುವ ಎರಡು ಲಕ್ಷ ಜನರಿಗೆ ಇವು ಆಸ್ಪ ನೀಡುತ್ತವೆ.

ಪ್ರಮುಖ ಉದ್ದಿಮೆಗಳೆಲ್ಲವೂ ಮದ್ರಾಸು ರಾಜ್ಯದಲ್ಲಿವೆಯೆಂದು ಹೇಳಿದರೆ ತಪ್ಪಾಗಲಾರದು. ೧೬ ಲಕ್ಷ ಕದಿರುಗಳನ್ನೂ ೬೫೦೦ ಸುಗ್ಗಗಳನ್ನೂ ಹೊಂದಿದ ಲಂಗಿರಣಿಗಳಲ್ಲದೆ ೫೬ ೦೦೦ ಕೈ ಮಗ್ಗಗಳೂ ಬಟ್ಟೆಯ ಉತ್ಪಾದನೆಯನ್ನು ಮಾಡುತ್ತವೆ. ಬಟ್ಟೆಯ ಗಿರಣಿಗಳು ಇಷ್ಟರ ವರೆಗೆ ಆಯಾತ ಮಾಡುತ್ತಿದ್ದ ಕೆಲವು ಯಂತ್ರೋಪಕರಣಗಳನ್ನು ಇಲ್ಲಿಯೇ ಉತ್ಪಾದಿಸುವುದಕ್ಕೂ ಪ್ರಯತ್ನ ನಡೆದಿರುವುದು.

ಎಂಟು ಕಾರ್ಖಾನೆಗಳು ಈಗ ಸಕ್ಕರೆಯನ್ನು ಉತ್ಪಾದಿಸುತ್ತವೆ. ಭಾರತ ಸರಕಾರದವರು ಸಕ್ಷಿಣದಲ್ಲಿಯೇ ಈ ಉದ್ದಿಮೆಯನ್ನು ಇನ್ನು ಮುಂದೆ ವಿಸ್ತರಿಸಬೇಕೆಂದು ನಿರ್ಧಾರ ಕೈಗೊಂಡಿರುವುದರಿಂದ ಮದ್ರಾಸಿನಲ್ಲಿ ಪ್ರಗತಿಯ ಹೆಜ್ಜೆ ಶೀಘ್ರವಾಗಬಹುದೆಂದು ನಿರೀಕ್ಷಕರ ಅಭಿಪ್ರಾಯ ಮೊದಲನೆಯ ಸಂಚವರ್ಷಿಕ ಯೋಜನೆಯ ಅವಧಿಯಲ್ಲಿ ಈ ರಾಜ್ಯದಲ್ಲಿ ಎಷ್ಟೋ ಹೊಸ ಉದ್ದಿಮೆಗಳು ಹುಟ್ಟಿಕೊಂಡಿವೆ; ಹಳೆಯವು ವಿಸ್ತರಣೆಯನ್ನು ಹೊಂದಿವೆ ವಿದ್ಯುಚ್ಛಕ್ತಿ ಪೂರೈಕೆಗೆ ಹೆಸರಾದ ಈ ರಾಜ್ಯದಲ್ಲೀಗ ಬೆಟರಿ ತಯಾರಿಸುವ ಎರಡು ಕಾರ್ಖಾನೆ, ಬೀಸಣಿಗೆ ತಯಾರಿಸುವ ಐದು ಕಾರ್ಖಾನೆ, ವಿದ್ಯುತ್ತಿನ ಮೋಟಾರನ್ನು ಉತ್ಪಾದಿಸುವ ಮೂರು ಕಾರ್ಖಾನೆಗಳನ್ನು ಕಾಣಬಹುದು.

ಚರ್ಮದ ಕೈಗಾರಿಕೆಯಲ್ಲಿ ಮದ್ರಾಸು ಭಾರತದಲ್ಲಿ ಆಗ್ರಮಾನ್ಯತೆಯನ್ನು ಪಡೆಯುತ್ತಿದೆ. ಚರ್ಮ ಹದಮಾಡುವ ಭಾರತದಲ್ಲಿರುವ ಕಾರ್ಖಾನೆಗಳಲ್ಲಿ ೫೦ ಈ ರಾಜ್ಯದಲ್ಲಿದ್ದು ಆರು ಕೋಟಿ ರೂಪಾಯಿಗಳನ್ನು ಸಂಘಾದಿಸಿಕೊಡುತ್ತವೆ. ಸಿಗಾರು ಮತ್ತು ಚಿರೂಟುಗಳ ವಿಷಯದಲ್ಲೂ ಮದ್ರಾಸು ಗುತ್ತಿಗೆಯನ್ನು ಪಡೆದಿದೆಯೆಂದರೆ ತಪ್ಪಲ್ಲ —ತಿರುಚಿಗೆ ಸುತ್ತಮುತ್ತಲಿನಲ್ಲಿ ೪೦೦ ಕಾರ್ಖಾನೆಗಳು ನಿರ್ಯಾತ ವ್ಯಾಪಾರಕ್ಕಾಗಿ ಇವನ್ನು ಉತ್ಪಾದಿಸುತ್ತಿವೆ.

ಕೊಯಮುತ್ತೂರು, ತಿರುಚಿ ಮತ್ತು ತಿನ್ನವೆಲ್ಲಿ ಜಿಲ್ಲೆಗಳಲ್ಲಿ ಒಂದೊಂದು ಸಿಮೆಂಟು ತಯಾರಿಸುವ ಕಾರ್ಖಾನೆಗಳು ಕೆಲಸ ಮಾಡುತ್ತವೆ. ಅಂಬತ್ತೂರಿನ ಸೈಕಲು ಕಾರ್ಖಾನೆಯು ವರ್ಷಕ್ಕೆ ಒಂದು ಲಕ್ಷ ವಾಹನಗಳನ್ನು ತಯಾರಿಸಿದರೆ, ವಂಬಲೂರಿನಲ್ಲಿ ತಿಂಗಳಿಗೆ ೩೦೦ ಟ್ರಾಕ್ಟರುಗಳು ಕಟ್ಟಲ್ಪಡುತ್ತವೆ. ಮೋಟಾರು ನಿರ್ಮಾಣದಲ್ಲೂ ಸಾಕಷ್ಟು ಪ್ರಗತಿ ಸಾಧಿಸಲ್ಪಟ್ಟಿರುವುದು. ಪೆನ್ಸಿಲು, ಬೆಂಕಿಪೆಟ್ಟಿಗೆ, ತೆಂಗಿನನಾರು, ಗಾಜು, ಕಾಗದ, ಪೆನ್ನು ಮತ್ತು ಪೆನ್ನಿನ ಶಾಯಿ ಮುಂತಾದ ಕೈಗಾರಿಕೆಗಳನ್ನು ನಡೆಸುವ ಕಾರ್ಖಾನೆಗಳೂ ಕಂಡು ಬರುತ್ತವೆ.

ವರ್ಷಕ್ಕೆ ೫೫,೦೦೦ಟನ್ನುಗಳಷ್ಟು ವನಸ್ಪತಿ ತುಪ್ಪವನ್ನು ಐದು ಕಾರ್ಖಾನೆಗಳು ಇಲ್ಲಿ ತಯಾರಿಸುತ್ತವೆ. ರಾಸಾಯನಿಕ ದ್ರವ್ಯಗಳನ್ನು ಸಿದ್ಧಗೊಳಿಸುವ ೩೬ ಕಾರ್ಖಾನೆಗಳು ಇನ್ನಷ್ಟು ವಿಸ್ತರಣೆ ಹೊಂದುವ ಭರವಸೆ ಕೊಡುತ್ತವೆ. ಮುಂದಿನ ಯೋಜನೆಯಲ್ಲಿ ಸರಕಾರವು ಸೇಲಮಿನ ಕಬ್ಬಿಣದ ಅದುರುಗಳ ಪ್ರಯೋಜನವನ್ನು ಪಡೆಯಲು ಒಂದು ಕಾರ್ಖಾನೆ ಕಟ್ಟಬೇಕೆಂದು ಕೇಂದ್ರಕ್ಕೆ ಸೂಚಿಸಿರುವುದಲ್ಲದೆ ಇಲ್ಲಿಯ ಬಾಕ್ಸೈಟು ಅದುರನ್ನು ಉಪಯೋಗಿಸಿ ಅಲ್ಯುಮಿನಿಯಂ ಕಾರ್ಖಾನೆಯನ್ನು ಕಟ್ಟಬೇಕೆಂದೂ ಒತ್ತಾಯಿಸಿರುವುದು. ವೆಟ್ಟೂರಿನಲ್ಲೊಂದು ಡಿಡಿಟಿ ಕಾರ್ಖಾನೆ. ರಾಷನಾತಮಿನಲ್ಲೊಂದು ಕಾಗದ ಕಾರ್ಖಾನೆ, ತೂತುಕುಡಿಯಲ್ಲಿ ಸೋಡಾ ಲೈಮಿನ ಕಾರ್ಖಾನೆಗಳಿಗಾಗಿ ಸಹ ಕೇಂದ್ರದ ಸಹಾಯವನ್ನು ಕೇಳಿರುವುದು.

ದಕ್ಷಿಣ ಆರ್ಕಾಟಿನಲ್ಲಿ ಕಂದುಕಲ್ಲಿದ್ದಲಿನ ನಿಕ್ಷೇಪವು ಕಂಡು ಬಂದಂದಿನಿಂದ ಗೊಬ್ಬರ ತಯಾರಿಕೆ ಹಾಗು ಕೃತಕ ಪೆಟ್ರೋಲಿನ ಉತ್ಪಾದನೆಯಲ್ಲಿ ಮದ್ರಾಸು ಹೊಸ ಅಧ್ಯಾಯವನ್ನು ಪ್ರಾರಂಭಿಸಬಹುದೆಂದು ಹೇಳಲಾಗುತ್ತಿದೆ ಭಾರತದಲ್ಲಿ ಈಗ ಕಟ್ಟಲಾಗುತ್ತಿರುವ ಮೂರು ತೈಲ ಶುದ್ಧೀಕರಣ ಗೃಹಗಳೂ ಕಚ್ಚ ಎಣ್ಣೆಗಾಗಿ ವಿದೇಶಗಳಮುಖವನ್ನೇ ನೋಡುತ್ತವೆ. ರಾಷ್ಟ್ರವನ್ನು ನ್ಯಾವ ಲಂಬಿಯಾಗಿಸುವ ನಮ್ಮ ಪ್ರಯತ್ನವು ಹೆಚ್ಚು ಯಶಸ್ವಿಯಾಗುವಲ್ಲಿ ಕಂದು ಕಲ್ಲಿದ್ದಲಿನ ನಿಕ್ಷೇಪದಿಂದ ಕೃತಕ ಪೆಟ್ರೋಲಿನ್ನಿಯನ್ನು ತಯಾರಿಸುವ ಯೋಜನೆ ಅತ್ಯಧಿಕ ನೆರವಾಗಬಲ್ಲುದು. ಇದರಂತೆ ತಿರುಚಿಯು ಜಿಪ್ಸಂ ಮತ್ತು ಫೋಸ್ಫೇಟುಗಳ ನಿಕ್ಷೇಪದ ಬಲದಿಂದ ಈಗಿನ ನೈಟ್ರೋಜನಯುಕ್ತ ಗೊಬ್ಬರದ ಸ್ಥಾನದಲ್ಲಿ ಇನ್ನುಮಿಡಿ ಫಲದಾಯಕವಾದ ಫೋಸ್ಫೇಟುಯುಕ್ತ ಗೊಬ್ಬರವನ್ನು ತಯಾರಿಸುವುದೂ ಸಾಧ್ಯ.

ಮೇಲಿನ ಸುಂದರ ಚಿತ್ರವಲ್ಲಿ ದಕ್ಷಿಣ ಕನ್ನಡದ ನೈಸರ್ಗಿಕ ಸಂಪತ್ತಿನ ಉಲ್ಲೇಖವಿಲ್ಲವೆಂಬುದು ಕೊರತೆಯ ವಿಷಯ. ನಮ್ಮಲ್ಲಿ ಹೆಂಚು ಮತ್ತು ಗೇರು ಬೀಜದ ಕೈಗಾರಿಕೆಗಳು ಸಾಕಷ್ಟು ಪ್ರಸಿದ್ಧಿಯನ್ನು ಹೊಂದಿದ್ದು, ಕಾಗದ ಮತ್ತು, ಬೆಂಕಿ ಪೆಟ್ಟಿಗೆಯ ಕೈಗಾರಿಕೆಗಳನ್ನು ನಾವು ಲಾಭದಾಯಕವಾದ ರೀತಿಯಲ್ಲಿ ಹೊಸತಾಗಿ ತೊಡಗಬಹುದು. ಪಿಂಗಾರಿಗಾರಿಕೆಗೆ ಸಂಬಂಧಿಸಿದ ಕೈಗಾರಿಕೆಗಳನ್ನೂ ಸ್ಥಾಪಿಸಬಹುದು. ಆದರೆ ಇತ್ತ ಯಾರೂ ಗಮನ ಕೊಡುವವರಿಲ್ಲ.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

BHUVANENDRA PRODUCTS LTD., KATAPADI, S. K.
ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!
ಇವುಗಳಿಂದಲೇ ಭುವನೇಂದ್ರ ಔಷಧಿಗಳು
ಜನಪ್ರಿಯವಾಗಿರುವವು.
ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು
ನಮ್ಮಲ್ಲಿ ತಯಾರಿಸಲ್ಪಡುತ್ತವೆ.
ವಿವರಗಳಿಗೆ ವಿಚಾರಿಸಿರಿ:–
ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್ ಕಟಿಪಳ್ಳಿ, ದ. ಕ.
ಡಿಪೋ:– (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ಭರ್ತ ಕಂಟ್ರೋಲ
[ಮಕ್ಕಳನ್ನು ಹಡೆಯುವುದು ಸಾಕು]
ದಿನಕ್ಕೆ ಮೂರು ಸಾರಿ ಏಳು ದಿನ್ಸ ಸೇವಿಸಿದರೆ ಮುಂದೆ ಐಂಡಿತಾ ಸುಕ್ಕಳಾಗುವ ದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.
ಬೆಲೆ- ೧ ಬಾಟ್ಲಿಗೆ — ರೂ. ೫–೮–೦ .... ಪೋಸ್ಟು ಖರ್ಚು ರೂ. ೦–೧೪–೦
—:ವಿಳಾಸ:—
ಹಾಲಪ್ಪಾ ಡಾವಣಗೇರಿ ಆಯುರ್ವೇದ ಔಷಧಾಲಯ, ಗದಗ.



ಯಂ. ಗಣಪಯ್ಯ ಎಂಡ್ ಸನ್ಸ್
ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು ಇವರ
ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಆಕಾಲ ಬಹಿಷ್ಪ, ಋತುಸ್ರಾವವು ಚಾಸ್ತಿಯಾಗಿಯೂ, ಕಡಿಮೆಯಾಗಿಯೂ ಹೋಗುವುದು, ಬಿಳಿಸೆರಗು, ಸಂತಾನ ಹೀನತೆ, ರಕ್ತಹೀನತೆ ಋತುಕೊರೆ, ಮೊಸರಲಾವ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣವಡಿಸುವುದು. ಬಾಟ್ಲಿ 1ರ ರೂ. 3–8–0.
ಗರ್ಭ ರಕ್ಷಕ– ಗರ್ಭಿಣಿಯರಿಗೆ ಅತ್ಯಂತ ಫಲಕಾರಿಯಾದ ಔಷಧಿ. ವಿವಿಧೋಪಸ, ಗರ್ಭಶಕ್ತಿನಾಶಗಳಿಂದ, ವಾಂತಿ, ಅರುಚಿ, ಆರಕ್ತತೆ, ಸುಲಬದ್ಧತೆ, ವಾಯು ಉಪದ್ರ, ಕೈ ಕಾಲುಬಚ್ಚುವುದು ಇವುಗಳನ್ನೆಲ್ಲಾ ಹೋಗಲಾಡಿಸುವುದು. ಬಾಟ್ಲಿ 1ರ ರೂ. 3–8–0.
ಇವಲ್ಲದೆ ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ, ರೋಗಕ್ಕೆ ತಕ್ಕ ಔಷಧಿಯನ್ನು ರವಾನಿಸಬಹುದು.

ಸ್ವೀಕಾರ — ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. —ಸಂ. ನ.)

ವಿದ್ಯಾಧರೆ—

ಬರೆದವರು: ಕೋರಟಿ ಶ್ರೀನಿವಾಸರಾವ್. ಪ್ರಕಾಶಕರು: ಪ್ರತಿಭಾ ಗ್ರಂಥಮಾಲೆ, ಧಾರವಾಡ. ಬೆಲೆ: ರೂ. ೧--೮--೦.

ಇದೇ ಲೇಖಕರ "ಕರ್ನಲ್‌ರಿನ ಕಡಲು" ಎಂಬ ಕುಸ್ತಕದ ಮುಂದಿನ ಭಾಗವೆಂದು ಇವನ್ನು ಹೇಳಲಾಗಿದ್ದರೂ ಓದುಗರು ಹಾಗೇನೂ ತಿಳಿಯಬೇಕಾದ ಅಗತ್ಯವಿಲ್ಲ. ರಾಣಿ—ಕಿಟ್ಟಣ್ಣರ ಕತೆ ಇಲ್ಲಿ ನುಂದರಿರಿದು ಸ್ವತಾಪರೂ ಆ ಪರಿಗಿಂತಲೂ ಸುಮಿತ್ರೆಯ ಕತೆಗೆ ಇಲ್ಲಿ ಮಸ್ತ್ವವನ್ನು ಕೊಟ್ಟು "ವಿದ್ಯಾಧರೆ" ಯಾಗಿ ಆ ಪಳನ್ನು ನರ್ಜಿಸಿರುವುದರಿಂದ ಹಿಂದಿನ ಕಾದಂಬರಿಯನ್ನು ಹಿರಿದೆಂದು ಹೇಳುವುದುಸ್ರಜಾರ ದೃಷ್ಟಿಯಿಂದಷ್ಟೇ ಪ್ರಯೋಜನಕರವೆನಿಸೀತು. ಸುಮಿತ್ರೆಯ ಜೀವನದಲ್ಲಿ ರಾಣಿಯ ಸಾಮಾನ್ಯ ಸ್ತ್ರೀಯೊಬ್ಬಳಿಗೆ ನೀಗದ ದೊಡ್ಡ ಪಾತ್ರವನ್ನು ನಹಿಸುತ್ತಾಳೆ: ತಂದೆತಾಯಿಗಳನ್ನು ಬಿಟ್ಟು ಬಂದ ಸುಮಿತ್ರೆಗೆ ಸಾರಿದೆ ಆಶ್ರಯ ನೀಡುತ್ತಾಳೆ! ಸುಮಿತ್ರೆಯಂಥ ಪೆಮುಡಿಹಾಗೆ ಪತ್ತನರನ್ನು ಬಿಟ್ಟು ಓಡಿ ಬಂದಾಳೇ, ಬಂದದ್ದೂ ಶಾರದೆಯಂಥ ಪೆಂಗಳು ತನ್ನೊಡನೆ ಆವಳನ್ನು ಕೊನೆಯ ಪರೆಗೂ ಇಟ್ಟು ಕೊಂಡಾಳೇ ಎಂಬ ಸಂಶಯ.ಓದುಗನಲ್ಲಿ ಮೂಡಿಬೇ ಮುಂಡುತ್ತದೆ. ಆದರೆ ಕತೆಗೆ ಈ ಘಟನೆಯೇ ಆಧಾರ ಸ್ತಂಭ: ಸ್ತ್ರೀ ಜೀವನದ ಪಲವು ಸಮಸ್ಯೆಗಳನ್ನು ಲೈಲಜೆಯಪ್ರಣಯಪ್ರಸಂಗ, ಸುಮಿತ್ರೆಯ ನಿವಾಪಮುಮುತಾದ ಘಟನೆಗಳಲ್ಲಿ ಪರ್ಜಿಸಿರುವರು. ಇಲ್ಲಿ ಆಧುನಿಕ ಸ್ತ್ರೀಯರ ವಿಚಾರಧಾರೆ ಹೇಗೆ ಪರಿಯುತ್ತಿದೆ ಎಂಬುದನ್ನು ಚಿತ್ರೀಕರಿಸಲು ಪ್ರಯತ್ನಿಸಿ, ಸಾಕಷ್ಟು ಯಶಸ್ಸನ್ನು ಗಳಿಸಿರುವರು. ಆದರೆ ಮಾನಸಿಕ ವಿಶ್ಲೇಷಣೆಯನ್ನು ಸಂಬಂದಿಸಿದ ಹೆಣ್ಣು ಗಂದನ್ನು ಬಿಟ್ಟು ಹೆತ್ತವರ ಹಾಗೂ ಸಾಮಾಜಿಕರಮನೋವೋಕಪ್ಪುಯಾದರಿತಿಯ ಪ್ರತಿಕ್ರಿಯೆಯನ್ನು ತೋರಿಸಿರೆಂಬವಿಚಾರವನ್ನು ಲೇಖಕರು ಸ್ಪರ್ಶಿಸಲು ಹೋಗಿಲ್ಲ—ಇಂಥ ,, ಸಾಮಾಜಿಕ " ಕಾದಂಬರಿಗಳು ಆ ಕೆಲಸವನ್ನು ಮಾಡಬೇಕೆಂಬು ಹೇಳಿದರೆ ತಪ್ಪಾಗಬಹುದು. ಲೇಖಕರು ಇನಕ್ಕೆ ಕೈಯಾಕದಿದ್ದರೆ ಅಸಜತೆಯ ಅನುಭವ ಓದುಗರಿಗೆ ಆಗುತ್ತದೆ. ಕಾದಂಬರಿಯ ಕೊನೆಯ ಸನ್ನಿವೇಶಗಳೂ ಇದಕ್ಕೆ ಅಪವಾದವಾಗಿಲ್ಲ: ಕಿಟ್ಟಣ್ಣನನ್ನು ರುಗ್ಣಶಯ್ಯೆಯಲ್ಲಿ ಕಂಡ ಮೇಲೆ ಸುಮಿತ್ರೆಗೆ ತಪುರಣ ಗೊಳ್ಳುವುದು, ಈ ದುಃಖವಾರ್ತೆ ಕೇಳಿದ ಕಿಟ್ಟಣ್ಣನೂ ಮೃತ್ಯುಶರಣಾಗುವುದು, ದತ್ತು ಪಸ್ಪೆರಡು ಪರಗಳ ಪರೆಗೆಸುಗಳಾದ ಸುಮಿತ್ರೆಯ ಗೊದಲೆಯನ್ನು ಬಿಟ್ಟಪ್ಪೆ ತಂದೆ ತಾಯಿಗಳು ಆವಳನ್ನು ನೆನೆಯುವುದು ಸಲ್ಲಾಪ ಬಂದು ಜೋಸ್ಯ. ನಿಶ್ಚಿತಉದ್ದೇಶವನ್ನಿಟ್ಟುಕೊಂಡು ಆದಕ್ಕಾಗಿ ಸನ್ನಿವೇಶಗಳನ್ನು ಎಳೆದುತಂದುದನ್ನು ಇಜಿಜ್ಞಾಪ ತೋರಿಸಿಕೊಡುತ್ತದೆ. ವಾಸ್ತವಿಕತೆಗೆ ಮುಪತ್ತ ಸಲ್ಲಿಸಿಲ್ಲವೆಂಬುವವನ್ನು ಕತೆಗಾರನಿಸಿದರೆ, ಕೊರಟಿಯವರ ಶೈಲಿಯೂ ನಿರೂಪಣೆಯೂ ಓಘಗರ ಕುತೂಹಲವನ್ನು ಕೆರಳಿಸಿ, ಮನಸ್ಸನ್ನು ಸಂತೋಷಗೊಳಿಸುತ್ತವೆ; ಸ್ವಲ್ಪಮುಟ್ಟಿಗೆ ವಿಚಾರಕ್ಕೂ ಪಚ್ಚುತ್ತದೆ.

ವಂಚಭಕ್ಷ್ಯ—

ಬರೆದವರು ಹಾಗೂ ಪ್ರಕಾಶಕರು: ಕೆ. ಯುಸ್. ಭಟ್ ರಿಂಡಿಮಾರ್, ಸಿಜಾರ ಪಿಠ ನೂತ, ನುಂಡಾಜಿ, ದಕ್ಷಿಣ ಕನ್ನಡ. ಬೆಲೆ: ರೂ. ೦-೧೦-೦

ಇದು ಹದಿ ಕತೆಗಳ ಸಂಕಲನ. ಆದರೆ "ನಿರುದ್ಯೋಗಿಸಿರ್ವಾಸು" ಮತ್ತು "ಮೊಕ ಗಾರಿಕೆಯ ಸುಪತ್ತ"ಗಳನ್ನು ಪರಟಿಗಳೆಂದು ಕರೆದರೆಯೇ ಚೆನ್ನಾದೀತು. ಉಳಿದವುಗಳಲ್ಲಿ "ಪ್ರತ್ಯಕ್ಷಕಾರ" ನನ್ನು ಸಾಧಾರಣ ಬಳ್ಳೆಯರೀತಿಯಲ್ಲಿ ಬರೆಯಲಾಗಿದೆ; ಮಧ್ಯಮ ವರ್ಗದ ಕನ್ನಡ ಜೀವನಕ್ಕೆ ಇದು ಕನ್ನಡಿ ಹಿಡಿಯುತ್ತದೆ. ,, ಆರಾತಿರಣ" ವು ತಕ್ಕ ಮಟ್ಟಿಗಿದೆ. ,,ಚಾತಿಯ ಜಂಪ್ರ" ಒಂದು ಅಜ್ಜಿಯ ಕತೆ. ಯಾವ ಕತೆಯಲ್ಲೂ ಸಣ್ಣ ಕತೆಯ ಜೀವಾಳವಾದ ತೀವ್ರ ಸಂವೇದನಾಘಾತ ಮಿಡಿಯುತ್ತಿಲ್ಲ. ಇದು ಸೂಡಿ ಬರದಿದ್ದರೆ ಕತೆಯಲ್ಲಿ ಆಕ ಪರಣಾಶಕ್ತಿ ತುಂಬುವದಿಲ್ಲ. ಭಾಷೆ ಮತ್ತು ಶೈಲಿಯ ಮೇಲಿನ ಹಿಡಿತವನ್ನೂ ಪೆಚ್ಚು ಹೆಚ್ಚಾಗಿ ಸಂಪಾದಿಸಿದಂತೆ ನುತ್ತ ಸಣ್ಣ ಕತೆಯ ತಂತ್ರವಲ್ಲಿ ನೂತನ ಪ್ರಯೋಗಗಳನ್ನು ನೂಡಿ ಸಿದ್ಧಿಯನ್ನು ಪೊಂದಿದಂತೆ ಈ ರಕ್ತಿ ಲೇಖಕನಿಗೆ ಬರುತ್ತದೆ. ಇವಷ್ಟೇ ಶ್ರೀ. ಕಜೆಂ ಗೋಪ್ಲು ಶಂಕರ ಭಟ್ಟರು ,,ಮುದ್ರಣಕ್ಕಿಂದೇ ಆಪ್ಲ: ಅಭ್ಯಾಸಕ್ಕಾಗಿಯೂ ಬರೆಯಬೇಕು. ಬರೆದು ತಾನೇ ವಿಮರ್ಶಿಸಿ ಕೊಳ್ಳಬೇಕು. ಆಗ ದೋಷಗಳು ತಾವಾಗಿ ತಿಳಿಯುತ್ತವೆ" ಎಂದಿರುವರು. ಲೇಖಕರು ಹಿರಿಯ ಸಾಹಿತಿಗಳ ಈ ನೂತನ ಸಲಾ ನೆನೆಪಿಟ್ಟುಕೊಂಡು ತಮ್ಮ ಉಮ್ಮಸುವನ್ನು ನುಂದರಿಸಿದರೆ ಅವರ ಕತೆಗಾರಿಕೆಗೊಂದು ರೂಸು ಬರುವುದು ನಿಶ್ಚಯ.

ಲಘು ಪರಿಚಯ

"ಜೀಂಗಳೂರಿನ "ವಿಕಟಿನಿನೋದಿನಿ" ಪಾನಪತ್ರಿಕೆಯ ೧೯೫೫ನೇ ವಾರ್ಷಿಕಾರಂಭ ಕ್ಷ ಎಂದಿನಂತೆ ಸ್ವಾರಸ್ಯವಾದ ಲಘುಬರೆಹಗಳಿಂದೊಡಗೂಡಿ ಮನೋರಂಜನೆಗೊಳಿಸುವ ರೀತಿಯಲ್ಲಿ ಹೊರಬಂದಿರುವುದು. ವಿವಿಧ ಆಭಿರುಚಿಯ ಜನರಿಗೆ ಹೊಟ್ಟಿಕೆಯಾಗುವಂಥ ಆಕ್ಷೆ, ದರಪೆ, ಪ್ರದಸನ ಮುಂತಾದ ನಾನಾ ಸಾಹಿತ್ಯ ಪ್ರಕಾರಗಳನ್ನು ಇವರಲ್ಲಿ ಕಾಣುತ್ತೇವೆ.

ಉಡುಪಿಯ ಮೆಜೆಸ್ಟಿಕ್ ಪ್ರೆಸ್ಸಿನವರು ಸುಸ್ಮಧ ನಾಮ ಸಂವತ್ಸರದ "ಶ್ರೀ ಕೃಷ್ಣ ಪಂಚಾಂಗ" ವನ್ನು ನಾಲ್ಕಾಜೆಬೆಯಿಟ್ಟು ಪ್ರಕಟಪಡಿಸಿರುವರು. ೧೯೫೫—೫೬ನೇ ವರ್ಷಕ್ಕೆ ಸಂಬಂಧಿಸಿದ ಈ ಪಂಚಾಂಗವನ್ನು ಶ್ರೀ. ಉಪ್ಪಿನಕಾಯಿ ಅಡಿಗರು ಗುಣಸಿ ಪರಿಶೋಧಿಸಿರುವರು. ನಿತ್ಯಪಂಚಾಂಗವನ್ನು ಆರ್ಯ ಭಟ್ಟನ್ಯಾಕರಣ ರೀತಿಯಲ್ಲಿಯೂ ನೃಪಣಿ, ಗ್ರಹಸ್ಪಟಿದಿಗಳನ್ನು ನವೀನ ದೃಕ್ಸಿದ್ಧಾಂತ ರೀತಿಯಲ್ಲಿಯೂ ಅವರು ಸಿದ್ಧಪಡಿಸಿರುವರು. ನಿತ್ಯಸ್ಮರಣಾರ್ಹರಿಗೆ ಆವಶ್ಯಕವೆನಿಸಿದ ಜ್ಯೋತಿಷ ಶಾಸ್ತ್ರಕ್ಕೆ ಸಂಬಂಧಿಸಿದ ಅನೇಕ ಉಪಯುಕ್ತ ವಿಷಯಗಳನ್ನು ಈ ಪಂಚಾಂಗ ಒಳಗೊಂಡಿರುವುದಲ್ಲದೆ, ಮೇಷಾದಿ ದ್ವಾದಶ ರಾಶಿಗಳವರ ವರ್ಷ ಭವಿಷ್ಯವೂ ಕೊಡಲಾಗಿರುವುದು.

ಮಂಗಳೂರು ಸರಕಾರಿ ವನರು ಗಿಂಡಿಯಲ್ಲಿರುವ ಕಂಗ್ ಇನ್‌ಸ್ಟಿಟ್ಯೂಟ್ ಆಫ್ ಪ್ರಿಸೆಂಟಿನ್ ಕುಡಿಸಿನಸರ್ಗಾಜ್ಞಾ ಸೇವಾನಿರತರಿಯರನ್ನು ಈಗ ಪ್ರಕಟಿಸಿವೆನರು ಇವರಲ್ಲಿ ವೈನವಿಧದ ವೈದ್ಯವಾರಕ್ಕೆ ಸಂಬಂಧಿಸಿದ ಚಟುವಟಿಕೆಗಳ ಮಾಹಿತಿಯನ್ನಷ್ಟೆಯೆ ನೆಕಾಲಲೋಚನೆಗಳ ವ್ಯಾಪ್ತಿ, ಹೋಟೆಲುಗಳಲ್ಲಿ ಪಾತ್ರೆ ತೊಳೆಯುವ ಕೈಮವ ಮುಟ್ಟಿ ಮುಂತಾದವಕ್ಕೆ ಸಂಬಂಧಿಸಿದ ಶೋಧನೆಗಳ ವಿವರವೂ ನೋಡಿ ನಿಸುತ್ತದೆ. ಸರಕಾರದ ವಿಶ್ಲೇಷಣ ಅಧಿಕಾರಿಗಳ ವರದಿಯೂ ಇದರಲ್ಲಿದ್ದು ಆಯ ಸರಕಾರದ ಬೇರೆ ಬೇರೆ ಖಾತೆಗಳವರಿಂದ ಕಳುಪಡಲಾದವರ್ಧನಗಳನ್ನೆಸ್ತರೊಸಡೆಸನನ್ನೂ ಆಹಾರ ಪದಾರ್ಥಗಳ ಬೆಲೆಕೆ ಪದ್ಧತಿಯು ಎಷ್ಟು ವ್ಯಾಪಕವಾಗಿತ್ತೆಂಬುದನ್ನೂ ಮನವರಿಕೆಮಾಡಿಸಿಕೊಡುತ್ತದೆ. ವೈದ್ಯಕೀಯ ಮತ್ತು ಪಥ್ಯ ಪಿಜ್ಞಾನ ರಾಸ್ತ್ರಕ್ಕೆ ಈ ಸ್ಥಂಸೆಯು ಪಾದುಕು ಸಹಾಯ ಪಜಪಡಿಗಿಂಯಾ ದೊಡ್ಡದು.

ಸ್ಟೇಟಿಯ ಜೋರ್ಜ್ ಪ್ರೌಸ್ಕೂಲಿನ ಸಂಸ್ಕೃತ ವಿದ್ಯಾರ್ಥಿಗಳು ತಮ್ಮ ಗುರುಗಳಾದ ಶ್ರೀ ಕೆ. ಎ. ಜೇಮಾಸರೆ ಸಂಪಾದಕತ್ವದಲ್ಲಿ , ಕಾಮುದಿ'ಎಂಬ ಜೆಸರಿನ ಹಸ್ತಪತ್ರಿಕೆಯನ್ನು ಹೊರಡಿಸುತ್ತಿರುವುದು ಸಂತೋಷದ ವಿಚಾರ. ಇದರಲ್ಲಿರುವ ಬರಪಣಿಗಳು ಸಾಮಾನ್ಯ ಮಟ್ಟಿನವಾದರೂ ಸಂಸ್ಕೃತದ ಬಗ್ಗೆ ವಿದ್ಯಾರ್ಥಿಗಳು ತೋರಿಸುವ ಪ್ರೀತಿಯನ್ನು ಹೊಗಳಲೇಕು

ಮದ್ರಾಸು ಸರಕಾರವೆ ಕೃಷಿ ಇಲಾಖೆಯವರು ಬಾಳೆಯ ಕುರಿತಾದ ಪರಿಚಯಾತ್ಮಕ ಪುಸ್ತಕವೊಂದನ್ನು ಪ್ರಕಟಿಸಿದ್ದಾರೆ. ಆತ್ಯನೂಲ್ಯವಾದ ಜೀವ ಸತ್ವಗಳಿಂದ ಕೂಡಿದ ಪೋಷಕ ಆಹಾರಗಳಲ್ಲಿ ಬಾಳೆಹಣ್ಣು ಪರಿಗಣಿಸಲ್ಪಟ್ಟಿದ್ದು, ಭಾರತದ ಬಾತಿ ಜಣ್ಣಿನ ಉತ್ಪಾದನೆಯ ನೂರರಲ್ಲಿ ಒಂದು ಪಾಲು ಮದ್ರಾಸು ರಾಜ್ಯದಿಂದ ಬರುತ್ತದೆ. ಇವರ ಕೃಷಿ ಮಾಡುವ ರೈತರಿಗೆ ಸಾಕಷ್ಟು ಹೆಚ್ಚು ಲಾಭವೂ ಸಿಗುತ್ತದೆ. ಬಾಳೆ ಹಣ್ಣಿನ ಕೃಷಿಯನ್ನು ಸುಧಾರಿಸುವ ಕುರಿತು ವೈಜ್ಞಾನಿಕ ತಿಳಿವಳಿಕೆಯನ್ನು ಮಾಡಿಸಿಕೊಟ್ಟ ಕಲ್ಪದಲ್ಲಿ ರೈತರು ತುಂಬ ಪ್ರಯೋಜನ ಪೊಂದಬಲ್ಲರು. ಈ ದೃಷ್ಟಿಯಿಂದ ಪುಸ್ತಕದ ಪ್ರಕಟಣೆಯು ಸ್ವಾಗತಾರ್ಹವಾಗಿದೆ. ಇಂಗ್ಲೀಷ್ ಭಾಷೆಯಲ್ಲಿ ಸರಳ ನೂಕಾಂಶಗಳಲ್ಲಿ ವಿಷಯಗಳನ್ನು ವಿವರಿಸಲಾಗಿದೆ. ಆದರೆ ಇಂಗ್ಲೀಷು ಬಜ್ಜಿ ರೈತರು ನಮ್ಮಲ್ಲಿ ವಿರಳವಾಗಿರುವಾಗ, ಪುಸ್ತಕದ ಪ್ರಯೋಜನ ಪಬೆಯುವವರಾರೂ? ಸರಕಾರದವರು ಈ ತೆರನಾದ ಸ್ರಜಾರಿ ಪುಸ್ತಕಗಳನ್ನು ದೇಶಭಾಷೆಗಳಲ್ಲಿ ಒದಗಿಸಿ ಕೊಡಲು ಪ್ರಯತ್ನಿಸಬೇಕೆಂಬ ನಾಪ್ಪ ಕೋರುತ್ತೇನೆ.

ಮಾನ್ಯಮಂತ್ರಿ ಭಕ್ತವತ್ಸಲಮುರು ದಿನಾಂಕ ೨-೬-೧೯೫೫ರಂದು ಬರೆದ ಸುನ್ನು ದಿಯನ್ನೊಳಗೊಂಡ, ಮದ್ರಾಸುರಾಜ್ಯದಲ್ಲಿ ಕೃಷಿ ಮತ್ತು ವಿಸಸಾಗಾರಿಕೆಯ ಕಾಯಕ್ರಮಗಳನ್ನು ವಿವರಿಸುವ ಸರಕಾರದ ಪ್ರಕಟಣೆಯೊಂದು ಈಗ, ಅಂದರೆ ಹೆಚ್ಚು ಕಡಿಮೆ ಆರು ತಿಂಗಳ ಬಳಿಕ, ನಮ್ಮ ಕೈಸೇರಿರುವುದು. ರಾಜ್ಯದಲ್ಲಿ ೧೯೫೫—೫೬ನೇ ಆರ್ಥಿಕ ವರ್ಷದಲ್ಲಿ ಕೈಗೊಳ್ಳಲಾಗುವ ಆಭಿವೃದ್ಧಿ ಪ್ರಯತ್ನಗಳ ಪೂರ್ಣವಿವರವನ್ನು ನಿವರಿಸುವ ಈ ಪುಸ್ತಕವ ಪ್ರಕಟಣೆಯಲ್ಲಿ ಸಂಭವಿಸಿವ ವಿಳಂಬವು ಸಮಂಜಸವೆಂದೇ ನಮಗೆ ತೋರುತ್ತದೆ. ಇಷ್ಟಿ ಸುಲಭ ರೀತಿಯಲ್ಲಿ ಹೇಳಲಾಗದ ವಿಷಯಗಳನ್ನು ಪ್ರತಿಯೊಬ್ಬ ಪ್ರಜೆಯೂ ತಿಳಿದು ಸುಸಸಮಾನಿಕೊಳ್ಳುವಂತೆ ಆಪೇಕ್ಷಣೀಯವಾಗಿರುವುದರಿಂದ, ಪೇರ ಭಾಷೆಗಳಲ್ಲಿ ಇಂಥ ಪ್ರಕಟಣೆಗಳನ್ನು ಹೊರಡಿಸಬೇಕೆಂದೂ ನಮಗನಿಸುತ್ತದೆ. ಎಗ್ ಕೃಷಿ ಕ್ಷೇತ್ರದ ಸುಗ್ಗತೆಗೂ ಸಿಸಸಾಗಾರಿಕೆಯ ವಿಸ್ತರಣೆಗೂ ಸರಕಾರ ಕೊಡುವ ಪುದ್ಯತ್ವನ್ನು ಸಾಮಾನ್ಯ ಜನರು ಸಪ ತಿಳಿಯಬಲ್ಲರು.

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10- ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8 ರೂ. 1000ಕ್ಕೆ

(ಪ್ರತಿಶತ ಪ್ರೀಮಿಯಮ್ ಸ್ವೀಕರಿಸಲಾಗಿದೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ
ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್.
ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂದ್ರಮ್, ಕಲ್ಲಿಕೋಟೆ
ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು

The Bombay Life Assurance Co., Ltd., Bombay.

(ಉತ್ತಮ ಸಾರಸ್ವತ ಬ್ರಾಹ್ಮಣರ ಆಡಿಗೆ, ರುಚಿ ರುಚಿಯಾದ ರೈಸ್‌ಪ್ಲೇಟ್)
ರುಚಿಕರವಾದ ಊಟ— ಹವೇಶೀರ್ (Airy) ವಸತಿ,
ಎರಡು ಊಟ, ಕೋಟ್ (Cot) ಇತ್ಯಾದಿ ಸೌಕರ್ಯ.
ತಿಂಗಳೊಂದರ ರೂ. 52/- ಮಾತ್ರ.
ವಿಶೇಷ ಮಾಹಿತಿಗೆ ಪ್ರತ್ಯಕ್ಷ ವಿಚಾರಿಸಿರಿ.

ಸದ್ಗುರು ಬೋರ್ಡಿಂಗ್ ಎಂಡ್ ಲೋಜಿಂಗ್

ಹಿಂದ್‌ಸಾಭಾ ಸಿನೇಮದ ಸಮೀಪ, ದಾದರ್, ಮುಂಬಯಿ ೧೪.
ವ್ಯವಸ್ಥಾಪಕ: ವಿ. ಯೆಸ್. ಪ್ರಭು



ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್ಡ್)

ಪದತಪ್ಪಿದ ಮತ್ತು ನಿಂತುಹೋದ ಮುಟ್ಟು
ದೋಷಗಳನ್ನು ಹತೋಟಿಗೆ ತರುವವು.

ಈ ಔಷಧಿ ಸೇವನೆಯಿಂದ ಯಾವ ಭಾಗವೆಗೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/-

Mrs. P. DEVEE, F. Ds. (N. J.) (ವಿ. ಪಿ. ಪಿ. ಪ್ರತ್ಯೇಕ)
CALCUTTA—40 ಸ್ವಾಕಿಸ್ಪರು: ಶಶಾಂಕಸೆನ್ಸ್, ಮಂಗಳೂರು

ಚತುರ್ ವಾರ್ಷಿಕ ಯೋಜನೆ

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ
ನೀವೂ ಭಾಗಿಗಳಾಗಿರಿ !!!
! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !

"ರಿಕರಿಂಗ್" ಠೇವಣಿ ಶಿ.

ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ನೇಕಡಾ 4½%.

ಬದನ ಬಿಚ್ಚಿದರೆಂಬ ಭೇದವಿಲ್ಲದ ಪ್ರತಿಯೊಬ್ಬರಿಗೂ
! ಅನುಕೂಲವಾದ ಯೋಜನೆ.

ನಿಮ್ಮ ಸವಿಸರದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ.

ವಿಜಯ ಬೇಂಕ್ ಲಿಮಿಟೆಡ್.

(೨ನೇ ಪುಟದಿಂದ)

ಯಿತು. ಜನತೆಯ ಹೆಸರಿನಲ್ಲಿ ಈ ಅಧಿಕಾರಿಗಳ ಕಾರುಭಾರೇ ಕಂಡುಬಂತು. ಇದನ್ನು ತಡೆಗಟ್ಟಲು ಶೀಘ್ರ ಉಪಾಯಗಳನ್ನು ಯೋಜಿಸುವುದು ಅನಿವಾರ್ಯವೆನಿಸಿತು. ಟಟೋ ಇದನ್ನು ಸಮರ್ಥರೀತಿಯಲ್ಲಿ ನೆರವೇರಿಸಿದರು. ೧೯೫೦ನೇ ಇಸವಿಯಲ್ಲಿ ಸರಕಾರವು ಆರ್ಥಿಕ ಮಂಡಳದ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸುವ ಪದ್ಧತಿಯನ್ನು ಬಿಟ್ಟುಗೊಟ್ಟು ಆಯಾ ಉದ್ಯೋಗದಲ್ಲಿ ದುಡಿಯುವ ಜನರನ್ನೆ ಆಳುಗಳ ಒಡೆಯರೆಂದು ಪರಿಗಣಿಸಲಾಯಿತು. ಕಾರ್ಮಿಕರೂ ಇತರ ನೌಕರರೂ ಸೇರಿಯೇ ಪ್ರತಿಯೊಂದೂ ಉದ್ದಿಮೆಯ ಅಭಿವೃದ್ಧಿಗೆ ಯೋಜನೆಗಳನ್ನು ರಚಿಸುವ ಹಾಗು ಅವನ್ನು ನಡೆಸಿಕೊಂಡು ಹೋಗುವ ನೂತನ ಸಂಪ್ರದಾಯವನ್ನು ಪ್ರಾರಂಭಿಸಲಾಯಿತು. ಇದರಿಂದ ನಿಜವಾದ ಅರ್ಥದಲ್ಲಿ ದುಡಿಯುವ ಜನತೆಯ ಕೈಗೆ ಸಂಗತ್ತು ಬರುವಂತಾಯಿತೆಂದರೆ ತಪ್ಪಾಗದು.

ಆರ್ಥಿಕಕ್ಷೇತ್ರದ ಈ ಸುಧಾರಣೆಯೊಂದಿಗೆ ಶಾಸನ ರಂಗದಲ್ಲಿಯೂ ಅಗತ್ಯವಾದ ಬದಲಾವಣೆಗಳನ್ನು ಮಾಡಲಾಯಿತು. ವಿಕೇಂದ್ರೀಕರಣದ ತತ್ವಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟದ್ದು ಇವುಗಳಲ್ಲಿ ಮಹತ್ವಪೂರ್ಣವಾದ ವಿಷಯ. ಜನತಾ ಸಮಿತಿಗಳ ವಶಕ್ಕೆ ಶಾಸನವನ್ನು ಜಾರಿ ಮಾಡುವ ಅಧಿಕಾರಗಳನ್ನು ಬಿಟ್ಟು ಕೊಟ್ಟದ್ದು ಮಾತ್ರವಲ್ಲದೆ ಇವುಗಳ ಅಧಿಕಾರ ಚಲಾವಣೆಯಲ್ಲಿ ಮೇಲಿನವರ ಹಸ್ತಕ್ಷೇಪಕ್ಕೆ ಎಡೆ ಇಲ್ಲದಂತೆ ಜಾಗರೂಕತೆಯನ್ನೂ ವಹಿಸಲಾಯಿತು. ಕೇಂದ್ರ ಸರಕಾರವು ಎಷ್ಟು ಅಗತ್ಯವೋ ಮತ್ತು ಅನಿವಾರ್ಯವೋ ಅಷ್ಟು ಅಧಿಕಾರವನ್ನು ಮಾತ್ರ ತನ್ನ ಕೈಯಲ್ಲಿ ಇಟ್ಟು ಕೊಂಡಿತು. ಇನ್ನೊಂದು ಚಮತ್ಕಾರದ ಸಂಗತಿಯೆಂದರೆ ಉತ್ಪಾದಕರ ಪ್ರತಿನಿಧಿಗಳ ಸಭೆಯನ್ನು ರಚಿಸಿ ಶಾಸನಗಳಲ್ಲಿ ಅವರ ಮಾತಿಗೆ ಮನ್ನಣೆಯನ್ನು ಕೊಡುವ ಅವಕಾಶ ಕಲ್ಪಿಸಿದ್ದು: ದೇಶದ ಸಂಪತ್ತು ಉತ್ಪಾದಕ ವರ್ಗದ ಸಹಕಾರವಿಲ್ಲದೆ ಪೆಚ್ಚಲಾರದೆಂಬುದೇ ಇದರ ತಿರುಳು. ಈ ಕ್ರಮಗಳು ಉಳಿದ ಕಮ್ಯುನಿಸ್ಟ್ ರಾಷ್ಟ್ರಗಳಿಗಿಂತ ಭಿನ್ನವಾಗಿ ವೆಯಲ್ಲದೆ, ಭಾರತದಂಥ ರಾಷ್ಟ್ರವೂ ಅನುಸರಿಸಬಹುದಾದಷ್ಟು ಆಕರ್ಷಣೆಯಿಂದ ಕೂಡಿವೆಯೆಂದು ಹೇಳಬಹುದು.

(೧ನೇ ಪುಟದಿಂದ)

ನಕಾರಾತ್ಮಕವಾದ ಉತ್ತರ ಬರುತ್ತದೆ. "ಸೀತೆಯು ಹಾಡುತ್ತಾಳೆ" ಎಂಬ ಅರ್ಥ ಅವನಿಗೆ ತಿಳಿಯಲೇ ಇಲ್ಲ. ಆದುದರಿಂದ ಕೇವಲ ಓದಲೂ ಬರೆಯಲೂ ಬಂದುದರಿಂದ ಪ್ರಯೋಜನವಿಲ್ಲ. ಒಂದು ಭಾಷೆಯನ್ನು ಇನ್ನೊಂದು ಭಾಷೆಯ ಲಿಪಿಯಲ್ಲಿ ಬರೆಯುವುದರಿಂದ ಏನಾದರೂ ಸ್ವಲ್ಪ ಪ್ರಯೋಜನ ಲಭಿಸುವುದಾದ ಪಕ್ಷದಲ್ಲಿಜಿದು ಆ ಭಾಷೆಯಲಿಪಿಯನ್ನು ಕಲಿಯುವ ತ್ರಾಸ ಮತ್ತು ಸಮಯಗಳ ಉಳಿತಾಯ ಎಂದು ಮಾತ್ರ ಹೇಳ ಬೇಕಾಗುತ್ತದೆ. "ಸೀತಾ ಗಾತೀ ಹೈ" ಎಂದು ಕನ್ನಡದಲ್ಲಿ ಬರೆದುವರಿಂದ ಹಿಂದಿಯ ಲಿಪಿಯನ್ನು ಕನ್ನಡ ಬಲ್ಲವನು ಕಲಿಯುವ ಕೆಲಸ ಉಳಿಯಿತಾಗಲಿ, ಆದಕ್ಕಿಂತ ಹೆಚ್ಚಿನದೇನೂ ಸಾಧಿಸಲಿಲ್ಲ.

ನನಗೆಲ್ಲರಿಗೂ ತಿಳಿದಿರುವಂತೆ ಒಂದು ಭಾಷೆಯಲಿಪಿಯನ್ನು ಕಲಿಯುವುದುಹೊಡ್ಡ ಕೆಲಸವೇನೂ ಅಲ್ಲ— ನಾಲ್ಕೈದು ಮನಸ್ಸು ಮಾಡಿದರೆ ಮೂರು ದಿನಗಳ ಅವಧಿಯಲ್ಲಿ ಯಾವುದೇ ಭಾರತೀಯ ಭಾಷೆಯ ಲಿಪಿಯ ಪರಿಚಯವನ್ನು ಮಾಡಿಕೊಳ್ಳಬಲ್ಲರು; ಪ್ರಾದೇಶಿಕ ಭಾಷೆಯನ್ನು ಬರೆದಷ್ಟೇ ಚೆನ್ನಾಗಿ ಅನ್ಯ ಭಾಷೆಯನ್ನೂ ಬರೆಯಬಲ್ಲರು. ಆದುದರಿಂದ ನಾವು ಒಂದೇ ಲಿಪಿಯನ್ನು ಭಾರತದಾದ್ಯಂತ, ಎಲ್ಲ ಪ್ರಾದೇಶಿಕ ಭಾಷೆಗಳಲ್ಲೂ ಬಳಸುವುದರಿಂದ ದೊರಕುವ ಲಾಭವೆಂದರೆ ಅಕ್ಷರ ಜ್ಞಾನದ ತ್ರಾಸವನ್ನು ಹೋಗಲಾಡಿಸುವುದಷ್ಟೇ ಎಂದು ನಿರ್ಣಯಿಸಿದರೆ ತಪ್ಪಾಗದು; ಆದರೆ ಇದು ಮಾಡುವ ಅನಾಹುತವು ಇಷ್ಟಕ್ಕೇ ನಿಲ್ಲುವುದಿಲ್ಲ. ಭಾರತೀಯ ಭಾಷೆಗಳ ವೈಶಿಷ್ಟ್ಯಗಳಲ್ಲಿ ಅವುಗಳ ಲಿಪಿಯೂ ಒಂದೆಂಬುದನ್ನು ಗಮನಿಸಿದರೆ ಆ ಲಿಪಿಗಳ ಅಳವಿಗೆ ಈ ಸುಧಾರಣೆ ಕಾರಣಭೂತ ವೆನಿಸುವುದು. ಭಾರತೀಯ ಭಾಷೆಗಳಲ್ಲಿ ಬರೆದ ಸಾಂಸ್ಕೃತಿಕ ಮಹತ್ವದ ಗ್ರಂಥಗಳನ್ನೆಲ್ಲ ಮೂಲಲಿಪಿಯಲ್ಲಿ ಮುದ್ರಿಸಿ ಪ್ರಕಟಿಸಲು ಸಾಧ್ಯವಾಗುವುದು. ಹೀಗೆ ಪ್ರಾದೇಶಿಕ ಭಾಷೆಗಳು ತಮ್ಮದೆಂಬ ಅಮೂಲ್ಯವಸ್ತು ವೊಂದನ್ನು ಕಳೆದುಕೊಂಡು ಮುಂದಿನ ಪೀಳಿಗೆಯ ಶಾಪಕ್ಕೆ ಗುರಿಯಾಗಬೇಕಾಗುವುದು.

ಸುಧಾರಣೆಯ ಹೆಸರಿನಲ್ಲಿ, ಯುರೋಪು ಚೀನಗಳ ಉದಾಹರಣೆಯನ್ನು ಕೊಡುತ್ತ ನಾವೂ ಆವರಂತಾಗೋಣ ಎಂದು ವಾದಿಸುವುದಾಗಲೀ ಹಾಗೆ ಮಾಡದಿದ್ದರೆ ನಾವು ಹಿಂದುಳಿದು ನಾಚಿಕೆಕ್ಕೊಳ್ಳಬೇಕಾದ ಪ್ರಸಂಗ ಬರುವುದೆಂದಾಗಲೀ ಹೇಳುವವರು ತಾವು ಮಂಡಿಸುವ ವಾದಕ್ಕೆ ಈ ಕಾಲಕ್ಕೆ ಆಪ್ಯೋದು ಆಗತ್ಯದ್ದೇ, ಅಷ್ಟು ಹೆಚ್ಚು ಪ್ರಯೋಜನ ಕಾರಿಯಾದದ್ದೇ ಎಂಬುದನ್ನು ದಯವಿಟ್ಟುಪರ್ಯಾಲೋಚಿಸಬೇಕೆಂದು ನಮಗನಿಸುತ್ತದೆ. ಭಾರತೀಯ ಭಾಷೆಗಳೆಲ್ಲಕ್ಕೂ ದೇವನಾಗರಿ ಸರಿಹೊಂದುವುದಿಲ್ಲವೆಂದೂ ರೋಮನ್ ಲಿಪಿಯು ಸಹ ಉಚ್ಚಾರದ ದೃಷ್ಟಿಯಿಂದ ಅಪ್ರಯೋಜಕವೆಂದೂ ಮನಗಂಡರೆ, ಒಂದೇ ಲಿಪಿಯ ಮೋಹವನ್ನು ಬಿಟ್ಟುಗೊಟ್ಟು, ಪ್ರಾದೇಶಿಕ ಭಾಷೆಗಳ ಅಭಿವೃದ್ಧಿಗಾಗಿ ಪ್ರಯತ್ನಿಸುವುದೇ ಅವೇಕ್ಷಣೀಯವೆಂಬ ತಿಳಿವಳಿಕೆ ಮೂಡುತ್ತದೆ. ಪ್ರಾದೇಶಿಕ ಭಾಷೆಗಳಿಗೆಲ್ಲ ಒಂದೇ ಲಿಪಿಯನ್ನು ಬಳಸುವುದರಿಂದ ರಾಷ್ಟ್ರೀಯ ಐಕ್ಯದ ಭಾವನೆಯನ್ನು— ಈಗ ಅದು ಇಲ್ಲವಾದರೆ— ಹೊಸತಾಗಿ ಬೆಳೆಸುವುದಕ್ಕೇನೂ ಬರಲಾರದು. ಏಕೆಂದರೆ ಲಿಪಿಯುಳ್ಳ ಹದಿನಾಲ್ಕು ಪ್ರಾದೇಶಿಕ ಭಾಷೆಗಳನ್ನು ಹೊರತಾಗಿ ಬಾರತದಲ್ಲಿ ವಾತಿನಲ್ಲಿಯಷ್ಟೇ ಉಳಿದಿರುವ ಸಾವಿರ ರು ಭಾಷೆಗಳನ್ನೂ ಕಾಣಬಹುದು. ಆದುದರಿಂದ ದುಡುಕಿ ನಡೆಯುವುದಕ್ಕೆ ಇದು ಸಮಯವಲ್ಲ—ಹಿಂದಿಯ ಹೆಸರಿನಲ್ಲಿ ಅನ್ಯ ಭಾಷೆಗಳವರ ಮನನೋಯಿಸುವುದೂ ಇಷ್ಟವಲ್ಲ.

—ಕಾರ್ತಿಕೇಯ.

ಸೆಕೆಂಡರಿ ಶಾಲೆಗಳೂ ಜಿಲ್ಲಾ ಲೈಬ್ರೆರಿಗಳೂ
'ನವಯುಗ'ವನ್ನು ತರಿಸಿಕೊಳ್ಳುವಂತೆ ಮುಂಜೂರಾಗಿದೆ.

ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮದ್ರಾಸಿನ ವಿದ್ಯಾಂಗದ ಡೈರೆಕ್ಟರರೂ, ಜಿಲ್ಲೆಯ ಲೈಬ್ರೆರಿಗಳ ಉಪಯೋಗಾರ್ಥವಾಗಿ ಪ. ಕ. ಜಿಲ್ಲಾ ಲೋಕಲ್ ಲೈಬ್ರೆರಿ ಅಥೋರಿಟಿ ಕಮಿಟಿಯವರೂ 'ನವಯುಗ' ವಾರಪತ್ರಿಕೆಯನ್ನು ಮುಂಜೂರು ಮಾಡಿರುತ್ತಾರೆ.

1921ರಲ್ಲಿ ಆಯೋಗ್ಯಮಂತ್ರಿ, ಶ್ರೀ ಎ. ಬಿ. ಶೆಟ್ಟರಿಂದ ಸ್ಥಾಪಿಸಲ್ಪಟ್ಟು ಅವಿರತವಾಗಿ ಜನಸೇವೆ ಮಾಡುತ್ತಿರುವ ರಾಷ್ಟ್ರೀಯ ವಾರಪತ್ರಿಕೆ 'ನವಯುಗ'ಕ್ಕೆ ಎಲ್ಲಾ ಸೆಕೆಂಡರಿ ಶಾಲೆಗಳೂ, ಜಿಲ್ಲೆಯ ಎಲ್ಲಾ ಲೈಬ್ರೆರಿಗಳೂ, ಚಂದಾದಾರರಾಗಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮೆನೇಜರ್,
ವಾರ್ಷಿಕ ಚಂದಾ ರೂ. 5-12-0 ಮಾತ್ರ. ನವಯುಗ, ಉಡುಪಿ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಯನ್ನು ಇಂದೇ ತರಿಸಿಕೊಳ್ಳಿರಿ.

ಬೆಲೆ:— ಸಾಧಾರಣ ಪ್ರತಿ— ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ— ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

ದೊರೆಯುವ ಸ್ಥಳಗಳು:-1) ನವಭಾರತ ಪುಸ್ತಕ ಭಂಡಾರ, ಉಡುಪಿ.
2) ನವಯುಗ ಪ್ರೆಸ್, ಉಡುಪಿ, ದ. ಕ.

ಶ್ರೀಮತಿ ಕೆ. ದೇವಕಿ ಎಂ. ಶೆಟ್ಟಿಯವರು ಬರೆದಿರುವ,
ವಿನೋದದೊಡನೆ ವಿಚಾರವನ್ನೂ ಪ್ರಚೋದಿಸುವ
ನಕ್ಕು ನಗಿಸುವ ಆರು ನಗೆನೋಟಗಳು—

ಯಮುನನ್ನು ಸೋಲಿಸಿದ ವೀರ ರಮಣಿ, ಹತ್ತು ಪುಸ್ತಕಗಳಿಂದ ಹತ್ತು ಪಾರಾ ಕದ್ದು ಪೋಣಿಸಿದ ಸಾಹಿತಿ ಇವರ ಚಿತ್ರವನ್ನೂ ಅಕ್ಕಪಕ್ಕದ ಮನೆಯವರ ಕಾಟ ಕೂಟದ ಮರ್ಮವನ್ನೂ, ನಿಶ್ಚೈಸಿದ್ದು 25 ಸಾವಿರ ವರದಕ್ಷಿಣೆ, ಸಿಕ್ಕಿದ್ದು ಬರೇ ವಧುದಕ್ಷಿಣೆ ಇದರ ಚಮತ್ಕಾರ ವೈಖರಿಯನ್ನೂ ತಿಳಿಯಬೇಕೇ?ಹಾಗಿದ್ದರೆ ಇಂದೇ ಪ್ರತಿಯೊಂದನ್ನು ತರಿಸಿಕೊಳ್ಳಿರಿ. ಬೆಲೆ: ೦—೧೦—೦

ಕರ್ನಾಟಕದಲ್ಲೆಲ್ಲ ಜನಪ್ರಿಯವಾದ
ಅತಿ ಕಡಿಮೆ ಬೆಲೆಯ ಕೈ ಹೊತ್ತಿಗೆ—

ಗೀತೆಯ ಕೈಗನ್ನಡಿ

ಹೊಸಕೆರೆ ಚಿದಂಬರಯ್ಯನವರ
ಸರಳ ಕನ್ನಡ ಅರ್ಥಸಹಿತವಾದ
ಭಗವದ್ಗೀತೆ

ಬೆಲೆ: ೦—೮—೦

ನವಯುಗ ಪ್ರೆಸ್, ಉಡುಪಿ. ಅಥವಾ
ನವಭಾರತ ಬುಕ್ ಡಿಪೊ, ಉಡುಪಿ.

ಸಾಲ ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ. ಸುಲಭ ಕಂತಿನ ಮರುಪಾವತಿ. ಇನ್ಸೂರೆನ್ಸಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿ ಮಾಡಿಕೊಳ್ಳುವುದು.

P. o. Box No. 3219, BOMBAY 3.

ವಿವಿಧ ಪಾತ್ರೆಗಳು

ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಿಯಾಯಿಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಯಂಜೆ ವ್ಯಾಸಾಚಾರ್ಯರ
ಪಾತ್ರೆ ಭಂಡಾರ,
ರಥಬೀದಿ ಉಡುಪಿ.

Edited, Printed & Published By K. H. Shetty at the Navayuga Press, Udipi, S. India

REGD. NO.
M. 3618

LICENCE NO. 31
Licensed to Post without Prepayment

ಸಮಾಜ

ಸಂಪುಟ ೩೪
VOL. 34

ಉಡುಪಿ, 23—12—1954

ಸಂಚಿಕೆ ೧೬
NO. 16

ಅವಕಾಶದ ಅಭಾವ!

ಜಗತ್ತಿನ ಬೇರೆ ಬೇರೆ ಭಾಗಗಳಿಂದ ಇಂಜಿನಿಯರುಗಳನ್ನು ಕರೆಸಿಕೊಂಡು ಅವರ ನೆರವಿನಿಂದ ಭಾರತದಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸುವ ಸರಕಾರದ ಧೋರಣೆಯಿಂದ ದೇಶದ ಅಭಿವೃದ್ಧಿಯ ಮೇಲೆ ಸೈತಿಕವಾಗಿ ಅನಿಷ್ಟ ಪರಿಣಾಮವಾಗುತ್ತದೆ. ಇದರಿಂದ ನಮ್ಮ ಪೇಧಾವಿಗಳೂ ಮಹತ್ವಾಕಾಂಕ್ಷಿಗಳೂ ಆದ ಇಂಜಿನಿಯರುಗಳಿಗೆ ತಮ್ಮ ಸ್ವಂತ ಕ್ರಿಯಾಶಕ್ತಿಯನ್ನೂ ಬುದ್ಧಿ ಸಾಮರ್ಥ್ಯವನ್ನೂ ಹೆಚ್ಚಿಸಿಕೊಂಡು ಉತ್ಪಾದನೆಯಲ್ಲಿ ಹೆಚ್ಚಳವನ್ನು ಸಾಧಿಸಲು ಅವಕಾಶವಾಗುತ್ತದೆ.

—ಎಂ. ವಿಶ್ವೇಶ್ವರಯ್ಯ

ನಮ್ಮ ಸಂಸತ್ತು ಹಾಗು ಶಾಸನ ಸಭೆಗಳಲ್ಲಿ ನಡೆವ ಪ್ರಶ್ನೋತ್ತರಗಳಿಂದಲೂ ಉದ್ಯೋಗ ವಿನಿಮಯ ಕಾರ್ಯಾಲಯಗಳ ಪ್ರಕಟಣೆಗಳಿಂದಲೂ ದೇಶದಲ್ಲಿ ಒಳ್ಳೆಯ ಶಿಕ್ಷಣವನ್ನು ಹೊಂದಿದ, ತಾಂತ್ರಿಕ ವಿಷಯಗಳಲ್ಲಿ ತಜ್ಞರಾದ ಅನೇಕರು ಕೆಲಸವಿಲ್ಲದೆ ಕುಳಿತಿರುವರೆಂದು ತಿಳಿದು ಬರುತ್ತದೆ. ಇವರಿಗೆ ಯೋಗ್ಯ ಕೆಲಸವನ್ನು ಕೊಡಿಸುವ ವಿಷಯದಲ್ಲಿ ಸರಕಾರವವರು ಸಾಕಷ್ಟು ಕರ್ತವ್ಯತೆಯನ್ನು ತೋರಿಸುತ್ತಿಲ್ಲವೆಂದು ಹೇಳಲಾಗುತ್ತದೆ. ಉದಾಹರಣೆಗಾಗಿ, ಗ್ರಾಮಾಂತರ ಪ್ರದೇಶಗಳಲ್ಲಿ ವೈದ್ಯಕೀಯ ಸೌಲಭ್ಯಗಳನ್ನು ಹೆಚ್ಚಿಸಬೇಕೆಂದು ಹೇಳುತ್ತಿರುವ ಸರಕಾರದವರು ಹಳ್ಳಿಯ ಎಷ್ಟೋ ಆಸ್ಪತ್ರೆಗಳಿಗೆ ವೈದ್ಯರ, ಸೂಲಗಿತ್ತಿಯರ, ದಾದಿಯರ ನೇಮಕವನ್ನು ಮಾಡುತ್ತಿಲ್ಲ. ಇವರ ಅಭಾವವಿದೆಯೆಂಬುದು ಇಪಕ್ಕೆ ಕಾರಣವಲ್ಲ—ಹಣಾಭಾವವೂ ನೇಮಕಗಳಾಗದಿರುವುದಕ್ಕೆ ಮುಖ್ಯ ಹೇತುವಲ್ಲ. ಅವಶ್ಯಕತೆಗಳ ಸ್ಪಷ್ಟ ಕಲ್ಪನೆ ಇಲ್ಲದಿರುವುದೂ ದಕ್ಷ ಮೇಲ್ವಿಚಾರಣೆ ನಡೆಸದಿರುವುದೂ ಅನಾಸ್ಥೆಯನ್ನು ಪ್ರದರ್ಶಿಸುವುದೂ ವಿರೋಧಾಭಾಸಕರವೆಂಬ ತೋರುವ ವರ್ತನೆಗಳಿಗೆ ಕಾರಣವಾಗುತ್ತವೆ.

ತಾಂತ್ರಿಕ ವಿಷಯದಲ್ಲಿ ತಜ್ಞರಾದವರಲ್ಲಿ ಕಂಡು ಬರುವ ನಿರುದ್ಯೋಗಕ್ಕೂ ಈ ಕಾರಣಗಳೆನ್ನು ಅನ್ವಯಿಸಬಹುದು. ನಮ್ಮ ದೇಶದಲ್ಲಿ ದೊಡ್ಡ ದೊಡ್ಡ ಆಣೆಕಟ್ಟು, ನೀರಾವರಿ ಮತ್ತು ವಿದ್ಯುಚ್ಛಕ್ತಿ ಯೋಜನೆಗಳು ನಡೆಯುತ್ತಿದ್ದರೂ ನಮ್ಮಲ್ಲಿಯ ಇಂಜಿನಿಯರರಿಲ್ಲರಿಗೂ ಕೆಲಸ ಸಿಗುತ್ತಿಲ್ಲವೆಂದರೆ ಆಶ್ಚರ್ಯವಾಗುತ್ತದೆ. ವಿದೇಶಗಳೊಡನೆ ಹೋಲಿಸಿ ನೋಡಿದರೆ ನಮ್ಮಲ್ಲಿ ಔದ್ಯೋಗಿಕ ಹಾಗು ತಾಂತ್ರಿಕ ವಿಷಯಗಳಲ್ಲಿ ಶಿಕ್ಷಣ ಕೊಡುವ ಕ್ರಮವು ಬಹಳ ಮಿತವಾದ ಕ್ಷೇತ್ರದಲ್ಲಿಯಷ್ಟೇ ಬಳಕೆದುಲ್ಲಿದ್ದಂತೆ ಕಂಡುಬರುತ್ತದೆ. ಕೈಗಾರೀಕರಣವನ್ನು ಪೆಚ್ಚಾಗಿ ಸಾಧಿಸಿದ ಜಾಗೆಲ್ಲ ನಾವು ಔದ್ಯೋಗಿಕ ಮತ್ತು ತಾಂತ್ರಿಕ ಶಿಕ್ಷಣದ ಕಡೆಗೆ ಅತ್ಯಧಿಕ ಗಮನವನ್ನು ಪೂರೈಸಬೇಕೆಂಬುದು ನಿರ್ವಿವಾದ- ಈ ಪರಿಸ್ಥಿತಿ ಈಗಲೇ ನಿರ್ಮಾಣವಾಗಿದೆಯೆಂದು ಅನೇಕರು ಅಭಿಪ್ರಾಯಪಟ್ಟು ಶಿಕ್ಷಣ ಪದ್ಧತಿಯನ್ನು ವ್ಯಾಧಮಿಕ ಘಟ್ಟದಿಂದಲೇ ಆಮೂಲಾಗ್ರ ಪರಿವರ್ತನೆಗೆ ಗುರಿಪಡಿಸಬೇಕೆಂದು ಬಲವಾಗಿ ಪ್ರತಿಪಾದಿಸುತ್ತಿದ್ದಾರೆ. ಹೀಗಿದ್ದರೂ ನಾವು ನಮ್ಮ ದೇಶದ ವಿಸ್ತಾರ ದೃಷ್ಟಿಯಿಂದ ಬಹಳ ಕಡಮೆ ಇಂಜೀನಿಯರರನ್ನು ತರಬೇತು ಗೊಳಿಸುತ್ತಿದ್ದೇವೆ ಎಂಬ ಮಾತಿನಲ್ಲಿ ಸದ್ಯಕ್ಕೆ ತಪ್ಪಿದೆ ಅಂಶವೇನೂ ಇಲ್ಲ ಆದಾಗ್ಯೂ ನಮ್ಮ ಇಂಜೀನೀಯರುಗಳು ಕೆಲಸವಿಲ್ಲದೆ ಕುಳಿತಿರುವರೆಂದರೆ ಭಾರತದ ಪ್ರಗತಿಯ ಕುರಿತು ದೊಡ್ಡ ದೊಡ್ಡ ಮಾತನಾಡುತ್ತಿರುವವರ ಮೇಲೆ ಕನಿಕರ ಮೂಡುತ್ತದೆ

ಪುಣೆಯ ಇಂಜಿನಿಯರಿಂಗ್ ಕಾಲೇಜಿನ ಶತಾಬ್ದಿ ಮಹೋತ್ಸವದ ಶುಭ ಸಂದರ್ಭದಲ್ಲಿ (ದಿನಾಂಕ ೧೬) ಭಾಷಣ ಮಾಡಿದ ಕನ್ನಡದ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಒಗಟನ್ನು ಸಮರ್ಪಕವಾಗಿ ಬಿಡಿಸಿದರು – ನಮ್ಮ ದೇಶದಲ್ಲಿ ಬುದ್ಧಿವಂತರಾದ, ಕರ್ತೃತ್ವಶಾಲಿಗಳಾದ, ಉತ್ಸಾಹದಿಂದ ದುಡಿಯಬಲ್ಲ ಜನರಿದ್ದರೂ ಅವರಿಗೆ ಅನುಕಾಶವನ್ನು ಕೊಡದೆ ವಿದೇಶಗಳಿಂದ ತರಿಸಿಕೊಂಡ 'ತಜ್ಞ'ರನ್ನು ಸರಕಾರದವರು ಗೌರವಿಸುವುದೂ ಆ ಶ್ರಯಿಸುವುದೂ ಸಮಸ್ಯೆಯ ಮೂಲವೆಂದು ಅವರು ಹೇಳಿದರು ವಿಶಿಷ್ಟ ವಿಷಯಗಳಲ್ಲಿ ಪರಿಣಿತರಾದ ವಿದೇಶಗಳ ತಜ್ಞರ ಕೈಯಲ್ಲಿ ನಮ್ಮ ಇಂಜಿನಿಯರುಗಳು ತಮ್ಮ ಪ್ರತಿಭೆಯನ್ನೂ ಪ್ರಭೆಯನ್ನೂ ಹೊರಗೆಡವಲಾರದವರಾಗಿದ್ದಾರೆಂದರೆ ಅತಿಶಯೋಕ್ತಿಯಾಗದು. ಏಕೆಂದರೆ, ನಮ್ಮವರು ಎಷ್ಟು ಶ್ರದ್ಧೆಯಿಂದ ನಡೆದರೂ ಅದರ ಶ್ರೇಯಸ್ಸನ್ನು ಯೋಜನೆಯ ಮುಖ್ಯ ಹೊಣೆಗಾರನೆಂದೆನಿಸಿಕೊಳ್ಳುವ ವಿದೇಶದ ವಿಜ್ಞಾನಿಗೇಯೇ ಹೋಗುತ್ತದೆಯಲ್ಲದೆ, ಕಾರ್ಯವನ್ನು ಬಿಟ್ಟು ಹೋಗಲಿದ್ದ ಮಕ್ಕಳ ಚಿತ್ರವನ್ನು ತೆಗೆದಿದ್ದರು ಆದರ ಪ್ರತಿಯೊಂದನ್ನು ಎಲ್ಲ ವಿದ್ಯಾರ್ಥಿಗಳೂ ಕೊಂಡುಕೊಳ್ಳಬೇಕೆಂದು ಹೇಳುತ್ತಾ ಶಿಕ್ಷಕರು "ನೀವು ಪ್ರೌಢ ಪೊಡ್ಡನರಾದಾಗ ಆಸನ್ನು ನೋಡಿ ಬಾಲ್ಯದನೆನಪನ್ನು ಮಾಡಿಕೊಳ್ಳಬಹುದು—ಇಪಳು ನೀತಿ, ಈಗ ಆರು ಮುದ್ದಳತಾಯಿ; ಇವನು ರಾಮು, ನೆಯಲ್ಲಿ ಅಧಿಕಾರಿ; ಆದು ಭೀಮ, ಜಗತ್ಪಸಿದ್ಧ ಕ್ರೀಡಾಪಟುವಂದು ಸಂತೋಷಿಸಬಹುದು" ಎಂದರು.

ಆಗ ಯಾರೋ ಒಬ್ಬ ಹಿಂದಿನ ಬೆಂಚಿನವ "ಹೌದು,ಇವು ನಮ್ಮ ಮಾಸ್ಟ—ಇವರು ಆಗುವ ಅವಕಾಶವಿಲ್ಲದೆ ಸತ್ತುಹೋದರು! ಎಂದು ಅಳಲೂ ಬಹುದು" ಎಂದು ಧ್ವನಿ ಸೇರಿಸಿದ.

ತಿ ಬೆಳೆದೀತೆಂದು ಹೇಳುವಂತಿಲ್ಲ– ಅವರ ಸಹಾಯಕ್ಕೆ ಸಹ ವಿದೇಶಗಳಿಂದಲೇ ಅಷ್ಟ ತಜ್ಞರಲ್ಲದ ಇಂಜಿನಿಯರುಗಳನ್ನು ನಾವು ತರಿಸಿಕೊಳ್ಳ ಬೇಕಾದೀತು. ಆಗ ನಮ್ಮಲ್ಲಿ ಯೋಗ್ಯ ಶಿಕ್ಷಣ ಹೊಂದಿದ ಜನರು ಮಾಡಬೇಕಾದುದೇನು? ಭಾರತೀಯ ಇಂಜಿನಿಯರುಗಳ ಬುದ್ಧಿ ಸಾಮರ್ಥ್ಯದ ಮೇಲೆ ಸರಕಾರಕ್ಕೆ ವಿಶ್ವಾಸ ಕಡಮೆಯಾಗುತ್ತಾ ಬಂದ ಸಕ್ಷನಲ್ಲಿ ಭಾರತವು ಪ್ರಗತಿಪಥದಲ್ಲಿ ಮುನ್ನಡೆಯುವುದು ಕಷ್ಟ ಸಾಧ್ಯ.

ಸಾರ್ವಜನಿಕರಂಗವೂ ಖಾಸಗಿ ವಲಯವೂ ಕೂಡಿಯೇ ಕೆಲಸ ಮಾಡುವ ಭಾರತದ ಔದ್ಯೋಗಿಕ ಕ್ಷೇತ್ರದಲ್ಲಿ ನಮ್ಮ ಇಂಜಿನಿಯರುಗಳಿಗೆ ಹೆಚ್ಚು ಅವಕಾಶಗಳನ್ನು ಒದಗಿಸಿಕೊಡುವುದು ಬಹಳ ಆವಶ್ಯಕತೆ. ತೀರ ಅನಿವಾರ್ಯವೆನಿಸಿದ ಪ್ರಸಂಗಗಳಲ್ಲಿಯಷ್ಟೇ ತಕ್ಕ ಮಾಹಿತಿಯನ್ನೊದಗಿಸುವ ಉದ್ದೇಶದಿಂದ ತಜ್ಞರನ್ನು ಬರಮಾಡಿಕೊಂಡರೆ ಕೆಡುಕಿಲ್ಲ. ಆದರೆ ಗೃಹೋದ್ಯಮಗಳ ಪುನರ್ಜನ್ಮದಿಂದ ಹಿಡಿದು ಉತ್ಕೃನ ಕಾರ್ಖಾನೆಯನ್ನು ಸ್ಥಾಪಿಸುವ ವರೆಗೆ ಪ್ರತಿಯೊಂದು ಪ್ರಶ್ನೆಯನ್ನು ನಿರ್ಣಯಿಸುವುದಕ್ಕೂ ಕಾರ್ಯಕ್ರಮವನ್ನು ರೂಪಿಸಿ ನಡೆಸುವುದಕ್ಕೂ ವಿದೇಶಗಳ ತಜ್ಞರನ್ನು ಅವಲಂಬಿಸಿದರೆ ನಮ್ಮ ಇಂಜಿನಿಯರುಗಳ ಕುರಿತು ಅಯ್ಯೋ ಪಾಪ ಎಂದು ಸಂತಾಪ ಸೂಚಿಸಬೇಕಾಗುತ್ತದೆ. ಕೇಳಿ ಹೆಸರಿಲ್ಲದೆ ನಮ್ಮ ಇಂಜಿನಿಯರುಗಳ ಕ್ರಿಯಾಶಕ್ತಿಯು ವೈದ್ಧ ಹಸ್ತಾಸವಾಗುವುದಕ್ಕೆ ನಾವು ಬಿಡಬಾರದು ಅವರು ದೊಡ್ಡ ಕೆಲಸವನ್ನು ಮಾಡದಿದ್ದರೂ ತಿಂಡ್ಯಾರನ ನುಡಿಗಳನ್ನು ಕೇಳುವ ಪರಿಸ್ಥಿತಿಯನ್ನು ತಂದುಕೊಳ್ಳಲಾಗದು. ವಿದ್ದರೂ ಅವಕಾಶ

(೧೫ನೇ ಪುಟ ನೋಡಿರಿ)

THE CANARA INDUSTRIAL & BANKING SYNDICATE LTD.
Estd: 1925 H. O: UDIPI, S. India

ನಿಮ್ಮ ಧನವು ಮಾತನಾಡಬಲ್ಲುದಾದರೆ.

ಎಲ್ಲರಂತೆ ನಮಗೂ ಸಂದರ್ಭಾನುಸಾರ ನಗದು ಧನದ ಆವಶ್ಯಕತೆ ಬೀಳುವುದು. ಆ ಕಾಲಕ್ಕೆ ನೀವು ಸ್ವಲ್ಪ ಧನವನ್ನು ಕೊಡುತೀ ಪಡೆಯಬಲ್ಲಿರಿ ಹೀಗಾಕಾರಿ ಧನವನ್ನು ಮನೆಯಲ್ಲೇ ಇರಿಸಿಕೊಳ್ಳುವುದಕ್ಕೆ ಬದಲಾಗಿ ರಾತ್ರಿ ಜಗಲೂ ಸುರಕ್ಷಿತ ಬಡ್ಡಿತೆಯಲ್ಲಿವಲು ನೀವು ಅಪೇಕ್ಷಿಸುವಿರಿ. ಧನವನ್ನು ಠೇವಣಿಗಿಲು ನೀವು ತಂಬಾಖಿಲ್ಲ ಸಾನರೂ ಅದಕ್ಕೆ ಬಡ್ಡಿ ಸಿಕ್ಕಿದರಾಗಬಹುದೆಂಬ ಆಸೆಕ್ಷೆ ನಿಮ್ಮದಿದೆ. ನೀವು ಸಾಲ ಪಡೆಯಲು ಸೌಕರ್ಯಗಳಿರುವ ಬೇರೆಕಡೆಲ್ಲ ನಿಮ್ಮ ಧನವನ್ನು ಠೇವಣಿಯಿಡಲು ನೀವು ಇಚ್ಛಿಸುವಿರಿ. ಬೇರೆಕಡೆಲ್ಲ ತೆರೆಯಲಾಗಿನ ಬೆಳ್ಳಕೇ ನಮಗೆ ಯಾವ ಕಾಲದಲ್ಲೂ ಎಲ್ಲಾ ಸೌಕರ್ಯಗಳನ್ನು ಒದಗಿಸಬಲ್ಲೆವು. ೧೦ ಶಾಖಾ ಕಛೇರಿಗಳನ್ನು ನಮ್ಮ ಬ್ಯಾಂಕು ಶೀಘ್ರ ಬೇಸಾಜೆಯ ಸೌಲಭ್ಯಗಳನ್ನು ಒದಗಿಸಬಲ್ಲೆವು ನಿಮ್ಮ ಅನುಕೂಲತೆಗಳಿಗಾಗಿ ಏಪಥ ಬೇಂಕಿಂಗ್ ಸೇವೆಗಳನ್ನು ಕ್ಷೀಣೀಕರಿಸಲಾಗಿದೆ. ಆದುದರಿಂದ ನಮ್ಮಲ್ಲಿಯೇ ಬೇಂಕಿಂಗ್ ವ್ಯವಹಾರವನ್ನು ನಾವಿ ಆಮೂಲ್ಯ ಸಮಯವನ್ನು ಉಳಿಸಿಕೊಳ್ಳಿರಿ.

ಚಲಾವಣೆ ಭಂಡವಾಳ ರೂ. ೬,೫೦,೦೦,೦೦೦

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ.

ಸ್ಥಾಪನೆ: ೧೯೨೫] [ಪ್ರಧಾನ ಕಛೇರಿ: ಉಡುಪಿ, ಸ. ಭಾರತ.

ಶಾಂತಿ ದೂತನ ಹಿತ ವಚನಗಳು

ಕ್ರಿಸ್ತ ಜನನದ ಹಬ್ಬ ಮತ್ತದರ ಮಹತ್ವ

ಪ್ರಪಂಚದ ಎಲ್ಲ ದೇಶಗಳಲ್ಲಿಯೂ ಈ ವಾರಾಂತ್ಯದಲ್ಲಿ ಕ್ರಿಸ್ತ ಜನನದ ಹಬ್ಬವು ಅತ್ಯಂತ ಸಂಭ್ರಮದಿಂದ ಆಚರಿಸಲ್ಪಡುತ್ತದೆ. ಕ್ರೈಸ್ತರ ಪಾಲಿಗೆ ಇದರಷ್ಟು ದೊಡ್ಡ ಹಬ್ಬವು ಇನ್ನೊಂದಿಲ್ಲ. ಇದು ಮಾನವ ಜನಾಂಗಕ್ಕೆ ಶಾಂತಿ ದೂತನೊಬ್ಬನನ್ನು ದಯಾಮಯನಾದ ದೇವರು ಕರುಣಿಸಿದ ಪವಿತ್ರವಾದ ದಿನ- ಪ್ರೇಮವೇ ಸರ್ವಸ್ವ ಎಂಬ ಮಂತ್ರವನ್ನು ಜಪಿಸಿದ ಯೇಸುವನ್ನು ಅಂದು ಪ್ರಕಾಶ ಮಾನವಾದ ನಕ್ಷತ್ರ ವೊಂದರ ಗತಿಯನ್ನನುಸರಿಸಿ ಹೋದ ಮಹಾನುಭಾವರು ದನದ ಕೊಟ್ಟಿಗೆಯಲ್ಲಿ ಶಿಶು ರೂಪದಲ್ಲಿ ಕಂಡರು ಮನುಷ್ಯ ವರ್ಗದ ಕಲ್ಯಾಣ ಚಿಂತನೆಯಿಂದ ಅಂದು ಸಲ್ಲಿಸಿದ ಪ್ರಾರ್ಥನಾ ಶ್ಲೋಕ ಇಂದಿಗೂ ಮರೆಯದೆ ಸ್ಮರಿಸಲ್ಪಡುತ್ತಿದೆ; ಸ್ತುತಿಸಲ್ಪಡುತ್ತಿದೆ.

ಕವಿ ಯೊಬ್ಬರು "ಕ್ರಿಸ್ತರ, ಬುದ್ಧರ ಶ್ರಮವದು ಎಲ್ಲ ಪ್ರೇಮದ ಬೋಧನೆಗೆ! ತಿಲುಬೆಯು ವಿಷ ವ್ಯಾಶನಗಳು ಎಲ್ಲ ಪ್ರೇಮದ ಸಾಧನೆಗೆ!" ಎಂದದ್ದುಂಟು. ಯೇಸುವಿನ ಜೀವನವನ್ನು ಅವಲೋಕಿಸಿದರೆ ಈ ಮಾತಿನಲ್ಲಿ ಎಳ್ಳಷ್ಟೂ ಅತಿಶಯೋಕ್ತಿ ಕಂಡು ಬರುವುದಿಲ್ಲ. ಪ್ರೀತಿಯನ್ನೆ ಪರಮೈವವೆಂದು ಬಗೆದ ಮಹಾ ಜೀವಗಳಲ್ಲಿ ಯೇಸುವೇ ಪ್ರಮುಖ್ಯ ತ ಪುರುಷ. ಪ್ರೀತಿಯ ಯೋಗ ಮಾಯೆಯನ್ನು ಬಣ್ಣಿಸುವ ಅದ್ಭುತ ಚೈತನ್ಯವನ್ನೂ ಯೇಸು ಹೊಂದಿದ್ದನು. ಅವನು ಸಂಪ್ರದಾಯಗಳನ್ನು ಭಂಗಿಸಿರೆಂದು ಜನರಿಗೆ ಬೋಧಿಸಲು ಹೋಗಲಿಲ್ಲ – ಆದರೆ ಅಂತಃಕರಣದ ಬೋಧನೆಗೆ ಕಿವಿಗೊಡಬೇಕೆಂದು ಮಾತ್ರ ಅಪೇಕ್ಷಿಸಿದನು. "ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸು" ಎಂಬ ಮಾತಿನಲ್ಲಿ ಪ್ರಾಚೀನ ಯೆಹೂದ್ಯರ ಸಂಪ್ರದಾಯವನ್ನೆ ಅನುಮೋದಿಸುವ ಭಾವವನ್ನು ನಾವು ಕಾಣುತ್ತೇವೆ. ಆದರೆ ಅದಕ್ಕೆ ಸ್ಪಷ್ಟೀಕರಣವಾಗಿ ಕೊಟ್ಟ ದೃಷ್ಟಾಂತದಲ್ಲಿ ಮಾನವೀಯ ಭಾವನೆಗೆ ನೀಡಿದ ಮಹತ್ವ ದೃಷ್ಟಿಗೋಚರವಾಗುತ್ತದೆ. ಪುರೋಹಿತನಲ್ಲ, ಸದ್ಗೃಹಸ್ಥನಲ್ಲ, ಸನಾತನಿಗಳಾದ ಯೆಹೂದ್ಯರು ತಿರಸ್ಕರಿಸುವ ಸಮಾರಿಟನನೇ ಗಾಯಾಳುವಿನ ಸನ್ನಿತ್ರನೆನಿಸಿಕೊಂಡನು; ನೆರೆಯವನಾದನು. ಮನುಷ್ಯ ಗೌರವಿಸಬೇಕಾದ ಸಂಪತ್ತು ಯಾವುದೆಂಬುದಕ್ಕೆ ಇದರಷ್ಟು ಒಳ್ಳೆಯ ನಿದರ್ಶನ ಬೇರೆ ಸಿಗ ವುದಿಲ್ಲ.

ಯೇಸುವಿನ ವಿಚಾರಗಳು ಮೇಲಿಂದ ಮೇಲೆ ನೋಡಿದಾಗ ವಿಪರೀತ ಕಲ್ಪನೆಯನ್ನುಂಟು ಮಾಡುತ್ತವೆ – ಸಂಶಯದ ತೆರೆಗಳೇ ಏಳುತ್ತವೆ. ಆದರೆ ಪ್ರಥಮದ ಉದ್ವೇಗವನ್ನು ಶಮನ ಮಾಡಿಕೊಂಡು ಶಾಂತವಾಗಿ ಕೆಲ ಸಮಯ ಯೋಚಿಸಿದ ಪಕ್ಷದಲ್ಲಿ ಅವು ಎಷ್ಟು ಶುಭ್ರವಾಗಿವೆ, ಜೊಕ್ಯಟವಾಗಿವೆ ಮತ್ತು ಸಮರ್ಪಕವೂ ಸಮಂಜಸವೂ ಆಗಿವೆ ಎಂಬ ತಿಳಿವಳಿಕೆ ಮೂಡುತ್ತದೆ. ಮಹಾತ್ಮಾ ಗಾಂಧಿಯವರ ವಿಚಾರಗಳ ಮೇಲೆ ಗಾಢವಾದ ಪರಿಣಾಮವನ್ನುಂಟು ಮಾಡಿದ ರಸ್ಕಿನ್ನನ "ಆ ಕೊನೆಯವನ ವರೆಗೂ" ಎಂಬ ಗ್ರಂಥ ಯೇಸುವಿನ ಆದರ್ಶವೊಂದನ್ನು ಪ್ರತಿಪಾದಿಸುತ್ತದೆ ಪ್ರತಿಯೊಬ್ಬನಿಗೂ ತಿನ್ನುವ ಉಣ್ಣುವ ಅಧಿಕಾರವೂ ಕೆಲಸ ಮಾಡುವ ಅಧಿಕಾರವೂ ಜೊತೆಯಾಗಿಯೇ ಇದೆ ಎಂದು ಇದರ ಅಭಿಪ್ರಾಯ. ಸರಕಾರವಾಗಲೀ ಯೋಜನಾ ಕರ್ತರಾಗಲೀ ಸಾಮಾಜಿಕರಾಗಲೀ ಒಂದನ್ನು ಇನ್ನೊಂದರಿಂದ ಬೇರ್ಪಡಿಸುವಂತಿಲ್ಲ. ಮುಂಜಾನೆ ಎಂಟು ತಾಸಿಗೆ ಬಂದು ಸಂಜೆ ಆರರ ವರೆಗೆ ಕೆಲಸಮಾಡಿದವನಿಗೂ ಸಂಜೆ ಐದಕ್ಕೆ ಬಂದು ಆರರ ವರೆಗೆ ಕೆಲಸಮಾಡಿದವನಿಗೂ ಒಂದೆ ಕೂಲಿಯನ್ನು ಕೊಟ್ಟು ದ್ರಾಕ್ಷೆತೋಟಗಾರನ ವರ್ತನೆಯಲ್ಲಿ ತಪ್ಪೇನೂ ಇಲ್ಲ. ಎರಡನೆಯವನಿಗೆ 'ಕೆಲಸ ಮಾಡುವ ಅವಕಾಶ" ಮೊದಲೇ ದೊರಕುತ್ತಿದ್ದರೆ ಅವನೂ ಎಂಟು ಗಂಟೆಗೆ ಬಂದುತ್ತಿದ್ದ – ಎಂಬವಾದವನ್ನು ಈಗಿನ ಕಾಲದ ಜನರು ಸುಲಭದಲ್ಲಿ ಅರ್ಥಮಾಡಿಕೊಳ್ಳ ಬಲ್ಲರು.

ಬೈಬಲಿನಲ್ಲಿ ಉಲ್ಲೇಖಿಸಲಾದ ಅನೇಕ ಆಖ್ಯಾಯಿಕೆಗಳು ಯೇಸುವಿನಸೂಕ್ಷ್ಮಪ್ರಜ್ಞೆಗೆ ಕಳಶವಿಡುತ್ತವೆ.–"ಮಗನೇ, ನೀನು ದಿನಾಲೂ ನನ್ನೊಡನಿದ್ದು ಸಂತೋಷ ಕೊಡುತ್ತಿದ್ದಿಯಾ – ಆದರೆ ಆ ನಿನ್ನ ತಮ್ಮ ಪರದೇಸಿಯಂತೆ, ಪೋಲಿಯಾಗಿ ತಿರುಗಿ ಈಗ ಮನೆಯ ನೆನಪಾಗಿ ಬಂದಿದ್ದಾನೆ. ಇದು ಎಷ್ಟು ಸಂತೋಷನವಿಷಯ!" ಎಂಬ ಮುದುಕನ ಸಂತೈಸುವ ಮಾತಿನಲ್ಲಿ ದಾರಿ ತಪ್ಪಿ ನಡೆದವರು ತಮ್ಮ ತಪ್ಪು ತಿಳಿದು ಆದನ್ನು ತಿದ್ದಿಕೊಂಡಾಗ ಅವರಿಗೆ ನಿಜವಾದ ಸಹಾನುಭೂತಿಯು ತೋರಿಸಲ್ಪಡಬೇಕೆಂಬ ತತ್ವ ಎದ್ದು ಕಾಣುತ್ತದೆ. ತಪ್ಪನ್ನು ಮನುಷ್ಯನಾದವನು ಮಾಡುತ್ತಾನೆ – ಒಂದು ರೀತಿಯಲ್ಲಿ ತಪ್ಪು ಮಾಡದವನು ಮನುಷ್ಯನೇ ಅಲ್ಲ; ದೇವರು, ಅಥವಾ ದೇವತಾ ಮನುಷ್ಯ! ಆದುದರಿಂದ ಒಬ್ಬನ ತಪ್ಪನ್ನೇ ದೊಡ್ಡದು ಮಾಡಿ ತೋರಿಸಿ ದೂರುವವರು ತಮ್ಮಿಂದೇನೂ ತಪ್ಪಾಗಲಿತ್ತೇ ಎಂದು ಮೊದಲು ಯೋಚಿಸಬೇಕು ವ್ಯಭಿಚಾರವನ್ನು ಮಾಡುತ್ತಿದ್ದಾಗಲೇ ಹಿಡಿದು ಬಿಟ್ಟಿದೆಂದು ಯೇಸುವಿನ ಮುಂದೆ ತಂದು ನಿಲ್ಲಿಸಿದ ಹೆಂಗಸಿಗೆ ಮೋಸೆಸನ ಶಾಸನದ ಪ್ರಕಾರ ಕಲ್ಲಿನಿಂದ ಹೊಡೆಯುವ ಶಿಕ್ಷೆಕಾದಿದ್ದರೂ "ನಿಮ್ಮಲ್ಲಿ ತಪ್ಪೇನೂ ಮಾಡದವರು ಮೊದಲು ಆಕೆಗೆ ಕಲ್ಲು ಬಿಸಾಡಿ" ಎಂಬ ಯೇಸುವಿನ ಮಾತಿನಿಂದ ದೂರು ತಂದ ವರೆಲ್ಲರೂ ಹತಪ್ರಭರಾದರು, ತಂತಮ್ಮ ಮುಖವನ್ನೇ ನೋಡಿಕೊಂಡು ಮೆಲ್ಲನೆ ಅಲ್ಲಿಂದ ಜಾರಿದರು. ಆಗ ಯೇಸುವಿನ ವಾಣಿ ಕೇಳಿಸಿತು–"ಹಾಗಾದರೆ ತಾಯೂ ನಾನೂ ನಿನಗೆ ಕಲ್ಲಿನಿಂದ ಹೊಡೆಯುವುದಿಲ್ಲ. ಆದರೆ ಇನ್ನು ಮುಂದೆ ಮಾತ್ರ ತಪ್ಪುಮಾಡಬೇಡ" ಈ ಸಂಯಮವೇ ಅವಳ ಪಾಲಿಗೆದೊಡ್ಡ ಪ್ರಾಯಶ್ಚಿತ್ತ!

ಭಾರತೀಯವಾದ ದರ್ಶನಕ್ಕೂ ಕ್ರಿಸ್ತನ ಉಪದೇಶಕ್ಕೂ ನಾವು ಎಷ್ಟೋವಿಷಯಗಳಲ್ಲಿ ಸಾಮ್ಯವನ್ನು ಕಾಣಬಹುದು. ಇದರಿಂದ ದೇವರು ಒಬ್ಬನೇ—ಅವನ ಬಳಸಾರುವ ಮಾರ್ಗಗಳು ಮಾತ್ರ ಹಲವೆಂಬ ಬಳಕೆಯ ಮಾತು ನೆನೆಪಿಗೆ ಬರುತ್ತದೆ. ಯೇಸು ವ್ಯಕ್ತಿಯು ಕಾಯಾ ವಾಚಾ ಮನಸಾ ಪರಿಶುದ್ಧನಿರಬೇಕೆಂದು ಹೇಳುತ್ತಿದ್ದನು. ಮಗುವನ್ನು ತೋರಿಸಿ, ಅದನ್ನು ದೇವರಿಗೆ ಹೋಲಿಸುತಿದ್ದನು. ಕಪಟ, ವಂಚನೆ ಮುಂತಾದ ಕಟ್ಟ ಭಾವನೆಗಳಿಗೆ ಎಡೆ ಇಲ್ಲದ ಮನಸ್ಸು ಮುಕ್ತಿಯ ಪ್ರಥಮ ಆವಶ್ಯಕತೆಯಾಗಿರುವುದೆಂಬ ತತ್ವವು ಅವನಿಗೆ ಒಪ್ಪಿಗೆ ಇದ್ದಂತೆ ಕಂಡು ಬರುತ್ತದೆ. ಸತ್ಯವನ್ನು ಪ್ರತಿವಾದಿಸುವುದಕ್ಕೆ ಪರಿಶುದ್ಧ ಮನಸ್ಸಿನಿಂದ ತಡೆಯೇನೂ ಆಗುವುದಿಲ್ಲ. ಆದರೆ ದೇವರ ರಾಜ್ಯಕ್ಕೆ ಅವಕಾಶವನ್ನು ಕೊಡಬಾರದೆನ್ನುವ ಸ್ವಾರ್ಥಿಗಳ ಪಂಗಡಮಾತ್ರ ಇದರಿಂದ ರೋಷವನ್ನು ತಾಳಬಹುದು; ಕುಪಿತಗೊಂಡು

(೧೨ನೇ ಪುಟ.ನೋಡಿರಿ)

THE CANARA MUTUAL ASSURANCE COMPANY, LTD.,
Managing Director: T. R. A. PAI
Head Office: **UDIPI**, S. INDIA.] [Estd: 1935
ಅತ್ಯುತ್ತಮ ಬೋನಸ್
ಲಾಭಸಹಿತ ಪೋಲಿಸಿಗಳಿಗೆ ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ
ರೂ. 18/- ರೂ. 15/-
ಹೋಲ್ ಲೈಫ್ ಎಶ್ಯೂರೆನ್ಸಿಗೆ ಎಂಡೋಮೆಂಟ್ ಎಶ್ಯೂರೆನ್ಸಿಗೆ
31-12-1958ನೇ ತಾರೀಕಿನಾದ 1952ರಿಂದ 1958ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.
ಕಂಪೆನಿಯ ಸೊತ್ತುಗಳ ಮೊತ್ತವು ಒಂದು ಕೋಟಿ ರೂಪಾಯಿಗಳನ್ನು ಮೀರಿರುತ್ತದೆ.
ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫.
ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಪಂಚಿದ ಕಂಪೆನಿ.
CHIEF AGENTS:
THE COMMERCIAL CORPORATION OF INDIA, LTD.,
UDIPI, S. India

BHUVANENDRA PRODUCTS LTD., KATAPADI, S. K.
ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!
ಇವುಗಳಿಂದಲೇ ಭುವನೇಂದ್ರ ಔಷಧಿಗಳು
ಜನಪ್ರಿಯವಾಗಿರುವವು.
ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು
ನಮ್ಮಲ್ಲಿ ತಯಾರಿಸಲ್ಪಡುತ್ತವೆ.
ವಿವರಗಳಿಗೆ ವಿಚಾರಿಸಿರಿ:–
ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್ ಕಟಪಾಡಿ, ದ. ಕ.
ಡಿಪೋ:– (1) ಉಡುಪಿ (2) ಮರಾತ ಗಲ್ಲಿ, ಹುಬ್ಬಳ್ಳಿ.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.
ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ).
ಅಧಿಕೃತ ಭಂಡವಾಳ ... ... ರೂ. 25,00,000
ಚಂದಾ ಆರ್ಪಣಿ, ತೆತ್ತು ಬಂಡ ಭಂಡವಾಳ ... ರೂ. 20,00,000
ಫ್ಲೋನು ನಿಧಿ ... ... ರೂ. 10,50,000
ಕೆಲವದಾತಿಗಳು ... ... ರೂ. 2,98,19,000
ಒಟ್ಟು ಜಲಾವಣೆ ಭಂಡವಾಳ ... ಸುಮಾರು ರೂಪ್ಯಾ 4 ಕೋಟಿ
ಒಟ್ಟು ಶಾಖೆಗಳು 38
(31—12—1958ಕ್ಕೆಲ್ಲು)
THE CANARA BANKING CORPORATION LIMITED
Estd:- 1906] [H. O. UDIPI (S. India).

ರಾಮತೀರ್ಥ ಬ್ರಾಹ್ಮೀ ತೈಲ
ಸ್ಪೆಶಲ್ ನಂ ೧] [ಪೆಡಿಕೇಟಿಡ್
ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತನೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.
ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0
ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಯುಗೊಸ್ಲಾವಿಯದ ಜನಪ್ರಿಯ ಅಧ್ಯಕ್ಷ - ಟಿಟೊ

ಪರರ ಹಸ್ತಕ್ಷೇಪವನ್ನು ತಿರಸ್ಕರಿಸಿದ ಸ್ವಾತಂತ್ರ್ಯ ವೀರ

ತಮ್ಮ ಹದಿನೆಂಟು ದಿನಗಳ ಭಾರತ ಪ್ರವಾಸಕ್ಕೋಸ್ಕರ ಮುಂಬಯಿ ನಗರದ ವಿಮಾನಾಶ್ರಯದಲ್ಲಿ ಇದೇ ದಿನಾಂಕ ೧೩ ರಂದು ಇಳಿದ ಯುಗೊಸ್ಲಾವಿಯದ ಅಧ್ಯಕ್ಷ ಟಿಟೋರನ್ನು ಕಮ್ಯುನಿಸ್ಟ ಪ್ರಪಂಚದ ಅದ್ಭುತ ವ್ಯಕ್ತಿಗಳ ಮಾಲೆಯಲ್ಲಿ ಪೋಣಿಸಿದರೆ ತಪ್ಪಾಗದು. ಮೋಸ್ಕೋದ ಪ್ರಭುತ್ವವನ್ನು ಧಿಕ್ಕರಿಸಿದ, ಅದರ ಹಸ್ತಕ್ಷೇಪವನ್ನು ಅಲ್ಲಗಳೆದ, ಸ್ಟಾಲಿನ್ನರನ್ನು ಅವರ ಮುಂದೆಯೇ ತಿರಸ್ಕರಿಸಿದ ಏಟನ್ನೆಂದು ಟಿಟೋರನ್ನು ಇಂದು ಲೋಕ ಗೌರವಿಸುತ್ತದೆ. ಅವರು ಕಮ್ಯುನಿಸ್ಟರೇನೋ ನಿಜ. ಆದರೆ, ರಶಿಯದ ಕಮ್ಯುನಿಜಮ್ಮಿಗೂ ಟಿಟೋ ತಮ್ಮ ಅನುಯಾಯಿಗಳಾದ ೧೬೦ ಲಕ್ಷ ಯುಗೊಸ್ಲಾವ ಜನರಿಗೆಂದು ಅಳವಡಿಸಿದ ಮಾರ್ಕ್ಸ್ ವಾದಕ್ಕೂ ತುಂಬ ವ್ಯತ್ಯಾಸವು ಕಂಡುಬರುತ್ತದೆ ಅದುದರಿಂದಲೇ ಟಿಟೋರನ್ನು ಕುಲಗಟ್ಟಿ ಕಮ್ಯುನಿಸ್ಟನೆಂದು ರಶಿಯ ಮೊದಲಿನಿಂದ, ಕುಲೀನ ಕಮ್ಯುನಿಸ್ಟರೆಲ್ಲರೂ ಟಿಟೋರ ವಿರುದ್ಧ ಫಿತೂರಿ ನಡೆಸಬೇಕೆಂದು ಒಳಗಿಂದೊಳಗೆ ತುಂಬ ಪ್ರಯತ್ನಿಸಿತು ಆದರೆ ಇದೇನೂ ಯಶಸ್ವಿಯಾಗಲಿಲ್ಲ, ಟಿಟೋರಿಗೆ ತಮ್ಮ ಜನರ ಮೇಲಿದ್ದ ಹಿಡಿತ ಸಡಿಲಾಗಲಿಲ್ಲ

ಟಿಟೋ ಎಂಬುದು ಅವರು ಭೂಗತರಾಗಿ ಕೆಲಸ ಮಾಡುತ್ತಿದ್ದಾಗ ತಮಗೆ ತಾವೇ ಇಟ್ಟು ಕೊಂಡ ಹೆಸರು — ೧೮೯೨ನೇ ಮೇ ತಿಂಗಳಂದು ಅವರು ಕ್ರೋಶಿಯದ ಹಳ್ಳಿಯೊಂದರಲ್ಲಿ ಬಡ ರೈತ ಕುಟುಂಬವೊಂದರಲ್ಲಿ ಜನಿಸಿದಾಗ ತಂದೆತಾಯಿಗಳು ಅವರನ್ನು ಜೋಸೆಫ್ ಬ್ರೋಜ್ ಎಂಬ ಹೆಸರಿಟ್ಟು ಕರೆದಿದ್ದರು. ಏಳು ಮಕ್ಕಳ ಗುಂಪಿನಲ್ಲಿ ಇವರು ಮುಂದಾಳುವಾಗಿದ್ದರು, ಒಳ್ಳೆಯ ವಿದ್ಯಾರ್ಥಿಯೆಂಬ ಹೆಸರನ್ನೂ ಗಳಿಸಿದ್ದರು. ಆದರೆ ಸಂತೆತನದ ತೊಂದರೆಗಳಿಂದ ಅವರು ಶಾಲೆಯನ್ನು ಬಿಡಬೇಕಾಯಿತು. ತಮ್ಮ ಹದ್ನೆರಡನೆಯ ವಯಸ್ಸಿನಲ್ಲಿ ದನಕಾಯುವ ಕೆಲಸಕ್ಕೆ ಅವರು ಸೇರಿಕೊಂಡರು. ಆದರೆ ಇದು ಅಷ್ಟು ಹೆಚ್ಚುಗಾರಿಕೆಯಾಗಲಿಲ್ಲ. ನೆರೆಯ ಸಿಸಾಕ್ ಎಂಬ ನಗರಕ್ಕೆ ಅವರು ಹೊರಟುಹೋಗಿ ಅಲ್ಲಿ ಹೋಟೆಲಿನಲ್ಲಿ ಕೆಲಸ ದೊರಕಿಸಿಕೊಂಡರು ತಟ್ಟೆ ತೊಳೆಯುವ ಈ ಉದ್ಯೋಗವೂ ಅಷ್ಟಾಗಿ ಸೇರಲಿಲ್ಲ ಆದುದರಿಂದ ಬೇರೇನಾದರೊಂದು ಉದ್ಯೋಗವನ್ನು ಹಿಡಿಯುವ ಚಪಲದಲ್ಲಿ ಬೀಗದಕೈ ಮಾಡುವ ಕಲಸಗಾರನೊಬ್ಬನ ಬಳಿಯಲ್ಲಿ ಅವರು ಆ ವಿದ್ಯೆಯನ್ನು ಕಲಿಯಲು ನಿಂತರು. ಇಲ್ಲಿ ಅವರ ಜೀವನದಲ್ಲಿ ಹೊಸ ಅಧ್ಯಾಯ ತೆರೆಯಿತು. ಇಲ್ಲಿ ಅವರಿಗೆ ಸೇವೆ, ಸಮಾಜವಾದ, ಸಂಘಟನಾತ್ಮಕ ಚಳವಳಿ ಮುಂತಾದ ಅನೇಕ ಮಹತ್ವದ ವಿಷಯಗಳ ಪ್ರಥಮ ಸಾರವಾಯಿತು.

೧೯೧೦ನೇ ಇಸವಿಯ ಸುಮಾರಿಗೆ ಕಲಿಕೆಯನ್ನು ಮುಗಿಸಿಬಿಟ್ಟು ಟಿಟೋ ಯುಗೊಸ್ಲಾವಿಯದ ರಾಜಧಾನಿಯಾದ ಬೆಲ್ಗ್ರೇಡಿಗೆ ಹೋಗಿ ಲೋಹದ ಕಾರ್ಖಾನೆಯೊಂದರಲ್ಲಿ ನೌಕರರಾಗಿ ಸೇರಿದರು, ಇಲ್ಲಿಯ ಕೆಲಸಗಾರರ ಸಂಘಟನೆಯೊಡನೆ ನಿಕಟ ಸಂಪರ್ಕ ಬೆಳೆದ ಪರಿಣಾಮವಾಗಿ ಕ್ರೋಶಿಯದ ಸಾಮಾಜಿಕ ಪ್ರಜಾಸತ್ತಾತ್ಮಕ ಪಕ್ಷದ ಸದಸ್ಯನಾಗುವ ಸಂದರ್ಭವೂ ಬಂತು. ಕಮ್ಯುನಿಸ್ಟ ಸಾಹಿತ್ಯ ಮತ್ತು ತತ್ವಜಿಜ್ಞಾಸೆಯೊಡನೆ ಅವರ ಪರಿಚಯವು ಇನ್ನಷ್ಟು ಗಾಢವಾಯಿತು. ಜರ್ಮನಿಯ ಭಾಷೆಯನ್ನು ಕಲಿತು ಇದಕ್ಕೆ ಸಂಬಂಧಿಸಿದ ಸಿದ್ಧಾಂತಗಳನ್ನು ಅಧ್ಯಯನ ಮಾಡಿಕೊಳ್ಳುವುದಕ್ಕೆ ಟಿಟೋ ಆಸಾಧ್ಯ ಶ್ರಮವನ್ನು ವಹಿಸಿದರು ಮುಂದೆ ಪ್ರಥಮ ಮಹಾ ಯುದ್ಧಕಾಲದಲ್ಲಿ ಅವರು ತಮ್ಮ ೨೧ನೇ ವಯಸ್ಸಿನಲ್ಲಿ ಆಸ್ಟ್ರಿಯಾ-ಹಂಗರಿ ಸೈನ್ಯದಲ್ಲಿ ಭರ್ತಿಮಾಡಲ್ಪಟ್ಟು ರಶಿಯದ ವಿರುದ್ಧ ಕಳಿಪಲ್ಪಟ್ಟಾಗ ಒಳ್ಳೇ ಶೌರ್ಯವನ್ನು ತೋರಿಸಿದರು; ಬೆನ್ನಲ್ಲಿ ಒಂದು ದೊಡ್ಡ ಗಾಯವಾಗಿ ಅವರು ೧೯೧೫ರಲ್ಲಿ ರಶಿಯದ ಸೈನ್ಯದ ಕೈಗೆ ಸಿಕ್ಕಿ ೧೯ ತಿಂಗಳ ಕಾಲ ಆಸ್ಪತ್ರೆಯಲ್ಲಿ ಜೀವನ ಮರಣಗಳ ಮಧ್ಯಾವಸ್ಥೆಯಲ್ಲಿ ನರಳಿದರು.

ಇದರಿಂದ ನಷ್ಟವೇನೂ ಆಗಲಿಲ್ಲ— ರಶಿಯದಲ್ಲಿ ಕಮ್ಯುನಿಸ್ಟರ ರಕ್ತಕ್ರಾಂತಿ ನಡೆದಾಗ ಅವರು ಬಿಡುಗಡೆ ಹೊಂದಿದರು ಮುಂದೆ ಸಂಭವಿಸಿದ ಯಾವುದೇ ಯುದ್ಧದಲ್ಲಿ ಅವರು ಭಾಗ ವಹಿಸಿ ಜೋರಾದರು. ಹದಿನಾರು ವರ್ಷದ ರಶಿಯನ ಹುಡುಗಿ ಪೆಲಾಗಿಯಾ ಬೆನೊಸ್ಲಾವಾಳನ್ನು ಪ್ರೀತಿಸಿ ಮದುವೆಯಾದರು ಮುಂದೆ ಸ್ವದೇಶದ ನೆನಪಾಗಿ ಪತ್ನಿಯೊಡನೆ ಕ್ರೋಶಿಯಕ್ಕೆ ಹಿಂತಿರುಗಿ, ಯುಗೊಸ್ಲಾವಿಯದಲ್ಲಿ ತಳವೂರಿದ್ದ ಆರನೊತ್ತಿಗೆಯನ್ನು ಅಡಿಮೇಲುಮಾಡಿ ಬಿಡುವ ಕನಸನ್ನು ಕಾಣತೊಡಗಿದರು ಇದಕ್ಕಾಗಿ ಕಮ್ಯುನಿಸ್ಟ ಪಕ್ಷವನ್ನು ಸಂಘಟಿಸುವವರಲ್ಲಿ ಪ್ರಮುಖ ವ್ಯಕ್ತಿಯಾದರು ೧೯೨೫ರಲ್ಲಿ ಜೆಲ್ಲಾ ಪಕ್ಷಕ್ಕೆ ಇವರು ಆಯ್ಕೆಯಾದರು ಜಗದೇಬದ ಲೋಹ ಕೆಲಸಗಾರರ ಸಂಘದ ಕಾರ್ಯದರ್ಶಿಯಾಗಿ ನೇಮಕವಾದರು. ಕ್ರೋಶಿಯ ಪ್ರಾಂತದ ಲೋಹ ಕೆಲಸಗಾರರ ಸಂಘದ ಕಾರ್ಯದರ್ಶಿ ಸ್ಥಾನವೂ ಅವರಿಗೆ ಲಭಿಸಿತು. ಆದರೆ ಸರಕಾರ ಕಮ್ಯುನಿಸ್ಟರ ಚಟುವಟಿಕೆಗಳನ್ನು ಸೌಮ್ಯಮನಸ್ಸಿನಿಂದ ನೋಡುತ್ತಿರಲಿಲ್ಲ. ನ್ಯಾಯಬಾಹಿರ ವರ್ತನೆಗೆಳೆಂದು ತಮ್ಮ ಸಿದ್ಧಾಂತಕ್ಕೆ ಕಾಯಿ ಪ

(೧೧ನೇ ಪುಟ ನೋಡಿರಿ.)

ನಿಜವಾಗಿಯೂ ಪಸಂದಾಗಿರುವಿಕೆ!
ಫ್ಯಾಕ್ಟರಿಯಿಂದ ಆಂಗಡಿಗೆ ತ್ವರಿತದಿಂದ ಪಲುಮಿಸುವ ಅತ್ಯಾಧುನಿಕ ವಿಧಾನವು ಎಗ್ರಿಕ್ ಬಾಂಡ್ ಚಹಾ ತೊಟದಲ್ಲಿದ್ದಷ್ಟೇ ಪಸಂದಾಗಿರುತ್ತದೆ ಯೆಂಬುದನ್ನು ಖಂಡಿತಮಾಡುತ್ತದೆ.
ಅತ್ಯಂತ ಶುದ್ಧತೆ!
ಪೊಟ್ಟಣಗಳ ಸೀಲ್‌ಮಾಡುವಿಕೆಯು ಬ್ರೂಕ್ ಬಾಂಡ್ ಚಹಾಗೆ ಬೇರೆಯಾದವರಾಗದಂತೆಯೂ, ಧೂಳು, ಕಾಗೆ ಸೇರದಂತೆಯೂ ಕಾಪಾಡುವುದು.
Brooke Bond Tea
Brooke Bond Tea
ಬುದ್ಧಿವಂತಿಕೆಯಿಂದ ಕೊಳ್ಳಿರಿ ಮತ್ತು ಹಣವನ್ನುಳಿಸಿರಿ!
ಮುಂಬರಿದು, ಪ್ರತಿಯೊಂದು ಬ್ರೂಕ್ ಬಾಂಡ್ ಪೊಟ್ಟಣದಿಂದಲೂ ನೀವು ಹೆಚ್ಚು ಬಚ್ಚಲು ಉತ್ತಮ ರುಚಿಯನ್ನು ಪಡೆಯುತ್ತೀರಿ!
ಇತರ ಯಾವದೇ ಚಹಾಗಿಂತಲೂ
ಬ್ರೂಕ್ ಬಾಂಡ್ ಚಹಾವನ್ನೇ
ಹೆಚ್ಚು ಜನರು ಕೊಳ್ಳುತ್ತಾರೆ!
BD 64 TR

ತಿರು-ಕೊಚ್ಚಿಯ ಮಂತ್ರಿಮಂಡಳದ ಅನಿಶ್ಚಿತ ಭವಿಷ್ಯ

ಕಾಂಗ್ರೆಸಿನ ಬೆಂಬಲದ ಭರವಸೆ ಇನ್ನಿಲ್ಲ

ತಿರುವಾಂಕೂರು-ಕೊಚ್ಚಿ ರಾಜ್ಯದಲ್ಲಿ ಎರಡನೆಯ ಸಲ ಮಹಾ ಚುನಾವಣೆಗಳನ್ನು ನಡೆಸಿದ ತರುವಾಯ ಯಾವದೇ ವಿಶಿಷ್ಟ ಪಕ್ಷಕ್ಕೂ ಮಂತ್ರಿ ಮಂಡಳವನ್ನು ರಚಿಸುವಷ್ಟು ಬಹುಮತ ದೊರಕದೆ ಹೋದಾಗ, ಪ್ರಜಾ ಸಮಾಜವಾದಿ ಪಕ್ಷದ ೧೯ ಮಂದಿ ಸದಸ್ಯರು ಕಾಂಗ್ರೆಸಿನ ೪೬ ಮಂದಿ ಸದಸ್ಯರ ಬೆಂಬಲದ ಭರವಸೆ ದೊರೆತುದರಿಂದ ಸರಕಾರವನ್ನು ರಚಿಸಿಸಿಕೊಂಡರು. ಆದರೆ ಪಟ್ಟಂ ತಾನು ಪಿಳ್ಳೆಯವರ ಮಂತ್ರಿಮಂಡಳವು ಅನುಸರಿಸಿಕೊಂಡು ಬಂದ ಧೋರಣೆಗಳೆಲ್ಲವೂ ಕಾಂಗ್ರೆಸು ಸದಸ್ಯರಿಗೆ ಇಷ್ಟವಾಗಿಲ್ಲವೆನ್ನುವುದರಿಂದ, ತಾವು ಇಷ್ಟರವರೆಗೆ ಕೊಡುತ್ತ ಬಂದ ಬೆಂಬಲವನ್ನು ಇನ್ನು ಮುಂದೆ ಹಿಂದೆಗೆಯಲು ಇದೇ ದಿನಾಂಕ ೧೫ರಂದು ನಿರ್ಧರಿಸಲಾಯಿತು. ಸರಕಾರಕ್ಕೆ ತಾವು ಕಣ್ಣು ಮುಚ್ಚಿ ಬೆಂಬಲಕೊಡುವುದು ಏಕೆ ಸಾಧ್ಯವಿಲ್ಲ ಎಂಬುದನ್ನು ೧೫೦೦ ಶಬ್ದಗಳ ಸುದೀರ್ಘ ಗೊತ್ತುವಳಿಯೊಂದರ ಮೂಲಕ ಕಾಂಗ್ರೆಸು ಸದಸ್ಯರು ವಿವರಿಸಿದ್ದು ಅದರಲ್ಲಿ ಮಂತ್ರಿಮಂಡಳಕ್ಕೂ ಕಾಂಗ್ರೆಸಿಗೂ ಇರುವ ಭಿನ್ನಾಭಿಪ್ರಾಯಗಳನ್ನು ರೇಖಿಸಲಾಗಿದೆ. ಮುಖ್ಯವಾಗಿ ತಮ್ಮ ಬೆಂಬಲದಿಂದಲೇ ಸರಕಾರ ಕೆಲಸ ಮಾಡುತ್ತಿದ್ದರೂ ಮಹತ್ವದ ವಿಷಯಗಳಲ್ಲಿ ತಮ್ಮೊಂದಿಗೆ ಪೂರ್ವಾಲೋಚನೆಯನ್ನೇ ನೂ ಮಂತ್ರಿ ಮಂಡಳ ನಡೆಸುತ್ತಿರಲಿಲ್ಲ ಎಂದು ಅದು ಹೇಳುತ್ತದೆ.

ಹಿನ್ನೆಲೆಯ ಪ್ರಕರಣ

ಕಾಂಗ್ರೆಸು ಸಂಸ್ಥೆಯ ಧ್ಯೇಯಾದರ್ಶಗಳಿಗೆ ವಿರುದ್ಧವಾಗಿ ಮತ್ತು ರಾಜ್ಯದ ಜನತೆಯ ಹಿತವನ್ನು ಅಲ್ಲಗಳೆದು ಪ್ರಜಾ ಸಮಾಜವಾದಿ ಮಂತ್ರಿ ಮಂಡಳವು ಕೆಲಸ ಮಾಡುತ್ತಿರುವಾಗಲೂ ಅದಕ್ಕೆ ಬೆಂಬಲ ಕೊಡುವುದು ಕಾಂಗ್ರೆಸಿಗರಿಗೆ ಪ್ರಿಯವಾದುದಲ್ಲ—ಎಂದು ಗೊತ್ತುವಳಿಯ ಸಾರಾಂಶ ಇದು ಒಪ್ಪತಕ್ಕ ಮಾತು—ಆದರೆ ಇನ್ನನ್ನು ಹೇಳುವ ಕಾಲ ಈಗಲೇ ಎಂಬುದು ವಿಚಾರಣೀಯವಾದ ಅಂಶ. ಮಂತ್ರಿ ಮಂಡಳಕ್ಕೆ ಬೆಂಬಲ ಕೊಡುವ ನಿರ್ಣಯ ಮಾಡಿದಾಗಲೇ ತಮ್ಮ್ಯ ಕರಾರುಗಳನ್ನು ಕಾಂಗ್ರೆಸು ಸದಸ್ಯರು ಮುಂಚಿತವಾಗಿ, ಬಹಿರಂಗವಾಗಿ ತಿಳಿಯ ಪಡಿಸುತ್ತಿದ್ದರೆ, ಸಂಬಿಸಿ ಕುತ್ತಿಗೆ ಕೊಯ್ದ ದ್ರೋಹದ ಆರೋಪಕ್ಕೆ ಗುರಿಯಾಗಬೇಕಾಗುತ್ತಿರಲಿಲ್ಲ. ಆಗ ಕಾಂಗ್ರೆಸಿಗೆ ಹೇಗಾದರೂ ಮಾಡಿ ಕಮ್ಯುನಿಸ್ಟರ ಆಳ್ವಿಕೆಯನ್ನು ತಪ್ಪಿಸುವುದು: ಆಗತ್ಯವೆಂದು ತೋರಿತ್ತಲ್ಲದೆ ರಾಷ್ಟ್ರಾಧ್ಯಕ್ಷರ ಆಳ್ವಿಕೆಯೂ ಇಷ್ಟವೆನಿಸಿರಲಿಲ್ಲ. ಇದನ್ನು ತಪ್ಪಿಸಲಿಕ್ಕೆಂದೇ ಪ್ರಜಾಸಮಾಜವಾದಿಗಳು ಮಂತ್ರಿಮಂಡಳ ರಚಿಸುತ್ತೇವೆಂದು ಹೇಳಿದಾಗ ಕಾಂಗ್ರೆಸಿಗರು ಬೆನ್ನು ಚಪ್ಪರಿಸಿದರು. ಆದರೆ ಈಗ ಪಟ್ಟಂ ತಾನು ಪಿಳ್ಳೆಯವರ ಮಂತ್ರಿಮಂಡಳ ಭೂಸುಧಾರಣೆಯೇ ಮುಂತಾದ ಪ್ರಗತಿಪರ ಕ್ರಮಗಳನ್ನು ಕೈಗೊಳ್ಳುವ ಎತ್ತುಗಡೆಯಲ್ಲಿದ್ದು ಶಾಸನಸಭೆಯ ಮುಂದಿನ ಅಧಿವೇಶನದಲ್ಲಿ ಅದು ಚರ್ಚಿಸಲ್ಪಡುತ್ತದೆ. ಇವುಗಳಿಗೆ ಬೆಂಬಲಕೊಡುವುದಕ್ಕೆ ಇಷ್ಟವಿಲ್ಲವೆಂದೇ ಕಾಂಗ್ರೆಸಿಗರು ಆಯಕಟ್ಟಿನ ವೇಳೆಯಲ್ಲಿ ಬೆಂಬಲ ಹಿಂದೆಗೆದುಕೊಂಡರೆಂದು ಹೇಳಿದರೆ ತಪ್ಪಲ್ಲ.

ಧುರೀಣರ ಆಶೀರ್ವಾದ

ದಕ್ಷಿಣದಲ್ಲಿರುವ ತಮಿಳರ ಪ್ರೀತಿಯನ್ನು ಸಂಪಾದಿಸುವ ಉದ್ದೇಶದಿಂದಲೋ ಏನೋ ಕಾಂಗ್ರೆಸಿನ ಗೊತ್ತುವಳಿಯಲ್ಲಿ ಗೋಳಿಬಾರಿನ ಪ್ರಕರಣದಿಂದ ತಮಿಳರ ಮನಸ್ಸು ನೊಂದ ಪ್ರಸ್ತಾಪವು ಬಂದಿರುತ್ತದೆ. ಕಾಂಗ್ರೆಸಿನವರೇ ಆಗಿದ್ದು ಮತ ಭೇದದಿಂದ ಸಿಡಿದುಹೋಗಿದ್ದ ತಮಿಳು ಪ್ರದೇಶದಿಂದ ಸದಸ್ಯರ ಬೆಂಬಲ ದೊರೆತರೆ ಕಾಂಗ್ರೆಸಿಗೆಯೇ ಮಂತ್ರಿಮಂಡಳವನ್ನು ರಚಿಸುವುದು ಸಾಧ್ಯವಾದೀತು. ಹೀಗೆ ಅಧಿಕಾರದ ಗದ್ದುಗೆಯನ್ನೇರುವ ಹಂಬಲವನ್ನು ಗೊತ್ತುವಳಿ ಸೂಚಿಸುತ್ತಿದೆಯೆಂದೂ ಹೇಳಬಹುದು. ಅಂತೂ ರಾಜ್ಯದ ಕಾಂಗ್ರೆಸಿನ ನರಿಷ್ಠರು ಕೈಗೊಂಡ ನಿರ್ಣಯಕ್ಕೆ ಹೊಸ ದೆಹಲಿಯ ಕಾಂಗ್ರೆಸು ಪ್ರಭೃತಿಗಳ ಆಶೀರ್ವಾದ ದೊರೆತಿದೆಯೆಲ್ಲದೆ, ಇನ್ನು ಮುಂದಿನ ಘೋರಣೆಯ ವಿಷಯದಲ್ಲಿ ಕ್ರಿಜಾಸ್ವಾತಂತ್ರ್ಯವೂ ನೀಡಲ್ಪಟ್ಟಿದೆ. ಜೊತೆಗೆಯೇ ಒಂದು ಎಚ್ಚರದ ಮಾತನ್ನೂ ಕಾಂಗ್ರೆಸಿನ ವರಿಷ್ಠರು ತಿರುಕೊಚ್ಚೆಯ ಕಾಂಗ್ರೆಸಿಗರಿಗೆ ತಿಳಿಸಿರುವರು ಅದೇನೆಂದರೆ ರಾಷ್ಟ್ರಾಧ್ಯಕ್ಷರ ಆಳ್ವಿಕೆಯು ಅನಿವಾರ್ಯವೆನಿಸುವ ರೀತಿಯಲ್ಲಿ ವರ್ತಿಸಬಾರದು, ಎಂದು. ತಾನು ಪಿಳ್ಳೆಯವರ ಮಂತ್ರಿ ಮಂಡಳದೊಡನೆ ಸಹಕರಿಸದಿದ್ದರೆ, ಕಾಂಗ್ರೆಸಿಗರೇ ಮಂತ್ರಿ ಮಂಡಳವನ್ನು ರಚಿಸಲು ಶಕ್ತರಾಗಬೇಕು ಎಂದಿದರ ಅಭಿಪ್ರಾಯ.

ಪಿಳ್ಳೆಯವರ ಸ್ಪಷ್ಟೋಕ್ತಿ

ತಾನು ಪಿಳ್ಳೆಯವರನ್ನು "ಮುಂದೇನು?" ಎಂದು ಕೇಳಿನಷ್ಟು ಸಲ ಜನವರಿ ೫ನೇ ತಾರೀಕಿಗೆ ಸೇರಲಿರುವ ಶಾಸನ ಸಭೆಯ ನಿರ್ಣಯವು ಮಂತ್ರಿ ಮಂಡಳದ ಹಣೆಬರಹವನ್ನು ನಿರ್ಧರಿಸುತ್ತದೆ ಎಂಬ ಒಂದೇ ಉತ್ತರವಿಸಿಗುತ್ತದೆ. ಮಂತ್ರಿಮಂಡಳವು ತಾನಾಗಿಯೇ ರಾಜೀನಾಮೆ ಕೊಡುವುದಿಲ್ಲ—ಅವಿಶ್ವಾಸವು ವ್ಯಕ್ತಪಡಿಸಲ್ಪಟ್ಟರೆ ಮಾತ್ರ ಅದು ಅಧಿಕಾರ ಸ್ಥಾನವನ್ನು ಬಿಡುತ್ತದೆ ಎಂದವರ ನಿರ್ಧಾರದ ಮಾತು. ಕಾಂಗ್ರೆಸಿನ ಗೊತ್ತುವಳಿಯಲ್ಲಿ ಮಂತ್ರಿಮಂಡಳದ ಮೇಲೆ ಮಾಡಿದ ಆರೋಪಗಳಲ್ಲಿ ಏನೂ ಹುರುಳಿಲ್ಲವೆಂದು ಅವರ ವಾದ. ಹಿಂದೆ ಆರು ವರ್ಷಗಳ ವರೆಗೆ ಅಸ್ತಿತ್ವದಲ್ಲಿದ್ದ ಕಾಂಗ್ರೆಸು ಸರಕಾರದ ಆಡಳಿತೆಗಿಂತ ಈಗ ಒಂಭತ್ತು ತಿಂಗಳುಗಳಿಂದ ಕೆಲಸ ಮಾಡುತ್ತಿರುವ ಪ್ರಜಾ ಸಮಾಜವಾದಿ ಮಂತ್ರಿಮಂಡಳವು ಹೆಚ್ಚು ಜನಪ್ರಿಯತೆಯನ್ನು ಗಳಿಸಿದೆಯೆಂಬುದಾಗಿ ಅವರ ಖಚಿತ ಅಭಿಪ್ರಾಯ. ಕಾಂಗ್ರೆಸಿನೊಡನೆ ಪೂರ್ವಾಲೋಚನೆಯನ್ನು ಮಾಡಬೇಕೆಂದು ಒಪ್ಪಿಕೊಂಡಿರದಿದ್ದರೂ ಕಾನಾನಾಗಿಯೇ ಮಹತ್ವದ ವಿಷಯಗಳಲ್ಲಿ ಅವರ ಸಲಹೆ ಕೇಳುತ್ತಿದ್ದೆನೆಂದೂ ಆದರೆ ಭೂಸುಧಾರಣೆಯೇ ಮುಂತಾದ ಕ್ರಮಗ

ನಂಬಿಕೆಗೆ ಅರ್ಹತೆ!

ಅತ್ಯುತ್ತಮ ಟಾಯಿಲೆಟ್ ಸಾಬೂನಿನಲ್ಲಿ ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ ಅನೆಲ್ಲಾ

ಮೈಸೂರು ಸ್ಯಾಂಡಲ್ ಸೋಪಿನಲ್ಲಿ

ಇರುವವು ಎಂದು ಖಚಿತವಾಗಿ ಹೇಳುತ್ತೇವೆ.

* * *

— ಎಲ್ಲಾ ಕಡೆಗಳಲ್ಲೂ ದೊರಕುವುದು —

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು.

Member: I. S. T. M. A.

ZANDU'S THREE GEMS of AYURVEDIC MEDICINES

ಝಂಡೂರವರ ಮುಕರಧ್ವಜ ಪಿಲ್ಸ್ (ಸುವರ್ಣ ಮಿಶ್ರಿತ)

ದೀರ್ಘಾವಧಿಯ ಕೆಮ್ಮು, ಸರಿಗಳ ಏಸ್ಮಾಕ ಮತ್ತು ಸರ್ವಸಾಮಾನ್ಯ ಅಶಕ್ತತೆ ಹಾಗೂ ಇತರ ಎದೆಯ ಬೇನೆಗಳಿಗೆ ಅತ್ಯಧಿಕ ಗುಣಕಾರಿ. ಬೆಲೆ: 1 ತೊಲೆಗೆ ರೂ. ೨—೦—೦

ಝಂಡೂರವರ ವಸಂತ ಕುಸುಮಾಕರ ರಸ—ಮೂತ್ರಾತಿಸಾರ, ಸಿಹಿಮೂತ್ರ, ಏಸ್ಮತ್ವ ಇತ್ಯಾದಿ ಬಹುಕಾಲದ ಮೂತ್ರ ದೋಷಗಳಿಗೆ ಡಾಕ್ಟರುಗಳಿಂದ ವಿಶಿಷ್ಟ ತರದಲ್ಲಿ ಶಿಫಾರಸು ಮಾಡಲ್ಪಟ್ಟಿದೆ. ಬೆಲೆ: ಕಾಲು ತೊಲೆಗೆ ರೂ. ೪—೦—೦.

ಝಂಡೂರವರ ಸುವರ್ಣ ಮಿಶ್ರಿತ ಚ್ಯವನಪ್ರಾಶ—ಸರ್ವರಿಗೂ ರುಚಿಕರವಾದ ಟಾನಿಕ್ ಆಹಾರ. ಬಂಗಾರ ಮತ್ತು ಇತರ ಭಸ್ಮಗಳ ಮಿಶ್ರಣ ಎದುರುದರಿಂದ ಶೀತ, ಕಫ, ಕೆಮ್ಮುವಿಗೆ ಅತ್ಯಂತ ಪರಿಣಾಮಕಾರಿ.
ಬೆಲೆ: 1 ರಾತ್ತಿಗೆ ರೂ. ೭—೮—೦. ಕಾಲು ರಾತ್ತಿಗೆ ರೂ. ೩—೦—೦.

ಝಂಡೂರವರ ಔಷಧಿಗಳು ದ.ಕ.ಜಿಲ್ಲೆಯ ಅಧಿಕೃತ ಏಜಂಟರಲ್ಲಿ ದೊರೆಯುವುವು

ಕ್ಯಾಟಲಾಗಿಗೆ ಕೆಳಗಿನ ಸೋಲ್ ಏಜಂಟರಿಗೆ ಬರೆಯಿರಿ.

DAMODAR & CO.,
113 Nainiappa Naicken Street, P. T.-MADRAS-3.

ಎಸ್ಟೇಟ್ ಡ್ಯೂಟಿಯ ತೊಂದರೆಯನ್ನು ತಪ್ಪಿಸಿಕೊಳ್ಳಬೇಕೆಂದಿರುವಿರಾ?

ಅದರಸಂಬಂಧನಾದ ಸಮಸ್ಯೆಗಳನ್ನು ಯುನೈಟೆಡ್ ಇಂಡಿಯಾ ಏಸ್ಯೂರೆನ್ಸಿನ ಸಂಸ್ಥೆಗಳ ಚರ್ಚೆಸಲು ಸಂತೋಷದಿಂದ ಸಿದ್ಧರಿದ್ದಾರೆ.

ನಿಮ್ಮ ಪಾಲಿಸಿಗಳಿಗೆ ಎಸ್ಟೇಟ್ ಡ್ಯೂಟಿಯಿಂದುಂಟಾಗುವ ನ್ಯೂನಾತಿರೇಕಗಳನ್ನು ಚರ್ಚಿಸಲು, ನಮ್ಮ ಪ್ರಧಾನ ಕಛೇರಿಯಲ್ಲಿ ಇದಕ್ಕಾಗಿಯೇ ಪ್ರತ್ಯೇಕವಾದ ವಿಶೇಷ ವಿಭಾಗವು ಏರ್ಪಡಿಸಲ್ಪಟ್ಟಿದೆ. ಮತ್ತು ಅಲ್ಲಿ ಇದರ ಸಂಬಂಧವಾಗಿ ವಿಚಾರವಿನಿಮಯ ಮಾಡಬಹುದು.

ನಮ್ಮ ಗೋಜ್ಯ ಸಲಹೆಯನ್ನು ಮತ್ತು ಸೇವೆಯನ್ನು ನೀವು ಉಚಿತವಾಗಿ ಪಡೆಯಬಹುದು. ಮತ್ತು ಇದಕ್ಕೆ ನೀವು ಯಾವ ವಿಧದಲ್ಲಿಯೂ ದಾಕ್ಷಿಣ್ಯಬದ್ಧರಾಗುವುದಿಲ್ಲ.

ದಿ ಯುನೈಟೆಡ್ ಇಂಡಿಯಾ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಪ್ರಧಾನ ಕಛೇರಿ:
ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್ಸ್,
ಪೋಸ್ಟ್ ಬಾಕ್ಸ್ 281, ಮದರಾಸು-1.

UI 149

ಳ ಕಾರಿಷ್ ಕಾಂಗ್ರೆಸಿಗರಿಂದ ಉತ್ತರವೇ ಬಂದಿಲ್ಲವೆಂದೂ ಅವರು ತಿಳಿಸಿದರು. "ನಮ್ಮ ಮುಂತ್ರಿ ಮಂಡಳವು ನಮ್ಮ ಚುನಾವಣೆಯ ಘೋಷಣೆಗೆ ಅನುಸಾರವಾಗಿ ಕೆಲಸ ಮಾಡುತ್ತದೆ; ಕಾಂಗ್ರೆಸಿನ ನಿರ್ಣಯದ ಪ್ರಭಾವಕ್ಕೆ ಅದು ಒಳಗಾಗಲಾರದು" ಎಂದರು.

ಆಂಧ್ರದಲ್ಲಿ ಗದ್ದಲ

ಪ್ರಕಾಶಮರ ಮಂತ್ರಿಮಂಡಳವು ಪತನಗೊಂಡ ಆಂಧ್ರದಲ್ಲಿ ಹೊಸ ಚುನಾವಣೆಗಳು ಇದೇ ಫೆಬ್ರುವರಿ ೧೧ ನೇ ತಾರೀಕಿಗೆ ತೊಡಗಿ ಮಾರ್ಚಿ ೧೫ಕ್ಕೆ ಮುಗಿಯುತ್ತವೆ. ಜನವರಿ ೩ನೇ ತಾರೀಕಿನೊಳಗೆ ನಾಮಪತ್ರಗಳನ್ನು ಸಲ್ಲಿಸಬೇಕಾಗಿದ್ದು ಎಲ್ಲ ಪಕ್ಷಗಳವರೂ ತಮ್ಮ ಹುರಿಯಾಳುಗಳ ಪಟ್ಟಿಯನ್ನು ಸಿದ್ಧಗೊಳಿಸುವುದರಲ್ಲಿ ಈಗ ಮಗ್ನರಾಗಿದ್ದಾರೆ. ಕಮ್ಯುನಿಸ್ಟರ ವರ್ಚಸ್ಸು ಬಹಳ ಪ್ರಬಲಿಸಿರುವ ತಂಲ್ಗಾಣದಲ್ಲಿ ವಿಜಯ ಲಾಭಕ್ಕೋಸ್ಕರ ಕಾಂಗ್ರೆಸು, ಕೃಷಿಕರ ಲೋಕಪಕ್ಷ ಮತ್ತು ಆಂಧ್ರ ಪ್ರಜಾಪಕ್ಷಗಳು ಸಂಯುಕ್ತರಂಗವನ್ನು ಸ್ಥಾಪಿಸಿ, ರಾಜನ ಸಭೆಯಲ್ಲಿ ಒಗ್ಗಟ್ಟಿನಿಂದ ಕೆಲಸಮಾಡುವ ನಿರ್ಣಯಕ್ಕೆ ಬಂದಿರುತ್ತವೆ. ಇನ್ನು ಕ್ರಿಯಾ ಪಟ್ಟಿಕ್ಕಿಂದ ಕಳೆದ ಮಹಾ ಚುನಾವಣೆಯಲ್ಲಿ ಮುಂಬಯಿ ರಾಜ್ಯದಲ್ಲಿ ಕಾಂಗ್ರೆಸಿಗೆ ಒಟ್ಟಾರೆ ಪೂರ್ವ ಬಹುಮತವನ್ನು ಸಂಪಾದಿಸಿಕೊಟ್ಟ ಶ್ರೀ ಎಸ್. ಕೆ. ಪಾಟೀಲರು ಆಂಧ್ರ ಚುನಾವಣೆಯಲ್ಲಿ ಕಾಂಗ್ರೆಸಿನ ಸೂತ್ರಧಾರಿಕತ್ವವನ್ನು ವಹಿಸುವರು. ವೃದ್ಧ ಪ್ರಕಾಶಮರಿಂತಲೂ ಆಂಧ್ರ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷ ಹಾಗು ವಿದ್ಯಾಸಿನ ವಾಜಿ ಮಂತ್ರಿ ಬಿ. ಗೋಪಾಲ ರೆಡ್ಡಿಯವರ ಕೈವಾತ್ಸವು ಕಾಂಗ್ರೆಸಿನಲ್ಲಿ ಎದ್ದು ಕಾಣಿಸುತ್ತದೆ. ಇತ್ತ ಕಮ್ಯುನಿಸ್ಟರೂ ಪ್ರಜಾಸಮಾಜವಾದಿಗಳೂ ತಮ್ಮ ಶಕ್ತಿ ಸರ್ವಸ್ವವನ್ನು ಪ್ರಯೋಗಿಸಲು ನಿರ್ಧರಿಸಿದ್ದಾರೆ. ಭಾರತದ ಎಲ್ಲ ಕಮ್ಯೂನಿಸ್ಟ ಕೇಂದ್ರಗಳಿಂದಲೂ ಆಂಧ್ರದ ಕಮ್ಯುನಿಸ್ಟರಿಗೆ ನೆರವು ಸಿಗುತ್ತಿದ್ದು, ಕಾಂಗ್ರೆಸ್ಸೇತರ ಸಂಯುಕ್ತ ರಂಗದ ಸಿದ್ಧತೆಗೆ ತಮ್ಮದು ಯಾವ ರೀತಿಯಲ್ಲೂ ಕಡಿಮೆಯಿಲ್ಲವೆಂದು ಅವರು ತೋರಿಸಿಕೊಳ್ಳುವುದರಲ್ಲಿ ಯಶಸ್ಸು ಗಳಿಸಿರುವರು.

ರಾಜ್ಯಾಂಗ ಘಟನೆಗೆ ಪುನಃ ತಿದ್ದುಪಡಿ

ಖಾಸಗಿ ಆಸ್ತಿಯನ್ನು ನಶಪಡಿಸಿಕೊಳ್ಳಲು ಸರಕಾರಕ್ಕೆ ವ್ಯಾಪಕ ಅಧಿಕಾರ

ಲೋಕ ಸಭೆಯಲ್ಲಿ ಇದೇ ದಿನಾಂಕ ೨೦ನೆಂದು ರಾಜ್ಯಾಂಗ ಘಟನೆಗೆ ನಾಲ್ಕನೆಯ ಸಲ ತಿದ್ದುಪಡಿಯನ್ನು ಮಾಡುವ ಮಸೂದೆಯೊಂದನ್ನು ಪ್ರಧಾನ ಮಂತ್ರಿ ನೆಹರುಗಳು ಮಂಡಿಸಿದರು. ಕೆಲವು ದಿನಗಳ ಹಿಂದೆಯಷ್ಟೆ ಸುಪ್ರೀಂ ಕೋರ್ಟಿನ ಪೂರ್ಣ ಪೀಠವು ಬಿಹಾರ ಸರಕಾರದ ಭೂಸುಧಾರಣೆಯ ಕಾಯಿದೆಯ ಕೆಲವು ಭಾಗಗಳು ಸಂವಿಧಾನದ ಮೂಲ ಹಕ್ಕುಗಳಿಗೆ ವಿರುದ್ಧವಾಗಿವೆಯೆಂದು ತೀರ್ಮಾನಿಸಿದ್ದು ಈ ಮಸೂದೆಯ ಮುಖ್ಯ ಉದ್ದೇಶವು ಸುಪ್ರೀಂ ಕೋರ್ಟಿನ ಈ ತೀರ್ಮಾನವನ್ನು ಅಸಿಂಧುಗೊಳಿಸುವುದಾಗಿದೆ. ಈ ಮಸೂದೆಯು ಕಾನೂನಾಗಿ ಪರಿಣಮಿಸಿದರೆ ಸರಕಾರವು ಖಾಸಗಿ ಆಸ್ತಿಯನ್ನು ಸಾರ್ವಜನಿಕ ಉದ್ದೇಶಗಳಿಗಾಗಿ ಸ್ವಾಧೀನಪಡಿಸಿಕೊಳ್ಳುವ ಅಧಿಕಾರವು ಹೆಚ್ಚಾಗುವುದು. ಆಸ್ತಿಯ ಸ್ವಾಧೀನಕ್ಕೆ ಪರಿಹಾರವನ್ನು ಕೊಡಬೇಕಾಗಿ ಬಂದರೆ ಅದು ಎಷ್ಟು ಕೊಡಬೇಕೆಂಬುದನ್ನು ನಿರ್ಧರಿಸುವ ಅಧಿಕಾರವೂ ಸರಕಾರಕ್ಕೆ ಬರುವುದು. ಈ ಮಸೂದೆಯು ಕಾನೂನಾಗಿ ಪರಿಣಮಿಸಿದರೆ ಸರಕಾರವು ಯಾವುದೇ ಆಸ್ತಿಯನ್ನು ಸಾರ್ವಜನಿಕ ಉದ್ದೇಶಗಳಿಗಾಗಿ ಸ್ವಾಧೀನಪಡಿಸಿಕೊಳ್ಳುವಾಗ ಅದಕ್ಕೆ ಪರಿಹಾರವನ್ನು ಕೊಡಬೇಕಾಗಿಲ್ಲವೆಂದು ಕೋರ್ಟಿಗೆ ಹೋಗುವ ಹಕ್ಕು ಜನರಿಗೆ ಇರುವುದಿಲ್ಲ

NAVAYUGA
Popular Kannada Weekly
Founder:—
Sri **A. B. SHETTY**, *M.L.A.*
Minister for Public Health,
Govt. of Madras.

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೪	೨೩-೧೨-೧೯೩೫	೧೬

ಕಾಂಗ್ರೆಸಿನ ಅಧ್ಯಕ್ಷ ಸ್ಥಾನ

ಭಾರತದ ರಾಷ್ಟ್ರೀಯ ಕಾಂಗ್ರೆಸಿನ ಅಧ್ಯಕ್ಷ ಸ್ಥಾನಕ್ಕೆ ಕಾರ್ಯಕಾರಿ ಸಮಿತಿಯು ಸೂಚಿಸಿದ ಪ್ರಕಾರ ಸೌರಾಷ್ಟ್ರದ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಉಛ್ರಂಗರಾಯ ನವಲಶಂಕರ ಢೇಬರರು ಅವಿರೋಧವಾಗಿ ಆಯ್ಕೆ ಹೊಂದಿರುವುದು ಸಂತೋಷದ ವಿಚಾರ. ಮುಂಬಯಿ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷರಾದ ಶ್ರೀ ಜಾಟೀಲರೂ ಮಹಾರಾಷ್ಟ್ರ ಕಾಂಗ್ರೆಸಿನ ಧುರೀಣರೂ ಢೇಬರರ ಆಯ್ಕೆಯನ್ನು ಅಷ್ಟು ಮೆಚ್ಚಿಲ್ಲವೆಂದು ಹೇಳಲಾಗುತ್ತಿದ್ದರೂ ನೆಹರುಗಳ ಕೃಪೆಗೆ ಪಾತ್ರರಾದ ಢೇಬರರ ವಿರುದ್ಧ ತಮ್ಮ ಸ್ವರವನ್ನು ಬಹಿರಂಗವಾಗಿ ಎತ್ತುವುದಕ್ಕೆ ಅವರು ಹೋಗಲಿಲ್ಲ. ಈ ಪ್ರಕಾರ ಕಾಂಗ್ರೆಸಿನ ಶಿಸ್ತಿಗೆ ಅವರು ತಲೆ ತಗ್ಗಿಸಿ ಕುಳಿತರೆಂಬುದೂ ಅಭಿನಂದನೀಯವಾದ ವಿಚಾರ. ಸ್ವಾತಂತ್ರ್ಯೋತ್ತರದಲ್ಲಿ ಕಾಂಗ್ರೆಸಿನಲ್ಲಿ ಎದ್ದು ಕಾಣುವ ದೋಷವೆಂದರೆ ಶಿಸ್ತು ಮತ್ತು ಕ್ರಿಯಾಶಕ್ತಿಯ ಅಭಾವವೆಂದು ಹೇಳಬಹುದು. ಅಧ್ಯಕ್ಷರ ಆಯ್ಕೆಯನ್ನು ಶಿಸ್ತಿನ ಒಂದು ಪರೀಕ್ಷೆಯಾಗಿ ಪರಿಗಣಿಸಿದರೆ, ಈ ಸಲದ ಪ್ರಾರಂಭವು ಶುಭಕರವಾಗಿದೆ ಎಂದು ಅಭಿಪ್ರಾಯ ಮೂಡುತ್ತದೆ. ಢೇಬರರ ಹೆಸರನ್ನು ಕಾರ್ಯಕಾರಿ ಸಮಿತಿಯು ಅಧ್ಯಕ್ಷಸ್ಥಾನಕ್ಕೆ ಸಿಫಾರಸು ಮಾಡಿದಾಗ, ಅವರು ಯಾರು? ಎಂದು ಜನಸಾಮಾನ್ಯರು ಕೇಳಿತೊಡಗಿದ್ದರು. ಕಾಂಗ್ರೆಸಿನ ವರ್ಚಸ್ಸಿ ಧುರೀಣರಲ್ಲಿ ಅವರು ಸೇರಿರುವರೆಂದು ಹೆಚ್ಚಿನ ಜನರಿಗೆ — ಮುಖ್ಯವಾಗಿ ದಾಕ್ಷಿಣಾತ್ಯರಿಗೆ — ತಿಳಿದಿರಲಿಲ್ಲ. ಆದರೆ ತಮ್ಮ ಸ್ವಂತ ರಾಜ್ಯವಾದ ಸೌರಾಷ್ಟ್ರದಲ್ಲಿ ಮಹಾತ್ಮಾ ಗಾಂಧಿ ಮತ್ತು ಸರ್ದಾರ ಪಟೇಲರ ಆಶೀರ್ವಾದವನ್ನು ಪಡೆದುಕೊಂಡು, ವ್ರತಬದ್ಧವಾದ ಸರಳ ಜೀವನವನ್ನು ನಡೆಸುತ್ತಾ ಬಂದು, ೨೫೫ ಸಂಸ್ಥಾನಿಕರ ವಿರುದ್ಧ ಅದ್ಭುತ ಕ್ರಿಯಾಶಕ್ತಿಯಿಂದ ಸೆಣಸಾಡಿ, ಹಳೆಯ ಕಾಂಗ್ರೆಸಿಗರಿಗಿಂತಲೂ ಹೆಚ್ಚಿನ ಕೀರ್ತಿಯನ್ನು ಹೊಂದಿರುವುದು ಅವರ ವ್ಯಕ್ತಿತ್ವದ ಔನ್ನತ್ಯವನ್ನು ಸೂಚಿಸುತ್ತದೆ. ಅವರ ಅಡಳಿತ ಕಾಲದಲ್ಲಿ ಸೌರಾಷ್ಟ್ರದಲ್ಲಿ ಕಾಂಗ್ರೆಸು ತುಂಬ ಬಲಿಷ್ಠವಾದುದಲ್ಲದೆ ಸಂಸ್ಥಾನಿಕರ ದುಷ್ಟಸಂಪ್ರದಾಯಗಳನ್ನು ಧೈರ್ಯದಿಂದದೂರೀಕರಿಸಿ,ಭಾರತದ ಬೇರಾವ ರಾಜ್ಯವೂ ಸಾಧಿಸಿರದಷ್ಟು ಹೆಚ್ಚು ಜನಹಿತದ ಕಾರ್ಯ ನೆರವೇರಿತು. ಅವರ ಇಷ್ಟರ ವರೆಗಿನ ಚಟುವಟಿಕೆಗಳ ಕ್ಷೇತ್ರವು ಮಿತವಾಗಿದ್ದರೂ ತಮ್ಮ ಕಾರ್ಯ ಸಾಧನೆಯ ಉತ್ತಮ ದಾಖಲೆಯ ಬಲದಿಂದ ಅವರು ಅಖಿಲ ಭಾರತದ ರಾಜಕೀಯ, ಸಾಮಾಜಿಕ ಹಾಗು ಆರ್ಥಿಕ ರಂಗದಲ್ಲಿ, ಮುಖ್ಯವಾಗಿ 'ರಾಷ್ಟ್ರೀಯ ಕಾಂಗ್ರೆಸಿನ ಸತ್ವವನ್ನು ಹೆಚ್ಚಿಸುವುದರಲ್ಲಿ ಸಮರ್ಥರಾದಾರೆಂದು ಭಾವಿಸುವುದು ತಪ್ಪಾಗದು. ಆರ್ಥಿಕ ಬಿಕ್ಕಟ್ಟು ಮತ್ತು ಸಾಮಾಜಿಕ ವೈಷಮ್ಯವನ್ನು ಬೇಗನೆ ಪರಿಹರಿಸದಿದ್ದರೆ ನಿರಾಕಿಗೊಂಡ ಜನತೆಯು ದುರ್ಮಾರ್ಗಕ್ಕೆಳೆಯಲ್ಪಡುವ ಭಯವಿದೆಯೆಂದೂ ಹಾಗೊಮ್ಮೆ ಆದ ಪಕ್ಷದಲ್ಲಿ ಅದು ಏನು ಮಾಡೀತು, ಮಾಡಲಿಕ್ಕಿಲ್ಲವೆಂದು ಹೇಳುವುದು ಸಾಧ್ಯವಿಲ್ಲ ವೆಂದೂ ಢೇಬರರು ಅಹಮದಾಬಾದಿನ ಸಾರ್ವಜನಿಕ ಭಾಷಣದಲ್ಲಿ ಹೇಳಿದರು. ಹೊಸದೆಹಲಿಯಲ್ಲಿ ಮಾತನಾಡುತ್ತ ತಮ್ಮ ಮುಂದೆ ನಾಲ್ಕು ಮುಖ್ಯ ಸಮಸ್ಯೆಗಳದ್ದು ಅವುಗಳ ಕುರಿತಾಗಿ ವಿಶೇಷ ಲಕ್ಷ್ಯವನ್ನು ಹೂಡೆಯುತ್ತಿರುವುದಾಗಿ ಅವರು ಹೇಳಿದರು. ಕಾಂಗ್ರೆಸು ಪಕ್ಷವನ್ನು ಬಲಗೊಳಿಸುವುದೂ ಆಡಳಿತವನ್ನು ಸುಧಾರಿಸುವುದೂ ಒಟ್ಟಿಗೆ ನಡೆಯಬೇಕಷ್ಟೆ, ರಾಷ್ಟ್ರದ ಅಭಿವೃದ್ಧಿಗಾಗಿ ಕೈಗೊಳ್ಳಲಾದ ಕಾರ್ಯಕ್ರಮಗಳಲ್ಲಿ ಜನತೆಯ ಸಹಕಾರ ಅತ್ಯಧಿಕ ಪ್ರಮಾಣದಲ್ಲಿ ಸಿಗುವಂತೆ ಅವರೊಡನೆ ಸೇರಿ ದುಡಿಯುವುದು ಇಷ್ಟವೆಂದು ಢೇಬರರ ಆಭಿಪ್ರಾಯ. ಪಕ್ಷದೊಳಗೆಯೇ ಒಳ ಸಂಗಡಗಳು ಕಾಣಿಸುವ, ಎಧಾಯಕ ಕಾರ್ಯದಲ್ಲಿ ಆಸಕ್ತಿ ವಹಿಸುವ ಬದಲು ಅಧಿಕಾರ ಸ್ಥಾನದ ದಾಹವನ್ನೆ ತೋರಿಸುವ ಕಾಂಗ್ರೆಸಿನ ಪ್ರಕೃತ ಪರಿಸ್ಥಿತಿಯನ್ನು ಸುಧಾರಿಸಿ ಅದು ನಿಜವಾದ ಜನ ಸೇವಕ ಸಂಘವಾಗಬೇಕಾದರೆ ಢೇಬರರ ವಿಚಾರಗಳು ಕಾರ್ಯರೂಪಕ್ಕೆ ಇಳಿಯಲೇ ಬೇಕೆಂಬುದರಲ್ಲಿ ಪ್ರತಿಮಾತಿಲ್ಲ.

ಹಿತವಾದ

ಇನ್ನೂ ಎಳೆಯದಾಗಿರುವ ನಮ್ಮ ಪ್ರಜಾಪ್ರಭುತ್ವ ಪದ್ಧತಿಯು ಆಡಳಿತ ಕ್ರಮವನ್ನು ತಿಳಿದುಕೊಳ್ಳುವಲ್ಲಿ ನಮ್ಮ ಶಾಸನ ಸಭೆಗಳ ಮತ್ತು ಪಾರ್ಲಿಮೆಂಟಿನ ಸದಸ್ಯರು ಹೆಚ್ಚಿನ ಆಸಕ್ತಿಯನ್ನು ತೋರಿಸಲೇ ಬೇಕೆಂಬ ವಿಷಯವು ಕಳೆದ ವಾರದ ಘಟನೆಯೊಂದರಿಂದ ಸ್ಪಷ್ಟವಾಯಿತು. ಭಾರತದ ಪ್ರಥಮ ನಾಗರಿಕನೆಂದು ಮನ್ನಿಸಲ್ಪಡುವ ಮತ್ತು ಪ್ರಾಮಾಣಿಕತೆಯ ಮೂರ್ತಿ ಎಂದು ಭಾವಿಸಲಾದ ಲೋಕ ಸಭೆಯು ಅಧ್ಯಕ್ಷ ಮಾವಳಣಕರರ ಮೇಲೆ ಸ್ಪತಿ ಪಕ್ಷದ ಸದಸ್ಯರು ಒಂದು ಅವಿಶ್ವಾಸ ಗೊತ್ತುವಳಿಯನ್ನು ತಂದರು. ಗೊತ್ತುವಳಿಯು ಬಿದ್ದು ಹೋದರೂ ಈ ಘಟನೆಯಲ್ಲಿ ಜನತಾ ಪ್ರತಿನಿಧಿಗಳಾದವರು ಗೃಹಸಚೇತಕಾದ ಕೆಲವು ಮುಖ್ಯ ವಿಷಯಗಳನ್ನೆಯೆಂದರೆ ತಪ್ಪಲ್ಲ. ಮುಖ್ಯವಾಗಿ ಪ್ರತಿನಿಧಿ ಸಭೆಯ ನಿಯಮಾವಳಿಗಳನ್ನು ಅವರು ಚೆನ್ನಾಗಿ ಅಭ್ಯಾಸ ಮಾಡಬೇಕು. ಅವಿಶ್ವಾಸ ಸೂಚಕ ಗೊತ್ತುವಳಿಯಲ್ಲಿಯೇ ತಾಂತ್ರಿಕ ಲೋಪದೋಷಗಳಿ ದ್ದಿದನ್ನು ಗಮನಿಸಿದರೆ ಯಾರಿಗೂ ಆಶ್ಚರ್ಯ ಗೊತ್ತುವಳಿ ಮಂಡಿಸುವ ಕ್ರಮವೇ ಗೊತ್ತಿರಲಿಲ್ಲ ವೆಂದು ಭಾವಿಸಬೇಕಾಗುತ್ತದೆ. ಅದೂ ಅಲ್ಲವೆ ನಿಲುವಳಿ ಸೂಚನೆ ಮುಂತಾದ ಮಹತ್ವದ ಪ್ರಶ್ನೆಗಳನ್ನು ಎತ್ತುವಾಗ ಹಿಂದು ಮುಂದು ವಿಚಾರ ಮಾಡಬೇಕು

ಭಾರತದ ಕುರಿತು ಟಟೋರ ಹೊಗಳಿಕೆ
ಸಹಜೀವನದ ತತ್ವದಲ್ಲಿ ಯುಗೊಸ್ಲಾವಿಯದ ವಿಶ್ವಾಸ

ಸ್ವತಂತ್ರ ಭಾರತದ ಇತಿಹಾಸದಲ್ಲಿಯೇ ಮೊದಲ ಬಾರಿಗೆ ವಿದೇಶ ರಾಷ್ಟ್ರವೊಂದರ ವರಿಷ್ಠ ಅಧಿಪತಿಯು ಸಂದರ್ಶನ ಕೊಟ್ಟ ಘಟನೆಯೊಂದು ಕಳೆದ ವಾರ ಸಂಭವಿಸಿತು. ಯುಗೊಸ್ಲಾವಿಯದ ಅಧ್ಯಕ್ಷ ಟಟೋರವರು ತಮ್ಮ ಸರಕಾರದ ಉನ್ನತ ಸ್ಥಾನಾಪನ್ನರೇಮುಂತಾದವರಿಂದಕೂಡಿದ ೬೦ ಮಂದಿಯ ಪರಿವಾರದೊಂದಿಗೆ ಇದೇ ೧೬ನೇ ದಿನಾಂಕ ಮುಂಬಯಿಯ ಮಹಾದ್ವಾರದಲ್ಲಿ ಬಂದಿಳಿದರು. ಅವರಿಗೆ ಭಾರತ ಸರಕಾರದ ಪರವಾಗಿ ಪ್ರಚಂಡ ಸ್ವಾಗತವನ್ನು ನೀಡಲಾಯಿತು. ೧೮ ದಿನಗಳ ವರೆಗೆ ಭಾರತವಿಲ್ಲಿದ್ದು ಇಲ್ಲಿಯ ಪರಿಸ್ಥಿತಿಯ ಗ್ರಹಣ ಮಾಡಿಕೊಳ್ಳುವ ಟಟೋರವರು ಮುಂಬಯಿಯಿಂದ ವೈಭವಯುಕ್ತ ರೈಲಿನಲ್ಲಿ ಹೊಸ ದೆಹಲಿಗೆ ಪ್ರಯಾಣಿಸಿದರು. ಅಲ್ಲಿ ಅವರನ್ನು ರಾಷ್ಟ್ರಾಧ್ಯಕ್ಷರೂ ಉಪರಾಷ್ಟ್ರಾಧ್ಯಕ್ಷರೂ ಪ್ರಧಾನ ಮಂತ್ರಿಗಳೂ ಮತ್ತಿತರ ವರಿಷ್ಠರೂ ಸ್ವಾಗತಿಸಿದರು.

ಶಾಂತಿಯುತ ಸಹಕಾರ

ಟಟೋರವರು ಭಾರತದ ರಾಜಕೀಯ ಧೋರಣೆಯನ್ನು ಮೆಚ್ಚಿಕೊಂಡವರಲ್ಲಿ ಒಬ್ಬರೆಂದು ಅವರು ಮಾಡಿದ ಅನೇಕ ಭಾಷಣಗಳಿಂದ ಎಳೆದು ಬರುತ್ತದೆ. ಅದರಂತೆ ಭಾರತೀಯರು ರಾಷ್ಟ್ರದ ಪುನರ್ನಿರ್ಮಾಣದ ಕೆಲಸದಲ್ಲಿ ಕೈಗೊಂಡ ಪ್ರಯತ್ನಗಳೂ ಅವರಿಂದ ತಮ್ಮ

ದನ್ನು ಮಂಡಿಸಿತು. ಸರಿಣಾಮವಾಗಿ ರಾಷ್ಟ್ರ ಸಂಘದ ಕಾರ್ಯದರ್ಶಿಗಳು ಚೀನ ದೊಡನೆ ಸಂಧಾನ ನಡೆಸುವ ಹೊಣೆಗಾರಿಕೆಗೆ ಹೆಗಲುಕೊಡ ಬೇಕಾಯಿತು.

ಪೇಕಿಂಗಿಗೆ ಭೇಟಿ

ಏಕ ಪಕ್ಷೀಯ ನ್ಯಾಯದಿಂದ ಚೀನದ ವರ್ತನೆಯನ್ನು ಖಂಡಿಸಿದ ರಾಷ್ಟ್ರ ಸಂಘದ ನಿರ್ಣಯವು ಭಾರತಕ್ಕೆ ಒಪ್ಪಿಗೆ ಯಾಗಿಲ್ಲದಿದ್ದರೂ ವಿವಾದವು ಸುಲಭವಾಗಿ ಬಗೆಹರಿಯ ಬೇಕೆಂದು ಅದು ಬಯಸುತ್ತದೆ. ಆದುದರಿಂದ ರಾಷ್ಟ್ರ ಸಂಘದ ಕಾರ್ಯದರ್ಶಿಗಳು ತಾವು ದಶೆಂಬರ್‌ನೇ ತಾರೀಕಿನ ಬಳಿಕ ಪೇಕಿಂಗಿಗೆ ಸಂಧಾನಕ್ಕಾಗಿ ಬರುತ್ತೇವೆಂದು ಚೀನಕ್ಕೆ ತಿಳಿಸಿದಾಗ ಅವಕ್ಕೆ ಸಮ್ಮತಿಸಬೇಕೆಂದು ನೆಹರುಗಳು ಚೀನದ ಪ್ರಧಾನ ಮಂತ್ರಿಗಳನ್ನು ವಿನಂತಿಸಿಕೊಂಡರಂದು ತಿಳಿದು ಬರುತ್ತದೆ. ಚೀನದ ಪ್ರಧಾನ ಮಂತ್ರಿಗಳು ಸಂಧಾನ ಮಾತುಕತೆಗೆ ಒಪ್ಪಿದ್ದರೂ ರಾಷ್ಟ್ರ ಸಂಘದ ಕಾರ್ಯದರ್ಶಿಗಳು ಪೇಕಿಂಗಿಗೆ ಬರಬಹುದೆಂದು ಹೇಳಿರುವುದರಿಂದ ಭಾರತಕ್ಕೆ ಸಂತೋಷವಾಗಿರುವುದು ಸಹಜ. ಹೀಗೆ ಪೇಕಿಂಗಿಗೆ ಹೋಗುವಾಗ ನೆಹರುಗಳನ್ನು ರಾಷ್ಟ್ರ ಸಂಘದ ಕಾರ್ಯದರ್ಶಿಗಳು ಕಾಣುವರೆಂದೂ ತಿಳಿದು ಬರುತ್ತದೆ.

ವಿನಿಮಯದ ಭರವಸೆ

ಚೀನವು ಹೀಗೆ ಸೌಮ್ಯ ರೀತಿಯ ಪ್ರತ್ಯುತ್ತರವನ್ನು ಕಳಿಸಿದ್ದರೂ ಅನೇರಿಕದ ಮೇಲೆ ಹಲವು ಆರೋಪಗಳನ್ನು ಮಾಡುವುದಕ್ಕೆ ತಪ್ಪಿಲ್ಲ – ವಂಖ್ಯಾವಾಗಿ ಚೀನದಿಂದ ವಿಜ್ಞಾನ ಮುಂತಾದ ಮಹತ್ವದ ವಿಷಯಗಳನ್ನು ಕಲಿಯಲಿಕ್ಕೆಂದು ಅಮೇರಿಕಕ್ಕೆ ಬಂದಿದ್ದ ೩೫ ವಿದ್ಯಾರ್ಥಿಗಳನ್ನು ಸ್ವದೇಶಕ್ಕೆ ಹೋಗದಂತೆ ನಿರ್ಬಂಧಿಸಿರುವುದನ್ನು ಅನ್ಯಾಯವೆಂದು ಚೀನ ಹೇಳುತ್ತದೆ. ತಿಳಿಸಿಗೆ ಗುರಿಮಾಡಲ್ಪಟ್ಟ ಅಮೇರಿಕನ್ನರನ್ನು ಬಿಡುಗಡೆಗೊಳಿಸಿದರೆ, ಚೀನದ ವಿದ್ಯಾರ್ಥಿಗಳ ಮೇಲಿನ ನಿರ್ಬಂಧವನ್ನೂ ತೆಗೆದು ಖಾಕ ಬಹುದೆಂದು ಅಮೇರಿಕ ಈಗ ಹೇಳುತ್ತದೆ ಈ ಮಟ್ಟಿಗೆ ಚೀನ–ಅಮೇರಿಕ ವಿವಾದವಾಗಿಯೇ ಪ್ರಶ್ನೆಯನ್ನು ಪರಿಗಣಿಸಬಹುದು ಎಂದರೆ ಅಭಿಪ್ರಾಯ. ಅದರೆ ಚೀನವು ದೂರ ಸೂರ್ವದಲ್ಲಿ ಅಮೇರಿಕವು ನಡೆಸಿದ ಸೈನಿಕ ಚಟುವಟಿಕೆಗಳ ವಿರುದ್ಧವಾಗಿ ಆತ್ಮೇ ಪಪತ್ತಿದರೆ, ಅದಕ್ಕೆ ಯಾವ ಸಮಾಧಾರವೂ ಸಿಗುವುದು ಕಷ್ಟ. ರಾಷ್ಟ್ರ ಸಂಘದ ಕಾರ್ಯದರ್ಶಿಗಳು ಎದುರಿಸಬೇಕಾದ ಬಿಕ್ಕಟ್ಟುಗಳಲ್ಲಿ ಇದು ಮಹತ್ವದ್ದು.

ಭಾರತ–ಪಾಕ ತಂಟೆ

ಪಾಕಿಸ್ತಾನದ ವಸಿಸ್ಯರಲ್ಲಿ ಭಾರತದೊಡನೆ ಸ್ನೇಹದಿಂದ ಸಮಸ್ಯೆಗಳನ್ನು ಬಿಡಿಸಬೇಕೆಂಬ ಮನೋಭಾವ ಪುನಃ ಪ್ರಬಲಿಸಿರುವಂತೆ ಕಾಣುತ್ತದೆ. ನೆಹರುಗಳು ಸಂಧಾನದ ಬಾಗಿಲನ್ನು ಸದಾ ತೆರೆದಿದ್ದರೂ ಮಹಮ್ಮದಾಲಿಗಳೇ ಅದನ್ನು ಮುಚ್ಚಿಕೊಂಡರು. ಅದರೆ ಈಗಿನ ಮಹಮ್ಮದಾಲಿಗಳು ಮೊದಲಿನವರಲ್ಲ—ಗವರ್ನರ್ ಜನರಲ ಗುಲಾಂ ಮಹಮ್ಮದರ ಕುಣಿಸಿದಂತೆ ಕುಣಿಯುವ ಖಾತ್ರಿವರ್ಗದಲ್ಲಿ ಒಬ್ಬರು. ಆದುದರಿಂದಲೇ ಮರಳಿ ಅವರು ನೇರವಾದ ಮಾತುಕತೆಗಳ ಮೂಲಕ ಉಳಿದ ರಾಷ್ಟ್ರಗಳ ಸಮಸ್ಯೆಗಳನ್ನು ನಿವಾರಿಸುವ ಪ್ರಯತ್ನಕ್ಕೆ ತೊಡಗಿದ್ದು, ಇಂದೋನೇಶಿಯದಲ್ಲಿ ಕೊಲೊಂಬೋ ರಾಷ್ಟ್ರಗಳ ಸರಿಸತ್ತಿನಲ್ಲಿ ಭಾಗ ವಹಿಸುವ ಬಗ್ಗೆ ಸಂಬಧ್ಧದಲ್ಲಿ ಒಂಬೆ ದಿನ (ದಶೆಂಬರ್ ೩೫) ನೆಹರುಗಳೊಡನೆ ಪ್ರಾಸ್ತಾವಿಕ ಮಾತುಕತೆ ನಡೆಸುವರು.

(ಜನೇ ಮಟವಿಂದ)

ಅಪಧಿ ವಿನ್ಯಾರಣೆಯು ಅನವಶ್ಯಕವಾದುದೆಂದು ಮಂತ್ರಿಗಳು ಅದನ್ನು ಒಪ್ಪಲಿಲ್ಲ. ಕಳೆದ ಏಳು ವರ್ಷಗಳಲ್ಲಿ ಅಲ್ಲಲ್ಲಿ ಗಲಭೆ ಗೊಂದಲಗಳಾಗುತ್ತಲೇ ಇವೆಯೆಂದೂ ರಾಜ್ಯ ಸರಕಾರಗಳು ಇಂಥದೊಂದು ಶಾಸನವನ್ನು ಅಪೇಕ್ಷಿಸಿವೆಯೆಂದೂ ಅವರು ತಿಳಿಸಿದರು. ಅಲ್ಲದೆ, ಶಾಸನದ ದುರುಪಯೋಗವಾಗಿಲ್ಲವೆಂದು ಸಂಸತ್ತಿಗೆ ಮನವರಿಕೆಮಾಡಿಸಿಕೊಡುವ ದೃಷ್ಟಿಯಿಂದ ವರ್ಷಕ್ಕೊಮ್ಮೆ ಶಾಸನದ ಕಾರ್ಯಾಚರಣೆಯ ವಿವರಗಳನ್ನು ಸರಕಾರ ಒಪ್ಪಿಸುವುದುಎಂದೂ ಭರವಸೆಕೊಟ್ಟರು. ಕಾಯಿದೆ ಮಂತ್ರಿ ವಿಶ್ವಾಸರಪದವಾಗಿ ವಾಣಿಜ್ಯ ಮಂತ್ರಿ ಕರಮರಕರರು ಮಂಡಿಸಿದ್ದ ಹಿಂದು ವಿವಾಹ ವಿಧ್ಯೇಯಕವೂ ರಾಜ್ಯ ಸಭೆಯಲ್ಲಿ ಸ್ವೀಕಾರ ಗೊಂಡಿತ್ತು. ಪರಿಶೀಲಕ ಸಮಿತಿಯು ವಿವಾಹ ಯೋಗ್ಯ ಹುಡುಗ–ಮತ್ತು ಹುಡುಗಿಯರ ವಯಸ್ಸನ್ನು ಏರಿಸಿದ್ದರೂ ಸಭೆಯಲ್ಲಿ ಅದನ್ನು ೧೫ ನುತ್ತು ೧೫ ಎಂದು ಇಳಿಸಲಾಯಿತು. ದಾಂಪತ್ಯ ವಿಚ್ಛೇದನದ ಸುಬಂಧದಲ್ಲಿ ಕೆಲವು ಮಹತ್ವದ ತಿದ್ದುಪಡಿಗಳನ್ನು ಸ್ವೀಕರಿಸಲಾಯಿತು. ಈ ಶಾಸನದಂತೆ ಹಿಂದುಗಳಿಗೆ ದೊರಿತ ಸೌಕರ್ಯಗಳ ಪ್ರಯೋಜನವನ್ನು ಉಳಿದ ಮತದವರಿಗೂ ದೊರಕಿಸುವ ಉದ್ದೇಶದಿಂದ ಸರಕಾರದ ವರು ಕ್ರಮೇಣ ಸಂಬಂಧ ಪಟ್ಟ ಕ್ರಮಗಳನ್ನು ತೆಗೆದುಕೊಳ್ಳುವರೆಂದು ಮಂತ್ರಿಗಳು ಹೇಳಿ, ಪ್ರಸ್ತುತ ಶಾಸನದಂತೆ ಮದುವೆಯಾಗುವ ಭಾವೀ ವಧೂವರರಿಗೆ ಸಭೆಯ ಶುಭಾಶೀರ್ವಾದವನ್ನು ತಿಳಿಸುವ ಕವಿ ಯೊಂದನ್ನು ಓದಿದರು.

ಶಾಲಕ್ಕೆ ತಡೆಯೊಜ್ಞೆ

ರೈತುಂದ ಶಾಲ ವಸೂಲು ಮಾಡ ಬಾರದೆಂದು ವಿಧಿಸಲಾಗಿರುವ ಆಜ್ಞೆಯ ಅವಧಿಯನ್ನು ಬರುವ ಫೆಬ್ರುವರಿ ತಿಂಗಳ ಅಂತ್ಯದ ವರೆಗೆ ಮುಂದುವರಿಸಬೇಕೆಂದು ಮದ್ರಾಸಿನ ಶಾಸನ ಸಭೆಯಲ್ಲಿ ನಿರ್ಣಯಿಸಲಾಯಿತು. ಅಷ್ಟರೊಳಗಾಗಿ ಸರಕಾರವು ಇನ್ನೊಂದು ಮಸೂದೆಯನ್ನು ಸಿದ್ಧಪಡಿಸಿ, ಈಗಿನ ಶಾಸನದ ಲೋಪದೋಷಗಳನ್ನು ತಿದ್ದಿ ಯೋಗ್ಯ ಕೃಷಿಕರಿಗೆ ಮಾತ್ರ ರಕ್ಷಣೆ ಕೊಡುವ ವ್ಯವಸ್ಥೆ ಮಾಡುವುದು. ಕಾಂಗ್ರೆಸು ಸದ್ಭವ ಉಪಸಮಿತಿಯೊಂದು ಈ ವಿಷಯವನ್ನು ಪರ್ಯಾಲೋಚಿಸಿ ಮಂತ್ರಿಮಂಡಳಿಕ್ಕೆ ತನ್ನ ನಿರ್ಣಯವನ್ನು ಒಪ್ಪಿಸಿದ್ದು ಅದರ ವಿವರಗಳು ತಿಳಿದುಬಂದಿಲ್ಲ. ಈಗಿನ ವರದಿಗನುಸಾರ, ಕೃಷಿಕ ರೆಬ್ಬದ ಆರ್ಥವ್ಯಾಪ್ತಿಯನ್ನು ಮುಂಬರುವ ಮಸೂದೆಯಲ್ಲಿ ಮಿತಗೊಳಿಸಲಾಗುವುದು; ಮತ್ತು ಇಂತಿಷ್ಟು ಕಂತುಗಳಲ್ಲಿ ಸಾಲವನ್ನು ಮರುಪಾವತಿ ಮಾಡಬೇಕೆಂದು ನಿರ್ಬಂಧಿಸಲಾಗುವುದು. ಮುನ್ಸಿಫರುಗಳಿಗೆ ಸಾಲ ವಸೂಲಿ ಕಂಪಾತಿಕೆ ನಡೆಸುವ ಅಧಿಕಾರ ಕೊಡಲ್ಪಡುವುದು. ಹೆಚ್ಚಿಂದರೆ ೩೦೦ ರೂಪಾಯಿ ಕಂದಾಯ ತೆರುವ ರೈತರಿಗೆ ಮಸೂದೆಯ ಲಾಭ ದೊರಕುವಂತಾಗಬೇಕೆಂದು ಕೆಲವರಿಂದ ಸೂಚನೆ ಬಂದಿದ್ದರೂ ಈ ನಿಷಯದಲ್ಲಿ ಖಿನ್ನಾಭಿಪ್ರಾಯವಿಲ್ಲವೆಂದು, ಮಿತಿಯನ್ನು ಇನ್ನಷ್ಟು ಕಡಿಮೆ ಮಾಡುವ ಅಭಿಪ್ರಾಯದಲ್ಲಿ ಮಂತ್ರಿಮಂಡಳಿರುವಂತೆ ಕಾಣುತ್ತದೆ.

ಮೋಟಾರ್ ವೆಹಿಕಲ್ಸ್ ಆಕ್ಟಿನ ತಿದ್ದುಪಡಿ ಚರ್ಚಿಕಾಲದಲ್ಲಿ ಶ್ರೀ ಟಿ. ಎ. ಪೈ, ಎಮ್ ಎಲ್.ಎ. ಅವರು ಮದ್ರಾಸ ಸಭೆಯಲ್ಲಿ ಮಾಡಿದ ಭಾಷಣದ ಸಾರ

1939 ನೇ ಮೋಟಾರ್ ವಾಹನಗಳ ಆಕ್ಟಿನ ಲ್ಲಿಯ ಕೆಲವೊಂದು ಅಧಿಕಾರಗಳನ್ನು ಸರಕಾರವು ಬಿಟ್ಟುಕೊಡುವ ತಿದ್ದುಪಡಿಯ ಕುರಿತು ನಾನೀಗ ಚರ್ಚಿಸುತ್ತಿದ್ದೇವೆ. ಕೆಲವು ಅಧಿಕಾರಿಗಳನ್ನು ತೆಗೆದುಕೊಳ್ಳುವಾಗಲೂ, ಕೆಲವು ಅಧಿಕಾರಿಗಳನ್ನು, ಬಿಟ್ಟು ಕೊಡುವಾಗಲೂ ಸರಕಾರವು, ಕೆಲವೊಂದು ಟೀಕೆಗಳಿಗೊಳಗಾಗುತ್ತದೆ. ವಿಕೇಂದ್ರೀಕರಣದ ನೆಲೆಯಲ್ಲಿ ಈ ಕಾನೂನಿಗೆ ಸಂಬಂಧ ಪಟ್ಟ ವಿಷಯಗಳು ಆಯಾಯ ಜಿಲ್ಲೆಯ ಮಟ್ಟದಲ್ಲಿ ಇತ್ಯರ್ಥಿಸಲ್ಪಡಬೇಕೆನ್ನುವದನ್ನು ನಾವು ಸ್ವಾಗತಿಸುತ್ತೇನೆ. ಇದರಿಂದಾಗಿ ವಿಷಯಗಳು ಬೇಗನೆ ಇತ್ಯರ್ಥ ಹೊಂದಲು ಅನುಕೂಲವಾಗುತ್ತದೆ. ರೀಜನಲ್ ಟ್ರಾನ್ಸ್ ಪೋರ್ಟ್ ಕಮಿಟಿಗಳಲ್ಲಿ ನ್ಯಾಯ ವಿಧಾಯಕ ಸಭಾ ಸದಸ್ಯರಾಗಲೀ, ಬಲ್ಲಾ ಜೊರ್ಡು ಸದಸ್ಯರಾಗಲೀ, ಇರುವುದರ ಕುರಿತು ಸರಕಾರೇತರ ವರ್ಗಗಳಿಂದಲೇ ತಂಬಾ ಟೀಕಿಸಲ್ಪಟ್ಟಿತ್ತು. ಹೆಚ್ಚಿನ ಜಿಲ್ಲಾ ಜೊರ್ಡುಗಳ ಅಧ್ಯಕ್ಷರು ಕಾಂಗ್ರೆಸ್ ಪಕ್ಷದವರೇ ಆಗಿರುವುದರಿಂದ ಕೆಲವು ಸದಸ್ಯರು ರಾಜಕೀಯ ಬಣ್ಣವನ್ನು ಕೊಟ್ಟು ಗೊಂದಲ ಕೂಡಾ ಎಬ್ಬಿಸಿರುವರು. ರೀಜನಲ್ ಕಮಿಟಿಗಳಲ್ಲಿ ಸರಕಾರದ ಗಮನಕ್ಕೆ ತರುವುದು ನನ್ನ ಕರ್ತವ್ಯವಿದೆ. ಸೆಂಟ್ರಲ್ ರೋಡ್ ಟ್ರಾಫಿಕ್ ಬೋರ್ಡಿಗೆ ಹೋದ ಎಷ್ಟೋ ಪತ್ರಗಳು ಶೀಘ್ರವಾಗಿ ಇತ್ಯರ್ಥ ಹೊಂದುವುದಿಲ್ಲವೆಂಬುದನ್ನು ಮಾನ್ಯ ಮಂತ್ರಿಗಳ ಅಪಾಣತಿಗೆ ತರಲಿಚ್ಛಿಸುತ್ತೇನೆ. ಸಮೂಜ ವಿಕಾಸಯೋಜನೆ, ರಾಷ್ಟ್ರೀಯ ವಿಸ್ತರಣಾ ಯೋಜನೆ, ಲೋಕಲ್ ಡೆವಲಪ್‌ಮೆಂಟ್ ಯೋಜನೆಗಳನುಸಾರವಾಗಿ ಹೊಸ ಹೊಸ ರಸ್ತೆಗಳು ನಿರ್ಮಾಣವಾಗಬಹುದಿವೆ. ಗ್ರಾಮ ನಿವಾಸಿಗಳು ಅಂತಹ ರಸ್ತೆಗಳಲ್ಲಿ ಬಸ್ಸುಗಳು ಓಡಾಡಬೇಕೆಂದು ಅಪೇಕ್ಷಿಸುವುದು ಸ್ವಾಭಾವಿಕ. ಬರೇ ಎತ್ತಿನ ಗಾಡಿ ಹೋಗಲಿಕ್ಕಾಗುವಂತಹ ರಸ್ತೆಗಳ ಸೌಕರ್ಯಗಳನ್ನು ಕೊಡುವುದಾದರೆ ಅವುಗಳ ಬಗ್ಗೆ ವಿಚ್ಛಿನ್ನ ಮಾಡುವ ಹಣವು ಸ್ಥಳೀಯ ಬಸ್ಸುಗಳು ಹೋಗಲು ಕೆಲವೊಂದು ನಿರ್ದಿಷ್ಟ ರಸ್ತೆಗಳಿಗೆ. ಆವುಗಳನ್ನು ಹೊರೈಸದೆ ಬಸ್ಸು ಚಲಾವಣೆಗೆ ಅನುಮತಿ ದೊರೆಯುವುದಿಲ್ಲ. ಬಸ್ಸು ಚಲಾವಣೆಯಾದರೆನೇ ರಸ್ತೆಗಳು ಮರಿಸ್ತರಣೆಯಾಗಬೇಕಾಗುವುದು. ಆದುದರಿಂದ ಗ್ರಾಮಾಂತರಗಳಲ್ಲಿಯೂ ಬಸ್ಸುಗಳು ಓಡಾಡುವ ಸೌಕರ್ಯಗಳಾಗುವಂತೆ ಮಾನ್ಯ ಮಂತ್ರಿಗಳು ತಕ್ಕ ಕಾರ್ಯಕ್ರಮವು ಕೈಗೊಳ್ಳಬೇಕೆಂದು ವಿನ್ನವಿಸಿಕೊಳ್ಳುತ್ತೇನೆ.

ಈಚೆಗೆ ರೂ. 6½ ಲಕ್ಷ ವೆಚ್ಚ ಮಾಡಿ ಮದ್ರಾಸ್ ಸರಕಾರವು ಸುತ್ತಿಗೆ ಹೊಳೆಗೆ ಸೇತುವೆ ಹಾತಿಸಿಯದೆ. ಆದರೆ ಈಗ ನಾಲ್ಕಾರು ತಿಂಗಳುಗಳಾದರೂ ಸೇತುವೆ ಮೇಲಿಂದ ನೇರವಾಗಿ ಬಸ್ಸುಗಳನ್ನು ಕೊಂಡುಹೋಗಲು ಇನ್ನೂ ಕುಳುನುದೊರೆಯಲಿಲ್ಲ. ಪ್ರಯಾಣಕರಿಗೆ ತುಂಬಾ ಕಷ್ಟನಷ್ಟ ಉಂಟಾಗುತ್ತಿದೆ. ಇದನ್ನು ಬೇಗನೇ ಬಗೆಹರಿಸಿ ಬಸ್ಸುಗಳು ನೇರವಾಗಿ ಸೇತುವೆ ಮೇಲಿಂದ ಹೋಗಲು ಅನುಕೂಲತೆಯನ್ನೊದಗಿಸಿ ಕೊಡುವಂತೆ ನಾನು ಒತ್ತಾಯಿಸುತ್ತೇನೆ.

ಉಡುಪಿ

ಕೃಷಿಮಂತ್ರಿಗಳ ಕಾರ್ಯಕ್ರಮ:- ಇದೇ ತಾ. ೨೫ನೆ ಸಂಜೆ ಮದ್ರಾಸಿನ ಕೃಷಿ ಮಂತ್ರಿ ಶ್ರೀ. ಎಮ್. ಭಕ್ತವತ್ಸಲಂ, ಅವರು ಮಂಗಳೂರಿಗೆ ಬಂದು ಅಂದೇ ಉಡುಪಿಗೆ ಆಗಮಿಸುವರು. ಮರುದಿನ ತಾ. 25ನೇ ಬೆಳಿಗ್ಗೆ 8.30ಕ್ಕೆ ಮಣಿಪಾಲದಲ್ಲಿ ಇಂಡಸ್ಟ್ರಿಯಲ್ ಹೌಸಿಂಗ್ ಸ್ಕೀಮಿನಂತೆ ನ್ಯಸ್ಥಾಪಿಸಲಾಗುವ ಮಣಿಪಾಲ ನಿವಾಸದ ಶಂಕುಸ್ಥಾಪನೆ ನೆರವೇರಿಸುವರು. ನಂತರ 10ಗಂಟೆಗೆ ಇಡಂಬೂರು ಪಂಚಾಯತ್ ಬೋರ್ಡಿನ ಹೊಸ ಕಟ್ಟಡವನ್ನೂ ಉದ್ಘಾಟಿಸುವರು. ಮಧ್ಯಾಹ್ನ ಉಡುಪಿಯಲ್ಲಿ ಭೋಜನಾನಂತರ 2ಗಂಟೆಗೆ ಕಟ್ಟಾಬಿಯನ್ನು ವಿದ್ಯಾರ್ಥಿಗಳಿಗನ್ನು ಪ್ರಧಾನವಾಗಿ ಬೆಳಿಗಿಸುವರು ಮತ್ತು ಅಲ್ಲಿಂದ ಪಿಟ್ ನಾಟಿ ಕೇಂದ್ರಕಟ್ಟಡದ ಶಂಕುಸ್ಥಾಪನೆ ಮಾಡುವರು ಆನಂತರ ಮೂರ್ಕೈತೆರಳಿ ಅಲ್ಲಿಯ ಸಮೂಜ ವಿಕಾಸ ಯೋಜನಾ ಸೆಂಟರಿಗೆ ಸಂಬಂಧಿಸಿ ಸಂಜೆ ಮಂಗಳೂರಿಗೆ ತೆರಳಿ ಮರುದಿನ ಮುಂಜಾನೆಗೆ ಪ್ರಯಾಣ ಬೆಳೆಸುವರು ಎಂದು ತಿಳಿದು ಬರುತ್ತದೆ.

ಸದಸ್ಯತನ ರದ್ದಾಗಲಿಲ್ಲ? ವಿಚ್ಛಿಕ್ಷ ಮುನಿಸಿ ಪಾಲಿಟೀಸ್ ಆಕ್ಟಿನ 51 (1)ನೆ ಸೆಕ್ಷನ್ ಪ್ರಕಾರ ಜಿಲ್ಲಾ ಜಡ್ಜರು ತೀರ್ಪು ಕೊಡುವ ತನಕ ಶ್ರೀಮತಿ ಸುನೀತಾರಾವ್ ಹೆಬ್ಬಿಯವರ ಉಡುಪಿ ನಗರ ಸಭಾ ಸದಸ್ಯತನವು ರದ್ದಾಗುವುದಿಲ್ಲವೆಂದು ಕೊಯಮುತ್ತೂರಿನ ಮುನ್ಸಿಪಲ್ ಕೌನ್ಸಿಲ್ಸ್ ಮತ್ತು ಲೋಕಲ್ ಬೋರ್ಡುಗಳ ರಿಜನಲ್ ಇನ್ಸ್‌ಪೆಕ್ಟರರುಗಳಿಗೆ ರಸಭೆಗೆ ತಿಳಿಸಿರುವರು.ಆದರೆ ತಾ೨೭ರಂದು ಜರಗಿದ ನಗರಸಭೆ ಈ ಕುರಿತು ಚರ್ಚಿಸಿಭಿನ್ನಾಭಿಪ್ರಾಯ ಸೂಚಿಸಿ ಮುಂದುವರಿಸಲ್ಪಟ್ಟಿತು.

ಗ್ರಂಥಮಾಸಿಕ ಸಂಬಂಧ ನವಯುಗ ವಾರಪತ್ರಿಕೆಯವರು ಏರ್ಪಡಿಸಿದ ಗ್ರಂಥವಿಮರ್ಶ ಸ್ಪರ್ಧೆಯಲ್ಲಿ ಶ್ರೀಗಳಾದ I ಎಸ್. ಸನಾತನಿಪರಾಣ್, II ವಿಠ್ಠಾಸ್ ಕೆ. ವೀ., ಶರ್ಮಾ. III ಬಿ. ಎಸ್, ನಿಡ್ಡೋಡಿ ಇವರಿಗೆ ಬಹುಮಾನಗಳು ದೊರೆತಿವೆ.

ಉಪಾಹಾರ—ಉಡುಪಿ ಪ್ರಸಿದ್ಧ ಸದಾಶ್ರೀ ಯು. ಶಿವರಾಯ ಶೆಟ್ಟರು ತಮ್ಮನುಗಳು ಕುಮಾರಿ ವಸಂತಿದೇವಿಯವನ್ನು ಧಾರೆಯಾದಪ ಶ್ರೀ ಸೈಕುರಿ ವಿಠೋಬಾ ಸಾನಸ್ ಕಾರರ ಸುಪುತ್ರ ಶ್ರೀ ಶ್ರೀರಂಗಪಾಪೈಸ್‌ಕಾರರಿಗೆ ವಿವಾಹ ನಡಾಡಿಕೊಟ್ಟ ಸಂತೋಷಾರ್ಥವಾಗಿ ತಾ. 11ರಲ್ಲು ಬೂತೇಶರಪೂರ ಆಮಂತ್ರಿತರಿಗೆ ಉಪಾಹಾರಸಮಾರಂಭವನ್ನು ಏರ್ಪಡಿಸಿದರು.

ಮಕ್ಕಳ ಹಬ್ಬ—ಕಡಿಯಾಳಿ ಹಾ' ಎ' ಶಾಲೆಯ ಮಕ್ಕಳ ಹಬ್ಬ ಮತ್ತು ವಿಜಯಬಾಲವೀರ ದಳದ ಶಿಬಿರಾರ್ಥಿ ಸಮಾರಂಭಗಳು ತಾ. 10ರಲ್ಲು ಉಡುಪಿ ಉತ್ತರಶ್ರೇಣಿಯ ಪರೀಕ್ಷಾಧಿಕಾರಿ ಶ್ರೀ ಎಚ್. ಸಂಜೀವರಾಯರ ಅಧ್ಯಕ್ಷತೆಯಲ್ಲಿ ಜರಗಿ ವಿವಿಧಕಾರ್ಯಕ್ರಮಗಳಾದವು.

ಸೀತಾನದಿ ಜಾನುವಾರು ಜಾತ್ರೆ ಕಾರ್ಕಳ ತಾಲೂಕಿನ ಸೀತಾನದಿ ಕೇಂದ್ರದಲ್ಲಿ ವರ್ಷಂಪ್ರತಿ ಜರಗುವ ಜಾನುವಾರಿ ಸಂತೆಯು ಈ ಬಾರಿಯೂ ನಡೆಯಿತು ತಾ. 14ರಲ್ಲಿ ಉತ್ತಮಜಾತಿಯ ಜಾನುವಾರುಗಳ ಪ್ರದರ್ಶಕರಿಗೆ ಬಹುಮಾನ ವಿತರಣೆ ಮಾಡುವ ಸಮಾರಂಭವನ್ನು ಕೊಂಪಾಂಡರ್ ಸರ್ಜ್ ಕಲೆಕ್ಟರ್ ಶ್ರೀ. ಟಿ. ಎ. ಪಿ. ಕುರಿಪ್, ಆವರು ನೆರವೇರಿಸಿದರು. ಜಾತ್ರೆಯ ಸ್ವಾಗತ ಸಮಿತಿ ಅಧ್ಯಕ್ಷೆ ಶ್ರೀ. ಬಿ. ಭುಜಂಗ ಬಲ್ಲಾಳರು ಸ್ವಾಗತ ಭಾಷಣ ಮಾಡಿದರು. ಶ್ರೀ. ರಾಮವಾಸ ಪೈಯವರು ವಂದಿ ವಾಚನಮಾಡಿದರು. ಡಾ| ಯು ಕೃಷ್ಣ, ಶ್ರೀ ಎಮ್. ಕೃಷ್ಣಯ್ಯ ಸೆಟ್ಟಿ ಮೊದಲಾದವರು ಮಾತನಾಡಿದರು. ಆಕ್ಟಿವ ಸ್ವಾವಲಂಬಿಯಾದ ಭಾರತದಲ್ಲಿ ಗೋಸಂಪತ್ತಿನ ಅಭಿವೃದ್ಧಿ ಕಾರ್ಯವು ಜಿಲ್ಲಾಗುತ್ತಿತ ಉತ್ಪಾದನೆಯಿಂದ ಆಗಬೇಕಾಗಿದೆ ಎಂದು ಅಧ್ಯಕ್ಷರುಹೇಳಿದರು.

ಬೊಂಬಾಯಿ

ದೇವಾಡಿಗ ಸುಧಾರಕ ಸಂಘ — ಇದರ 29ನೇ ವಾರ್ಷಿಕೋತ್ಸವವು ಇದೇ ತಾ 25ನೆ ರವಿವಾರ ಆಸಂಜೆ 21/2ಗಂಟೆಗೆ ಸರ್ ಕವಾಸ್ಜಿ ಜಹಾಂಗೀರ್ ಪಬ್ಲಿಕ್ ಹಾಲಿನಲ್ಲಿ ಸಭಾಸದನದಲ್ಲಿ ಶ್ರೀನಾಥಳಲ್ಲಾ ವಿ. ಪಾರಿಜ್, ಅವರ ಅಧ್ಯಕ್ಷತೆಯಲ್ಲಿ ಜರಗಲಿದೆ.

ಮೊಲ್ಕಿಯಲ್ಲಿ ಪರುಷಪ್ರದರ್ಶನ

ಮೊಲ್ಕಿ ಹಾಲು ಸರಬರಾಯಿ ಸೊಸ್ಯಾಟಿಯ ನೇತೃತ್ವದಲ್ಲಿ ಇನೇ ತಾ. 26ನೆ ಆದಿತ್ಯವಾರ ಅಪರಾಹ್ನ 3 ಗಂಟೆಗೆ ಮೂಲ್ಕಿ ಮಿಲನ್ ಕಂಪೌಂಡ್ ಲ್ಲಿ ಜರಗಲಿರುವುದು. ಡಾ। ಕೆ. ಬಾಲಸ್ಪ ಶೆಟ್ಟರು ಪ್ರದರ್ಶನವನ್ನು ಉದ್ಘಾಟನೆ ಮಾಡುವರು. ಶ್ರೀ ಟಿ. ವೈಕುಂಠ ಬಾಳಿಗ, ಎಂ. ಎಲ್. ಎ., ಸಮಾರಂಭದ ಅಧ್ಯಕ್ಷತೆ ವಹಿಸಲಿರುವರು.

ಹಳ್ಳಿಯವರೆ ತಿಳುವಳಿಕೆಗೆ ಬೇಕಾದ 1 ಜಾನುವಾರು ಸಾಕುವಿಕೆ 2 ಜಾನುವಾರುಗಳ ರೋಗ ನ್ಮತ್ತು ಪುಶ್ಯಾಲೆ 3 ತೆಂಗಿನ ಮತ್ತು ಬಾಳೆಯ ಕೃಷಿ, ಇವುಗಳ ಕುರಿತು ಅನುಭವ ಸ್ಥರಿಂದ ಭಾಷಣದ ವಿಶಾಡು ಇವೆ.

ಎನ್ಮೈ, ಕೋಣ, ದನ, ಬೀಜದ ಹೋರಿ, ಆದು ಮತ್ತು ಕೋಳಿಗಳನ್ನು ಪ್ರದರ್ಶನಕ್ಕೆ ತರುವವರು, ಮೂಲ್ಕಿ ಹಾಲು ಸರಬರಾಯಿ ಸೊಸ್ಯಾಟಿಯಲ್ಲಿ, ಇಲ್ಲವೇ ಪ್ರದರ್ಶನ ಕಮಿಟಿ ನಂಬರಕೊದನೆ ತಾ. 25-12-54ನೆ ರವಿವಾರ ಸಾಯಂಕಾಲ ಗಂಟೆ 4ರೊಳಗೆ ತಮ್ಮ ಹೆಸರು, ವಿಳಾಸ ಸ್ಪಧೆಗೆ ತರುವ ಪ್ರದರ್ಶಕರ ಹೆಸರು ಮತ್ತು ಸಂಖ್ಯೆಯನ್ನು ತೋರಿಸುವ ಅರ್ಜಿಯನ್ನು ಕೊಡಬೇಕು ಪ್ರದರ್ಶಕರಿಗೆ ಬೇಕಾದ ಸೌಕರ್ಯಗಳನ್ನು ಒದಗಿಸಲಾಗುವುದು, ಬಹುಮಾನ ಕೊಡುವ ವಿಚಾರವೂ ಮಾಡಲಾಗಿದೆ. ಜಲಚಿತ್ರ ಪ್ರದರ್ಶನವೆ ವ್ಯವಸ್ಥೆಯೂ ಇದೆ. ಸರ್ವರೂ ಬಂದುಸ್ಪೈತ್ಸಾಹಿ ಸಹಕಾರಿಗಾಗಿ ಸಭಾ ಪ್ರದರ್ಶನ ಕಮಿಟಿಯ ಅಧ್ಯಕ್ಷ ಶ್ರೀ. ಎಸ್ಸೆ. ಆರ್. ಎಚ್. ಭೋಂಜರು ತಿಳಿಸುತ್ತಾರೆ.

ಪಬ್ಲಿಕೇಷನ್

ಕಾರ್ಕಳ ತಾಲೂಕು ಹಿರಿಗಾನ ಗ್ರಾಮದ ಚಿಕ್ಕಬೆಟ್ಟು ಶ್ರೀ ವಿಷ್ಣುಮೂರ್ತಿ ದೇವರ ಭಂಡಾರಕ್ಕೆ ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟ್ ಕ್ರಮ ನಂಬ್ರ 637/53ರಲ್ಲು ಆದ ತೀರ್ಮಾನ ಪ್ರಕಾರ ಹಿರಿಗಾನ ಗ್ರಾಮದ ಸರ್ವೇನಂಬ್ರ 39ರಲ್ಲಿ ಸ. ಡಿ ನಂಬ್ರ 2ನೇ ಸ್ಥಳದಲ್ಲಿರುವ ಕಡಿದು ಹಾಕಿದ ಸುರಗಿಯ 2 ಮತ್ತು ಸತ್ತ ಮರ 1 ನುತ್ತು ಕಡಿಯಲಿಕ್ಕಿರುವ ಮರಗಳು 2 ಕೂಡಾ 5 ಪೆಟ್ಟಲಸಿನ ಮರಗಳು, ಮತ್ತು ಕರ್ನಾರು ಇತರ ಕಾಟು ಜಾತಿ ಮರಗಳು. ಸದರಿ ಸ್ಥಳಕ್ಕೆ ತಾಗಿ ಇರುವ ಸರ್ವೆ ನಂಬ್ರ 39ರಲ್ಲಿ ಸ.ಡಿ. ನಂಬ್ರ 10ನೇ ಸ್ಥಳದಲ್ಲಿರುವ ಮಾವಿನ ಮರ 1 ಕೂಡಾ ಇವೇ ತಾರೀಕು 2—1—1955ನೇ ಆದಿತ್ಯವಾರ ಮಧ್ಯಾಹ್ನ 1 ಗಂಟೆಗೆ—ಮರದ ವ್ಯಾಪಾರಿಗಳ ಅಪೇಕ್ಷೆ ಮೇರೆಗೆ ಬೈಲೂರು ಪೇಟೆಯಲ್ಲಿ ಯೇಲಮು ಮಾಡೋಣಾಗುವದು. ಸದರಿ ಯೇಲಮಿನಲ್ಲಿ ಸಹಿ ಸಿಕೊಂಡವರು ಆ ದಿನಸ ಸದರಿ ಯೇಲಮು ಹಣದ ಪೈಕಿ ಸಮಾ ಅರ್ಧಾಂಶ ಆ ದಿನವೇ ತೆತ್ತು ರಶೀದಿ ಪತೆಯುಸ್ಪದಲ್ಲದೆ ಬಾಕಿ ಅರ್ಧಾಂಶದ ಹಣ ತಾರೀಕು 17 1-55 ರಲ್ಲು ಕೊಟ್ಟು ರಶೀದಿ ಪಡೆಯದಿದ್ದರೆ ಯೇಲಮು ತನ್ನಂತೆ ರದ್ದಾಗಿ ಕಟ್ಟಿದ ಹಣ ವಾಪಾಸು ಸಿಗಲಾರದು ಎಂಬ ಸಂಗತಿ ಈ ಮೂಲಕ ತಿಳಿಯಪಡಿಸೋಣಾಗುತ್ತದೆ—

Sri Chikkalbettu Temple, Hirgan, Date 18—12—54. } K Subbaiya Shetty Trustee.

ಮೂಲ್ಕಿ ಆಸ್ಪತ್ರೆ ನಿರಾಶ್ರಿತ ಫಂಡಿನ ಮಹಾ ಸಭೆಯು ತಾ 6 ರಲ್ಲಿ ಸ್ಥಳೀಯ ಜೋಕಲ್ ಫಂಡ್ ಆಸ್ಪತ್ರೆಯಲ್ಲಿ ಡಾ। ಎಸ್. ರಾಯಸ್ಪ ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು ಕಮ್ಯೂನಿಟಿ ಪ್ರೊಜೆಕ್ಟ್ ಇಲಾಖೆಯಿಂದ ಆಸ್ಪತ್ರೆಯ ಕೆಲವು ಸಲಕರಣೆಗಳನ್ನು ಒಪ್ಪಿಸಬೇಕೆಂದೂ, ಆಸ್ಪತ್ರೆ ಎದುರಿನ ಗೋದೆಯನ್ನು ಮರುನಿರ್ಮಿಸಿ ಪಡಿಸುವಂತೆ ಬೆಲ್ಜಾ ಜೋರ್ಡು ಅಧ್ಯಕ್ಷರನ್ನು ಕೇಳಿಕೊಳ್ಳಬೇಕೆಂದೂ ನಿರ್ಣಯಗಳಾದುವು.

ಮೂಲ್ಕಿ ಬಿಲ್ಲವ ಸಮಾಜ ಸೇವಾ ಸಂಘದ ಹೊಸ ಕಟ್ಟಡದ ಶಂಕುಸ್ಥಾಪನಾ ಕಾರ್ಯವು ತಾ. 12ರಲ್ಲು ಶ್ರೀ ಕೆ. ವೈ. ಪೂಜಾರಿಯವರ ಅಧ್ಯಕ್ಷತೆಯಲ್ಲಿ ಶ್ರೀ ಎಚ್. ಸೋಮು ಸುವರಂ ಅವರಿಂದ ನೆರವೇರಿಲ್ಪಟ್ಟಿತು. ಶ್ರೀಗಳಾದ ಬಿ. ಭೋಜ ರಾವ್, ಎಮ್. ರಾಮಣ್ಣ ಶೆಟ್ಟಿ, ಬಿ. ಆರ್. ಕರ್ಕೇರಾ, ಎಮ್. ಜಾರಪ್ಪ, ಎಸ್. ಕೆ. ಎನ್ಸಪ್ಪ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಅಧ್ಯಕ್ಷರಿಂದ ಸಲಹೆ ಸೂಚನೆಗಳಾಗಿ ನಂದನಾರ್ಪಣೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ಪೆರ್ಕಳೆ—ಳ್ಳೀಯ ವಿದ್ಯಾರ್ಥಿ ಭವನದ ಮ್ಯಾನೇಜಿಂಗ್ ಶ್ರೀ ಸಿ. ನಾರಾಯಣ ಉಪಾಧ್ಯಾಯರು ವ್ಯವಸ್ಥೆಗೊಳಿಸಿದ ರೇಡಿಯೋ ವಿನ ಉದ್ಘಾಟನಾ ಸಂಸಾರಂಭವು ತಾ. 15 ರಂದು ಡಾ| ಗಿರಿಧರರಾಯರಿಂದ ನೆರವೇರಿಸಲ್ಪಟ್ಟಿತು. ಶ್ರೀಗಳಾದ ಎಮ್ ಸಂಕಯ್ಯ ಶೆಟ್ಟಿ, ರಾಜೀವ ಕೋಟ್ಯಾನ್, ಕೆ. ಅನಂದ ಶೆಟ್ಟಿ ಇವರ ಶ್ರೇಯಸ್ಸನ್ನು ಕೋರಿ ಭಾಷಣ ವಿತ್ತರು.

ಪರ್ಕಳ ಬಾಸೆಲ್ ಮಿಶನ್ ಹಾ। ಎ। ರಾಯೆ ಹಾಯರ್ ವಿಭಾಗದ ತರಗತಿಗಳ ಪ್ರತ್ಯೇಕ ಕಟ್ಟಡದ ಉದ್ಘಾಟನಾ ಸಮಾರಂಭವು ತಾ. 9ರಲ್ಲಿ ಶ್ರೀ ಬಿ. ಹರಿಲ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು ಕಟ್ಟಡದ ಉದ್ಘಾಟನೆಯನ್ನು ಅಧ್ಯಕ್ಷರು ಜೂಲೈಸಿವೆ ಬಳಿಕ ಶ್ರೀಗಳಾದ ಎಮ್. ಎನ್ ಪೈ, ಎನ್. ರಾಘವ ಹೆಗ್ಡೆ, ಕೆ. ಆನಂದ ಶೆಟ್ಟಿ, ಎಚ್. ಸಾಮಿ ಸಟ್ಟಿ ಮೊದಲಾದವರು ಮಾತನಾಡಿದರು. ವಿವಿಧ ವಿನೋದಾವಳಿ, ಮತ್ತೆಳಿಗೆ ಸಿಹಿ ತಿಂದಿ ಹಂಚೋಣಗಳಾದ ಬಳಿಕ, ಹೆಡ್ಮಾಸ್ಟರ್ ಶ್ರೀ. ರಾಜೀವ ಕೋಟ್ಯಾನರು ಧನ್ಯವಾದಗಳನ್ನರ್ಪಿಸಿದರು.

ರಟ್ಟಾದಿ: ತಾ 22-10-51 ರಲ್ಲು ಶ್ರೀ. ಮಂಕಿ ಬಡಿಯಣ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ಕಮ್ಯೂನಿಟಿ ಪ್ರೊಜೆಕ್ಟ್ ಸ್ಥಳದಲ್ಲಿ ಜಲ್ಲಾ ಜೋರ್ಡು ಶಾಲೆಯೊಂದುತೆರೆಯಲ್ಪಟ್ಟಿತು.

ಬ್ರಹ್ಮಾವರ 1955 ನೇ ಫೇಬ್ರವರಿಯಲ್ಲಿ ದ. ಭಾ. ಹಿಂದಿ ಪ್ರಚಾರ ಸಭೆಯ ಕಡೆಯಿಂದ ನಡೆಸಲ್ಪಡುವ ಪ್ರಾರಂಭಿಕ ಪರೀಕ್ಷೆಗಳು, (ಪ್ರಾರ್ಥಮಿಕ, ಮಧ್ಯಮಾ, ರಾಷ್ಟ್ರಭಾಷಾ) ಎಸ್. ಎಮ್. ಎಸ್. ಹೈಸ್ಕೂಲ್, ಬ್ರಹ್ಮಾವರ ಈ ಕೇಂದ್ರದಲ್ಲಿ ನಡೆಯಲಿರುವ ಪಂದು ಸ್ಥಳೀಯ ಹಿಂದೀ ಪ್ರಚಾರಕ ಶ್ರೀ ಪಿ. ರಮಾಕಾಂತ ತಂತ್ರಿಗಳು ತಿಳಿಸುತ್ತಾರೆ.

ಬೈಂದೂರು ತಾ 8 ರಲ್ಲು ಬೈಂದೂರು, ಯಡ್ತರೆ ಮತ್ತು ಪಡುವರಿ ಗ್ರಾಮಸ್ಥರು ರಾಷ್ಟ್ರೀಯ ವಿಸ್ತರಣಾ ಯೋಜನೆಯ ಮುಖ್ಯ ನಿರ್ವಹಣಾಧಿಕಾರಿಗಳ ಆಫೀಸಿನಲ್ಲಿ ಶ್ರೀ ಆರ್. ಕೆ. ಸಂಜೀವ ರಾಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಗ್ರಾಮ ಸೇವಾ ಸಂಘವೊಂದು ಸ್ಥಾಪಿಸಲಾಯಿತು. ಶ್ರೀ ಗಳಾದ ಡಿ. ಆರ್, ಕುಂಬಳೆ, ಅಧ್ಯಕ್ಷ; ಪಂಕಟ್ಟಮಣ ಹೋಬಳಿ ದಾರ್, ಉಪಾಧ್ಯಕ್ಷೆ, ಪಿ. ಸುಬ್ಬಣ್ಣ ಶೆಟ್ಟಿ, ಕಾರ್ಯದರ್ಶಿ, ಎಚ್. ಪುಂಜುನಾಥ ಸೇರುಗಾರ ಸಹಾಯಕಕಾರ್ಯದರ್ಶಿಗಳಾಗಿ ಆರ್. ನಾಯಕ್, ಕೋಶಾಧಿಕಾರಿಗಳಾಗಿ, 16 ಮಂದಿಯ ಕಾರ್ಯಕಾರಿ ಸಮಿತಿಯು ರೂಪುಗೊಂಡಿತು.

ಪೊಳಲಿ—ಮಂಗಳೂರಿನ ಸೈಂಟ್ ಎಲೋಸಿಯಸ್ ಕಲಾ ಶಾಲೆಯ ಸಮಾಜ ಸೇವಾ ಸಂಘದ ಪೀಲ್ಡ್‌ವರ್ಕಿತೆಯ 30 ವಿದ್ಯಾರ್ಥಿಗಳು ನುತ್ತು ಆಧ್ಯಾಪಕರು ತಾ. 8ರಂದು ಪೊಳಲಿಗೆ ಬಂದು ಗುರುಸುರ—ಪೊಳಲಿ ಹೊಸ ರಸ್ತೆಯ ಸಾಧಾರಣ 1½ಫರ್ಲಾಂಗು ರಸ್ತೆ ಕಲಸವನ್ನು ಮೂರುದಿನಸಗಳಲ್ಲಿ ನುಗಿಸಿದರು. ಊರವರೂ ವಿದ್ಯಾರ್ಥಿಗಳ ಶ್ರಮದಾನದಲ್ಲಿ ಬೆಂಬಲಸಿತ್ತಿದ್ದರು.

ಉಚ್ಚಿಲ—ಸರಿಯಾಳಸಮಾಜ ಸುಧಾರಕ ಸಂಘ ಉಡುಪಿ—ಇದರ ಪನ್ನೊಂದನೆ ವಾರ್ಷಿಕೋತ್ಸವವು ಇದೇ ತಾ. 25ನೇ ರವಿವಾರ ಅಪರಾಹ್ನ 1ಗಂಟೆಗೆ ಉಚ್ಚಿಲ ಸರಸ್ವತಿ ಮಂದಿರ ಹಾ। ಎ। ಶಾಲೆಯಲ್ಲಿ ಶ್ರೀ ಸುಬ್ಬ ಹಂಸ, ಪೆಜ್ಜಾಡಿ, ಅವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಕುಂಬಳೆ—ಸ್ಥಳೀಯ ಶಾಂತಿ ಕುಟೀರದಲ್ಲಿ ತಾ. 12ರಲ್ಲು ಮಂಗಳೂರಿನ ಸ್ವಾಮಿ ಆದಿದೇವಾನಂದಜೀಯವರು ಹಿಂದೂ ಧರ್ಮದ ಕುರಿತು ಭಾಷಣಿಸಿದ್ದರು

ಮಂಜೇಶ್ವರ ಬ್ಲೂಕ್ ಡೆವಲಪ್ ಮೆಂಟ್ ಸಭೆಯು ತಾ. 15ರಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎ. ಕುಂಞಾಮದ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕಳದ ಅಕ್ಟೋಬರ್, ನವಂಬರ ತಿಂಗಳುಗಳಲ್ಲಿ ನಡೆದ ಕಾರ್ಯಕಲಾಪಗಳ ವರದಿಯನ್ನು ಓದಲ್ಪಟ್ಟಿತು.

ಸುರತ್ಕಲ್—ಇಲ್ಲಿಯ ವಿದ್ಯಾರ್ಥಿನೀ ಹೈಸ್ಕೂಲಿನ ವಾರ್ಷಿಕೋತ್ಸವವು ತಾ. 18—11—54ರಂದು ನಮ್ಮಾ ಬಿಲ್ಲಾ ವಿದ್ಯಾರ್ಥಿಕಾರಿಗಳಾದ ಶ್ರೀ. ಕೆ. ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಐ ಆಚ್ಯುತರಾವ್, ಎಂ. ಎ. ಅವರ (ಶಾಲಾಭಿನಂದನೆ), ಪರದಿ ವಾಚನ, ಅಧ್ಯಕ್ಷರಭಾಷಣ, ಮತ್ತಿತ್ತ ವಿವಿಧ ವಿನೋದಾವಳಿಗಳೂ ನೆರವೇರಿದುವು. ಮರುದಿನ ಅದೇಶಾಲೆಯ ಹಳೆಯ ವಿದ್ಯಾರ್ಥಿಕೂಟದ ವಾರ್ಷಿಕೋತ್ಸವವು ಶ್ರೀ ಕೆ ಎಲ್. ಸೂರ್ಯ ನಾರಾಯಣ ರಾಯರ(ಅಸಿಸ್ಟಾಂಟ್ ಕಮ್ಯೂನಿಟಿ ಪ್ರೊಜೆಕ್ಟ್ ಆಫೀಸರ್) ಅಧ್ಯಕ್ಷತೆಯಲ್ಲಿ ಜರಗಿ, ಭಕ್ತದಾಸಾಜಪಂತನೆಂಬ ರೂಪಕದ ಅಭಿನಯದೊಂದಿಗೆ ಮುಕ್ತಾಯವಾಯಿತು.

ಕೊಡೂರು (ಹೊಸನಗರ) ತಾ. 8 ರಲ್ಲಿ ಡಾ। ಆರ್. ಎಸ್. ಉಪ್ಪೂರು, ಇವರ ಚಿಕಿತ್ಸಾಲಯದಲ್ಲಿ ಶ್ರೀ. ಕೆ. ಸುಬ್ಬಭಟ್ಟರ ಅಧ್ಯಕ್ಷತೆಯಲ್ಲಿ ಶ್ರೀ ಅಂಕಕೇಶ್ವರ ಯಕ್ಷಗಾನ ತಾಳಮದ್ದಳೆ ಜರಗಿತು. ಅಂದಿನ (ಅಂಗದ ಸಂಧಾನ ಮತ್ತು ಕರ್ದಾರ್ಜುನರಕಾಳಗ) ಪ್ರಸಂಗ ಗಳಿಗೆ ಶ್ರೀ ಮಲ್ಲೇಶ್ವರ ಸುಂಜಪ್ಪಯ್ಯನವರ ಪಾಡುಗಾರಿಕೆಯು ಹೊಳಪುಗೊಟ್ಟಿತು.

ಕುಂದಾಪುರ ಡಿ. ಮು. ಕೊರ್ಟಿನಲ್ಲಿ

ಕ್ರಮಸಂಖ್ಯ 353/ 4.

ಶ್ರೀ ಭಾಸುಸನಕಟ್ಟೆ ಮಠದ ಶ್ರೀರಘುಪತಿಲಕ ತೀರ್ಥ ಶ್ರೀಪಾದಂಗಳವರು—ವಾದಿರು.

ನ ತ್ತು

ಜನಾರ್ಧನ ಉಪಾಧ್ಯಾಯಾ—ಪ್ರತಿವಾದಿರು

ಯಿನರೊಳಗೆ

ಶನಿವಾರ ಬೆಳಿಗ್ಗೆ 9ನೇ ಪ್ರತಿವಾದಿ ಕುಂದಾಪುರ ತಾಲೂಕು ಬೇಳಾಡಿ ಗ್ರಾಮವಲ್ಲಿರುವ ವೆಂಕಟಾಚಲ ಬೆಳಿಂತ್ತರ ಮಗ ಸುಧೀರ್ರಾಯ ಬೆಳಿಯರಿಗೆ, ಈ ಕೂಡಲೆ ಹಿಂಸಿಸಿರುವುದು ಬೇಕೆಂದು

ಕುಂದಾಪುರ ರಾಜಿಗಳು ಗೋಪಾಡಿ ಗ್ರಾಮದ ಸರ್ವೆ ನಂ 96/5;7ನೇ ಸ್ಥಳಗಳನ್ನು ಸದ್ರಿ ಸ್ಥಳದಲ್ಲಿರುವ ಐದಿರೆ ಮರವ ಪಕ್ಕಿನ ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನದಲ್ಲಿ ಸದ್ರಿ ದೇವರ ಪೂಜೆಯನ್ನು ಸೂಡಿ ಬರುವ ಬಗ್ಗೆ 1ನೇ ಪ್ರತಿವಾದಿ ವಗ್ಗೆರೆಕುಟುಂಬಕ್ಕೆ ಪ್ರಭುತಾಬಿಟ್ಟಿದ್ದಾಗಿದ್ದು ಈಗ ಸದ್ರಿ ದೇವಸ್ಥಾನದಲ್ಲಿರತಕ್ಕ ಸದ್ರಿ ಲಕ್ಷ್ಮೀನಾರಾಯಣ ದೇವರ ಪಿಸ್ಸೆಪಲನ್ನು ಕಳಕೊಂಡು ಯಾ ಅಪರಿಸಿ ಸದ್ರಿದೇವರ ಪೂಜೆಯನ್ನು ಅಂತ್ಯಪಡಿಸಿದ್ದಲ್ಲದೆ ಸದ್ರಿ ಪೂಜೆಗೆ ಸಮ್ಮಂಧಪಟ್ಟ ಮೇಲ್ಕಂಡ ಜಮೀನನ್ನು ಸಹಾ ನೀವು ನಗ್ಗೆರೆರು ಬೇರೆ ಬೇರೆ ರೂಪರಿಂದ ವರ್ತಾಸೀನಕ್ಕೆ ಪಡೆದಿರುವುದರಿಂದ ಸದ್ರಿ ಜಮೀನನ್ನು ಬಿಟ್ಟು ಉದ್ದಿಶ್ಯಗಳು ವ್ಯರ್ಥವಾದ ಪ್ರಯುಕ್ತ ಸದ್ರಿಜಮೀನಿಯ ಸ್ವಾಧೀನತೆ ಬಗ್ಗೆಯಾಗಲಿ ಸಲ್ಲಿಬಗ್ಗೆಯಾಗಲಿ ಮತೆವ ಕಟ್ಟಜಗಳನ್ನು ನಾಲವಡ್ಡಿನೆ ನಷ್ಟವೆ ಬಗ್ಗೂ ಕೂಡಾವಾದಿಯ ಮೇಲ್ಕಂಡ ದಾವಾ ಮಾಡಿರುತ್ತಾರೆ. ಸದ್ರಿ ದಾವೆಯನ್ನು ತಪ್ಪಿಬಗ್ಗೆ ತಾರೀಕು 1-1-1955ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಯಿನೊಣಾಗಿಯೆ. ಆವಹರಿಸುವದಿನ್ನೆ ಸದ್ರಿದಿನಕ್ಕೆ ಹಾಜ್ರಾಗಿ ಜಾಬೀರು ಮಾಡಿಕೊಳ್ಳ ಬಹುದು.

A. V. N. Hebbar· Vakil.
Pleader for Plff.
Coondapoor. Date 20-12-54

ಕರ್ನಾಟಕದ ಪ್ರಸಿದ್ಧ ಹಿರಿಯ-ಕಿರಿಯ ಬರಹಗಾರರ ಲೇಖನಗಳಿಂದ --

'ಜನಪ್ರೇಮಿ'ಯ

ಪಾರ್ಷಿಕ ಸಂಚಿಕೆ

ಇದೇ ದಸಂಬರ 31ರಂದು ಹೊರಬೀಳುವುದು.

ಪೆಚ್ಚು ಪುಟಗಳು. ಬೆಲೆ 1½ ಆಣೆ ಮಾತ್ರ.

ಫಾದರ್ ಅಲೆಕ್ಸಾಂದರ ಪಿಂಟೋ, ಪ್ರಧಾನ ಸಂಪಾದಕರು.

ಎಸ್. ಟಿ. ಭಟ್, ವಿದ್ವಾನ್, ಸಹಸಂಪಾದಕರು.

ಪೆಚ್ಚಿನ ಪ್ರತಿಗೆ – "ಜನಪ್ರೇಮಿ" ಮಂಗಳೂರು—2.




ಶತಮಾನದ ಅನುಭವ ಹೊಂದಿರುವ
ವಾಟಲೀವಾಲಾ ಆಯುರ್ವೇದಿಕ್
ಜನರಿಕ್ಸ್
ಇಂಜೆಕ್ಷನ್ಸ್ ಔರ ಪ್ರತ್ಯೇಕ ಪ್ರಕಾರಕೆ ಔಷಧ ಕೆಲಿಯೆ।
ಸೋಲ ಮೆನ್ಯುಫೆಕ್ಚರರ್ಸ: ಡಿ. ಎಚ್. ಎಲ್. ವಾಟಲೀವಾಲಾ ಸನ್ಸ್ ಎಂಡ್ ಕಂ. ಲಿ.
ವಾಟಲೀವಾಲಾ ಬಿಲ್ಡಿಂಗ್, ೯೩ ಬಿ. ಪೋರ್ಚುಗೀಜ್ ಚರ್ಚ್ ಸ್ಟ್ರೀಟ್,
Tele. Add. "CAWASHABAD"
ದಾದರ್, ಬಾಂಬೆ ೨೮.



ಮಂಗಳೂರು

ಹಾಸನ—ಮಂಗಳೂರು ರೈಲ್ವೆ ವಿಚಾರ ಇದೇ ತಾ. 17ರಲ್ಲಿ ಸದರ್ನ್‌ರೈಲ್ವೆ, ಮುಖ್ಯಾಸ್ಥ, ಇವರ ಚೀಫ್ ಎಂಜಿನಿಯರ್ ಶ್ರೀ ಎಮ್. ಗಣಪತಿಯವರು ಮಂಗಳೂರಿನ ಕೆನರಾ ಚೇಂಬರ್ ಆಫ್ ಕಾಮರ್ಸಿನಲ್ಲಿ ಭೂತನಾಡುತ್ತಾ ಮಂಗಳೂರು—ಹಾಸನ ರೈಲು ಮಾರ್ಗದ ಸರ್ವೆಕೆಲಸವು ಮುಂದಿನ ಆಗೋಸ್ತು ತಿಂಗಳ ಅಂತ್ಯದೊಳಗೆ ಮುಗಿಯಬಹುದೆಂದೂ,ಬಳಿಕ ಅಸರ್ಮೀವರದಿಯು ಕೇಂದ್ರ ರೈಲ್ವೆಬೋರ್ಡಿನ ಪರಿಶೀಲನೆಗೊಳಪಟ್ಟು, ಸರಕಾರಕ್ಕೆ ಹೋಗಿ ಮಂಜೂರಾಗಬೇಕೆಂದೂ ನಂತರ ಆರುವರುಷಗಳೊಳಗೆ ಈ ಯೋಜನೆಯನ್ನು ಪೂರ್ಣಗೊಳಿಸಬಹುದೆಂದೂ ಅದಕ್ಕೆ ಆರುಕೋಟಿ ರೂಪಾಯಿ ವಿಚಾರ್ಜಿಗ ಬಹುದೆಂದೂ ಹೇಳಿದರು. ಹಾಸನ ಸರಕಾರಿ ಶಸುರವರೆಗಿನ ರೈಲ್ವೆ ರಸ್ತೆಯ ಸರ್ವೆಕೆಲಸವು ಪೂರ್ಣವಾಗಿದೆಯೆಂದು ಅವರು ಹೇಳಿದರು.

ಜೋಗ್ ವಿದ್ಯುತ್ ಯೋಜನೆ— ಇದೇಸಭೆಯಲ್ಲಿ ಸುವ್ಯವಸಿನ ವಿದ್ಯುತ್ ಇಲಾಖೆಯ ಚೀಫ್ ಒಪರೇಶನ್ ಇಂಜಿನಿಯರ್ ಶ್ರೀ. ಎಮ್. ಬಿ. ಕಂದಸ್ವಾಮಿಯವರು ಜಿಲ್ಲೆಯ ಜೋಗ್ ವಿದ್ಯುತ್ ಯೋಜನೆಯ ಗೋಪುರ, ತಂತಿಗಳನ್ನು ಹಾಕುವ ಕೆಲಸವು ಇನ್ನೊಂದುತಿಂಗಳಲ್ಲಿ ಮುಗಿಯುವುದಾಗಿ ತಿಳಿಸಿದರು. ಈ ಯೋಜನೆಯು ಪೂರ್ಣವಾದಮೊದಲೆ ಮಂಗಳೂರು—ಮೂಲ್ಕಿ, ಕಾಪು-ಹೆಜ್ಮಾಡಿ, ಮಂಗಳೂರು— ಕುಂಬಳೆ—ಕಾಸರಗೋಡು-ತ್ರಿಕ್ಕರಿಪುರ, ಮಂಗಳೂರು—ಬಂಟ್ವಾಳ—ಪುತ್ತೂರು ಮೊದಲಾದ ಕಡೆಗಳಲ್ಲಿ ವಿದ್ಯುತ್ ಶಕ್ತಿಯನ್ನೂ ಒದಗಿಸುವ ಯೋಜನೆಗಳು ತಯಾರಿ ಸಲಾಗುವುದು ಎಂದರು. ಉಡುಪಿಯ ಸರಕಾರಿ ವಿದ್ಯುತ್ ಸರಬರಾಯಿ ಸಂಸ್ಥೆಯ ವಿಸ್ತರಣೆ ಮೊದಲಾದ ವಿಷಯಗಳನ್ನು ವಿವರಿಸಿ, ಉಡುಪಿಯಲ್ಲಿ ವಿಸ್ತರಣೆ ಮಾಡಲಾಗಿದ್ದರೂ ಹೆಚ್ಚಿನ ಸಹಕಾರಸಿಕ್ಕುತ್ತಲಿಲ್ಲವೆಂದೂ ಸಾಕಷ್ಟುಜನರು ವಿದ್ಯುತ್ ಶಕ್ತಿಯನ್ನೂ ಉಪಯೋಗಿಸಲು ಮುಂದೆ ಬರುತ್ತಲಿಲ್ಲವೆಂದೂ ಹೇಳಿದರು. ಪಾಣಾರಂಭದ ಮೊದಲು ಶ್ರೀ. ಬಿ. ಎಸ್. ಕುಡ್ವರು ನಾನ್ಯತಿಥಿಗಳನ್ನೂ ಸ್ವಾಗತಿಸಿದರು ಅಂತ್ಯದಲ್ಲಿ ಶ್ರೀ ಬಿ. ಪೈಕುಂರಬಾಳಿಗ ಎಮ್. ಎಲ್. ಎ. ಇವರು ಧನ್ಯವಾದಗಳನ್ನರ್ಪಿಸಿದರು ಶ್ರೀ ಕೆ. ಲಕ್ಷ್ಮಣ ಪೈಗಳು ಸಭಾಧ್ಯಕ್ಷತೆ ವಹಿಸಿದ್ದರು.

ಸಾರ್ವಜನಿಕ ಸಭೆಗಳು— ಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಇದೇ ತಾ 12ರಲ್ಲಿಬೆಳಿಗ್ಗೆ ಬೊಂದೆಲ್ ಇಗರ್ಜಿಯ ಸಭಾಂಗಣದಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಉಪಾಧ್ಯಕ್ಷ ಶ್ರೀ ಕೆ. ಆರ್ ಆಚಾರ್ಯರ ಅಧ್ಯಕ್ಷತೆಯಲ್ಲಿ ಸಂಜೆ ಕೊಂಚಾಡಿ ಕಾರ್ಖಾನೆಯ ಸಭಾಂಗಣದಲ್ಲಿ ಜಿಲ್ಲಾಕಾಂಗ್ರೆಸ್ ಕಮಿಟಿ ಅಧ್ಯಕ್ಷ ಡಾ| ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಗಳು ಜರಗಿ ಕಾಂಗ್ರೆಸ್ ಪ್ರಚಾರಕಾರ್ಯ ನಡೆಯಿತು. ಕಾರ್ಯದರ್ಶಿ ಶ್ರೀ ಎಮ್. ಎಲ್. ಸೆಟ್ಟರು ಧನ್ಯವಾದಗಳನ್ನರ್ಪಿಸಿದರು.

ನಗರಸಭೆ— ಮಂಗಳೂರು ನಗರಸಭೆಯು ತಾ.11ರಲ್ಲಿ ಉಪಾಧ್ಯಕ್ಷ ಶ್ರೀ. ಬಿ. ಎಸ್. ಭಾಸ್ಕರ ರೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಜೆಪ್ಪು ಸೆಮಿನರಿ ರಸ್ತೆಗೆ ದಾಮಾರುಪಾಕಲು ರೂಪಾಯಿ 10,815ರ ತಿದ್ದಿದ ಅಂದಾಜುಪಟ್ಟಿ, ನಗರದ 24 ಪ್ರಮುಖ ಜಂಕ್ಷನುಗಳಲ್ಲಿ ಅಲಂಕಾರಿಕ ವಿದ್ಯುದ್ದೀಪಗಳನ್ನು ಹಾಕಲು ರೂ 20000ಇತ್ಯಾದಿ ಮಂಜೂರಾತಿ ದೊರಿಸಿದವು.

ಆಷಾಢಿತರ ಬಿಡುಗಡೆ— ಇದೇ ಜನವರಿ 28ರಲ್ಲು ಜೆಪ್ಪು ಹೊರ್ಗನ್ ಗೇಟಿನ ಬಳಿ ನಡೆದ ಲೋಕನಾಥ ಸೆಟ್ಟಿ ಕೊಲೆಯ ಪ್ರಕರಣದಲ್ಲಿ ಮುತ್ತಪ್ಪ, ವೆಂಕಪ್ಪ ಮತ್ತು ಡಾಬು ಪೂಜಾರಿ-ಈ ಮೂವರಿಗೆ ಜಿಲ್ಲಾ ಸೆಶನ್ಸ್ ಜಡ್ಜರು ವಿಧಿಸಿದ ಶಾಶ್ವತ ಶಿಕ್ಷೆಯ ಕುರಿತು ಸ್ಯಾಕೋರ್ಟಿನ ಮುಂದೆ ಆಪೀಲು ಮಾಡಲಾಗಿ ಶಿಕ್ಷೆಯನ್ನು ರದ್ದುಗೊಳಿಸಿ, ಮೂವರನ್ನೂ ಬಿಡುಗಡೆ ಮಾಡಲಾಗಿದೆ ಎಂದು ಹೇಳಲಾಗಿದೆ.

ಜಿಲ್ಲೆಗೆ ಜೋಗ್ ವಿದ್ಯುಚ್ಛಕ್ತಿ— ಜೋಗಿನ ಮಹಾತ್ಮಾ ಗಾಂಧೀ ಸ್ಮಾರಕ ವಿದ್ಯುಚ್ಛಕ್ತಿ ತಯಾರಿಕ ಕೇಂದ್ರದಿಂದ ಪ. ಕ. ಜಿಲ್ಲೆಗೆ ವಿದ್ಯುತ್ ಸರಬರಾಯಿ ಮಾಡುವ ಯೋಜನೆಯನ್ನು ಮೈಸೂರು ಸರಕಾರವು ಆದಷ್ಟು ಬೇಗನೆ ಮುಂದುವರಿಸಬೇಕೆಂದು ಮೈಸೂರು ಸರಕಾರವನ್ನು ಕೇಳಿಕೊಳ್ಳಲಾಗಿದೆ. ಈಗಿನ ಕೆಲಸದ ಪ್ರಗತಿಯ ಪರಿಶೀಲನೆಯಂತೆ ಮೈಸೂರು ಸರಕಾರವು 1956ನೆ ಆಕ್ಟೋಬರೆಯೊಳಗೆ ವಿದ್ಯುಚ್ಛಕ್ತಿಯನ್ನು ಒದಗಿಸಬಹುದೆಂದೂ, ಈ ಜಿಲ್ಲೆಯಲ್ಲಿ ಮದ್ರಾಸು ಸರಕಾರದ ಗಡಿಯಿಂದ ಸ್ತಂಭಗಳ ರಚನೆ, ಸರಿಗೆಗಳನ್ನು ಹಾಕುವುದು ಮತ್ತು ಸಬ್ ಸ್ಟೇಶನುಗಳ ನಿರ್ಮಾಣ ಕಾರ್ಯವು 1955ರ ಮಧ್ಯಭಾಗದೊಳಗೆನೇ ಸಂಪೂರ್ಣವಾಗಿ ವಿದ್ಯುತ್ತನ್ನು ಪಡೆಯಲು ಸಿದ್ಧವಾಗಿರಲಿದೆ ಎಂದೂ ಇತ್ತೀಚೆಗೆ ಕಾನುಗಾರಿ ಖಾತೆಯ ಸಚಿವ ಶ್ರೀ ಪಣ್ಣಾಗ ಸೇತುಪತಿ ರಾಜಾರು ತಿಳಿಸಿರುವರು.

ಆಗಮನ— ಶ್ರೀ. ಕೆ. ಸಂತಾನಂಡೆಪ್ಪೆಗೌಡರು ಯುಕ್ತರಾಷ್ಟ್ರ ಸಂಘದ ಭಾರತದ ಪ್ರತಿನಿಧಿಗಳಲ್ಲೊಬ್ಬರಾಗಿ ಆಮೇರಿಕಕ್ಕೆ ಹೋದವರು ತಾ 6ರಲ್ಲಿ ಮರಳಿ ದುಂಗಳೂರಿಗೆ ಆಗಮಿಸಿದುವರು. ತಿರನ್ನು ಸ್ವಾಗತಿಸಿ ಸತ್ಕರಿಸಲು ತಾ. 19ರಂದು ಭಾರತ ಸ್ಕೌಟ್ಸ್ ಮತ್ತು ಗೈಡರ ಹಾಗೂ ಜಿಲ್ಲಾ ಕಾರ್ಯಕಾರಿ ಸಮಿತಿಯ ಸಭೆಯ ಜಿಲ್ಲಾ ಸ್ಕೌಟ್ ಕಾರ್ಯಾಲಯದಲ್ಲಿ ಜರಗಿತು. ಡಾ| ಶ್ರೀಧರ ರಾಯರು ಸ್ವಾಗತಿಸಿದ ಬಳಿಕ ಡಾ| ಪೆರ್ನೆಯವರು ಅಮೇರಿಕಾದವರ ಜನ ಜೀವನ, ಕಾರ್ಯ ನಿರತರಾಗೂ ವ್ಯವಸ್ಥಿತ ಜೀವನದ ವಿಷಯವಾಗಿಯೂ ಅಲ್ಲಿಯ ಸ್ಕೌಟ್ ಚಟುವಟಿಕೆಗಳ ಕುರಿತಾಗಿಯೂ ಭಾಷಣಿಸಿದರು.

ಪುಣ್ಯತಿಥಿ— ಸರ್ದಾರ್ ವಲ್ಲಭಾಯಿ ಪಟೇಲರ ಪುಣ್ಯತಿಥಿಯು ತಾ. 15ರಲ್ಲಿ ಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಶ್ರೀ. ಬಿ. ಆರ್. ಕರ್ಕೇರರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಆಚರಿಸಲ್ಪಟ್ಟಿತು. ಶ್ರೀಗಳಾದ ಕೆ. ಆರ್. ಆಚಾರ್, ಎಸ್. ಎಸ್. ಹೊಳ್ಳ, ವಿ. ಜಗನ್ನಾಥರೈ ಮೊದಲಾದವರು ಕಾರ್ಯೋಚಿತ ಮಾತುಗಳನ್ನಾಡಿದರು.

ಜಿಲ್ಲಾ ಬೀಡಿ ಮತ್ತು ಹೊಗೆಸೊಪ್ಪು ಲೇಬರ್ ಯೂನಿಯನ್— ಮಹಾ ಸಭೆಯು ತಾ. 15ರಲ್ಲು ಶ್ರೀ ಕೆ. ಪೋಣ ನಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿ, ಮುಂಗಳೂರಲ್ಲಿ ಜರಗಲಿರುವ ೨ನೆ ಜಿಲ್ಲಾ ಬೀಡಿ ಮಜೂರರ ಸಮ್ಮೇಳನದ ಸ್ವಾಗತ ಸಮಿತಿಯನ್ನು ರಚಿಸುವ ಬಗ್ಗೆ ನಿರ್ಣಯನೂಡಿತು.

ತಂತಿ ನೌಕರರ ಸಂಘ ಅಖಿಲ ಭಾರತ ಟೆಲಿಗ್ರಾಫ್ ಟ್ರಾಫಿಕ್ ಎಂಪ್ಲೊಯಿಸ್ ಯೂನಿಯನ್ ಕ್ಲಾಸ್ IV. ಇದರ ಸಭೆಯೊಂದು ತಾ. 19ರಲ್ಲು ತಂತಿ ಮಾಸ್ಟರ್ ಶ್ರೀ. ಕೆ ಎನ್ ನಾಯಕರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯಕಾರೀ ಮಂಡಳಿಗೆ ಶ್ರೀಗಳಾದ ಎನ್. ಎಸ್. ಬಲ್ಲಾಳ್ (ಅಧ್ಯಕ್ಷ), ಜೆ. ಜನಾರ್ಧನ (ಉಪಾಧ್ಯಕ್ಷ), ಎಲ್. ಎಮ್. ಡಿ'ಸೋಜ (ಕಾರ್ಯದರ್ಶಿ), ನಿ ಕತ್ರಿಯ (ಖಜಾನ್ಜಿ). ಕೆ. ವಸಂತ, ಎ. ಬಾಬು, ಎಮ್. ಭೈರ (ಸಮಿತಿ ಸದಸ್ಯರು), ಕೆ. ಸಿ. ಸ್ವ (ಆಡಿಟರ್)ಗಳವರು ಆರಿಸಲ್ಪಟ್ಟರು.

ದ. ಕ. ಜಿಲ್ಲಾ ಒಕ್ಕಲು ಹಿತಸಮೂದೆ ಯ ಕುರಿತು ಮದ್ರಾಸು ಎಸೆಂಬ್ಲಿಯಲ್ಲಿ ಶ್ರೀ. ಟಿ. ಎ. ಪೈಗಳು ಕೇಳಿದ ಪ್ರಶ್ನೆಗೆ ಕಂದಾಯ ಮಂತ್ರಿ ಶ್ರೀ ಪಾಣಿಕ್ಯಚೇಲ ನಾಯಕರ್, ಅವರು ಉತ್ತರಿಸುತ್ತಾ ದಕ್ಷಿಣ ಕೆನ್ನಡ ಜಿಲ್ಲೆಗಾಗಿ ಒಂದು ಸರ್ವಾನ್ವೇ ರೈತ ಹಿತಕಾಪಾಡು ತಯಾರಿಸುವ ಸೃಷ್ಟಿಯು ಈ ಸರಕಾರದ ಪರ್ಯಾಲೋಚನೆಯಲ್ಲಿದೆ. ಈಗ ದಾರಿಯಲ್ಲಿರುವ ದ. ಕ. ಜಿಲ್ಲಾ ಒಕ್ಕಲು ರಕ್ಷಣೆಗೆ ತಾತ್ಕಾಲಿಕ ಶಾಸನ ಅಂತ್ಯವಾಗುವ 1955ನೆ ಫೆಬ್ರುವರಿ ತಿಂಗಳೊಳಗೆ ಈ ಶಾಸನವು ಜ್ಯಾರಿಗೆ ಬರುವ ಸಂಭವವಿದೆ, ಈ ಶಾಸನಕ್ಕೆ ಸರಿಯಾದ ರೂಪುಕೊಡುವ ಕಾರ್ಯವು, ಈಗಲೆ ನಡೆದಿದ್ದು ಆದಷ್ಟುಬೇಗನೆ ಕಾನೂನು ತಯಾರಾಗಲಿದೆಯೆಂದು' ಎಂದು ಹೇಳಿದರು.



ಕೇಂದ್ರ ಸರಕಾರವ ವರ್ತ್ಸ್ ವಾಸಿಂಗ್ ಮತ್ತು ಸಪ್ಲೈ ಶಾಖೆಯ ಮಂತ್ರಿ ಸರ್ದಾರ್ ಸ್ವರಣ ಸಿಂಗರು.

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇರೆ ರೂ. 10- } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ
ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್.
ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂದ್ರಮ್, ಕಲ್ಲಿಕೋಟೆ ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು

The Bombay Life Assurance Co., Ltd., Bombay.

(ಉತ್ತಮ ಸಾರಸ್ವತ ಬ್ರಾಹ್ಮಣರ ಆಡಿಗೆ, ಶುಚಿ ರುಚಿಯಾದ ರೈಸ್‌ಪ್ಲೇಟ್)
ರುಚಿಕರವಾದ ಊಟ— ಹವೇಶೀರ್ (Airy) ವಸತಿ,
ಎರಡು ಊಟ, ಕೋಟ್ (Cot) ಇತ್ಯಾದಿ ಸೌಕರ್ಯ.
ತಿಂಗಳೊಂದರ ರೂ. 52/- ಮಾತ್ರ.
ವಿಶೇಷ ಮಾಹಿತಿಗೆ ಪ್ರತ್ಯಕ್ಷ ವಿಚಾರಿಸಿರಿ.

ಸದ್ಗುರು ಬೋರ್ಡಿಂಗ್ ಎಂಡ್ ಲೋಜಿಂಗ್

ಹಿಂದ್‌ಸೂತಾ ಸಿನೇಮದ ಸಮೀಪ, ದಾದರ್, ಮುಂಬಯಿ ೧೪.
ವ್ಯವಸ್ಥಾಪಕ: ವಿ. ಯಸ್. ಪ್ರಭು

ಕುಮಾರಿ ಬಿಲ್ಲೆಗಳು (ಸರಕಾರಿ ರಜಿಸ್ಟರ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು
ದೋಷಗಳನ್ನು ಪರಿಹರಿಸಲು ಪರಿಣಾಮಕಾರಿ.
ಈ ಔಷಧ ಸೇವನೆಯಿಂದ ಯಾವ ಭಾದಕವೂ ಉಂಟಾಗದೆ ತೀವ್ರ ಗುಣಮೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ 8/-

Mrs. P. DEVEE, F. Ds. (N. J.) (ವಿ. ಪಿ. ಪಿ. ಪ್ರತ್ಯೇಕ)
CALCUTTA—40 ಸ್ಟಾಕಿಸ್ಟರು: ಶಹಾಕಂಪೆನಿ,ಮಂಗಳೂರು

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಆನಂದ ಸುಧ



ನಮ್ಮ "ಆನಂದ ಸುಧ" ನಮಸ್ತ ಜನಗಳಿಗೆ ಬಲವನ್ನು ಖಂಡ ಪುಷ್ಟಿಯನ್ನು ತೆಚ್ಚಿಸುವುದು. ಅನೇಕ ವ್ಯಾಧಿಗಳನ್ನು ನಾಶಪಾಡುತ್ತೆ. ೧೫ ದಿನಗಳಿಗೆ ಸರಿಯೋಗುವ ೪ ಔನ್ಸ್ ಸೀಸೆ ೧ಕ್ಕೆ ರೂ. ೩—೦—೦.

ನಮ್ಮ ಸ್ಟಾಕಿಸ್ಟರು:
(1) ಸುದರ್ಶನ ಆಯುರ್ವೇದ ಸೌಧಶಾಲೆ—ಬೆಂಗಳೂರು-2.
(2) ಷಾ ಕಂಪೆನಿ—ಮಂಗಳೂರು-1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

ನಮ್ಮ ಆಹಾರದಲ್ಲಿ ಮೊಟ್ಟೆಯ ಪಾತ್ರ

ಕೋಳಿ ಸಾಕುವವರಿಗೆ ಕೆಲವು ಸಲಹೆಗಳು

ಭಾರತೀಯರ ಆಹಾರ ಬಹುವಾಗಿ ಧಾನ್ಯ ಗಳಿಂದ ತಯಾರಾದುದು. ಧಾನ್ಯ ಪ್ರಧಾನವಾ ದ ಆಹಾರದಲ್ಲಿ ಮೊಟ್ಟೆ ಮತ್ತು ಕೋಳಿಮಾಂ ಸವು ಅತ್ಯಂತ ಹೆಚ್ಚಿನ ಪೌಷ್ಟಿಕ ಹಾಗೂ ಬ ೆಲೆಯ ಆಹಾರ ವಸ್ತುವಾಗುತ್ತದೆ. ಹಾಲು ಬ ೆಲೆಯ ಪೋಷಕ ಆಹಾರವಾದರೂ, ಆಗತ್ಯ ವಾದಷ್ಟು ಪ್ರಮಾಣದಲ್ಲಿ ಅದು ದೊರೆಯುತ್ತಿ ಲ್ಲ. ಈ ಅಭಾವವನ್ನು ನೀಗಲು ದೀರ್ಘಕಾ ಲಾವಧಿ ಯೋಜನೆಗಳು ಬೇಕು. ಆದರೆ ಕೋಳಿ ಮರಿಗಳನ್ನು ಅ ಲ್ಪ ಕಾ ಲ ದ ಯ ಲ್ಲಿ ಹಾಗೂ ಅತ್ಯಲ್ಪ ವೆಚ್ಚದಲ್ಲಿ ಬೆಳೆಸಬಹುದು.

ಭಾರತದಲ್ಲಿ ಮೊಟ್ಟೆಯ ಉಪಯೋಗದ ಪ್ರಮಾಣವು ಬಹಳಷ್ಟು ಹೆಚ್ಚಿದರೆ- ಅಂದರೆ ಪ್ರತಿ ವ್ಯಕ್ತಿಗೆ ಪ್ರತಿ ವರ್ಷಕ್ಕೆ 4 ಮೊಟ್ಟೆಗಳಂ ಬ ಈಗಿನ ಪ್ರಮಾಣದ ಬದಲು ದಿನಕ್ಕೆ 1 ಮೊಟ್ಟೆಯಾದರೆ—ಆನೇಕ ಆಹಾರ ಸಮಸ್ಯೆಗ ಳು ಬಗೆ ಹರಿಯುವುವು. ಇಂತಹ ಪ್ರಯತ್ನಕ್ಕೆ ಬೇಕಾದ ತಾಂತ್ರಿಕ ಕುಶಲತೆ ನಮ್ಮ ದೇಶದ ಲ್ಲಿದೆ. ಕೋಳಿ ಸಾಕಣೆಗೆ ಹಚ್ಚಿನ ಬಂಡವಾಳ ಬೇಕಾಗಿಲ್ಲ. ಇದೊಂದು ಸಹಾಯಕ ಕೈಗಾರಿ ಕೆಯಾಗಿಯೂ, ಬಡಗ್ರಾಮ ನಿವಾಸಿಗಳಿಗೆ ವರಮಾನ ತರುವ ಕ್ಷೇತ್ರವಾಗಿಯೂ ಇದೆ.

ಪ್ರಸಕ್ತ ಭಾರತದಲ್ಲಿ 60,000,000 ಕೋ ಳಿ ಸಾಕಣೆ ಕೇ ಂ ದ್ರ ಗ ಳಿ ವೆ. ಸುಮಾರು 107,000,000 ರೂಪಾಯಿಗಳಷ್ಟು ಬೆಲೆಬಾ ಳುವ ಮೊಟ್ಟೆಗಳ ಉತ್ಪಾದನೆಯಾಗುತ್ತಿದೆ. ವರ್ಷಕ್ಕೆ 50 ಮೊಟ್ಟೆಗಳನ್ನಿಡುವ ಸಾಮಾನ್ಯ ಕೋಳಿಗಳಿಂದ ಹಿಡಿದು 120—150 ಮೊಟ್ಟೆ ಗಳನ್ನಿಡುವ ಆಸಾನುಸ್ಯಾ ಕೋಳಿಗಳನ್ನು ಇ ಲ್ಲಿ ಕಾಣುತ್ತೇವೆ.

ಸರಕಾರದ ವಿವಿಧ ಕೋಳಿ ಸಾಕಣೆ ಕೇಂ ದ್ರಗಳಲ್ಲಿ ಉತ್ತಮ ಜಾತಿಯ ಕೋಳಿ ಮರಿಗ ಳನ್ನು ಉತ್ಪತ್ತಿ ಮಾಡಿ ಆವುಗಳನ್ನು ಗ್ರಾಮಾಂ ತರ ಪ್ರದೇಶಗಳಲ್ಲಿ ಪಂಚಲಾಗುತ್ತಿದೆ. ಪ್ರಥ ಮ ಪಂಚ ವಾರ್ಷಿಕ ಯೋಜನೆಯಲ್ಲಿ 25.15 ಲಕ್ಷ ರೂಪಾಯಿಗಳನ್ನು ಕೋಳಿ ಸಾಕಣೆ ಉ ತ್ತೇಜನಕ್ಕಾಗಿ ಕೊಟ್ಟಿದ್ದರೂ ಕೋಳಿ ಸಾಕಣೆ ಯ ಅಭಿವೃದ್ಧಿಯಲ್ಲಿ ಹೆಚ್ಚೇನೂ ಪ್ರಗತಿಯಾ ಗಿಲ್ಲ. ಆಗತ್ಯವಾದ ಪ್ರಮಾಣದಲ್ಲಿ ಮಾತೃ ಪಕ್ಷಿಗಳಲ್ಲದಿರುವುದೇ ಇದಕ್ಕೆ ಕಾರಣ. ಭಾರ ತ ಕೃಷಿ ಸಂಶೋಧನ ಪರಿಷತ್ತಿನವರು ವಿವಿ ಧ ರಾಜ್ಯಗಳಲ್ಲಿ ಹಾಗೂ ಇಜ್ಜತ್ ನಗರದ ಕೋಳಿ ಸಾಕಣೆ ವಿಭಾಗದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಯೋಜನೆಗಳನ್ನು ಆಚರಣೆ ಗೆ ತರುತ್ತಿರುವರು. ಈ ಕೋಳಿ ಸಾಕಣೆ ವಿ ಭಾಗದಲ್ಲಿ ಕೋಳಿಗಳಿಗೆ ತಗುಲ ಬಹುದಾದ ರೋಗ ರುಜೆನಗಳು, ಪೌಷ್ಟಿಕ ವಸ್ತುಗಳು, ಕೇಂದ್ರದಲ್ಲಿ ಸಿದ್ಧಗೊಳ್ಳುವ ಪಸ್ತುಗಳ ಮಾ ರಾಟ ವ್ಯವಸ್ಥೆ, ಒಳ್ಳೆಯ ಜಾತಿಯ ಕೋಳಿ ಮರಿಗಳ ಉತ್ಪತ್ತಿ ಇತ್ಯಾದಿಗಳ ಬಗ್ಗೆ ಸಂ ಶೋಧನೆ ನಡೆಯುತ್ತಿದೆ.

ಈ ಹಿಂದೆ ರಾಣಿಖೇತ್ (ನ್ಯೂಕ್ಯಾಸಲ್) ಎಂಬ ರೋಗದ ಪಾವಳಿಯಿಂದಾಗಿ ಕೋಳಿ ಸಾ ಕ ಣೆ ಯ ಕೇಂದ್ರವನ್ನು ನಡೆಸುವುದೇ ಆಸಾಧ್ಯವಾಗಿತ್ತು. ಈ ರೋಗ ಹಾಗೂ ಇತರ ರೋ ಗ ಗ ಳ ನ್ನು ಭಾ ರ ತ ದ ಯ ಪಲು ವ್ಯೆ ದ್ಯ ಸಂ ಶೋ ಧ ನಾ ಸಂ ಸ್ಥೆ ಯು ತಯಾರಿಸಿರುವ ಔಷಧಿಗಳಿಂದ ಈಗ ಪ ತೋಟಿಗೆ ತರಬಹುದು. ಆದುದರಿಂದ ಹಳ್ಳಿ ಗಳಲ್ಲೂ ಕೋಳಿ ಸಾಕಣೆಯನ್ನು ಒಂದು ಉಪಯುಕ್ತವಾದ ಗೃಹ ಕೈಗಾರಿಕೆಯಾಗಿ ನ ಡೆಸುವುದು ಸಾಧ್ಯ. ವಿವಿಧ ರಾಜ್ಯಗಳಲ್ಲಿ ಕೋಳಿ ಸಾಕಣೆಯಲ್ಲಿ ತರಬೇತು ಪೌಕರ್ಯ ಗಳನ್ನೊದಗಿಸಲು ಮಾದರಿ ಕೋಳಿ ಸಾಕಣೆ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ಕೈಗಾರಿ ಕೆಯ ಅಭಿವೃದ್ಧಿಗಾಗಿ ಪ್ರತಿ ರಾಜ್ಯದಲ್ಲಿಯೂ ಕೋಳಿ ಸಾಕಣೆ ಅಭಿವೃದ್ಧಿ ಅಧಿಕಾರಿಗಳ ನ್ನು, ಕೋಳಿಗಳಿಗೆ ತಗಲುವ ರೋಗಗಳ ಪರಿಶೀಲನಾಧಿಕಾರಿಗಳನ್ನೂ ನೇಮಿಸಲಾಗಿದೆ.

ಅಭಿವೃದ್ಧಿಯನ್ನು ಕುರಿತು ಹೇಳುವಾಗ ಪಕ್ಷವಲ್ಲಿ ನಮ್ಮ ಹಳ್ಳಿಗಳಲ್ಲಿ ಈಗಿನ ಸ್ಥಳೀ ಯ ಜಾತಿಯ ಕೋಳಿಗಳ ಬದಲು ‘ವೈಟ್ ಲೆಗ್ ಹಾರ್ನ್’ ಮತ್ತು ‘ರೋಡ್ ಐಲ್ಯಾಂಡ್ ರೆಡ್’ ಜಾತಿಯ ಕೋಳಿಗಳನ್ನು ಸಾಕಬೇಕು. ಜೊಗು ಪ್ರದೇಶ ಮತ್ತು ಬೆಟ್ಟದ ತಪ್ಪಲಿನ ಪ್ರದೇಶಗಳಲ್ಲಿ ರೋಡ್ ಐಲ್ಯಾಂಡ್ ರೆಡ್ ಜಾ ತಿಯ ಕೋಳಿಗಳ ಸಾಕಣೆಯೂ, ಉಳಿದ ಕಡೆ ಗಳಲ್ಲಿ ವೈಟ್ ಲೆಗ್ ಹಾರ್ನ್ ಕೋಳಿಗಳ ಸಾ ಕಣೆಯೂ ಉಪಯುಕ್ತವಾಗಿರುವುದು. ಹಳ್ಳಿ ಕೋಳಿಗಳ ಸೊಟ್ಟೆಯ ಉತ್ಪನ್ನ ಯಾಗಿ ಗಾ ತ್ರವನ್ನು ಹೆಚ್ಚಿಸಲು ಉತ್ತಮ ಜಾತಿಯ ಹುಂಜಗಳನ್ನು ಸಾಕಬೇಕು. ಇಜ್ಜತ್ ನಗರ ದಲ್ಲಿ ಉತ್ತಮ ಮೊಟ್ಟೆ ಗಳನ್ನಿಡುವ ಕೋಳಿಗ ಳನ್ನು ತಯಾರಿಸಲಾಗಿದ್ದು ಅವುಗಳಿಂದ ತುಂ ಬ ಪ್ರಯೋಜನವನ್ನು ಹೊಂದ ಬಹುದೆಂ ಬ ವಿಷಯದಲ್ಲಿ ಈಗೇನೂ ಸಂಶಯ ಉಳಿದಿಲ್ಲ.

ಕೋಳಿ ಸಾಕಣೆ ಕೇಂದ್ರದಲ್ಲಿ ಮಾಂಸ ಮತ್ತು ಮೊಟ್ಟೆಗಳ ತಯಾರಿಕೆ ವೆಚ್ಚದಲ್ಲಿ ನೂರಕ್ಕೆ 60 ರಷ್ಟು ಕೋಳಿಗಳಿಗೆ ಆಹಾರಕ್ಕಾ ಗಿಯೇ ಉಪಯೋಗವಾಗುತ್ತದೆ. ಆದುದರಿಂ ದ ಈ ಆಹಾರದ ಪೂರೈಕೆಯು ಕಡಿಮೆ ವೆಚ್ಚ ದಲ್ಲಿ ಪಡೆದು ಮೊಟ್ಟೆಗಳ ಶೀಘ್ರ ಉತ್ಪನ್ನವ ಗುಸಂತಿರಬೇಕೆಂದು ನಾವು ಬಯಸುವುದು ಸ ಹಜ.

ಸಗಣಿಯಲ್ಲಿ ಬೆಳವಣಿಗೆಯನ್ನು ಉತ್ತೇಜಿ ಸುವ ಜೀವ ಸತ್ವವಿದೆ ಯೆಂದು ಸಂಶೋಧನೆ ಗಳಿಂದ ತಿಳಿದು ಬರುತ್ತದೆ. ಎರಡನೆಯ ಅಂ ಶವು ಮೊಟ್ಟೆಗಳ ಉತ್ಪತ್ತಿಗೆ ಹಾನಿಕರವಾದು ದರಿಂದ ಸಗಣಿಯನ್ನು ವಿಜ್ಞಾನ ರೀತಿಯಲ್ಲಿ ಪದ ಗೊಳಿಸಬೇಕಾಗುತ್ತದೆ. ಸಗಣಿಯನ್ನು ಬಿಸಿಲಿನಲ್ಲಿ ಹರಡಿ, ಆದರೆ ಜಲಾಂಶ ಹೋದ ಮೇಲೆ ಅದನ್ನು 80° C ನಲ್ಲಿ 21 ಘಂಟೆಗ ಳ ಕಾಲ ಒಣಗಿಸಿ ಆನಂತರ ಉಪಯೋಗಿಸ ಬೇಕು. ಸಗಣಿಯನ್ನು ನೀರಿನಲ್ಲಿ ತೊಳೆದು ಅದರಲ್ಲಿನ ಜೀವ ಸತ್ವವನ್ನು ತೆಗೆದು ಅನಂತ ರ ಅದನ್ನು ಧಾನ್ಯಗಳ ಜೊತೆಯಲ್ಲಿ ಕೋಳಿ ಮರಿಗಳಿಗೆ ಕಿನ್ನಿಸಬಹುದು, ಸಗಣಿ, ಮಾವಿನ ಬೀಜದ ತಿರುಳು, ಸಕ್ಕರೆಯ ಗಸಿ ಇತ್ಯಾದಿಗ ಳನ್ನು ಕೋಳಿ ಮರಿಗಳ ಆಹಾರವನ್ನಾಗಿ ಉ ಪಯೋಗಿಸಬಹುದೆಂದು ಪ್ರಯೋಗಗಳು ಪು ಷ್ಟೀಕರಿಸುತ್ತವೆ.

ಹೊಸದಾಗಿ ಇಡಲಾದ ಮೊಟ್ಟೆಗಳು ಸಾ ಮಾನ್ಯವಾಗಿ ಉತ್ತಮ ಗು ಣ ಾ ಂ ಶ ವ ನ್ನು ಹೊಂದಿದ್ದು ಕೃಷೀಣ ಶಾಖ ಡಾಗೂ ವಾ ತಾವರಣ ಪರಿಸ್ಥಿತಿಯಿಂದ ತನ್ನು ಗುಣಾಂಶ ವನ್ನು ಕಳೆದು ಕೊಳ್ಳುತ್ತವೆ. ಹುಂಜದ ಜೊ ತೆಗೆ ಓಡಾಡುತ್ತ ಮೊಟ್ಟೆ ಇಡುವ ಕೋಳಿಯ ಮೊಟ್ಟೆಯು ಫಲವತ್ತಾಗಿರುವುದು.

ಫಲವತ್ತಾದ ಹಾಗೂ ಇತರ ಮೊಟ್ಟೆಗಳ ನ್ನು ತಿನ್ನುವುದಕ್ಕೆ ಉಪಯೋಗಿಸಬಹುದು. ಮೊಟ್ಟೆಗಳಿಂದ ನುರಿ ಮಾಡುವುದಕ್ಕೆ ಫಲ ವತ್ತಾದ ಮೊಟ್ಟೆಗಳೇ ಬೇಕಾಗುತ್ತವೆ. ಆದ್ಯ ಸ್ಥಕ್ಕೆ ಭಾರತದಲ್ಲಿ ಫಲವತ್ತಾದ ಮೊಟ್ಟೆಗ ಳೇ ಜಾಸ್ತಿಯಾಗಿ ಉತ್ಪತ್ತಿಯಾಗುತ್ತವೆ. ತಿ ನ್ನುವುದಕ್ಕೆ ಉಪಯೋಗಿಸುವ ಮೊಟ್ಟೆಯನ್ನು ಕೆಡದಂತೆ ಇಡುವುದಕ್ಕೆ ಆವುಗಳನ್ನು 15 ನಿಮಿಷಗಳ ಕಾಲ 130° F ಉಷ್ಣಾಂಶದ ನೀರಿನಲ್ಲಿ ಕಾಯಿಸಬೇಕು. ಆವುಗಳನ್ನು ಸು ಣ್ಣಿದ ನೀರು ಆಥವಾ ಬ್ಲಾಂಡ್ ಪೈಲದಲ್ಲಿ ಅದ್ದುವುದರಿಂದ ಉತ್ತಮ ಗುಣಾಂಶ ಹಾಗೆ ಯೇ ಉಳಿದಿರುವುದು. ತಿರುವಾಂಕೂರು ಕೊಚ್ಚಿ ಸಂಸ್ಥಾನದ ಕೃಷಿಶಾಸನಿಲ್ಲಿ ಈ ರೀತಿ ಯ ಕೇಂದ್ರವನ್ನು ಸ್ಥಾಪಿಸಲಾಗಿದೆ. ದೆಹಲಿ ಮತ್ತಿತರ ದೂರ ದೇಶಗಳಿಗೆ ಈ ಮೊಟ್ಟೆಗ ಳನ್ನು ಕಳುಹಿಸುವ ಮುನ್ನ ಈ ರೀತಿ ಪದ ಗೊಳಿಸಲಾಗುವುದು. ಕೋಳಿಯ ಮಾಂಸವ ನ್ನು ಡಬ್ಬಗಳಲ್ಲಿ ವರ್ಷಕಾಲ ಕೆಡದಂತೆ ತುಂ ಬಿಡುವ ವಿಧಾನವನ್ನೂ ಕಂಡು ಹಿಡಿದ್ದಿದ್ದು ಅದು ಜನಪ್ರಿಯವಾಗಿದೆ.

ಪೂನಾದಲ್ಲಿರುವ ಖಾತುಕೋಳಿಗಳ ತಳಿ ಯನ್ನು ಅಭಿವೃದ್ಧಿಗೊಳಿಸುವ ಕೇಂದ್ರಕ್ಕೆ ಈ ಪರಿಸತ್ತು ಸಹಾಯ ನೀಡುತ್ತದೆ. ತಿರುವಾಂ ಕೂರು-ಕೊಚ್ಚಿ ಮತ್ತು ಇಜ್ಜತ್ ನಗರಗಳಲ್ಲಿ ಮತ್ತೊಂದು ಇಂತಹ ಕೇಂದ್ರವನ್ನು ಆರಂ ಭಿಸಲಾಗುವುದು.

ಕೋಳಿ ಸಾಕಣೆ ಕೇಂದ್ರಗಳಲ್ಲಿ ಕೋಳಿ ಗಳಿಗೆ ತಗಲಬಹುದಾದ ರೋಗರುಜಿನಗಳ ವಿರುದ್ಧ ವಿಶೇಷ ಗಮನವಿತ್ತು ಸಂಶೋಧನೆ ಗಳನ್ನು ನಡೆಸಲಾಗುತ್ತದೆ. 1939ರಲ್ಲಿ ಒಬ್ಬ ಆಧಿಕಾರಿಯನ್ನು ಆರಿಸಿ, ಇಂಗ್ಲೆಂಡಿಗೆ ಕಳು ಹಿಸಿ, ಅಲ್ಲಿ ಎರಡು ವರ್ಷಗಳ ಕಾಲ ಈ ವಿ ಷಯಗಳಲ್ಲಿ ತರಬೇತು ಕೊಡಿಸಲಾಯಿತು. ಈ ಆಧಿಕಾರಿಯ ಅನುಭವಗಳನ್ನು ಈಗ ಉಪಯೋಗಿಸಿಕೊಳ್ಳಲಾಗುತ್ತದೆ. ಕಳೆದ ಎ ರಡು ವರ್ಷಗಳಲ್ಲಿ ಪಕ್ಷಿಗಳಿಗೆ ತಗಲುವ ರೋಗಗಳ ಸಂಬಂಧದಲ್ಲಿ ನಡೆದ ಪ್ರಯೋಗ ಗಳು ಉಪಯುಕ್ತವಾಗಿವೆ.

ಭಾರತ ವ್ಯವಸಾಯ ಸಂಶೋಧನ ಶಾಖೆ ಯ ಆರು ವರ್ಷಗಳ ಯೋಜನೆಯು ಗ್ರಾಮಾ ಭಿವೃದ್ಧಿ ಕೆಲಸಗಳಲ್ಲಿ ಅನೇಕ ದತ್ತಾಂಶಗಳ ನ್ನು ಒದಗಿಸಿದೆ. ಹಳ್ಳಿಗಳಲ್ಲಿ ಕಡಿಮೆ ಪ್ರಮಾ ಣದಲ್ಲಿ ಮೊಟ್ಟೆಗಳಉತ್ಪನ್ನವಾಗುತ್ತಿರುವುದಕ್ಕೆ ಅಲ್ಲಿ ಆಸಮರ್ಪಕ ವಸತಿ, ಕೋಳಿಗಳಿಗೆ ಸರಿ ಯಾದ ಆಹಾರ ಪಾಕದಿರುವುದು, ಪರತಂತ್ರ ಜೀವಿಗಳ ಉಪದ್ರವ ಇವೇ ಕಾರಣಗಳೆಂಬು ದು ವ್ಯಕ್ತಪಟ್ಟಿದೆ. ಯೋಗ್ಯ ಮುಂಜಾಗ್ರತೆ ಯ ಕ್ರಮಗಳಿಂದ ಪರಿಸ್ಥಿತಿಯನ್ನು ನಾವು ಬ ಹಳಷ್ಟು ಸುಧಾರಿಸುವುದು ಸಾಧ್ಯವೆಂದೂ ಅ ದು ಸೂಚಿಸುತ್ತದೆ.

—ಎಸ್. ಜಿ. ಅಯ್ಯರ್.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವ್ಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವ ದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು. ಬೆಲೆ ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ಡಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಎಸ್. ಆರ್.

SR QUALITY BEEDIES

ಅತ್ಯಂತ ಹೆಚ್ಚು ಪ್ರಸಾರವುಳ್ಳ ಉತ್ತಮ ಬೀಡಿಗಳು

ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತವೆ

S. R. BEEDI WORKS

UDIPI, S. K.

ಯಂ. ಗಣಪ್ಪಯ್ಯ ಎಂಡ್ ಸನ್ಸ್

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು ಇವರ

ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಅಕಾಲ ಬಹಿಷ್ಪೆ, ಋತುಸ್ರಾವವು ಜಾಸ್ತಿಯಾಗಿಯೂ, ಕಡಿಮೆಯಾಗಿಯೂ ಹೋಗುವುದು, ಬಿಳಿಸೆರಗು, ಸಂತಾನ ಹೀನತೆ, ರಕ್ತಹೀನತೆ ಋತುರೋಧ, ಮೊಲಲಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು. ಬಾಟ್ಲಿ 1ಕ್ಕೆ ರೂ. 3-8-0.

ಗರ್ಭ ರಕ್ಷಕ— ಗರ್ಭಿಣಿಯರಿಗೆ ಅತ್ಯಂತ ಫಲಕಾರಿಯಾದ ಔಷಧಿ. ಚವಿಮೋಷ, ಗರ್ಭಸತನವಾಗುವಿಕೆ, ವಾಂತಿ, ಅರುಚಿ, ಅರತ್ತತೆ, ಮಲಬದ್ಧತೆ, ವಾಯು ಉಪದ್ರ, ಕೈ ಕಾಲುಬಚ್ಚುವುದು ಇವುಗಳನ್ನೆಲ್ಲಾ ಹೋಗಲಾಡಿಸುವುದು. ಬಾಟ್ಲಿ 1ಕ್ಕೆ ರೂ. 3-8-0. ಇವಲ್ಲದೆ ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ, ರೋಗಕ್ಕೆ ತಕ್ಕ ಔಷಧಿಯನ್ನು ರವಾನಿಸಬಹುದು.

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !

“ರಿಕರಿಂಗ್” ಠೇವಣಾತಿ.

ಬರೇ ರೂಪಾಯಿ ಒಂದು ಆಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ಸೇಕಡಾ 4¼%.

ಬಡವ ಬಲ್ಲಿದರೆಂಬ ಭೇದವಿಲ್ಲದ ಪ್ರತಿಯೊಬ್ಬರಿಗೂ ! ಅನುಕೂಲವಾದ ಯೋಜನೆ.

ನಿಮ್ಮ ಸವಿೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ.

ದಿವಿಜಯ ಬೇಂಕ್ ಲಿಮಿಟೆಡ್.

ಯುಗೊಸ್ಲಾವಿಯದ ಜನಪ್ರಿಯ ಅಧ್ಯಕ್ಷ—ಟಿಟೊ

(೩ನೇ ಪುಟದಿಂದ)

ಕ್ರಲಪಗಳು ಪರಿಗಣಿಸಲ್ಪಡುತ್ತಿದ್ದುದರಿಂದ ಟಿಟೋ ಅರಸು ಆಲೆಗ್ಚಾಂಡರನ ಗುಪ್ತ ಪೋಲೀಸರ ವಕ್ರದೃಷ್ಟಿಗೆ ತುತ್ತಾಗಿ ೧೯೨೭ರಲ್ಲಿ ಐದು ವರ್ಷಗಳ ಸೆರೆಮನೆವಾಸಕ್ಕೆ ಸಿದ್ಧರಾಗಬೇಕಾಯಿತು.

ಇದು ಟಿಟೋರ ಪ್ರಸಿದ್ಧಿಯನ್ನು ಮತ್ತಷ್ಟು ಹೆಚ್ಚಿಸಿತು. ಸೆರೆಮನೆಯಿಂದ ಅವರು ೧೯೩೪ರಲ್ಲಿ ಹೊರಬಂದಕೋ ಇಲ್ಲವೋ ವಿಯೆನ್ನದಲ್ಲಿ ಕಾರ್ಯ ಮಾಡುತ್ತಿದ್ದ ಕೇಂದ್ರ ಕಮ್ಯುನಿಸ್ಟ ಸಮಿತಿಗೆ ಅವರನ್ನು ಕಳಿಸಲಾಯಿತು. ಇಲ್ಲಿರುವಾಗ ಅವರಿಗೆ ಎಲ್ಲ ದೇಶಗಳನ್ನೂ ಸಂಚರಿಸುವ ಅವಕಾಶ ಪ್ರಾಪ್ತವಾಯಿತು. ಮಾಸ್ಕೋ ದಲ್ಲಿದ್ದ ಕೆಲವು ತಿಂಗಳುಗಳಲ್ಲಿ ಕಮ್ಯುನಿಸ್ಟರ ಆರ್ಥಶಾಸ್ತ್ರವನ್ನೂ ತತ್ವಜ್ಞಾನವನ್ನೂ ಅವರು ಚೆನ್ನಾಗಿ ಓದಿಕೊಂಡರು. ಸ್ವದೇಶಕ್ಕೆ ಮರಳುವ ಹೊತ್ತಿಗೆ ಸ್ಪೈನಿನಲ್ಲಿ ಅಂತರಿಕ ಕಲಹ ತಲೆದೋರಿತು. ಆದರಲ್ಲಿ ಭಾಗವಹಿಸಲು ಉತ್ಸುಕರಾಗಿದ್ದ ಸ್ವಯಂ ಸೇವಕರನ್ನು ಟಿಟೋ ತನ್ನ ಮೇಲ್ವಿಚಾರಣೆಯಲ್ಲಿ ಸಂಘಟಿಸಿ ಹತ್ತಿದರು. ಫೋಲೀಸರ ಕ್ರೂರ ದೃಷ್ಟಿಯಿಂದ ಪಾರಾಗುವುದಕ್ಕೋಸ್ಕರ ಹಳ್ಳಿಯಿಂದ ಹಳ್ಳಿಗೆ ನಿಂತಲ್ಲಿ ನಿಲ್ಲದೆ ಹಾಗೆ ತಿರುಗುತ್ತಿದ್ದಾಗ ಇಟ್ಟುಕೊಂಡ ಹೆಸರೇ "ಟಿಟೊ". ೧೯೩೭ರಲ್ಲಿ ಪಕ್ಷದ ಕಾರ್ಯದರ್ಶಿ ಸ್ಥಾನವು ಅನಾಯಾಸವಾಗಿ ಟಿಟೋರಿಗೆ ದೊರಕಿತು. ತಮಗೆ ದೊರೆತ ಈ ಅಧಿಕಾರವನ್ನು ಅವರು ಪಕ್ಷದ ಬಲ ಹೆಚ್ಚಿಸುವುದಕ್ಕೆ ದಕ್ಷತೆಯಿಂದ ಉಪಯೋಗಿಸಿ ಕೊಂಡರು.

ಉನ್ನತ ಕಾಯಗೂ ದಷ್ಟ ಪುಷ್ಟರೂ ಆದ ಟಿಟೊರನ್ನು ಪೂರ್ಣಲರೆಂಬ ಅಭಿಧಾನಕ್ಕೆ ಸಜ್ಜುಗೊಳಿಸಿದ ಘಟನೆಯು ೧೯೪೧ರ ರಲ್ಲಿ ನಡೆಯಿತು. ಯುರೋಪಿನ ಸಣ್ಣ ಸಣ್ಣ ರಾಷ್ಟ್ರಗಳಲ್ಲಿ ಒಂದೊಂದನ್ನೆ ನುಂಗುತ್ತಾ ಬಂದ ಹಿಟ್ಲರನಾಜಿ ಸೈನ್ಯವು ಯುಗೊಸ್ಲಾವಿಯಾದ ಅರಸು ಪೀಟರರನ್ನು ಸಹ ಆಡಿಯಾಳನ್ನಾಗಿ ಮಾಡಿಕೊಂಡಿತ್ತು. ತಮ್ಮ ದೇಶವು ಹೀಗೆ ಫಾಸಿಸ್ಟರ ಕೈಗೆ ಬೀಳುವುದನ್ನು ಎಷ್ಟುಮಾತ್ರಕ್ಕೂ ಸಹಿಸದ ಟಿಟೋರವರು ಕೂಟ ಯೋಧರನ್ನು ಕಲೆಹಾಕಿ ಅತ್ಯಂತ ಕಲಿತನದಿಂದಹೋರಾಡಿ ಮುಸಲೋನಿಹಾಗೂ ಹಿಟ್ಲರನ ಸೈನ್ಯಗಳನ್ನು ಹಿಂದಕ್ಕಟ್ಟಿದರು. ಈ ಕಾರ್ಯದಲ್ಲಿ ಅವರಿಗೆ ಮಿತ್ರ ರಾಷ್ಟ್ರಗಳು– ಮುಖ್ಯವಾಗಿ ರಶಿಯ–ಕೆಲವು ಮಟ್ಟಿಗೆ ಸಹಾಯವನ್ನೊದಗಿಸಿದರೂ ಯುಗೊಸ್ಲಾವ ಜನರೇ ಹೆಚ್ಚಿನ ಕ್ರಿಯಾತ್ಮಕ ಪಾತ್ರವನ್ನು ವಹಿಸಿದರೆಂದು ಹೇಳಿದರೆ ತಪ್ಪಾಗಲಾರದು. ಈ ಕಾರಣದಿಂದಲೇ ರಶಿಯವು ಇತರ ಪೂರ್ವ ಯುರೋಪಿನ ರಾಷ್ಟ್ರಗಳ ಮೇಲೆ ವರ್ಚಸ್ಸನ್ನು ಬೀರಿ ಅವುಗಳನ್ನು ತನ್ನ ಹಂಗಿನಲ್ಲಿಟ್ಟುಕೊಂಡಂತೆ ಯುಗೊಸ್ಲಾವಿಯದ ಮೇಲೂ ಬಲೆ ಬೀಸಲು ಪ್ರಯತ್ನಿಸಿದಾಗ, ಟಿಟೋ ಪ್ರತಿಭಟನೆಯನ್ನು ಕೊಟ್ಟರು. ರಶಿಯದ ದಾಕ್ಷಿಣ್ಯ ತಮಗೇನೂ ಇಲ್ಲವೆಂಬಂತೆ ಅವರು ಬಹಿರಂಗವಾಗಿ ವರ್ತಿಸಿದರು.

ಸ್ಟಾಲಿನ್ನರೊಡನೆ ತಿಕ್ಕಾಟವು ನಡೆದು ರಶಿಯದಿಂದ ಸಿಡಿದು ನಿಂತ ಬಳಿಕ ಯುಗೊಸ್ಲಾವಿಯದ ಕಮ್ಯುನಿಸ್ಟ ಪದ್ಧತಿಯಲ್ಲಿ ಸೌಮ್ಯ ಪರಿವರ್ತನೆಗಳನ್ನು ಕಾಣಬಹುದಾಯಿತು. ನಿಧಾನವಾಗಿ ಪ್ರಜಾತಂತ್ರಾತ್ಮಕ ಆಡಳಿತ ಪದ್ಧತಿಗೆ ಟಿಟೋ ಹೋಗುತ್ತಿರುವಂತೆ ಈಗ ಭಾಸವಾಗುತ್ತದೆ. ಸ್ಟಾಲಿನ್ನರ ಮರಣಾನಂತರ ರಶಿಯ ಪೂರ್ವ ದೃಷ್ಟಿಕೋನವನ್ನು ಬದಲಾಯಿಸಿ ಟಿಟೋರೊಡನೆ ಸ್ನೇಹದಿಂದಿರಲು ಬಯಸುವಂತೆ ಕಾಣುತ್ತದೆ. ಪಾಶ್ಚಾತ್ಯ ರಾಷ್ಟ್ರಗಳಾದ ಬ್ರಿಟನು, ಅಮೇರಿಕಗಳೂ ಶಸ್ತ್ರಾಸ್ತ್ರ ಸಹಾಯ ಮುಂತಾದವುಗಳ ಮೂಲಕ ಟಿಟೋರ ಮೈತ್ರಿ ಸಂಪಾದನೆಯಲ್ಲಿ ಉತ್ಸುಕತೆಯನ್ನು ತೋರಿಸಿರುತ್ತವೆ. ಟಿಟೊ ತಮ್ಮ ದೇಶದಲ್ಲಿ ಒಳ್ಳೆಯ ಜನಪ್ರಿಯ ರಾಜ ವ್ಯಕ್ತಿ—ಅವರು ಸೈನಿಕ ಸಮವಸ್ತ್ರ ಧರಿಸಿ ಪದಕಗಳ ಶರಮಾಲೆ ತೊಟ್ಟು ನಿಂತಾಗ ಭಯ ಹುಟ್ಟಿಸುವ ಜರ್ಮನ್ ಸೇನಾ ಪತಿಗಳ ನೆನಪು ತಂದರೂ ಸ್ವಭಾವದಲ್ಲಿ ಹಾಸ್ಯ ಪ್ರಿಯರು; ಮುಕ್ತ ಮನಸ್ಸಿನವರು. ಈಜಾಟ, ಮೀನು ಹಿಡಿಯುವುದು, ಕುದುರೆ ಸವಾರಿ ಮುಂತಾದ ಆಟನೋಟಗಳೆಂದರೆ ಅವರಿಗೆ ತುಂಬ ಉತ್ಸಾಹ. ಅವರಿಗೆ ಎರಡನೆಯ ಮದುವೆಯಾಗಿದ್ದು ಇವಳಿಂದ ಹುಟ್ಟಿದ ಮಗ ನೆಂದರೆ ಅವರಿಗೆ ಪಂಚ ಪ್ರಾಣ.

ಶ್ರೀ ರಾಮಕೃಷ್ಣಾಶ್ರಮದ ಪ್ರಕಟಣೆಗಳು, ಮೈಸೂರು.

	ರೂ.	ಆ.
ಶ್ರೀ ರಾಮಕೃಷ್ಣ ಪಜನವೇದ (ಉತ್ತರಾರ್ಧ)	೧೦	೦
ಕೊಲಂಬೊ ಇಂದ ಆಲ್ಮೋರಕೆ	೫	೦
ಸಂವಾದ ತರಂಗಿಣಿ	೫	೦
ಶ್ರೀ ರಾಮಕೃಷ್ಣ ಉಪದೇಶಾಮೃತ	೩	೮
ಸ್ವಾಮಿ ವಿವೇಕಾನಂದ (ಕುವೆಂಪು)	೩	೮
ಭಗವಾನ್ ಶ್ರೀ ರಾಮಕೃಷ್ಣ	೩	೦
ಪತ್ರಮಾಲೆ	೩	೦
ಜ್ಞಾನಯೋಗ	೩	೦
ಗುರುನಿಸೋಡನೆ ದೇವರೆಡೆಗೆ (ಕುವೆಂಪು)	೩	೦
ರಾಜಯೋಗ	೨	೧೦
ಶ್ರೀ ಶಾರದಾದೇವಿ ಸಂಭಾಷಣೆ	೨	೮
ಗೀತಾ ಪತ್ರಗಳು	೨	೮
ಮಿಂಚುನೋಟಕೆ ಹಿಂದೂಧರ್ಮ	೨	೮
ಶ್ರೀ ಶಾರದಾದೇವಿ	೨	೦
ಸಾಧಕನ ಕೈದೀಸಿಗೆ	೨	೦
ಪರಮಾರ್ಥ ಪ್ರಸಂಗ	೨	೦
ಕರ್ಮಯೋಗ	೧	೮
ಬ್ರಹ್ಮಾನಂದ ವಚನ ಸುಧೆ	೧	೪
ಶ್ರೀ ರಾಮಕೃಷ್ಣ ಉಪನಿಷತ್	೧	೪
ಪರಿವ್ರಾಜಕ	೧	೪
ಪ್ರಾಚ್ಯ ಮತ್ತು ಪಾಶ್ಚಾತ್ಯ	೧	೪
ಭಕ್ತಿಯೋಗ	೧	೦
ಭಕ್ತಿ: ಗಾನೇ ಮತ್ತು ಪಠಣ	೧	೦
ದಾರಿಯಲ್ಲಿ ದೀಪಧಾರಿ	೧	೦
ಶ್ರೀ ಗುರುದೇವರ ವಚನ	೧	೦
ಅಮರನಾಥ ಯಾತ್ರೆ	೧	೦
ಧನ್ಯತೆಗೆ ದಾರಿ	೧	೦
ಅನುಷ್ಠಾನ ವೇದಾಂತ	೧	೦
ವೇದಾಂತ	೦	೧೦
ನಿದ್ಯಾಭ್ಯಾಸ	೦	೧೦
ಹಿಂದೂ ಧರ್ಮಸಾರ	೦	೧೦
ವರ್ತಮಾನ ಭಾರತ	೦	೧೦
ವಿವೇಕವಾಣಿ	೦	೧೦
ನನ್ನ ಗುರುದೇವ	೦	೮
ಭಕ್ತಿಮಾರ್ಗ	೦	೮
ಚಿಕಾಗೋ ಉಪನ್ಯಾಸ	೦	೬
ಆರತಿ	೦	೬
ಶ್ರೀ ರಾಮಕೃಷ್ಣ (ಸಂಕ್ಷಿಪ್ತ ಜೀವನ ಶ್ರವೇಣಿಯಿಂದ)	೦	೫
ಸ್ವಾಮಿ ವಿವೇಕಾನಂದ ,, ,,	೦	೫
ಶ್ರೀ ಶಾರದಾದೇವಿ ,, ,,	೦	೫
ಮುಮುಕ್ಷು ಲಕ್ಷಣ	೦	೪
ನನ್ನ ಜೀವನ ಮತ್ತು ಧ್ಯೇಯ	೦	೪
ಈಶ್ವರಾನುರಾಗ	೦	೪
ಸೊಂದ ಜೀವಕ್ಕೆ ಭರವಸೆ	೦	೪
ಭಾರತ ಮಹಿಳೆ	೦	೪
ಕರ್ಮ ರಹಸ್ಯ	೦	೪
ಸಾಧನ	೦	೪
ಪವಹಾರಿಬಾಬ	೦	೪
ದೇವಮಾತ ಕ್ರಿಸ್ತ		
ಹೈಮವಚಲ ಸಾನ್ನಿಧ್ಯದಲ್ಲಿ (ಹರಿದ್ವಾರದಿಂದ ಕೇದಾರ ಬದರಿಗೆ)	೨	೦

ಶ್ರೀ ರಾಮಕೃಷ್ಣಾಶ್ರಮ, ಮೈಸೂರು.

ನೋಟೀಸು

ಶ್ರೀ ಅನಂತಪದ್ಮನಾಭ ದೇವಸ್ಥಾನದ ಬಾಬ್ತು ಬತ್ತ ಮುಡಿ 42) ಖರೀದಿಗೆ ಕೊಡುವುದಿದೆ. ಆ ಬಗ್ಗೆ ಇದೇ ತಾರೀಕು 26-12-54ನೇ ಆದಿತ್ಯವಾರ ಸಾಯಂಕಾಲ 4 ಗಂಟೆಗೆ ಭಂಡಾರದ ಕರ್ತರ್ಕೆ ಒಳಪಟ್ಟು ದೇವಸ್ಥಾನದ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಆಪೇಕ್ಷೆ ಉಳ್ಳವರು ಬಂದು ಏಲಮಿನಲ್ಲಿ ಭಾಗವಹಿಸಬಹುದು.

For: Sri Anantha Padmanabha Temple, Perdur.

K. B. Shetty,
Executive Officer.

ಪೆರ್ದೂರು,
ತಾ. 13-12-1954.

ದಿ ವಿಜಯಾ ಬೇಂಕ್ ಲಿಮಿಟೆಡ್, ಬೈಂದೂರು.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹಜೇಮರು ನಮ್ಮ ಬೇಂಕಿನಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವಲ್ಲಿ ವಿಫಲಿಸಿ, ನೋಟೀಸುಗಳ ಮೂಲಕ ಕೇಳಿಕೊಂಡಾಗ್ಯೂ, ಆಸ್ಲು, ಬಡ್ಡಿ, ಯಾವುದನ್ನೂ ಈ ತನಕವೂ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದಲೂ, ಕೆಲವರಿಗೆ ಬಿಟ್ಟ ವಿಚಿತ್ರ ನೋಟೀಸುಗಳು ಕಾರಣಾಂತರಗಳಿಂದ ನಮಗೇನೇ ವಾಪಸು ಬಂದಿರುವುದರಿಂದಲೂ, ಸದ್ರಿಯವರು ನಮ್ಮಲ್ಲಿ ಈಡಿಟ್ಟ ಚಿನ್ನಾಭರಣ ನಗಗಳನ್ನು ಇದೇ ದಶಂಬರ ತಿಂಗಳ ತಾರೀಕು 28ನೇ ಮಂಗಳವಾರ ಆಕರಾಸ್ಥ ಗಂಟೆ 2ಕ್ಕೆ ಯೂ ಬೇಂಕಿಗೆ ಯುಕ್ತ ಕಂದಾ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ, ಬೇಂಕಿನ ಪಕಾರದಲ್ಲಿ ಬಹಿರಂಗವಾಗಿ ಪರಾಜು ಮಾಡಲಾಗುವುದು. ತಿಳಿದಿರಲಿ.

ಸಾಲದ ಜಂಜ್ಯಾ ನಂಬರು	ಹೆಸರು ಮತ್ತು ವಿಲಾಸ	ಮೊಬಲಗು ರೂ.	ಆ.
1124/51	ಶ್ರೀ. ಪಂಡು ಗೋವಿಂದ, ಮಂಜನ ಮಗ, ಆಪ್ಕನವರ ತೊಪ್ಪಲು, ಉಪ್ಪುಂದ	39	1
134/52	,, ಕೋಟಿ ರಾಮಯ್ಯ ಸೇರುಗಾರ, ದಾಸ ಸೇರುಗಾರರ ಮಗ, ಪಡುವರಿ	10	4
226/52	,, ರಾಮ ಕಾರ್ಮಿ, ಅಳಿಪೆ ಕೋಡಿ ಸುಬ್ಬನ ಮಗ, ಉಪ್ಪುಂದ	97	15
304/52	,, ಯು. ಶಂಕರ ಸೇಟ್, ಮಂಜುನಾಥ ಸೇಟರ ಮಗ, ಉಪ್ಪುಂದ	73	5
637/52	,, ಅಮಿನ್ ಸಾಹೇಬ್, ಅದಾಮ್ ಸಾಹೇಬರ ಮಗ, ನಾಗೂರು, ಕಿರಿಮಂಜೇಶ್ವರ	53	4
693/52	,, ಮದ್ದೋಡಿ ಗಣಪಯ್ಯ ಸೇರುಗಾರ, ಸುಬ್ರಾಯ ಸೇರುಗಾರರ ಮಗ, ಮಯ್ಯಾಡಿ	933	11
769/52	,, ಮಾಬಾರಿ ಕೃಷ್ಣಯ್ಯ ಸೇರುಗಾರ, ತಿಮ್ಮಪ್ಪ ಸೇರುಗಾರರ ಮಗ, ಪಡುವರಿ	26	8
795/52	,, ತುಕ್ಡಿವಾರ್ ಭಾಷಾ ಸಾಹೇಬ್, ಮುಹಮ್ಮದ್ ಗೌಸರ ಮಗ, ಮಡಿಕಲ್ಲು, ಉಪ್ಪುಂದ	133	14
443/53	,, ಶಿವರಾಮ ಸೇರುಗಾರ, ಪಜೆಯಪ್ಪ ಸೇರುಗಾರರ ಮಗ, ಬಜೂರು	17	7
331/53	ಶ್ರೀಮತಿ ಕುಪ್ಪಮ್ಮ, ಪೆಜ್ಜಿಯಯ್ಯನ ಗೋವಿಂದ ಸೇರುಗಾರರ ವಿಧವೆ, ಪಡುವರಿ	107	8
183/53	ಶ್ರೀ. ತಿಮ್ಮಪ್ಪ ಸೇರುಗಾರ, ನಾಗಪ್ಪ ಸೇರುಗಾರರ ಮಗ, ಉಗ್ರಾಡಿ, ಯೇಳಜಿತು	85	0
16/53	,, ಕರೂರಿ ಪೈದಿನ ಸಾಹೇಬ್, ಮಹಮ್ಮದ್ ಸುಕ್ರಿ ಸಾಹೇಬರ ಮಗ, ಕೇರಿ, ಬೈಂದೂರು	53	5
123/53	,, B. S. ರಾಮಕೃಷ್ಣ ಪೈ, ಮಂಜುನಾಥ ಪೈಗಳ ಮಗ, ಪ್ರೊಪ್ರೈಟರ್, ಸಂಚಾಲಕ ಜೋರ್ಡನ್, ಬಿಜೂರು	227	8
130/53	,, — do —	455	2
172/53	,, — do —	106	3
253/53	,, ಗೋವಿಂದ ಕಾರ್ಮಿ, ಲೇಪಸ ಮಗ, ಮಡಿಕಲ್ಲು, ಉಪ್ಪುಂದ	20	14
745/53	,, ಬಿ. ಎಸ್. ರಾಮಕೃಷ್ಣ ಪೈ, ಮಂಜುನಾಥ ಪೈಗಳ ಮಗ, ಬಿಜೂರು ಗ್ರಾಮ, ಬಿಜೂರು	88	9
823/53	,, ಮೊನ್ನಯ್ಯನ ಮಂಜುನಾಥ ಸೇರುಗಾರ, ಅಣ್ಣಪ್ಪ ಸೇರುಗಾರರ ಮಗ, ಪಡುವರಿ	23	0
459/53	ಶ್ರೀಮತಿ ಪಾರ್ಕಿ ಮುದೂರಿ, ಕಾಳಿಯ ಮಗಳು, ಶಿರೂರು ಗ್ರಾಮ, ಶಿರೂರು	56	9

ಬೈಂದೂರು,
10-12-1954.

ಎಚ್. ರಾಜೀವ ಶೆಟ್ಟಿ,
ಮ್ಯಾನೇಜರ್.

(೧ನೇ ಪುಟದಿಂದ)

ಸಿಗದೆ ಅವರು ಸಂತಾಪ ಪಡುವ ದಿನ ಬರಬಾರದು.ರಾಷ್ಟ್ರದ ಪುನಾರಚನೆಯಲ್ಲಿ ಭಾಗ ಪಡುವ ಪ್ರತಿಯೊಂದು ಅವಕಾಶವು ದೊರೆತು ಸಮೃದ್ಧ ಭಾರತವನ್ನು ಕಟ್ಟಿದ ಶಿಲ್ಪಿಯೆಂಬ ಅಭಿಮಾನವನ್ನು ನಮ್ಮ ಇಂಜಿನಿಯರುಗಳು ಹೊಂದುವಂತಾದರೆ ಮಾತ್ರ ರಾಷ್ಟ್ರ ಕಲ್ಯಾಣವಾದೀತು.

— ಕಾರ್ತಿಕೇಯ.

ಬಂಟರ ಯಾನೆ ನಾಡವರ ಸಂಘ, ದಕ್ಷಿಣ ಕನ್ನಡ, ಮಂಗಳೂರು.

ಸುಹೃಯರೇ,

ನಮ್ಮ ಸಂಘದ ವಾರ್ಷಿಕ ಮಹಾಸಭೆಯು ಇದೇ ದಶಂಬರ ತಾ. 26ನೇ ಆದಿತ್ಯವಾರ ಅಪರಾಹ್ನ ಗಂಟೆ 4ಕ್ಕೆ ಶ್ರೀ. ಕೊಡಿಯಾಲಗುತ್ತು ಕೃಷ್ಣಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಜರಗುವುದು. ತಾವು ಸಭೆಗೆ ದಯಮಾಡಿ ಬರಬೇಕಾಗಿ ಸಂಘದ ಆಡಳಿತ ಕಮಿಟಿ ಪರವಾಗಿ ವಿನಂತಿಸುತ್ತೇನೆ.

ಕೆ. ಸುಂದರರಾಮ ಶೆಟ್ಟಿ,
ಕಾರ್ಯದರ್ಶಿ

ಮಂಗಳೂರು, 13—12—1954.

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

THE MOOLKY BANK LTD.
Moolky, S. K.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖುಂಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತಗಿವೆ.

ಕಲ್ಕುಂಜೆ ವ್ಯಾಸಾಚಾರ್ಯರ
ಪಾತ್ರೆ ಭಂಡಾರ,
ರಥಬೀದಿ ಉಡುಪಿ.

ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ. ಸುಲಭ ಕಂತಿನ ಮರುಪಾವತಿ. ಇಂಗ್ಲಿಸಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿ ಮಾಡಿಕೊಳ್ಳುವುದು

P o Box No. 3219, BOMBAY 3.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

(೧ನೇ ಪುಟದಿಂದ)

ಕೊಲೆಯೇ ಮುಂತಾದ ಕೃತ್ಯಕ್ಕೂ ಸೇರಬಹುದು. ಅದಕ್ಕೂ ಆಜಬಾರದೆಂದು ಯೇಸು ವಿನ ಉಪದೇಶ. ಪ್ರಸಿದ್ಧವಾದ ಪರ್ವತದ ಮೇಲಿನ ಪವಿತ್ರವಾಕ್ಯಗಳ ಸ್ಮರಣೆಯನ್ನು ಇದಕ್ಕೆ ನಿದರ್ಶನವಾಗಿ ನೀಡಬಹುದು. ಅದು ಯಾವ ಕಾಲಕ್ಕೂ ಯಾವ ಧರ್ಮದವರಿಗೂ ಮಾನ್ಯವಾದ ಮಾತೆಂದರೆ ಸಲ್ಲುತ್ತದೆ,

ಇನ್ನೊಬ್ಬನ ಮುಂದೆ ಸೊಲನ್ನೊಪ್ಪಿಕೊಳ್ಳುವುದು, ನೆರೆಯವನ ಸುಖಕ್ಕಾಗಿ ತನ್ನ ಸ್ವಾರ್ಥವನ್ನು ತ್ಯಜಿಸುವುದು,ಆತ್ಮೋತ್ಸರ್ಗದ ಹೆಸರಿನಲ್ಲಿ ಪ್ರಪಂಚದಲ್ಲಿ ವಿಂಡಿಕ್ತಿಯನ್ನು ಹೊಂದುವುದು ಮುಂತಾದಕೃತ್ಯಗಳನ್ನು ನೀತಿ ಬೋಧನೆಯು ಪ್ರೋತ್ಸಾಹಿಸುತ್ತಿರುವುದರಿಂದ ಅದನ್ನು ವಿಚಾರಣೆಗೆ ಗುರಿಪಡಿಸಬೇಕು--ಎಂಬುದಾಗಿ ಜರ್ಮನಿಯ ಇತ್ತೀಚಿನ ತತ್ವಜ್ಞಾನಿಗಳಲ್ಲಿ ಒಬ್ಬನಾದ ನೀಶೆ ಹೇಳಿದ್ದುಂಟು.ಹಿಟ್ಲರನು ಈ ಮಹಾನುಭಾವನನಾನುಗಳಿಂದಲೇ ಸ್ಫೂರ್ತಿಯನ್ನು ಪಡೆದನೋ ಎಂದು ನನಗೆ ಆಶ್ಚರ್ಯವಾಗುತ್ತದೆ. ಇಂಪು ಲೋಕದಲ್ಲಿ ಅಣುಶಸ್ತ್ರಗಳಸಂಶೋಧನೆಯನ್ನು ಮಾಡಿ,ಇದಿರಾಳಿಗಳ ಮುಖಭಂಗಕ್ಕೆ ಆದನ್ನು ಸಾಧನವೆಂದು ಆಶ್ರಯಿಸಿರುವ ಮಹಾರಾಷ್ಟ್ರಗಳ ಧೋರಣೆಯನ್ನು ನೋಡಿದರೆ ನೀಶೆ ಕಲಿಯುಗಾಂತ್ಯಕ್ಕೆ ಸಹಜವಾದ ಪ್ರಳಯದ ಕಲ್ಪನೆಯನ್ನು ಪೋಷಿಸಲು ತತ್ವಜ್ಞಾನದ ದೊಡ್ಡ ಮಾತನ್ನಾಡಿದನೆಂದು ಭಾವಿಸಬೇಕಾಗುತ್ತದೆ. ಇಂಥದರಲ್ಲಿ ಲೋಕಕ್ಕೆಲ್ಲ ಕಲ್ಯಾಣ, ಮಾನವ ಜನಾಂಗಕ್ಕೆ ಮಂಗಲ ಎಂದು ಆಶೀರ್ವಾದ ಮಾಡುವ ಕ್ರಿಸ್ತನ ವಾಕ್ಯಕ್ಕೆ ಏನು ಬೆಲೆ ಬಂದೀತು? ಅದನ್ನು ಹರಿಸುವ ರೋಮಿನ ಪೋಪರ ಮಾತಿಗೂ ಇತರ ಕೆಲವು ರಾಜಕೀಯ ಧುರೀಣರ ಧೋರಣೆಗೂ ಎಷ್ಟು ಬೆಂಬಲ ದೊರಕೀತು?

ಕಾರ್ತಿಕ ಬಹುಳ ಅಮಾವಾಸ್ಯೆ ತಾ|| 25—11—54 ಗುರುವಾರ

ಅಮೂಲ್ಯವಾದ ಆರು ಗ್ರಂಥಗಳು ಪ್ರಕಟವಾಗಿವೆ.

ಕನ್ನಡ ಕವಿರತ್ನ ಹೊಸಕೆರೆ ಚಿದಂಬರಯ್ಯನವರ

ಗೀತಾರ್ಥ ಚಂದ್ರಿಕೆ:- ಪ್ರತಿಪದಾರ್ಥ ತಾತ್ಪರ್ಯ ಧ್ಯಾನಕ್ರಮ ಮತ್ತು ವಿಷಯಾನುಕ್ರಮಣಿಕೆಯಿಂದ ಕೂಡಿದೆ. ಶ್ರೀಕೃಷ್ಣ ಪರಮಾತ್ಮನು ಅರ್ಜುನನಿಗೆ ಗೀತೋಪದೇಶ ಮಾಡಿದ್ದು ಕಾರ್ತಿಕ ಬಹುಳ ಅಮಾವಾಸ್ಯೆ.
ಫಲಂ ಪುಟಗಳು. ಬೆಲೆ ರೂ. 3-4-0

ನೀತಿಗಳ ನೆಲಗಟ್ಟು ಧರ್ಮ ಮತ್ತು ನೀತಿ ಗ್ರಂಥ ಪುಟಗಳು ೩೨೦ ಬೆಲೆ ರೂ. 2-0-0

ವೇದಾಂತದ ರೂಪರೇಖೆ ವೇದಾಂತ ಗ್ರಂಥ ಪುಟಗಳು ೭೫ ಬೆಲೆ 0-12-0

— ಎಂ. ವೆಂಟಾದ್ರಿ ಶಾಸ್ತ್ರಿಗಳವರ —

ಮಾಯಾವಿ ಅದ್ಭುತ ಪತ್ತೇದಾರಿ ಕಾದಂಬರಿ ಪುಟಗಳು ೩೨೦ ಬೆಲೆ ರೂ. 1-8-0

— ಕುಲಕರ್ಣಿ ಬಿಂದುಮಾಧವರ—

ಕಲಾಜ್ಯೋತಿ ಅತ್ಯುತ್ತಮ ಸಾಮಾಜಿಕ ಕಾದಂಬರಿ ಪುಟಗಳು ೧೬೦ ಬೆಲೆ ರೂ. 1-4-0

— ಡಾಕ್ಟರ್ ಬಿ. ವಿ ವೆಂಟೇಶಯ್ಯನವರ —

ಪುಷ್ಪಲತ ವಿಕ್ಟರ್ ಹ್ಯೂಗೋರವರ ಬ್ಲಾಕ್‌ಟುಲಿವ್ ಎಂಬ ಶ್ರೇಷ್ಠ ಇಂಗ್ಲೀಷ್ ಕಾದಂಬರಿಯ ಅನುವಾದ
ಪುಟಗಳು ೨೮೦ ಬೆಲೆ ರೂ. 1-8-0

ದಯವಿಟ್ಟು ನಿಮ್ಮ ಬೇಡಿಕೆಯನ್ನು ಇಂದೇ ಕಳುಹಿಸಿರಿ.

ಸಾಹಿತ್ಯ ಕುಟೀರ,
೨೦೧, ೨ನೇ ಕ್ರಾಸ್ ರಸ್ತೆ, ಚಾಮರಾಜ ಪೇಟೆ,
ಬೆಂಗಳೂರು ೨.

ಮಾರಾಟಗಾರರು:— ಎಸ್. ಎಸ್. ಎನ್ ಬುಕ್ ಡಿಪೊ, ಬೆಂಗಳೂರು ೨.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ವಿದ್ವಾನ್ ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

[ENGLISH MADE EASY]

ಯನ್ನು ಇಂದೇ ತರಿಸಿಕೊಳ್ಳಿರಿ.

ಬೆಲೆ:— ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ — ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

ಇದನ್ನು ಯೇಸು ತಿಳಿದಿರಲಿಲ್ಲವೆಂದಲ್ಲ— "ನೀವು ಲೋಕದ ಬೆಳಕು' ಎಂಬುದಾಗಿ ತನ್ನ ಆಪ್ತ ಶಿಷ್ಯ ವರ್ಗಕ್ಕೆ ವನು ಹೇಳಿದಾಗ ಲೋಕದಲ್ಲಿ ಕೆಟ್ಟದ ಇದ್ದೆ ಇರುತ್ತದೆ ಎಂಬ ಜಂಜಾಟವನ್ನು ಗನಿಸಿದ್ದಾನೆಂಬುದರಲ್ಲಿ ಅನುಮಾನವಿಲ್ವಿತ್ತದಲ್ಲಿ ಕತ್ತಲೆ ತುಂಬಿರುವುದೆಂದೇ ಆ ಬೆಳಕಿನ ಆವಶ್ಯಕತೆ ಬಹಳಷ್ಟು ಕಂಡ ಬರುತ್ತದೆ. "ನೀವು ಆ ಬೆಳಕು" ಎಂದನು ಎಚ್ಚರಿಸಿದನು. ಆದುದರಿಂದ ದೀಪವು ಪ್ರಕಾಶವನ್ನು ನಾಲ್ದೆಸೆಗೆ ಚೆಲ್ಲುವ ನ್ನ ಕರ್ತವ್ಯವನ್ನು ಎಂದೆಂದಿಗೂ ತ್ಯಜಿಸ ಕೂಡದು ಇದನ್ನೇ ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ಉಪ್ಪು ತನ್ನ ಉಪ್ಪಿನ ರುಚಿಯನ್ನು ಬಿಟ್ಟುಬಿಡಬಾರದು ಉಪ್ಪಿಗೆ ಉಪ್ಪಿನ ರುಚಿ ಇಲ್ಲದೆ ಹೋದರೆ ಮತ್ತೇತರಿಂದ ಆ ರುಚಿಯನ್ನು ನಾವು ಉಂಟು ಮಾಡ ಬಹುದು? ಲೋಕದಲ್ಲಿ ಸಜ್ಜನರು ಅಡುಗೆಗೆ ಉಪ್ಪಿನಂತೆ ಅನಿವಾರ್ಯರೆಂದು ಯೇಸುವಿನ ಪೃಥ್ವನಾದ ವಿಶ್ವಾಸ ಅವರು ನಿರಾಶರಾಗಬಾರದು; ತಮ್ಮ ಕರ್ತವ್ಯ ನಿರ್ವಹಣದಲ್ಲಿ ಸೋಲನ್ನೊಪ್ಪಿಕೊಳ್ಳಬಾರದು. ಕ್ರಿಸ್ತನ ಜಯಂತಿಯ ಶುಭಸಂದರ್ಭದಲ್ಲಿ ಆಪ್ತ ಸಜ್ಜನರಲ್ಲದೆ ಸಾಮಾನ್ಯರು ಸಹ ಮೇಲಿನೆಲ್ಲ ಸಂಗತಿಗಳನ್ನು ಮನನ ಮಾಡುವುದು ಶ್ರೇಯಸ್ಕರ.

ಕೆಲವು ಉತ್ತಮ ಪುಸ್ತಕಗಳು.

ಬರ ಕು ಬಂಗಾರ	(ಕುಮಾರಸ್ವಾಮಿ)	1 8
ಯುಗವಾಣಿ	(ಕು ಶಿ ಹರಿದಾಸಭಟ್)	0 8
ಸಂಟಿಸೂರಾ	(,,)	2 0
ಏಶಿಯದ ಸಂಪತ್ತು	(,,)	2 0
ಪ್ರಬಾಪ್ರಯತ್ನವನ್ನ ಕುರಿತು (ಶಿವರಾಮ ಕಾರಂತ)		0 8
ಅಂತರಂಗದ ಕತೆಗಳು	(ಸಂಕಲನ)	1 4
ಸ್ವಪ್ನೋಕ	(ಕಾರ್ತಿಕೇಯ)	0 8
ನೀತಿನೋಡ ಕತೆಗಳು		0 12
ಸೇವಾಪದ	(ಸೇಟ್ ಗೊವಿಂದಾಸ್)	0 8
ಸರಸ್ವತಿ	(ಡಾ| ಎಂ. ಮಾಧವಾಚಾರ್ಯ)	0 12
ಗೀತೆಯ ಕೈಗನ್ನಡಿ	(ಚಿದಂಬರಯ್ಯ)	0 8
ಭಾರತದ ಕರ್ಜ	(ಎನ್ ಎಸ್. ಕಿಲ್ಲೆ)	0 6
ಪ್ರಾಚೀನ ತುಳುನಾಡು	(,,)	0
ಮುರಲಿ	(,,)	0 12
ಮಧುವನ	(ಸಂಕಲನ)	3 0
ಕಾವ್ಯಸಾಮ್ರಾಜ್ಯ	(,,)	1 8
ರವಗಳ ಸಾಗಾಟ	(ಕಳ್ಳ ಪೇಟೆ)	0 10
ಕವಿತಾಕಾಮಿನಿ	(ಎಸ್ ವೆಂಕಟರಾಜ)	2 0
ಆಕಾಶಗಂಗೆ		1 12
ಜೀವನ ಸಂಗ್ರಾಮ	(ಪಿ. ಶೀನ ಶೆಟ್ಟಿ)	1 8
ದೇಶಭಕ್ತ	(ಕೆ ಕೆ. ಶೆಟ್ಟಿ)	1 4
ಪ್ರೇಮವಿಜಯ	,,)	1 0

ಏಜಂಟರು ಬೇಕು. ಕರ್ತವ್ಯಗಳಿಗೂ ನಮ್ಮಲ್ಲಿ ದೊರೆಯುವ ಎಲ್ಲಾ ಕಡೆಗಳ ಪುಸ್ತಕಗಳ ಕೆಟಲಾಗಿಗೂ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

ಎಲ್ಲಾ ತರದ ಮಾಹಿತಿಯನ್ನೊಳಗೊಂಡ ಉತ್ತಮ ತರದ

ಮಗ್ಗಿ ಪುಸ್ತಕಗಳು

ರಖುಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

100 ಯಾ 500ಕ್ಕೆ ಅತೀ ರಿಯಾಯತಿ ಇದೆ.

ನವಯುಗ ಪ್ರೆಸ್, ಉಡುಪಿ. ಅಥವಾ ನವಭಾರತ ಬುಕ್ ಡಿಪೊ, ಉಡುಪಿ.

Edited, Printed & Published By K. H. Shetty at the Navayuga Press, Udipi, S. India

M. 3618

Licensed to Post without Prepayment

ನವಯುಗ

ಸಂಪುಟ ೩೪ VOL. 34

ಉಡುಪಿ, 30—12—1954

ಸಂಚಿಕೆ ೧೭ NO. 17

ಇಪ್ಪರ ಪರಿಗೆ ದೇಶದಲ್ಲಿ ಸಾಧಿಸಲಾದ ಸಂಗತಿಗಳು ತೃಪ್ತಿಯನ್ನು ನೀಡುತ್ತವೆ. ಆದರೆ ಪ್ರಗತಿಯು ಸಾಧನೆ ಮುಗಿಯಿತು ಎಂದೇನಲ್ಲ; ಏಕೆಂದರೆ ರಾಷ್ಟ್ರದ ಅಭಿವೃದ್ಧಿಯನ್ನು ಎಸ್ಟು ಬೆಚ್ಚು ಕೈಗೂಡಿಸಿದರೂ ಸಾಕೆಂದೆನಿಸುವುದಿಲ್ಲ. ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ಪ್ರತಿಯೊಬ್ಬನಿಗೂ ಸರಕಾರ ನೀಡಲು ಸಾಧ್ಯವುಂಟು; ಇಲ್ಲಿ ತತ್ವಮತ್ತು ಆದರ್ಶದ ಹೆಸರಿನಲ್ಲಿ ತೋರಿಬರುವ ಭಿನ್ನಾಭಿಪ್ರಾಯಕ್ಕೆ ಎಡೆಯಿಲ್ಲ. ಮಾತೃಭೂಮಿಯ ಶ್ರೇಯಸ್ಸೇ ಪ್ರತಿಯೊಬ್ಬನ ಆದರ್ಶ; ಮತ್ತು ಆ ಧ್ಯೇಯಕ್ಕಾಗಿ ತ್ಯಾಗಕ್ಕೆ ಸಿದ್ಧರಾಗುವುದೇ ಅಪೇಕ್ಷಿತ ಬೇಕಾದ ತತ್ವ.

—ಶ್ರೀ ದೇಶಮುಖ

ಕಾಗ್ರೆಸಿನ ನಾಯಕ ಅಧ್ಯಕ್ಷ ಶ್ರೀ ಪುರುಷೋತ್ತಮ ದಾಸ್ ಟಂಡನ್ನರು ಭಾರತ ಸರಕಾರದ ಆರ್ಥಿಕ ಧೋರಣೆಯನ್ನು ಕುರಿತಾದ ಚರ್ಚೆಯು ಲೋಕ ಸಭೆಯಲ್ಲಿ ನಡೆದಾಗ ಸಮಾಜವಾದದಲ್ಲಿ ನೆಹರುಗಳು ವ್ಯಕ್ತ ಪಡಿಸಿದ ವಿಶ್ವಾಸವು ತನಗೆ ಅರ್ಥವಾಗುವುದಿಲ್ಲವೆಂದು ಹೇಳಿದರು. ತನ್ನ ದೃಷ್ಟಿಯಲ್ಲಿರುವ ಭಾರತವು ಮಹಾತ್ಮಾಗಾಂಧೀಜಿಯಿಂದ ವರ್ಣಿಸಲ್ಪಟ್ಟ—ಬಡತನ ವಿಲ್ಲದ,ಹಸಿವೆಯ ಗೋಳು ಕೇಳಿಸದ, ಲಂಚ ಮತ್ತಿತರ ನೈತಿಕ ಪತನದ ಕ್ರಮಗಳಿಲ್ಲದ, ಶ್ರೀಮಂತ ಮತ್ತು ದರಿದ್ರರಲ್ಲಿ ಭೇದ ಹೆಚ್ಚಿಲ್ಲದ—"ರಾಮರಾಜ್ಯ"ವೆಂದರು. ಪ್ರಜಾ ಸಮಾಜವಾದಿಗಳ ಧುರೀಣ ಆಚಾರ್ಯ ಕೃಪಲಾನಿಯವರು, ಸರಕಾರದವರು ಸಮ್ಮಿಶ್ರ ಆರ್ಥಿಕ ಪದ್ಧತಿಯನ್ನು ಅನುಸರಿಸಿಕೊಂಡು ಹೆಚ್ಚು ಹೆಚ್ಚಾಗಿ ಖಾಸಗಿ ರಂಗದ ಬೆಳವಣಿಗೆಗೆ ಅವಕಾಶ ಕೊಡುವುದನ್ನು ಟೀಕಿಸಿದರು. ಮ್ಯಾನೇಜಿಂಗ್ ಏಜನ್ಸಿ ಪದ್ಧತಿಯನ್ನವ್ಯಯ ಕೈಗಾರಿಕಾ ಕೇಂದ್ರಗಳ ಮೇಲೆ ಕೆಲವು ಕಂಪೆನಿಗಳ ಮಾಲಕರು ವರ್ಚಸ್ವಿ ಪ್ರಭುತ್ವವನ್ನು ಇಟ್ಟುಕೊಳ್ಳುತ್ತಿರುವುದನ್ನು ಉಲ್ಲೇಖಿಸಿ "ಪ್ರಧಾನ ಮಂತ್ರಿಗಳು ಹೇಳುವ ಸಮಾಜವಾದವು ಬಹಳ ವಿಶಿಷ್ಟವಾದದ್ದಿರಬೇಕು—ಬಹುಶಃ ಆದು ಭಾರತ ಸರಕಾರದ ಮುದ್ರೆ ಹೊಂದಿದ ಸಮಾಜವಾದ" ಎಂದು ವ್ಯಂಗ್ಯವಾಡಿದರು. ಪ್ರಸಿದ್ಧ ವಿಜ್ಞಾನಿಗಳೆನಿಸಿಕೊಂಡ ಇನ್ನೊಬ್ಬ ಸದಸ್ಯ ಡಾ. ಮೇಘನಾದ ಶಹರಂತೂ ಭಾರತ ಸರಕಾರದ ಔದ್ಯೋಗಿಕ ನೀತಿಯು ಚಿಯಾಂಗರು ಅನುಸರಿಸಿದ್ದ ಧೋರಣೆಗಿಂತ ಭಿನ್ನವಾಗಿಲ್ಲವೆಂದು ಸಾರಿದ್ದಲ್ಲದೆ ಉತ್ಪಾದನೆಯ ಎಲ್ಲ ಕ್ಷೇತ್ರವನ್ನು ಖಾಸಗಿ ವಲಯಕ್ಕೆ ಸರಕಾರ ಒಪ್ಪಿಸಿ ತೊಡುತ್ತಿರುವುದಾಗಿ ಆರೋಪಿಸಿದರು.

ಸಮಾಜವಾದ ಹಾಗು ಭಾರತ

ಮೇಲಿನ ಅಭಿಪ್ರಾಯಗಳ ಬೆಳಕಿನಲ್ಲಿ ನಾವು ನೆಹರುಗಳು ಹೇಳುವ ಸಮಾಜವಾದದ ವಿಶೇಷ ಆರ್ಥಯನವನ್ನು ನಡೆಸಿದಿದ್ದರೆ, ಸಂಶಯಗಳು ನಿವಾರಣೆ ಹೊಂದುವುದು ಕಷ್ಟ, "ನಾನೂ ಸಮಾಜವಾದದಲ್ಲಿ ವಿಶ್ವಾಸವಿದ್ದವನಾಗಿದ್ದೇನೆ; ಸಮಾಜವಾದವನ್ನು ಒಪ್ಪಿಕೊಂಡ ಭಾರತವನ್ನು ಗಟಿಸುವುದೇ ಸರಕಾರದ ಉದ್ದೇಶ" ಎಂಬ ಅಭಿವ್ಯಾಯದ ಮಾತುಗಳನ್ನು ನೆಹರುಗಳು ಹೇಳಿದಷ್ಟಾಸಲು, ಅದನ್ನು ಜನತೆಯನ್ನು ಸೋಸದಲ್ಲಿ ಕೆಡಹುವುದಕ್ಕೆ ಭ್ರಾಂತರನ್ನಾಗಿ ಮಾಡುವುದಕ್ಕೆ, ಚುನಾವಣೆಯಲ್ಲಿ ಯಶಸ್ಸು ಗಳಿಸುವುದಕ್ಕೆ ಕೈಗೊಂಡ ಕುಹಕ ಪ್ರಚಾರ ಎಂಬುದಾಗಿ ದೂಷಿಸದವರು ಇಲ್ಲದಿಲ್ಲ. ಈಚೆಗೆ ಕೆಲವು ತಿಂಗಳುಗಳಿಂದೆ ನೆಹರುಗಳು ಸಮಾಜವಾದದ ಕುರಿತಾದ ತಮ್ಮ ವಿಚಾರಗಳನ್ನು ಬಹಳ ಸ್ಪಷ್ಟವಾಗಿಯೂ ಜೋರಿನಿಂದಲೂ ವಿವರಿಸುವುದಕ್ಕೆ ಹೆಚ್ಚು ಲಕ್ಷ್ಯವನ್ನು ಹೂರೈಸಿ, ದೊರೆತ ಸಂದರ್ಭಗಳಿಲ್ಲವನ್ನೂ ಇದಕ್ಕೆ ಉಪಯೋಗಿಸಿಕೊಂಡು ದನ್ನು ಕಾಣುತ್ತೇವೆ ಲೋಕಸಭೆಯಲ್ಲಿ ಸರಕಾರದ ನೀತಿಯ ಚರ್ಚೆ ನಡೆದಾಗಲೂ ಅವನು ತಮ್ಮ ವಿಚಾರಗಳನ್ನು ಸುದೀರ್ಘ ಭಾಷಣದ ಮೂಲಕ ಸ್ಪಷ್ಟೀಕರಿಸಿದರು. ಶಾಂತಿಯುತವಾದ ಕ್ರಮಗಳಿಂದ ಕ್ರಾಂತಿಯನ್ನು ಸಾಧಿಸಬೇಕೆಂಬುವೇ ಕಾಂಗ್ರೆಸಿನ ಕತ್ವವೆಂದು ಹೇಳುತ್ತಾ ಇದರ ತಳಹದಿಯು ಮೇಲೆ ಭಾರತವನ್ನು ಸಮಾಜವಾದದ ಕಡೆಗೆ ನಿಧಾನವಾಗಿ ಮುನ್ನೆಡೆಸುತ್ತಿರುವುದಾಗಿ ಅವರು ಪಿತಪಡಿಸಿದರು.

ಖಾಸಗಿ ವಲಯಕ್ಕೆ ಅಂತ್ಯ ತರುವುದು ಪ್ರತಿ ಪಕ್ಷಗಳ ಉದ್ದೇಶವಿದ್ದಂತೆ ಕಂಡು ಬಂದರೆ, ನೆಹರುಗಳು ನಾಯಕರಾಗಿರುವ ಭಾರತ ಸರಕಾರವು ಖಾಸಗಿ ರಂಗದ ಕಾರ್ಯಕಲಾಪಗಳು ಇನ್ನೂ ಮುಂದುವರಿಯ.ಬೇಕೆಂದು ಅಭಿವ್ಯಾಯ ಪಡುತ್ತದೆ. ಇದು ಸಮಾಜವಾದದ ಆದರ್ಶದೊಡನೆ ಹೇಗೆ ಹೊಂದಿಕೊಳ್ಳುತ್ತದೆ ಎಂಬುದಾಗಿ ಪ್ರತಿ ಸಕ್ಷದವರು ಆಸಮಾಧಾನಗೊಳ್ಳುವರು. ನೆಹರುಗಳು ಅವರಿಗೆ ಕೊಡುವ ಉತ್ತರವೆಂದರೆ, ಕೈಗಾರಿಕೆಗಳನ್ನು ಮಾತ್ರ ಖಾಸಗೀರಂಗವಾಗಿ ಭಾವಿಸಬಾರದು; ಸಣ್ಣ ಸಣ್ಣ ಹೊಲದ ತುಂಡುಗಳನ್ನು ಸಾಗುವಳಿ ಮಾಡುವ ರೈತರೇ ಖಾಸಗಿ ರಂಗದಲ್ಲಿ ಪ್ರಮುಖರು.ಇವರೆಲ್ಲರ ರಾಷ್ಟ್ರೀಕರಣ ಮಾಡುವುದು ಸಾಧ್ಯವೇ? ಪ್ರಜಾಪ್ರಭುತ್ವ ಪದ್ಧತಿಯನ್ನು ಒಪ್ಪಿಕೊಂಡು ಶಾಂತವಾದ ಉಪಾಯಗಳಿಂದ ಅಭಿವೃದ್ಧಿಗೊಳ್ಳ ಬಯಸುವವರಿಗೆ ಇಷ್ಟು ಮಂಗಿಯ ಚಟುವಟಿಕೆಗಳನ್ನು ರಾಜ್ಯದ ನಿಯಂತ್ರಣಕ್ಕೆ ಗುರಿ ಮಾಡಿ, ನಿಷ್ಕ್ರಿಯ ಗೊಳಿಸುವುದು ಇಷ್ಟವೆಂದು ತೋರುವುದಿಲ್ಲ. ಜನರ ಮನ ಪೊಲಿಸಿ ಪ್ರಗತಿಯನ್ನು ಕೈಗೂಡಿಸುವುದೇ ಸರಕಾರದ ಉದ್ದೇಶ ಹೀಗೆ ಮಾಡಿಯೇ ಭಾರತವಲ್ಲಿ ಸಮಾಜವಾದದ ತತ್ವಗಳನ್ನು ಅನುಷ್ಠಾನಕ್ಕೆ ತರಬೇಕೆಂಬುದು ಅದರ ಇಷ್ಟ. ಆದರೆ ಜನರ ಸಮ್ಮತಿಯನ್ನು ಕೇಳುವಾಗ ಬಹು ಜನರ ಹಿತವನ್ನೆ ಅದು ನೋಡುತ್ತದೆ: ಉದಾಹರಣೆಗೆ, ಭೂಸುಧಾರಣೆಯ ಪ್ರಶ್ನೆ ಬಂದಾಗ ರೈತರ ಕ್ಷೇಮ ಚಿಂತನೆಗೆ ಸರಕಾರ ಮಹತ್ವ ಸಲ್ಲಿಸುವುದಲ್ಲದೆ, ಭೂಮಾಲಿಕರಿಗೆ ಆದು ಒಪ್ಪಿಗೆಯೇ ಎಂಬ ಅಂಶಕ್ಕೆ ಗೌಣ ಸ್ಥಾನ ಸಿಗುತ್ತದೆ. ಇಪ್ಪರಿಂದ ಭೂಮಾಲಿಕರು ಗತಿಗೇಡಿಗಳಾಗುವರೆಂದೇನಲ್ಲ—ಅವರು ಹೊಸ ಧೋರಣೆಗೆ ಹೊಂದಿಕೊಳ್ಳುವಂತೆ ನೋಡಲಾಗುತ್ತದೆ.

ಸಮಾಜ ಸುಧಾರಣೆಯ ನಮ್ಮ ಧೋರಣೆಯಿಂದ ನಷ್ಟಕ್ಕೆ ಗುರಿಯಾದವರುಸಹ ಬದಲಿಸಿನ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಸುಮ್ಮನಿರುವಂತೆ, ಹಾಗೆ ಸುಧಾರಣೆಗೆ ಸಹಕಾರ ನೀಡುವಂತೆ ನಾವು ಪ್ರಯತ್ನಿಸುತ್ತದೆ. ಇದು ಹೊರನೋಟಕ್ಕೆ ನಿಧಾನವಾದ್ದ, ವಿಳಂಬವಾಗಿ ಫಲಕೊಡುವ ಧೋರಣೆಯಾಗಿ ಕಂಡುಬಂದರೂ ಒಟ್ಟಿಯ ಸಮತೂಕದಲ್ಲಿ ಇಡಲಾದ ಹೆಜ್ಜೆಯಾಗಿದೆ ಎಂಬ ನಂಗತಿಯನ್ನು ಮರೆಯಬಾರದು. ನಮ್ಮ ಸಮಸ್ಯೆಗಳ ಪರಿಹಾರಕ್ಕೆ ಅಲ್ಪಾವಧಿಯ ಮತ್ತು ದೀರ್ಘಾವಧಿಯ ಯೋಜನೆಗಳನ್ನು ಕೈಗೊಳ್ಳುವಾಗ ಸಮತೂಕದ ದೃಷ್ಟಿಗೆ ನಾವು ಪ್ರಾಧಾನ್ಯವನ್ನು ಸಲ್ಲಿಸಿದ್ದಿರೆ ಅನರ್ಥ ಪರಂಪರೆಗಳುಂಟಾಗುವುದರಲ್ಲಿ ಸಂದೇಹವಿಲ್ಲ ರಾಷ್ಟ್ರೀಯ ಸಂಪತ್ತನ್ನು ಹೆಚ್ಚಿಸುವುದು ಉದ್ಯೋಗ ಮಟ್ಟವನ್ನು ಸುಸ್ಥಿತಿಯಲ್ಲಿಡವುದು, ಶಿಕ್ಷಣ, ಆರೋಗ್ಯ ಮತ್ತು ವಸತಿ ಕ್ಷೇತ್ರಗಳಲ್ಲಿ ಎಲ್ಲರಿಗೂ ಸಾಮಾನ್ಯ ಅನುಕೂಲತೆಗಳನ್ನು ಕಲ್ಪಿಸುವುದು ಇತ್ಯಾದಿ ವಿಷಯಗಳು ಸುಸಂಕಾರದ ದೀರ್ಘಾವಧಿ ದೃಷ್ಟಿಗೆ ಒಳಪಡುವಾಗ, ಅಲ್ಪಾವಧಿ ಪ್ರಯೋಜನದ ಕೆಲವು ಸಂಗತಿಗಳಿಂದ ತತ್ಕಾಲಕ್ಕೆ ಈ ಉದ್ದೇಶ ಸಾಧನೆಯಲ್ಲಿ ನಾವು ಹಿಂದೆ ಉಳಿದಹಾಗೆ ಭಾಸವಾಗಬಹುದು. ಉದಾಹರಣೆಗೆ, ಬಂಡವಾಳ ವಿನಿಯೋಗವನ್ನು ಹೆಚ್ಚಿಸುವ ಪ್ರಯತ್ನದಿಂದ ಬಳಕೆಯ ಪ್ರಮಾಣ ತಗ್ಗಬಹುದು; ಹೆಚ್ಚಿನವರಿಗೆ ಉದ್ಯೋಗ ಸಿಗಬೇಕೆಂದು ಸಾಕಷ್ಟು ತರಬೇತಿ ಹೊಂದಿರದವರನ್ನು ವಿಶಿಷ್ಟ ಕೈಗಾರಿಕೆಯೊಂದ

(ಮುಂದಿನ ಪುಟ ನೋಡಿರಿ)

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೨೫.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿ.

ನೂತನ ವರ್ಷದ ಶುಭಾಶಯಗಳು!

ನಾವು ನಮ್ಮ ಸಕಲ ಆಶ್ರಯದಾತರಿಗೆ, ಮಿತ್ರರಿಗೆ ಹಾಗೂ ಗ್ರಾಹಕರಿಗೆ ಅವರು ನಮಗಿತ್ತ ಸರ್ವ ಪ್ರೋತ್ಸಾಹ ಸಹಕಾರಗಳಿಗಾಗಿ ನನ್ನು ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಅಲ್ಲದೆ ಮುಂದೆಯೂ ಅವರ ನಿರಂತರ ಆಶ್ರಯಕ್ಕೆ ನಾವು ಸರ್ವ ವಿಧದಲ್ಲೂ ಪಾತ್ರರಾಗುವಂತೆ ಪ್ರಯತ್ನಿಸುವೆವೆಂಬ ಭರವಸೆಯನ್ನೀಯುವೆವು. ಅವರೆಲ್ಲರಿಗೂ ನೂತನ ವರ್ಷವು ಹರ್ಷ ಮತ್ತು ಪ್ರಗತಿದಾಯಕವಾಗಲಿ ಎಂದು ನಾವು ಹೃತ್ಪೂರ್ವಕ ಹಾರೈಸುತ್ತೇವೆ.

THE CANARA INDUSTRIAL & BANKING SYNDICATE LTD.,

Head Office: UDIPI, S. India] [*Estd:* 1925.

ಹೋಟೆಲಿನ ಮೇಜಿನ ಸುತ್ತ ಕುಳಿತಿದ್ದವರೊಡನೆ ಆ ಮಹಾನುಭಾವ ಬಂದು ತಾನಿನಂದ ಬಿಟ್ಟುಬಿಡದೆ ತನ್ನ ಜೀವನದಲ್ಲಿ ಸಾಧಿಸಿದ ಅದ್ಭುತ ಚಮತ್ಕಾರಗಳನ್ನು ತೃಣವಸ್ತೇ ಪರ್ವತವಾಗಿ ವರ್ಣಿಸುತ್ತಿದ್ದ. ಇವನ್ನು ಕೇಳಿ ಬೇಸರ ಪಟ್ಟುಕೊಂಡವರು "ಇರಲಿ ಬಿಡಿ, ಈಗ ನಿಮಗೆ ಮಾತನಾಡಲಿಕ್ಕೆ ತೀರಾ ಆಸಾಧ್ಯವೆನಿಸಿದ ಸಾಹಸ ಪೊಂದಿದ್ದರೆ ಅದನ್ನಷ್ಟು ಹೇಳಿ ನೋಡೋಣ—ನಾನದನ್ನು ಮಾಡಿ ತೋರಿಸುತ್ತೇನೆ" ಎಂದರು.

ನವಯುಗ ಜಾಹೀರಾತು

"ಹಾಗೋ, ಸದ್ಯಕ್ಕೆ ಹೋಟೆಲಿನ ಬಿಲ್ಲನ್ನು ತೆರಲಾರದೆ ತೊಂದರೆಯಲ್ಲಿ ಬಿದ್ದಿದ್ದೇನೆ. ನಿಮ್ಮಿಂದ ಬಹಳ ಉಪಕಾರವಾಯಿತು" ಎಂದವನು ಪೆಲ್ಲನೆ ಎದ್ದಿಂದಿದ್ದು ಹೋದ.

ಭಾರತದಲ್ಲಿ ಹತ್ತಿಯ ಅಭಿವೃದ್ಧಿ ಕಾರ್ಯ

ಸ್ವಾವಲಂಬನದ ಅಲ್ಪಾವಧಿ ಪ್ರಯತ್ನಗಳಲ್ಲಿ ಯಶಸ್ಸು

ಆನಾದಿಕಾಲದಿಂದಲೂ ಭಾರತದಲ್ಲಿ ಹತ್ತಿಯನ್ನು ಬೆಳೆಯುವುದು, ಅದರಿಂದ ಬಟ್ಟೆಗಳನ್ನು ತಯಾರಿಸುವುದು ವಾಡಿಕೆಯಾಗಿದೆ. ಪ್ರಪಂಚದಲ್ಲಿಯೇ ನಮಗೆ ತಿಳಿದುಬಂದಂತೆ, ಅತ್ಯಂತ ಪ್ರಾಚೀನವಾದ ಹತ್ತಿಯ ಬಟ್ಟೆಗಳು ಈಗ ಪಶ್ಚಿಮ ಪಾಕಿಸ್ತಾನದಲ್ಲಿರುವ ಸಿಂಧ್‌ನ ಮಹೆಂಜೋದಾರೋನಿನಲ್ಲಿ ಅಗೆದಾಗ ಸಿಕ್ಕಿದ ಬಟ್ಟೆಯ ತುಂಡುಗಳು. ಈ ಬಟ್ಟೆಯ ತುಂಡುಗಳು ಸುಮಾರು ೫,೦೦೦ ವರ್ಷಗಳ ಹಿಂದಿನವೆಂದು ಭಾವಿಸಲಾಗಿದೆ.

ಅಂದಿನಿಂದಲೂ ಭಾರತದಲ್ಲಿ ಹತ್ತಿಯ ಕೈಗಾರಿಕೆಯು ಒಂದೇ ಸಮನೆ ಅಭಿವೃದ್ಧಿಗೆ ಒಂದಿತಲ್ಲದೆ ಕ್ರಿ. ಪೂ. ೬ ನೇಯ ಶತಮಾನದಲ್ಲಿ ಭಾರತವು ಹತ್ತಿಯ ಬಟ್ಟೆಗಳ ರಫ್ತಿನ ವ್ಯಾಪಾರದಲ್ಲಿ ಉಚ್ಚ್ರಾಯ ಸ್ಥಿತಿಯಲ್ಲಿತ್ತು. ಗುಡ್ ಕೋಪ್ ಭೂಶಿಖರದ ಮೂಲಕ ಭಾರತಕ್ಕೆ ಸಮುದ್ರ ಮಾರ್ಗವನ್ನು ಕಂಡು ಹಿಡಿದದ್ದು ಪಶ್ಚಿಮ ರಾಷ್ಟ್ರಗಳೊಡನೆ ಹತ್ತಿ ಬಟ್ಟೆಗಳ ವ್ಯಾಪಾರದಲ್ಲಿ ಹೊಸ ಹಾದಿಯನ್ನು ತೋರಿಸಿದಂತಾಯಿತು.

ಇಂಗ್ಲೆಂಡಿನ ಕೈಗಾರಿಕಾ ಕ್ರಾಂತಿಯಾದ ನಂತರ ಬಹಳವಾಗಿ ಹತ್ತಿಯ ಯಂತ್ರಗಳ ಉಪಯೋಗವು ಹೆಚ್ಚಿ ಆರ್ಥಿಕ ಪ್ರಪಂಚದಲ್ಲಿ ತೀವ್ರ ಬದಲಾವಣೆಗಳಾದವು. ಅಂದಿನಿಂದ ಭಾರತದಿಂದ ಹತ್ತಿಯ ಸರಕುಗಳು ಹೊರಗೆ ಹೋಗುವುದು ನಿಂತು ಬ್ರಿಟನ್‌ಗೆ ಕಳುಹಿಸುವುದಕ್ಕಾಗಿಯೇ ಹತ್ತಿಯನ್ನು ಬೆಳೆಸಲು ಆರಂಭವಾಯಿತು. ೧೭೮೦ ರಿಂದಲೂ ಭಾರತದಲ್ಲಿ ಹೆಚ್ಚು ಹೆಚ್ಚಾಗಿ ಉತ್ತಮ ರೀತಿಯ ಹತ್ತಿಯನ್ನು ಬೆಳೆಯಲು ಪ್ರಯತ್ನಿಸಿದ್ದು ೧೯ನೇ ಶತಮಾನದ ವರೆಗೂ ಮುಂದುವರಿಯಿತು. ಒಂದೇ ಸಮನೆ ಹತ್ತಿಯ ಕೈಗಾರಿಕೆಯು ಪ್ರಗತಿಯ ಮಾರ್ಗವನ್ನು ಹಿಡಿಯಿತು. ೧೯ನೇ ಶತಮಾನದ ಕಡೆಯ ೫೫ ವರ್ಷಗಳಲ್ಲಿ ಭಾರತೀಯ ಗಿರಣಿಗಳು ಕಚ್ಚಾ ಹತ್ತಿ ಬೇಕೆಂದು ಕೇಳತೊಡಗಿದವು. ೧೮೮೨—೮೩ರಲ್ಲಿ ವಾರ್ಷಿಕ ಉತ್ಪನ್ನವು ೧೫೫ ಲಕ್ಷ ಬೇಲುಗಳಷ್ಟು ಇದ್ದದ್ದು ೧೯೦೬-೦೭ರಲ್ಲಿ ೭೭೩ ಲಕ್ಷ ಬೇಲುಗಳಿಗೆ ಏರಿತು. ಇದೇ ಅವಧಿಯಲ್ಲಿ ವಾರ್ಷಿಕ ಹತ್ತಿಯ ರಫ್ತು ೧೩ ಲಕ್ಷ ಬೇಲುಗಳಿಂದ ೧೯೩ ಬೇಲುಗಳಿಗೆ ಏರಿತು ಮತ್ತು ಭಾರತೀಯ ಗಿರಣಿಗಳಲ್ಲಿನ ಹತ್ತಿಯ ಉಪಯೋಗವು ೩೬ ಲಕ್ಷ ಬೇಲುಗಳಿಂದ ೧೪೬ ಲಕ್ಷ ಬೇಲುಗಳಿಗೆ ಏರಿತು. ಉತ್ಪನ್ನದ ಅರ್ಧ ಭಾಗವು ಈ ಅವಧಿಯಲ್ಲಿ ರಫ್ತಾಯಿತು. ಈ ಅವಧಿಯಲ್ಲಿ ಬೆಳೆದ ಹತ್ತಿಯು ಚಿಕ್ಕ ತಂತುವಿನ ಮಿಶ್ರ ಜಾತಿಯದಾಗಿತ್ತು.

ಈಸ್ಟ್ ಇಂಡಿಯಾ ಕಂಪೆನಿಯವರು ಉತ್ತಮ ದರ್ಜೆಯ ಅಮೆರಿಕನ್ ಹತ್ತಿಯನ್ನು ಬೆಳೆಯಲು ಮೊದಲು ಪ್ರಯತ್ನಿಸಿದರು. ಅಮೆರಿಕದಿಂದ ಹತ್ತಿಯ ಬೀಜಗಳನ್ನು ಅಮದು ಮಾಡಿಕೊಂಡಿದ್ದಲ್ಲದೆ ಕೆಲವು ರೈತರನ್ನೂ ಕರೆದುಕೊಂಡು ಬಂದರು. ಆದರೆ ಅನೇಕ ಕಾರಣಗಳಿಂದ ಈ ಪ್ರಯತ್ನಗಳು ವಿಫಲವಾದವು. ೨೦ನೆಯ ಶತಮಾನದ ಆದಿ ಭಾಗದಲ್ಲಿ ರಚಿತವಾದ ಪ್ರಾಂತೀಯ ವ್ಯವಸಾಯ ಶಾಖೆಗಳು ಉತ್ತಮ ದರ್ಜೆಯ ಹತ್ತಿಯ ಉತ್ಪನ್ನದ ಕಡೆ ಆಸಕ್ತಿ ವಹಿಸಿದವು. ಆದರೆ ಮುಂಬೈ, ಪಂಜಾಬ್ ಮತ್ತು ಉತ್ತರ ಪ್ರದೇಶಗಳಲ್ಲಿ ಈ ಆಸಕ್ತಿಯು ಹೆಚ್ಚಾಗಿತ್ತು. ಹೊಸ ಪ್ರಯೋಗಗಳ ನಂತರ ಸುಧಾರಿಸಿದ ರೀತಿಯ ಬೀಜಗಳನ್ನು ರೈತರಿಗೆ ಕೊಡಲಾಯಿತು. ಈ ಕಾರ್ಯವು ಭಾರತೀಯ ಹತ್ತಿ ಬೆಳೆಯ ರೂಪವನ್ನೇ ಬದಲಾಯಿಸಿತು. ೧೯೫೦ರಲ್ಲಿ ವಾರ್ಷಿಕ ಉತ್ಪನ್ನದಲ್ಲಿ ನೂರಕ್ಕೆ ಸುಮಾರು ಮತ್ತು ಉದ್ದನೆಯ ತಂತುವಿನ ಹತ್ತಿಯನ್ನು ಭಾರತೀಯ ಗಿರಣಿಗಳು ಉಪಯೋಗಿಸುತ್ತಿದ್ದವು. ಚಿಕ್ಕ ತಂತುವಿನ ಹತ್ತಿಯನ್ನು ಜಪಾನಿಗೂ ಮತ್ತು ಯೂರೋಪ್ ಖಂಡಕ್ಕೂ ರಫ್ತು ಮಾಡಲಾಗುತ್ತಿತ್ತು.

ಭಾರತೀಯ ಗಿರಣಿಗಳಲ್ಲಿ ಹೆಚ್ಚು ಹೆಚ್ಚಾಗಿ ಉತ್ತಮ ದರ್ಜೆಯ ಹತ್ತಿಯನ್ನು ಉಪಯೋಗಿಸುವ ಮನೋಭಾವವೂ ವಿಪರೀತವಾಗಿ ಉಳಿದು ಹೋದ ಚಿಕ್ಕ ತಂತುವಿನ ಹತ್ತಿಯನ್ನು ಪ್ರತಿಫಲ ತರುವ ರೀತಿಯಲ್ಲಿ ಮಾರಾಟ ಮಾಡುವ ವಿಷಯವೂ ಭಾರತ ಸರ್ಕಾರದ ಗಮನಕ್ಕೆ ಒಂದಿತು 'ಹತ್ತಿಯ ನೀತಿ' ಮತ್ತು ವ್ಯಾಪಾರದ ಬಗ್ಗೆ ೧೯೫೩—೫೫ರಲ್ಲಿ ಪರಿಶೀಲನೆ ನಡೆಸಲು ವಿಶೇಷ ಸಮಿತಿಯೊಂದನ್ನು ರಚಿಸಲಾಯಿತು. ೧೯೫೨ರಲ್ಲಿ ಈ ಸಮಿತಿಯು ತನ್ನ ವರದಿಯನ್ನು ಒಪ್ಪಿಸಿತು. ಹತ್ತಿ ಬೆಳೆಗಾರರಲ್ಲಿ, ವ್ಯಾಪಾರಸ್ಥರಲ್ಲಿ, ತಯಾರಿಕಾಗಾರರಲ್ಲಿ ಮತ್ತು ಸರ್ಕಾರದಲ್ಲಿ ಎಲ್ಲ ವಿಷಯಗಳಲ್ಲಿಯೂ ಅನ್ಯೋನ್ಯ ಭಾವವನ್ನೂ, ಸಹಕಾರವನ್ನೂ ಪಡೆಯುವುದಕ್ಕಾಗಿ "ಕೇಂದ್ರ ಹತ್ತಿ ಸಮಿತಿ" ಯೊಂದನ್ನು ರಚಿಸಬೇಕೆಂದು ಈ ಸಮಿತಿಯು ಸಲಹೆಯನ್ನಿತ್ತಿತು. ಸರ್ಕಾರವು ಈ ಸಲಹೆಯನ್ನು ಅಂಗೀಕರಿಸಿ ೧೯೫೨ರಲ್ಲಿ ಭಾರತೀಯ ಕೇಂದ್ರ ಹತ್ತಿ ಸಮಿತಿಯನ್ನು ರಚಿಸಿತು ಎರಡು ವರ್ಷಗಳ ನಂತರ ಈ ಸಮಿತಿಗೆ ಶಾಸನ ಬದ್ಧವಾದ ಅಂತಸ್ತನ್ನು ಕೊಡಲಾಯಿತು. ಈ ಸಮಿತಿಯ ಸ್ಥಾಪನೆಯಿಂದ ಹತ್ತಿ ಸಂಶೋಧನಾ ಕಾರ್ಯಕ್ಕೆ ಪ್ರೋತ್ಸಾಹ ಕೊಟ್ಟಂತಾಯಿತು. ಮುಂಬಯಿಲ್ಲಿ ಸಂಶೋಧನಾ ಪ್ರಯೋಗ ಶಾಲೆಯನ್ನು ಸ್ಥಾಪಿಸಲಾಯಿತು ಪ್ರಾಂತೀಯ ವ್ಯವಸಾಯ ಶಾಖೆಗಳು ತಮ್ಮ ತಮ್ಮ ಹತ್ತಿಯ ಸಂಶೋಧನಾ ಮತ್ತು ವ್ಯಾಪಕೀಕರಣ ಕಾರ್ಯಗಳನ್ನು ವಿಸ್ತರಿಸುವದಕ್ಕಾಗಿ ಆರ್ಥಿಕ ನೆರವನ್ನು ಕೊಡಲಾಯಿತು. ಕೇಂದ್ರ ಸಮಿತಿಯ ಸಹಾಯದ ನೀತಿಯು ವ್ಯವಸಾಯ ಶಾಖೆಗಳ ಕೆಲಸಗಳಿಗೆ ಹೆಚ್ಚಿನ ಸಹಾಯ ಮಾಡುವುದಕ್ಕಾಗಿಯೇ ಹೊರತು ನಿರ್ಮೂಲ ಮಾಡುವುದಕ್ಕಲ್ಲ.

೧೯೩೨ರಿಂದ ೧೯೫೭ರ ವರೆಗೂ ೫೫ ವರ್ಷಗಳಲ್ಲಿನ ಸಂಶೋಧನೆಗಳು ವೈಜ್ಞಾನಿಕ ರೀತಿಯಲ್ಲಿ ಹತ್ತಿಯ ಗಿಡಗಳನ್ನು ಉತ್ತಮ ರೀತಿಯಲ್ಲಿ ಬೆಳೆಯುವುದನ್ನು ತೋರಿಸಿನೆ. ಹೆಚ್ಚಾಗಿ ಹತ್ತಿಯನ್ನು ಬೆಳೆಯುವ ಎಲ್ಲಾ ರಾಜ್ಯಗಳಿಗಾಗಿ, ವಿವಿಧ ವಾಣಿಜ್ಯದ ಹತ್ತಿಯ ಬೆಳೆಯನ್ನು ಬೆಳೆಸಲಾಗಿದೆ.

ವಿಸ್ತರಣಾ ಕಾರ್ಯದಲ್ಲಿ ಮಧ್ಯಮ ಮತ್ತು ಉದ್ದನೆಯ ಹತ್ತಿಯ ಉತ್ಪನ್ನವು ರಾಷ್ಟ್ರದಲ್ಲಿ ತಕ್ಕಮಟ್ಟಿಗೆ ಹೆಚ್ಚಿದೆ. ಭಾರತದ ವಿಭಜನೆಗೆ ನೊದಲು ೧೯೪೬ ರ ತನಕ ಉತ್ತಮ ದರ್ಜೆಯ ಹತ್ತಿಯ ಸರಾಸರಿ ವಾರ್ಷಿಕ ಉತ್ಪನ್ನ, ಮತ್ತು ಚಿಕ್ಕ ತಂತುವಿನ ಹತ್ತಿಯ ಉತ್ಪನ್ನದ ಹೋಲಿಕೆ ಇದನ್ನು ವ್ಯಕ್ತಪಡಿಸುತ್ತದೆ.

೧೯೫೬—೫೭ ರಲ್ಲಿ ನೂರಕ್ಕೆ ೬೭ ರಷ್ಟು ಉತ್ಪನ್ನವಿದ್ದ ಉದ್ದನೆಯ ವಿಧದ ಹತ್ತಿಯು ೧೯೫೭-೫೮ರಲ್ಲಿ ನೂರಕ್ಕೆ ೭೮ ರಷ್ಟಕ್ಕೆ ಏರಿತು. ೧೯೫೨-೫೩ ರಲ್ಲಿ ನೂರಕ್ಕೆ ೭೪ ರಷ್ಟು ಏರಿದ್ದದ್ದು ಎರಡನೆಯ ಪ್ರಪಂಚ ಯುದ್ಧದ ಸಮಯದಲ್ಲಿ "ಹೆಚ್ಚು ಆಹಾರ ಬೆಳೆಯಿರಿ" ಎಂಬ ಯೋಜನೆಯ ಪ್ರಕಾರ ಚಿಕ್ಕ ತಂತುವಿನ ಹತ್ತಿಯ ಉತ್ಪನ್ನ ಕಮ್ಮಿಯಾದದ್ದು ಮುಖ್ಯ ಕಾರಣವಾಗಿದೆ. ಉತ್ತಮ ದರ್ಜೆಯ ಹತ್ತಿಯನ್ನು ಬೆಳೆಯುತ್ತಿರುವುದರಿಂದ ಬೆಳೆಗಾರರಿಗೆ ಪ್ರತಿ ವರ್ಷವೂ ೮೦ ರಿಂದ ೧೦೦ ಕೋಟಿ ರೂಪಾಯಿಗಳ ಹೆಚ್ಚಿನ ಆದಾಯವನ್ನು ಕೊಡಲಾಗುತ್ತಿದೆ. ೧೯೫೨ ರಿಂದ ಇಲ್ಲಿಯವರೆಗಿನ ೫೫ ವರ್ಷಗಳ ಹತ್ತಿಯ ಅಭಿವೃದ್ಧಿಯ ಸಂಶೋಧನಾ ಕಾರ್ಯಕ್ಕೆ ಖರ್ಚಾದ ಒಟ್ಟು ಹಣದ ಮೂರು ನಾಲ್ಕರಷ್ಟು ಹಣವನ್ನು ಈ ಹೆಚ್ಚಿನ ಆದಾಯವು ಸಂಪಾದಿಸಿದ.

ಬೆಳೆಯನ್ನು ಉತ್ತಮಪಡಿಸುವುದರ ಜೊತೆಗೆ ಹತ್ತಿಯ ಉತ್ಪತ್ತಿಯ ಒಟ್ಟಿಗೂ ಭಾರತದ ವಿವಿಧ ಹತ್ತಿ ಬೆಳೆಗಳ ಬಗ್ಗೆಯೂ ಅಧ್ಯಯನ ನಡೆಸಲಾಗಿದೆ ಹತ್ತಿಯ ಸಸ್ಯ ವಿಜ್ಞಾನದ ಬಗ್ಗೆ ಸಂಶೋಧನೆಯನ್ನು ನಡೆಸಲಾಗಿದೆ ; ಅಮೆರಿಕನ್ ಹತ್ತಿ ಬೆಳೆಯು ವಿಫಲವಾದುದಕ್ಕೆ ಕಾರಣವನ್ನು ಪಂಜಾಬಿನಲ್ಲಿ ಸಸ್ಯ ವೈಜ್ಞಾನಿಕ ಕ್ರಮಗಳಿಂದ ತಿಳಿಯಲಾಯಿತು

ಭಾರತೀಯ ಕೇಂದ್ರ ಹತ್ತಿ ಸಮಿತಿಯ ಪ್ರಯೋಗಶಾಲೆಯಲ್ಲಿ ಹತ್ತಿಯ ನೂಲುಗಳ ಮತ್ತು ನೂಲುವಿಕೆಯ ಬಗ್ಗೆ ಪ್ರಾಥಮಿಕವಾಗಿ ಯಂತ್ರಕಲಾ ಸಂಶೋಧನೆ ನಡೆಸಲಾಯಿತು. ಕೃತಕ ಗೊಬ್ಬರಗಳ, ನೀರಾವರಿ ಕ್ರಮಗಳ, ಮತ್ತಿತರ ಕೃಷಿ ಪದ್ಧತಿಗಳ ಬಗ್ಗೆ ಪರೀಕ್ಷೆಗಳನ್ನು ನಡೆಸಲಾಗಿದೆ, ಇನ್ನೂ ನಡೆಸಲಾಗುತ್ತಿದೆ.

ನೀರಾವರಿ ಇಲ್ಲದೆಯೇ ಭಾರತದಲ್ಲಿ ಬಹಳ ಮಟ್ಟಿಗೆ ಹತ್ತಿಯನ್ನು ಬೆಳೆಯಲಾಗುತ್ತಿದೆ ೧೯೫೬-೫೭ರಲ್ಲಿ ಹತ್ತಿ ಬೆಳೆದ ಒಟ್ಟು ೧೫೫ ಲಕ್ಷ ಎಕರೆಗಳ ಭೂಮಿಯ ಪೈಕಿ ಕೇವಲ ೯ ಲಕ್ಷ ಎಕರೆಗಳ ಭೂಮಿಗೆ ಮಾತ್ರ ನೀರಾವರಿ ಸಾಗುವಳಿಯಾಗಿತ್ತು ಉಳಿದುದೆಲ್ಲಾ ಮುಂಗಾರು ಮಳೆಯ ನೀರಿನ ಆಸರೆಯನ್ನು ಪಡೆದಿತ್ತು. ಕರ್ನಾಟಕ ಮತ್ತು ಹೈದರಾಬಾದಿನ ಸುತ್ತಮುತ್ತಲೂ ಈ ಜಿಲೆಯನ್ನು ಮುಂಗಾರು ಮಳೆಗೆ ಮುಂದೆ ಭೂಮಿಯಲ್ಲಿನ ತೇವದಿಂದ ಬೆಳೆಯಲಾಗುತ್ತಿದೆ.

(೧೧ನೇ ಪುಟ ನೋಡಿರಿ)

ನಂಬಿಕೆಗೆ ಅರ್ಹತೆ!

ಅತ್ಯುತ್ತಮ ಟಾಯಲೆಟ್ ಸಾಬೂನಿನಲ್ಲಿ ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ ಅವೆಲ್ಲಾ

ಮೈಸೂರು ಸ್ಯಾಂಡಲ್ ಸೋಪಿನಲ್ಲಿ

ಇರುವವು ಎಂದು ಖಚಿತವಾಗಿ ಹೇಳುತ್ತೇವೆ.

* * *

— ಎಲ್ಲಾ ಕಡೆಗಳಲ್ಲೂ ದೊರಕುವುದು —

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು.

Member: I. S. T. M. A.

(ಉತ್ತಮ ಸಾರಸ್ವತ ಬ್ರಾಹ್ಮಣರ ಆಡಿಗೆ, ಶುಚಿ ರುಚಿಯಾದ ರೈಸ್‌ಪ್ಲೇಟ್)

ರುಚಿಕರವಾದ ಊಟ— ಹವೇಶೀರ್ (Airy) ವಸತಿ,

ಎರಡು ಊಟ, ಕೋಟ್ (Cot) ಇತ್ಯಾದಿ ಸೌಕರ್ಯ.

ತಿಂಗಳೊಂದರ ರೂ. 52/- ಮಾತ್ರ.

ವಿಶೇಷ ಮಾಹಿತಿಗೆ ಪ್ರತ್ಯಕ್ಷ ವಿಚಾರಿಸಿರಿ

ಸದ್ಗುರು ಬೋರ್ಡಿಂಗ್ ಎಂಡ್ ಲೋಜಿಂಗ್

ಹಿಂವ್ಮಾತಾ ಸಿನೇಮಾದ ಸಮೋಸ, ದಾದರ್, ಮುಂಬಯಿ ೧೪.

ವ್ಯವಸ್ಥಾಪಕ ವಿ. ಯೆಸ್. ಪ್ರಭು

ಪ್ರೇಕ್ಷಣೀಯ ಸ್ಥಳಗಳ ಪ್ರವಾಸಕ್ಕೆ ಉತ್ತೇಜನ

ಸ್ಥಳೀಯ ಮತ್ತು ರಾಷ್ಟ್ರೀಯ ಮಟ್ಟದ ಕಾರ್ಯಕ್ರಮ

ನಮ್ಮ ದೇಶಕ್ಕೆ ಹೊರಗಿನಿಂದ ಬಂದ ಮಹಾನುಭಾವರು ಇಲ್ಲಿಯ ಪ್ರೇಕ್ಷಣೀಯ ಸ್ಥಳಗಳಲ್ಲಿ ಕೆಲವನ್ನಾದರೂ ಸಂದರ್ಶಿಸದೆ ಹೋಗುವುದಿಲ್ಲ. ರಾಜಕಾರಣಿಗಳಾದವರು ತಮ್ಮ ಹೊಸ ದೆಹಲಿಯ ಅಲ್ಪಾವಧಿ ವಾಸ್ತವ್ಯ ಕಾಲದಲ್ಲಿ ಸಹ ಕೆಂಪು ಕೋಟೆ, ಜುಮ್ಮಾ ಮಸೀದಿ, ಕುತುಬ್ ಮಿನಾರ್ ಇವುಗಳನ್ನೂ ಸಾಧ್ಯವಾದರೆ ವಿಮಾನ ನಿಲಯ ಆಗ್ರಾಕ್ಕೆ ಹಾರಿ ಹೋಗಿ ತಾಜಮಹಾಲನ್ನೂ ನೋಡಿ ಆನಂದಗೊಳ್ಳುವರಾದರೆ, ಸಾಂಸ್ಕೃತಿಕ ಮಹತ್ವವನ್ನು ಮನಸರಿಕೆ ಮಾಡಿಕೊಳ್ಳಲೆಂದೇ ಬಂದವರು ಉತ್ತರ ಹಾಗು ದಕ್ಷಿಣ ಭಾರತದ ಚಾರಿತ್ರಿಕ ಮಹತ್ವದ ಪ್ರಮುಖ ಸ್ಥಳಗಳಿಗೆ ಭೇಟಿ ಕೊಡದೆ ಮರಳುವುದಿಲ್ಲ. ಭಾರತೀಯರ ಮನೋಭಾವವನ್ನು ಆಧರ ಮಾಡಿಕೊಳ್ಳಬೇಕಾದರೆ, ಇಲ್ಲಿಯವರ ಧೋರಣೆ ನುತ್ತು ಶೈಲ್ಯಾಯಾದರ್ಶಗಳನ್ನು ಗ್ರಹಿಸಬೇಕಾದರೆ ಅದಕ್ಕೆ ಹಿನ್ನೆಲೆಯಾಗಿ ನಿಂತಿರುವ ಸಹಸ್ರಾರು ವರ್ಷ ಪುರಾತನವಾದ ಸಾಂಸ್ಕೃತಿಕ ವೈಶಿಷ್ಟ್ಯವನ್ನು ಗುರುತಿಸಿ ಕೊಳ್ಳುವುದು ಅನಿವಾರ್ಯವೆನಿಸುತ್ತದೆ. ಆದುದರಿಂದ ಪ್ರವಾಸ ಯೋಗ್ಯವಾದ ಪ್ರೇಕ್ಷಣೀಯ ಸ್ಥಳಗಳನ್ನು ವಿದೇಶೀಯರು ಕುತೂಹಲವನ್ನು ವ್ಯಕ್ತಪಡಿಸುವುದು ಸಹಜ.

ಕೇವಲ ವಿದೇಶೀಯರ ತಿಳಿವಳಿಕೆಗೆ ಮತ್ತು ಮನೋರಂಜನೆಗಾಗಿ ನಮ್ಮ ಸಾಂಸ್ಕೃತಿಕ ಕೇಂದ್ರಗಳನ್ನು ಉಪಯೋಗಿಸಿಕೊಂಡರೆ ಸಾಕೆಂದು ನಾವು ಭಾವಿಸುವುದು ಸರಿಯಲ್ಲ - ಭಾರತೀಯನಾದವನು ತನ್ನ ದೇಶದ ಕುರಿತಾದ ಜ್ಞಾನವನ್ನು ಆದಷ್ಟು ಹೆಚ್ಚಿಸಿಕೊಳ್ಳುವುದು ರಾಷ್ಟ್ರದ ಪ್ರಗತಿಯ ದೃಷ್ಟಿಯಿಂದ ಅಗತ್ಯವಾದುದರಿಂದ, ನಮ್ಮ ಪ್ರಾಚೀನ ವೈಭವ ಸ್ಥಾನಗಳ ಪರಿಚಯವನ್ನ ನಾವು ಆದಷ್ಟು ಹೆಚ್ಚಿಗೆ ಮಾಡಿಕೊಳ್ಳುವುದು ತುಂಬಾ ಅಪೇಕ್ಷಣೀಯ. ನಾವೆಲ್ಲರೂ ವಿಜಯ ನಗರ ಸಾಮ್ರಾಜ್ಯದ ರಾಜಧಾನಿಯಾಗಿ ಮೆರೆದ ಹಂಪೆಯ ಖ್ಯಾತಿಯನ್ನು ಕೇಳಿದ್ದೇವೆ. ಕನ್ನಡಿಗರು ಈ ಸಾಮ್ರಾಜ್ಯವು ಕಾಲಗರ್ಭದಲ್ಲಿ ಅಡಗಿ ಹೋದರೂ ಅದರ ಅಳಿದುಳಿದ ಅವಶೇಷಗಳು ಈಗಲೂ ವಿಸ್ಮಯವನ್ನು ಹುಟ್ಟಿಸುವಂತಿವೆಯೆಂದರೆ ಅತಿಶಯೋಕ್ತಿಯಾಗದು - ಆದರೆ ಹಂಪೆಯನ್ನು ಇಂದಿನ ಸ್ಥಿತಿಯಲ್ಲಿ ಕಂಡ ಕನ್ನಡಿಗರ ಸಂಖ್ಯೆ ಎಷ್ಟಿದ್ದೀತು ? ಹಾಗೆ ಕಂಡವರಲ್ಲಿ ಸಹ, ಆವರ ಊರಿಗೆ ಸವಿೂಪದ ಐತಿಹಾಸಿಕ ಸ್ಥಳದ ಪರಿಚಯ ಮಾಡಿಕೊಂಡವರು ಎಷ್ಟು ಜನ ಸಿಗಬಹುದು? ಉಡುಪಿಯವಂಥ ನಮಗೆ ಬಾರಕೂರಿನ ಇತಿಹಾಸ ತಿಳಿದಿರದಿದ್ದರೆ, ಅವನ್ನು ನಾವು ಸಂದರ್ಶಿಸಿಲ್ಲವಾದರೆ, ಹಂಪೆಗೆ ಕೊಡುವ ಭೇಟಿಗೆ ಅಷ್ಟು ಮಹತ್ವ ಸಲ್ಲಿಸುವುದು ಸರಿಯಾಗಲಿಕ್ಕಿಲ್ಲ.

ಐತಿಹಾಸಿಕ ಸ್ಥಳಗಳಂತೆ ಪ್ರವಾಸಿಗಳ ಹೃದಯೋಲ್ಲಾಸವನ್ನುಂಟು ಮಾಡುವ ಇತರ ಅನೇಕ ವಿಹಾರ ಕೇಂದ್ರಗಳೂ ಇವೆ—ನಮಗೆ ಹತ್ತಿರದಲ್ಲಿ ಕೊಡಗು ಮತ್ತು ನೀಲಗಿರಿಯ ಬೆಟ್ಟಗಳವೆ. ಇಲ್ಲಿಯ ಸಿಸರ್ಗ ಸೌಂದರ್ಯವನ್ನು ಅನ್ವಾಡಿಸಲು ನಾವು ತುಂಬ ಉತ್ಸುಕತೆಯನ್ನು ತೋರಿಸಿದರೆ ಉದರಲ್ಲಿ ತಪ್ಪೇನೂ ಇರಲಾರದು. ಆದರೆ ನಮಗೆ ತುಂಬ ಸವಿೂಪದ ಬಹಾದರಗಡವನ್ನೂ ತೋಸ್ಸೆಪಾರನ್ನೂ ನಾವಿನ್ನೂ ಸಂದರ್ಶಿಸಿಲ್ಲವಾದರೆ, ನಮ್ಮ ಕೊಡಗು, ನೀಲಗಿರಿಗಳ ಪ್ರವಾಸ ಸಾರ್ಥಕವೆಂದು ಭಾವಿಸುವುದು ಕಷ್ಟ. ಜೇಕಲ ಮತ್ತು ಜಮಾಲಾಬಾದು ಕೋಟೆಗಳ ಕುರಿತು ನಿನೇನೂ ತಿಳಿಯದ ದಕ್ಷಿಣ ಕನ್ನಡಿಗರು ಶಿವಾಜಿಯ ಕಾಲದ ಮಿಂಚು ಳೆಡದ ಕುರಿತಾಗಿ ಅಥವಾ ರಾಜಸ್ಥಾನದ ಚಿತ್ತೂರು ಭಿತದ ಸಂಬಂಧದಲ್ಲಿ ಎಷ್ಟು ಆಸಕ್ತಿ ವಹಿಸಿ ಮಾಹಿತಿಯಾದಿದರೂ ಅದಕ್ಕೆ ತೂಕ ಬರಲಾರದು ಜೋಗದ ಜಲಪಾತವನ್ನು ಕಣ್ಣಿಂದ ನೋಡದ ಭಾರತೀಯನು ಅನೀರಿಕ್ಷನ ನ್ಯಾಗರಾವನ್ನು ಕುರಿತು ಅದ್ಭುತ ವರ್ಣನೆ ಮಾಡಿದರೆ ಏನು ಸಾರ್ಥಕ್ಯ? ಮೈಸೂರಿನ ವೃಂದಾವನವನ್ನು ಕಂಡಿರದ ಕನ್ನಡಿಗ ಕಾಶ್ಮೀರದ ಹೂತೋಟಗಳ ಬಣ್ಣನೆಗೆ ತೊಡಗುವುದು ಇಷ್ಟವಾದ ವಿಷಯವಲ್ಲ. ಅಜಂತದ ಭಿತ್ತಿಚಿತ್ರಗಳ ಸೌಂದರ್ಯವನ್ನು ಸವಿದಿರದ ಭಾರತೀಯ ರಸಿಕ ರೋಮಿನಲ್ಲಿರುವ ವೈಕೇಲ್ ಎಂಜಲೋನ ಕೃತಿಗಳ ಸಾರವನ್ನು ಎಷ್ಟೇ ಗ್ರಹಿಸಿಕೊಂಡರೂ ಆವನ ಜ್ಞಾನ ಪರಿಪೂರ್ಣವಲ್ಲ.

ತಾತ್ಪರ್ಯವೇನೆಂದರೆ, ನಾವು ಅಂದರೆ, ಭಾರತೀಯರು, ನಮ್ಮ ಸುತ್ತಣ ಪ್ರದೇಶಗಳ ನಿಕಟ ಪರಿಚಯವನ್ನು ಮಾಡಿಕೊಳ್ಳುವುದರಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸಿಕೊಳ್ಳಬೇಕು; ಬಾಲ್ಯಾವಸ್ಥೆಯಿಂದಲೇ ಈ ಸ್ವಭಾವವೃತ್ತಿಯನ್ನು ಮಕ್ಕಳಲ್ಲಿ ಒಡಮೂಡಿಸಲು ಸುಸಂಸ್ಕೃತರಾದ ಹಿತ್ತವರು ಪ್ರಯತ್ನಶೀಲರಾಗಬೇಕು. ತಾವು ಬೆಳೆದು ಬಂದ ಆವರಣದ ಕುರಿತು ಯಥಾರ್ಥವಾದ ಅಭಿಮಾನವನ್ನು ನಮ್ಮ ಜನರಿಲ್ಲದೆ ಹೋದರೆ, ಆವರ ಸೌಂದರ್ಯಾನುಭೂತಿಗೆ ದೃಢವಾದ ಆಧಾರವೇನೂ ಇಲ್ಲವಾಗುತ್ತದೆ. ಆದುದರಿಂದ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಆಸಕ್ತಿಯನ್ನು ವಹಿಸುವ ಸಂಘ ಸಂಸ್ಥೆಗಳು ಆಯಾ ಗ್ರಾಮದ, ತಾಲೂಕಿನ ಮತ್ತು ಜಿಲ್ಲೆಯ ಪ್ರವಾಸ ಯೋಗ್ಯ ಸ್ಥಳಗಳ ವಿಷಯದಲ್ಲಿ ಸಾಕಷ್ಟು ಪ್ರಚಾರವನ್ನು ನಡೆಸುವುದು ಇಷ್ಟವಾಗಿದೆ. ಉಚಿತ ಮಾಹಿತಿಯನ್ನು ನೀಡುವ ಪ್ರಚಾರ ಪುಸ್ತಕಗಳಿಂದಲೂ ಸೌಂದರ್ಯದ ಕಲ್ಪನೆಯನ್ನು ಮಾಡಿಕೊಡಬಲ್ಲ ಚಿತ್ರ ಪ್ರಕಟಣೆಗಳಿಂದಲೂ ಇವು ತಮ್ಮ ವರಲ್ಲಿ ಮತ್ತು ತಮ್ಮ ನೆರೆಯವರಲ್ಲಿ ತಮ್ಮ ನಾಡಿನ ಪ್ರೀತಿಯನ್ನು ಹುಟ್ಟಿಸುವುದು ಸಾಧ್ಯ.

ಸ್ಥಳೀಯ ಮಟ್ಟದಲ್ಲಿ ಪ್ರವಾಸ ಯೋಗ್ಯವಾದ ಕೇಂದ್ರಗಳ ಕುರಿತು ಮೇಲಿನಂತೆ ಪ್ರಚಾರ ಕಾರ್ಯವನ್ನು ಕೈಗೊಳ್ಳುವುದರ ಜೊತೆಗೆ, ಆಯಾ ಕೇಂದ್ರಗಳಿಗೆ ಸಂದರ್ಶನಾರ್ಥ ಹೋಗಿಬರುವವರಿಗೆ ಸಾಕಷ್ಟು ಆನುಕೂಲತೆಗಳನ್ನೂ ಒದಗಿಸಿಕೊಡುವುದು ಅಗತ್ಯ. ಉದಾಹರಣೆಗೆ ಯೋಗ್ಯ ಮಾರ್ಗ ಸೌಕರ್ಯಗಳಿಲ್ಲದಿದ್ದರೆ ಪ್ರವಾಸಕ್ಕಾಗಿ ಹೊರತುಪಡಿಸಲ್ಪಟ್ಟ ಸ್ಥಳಗಳಿಗೆ ಯಾರಿಗೂ ಆಸ್ಥೆ ಉತ್ಸಾಹವಿರಲಾರದು; ಹಾಗೆಯೇ ಊಟ ಮತ್ತು ವಸತಿಯ ಕುರಿತು ಉತ್ತಮ ವ್ಯವಸ್ಥೆ ಪ್ರವಾಸ ಕೇಂದ್ರದಲ್ಲಿರದಿದ್ದರೆ ಪ್ರವಾಸಿಕರಿಗೆ ತೊಂದರೆಯಾಗುತ್ತದೆ. ಇದಷ್ಟಿಲ್ಲ ಹೀಗೆ ನಿವಾರಿಸಬಹುದೆಂದು ಸಂಸ್ಕೃತಿ ರಕ್ಷಕರೂ ಪ್ರಚಾರಕರೂ ಯೋಚಿಸಿ, ಉಚಿತ ಕಾರ್ಯಕ್ರಮವನ್ನು ರೂಪಿಸಬೇಕು. ಇಷ್ಟು ಮಾಡಿದ ಬಳಿಕವೂ ರಾಷ್ಟ್ರೀಯ ಮಟ್ಟದಲ್ಲಿ ನೆರವೇರಬೇಕಾದ ಬೇರೆ ಕೆಲವು ಕೆಲಸಗಳು ಇದ್ದು, ಅವನ್ನು ಸರಕಾರದವರೇ ತಮ್ಮ ಜೊತೆಗಾರಿಕೆಯ ಮೇಲೆ ತೆಗೆದುಕೊಳ್ಳಬೇಕಾಗುತ್ತದೆ. ಸರಕಾರದವರು ಇತ್ತ ಕಡೆ ಹೆಚ್ಚು ಹೆಜ್ಜೆ ಲಕ್ಷ್ಯವನ್ನು ಹೊರೆಸುತ್ತಿರುವರೆಂಬುದಕ್ಕೆ ರಾಜ್ಯ ಸರಕಾರಗಳ ಮತ್ತು ಕೇಂದ್ರದ ಪ್ರತಿನಿಧಿಗಳಿಂದ ಕೂಡಿದ ಸರಿಷತ್ತೊಂದು ಹತ್ತು ದಿನಗಳ ಪೂರ್ವದೆಲ್ಲಿ ಜರಗಿದಾಗ ಕೈಗೊಂಡ ನಿರ್ಣಯಗಳೇ ನಿದರ್ಶನ.

ಇವುಗಳಿಗನುಸಾರವಾಗಿ, ಸರಕಾರದವರು ಪ್ರವಾಸಿಕರಿಗೆ ಅತ್ಯಧಿಕ ಪ್ರಮಾಣದಲ್ಲಿ ಸೌಕರ್ಯಗಳು ಸಿಗುವಂತಾಗ ಬೇಕೆಂದು ನಾಲ್ಕು ಕೋಟ್ಯೊರೂಪಾಯಿಗಳ ಬೆಚ್ಚಿದ ಬೀರೆ ಬೇರೆ ಕಾರ್ಯಕ್ರಮಗಳನ್ನು ಇದೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಮುಗಿಸಲ್ಪಡುವಂತೆ ಕೈಗೊಳ್ಳುವರು. ಇದರಲ್ಲಿ ಸಾರಿಗೆ ಸಂಪರ್ಕದ ವ್ಯವಸ್ಥೆಯ ಮಟ್ಟವನ್ನು ಊರ್ಜಿತಗೊಳಿಸುವುದಕ್ಕೆ ೩೦ ಲಕ್ಷರೂಪಾಯಿಗಳೂ ಪ್ರವಾಸಿಕರ ಊಟ ಮತ್ತು ವಸತಿಯ ವ್ಯವಸ್ಥೆಯನ್ನು ಸುಧಾರಿಸುವುದಕ್ಕೆ ೩೫ ಲಕ್ಷ ರೂಪಾಯಿಗಳೂ ವಿಮಾನ ನಿಲ್ದಾಣಗಳ ಅಭಿವೃದ್ಧಿ ಮತ್ತು ಮೂಗ್ಗಳ ಸುಧಾರಣೆಗಾಗಿ ಸುಮಾರು ೧೫ ಲಕ್ಷ ರೂಪಾಯಿಗಳೂ ಹೆಚ್ಚುವಾಗುತ್ತವೆ. ಪ್ರವಾಸಿಕರಿಗೆ ಪ್ರೇಕ್ಷಣೀಯ ಸ್ಥಳಗಳ ಮಾಹಿತಿಯನ್ನೊದಗಿಸ ಬಲ್ಲ ಕೇಂದ್ರಗಳನ್ನು ಹೊಸತಾಗಿ ತೆರೆಯುವುದು, ಸ್ಥಳ ಮಹತ್ವವನ್ನು ವಿವರಿಸಬಲ್ಲ ಮಾರ್ಗದರ್ಶಕರನ್ನು ತರಬೇತಿಗೊಳಿಸುವುದು, ಆಯಾ ಸ್ಥಳಗಳಲ್ಲಿ ದೊರಕುವ ವಿಶಿಷ್ಟ ವಸ್ತುಗಳು ಪ್ರವಾಸಿಕರಿಗೆ ನ್ಯಾಯವಾದ ಬೆಲೆಯಲ್ಲಿ ಸಿಗುವಂತೆ ಮಾಡುವುದು ಮುಂತಾದುವುಗಳ ಕುರಿತಾಗಿಯೂ ಸರಕಾರದವರು ತೀವ್ರವೇ ಕ್ರಮ ತೆಗೆದು

(೦೦ನೇ ಪುಟ ನೋಡಿರಿ)

THE CANARA MUTUAL ASSURANCE COMPANY, LTD.,
Managing Director: T. R. A. PAI
Head Office: **UDIPI**, S. INDIA.] [Estd: 1935

ಶುಭಾಶಯಗಳು!

ನಾವು ನಮ್ಮೆಲ್ಲ ವಿಮಾದಾರರನ್ನೂ ಕ್ಲೈಂಟ್ಸಾಹಿತರನ್ನೂ ಅವರ ನಿರಂತರವಾದ ಬೆಂಬಲಕ್ಕಾಗಿ ಆಭಿನಂದಿಸುತ್ತೇವೆ. ಆಲ್ಲದೆ, ಆವರ ಪ್ರೋತ್ಸಾಹಕ್ಕೆ ಪ್ರತಿಯೊಂದು ರೀತಿಯಲ್ಲಿ ಆರ್ಹರಿರುವಂತೆ ಮುಂದಕ್ಕೂ ಪ್ರಯತ್ನಿಸುವೆವೆಂದು ಭರವಸೆಯನ್ನು ನೀಡುತ್ತೇವೆ. ನೂತನ ವರ್ಷವು ಸಕಲರಿಗೂ ಸುಖ, ಸಂತೋಷ, ಧನ ಸಮೃದ್ಧಿಯನ್ನು ತರಲೆಂಬುದೇ ನಮ್ಮ ಹಾರೈಕೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಮುಖ್ಯಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫.
ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಹಂಚಿದ ಕಂಪೆನಿ.
CHIEF AGENTS:
THE COMMERCIAL CORPORATION OF INDIA, LTD.,
"Mukund Nivas" UDIPI, S. India

ZANDU'S THREE GEMS of AYURVEDIC MEDICINES

ಝಂಡೂ ಪೂರವರ ಮಕರಧ್ವಜ ಪಿಲ್ಸ್ (ಸುವರ್ಣ ಮಿಶ್ರಿತ)
ವೀರ್ಯಾನಭಿಯ ಕೆಮ್ಮು, ನರಗಳ ನಿಸ್ತ್ರಾಣ ಮತ್ತು ಸರ್ವಸಾಮಾನ್ಯ ಅಶಕ್ತತೆ ಹಾಗೂ ಇತರ ಎಲ್ಲಯ ಬೀಜಗಳಿಗೆ ಆತ್ಯಧಿಕ ಸುಣಕಾರಿ. ಬೆಲೆ: 1 ತೊಲೆಗೆ ರೂ. ೨—೦—೦

ಝಂಡೂ ಪೂರವರ ವಸಂತ ಕುಸುಮಾಕರ ರಸ—ಮೂತ್ರಾತಿಸಾರ, ಸಿಹಿಮೂತ್ರ, ನಿಸ್ತ್ರಾಣ ಇತ್ಯಾದಿ ಬಯಕಾಲದ ಮೂತ್ರ ದೋಷಗಳಿಗೆ ಇತ್ಯುಪಯುಕ್ತವಿಶಿಷ್ಟ ತರವನ್ನು ವಿಶೇಷವು ಮಾಡಲ್ಪಟ್ಟಿವೆ. ಬೆಲೆ: ಕಾಲು ತೊಲೆಗೆ ರೂ. ೪—೦—೦.

ಝಂಡೂ ಪೂರವರ ಸುವರ್ಣ ಮಿಶ್ರಿತ ಜೈವನಪ್ರಾಶ—ಸರ್ವರಿಗೂ ಪುಣಿಕರವಾದ ಟಾನಿಕ್ ಆಹಾರ. ಬಂಗಾರ ಮತ್ತು ಇತರ ಭಸ್ಮಗಳ ಮಿಶ್ರಣ ವಿನುಪ್ರಮಾಣದ ಶೀತ, ಕಫ, ಕೆಮ್ಮುವಿಗೆ ಅತ್ಯಂತ ಪರಿಣಾಮಕಾರಿ.
ಬೆಲೆ: 1 ರತ್ತಲಿಗೆ ರೂ. 7—೮—೦. ಕಾಲು ರತ್ತಲಿಗೆ ರೂ. ೨—೦—೦.

ಝಂಡೂ ಪೂರವರ ಔಷಧಿಗಳು ಮೈ.ಕ.ಜೆಲ್ಲೆಯ ಅಧಿಕೃತ ಏಜಂಟರಲ್ಲಿ ದೊರೆಯುವುವು

ಕ್ಯಾಟಲಾಗಿಗೆ ಕೆಳಗಿನ ಸೋಲ್ ಏಜಂಟರಿಗೆ ಬರೆಯಿರಿ.

DAMODAR & CO.,
113 Nainiappa Naicken Street, P. T.—**MADRAS-3.**

ಆಂಧ್ರದಲ್ಲಿ ಸಂಯುಕ್ತ ರಂಗದ ಸಾಮಾನ್ಯ ಕಾರ್ಯಕ್ರಮ

ಕಾಂಗ್ರೆಸು, ಕೃಷಿಕರ ಲೋಕ ಮತ್ತು ಪ್ರಜಾಪಕ್ಷಗಳಲ್ಲಿ ಚುನಾವಣೆಯ ಸ್ನೇಹ

ಪ್ರತಿಪಕ್ಷವು ಪ್ರಬಲವಾಗಿದ್ದರೆ ಅದನ್ನು ಚುನಾವಣೆಯಲ್ಲಿ ಸೋಲಿಸುವ ಉದ್ದೇಶದಿಂದ ಆಷ್ಟು ಗಟ್ಟಿಯಲ್ಲದ ಪಕ್ಷಗಳು ತಾತ್ಕಾಲಿಕ ಸ್ನೇಹ ಒಪ್ಪಂದವನ್ನು ಮಾಡಿಕೊಂಡು ಸಂಯುಕ್ತರಂಗವಾಗಿ ಜೋರಾಟವನ್ನು ಕೊಡುವ ಸಂಪ್ರದಾಯ ಒಳ್ಳೆಯ ಪರಂಪರೆಯನ್ನೇನು ಉಂಟುಮಾಡಿಲ್ಲ. ತಾತ್ಪಿಕ ಭೇದವನ್ನು ಹೊಂದಿದ ಪಕ್ಷಗಳು ಚುನಾವಣೆಯ ಕಾಲದ ಸ್ನೇಹ ಭಾವನೆಯನ್ನು ಕೊನೆಯವರೆಗೂ ಉಳಿಸಿಕೊಳ್ಳಲಾರದ ನಿದರ್ಶನಗಳು ಮದ್ರಾಸು ಮತ್ತು ತಿರುವಾಂಕೂರು – ಕೊಚ್ಚಿ ರಾಜ್ಯದ ಇತ್ತೀಚಿನ ಚರಿತ್ರೆಯಲ್ಲಿ ನೋಡಸಿಗುತ್ತವೆ. ಹೀಗಿದ್ದರೂ ಆಂಧ್ರದಲ್ಲಿ ಫೆಬ್ರವರಿ ತಿಂಗಳಲ್ಲಿ ನಡೆಯಲಿರುವ ಚುನಾವಣೆಗೋಸ್ಕರ ಕಾಂಗ್ರೆಸು, ಕೃಷಿಕರ ಲೋಕಪಕ್ಷ ಮತ್ತು ಆಂಧ್ರ ಪ್ರಜಾಪಕ್ಷಗಳು ಸಂಯುಕ್ತರಂಗವನ್ನು ಕಟ್ಟಿಕೊಂಡಿರುತ್ತವೆ.

ರೆಡ್ಡಿಗಳ ಹೆಗ್ಗಳಿಕೆ

ಮಾಜಿ ಉಪ ಮುಖ್ಯಮಂತ್ರಿ ಸಂಜೀವ ರೆಡ್ಡಿಗಳು "ಸಂಯುಕ್ತರಂಗದ ಸ್ಥಾಪನೆಯು ಆಂಧ್ರದಲ್ಲಿ ಕಮ್ಯೂನಿಸ್ಟರ ಚಟುವಟಿಕೆಗಳ ನಿರ್ಮೂಲನದ ಪ್ರಾರಂಭವನ್ನು ಸೂಚಿಸುತ್ತದೆ" ಎಂದು ಹೇಳಿರುವರಾದರೂ ಸಂಯುಕ್ತರಂಗದಲ್ಲಿ ಶಾಶ್ವತವಾಗಿ ಒಗ್ಗಟ್ಟು ರಕ್ಷಿಸಲ್ಪಡುವುದನ್ನೆ ಇದು ಅವಲಂಬಿಸಿರುತ್ತದೆ. ಕಾಂಗ್ರೆಸು ಪಕ್ಷವು ಮೌಲಾನಾ ಆಝಾದ, ಲಾಲ ಬಹಾದುರ ಶಾಸ್ತ್ರಿ ಮತ್ತು ಕಾಂಗ್ರೆಸಿನ ಮೂವರು ಪ್ರಧಾನ ಕಾರ್ಯದರ್ಶಿಗಳೊಂದಿಗೆ ವಿಚಾರ ವಿನಿಮಯವನ್ನು ನಡೆಸಿದ ಬಳಿಕ ಸಂಯುಕ್ತರಂಗವನ್ನು ರಚಿಸುವುದರಲ್ಲಿ ಯಶಸ್ವಿಯಾಯಿತು. ತತ್ಪರಿಣಾಮವಾಗಿ ೧೯೬ ಸ್ಥಾನಗಳಲ್ಲಿ ನಲ್ವತ್ತಕ್ಕೆ ಕೃಷಿಕರ ಲೋಕ ಪಕ್ಷವು ಉಮೇದ್ವಾರರೂ ಇಪ್ಪತ್ತಕ್ಕೆ ಪ್ರಜಾ ಪಕ್ಷದವರೂ ಉಳಿದುದಕ್ಕೆ ಕಾಂಗ್ರೆಸಿನವರೂ ಸ್ಪರ್ಧಿಸುವರು.

ಮೈತ್ರಿಯ ಹಿನ್ನೆಲೆ

ಮೇಲಿನ ಮೂರು ಪಕ್ಷಗಳ ಪ್ರಭೃತಿಗಳಾದ ಗೋಪಾಲ ರೆಡ್ಡಿ, ವಿಶ್ವನಾಥಂ ಮತ್ತು ಓಬುಲ ರೆಡ್ಡಿಯವರು ಸಂಯುಕ್ತರಂಗದ ರಚನೆಯ ಹಿನ್ನೆಲೆಯನ್ನು ಒಂದು ಪ್ರಕಟಣೆಯಲ್ಲಿ ಹೀಗೆ ವಿವರಿಸಿರುವರು: 'ಪ್ರಜಾಪ್ರಭುತ್ವ, ಸದ್ಧತಿಯ ಹೊಸ ಸಮಾಜ ರಚನೆಮಾಡಬಯಸುವವರಿಗೆ ಆಂಧ್ರದ ಚುನಾವಣೆಯಲ್ಲಿ ನೂತನ ಹೊಣೆಗಾರಿಕೆಯೊಂದು ಕಂಡು ಬರುತ್ತದೆ. ವಿಧ್ವಂಸಕ ಕೃತ್ಯಗಳಿಂದ ಮೇಲಿನ ಉದ್ದೇಶವನ್ನೆ ನಷ್ಟಪಡಿಸುವ ಶಕ್ತಿಗಳು ಆಂಧ್ರದಲ್ಲಿ ತೋರಿಬರುವುದರಿಂದ, ಅವುಗಳನ್ನು ಪ್ರತಿಭಟಿಸಬೇಕೆಂಬ ಇಚ್ಛೆಯುಳ್ಳವರೆಲ್ಲ ಒಂದಾಗಬೇಕೆಂಬ ಅಭಿಪ್ರಾಯ ಉಂಟಾಯಿತು. ಕಾರ್ಯ ಪದ್ಧತಿಯಲ್ಲಾಗಲೀ ಉದ್ದೇಶದಲ್ಲಾಗಲೀ ಜೇಳಿಕೊಳ್ಳುವಷ್ಟು ವ್ಯತ್ಯಾಸವಿಲ್ಲದ, ಪ್ರಜಾಪ್ರಭುತ್ವ ಪದ್ಧತಿಯಲ್ಲಿ ವಿಶ್ವಾಸವಿರುವ, ಪಕ್ಷಗಳು ಪರಸ್ಪರ ಸ್ಪರ್ಧಾತ್ಮಕತೆಯಲ್ಲಿ ಉದ್ಯುಕ್ತಗೊಂಡು ಶಕ್ತಿಯ ಹಾಸ ಮಾಡಿಕೊಳ್ಳುತ್ತ ಯಾವ ಧ್ಯೇಯವನ್ನೂ ಸಾಧಿಸದಿರುವ ಪರಿಸ್ಥಿತಿ ಇಷ್ಟವಾದುದಲ್ಲ— ಆದುದರಿಂದ ಮೂರೂ ಪಕ್ಷಗಳು ಒಂದಾಗಿ ಪ್ರತಿಪಕ್ಷಗಳೊಡನೆ ಜೋರಾಡುತ್ತವೆ. ತಂತಮ್ಮ ಪಕ್ಷದ ಚಿನ್ಹೆಯ ಅಡಿಯಲ್ಲಿ ಮೂರೂ ಪಕ್ಷಗಳು ಪರಸ್ಪರ ಸಹಕರಿಸಿ ಚುನಾವಣೆಗೆ ನಿಲ್ಲುತ್ತವೆ."

ಸಾಮಾನ್ಯ ಕಾರ್ಯಕ್ರಮ

ಸಂಯುಕ್ತ ರಂಗವು ಕೆಲಸಮಾಡುವ ಬಗೆಯ ಕುರಿತು ಪ್ರಕಟಣೆ ಹೀಗೆ ಹೇಳುತ್ತದೆ—"ಚುನಾವಣೆಗಳಲ್ಲಿ ನೆದ್ದಿಬಂದ ಮೂರೂ ಪಕ್ಷದ ಉಮೇದ್ವಾರರು 'ಸಂಯುಕ್ತ ಕಾಂಗ್ರೆಸು ಶಾಸನಸಭಾ ಪಕ್ಷ' ಎಂಬ ಒಂದೇ ಪಕ್ಷವಾಗಿ ಒಟ್ಟಿಗೆ ಸೇರುವರು. ಇದು ಒಬ್ಬನೇ ಧುರೀಣನ ನೇತೃತ್ವದಲ್ಲಿ ಏಕ ಘಟಕವಾಗಿ ಕಾರ್ಯಪ್ರವೃತ್ತವಾಗುವುದು. ಶಾಸನ ಸಭೆಯಲ್ಲಿ ಸಾಮಾನ್ಯ ಕಾರ್ಯಕ್ರಮವೊಂದನ್ನು ಅದು ಆನುಸರಿಸುತ್ತದೆ; ಶಿಸ್ತಿನಿಂದ ನಡೆದುಕೊಳ್ಳುತ್ತದೆ. ಶಾಸನ ಸಭೆಯ ಹೊರಗೆ ಸಹ ಸದಸ್ಯರೆಲ್ಲರೂ ಧೋರಣೆ ಹಾಗು ಮೂಲಭೂತ ತತ್ವಗಳ ಪುಟ್ಟಿಗೆ ಪರಸ್ಪರ ಸಹಕರಿಸಿ, ಬೆಂಬಲ ಕೊಡುವರು ಸಾಮಾನ್ಯ ಕಾರ್ಯಕ್ರಮವನ್ನೆ ಪ್ರತಿಪಾದಿಸುವರು. ಪಕ್ಷದಲ್ಲಿ ಬಹುಮತದ ಒಲವಿನಂತೆ ನಿರ್ಣಯ ಕೈಗೊಳ್ಳಲ್ಪಡುವುದು; ತನ್ನದೇ ಆದ ನಿರ್ಣಯವನ್ನು ಪಕ್ಷ ರಚಿಸುವುದು."

ಚುನಾವಣೆಯ ರಂಗ

ಶಾಸನ ಸಭೆಯ ಎಲ್ಲ ಸ್ಥಾನಗಳಿಗೂ ಹುರಿಯಾಳುಗಳನ್ನು ನಿಲ್ಲಿಸಿರುವ ಸಂಯುಕ್ತರಂಗದ ಉಮೇದ್ವಾರರ ಪಟ್ಟಿಯಲ್ಲಿ ಪ್ರಕಾಶಂ ಮಂತ್ರಿ ಮಂಡಳದ ಎಲ್ಲ ಸದಸ್ಯರಲ್ಲದೆ ಮದ್ರಾಸಿನ ಮಾಜಿ ಮಂತ್ರಿಗಳಾದ ಶ್ರೀಗಳಾದ ಬಿ. ಗೋಪಾಲ ರೆಡ್ಡಿ, ಕಲಾ ವೆಂಕಟರಾಯ ಹಾಗು ಕೆ. ಚಂದ್ರ ಮೌಳಿಯವರೂ ಶಾಸನ ಸಭಾಧ್ಯಕ್ಷ ಶ್ರೀ ಎನ್. ವೆಂಕಟರಾಮಯ್ಯ ಹಾಗು ಉಪಾಧ್ಯಕ್ಷ ಶ್ರೀಮತಿ ಅಮ್ಮಣ್ಣ ರಾಜರೂ ಇರುವರು. ಮಂತ್ರಿಮಂಡಳದ ಮೇಲೆ ಅವಿಶ್ವಾಸ ವ್ಯಕ್ತಪಡಿಸುವ ಗೊತ್ತುವಳಿಗೆ ಬೆಂಬಲ ಕೊಟ್ಟಿದ್ದ ಪ್ರಜಾಪಕ್ಷ ಮತ್ತು ರಾಯಲ ಸೀಮಾ ಸ್ವತಂತ್ರ ಪಕ್ಷದ ನಾಲ್ಕು ಮಂದಿ ಸದಸ್ಯರ ಹೆಸರೂ ಪಟ್ಟಿಯಲ್ಲಿ ಕಂಡುಬರುತ್ತದೆ. ಸಂಯುಕ್ತ ರಂಗಕ್ಕೆ ವಿರುದ್ಧ ನಿಲ್ಲುವ ಪ್ರಜಾ ಸನಾಜವಾದಿ ಪಕ್ಷವು ೬೫ ಹುರಿಯಾಳುಗಳನ್ನೂ ಕಮ್ಯುನಿಸ್ಟರು ೧೭೫ ಹುರಿಯಾಳುಗಳನ್ನೂ ನಿಲ್ಲಿಸುವರು. ಉಳಿದ ಸ್ಥಾನಕ್ಕೆ ಸ್ವತಂತ್ರರು ಪ್ರತಿಪಕ್ಷದ ಬೆಂಬಲದಿಂದ ನಿಂತು ಸಂಯುಕ್ತ ರಂಗದೊಡನೆ ಸ್ಪರ್ಧಿಸುವರು.

ಭರವಸೆಯ ಮಾತುಗಳು

ಮತದಾರರ ಪ್ರೀತಿಯನ್ನು ಸಂಪಾದಿಸುವುದಕ್ಕೋಸ್ಕರ ಪ್ರಕಟಿಸಲಾದ ಚುನಾವಣೆಯ ಘೋಷಣೆಯಲ್ಲಿ ಸಂಯುಕ್ತ ರಂಗದವರು ಭೂಹಿಡುವಳಿಗಳ ಪರಮಾವಧಿ ಪ್ರಮಾಣವನ್ನು ನಿರ್ಧರಿಸಿ, ಅದಕ್ಕಿಂತ ಹೆಚ್ಚಾದ ಭೂಮಿಯನ್ನು ಭೂರಹಿತರಿಗೆ ಹಂಚಿ ಕೊಡುವುದು ತಮ್ಮ ಧ್ಯೇಯವೆಂದು ಹೇಳಿರುವರು ಪಾನಸ್ಪರ್ತಿಬಂಧನವನ್ನು "ರಾಷ್ಟ್ರೀಕರಣ ಧೋರಣೆ" ಯಾಗಿ ಸಾರುತ್ತಾ, ತಾಳೆಯ ರಸವನ್ನು ವೈದ್ಯಕೀಯ ಉಪಯೋಗಕ್ಕೆ ಬಳಸುವ ಉದ್ಯಮಗಳನ್ನು ಕೈಗೊಳ್ಳುವ ಮೂಲಕ ಮೂರ್ತೆದಾರರಲ್ಲಿ ನಿರುದ್ಯೋಗ ಬೆಳೆಯದಂತೆ ನೋಡಲಾಗುವುದೆಂದು ಅವರು ಭರವಸೆ ಕೊಟ್ಟಿರುವರು. ಒಟ್ಟು ಇಪ್ಪತ್ತೈದು ಅಂಶಗಳಿಂದ ಕೂಡಿದ ಈ ಘೋಷಣೆಯು ಇನಾಮುದಾರಿ ಹಳ್ಳಿಗಳಲ್ಲಿರುವ ಕೃಷಿಕರ ಕಷ್ಟ ಪರಿಹಾರ ಮುಂತಾದ ಮಹತ್ವದ ವಿಷಯಗಳನ್ನು ಪರ್ಯಾಲೋಚಿಸುವ ಆಶ್ವಾಸನೆ ಕೊಡುತ್ತದೆ. ಇದಕ್ಕೆ ಪ್ರತಿಯಾಗಿ ಕಮ್ಯೂನಿಸ್ಟರು ಪೊರಡಿಸಿದ ಘೋಷಣೆಯ ಇನ್ನಷ್ಟು ಆಕರ್ಷಣೆಯೇವಾಗಿ ಕಂಡುಬರುತ್ತದೆ— ೨೦ ಎಕ್ರೆ ನಂಜ, ೩೦ ರಿಂದ ೬೦ ಎಕ್ರೆ ಮಂಜ ಭೂಮಿಯನ್ನು ಹಿಡುವಳಿಯ ಪರವು ಮಿತಿಯಾಗಿ ಸರಿಗಡಿಸಲಾಗುವುದೆಂದೂ ಮೂರು ವರ್ಷಗಳ ವರೆಗೆ ರೈತರ ಸಾಲ ವಸೂಲಿಗೆ ತಡೆಯಾಜ್ಞೆ ವಿಧಿಸಲಾಗುವುದೆಂದೂ ದೊಡ್ಡವರ ಮೇಲೆ ಹೆಚ್ಚಿನ ತೆರಿಗೆ ಹೇರಿಸಲ್ಪಡುವುದೆಂದೂ ಮುಂತಾಗಿ ಅದು ಹೇಳುತ್ತದೆ. ಪಾನ ನಿರೋಧ ಧೋರಣೆಯು ಜನರ ಆರ್ಥಿಕ ಸ್ಥಿತಿ ಸುಧಾರಣೆಯಾಗದೆ ಯಶಸ್ವಿಯಾಗಲಾರದೆಂದೂ ಅದು ತಿಳಿಸುತ್ತದೆ.

ರಾಷ್ಟ್ರೀಯ ಆದಾಯದಲ್ಲಿ ಹೆಚ್ಚಳ

೧೯೫೦—೫೧ನೇ ವರ್ಷದ ವರದಿ

ಕೇಂದ್ರ ಅಂಕೆ ಸಂಖ್ಯೆಗಳ ಸಂಸ್ಥೆಯು ಸಂಗ್ರಹಿಸಿದ ಮಾಹಿತಿಗೆ ಅನುಸಾರವಾಗಿ ೧೯೫೧—೫೨ನೇ ವರ್ಷದಲ್ಲಿ ಭಾರತದ ರಾಷ್ಟ್ರೀಯ ಆದಾಯವು ಹಿಂದಿನ ವರ್ಷಕ್ಕಿಂತ ೪೬೦ ಕೋಟಿ ರೂಪಾಯಿಗಳಷ್ಟು ಹೆಚ್ಚಿರುವುದು. ತತ್ಪರಿಣಾಮವಾಗಿ ಪ್ರತಿಯೊಬ್ಬನ ವಾರ್ಷಿಕ ಆದಾಯವು ರೂ. ೨೭೪...೮—೦ ಎಂದು ನಿರ್ಣಯವಾಯಿತು. ೧೯೫೦—೫೧ನೇ ವರ್ಷಕ್ಕಿಂತ ಇದು ಸಾವಿತಕ್ಕೆ ೫೫ ಹೆಚ್ಚಾಗಿರುವುದು; ಆದರೆ ವಸ್ತುಗಳ ಸ್ಥಿರವಾದ ಬೆಲೆಯನ್ನು ದೃಷ್ಟಿಯಲ್ಲಿಟ್ಟು ಕೊಂಡರೆ ಆದಾಯವು ಸಾವಿರಕ್ಕೆ ೨೨ ಹೆಚ್ಚಾಯಿತೆಂದು ಸಿದ್ಧವಾಗುತ್ತದೆ. ಅಂತೂ ೧೯೪೯—೪೯ರಿಂದ ೧೯೫೧—೫೨ನೇ ವರ್ಷಕ್ಕೆ ಭಾರತೀಯ ನಾಗರಿಕರ ಸಾಮಾನ್ಯ ಸಂಪತ್ತು ನಿಧಾನವಾಗಿ ಹೆಚ್ಚಾಗುತ್ತಾ ಹೋಗಿರುವುದೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಕೃಷಿ ಕ್ಷೇತ್ರದಲ್ಲಿ ಆದಾಯವು ಸ್ವಲ್ಪ ಮಾತ್ರ ಹೆಚ್ಚಾಯಿತು; ಏಕರೆ ಕಾರ್ಖಾನೆ ಮತ್ತಿತರ ವಾಣಿಜ್ಯ ವ್ಯವಹಾರಗಳ ಮೂಲಕ ಆದಾಯವು ಗಣನೀಯವಾಗಿ ಅಧಿಕಗೊಂಡಿತು. ಹೀಗೆ ೧೯೫೦—೫೧ರಲ್ಲಿ ಭಾರತದ ಒಟ್ಟು ರಾಷ್ಟ್ರೀಯ ಆದಾಯವು ೯೯೦ ಕೋಟಿ ರೂಪಾಯಿಯಾಯಿತು ಎಂದು ವರದಿ ಹೇಳುತ್ತದೆ. ೧೯೫೨—೫೩ನೇ ವರ್ಷದ ಆದಾಯದ ಅಂಕೆಸಂಖ್ಯೆಗಳು ಮುಂದಿನ ವಾರ್ಚಿ ತಿಂಗಳಲ್ಲಿ ಪ್ರಕಟಿಸಲ್ಪಡಬಹುದೆಂದು ತಿಳಿಯುತ್ತದೆ.

ದಕ್ಷಿಣ ಕನ್ನಡ ಜಿಲ್ಲಾ ವ್ಯಾಪಾರಿಗಳಿಗೆ ಸುಸಂದಿ.

— ● —

ಮೆಣಸು, ಹುಳಿ, ಹರಸಿನ, ವ, ಇತರ ಸಂಬಾರ ಜೀನಸುಗಳಲ್ಲಿ ಬೊಂಬಾಯಿ ಶಹರಿನಲ್ಲಿ ರಖಂ ವ್ಯಾಪಾರ ಮಾಡಲಿಚ್ಛಿಸುವವರು ಈ ಕೆಳಗಿನ ವ್ಯಾಪಾರಸ್ಥರಿಗೆ ಬರೆದು ತಿಳಿಯುವುದು:—

JANALAXMI LTD.,

LAXMI BLDG., SIR P. M. ROAD,

FORT, BOMBAY.

ವೈಷ್ಣವ ಶಿಖಾಮಣಿ
ಕನಕದಾಸ ವಿರಚಿತ

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ'. ವೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ.

ಬೆಲೆ: ೦—೨—೦; ಮೂರಾಣೆ ಸ್ಟಾಂಪು ಕಳಿಸಿದರೆ ಪ್ರತಿಯೊಂದನ್ನು ವಿ.ಪಿ.ಪೋಸ್ಟಿನಿಂದ ಕಳಿಸಬಹುದು. ಸೂಪು ಪ್ರತಿಗಳಿಗೆ ರಿಯಾಯಿತಿ ದರವಿದೆ. ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ.

ಸಂಸತ್ತಿನ ಚಳಿಗಾಲದ ಅಧಿವೇಶನ ಮುಕ್ತಾಯ

ಪಂಚವಾರ್ಷಿಕ ಯೋಜನೆಯ ಪ್ರಗತಿಯ ಕುರಿತು ಸಮಾಧಾನ

ಸಂಸತ್ತಿನ ಎರಡೂ ಮನೆಗಳ ಚಳಿಗಾಲದ ಅಧಿವೇಶನವು ದಿನಾಂಕ ೨೪ ರಂದು ಅನಿಯಮಿತ ಅವಧಿಯ ವರೆಗೆ ಮುಂದುವರಿಯಿತು. ಆರು ವಾರಗಳ ತನಕ ನಡೆದ ಈ ವೈಶಿಷ್ಟ್ಯಪೂರ್ಣ ಅಧಿವೇಶನದಲ್ಲಿ ಕೆಲವು ಮಹತ್ವದ ಮಸೂದೆಗಳನ್ನು ಸ್ವೀಕರಿಸಲಾಯಿತು. ಲೋಕಸಭೆಯಲ್ಲಿ ಕ್ರಿಮಿನಲ್ ಪ್ರೊಸೀಜರ್ ಕೋಡಿಗೆ ತಿದ್ದುಪಡಿ ಮಾಡುವ ವಿಧೇಯಕವೂ ರಾಜ್ಯಸಭೆಯಲ್ಲಿ ಹಿಂದು ವಿವಾಹವಿಧಿಯಕವೂ ಅಂಗೀಕೃತವಾದುದಲ್ಲದೆ ಉಭಯಸಭೆಗಳೂ ಪ್ರತಿಬಂಧಕ ಸ್ಥಾನಬದ್ಧತೆಯ ಕಾಯಿದೆಗೆ ಜೀವದಾನಮಾಡಿದವು; ಮತ್ತು ಆಂಧ್ರದಲ್ಲಿ ರಾಷ್ಟ್ರಾಧ್ಯಕ್ಷರ ಆಳ್ವಿಕೆಯನ್ನು ಹೇಂದುದಕ್ಕೆ ಸಮ್ಮತಿಯನ್ನೂ ನೀಡಲಾಯಿತು.

ವಾರಸಾ ವಿಧೇಯಕ

ರಾಜ್ಯಸಭೆಯ ಅಧಿವೇಶನವು ಮುಂದೂಡಲ್ಪಡುವುದಕ್ಕೆ ಮುಂಚೆ ಹಿಂದು ವಾರಸಾ ವಿಧೇಯಕವು ಮಂಡಿಸಲ್ಪಟ್ಟಿತು. ತಂದೆಯ ಆಸ್ತಿಯಲ್ಲಿ ಮಗಳಿಗೂ ಒಂದು ಪಾಲು ಕೊಡಬೇಕೆನ್ನುವ ಈ ಮಸೂದೆಯು ಹಳೆಯ ಹಿಂದುಕೋಡಿನ ಮೂರನೆಯ ಭಾಗವಾಗಿರುತ್ತದೆ. ಅಲ್ಪವಯಸ್ಕ ಮಕ್ಕಳ ಪಾಲನೆಗೆ ಸಂಬಂಧಿಸಿದ ಎರಡನೇ ಭಾಗವು ಈಗಾಗಲೇ ಪರಿಶೀಲಕ ಸಮಿತಿಯ ಕೈಗೆ ಒಪ್ಪಿಸಲ್ಪಟ್ಟಿರುವುದು ವಾರಸಾ ವಿಧೇಯಕದಲ್ಲಿ ಅಳಿಯ ಸಂತಾನ ಮತ್ತು ಮರು ಮಕ್ಕತ್ತಾಯ ಪದ್ಧತಿಗಳನ್ನು ಹೊರತು ಪಡಿಸಿರುವುದು ಇನ್ನೊಂದು ವೈಶಿಷ್ಟ್ಯ.

ಆರ್ಥಿಕ ಧೋರಣೆ

ಸರಕಾರದ ಆರ್ಥಿಕ ಧೋರಣೆಯ ಬಗ್ಗೆ ಚರ್ಚೆಯನ್ನು ನಡೆಸಿ ಸಭಾಧ್ಯಕ್ಷರ ಮೇಲೆ ಅವಿಶ್ವಾಸಗೊತ್ತುವಳಿಯನ್ನು ತಂದುದೂ ಲೋಕಸಭೆಯ ಪ್ರಸಕ್ತ ಅಧಿವೇಶನದ ವಿಶೇಷಗಳಲ್ಲಿ ಬರುತ್ತವೆ. ಅಧ್ಯಕ್ಷರ ಮೇಲಿನ ಅವಿಶ್ವಾಸ ಗೊತ್ತುವಳಿ ಬಿದ್ದು ಹೋಯಿತಲ್ಲದೆ, ಸಭೆಯನ್ನು ಮುಂದು ವರಿಸುವ ಸೂಚನೆಗಳ ವಿಷಯದಲ್ಲಿ ಸಭಾಧ್ಯಕ್ಷರು ತಮ್ಮ ಕೋಣೆಯಲ್ಲಿಯೇ ಚರ್ಚೆಗೆ ಅನುಮತಿ ಕೊಡುವ ಅಥವಾ ನಿರಾಕರಿಸುವ ಅಧಿಕಾರವನ್ನು ಚಲಾಯಿಸುವುದಾಗಿ ಎಚ್ಚರಿಕೆಯನ್ನು ನೀಡಿದರು. ಆರ್ಥಿಕ ಧೋರಣೆಯ ಕುರಿತು ಗಂಭೀರವಾಗಿ ಸಾರಲಾದ ಔದ್ಯೋಗಿಕ ನೀತಿಯಂತೆ ಸರಕಾರ ನಡೆಯುತ್ತಿದೆಯೆಂದೂ ಸಮಾಜವಾದದ ತತ್ವಗಳನ್ನು ಅನುಷ್ಠಾನಕ್ಕೆ ತರುವುದೇ ಅದರ ಉದ್ದೇಶವೆಂದೂ ಇದಕ್ಕೊಸ್ಕರ ಪರಮಾವಧಿ ಪ್ರಮಾಣದಲ್ಲಿ ಔದ್ಯೋಗಿಕ ಮತ್ತು ಕೈಗಾರಿಕಾ ವಲಯಗಳಲ್ಲಿ ಚಟುವಟಿಕೆಯನ್ನು ಹೆಚ್ಚಿಸಬೇಕೆಂದೂ ಹೇಳುವ ಗೊತ್ತುವಳಿಯನ್ನು ಲೋಕ ಸಭೆ ಅಂಗೀಕರಿಸಿತು.

ತೃಪ್ತಿಕರ ಪ್ರಗತಿ

ಪಂಚವಾರ್ಷಿಕ ಯೋಜನೆಯ ಪ್ರಗತಿಯ ವಿವರಗಳನ್ನು ಸಂಸತ್ತಿನ ಉಭಯ ಸಭೆಗಳೂ ಪರಿಶೀಲಿಸಿ ಪ್ರಗತಿ ತೃಪ್ತಿಕರವಾಗಿದೆ ಎಂದು ಹೇಳಲಾಯಿತು. ಯೋಜನಾ ಸಚಿವರು ಸರಕಾರದ ಕಾರ್ಯಕ್ರಮಗಳಲ್ಲಿ ಕುಂದುಕೊರತೆಗಳಿರುವುದನ್ನು ಒಪ್ಪಿಕೊಂಡರು— ನಿರುದ್ಯೋಗದ ಸಮಸ್ಯೆಯನ್ನು ಬಿಡಿಸುವಲ್ಲಿ ಯೋಜನೆಯಿಂದ ಅಷ್ಟು ಹೆಚ್ಚು ಪ್ರಯೋಜನ ದೊರಕಿಂತೆ ಕಾಣುವುದಿಲ್ಲ ಎಂಬ ಅಭಿಪ್ರಾಯಕ್ಕೆ ಸಮ್ಮತಿ ವ್ಯಕ್ತ ಪಡಿಸಿದರು. ಆದರೂ ಕಳೆದ ಮೂರು ವರ್ಷಗಳಲ್ಲಿ ನೂರಕ್ಕೆ ೪೦ ರಷ್ಟು ವೆಚ್ಚವನ್ನು ಮಾಡಲಾಗಿದೆಯೆಂದೂ ಯೋಜನೆಯು ಗುರಿಯಲ್ಲಿ ಅರೆವಾಸಿಯಷ್ಟನ್ನು ಕೈ ಗೂಡಿಸಲಾಗಿದೆಯೆಂದೂ ತಿಳಿಸಿದರು. ನದಿ ಯೋಜನೆಗಳು ಯೋಗ್ಯ ಪ್ರತಿಫಲವನ್ನು ನೀಡತೊಡಗಿವೆ ಎಂದರು

ನಾಟಕ ನಿಯಂತ್ರಣ ಶಾಸನ

ಮದ್ರಾಸಿನಲ್ಲಿ ಶಾಸನ ಸಭೆಗಳ ಅಧಿವೇಶನವು ಫೆಬ್ರವರಿ ನೂರಲನೇ ವಾರಕ್ಕೆ ಮುಂದರಿಯಿತು. ಇಲ್ಲಿ ಸ್ವೀಕರಿಸಲಾದ ಮಸೂದೆಗಳಲ್ಲಿ ನಾಟಕಗಳ ಅಭಿನಯದ ಮೇಲೆ ನಿಯಂತ್ರಣವನ್ನು ಹೇರುವ ಕ್ರಮವು ಉಲ್ಲೇಖನೀಯ. ದ್ರಾವಿಡ ಸಂಘವೆ ಮತ್ತು ಚಾರ್ವಾಕವಾದ ಕೆಲವು ಪುರಸ್ಕರ್ತರು ರಾಮಾಯಣದ ವಿಡಂಬನೆ ಮಾಡುವ "ಕೀಪಾಯಣ" ಮುಂತಾದ ನಾಟಕಗಳನ್ನು ತಮಿಳು ನಾಡಿನ ಪಟ್ಟಣಗಳಲ್ಲಿ ಆಡಿ, ಸನಾತನಿಗಳಾದ ಹಿಂದುಗಳ ಮನನೋಯಿಸಿದುದರಿಂದ, ಈ ಶಾಸನಕ್ಕೆ ಸರಕಾರ ಕೈಹಾಕಿತು. ಮುಖ್ಯಮಂತ್ರಿ ಸ್ಥಾನವನ್ನು ಬಿಟ್ಟು ಗೊಟ್ಟಬಳಿಕ ಮೊದಲನೇಸಲ ಮಾತನಾಡುತ್ತ ರಾಜಾಜಿಯವರು ಸರಕಾರವು ಧೈರ್ಯದಿಂದಲಿ ಈ ಮಸೂದೆಯನ್ನು ತಂದುದಕ್ಕೆ ಮೆಚ್ಚಿಕೆಯನ್ನು ವ್ಯಕ್ತಪಡಿಸಿದರು. ಇನ್ನೊಬ್ಬನಿಗೂ ನವೃತ್ತಿಸೇ ಒಂದು ವಿಷಯದಲ್ಲಿ ವಿಶ್ವಾಸ ವ್ಯಕ್ತಪಡಿಸುವ ಅಧಿಕಾರವಿದೆ ಎಂಬ ಸಹಿಷ್ಣುತಾಭಾವನೆಯನ್ನು ಕೋರಿಸಬೇಕಾಗಿ ಅವರು ಸಾರ್ವಜನಿಕರನ್ನು ವಿನಂತಿಸಿದರು. ಮುಂತ್ರಿ ಸುಬ್ರಹ್ಮಣ್ಯಮರು ಸಾರ್ವಜನಿಕ ಶಾಸನವು ಇನ್ನೊಬ್ಬನನ್ನು ಹೊಗಳುವುದಕ್ಕೆ ಬಿಡ್ಡಿ ಮಾಡುವುದಿಲ್ಲ; ಆದರೆ ತೆಗಳಿ ಮನನೋಯಿಸಗೊಡುವುದಿಲ್ಲ— ಇದೇ ಪ್ರಸ್ತುತ ಮಸೂದೆಯಲ್ಲಿ ಅಡಕವಾದ ಸೂತ್ರ ಎಂದರು.

ನೈತಿಕ ತತ್ವದ ಜ್ಞಾಪನೆ

ಪ್ರಧಾನ ಮಂತ್ರಿ ನೆಹರುಗಳು ಜಕಾರ್ತಕ್ಕೆ ಕೊಲೊಂಬೋ ರಾಷ್ಟ್ರಗಳ ಸಮ್ಮೇಳನದಲ್ಲಿ ಭಾಗ ವಹಿಸುವ ಸಲುವಾಗಿ ಪ್ರಯಾಣಿಸುವಾಗ ಶಾಂತಿನಿಕೇತನದಲ್ಲಿ ಇಳಿದು, ವಿಶ್ವಭಾರತಿ ವಿಶ್ವವಿದ್ಯಾಲಯದ ಕುಲಪತಿ ಎಂಬ ಅಭಿಧಾನದಿಂದ ಪದವೀದಾನ ಸಮಾರಂಭದಲ್ಲಿ ಭಾಗವಹಿಸಿದರು. ಕವೀಂದ್ರ ರವೀಂದ್ರರಿಂದ ಸ್ಥಾಪಿಸಲ್ಪಟ್ಟ ಈ ವಿಶ್ವವಿದ್ಯಾಲಯದಲ್ಲಿ ೩೫ ಮಟಿಳೆಯರನ್ನೊಳಗೊಂಡು ೧೭೮ ಮಂದಿ ಸ್ನಾತಕರು ಪದವಿಯನ್ನು ಸ್ವೀಕರಿಸಿದರು. ತಮ್ಮ ಭಾಷಣದಲ್ಲಿ ನೆಹರುಗಳು ನೈಚ್ಛಾನಿಕ ಮತ್ತು ನೈತಿಕ ತತ್ವಗಳ ಸಂಶ್ಲೇಷಣೆಯ ಬಗ್ಗೆ ನಾವು ಹೆಚ್ಚಿನ ಗಮನವನ್ನು ಕೊಡುವುದು ಅಗತ್ಯವಾಗಿದೆ ಎಂದು ವಿದಿತ ಪಡಿಸಿದರು. ಇದು ಸಾಧಿಸಲ್ಪಡಬೇಕಾದರೆ ಪಾಶ್ಚಾತ್ಯ ಜಗತ್ತೊಂದನ್ನೇ ಅನುಕರಿಸುವುದು ಪ್ರಯೋಜನಕರವಲ್ಲ— ಭಾರತೀಯ ಸಂಸ್ಕೃತಿಯ ಮೂಲ ಭೂತ ತತ್ವಗಳನ್ನೇ ಆಶ್ರಯಿಸಬೇಕು ಎಂದರು. ಈಚೆಗೆ ವಿದ್ಯಾರ್ಥಿ ಮತ್ತು ಅಧ್ಯಾಪಕರಲ್ಲಿ ಕಂಡು ಬರುವ ವಿರಸ ಸಂಬಂಧವನ್ನು ಟೀಕಿಸಿ, ಪರಿಸ್ಥಿತಿ ಸುಧಾರಿಸಲ್ಪಡಬೇಕೆಂದು ನೆಹರು ಆಶಿಸಿದರು.

ಕೇಬಲಿನ ಕಾರ್ಖಾನೆ

ಬಂಗಾಳದ ರೂಪ ನಾರಾಯಣಪುರದಲ್ಲಿ ಭಾರತ ಸರಕಾರದವರು ಕೇಬಲುಗಳನ್ನು ತಯಾರಿಸುವ ಕಾರ್ಖಾನೆಯೊಂದನ್ನು ಸ್ಥಾಪಿಸಿದ್ದು, ಅದರ ವಿದ್ಯುಕ್ತ ಉದ್ಘಾಟನೆಯನ್ನು ದಿನಾಂಕ ೨೬ ರಂದು ಪಶ್ಚಿಮಬಂಗಾಳದ ಮುಖ್ಯ ಮಂತ್ರಿ ಶ್ರೀ ಬಿಧನಚಂದ್ರ ರಾಯರು ಮಾಡಿದರು. ೧೦ ಲಕ್ಷ ರೂ. ಗಳ ನೆಚ್ಚಿದಲ್ಲಿ ಕಟ್ಟಲಾದ ಈ ಕಾರ್ಖಾನೆಯು ಕಳೆದ ಎರಡು ತಿಂಗಳುಗಳಲ್ಲಿ ೩೦ ಮೈಲುಗಳಷ್ಟು ಕೇಬಲನ್ನು ತಯಾರಿಸಿ ೧೯೫೫ ನೇ ಇಸವಿಯ ಹೊತ್ತಿಗೆ ವರ್ಷಕ್ಕೆ ಒಂದು ಸಾವಿರ ಮೈಲು ಕೇಬಲು ತಯಾರಿಸುವ ಗುರಿಯನ್ನು ಮುಟ್ಟುತ್ತದೆ. ರಾಷ್ಟ್ರವನ್ನು ಸ್ವಾವಲಂಬಿಯಾಗಿಮಾಡುವ ದೇಶದ ಹೊಂಗೆಹೋಗುವ ಹಣವನ್ನು ಉಳಿಸುವ ಈ ಉದ್ಯಮದ ಮಹತ್ವವನ್ನು ಕುರಿತಾಗಿ ಕೇಂದ್ರದ ಉತ್ಪಾದಕ ವಿಭಾಗದ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರೂ ಭಾಷಣಮಾಡಿದರು.

ಪ್ರಕಟಣೆ

ಸಾಗುವಳಿಯ ಒಂದು ಇಂಚು ದಪ್ಪದ ಶಿಲಿಂಗು ಹಲಗೆಗಳನ್ನೂ, ಮುಕ್ಕಾಲು ಮಣ ತೂಕದ ತಾಂಬ್ರದ 16×12 ಇಂಚು ಪುರಿದುಗಳನ್ನೂ (ಜುಮ್ಲಾ ಅಂದಾಜು ಮಣ ಹತ್ತು) ತಾ. 26—1—1955ನೇ ಬುಧವಾರ ಗಂಟೆ 4ಕ್ಕೆ ಏಲಂ ಕರೆಯಲಾಗುವುದು. ಆಫೀಸಿನಲ್ಲಿ ಏಲಂ ಶರ್ತಗಳನ್ನು ಪರಿಶೀಲಿಸಿ ಏಲಂಗೆ ಸಿದ್ಧತೆಕ್ಕದ್ದು.

ಮಂಜಾರ್ಕಿ ಶ್ರೀ ಮಹಾಸರಮೇಶ್ವರೀ ಅಮ್ಮನವರ ಜೀರ್ಣೋದ್ಧಾರ, ಮಂಜಾರ್ಕಿ.
ತಾ 25—12—54.

(Sd.) N. R. Bolar,
Executive Officer.

NAVAYUGA WEEKLY

ADVERTISEMENT RATES

Display Advertisements:— Rs. 2/-8 per column inch for contracts of 50″ or more and Rs.3/-per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:
ADVERTISEMENT MANAGER,
'NAVAYUGA'
Post Box No. 22, UDIPI, S. K.

ಕನ್ನಡ ಚಿತ್ರರಂಗದ ಒಂದೇ ಒಂದು ಆಕರ್ಷಣ. ಯಾವುದೇ ವಿಚಾರದಲ್ಲಿ ನೋಡುವದಾದರೂ ಈ ಕನ್ನಡ ಚಿತ್ರಕ್ಕೆ ಸರಿಸಾಟಿ ಇಲ್ಲ
ಇದೀಗ ಉಡುಪಿ ಜನರನ್ನು ನಕ್ಕು ನಗಿಸಲು ಮತ್ತೊಮ್ಮೆ ಬಂದಿದೆ.

ಜಾತಕಫಲ (ಕನ್ನಡ)

ಉಮೂರ್ಯಕಲಾ, ನಾಗೇಂದ್ರ ರಾವ್, ಸಾರಂಗಪಾಣಿ, ಬಾಲಚಂದ್ರನ್, ಮೊದಲಾದವರು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್., ಉಡುಪಿ

ಸೆಕೆಂಡರಿ ಶಾಲೆಗಳೂ ಜಿಲ್ಲಾ ಲೈಬ್ರೆರಿಗಳೂ
'ನವಯುಗ'ವನ್ನು ತರಿಸಿಕೊಳ್ಳುವಂತೆ ಮುಂಜೂರಾಗಿದೆ.

ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮುದ್ರಾಸಿನ ನಿರ್ವಾಂಛ ಲೈಬ್ರೆರಿಯನ್ನೂ, ಜಿಲ್ಲೆಯ ಲೈಬ್ರೆರಿಗಳ ಉಪಯೋಗಾರ್ಥವಾಗಿ ದ. ಕ. ಜಿಲ್ಲಾ ಬೋರ್ಡಿನ ಲೈಬ್ರೆರಿ ಅಧೀನದಲ್ಲಿ ಕಮಿಟಿಯವರೂ 'ನವಯುಗ' ವಾರಪತ್ರಿಕೆಯನ್ನು ದ. ಕ. ಜಿಲ್ಲಾ ಬೋರ್ಡಿಗೆ ಲೈಬ್ರೆರಿ ಅಧೀನದಲ್ಲಿ ಕಮಿಟಿಯವರೂ 'ನವಯುಗ' ವಾರಪತ್ರಿಕೆಯನ್ನು ಮಂಜೂರು ಮಾಡಿರುತ್ತಾರೆ.

1921ರಲ್ಲಿ ಆರೋಗ್ಯಮಂತ್ರಿ, ಶ್ರೀ ಎ. ಜಿ. ಶಟ್ಟರಿಂದ ಸ್ಥಾಪಿಸಲ್ಪಟ್ಟು ಅವಿರತವಾಗಿ ಜನಸೇವೆ ಮಾಡುತ್ತಿರುವ ರಾಷ್ಟ್ರೀಯ ವಾರಪತ್ರಿಕೆ 'ನವಯುಗ'ಕ್ಕೆ ಎಲ್ಲಾ ಸೆಕೆಂಡರಿ ಶಾಲೆಗಳೂ, ಜಿಲ್ಲೆಯ ಎಲ್ಲಾ ಲೈಬ್ರೆರಿಗಳೂ, ಚಂದಾದಾರರಾಗಿ ಪ್ರೋತ್ಸಾಹಿಸಲು ವಿನಂತಿ.

ಮೆನೇಜರ್,
ವಾರ್ಷಿಕ ಚಂದಾ ರೂ. 5-12-0 ಮಾತ್ರ. ನವಯುಗ, ಉಡುಪಿ.

NAVAYUGA

Popular Kannada Weekly

Founder:—

Sri A. B. SHETTY, *M.L.A.*

Minister for Public Health, Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೪	ಉಡುಪಿ ೩೦-೧೨-೧೯೫೪	ಸಂಚಿಕೆ ೧೭

ನೆಹರು—ಟಿಟೊ ಹೇಳಿಕೆ

ಸಂಸತ್ತಿನ ಉಭಯ ಸಭೆಗಳ ಮುಂದೆ ಮಂಡಿಸಲಾದ ನೆಹರು—ಟಿಟೋ ಸಂಯುಕ್ತ ಪ್ರಕಟಣೆಯು ಸ್ವಾಗತಾರ್ಹವಾದ ಪ್ರಾಮುಖ್ಯ ಆಂಶಗಳಿಂದ ಕೂಡಿದೆಯೆಂದು ನಮಗನಿಸುತ್ತದೆ. ಯುದ್ಧ ಭಯದಿಂದ ತ್ರಸ್ತವಾದ ಲೋಕದ ಪ್ರಕೃತ ಪರಿಸ್ಥಿತಿಯಲ್ಲಿ ಶಾಂತಿ ಮತ್ತು ಸಹಕಾರದ ಮಾತನ್ನಾಡುವವರು ಎಷ್ಟು ಹೆಚ್ಚು ಸಂಖ್ಯೆಯಲ್ಲಿ ದೊರೆತರೋ ಅಷ್ಟೂ ಕ್ಷೇಮವಾಗುತ್ತದೆ. ಹಾಗೆ ನೋಡಿದರೆ, ತೃತೀಯ ಮಹಾ ಯುದ್ಧಕ್ಕೆ ಕಾರಣವಾಗಬಲ್ಲ ರಶಿಯಾ—ಅಮೇರಿಕೆಗಳೆರಡೂ ಶಾಂತಿ ಮಂತ್ರವನ್ನೆ ನಿತ್ಯವೂ ಪಠಿಸುತ್ತಿವೆ—ಆದರೆ, ಕಂಕುಳಲ್ಲಿ ದೊಣ್ಣೆ ಇಟ್ಟುಕೊಂಡು ಬಾಯಿಯಿಂದ ಸವಿವಾತನ್ನಾಡುವ ಅವುಗಳ ತಂತ್ರವು ಶಾಂತಿ ಪ್ರಸ್ಥಾಪನೆಯಲ್ಲಿ ಮತ್ತು ಕ್ರಿಯಾತ್ಮಕ ಸಹಕಾರದಲ್ಲಿ ನಿಜವಾದ ಮತ್ತು ದೃಢವಾದ ವಿಶ್ವಾಸವುಳ್ಳವರ ಮನಸ್ಸಿಗೆ ಬಂದಿಲ್ಲ. ಇವೆರಡೂ ಮಹಾ ರಾಷ್ಟ್ರಗಳು ಅಣುಬಾಂಬು ಮತ್ತು ಜಲಜನಕಬಾಂಬಿನ ದೊಡ್ಡ ಸಂಗ್ರಹವನ್ನು ಮಾಡಿಟ್ಟು ಕೊಂಡು ಮುಂದಿನ ಯುದ್ಧದಲ್ಲಿ ಅವುಗಳನ್ನು ಪ್ರಯೋಗಿಸಿ ಶತ್ರುವಿನ ಸರ್ವನಾಶ ಮಾಡಲಾಗುವುದೆಂಬ ಭಯವನ್ನು ಇದಿರು ಪಕ್ಷದವರಲ್ಲಿ ಮೂಡಿಸಿ, ತನ್ಮೂಲಕ ಯುದ್ಧವನ್ನು ತಡೆಗಟ್ಟುವುದಕ್ಕೆ ನೋಡುತ್ತವೆ—ಇದರಿಂದ ಯುದ್ಧವು ತತ್ಕಾಲ ಮುಂದರಿದಂತೆ ಕಂಡರೂ, ಯುದ್ಧನಿಲ್ಲಿ ವಿಜಯಿಗಳಾಗುವುದಕ್ಕೋಸ್ಕರ ನಡೆಸುವ ಅವಾರ ಸಿದ್ಧತೆಗಳಾಗಲೀ ಯುದ್ಧ ಭಯದ ವಾತಾವರಣವಾಗಲೀ ಮಾಯವಾಗಿಲ್ಲ. ನಿತ್ಯ ಜೀವನದಲ್ಲಿ ಉಪಯುಕ್ತವಾದ, ಮನುಷ್ಯನ ಸುಖ ಸೌಕರ್ಯಗಳನ್ನು ಹೆಚ್ಚಿಸಲು ನೆರವಾಗುವ ಸರಕುಗಳನ್ನು ಉತ್ಪಾದಿಸಬಹುದಾಗಿದ್ದ ಕಾರ್ಖಾನೆಗಳು ಯುದ್ಧದ ಸಾಮಗ್ರಿಗಳನ್ನು ತಯಾರಿಸುತ್ತವೆ; ಜನಸದದ ಜೀವನ ಮಟ್ಟವನ್ನು ಎತ್ತರಿಸುವುದಕ್ಕೆ ಬಳಸಬಹುದಾಗಿದ್ದ ಹಣವು ವಿಧ್ವಂಸಕ ಅಸ್ತ್ರ ಶಸ್ತ್ರಗಳ ಉತ್ಪಾದನೆಯಲ್ಲಿ ವೆಚ್ಚವಾಗುತ್ತದೆ. ಯುದ್ಧದ ರಾಣ್ಯಗಳನ್ನು ಹೊಸತಾಗಿ ಸ್ಥಾಪಿಸುವುದು, ಅಣು ಯುದ್ಧದ ವ್ಯೂಹ ರಚನೆಯಲ್ಲಿ ವಿಶೇಷ ಆಸ್ಥೆಯನ್ನು ವಹಿಸುವುದು ಇವೇ ಮುಂತಾದ ಕಾರ್ಯ ಕಲಾಪಗಳ ದೆಸೆಯಿಂದ ಜನರ ಮನೋಭಾವದಲ್ಲಿ ಭೀತಿಯ ಅಂಶವನ್ನು ಸ್ಥಿರವಾಗಿಡಲು ಸಮರನೀತಿ ವಿಶಾರದರು ನೋಡುತ್ತಿದ್ದಾರೆ—ಉತ್ತರ ಅಟ್ಲಾಂಟಿಕ ಒಪ್ಪಂದಕ್ಕೆ ಸಹಿಹಾಕಿದ ರಾಷ್ಟ್ರಗಳ ಯುದ್ಧ ತಜ್ಞರ ಅಭಿಪ್ರಾಯದಂತೆ, ತೃತೀಯ ಮಹಾ ಯುದ್ಧವಾದರೆ, ಶತ್ರುಬಲವನ್ನು ಮರ್ದಿಸುವುದಕ್ಕೋಸ್ಕರ ಪ್ರಥಮ ಭದಲ್ಲೆ ಅಣುಶಸ್ತ್ರಗಳು ಉಪಯೋಸಲ್ಪಡುತ್ತವೆ! ಇಷ್ಟು ಹೆದರಿಕೆ ಬರಿಸುವ ವಾತಾವರಣದಲ್ಲಿ ನೈತಿಕ ಬಲವನ್ನು ಹೊಂದಿದ ಮತ್ತು ಉದಾತ್ತವಾದ ಚಾರಿತ್ರಿಕ ಪರಂಪರೆಯುಳ್ಳ ಭಾರತದ ರಾಜಗೋಪಾಲಾಚಾರಿಯವರಂಥವರು ಎಲ್ಲ ಅಣುಶಸ್ತ್ರಗಳನ್ನೂ ಅಮೇರಿಕೆಯು ಅಟ್ಲಾಂಟಿಕ ಮಹಾ ಸಾಗರದಲ್ಲಿ ಮುಳುಗಿಸಿಬಿಟ್ಟು, ಭಯರಹಿತ ನವಜಗತ್ತಿನ ನಿರ್ಮಾಣಕ್ಕೆ ತೊಡಗಲಿ ಎಂದು ಹೇಳಿದರೆ, ಅದನ್ನು ಒಬ್ಬ ಸಾಮಾನ್ಯ ಮನುಷ್ಯನ ಹಾರೈಕೆಯಾಗಿ ಭಾವಿಸಬಾರದು. ರಾಜಕಾರಣಿಗಳ ಮೇಲೆ ಹಿಡಿತವನ್ನು ಹೊಂದಿರದ, ಆದರೆ ಅವರು ಒಳ್ಳೆಯದನ್ನು ಮಾಡಲೆಂದು ಬಯಸುವ, ಜಗತ್ತಿನ ಕೋಟ್ಯಾಂತರ ಜನರ ಮನೋಭಾವವನ್ನೆ ರಾಜಾಜಿಯಂಥವರ ಮಾತು ಪ್ರತಿ ಬಿಂಬಿಸುತ್ತದೆ. ಜನತೆಯು ಶ್ರೇಯಸ್ಸನ್ನು ಬಯಸುವ ಮತ್ತು ಲೋಕ ಕಲ್ಯಾಣವನ್ನು ಹಾರೈಸುವ ನಿಜವಾದ ರಾಜಕಾರಣಿಗಳು ರಾಜಾಜಿಯ ಹಿತೋಪದೇಶವನ್ನು ಕಡೆಗಣಿಸಲಾರದು. ಸುದೈವದಿಂದ ಲೋಕದಲ್ಲಿ ಎಲ್ಲ ರಾಷ್ಟ್ರಗಳಗೂ ರಶಿಯಾ—ಅಮೇರಿಕಗಳ ಹಿಂಬಾಲಕರಾಗಿರುವುದು ಒಳಿತೆಂದು ತೋರಿಲ್ಲ. ಪ್ರಚ್ಛನ್ನ ಯುದ್ಧವಾಗಲೀ ಅಣು ಯುದ್ಧವಾಗಲೀ ಮನುಷ್ಯ ಮಾತ್ರದವನಿಗೆ ಪ್ರಯೋಜನಕಾರಿ ಯಾದುದೆಂದು ಭಾವಿಸಿರದ ರಾಜಕಾರಣಿಗಳೂ ಕೆಲವರು ಇದ್ದಾರೆ—ಇಂಥವರಲ್ಲಿ ನೆಹರು ಹಾಗು ಟಿಟೋರನ್ನು ಕೆಸರಿಸಬಹುದು. ಇವರ ಸಂಯುಕ್ತ ಪ್ರಕಟಣೆಯು ಭಿನ್ನಭಿನ್ನ ತತ್ವಗಳನ್ನು ರಾಷ್ಟ್ರಗಳು ಅನುಸರಿಸುತ್ತಿದ್ದರೂ ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಸಹಕಾರವನ್ನು ನೀಡಿ, ಸೌಹಾರ್ದದಿಂದ ದಿನಗಳೆಯಲು ಸಾಧ್ಯವೆಂಬ ನಂಬಿಕೆಯನ್ನು ಪುನರುಚ್ಚರಿಸುತ್ತದೆ; ಯುದ್ಧವನ್ನೂ ಅದಕ್ಕಾಗಿ ನಡೆಸುವ ಸಿದ್ಧತೆಯನ್ನೂ ಅದು ಖಂಡಿಸುತ್ತದೆ. ಸಮಸ್ಯೆಗಳ ನಿವಾರಣೆಗೆ ಯುದ್ಧವೂ ಭಯ ಪ್ರದರ್ಶನವೂ ಯೋಗ್ಯವಲ್ಲವೆಂದು ಅದು ಹೇಳುತ್ತದೆ. ಪಂಚ ಸೂತ್ರಗಳ ತಳಹದಿಯ ಮೇಲೆ ಎಲ್ಲ ರಾಷ್ಟ್ರಗಳೂ ಪ್ರಗತಿಯ ಶಿಖರವನ್ನೇರುವುದು ಇಷ್ಟವೆಂಬ ಭಾವವನ್ನು ಹೇಳಿಕೆಯು ಪ್ರತಿಪಾದಿಸುತ್ತದೆ. ಇದು ನಿಜವಾಗಿ ಸಂತೋಷಕೊಡುವ ವಿಚಾರ. ಪ್ರಯೋಗಾರ್ಥವಾಗಿ ನಾಲ್ಕಾರು ಜಲಜನಕ ಬಾಂಬುಗಳ ಸ್ಫೋಟ ಮಾಡಿದಷ್ಟಕ್ಕೆ, ಜಗತ್ತಿನ ಹವಾಮಾನದಲ್ಲಿ ಪರಿವರ್ತನೆಗೆ ಳಾಗತೊಡಗಿವೆಯೆಂದೂ ಏಳನೆಯ ಸ್ಫೋಟ ಸಂಭವಿಸಿದ ಪಕ್ಷದಲ್ಲಿ ಪ್ರಾಣಿ ಹಾಗು ಸಸ್ಯ ಜೀವನದ ಮೇಲೆ ಅದರ ದುಷ್ಪರಿಣಾಮವಾಗುವುದೆಂದೂ ಪ್ರಸಿದ್ಧ ವಿಜ್ಞಾನಿಗಳಾದವರು ಎಚ್ಚರಿಕೊಡುತ್ತಿರುವಾಗ, ಸಮಾಜದ ಸುಖಕ್ಕೆ ಕಾರಣಭೂತರಾದ ರಾಜಕಾರಣಿಗಳು ಯುದ್ಧ ಮತ್ತು ಭಯಪ್ರದರ್ಶನದಮಾತನ್ನು ಆಡುತ್ತಿರುವುದು ಎಷ್ಟು ಮಾತ್ರಕ್ಕೂ ಒಳ್ಳೆಯದಲ್ಲ. ಅದನ್ನು ಬಹಿರಂಗವಾಗಿ ಟೀಕಿಸಿ, ಎಷ್ಟೇ ಭಿನ್ನಾಭಿಪ್ರಾಯಗಳಿದ್ದರೂ ಯಾರಿಗೂ ತೊಂದರೆಯಾಗದಂತೆ ಮಾನವರಾಗಿ ಬಾಳುವುದು ಸಾಧ್ಯವೆಂದು ಹೇಳುವ ನೆಹರು-ಟಿಟೋರಂಥ ಮುತ್ಸದ್ದಿಗಳಿಗೆ ಉಭಯ ರಾಷ್ಟ್ರಗಳ ಪ್ರಜೆಗಳಷ್ಟೇ ಅಲ್ಲ—ಲೋಕದ ಬಹುಮತದ ಬೆಂಬಲ ಉಂಟು.

ಹಳ್ಳಿಗೆ ಹಣದೆ ಪೂರೈಕೆ

ಭಾರತದ ರಿಜರ್ವ್ ಬೇಂಕಿನವರು ಗ್ರಾಮಾಂತರ ಪ್ರದೇಶಗಳಲ್ಲಿ ಕೃಷಿಕಾಸಿನ ಪೂರೈಕೆಯ ವ್ಯವಸ್ಥೆಯನ್ನು ಊರ್ಜಿತಗೊಳಿಸುವ ಉದ್ದೇಶದಿಂದ ನೇಮಿಸಿದ್ದ ಗೋರವಾಲ ಸಮಿತಿಯ ವರದಿಯು ಕೆಲವೆದ ವಾರ ಪ್ರಕಟಿವಾಯಿತು. ಇದರಲ್ಲಿ ಹೇಳಲಾದ ಅನೇಕ ಮಾತುಗಳನ್ನು ಸರಕಾರವು ತಾತ್ವಿಕವಾಗಿ ಒಪ್ಪುವುದೆಂದು ಅರ್ಥಸಚಿವ ದೇಶಮುಖರು ಲೋಕಸಭೆಯಲ್ಲಿ ವಿದಿತಪಡಿಸಿದರು. ಗೋರೆವಾಲ ಸಮಿತಿಯ ಅಭಿಪ್ರಾಯದಂತೆ, ಹಳ್ಳಿಗಳಲ್ಲಿರುವ ರೈತಾಪಿ ವರ್ಗಕ್ಕೆ ಹಣಕಾಸಿನ ಅನುಕೂಲತೆಯನ್ನೊದಗಿಸಿ ಕೊಡುವುದರಲ್ಲಿ ಇಪ್ಪತ್ತರ ವರೆಗೆ ಬೇಂಕುಗಳು ವಹಿಸಿದ ಪಾತ್ರವು ಹೇಳಿ ಕೊಳ್ಳುವಂಥದಲ್ಲ—೭೫ ಜಿಲ್ಲೆಗಳಲ್ಲಿರುವ ೬೦೦ ಪ್ರತಿನಿಧಿಕ ಸ್ವರೂಪದ ಹಳ್ಳಿಗಳ ೧,೨೬,೭೭೭ ಕುಟುಂಬಗಳೊಡನೆ ಸಂಪರ್ಕವನ್ನು ಬೆಳೆಸುವ ಮತ್ತು ಇನ್ನಿತರ ವಿಧಾನಗಳಿಂದ ಸಮಿತಿಯು ಸಂಗ್ರಹಿಸಿದ ಮಾಹಿತಿಗಳಿಗನುಸಾರವಾಗಿ, ಭಾರತದಲ್ಲಿ ೬೫೦ ಕೋಟಿ ರೂಪಾಯಿಗಳ ಸಾಲವನ್ನು ಗ್ರಾಮಾಂತರ ಪ್ರದೇಶಗಳು ಪ್ರತಿ ವರ್ಷ ಪಡೆಯುತ್ತವಾದರೂ ಅವುಗಳಲ್ಲಿ ಸರಕಾರದಿಂದ ಮೊರೆಜ ಸಾಲ ಸಾವಿರಕ್ಕೆ ೬೬ ರೂಪಾಯಿಗಳು; ಸಹಕಾರ ಸಂಘಗಳಿಂದ ದೊರೆತದ್ದೂ ಸಾವಿರಕ್ಕೆ ೩೧ರೂಪಾಯಿ ಮಾತ್ರ ಒಟ್ಟು ಅವಶ್ಯಕತೆಯಲ್ಲಿ ನೂರಕ್ಕೆ ಎಪ್ಪತ್ತರಷ್ಟನ್ನು ಖಾಸಗಿ ವ್ಯಕ್ತಿಗಳಿಂದಲೇ ಗ್ರಾಮಾಂತರ ಪ್ರದೇಶದ ನಿವಾಸಿಗಳು ಪಡೆದುಕೊಂಡರು. ಇದರ ದೆಸೆಯಿಂದ ಸಹಜವಾಗಿಯೇ ಹಣವನ್ನು ಸಾಲ ಕೊಡುವೆ ಅಲ್ಪ ಸಂಖ್ಯಾತ ವ್ಯಕ್ತಿಗಳ ವರ್ಚಸ್ಸಿಗೂ ದಾಕ್ಷಿಣ್ಯಕ್ಕೂ ಸಾಲ ತೆಗೆದುಕೊಂಡ ಬಹು ಸಂಖ್ಯಾತ ನಾಗರಿಕರು ಬೀಳುವಂತಾಯಿತು. ಸಾಮಾಜಿಕ ಪುನಾರಚನೆ, ನ್ಯಾಯ ಹಾಗು ಸಮತೆಯ ದೃಷ್ಟಿಯಿಂದ ಇಂಥ ಪರಿಸ್ಥಿತಿಯನ್ನು ಮುಂದರಿಯಗೊಡುವುದು ಇಷ್ಟವಾದುದಲ್ಲ. ಆದರೆ, ಸಹಕಾರ ಸಂಘಗಳ ಮೂಲಕವೂ ನೇರವಾಗಿ ಸರಕಾರದಿಂದಲೂ ಗ್ರಾಮಾಂತರ ಪ್ರದೇಶಗಳಲ್ಲಿ ಹಣಕಾಸಿನ ಸೌಕರ್ಯವನ್ನು ಒದಗಿಸುವುದಕ್ಕೆ ಒಂದು ಮಿತಿಯುಂಟು—ಎನ್ನಿದ್ದರೂ ಈಗಿನ ಪದ್ಧತಿಯಲ್ಲಿ ತೀವ್ರ ಸುಧಾರಣೆಗಳಾಗಬೇಕಾದ ಅವಶ್ಯಕತೆ ಕಂಡುಬರುತ್ತದೆ: ಸಮಿತಿಯು ನಡೆಸಿದ ಶೋಧನೆಗಳ ಮೇಲಿಂದ ಹೇಳುವುದಾದರೆ, ಸಹಕಾರ ಸಂಘಗಳಿಂದ ರೈತ ವರ್ಗಕ್ಕೆ ಸಹಾಯ ಸಲ್ಲಿಸುವ ವ್ಯವಸ್ಥೆಯು ಏನೇನೂ ಯಶಸ್ವಿಯಾಗಿಲ್ಲ. ಆದುದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಹಣಕಾಸಿನ ಸಹಾಯವು ದೊರಕುವುದಕ್ಕೆ ಬೇರೇನಾದರೂ ಏರ್ಪಾಡು ಮಾಡಬೇಕೆಂದು ಸಮಿತಿಗೆ ತೋರಿದ್ದು, ಅದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ ಎಂಬ ಸಂಸ್ಥೆಯನ್ನು ರೂಪಿಸಬೇಕಾಗಿ ಸೂಚನೆಯನ್ನು ಮುಂದಿಟ್ಟಿರುತ್ತದೆ. ಇದರ ನ್ಯಾಯ ಈಗಿನ ಇಂಪೀರಿಯಲ್ ಬೇಂಕನ್ನೂ ಹಳೆಯ ಆಶ್ರಿತ ಸಂಸ್ಥಾನಗಳಲ್ಲಿರುವ ಹತ್ತು ಬೇಂಕುಗಳನ್ನೂ ಒಂದು ಗೂಡಿಸಲಾಗುವುದು—ಆಗ ಆವಕ್ಕೆ ೩೦ ಕೋಟಿ ರೂಪಾಯಿಗಿಂತಲೂ ಹೆಚ್ಚು ಶೇವಣಾತಿಯು ಸಿಗುವುದಲ್ಲದೆ, ದೇಶದ ಬ್ಯಾಂಕಿಂಗ್ ವ್ಯವಸ್ಥೆಯ ಮೇಲೆ ಯಶಸ್ವಿಯಾದ ನಿಯಂತ್ರಣವೂ ಸಿಗುತ್ತದೆ—ರಿಜರ್ವ್ ಬೇಂಕ್ ಮತ್ತು ಸರಕಾರಗಳ ಸಹಕಾರವನ್ನು ಪಡೆದುಕೊಂಡು ಅದು ಗ್ರಾಮಾಂತರ ಕ್ಷೇತ್ರದಲ್ಲಿ ತನ್ನ ಚಟುವಟಿಕೆಗಳನ್ನು ವಿಸ್ತರಿಸಬಹುದು

With best wishes for A Happy & Prosperous New Year.

A NEW BRANCH AT VISHWA BHAVAN BUILDING, HAMPANKATTA HAS BEEN OPENED FROM 23—12—1954.

SCHOOL BOOK CO.,

BOOK SELLERS—PUBLISHERS & WHOLESALE PAPER DEALERS

DISTRIBUTORS: Mysore Paper Mills Ltd., & "Ganges" Printing Inks.

Head Office: CAR STREET, **MANGALORE—1.**

ಹೊಸ ವರುಷದಲ್ಲಿ ಸುಖ ಸಂಪದಭ್ಯುದಯ ಉಂಟಾಗಲೆಂದು ಶುಭಾಶಯಗಳು.

ರಥಬೀದಿ,

ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

ಪುಸ್ತಕ ವ್ಯಾಪಾರಿಗಳು—ಪ್ರಕಾಶಕರು—ಕಾಗದ ವ್ಯಾಪಾರಿಗಳು.

ಮಂಗಳೂರು ಹಂಪನಕಟ್ಟೆಯ, ವಿಶ್ವಭವನದ ಕಟ್ಟೋಣದಲ್ಲಿ

ತಮ್ಮ ಹೊಸ ಶಾಖೆಯನ್ನು ತೆರೆದಿರುವರು.

Telegrams: "SCHOOLBOOK" Phone: 229

ದು. ಹೀಗೆ ಹಣಕಾಸಿನ ಪೂರೈಕೆಯ ವಿಷಯದಲ್ಲಿ ಜನರು ಖಾಸಗಿವ್ಯಕ್ತಿಗಳಿಗಿಂತಲೂ ಬೇಂಕುಗಳನ್ನೆ ಆಶ್ರಯಿಸುವುದಕ್ಕೆ ಉತ್ತೇಜನ ನೀಡಬಹುದು. ಇದರಿ ಇಲ್ಲಿಯೊಂದು ವ್ಯಾವಹಾರಿಕವಾದ ತೊಂದರೆ ಕಾಣಿಸುತ್ತದೆ—ಬೇಂಕುಗಳು ಸಾಕಷ್ಟು ಭದ್ರತೆ ಇಲ್ಲದೆ ಸಾಲವನ್ನು ಪೂರೈಸುತ್ತವೆಯೇ? ಸಮಿತಿಯ ವರದಿಯಂತೆ, ಖಾಸಗಿ ವ್ಯಕ್ತಿಗಳಿಂದ ಹಣ ಪಡೆದುಕೊಂಡವರಲ್ಲಿ ನೂರಕ್ಕೆ ಎಂಭತ್ತು ಮಂದಿ ಯಾವ ಭದ್ರತೆಯನ್ನೂ ಕೊಡದವರು. ಇವರು ಬೇಂಕಿಗೆ ಅರ್ಜಿ ಹಾಕಿದರೆ; ಸಾಲ ಸಿಗುತ್ತದೆಯೆ? ಕೇವಲ ವಿಶ್ವಾಸದ ಮೇಲೆ ಒಬ್ಬ ವ್ಯಕ್ತಿ ಇನ್ನೊಬ್ಬನಿಗೆ ಸಾಲ ಕೊಟ್ಟಾನು—ಸಂಸ್ಥೆಗೂ ವ್ಯಕ್ತಿಗೂ ನಡುವೆ ಆ ಸಂಬಂಧ ಬೆಳೆದು ಬರಲಾರದು. ಹೀಗಿರುವಾಗ, ಸ್ಟೇಟ್ ಬೇಂಕ್ ಆಫ್ ಇಂಡಿಯದಿಂದ ರೈತರು ಪೆಟ್ಟಿನ ಪ್ರಯೋಜನ ಹೊಂದಬಲ್ಲರೆಂದು ಭಾವಿಸುವುದಕ್ಕೆ ಆ ಆಧಾರ ಸಾಲದು. ನಿಯಮಾವಳಿಯಲ್ಲಿಯೋಗ್ಯ ರಿಯಾಯಿತಿಗಳನ್ನು ತೋರಿಸುವುದರ ಮೇಲೆಯೆ ಹಣಕಾಸಿನ ಪೂರೈಕೆಯ ಹೊಸ ವ್ಯವಸ್ಥೆಯ ಯಶಸ್ಸು ನಿಂತಿರುವಂತೆ ನನಗೆ ತೋರುತ್ತಾದೆ.

ದ. ಕ. ಜಿಲ್ಲೆಯಲ್ಲಿ ಮದ್ರಾಸು ಮಂತ್ರಿ ಭಕ್ತವತ್ಸಲಂ

ಕೃಷಿ ಮತ್ತು ಅಭಿವೃದ್ಧಿ ಮಂತ್ರಿಗಳಾದ ಶ್ರೀ ಎಮ್. ಭಕ್ತವತ್ಸಲಂ, ಆವರು ತಾ. 14ರಂದು ಮಂಗಳೂರಿಗೆ ಆಗಮಿಸಿದರು. ಬೆಳ್ತಂಗಡಿ ಮತ್ತು ಉಪ್ಪಿನಂಗಡಿ ಕ್ಷೇತ್ರಗಳ ಪ್ರತಿನಿಧಿಗಳು, ಜಿಲ್ಲಾ ಬೋರ್ಡು ಸದಸ್ಯರು ಡಾ! ನಾರಾಯಣ ರಾವ್ ಮತ್ತು ಶ್ರೀ ಕೆ. ವೇಣು ಗೋಪಾಲ ನಾಯಕ್ ಇವರ ಮುಂದಾಳತ್ವದಲ್ಲಿ ಒಂದೊಂದು ಮನವಿ ಒಪ್ಪಿಸಿ ಆ ಎರಡು ಮಲೆನಾಡು ಕ್ಷೇತ್ರಗಳನ್ನು 1956ರ ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲಿ ಸೇರಿಸಬೇಕೆಂದು ಕೇಳಿ ಕೊಂಡರು. ಮಂತ್ರಿಗಳು ಅಂದೇ ರಾತ್ರಿ ಉಡುಪಿಗೆ ಪ್ರಯಾಣ ಬೆಳೆಸಿದರು.

ಕಸ್ತೂರ್ಬಾ ಮೆಡಿಕಲ್ ಕಾಲೇಜಿಗೆ ಮರುದಿವಸ ಬೆಳಿಗ್ಗೆ ಸಂದರ್ಶನವಿತ್ತರು.

ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರು ಕಾಲೇಜಿನ ಪೂರ್ವಾಪರ ವಿಚಾರಗಳನ್ನೂ ಶಿಕ್ಷಣ ಮಟ್ಟವನ್ನೂ ತಿಳಿಸಿದರು. ಮಾನ್ಯ ಮಂತ್ರಿಗಳು ಈ ಕಾಲೇಜಿನ ಸರ್ವ ಪ್ರಗತಿಯನ್ನು ಕಂಡು ಸಂತೋಷಗೊಂಡು ಶುಭವನ್ನು ಕೋರಿದರು.

ಕಲಸಗಾರರ ಕೊಲನಿಯ ಶಂಕುಸ್ಥಾಪನೆ

ಬಳಿಕ ಮಣಿಪಾಲ ಟೆಕ್ಸ್‌ಟ್ಯೂಲ್ ನೇತೃತ್ವದಲ್ಲಿ ಅದರಲ್ಲಿ ಕೆಲಸ ಮಾಡುವ 24 ಕುಟುಂಬಗಳಿಗೆ ಉಳಿಕೊಳ್ಳಲು ಏರ್ಪಾಡಾಗುವ ಕೊಲನಿಯ ಶಂಕುಸ್ಥಾಪನೆ ಮಾಡಿದರು. ಶ್ರೀ ಟಿ. ರಮೇಶ ಪೈಗಳು ಮಂತ್ರಿಗಳನ್ನು ಸ್ವಾಗತಿಸುತ್ತಾ ಈ ಕಾರ್ಖಾನೆಯಲ್ಲಿ ಮೂಲಕ ಮಜೂರರೊಳಗೆ ಸಾಮಾಜಿಕ ವಿವೇಯಾಗಿ ತಿಳಿಸಿದರು. ಮಂತ್ರಿಗಳು ಇಲ್ಲಿಯ ಆದರ್ಶವನ್ನು ಇತರ ಕಾರ್ಖಾನೆಯವರು ಅನುಕರಿಸಬೇಕೆಂದೂ ಕೇಂದ್ರಸರಕಾರವು ಕೊಡುವ ಸಹಾಯಧನವನ್ನು ಎಲ್ಲಾ ಕಾರ್ಮಿಕರಿಗೂ ಪಡೆಯಬೇಕೆಂದು ಆಪೇಕ್ಷಿಸಿದರು.

ಮೂಡನಿದಂಬೂರಲ್ಲಿ ಬೋರ್ಡು ಕಟ್ಟಿಡ ಉದ್ಘಾಟನೆ

ಮಾನ್ಯ ಭಕ್ತವತ್ಸಲಂ ರವರು ಮಣಿಪಾಲದಿಂದ ಕಡೇಕಾರು ಗ್ರಾಮಕ್ಕೆ ಬಂದು ಅಲ್ಲಿಯ ಜನತೆಯ ಸ್ವಾಗತ ಸಭೆಯ ನಿಡಂಬೂರು ಪಂಚಾಯತ ಬೋರ್ಡಿನ ಸಾಮಸ ಕಟ್ಟಡವನ್ನು ಉದ್ಘಾಟಿಸಿದರು. ಬೋರ್ಡಿನ ಅಧ್ಯಕ್ಷ ಶ್ರೀ ಕೆ.ಸದಾಶಿವ ಹೆಗ್ಡೆಯವರು ಮಂತ್ರಿಗಳಿಗೆ ಸ್ವಾಗತಬಯಸಿ ಮಾನಪತ್ರ ಅರ್ಪಿಸಿದರು. ಶ್ರೀ ಎ.ಎಸ್. ಕಿದಿಯೂರ್ ಬೋರ್ಡಿನ ವರದಿಯನ್ನೋದಿದರು.

ಮಾನ್ಯಮಂತ್ರಿಗಳು ಗ್ರಾಮಪಾಂತರಗಳ ಜನರ ಜೀವನ ಸುಧಾರಣೆ ಬಗ್ಗೆ ಹೆಣಗಾಡುತ್ತಿರುವ ಕಾಂಗ್ರೆಸ್ ಸರಕಾರಕ್ಕೆ ಪಂಚಾಯತ ಬೋರ್ಡುಗಳು ಸಲ್ಲಿಸ ಬೇಕಾದ ಕಾರ್ಯಗಳೇನಿಂಬುದನ್ನು ವಿವರಿಸಿದರು. ಗ್ರಾಮ ಪಂಚಾಯತುಗಳ ಮೂಲಕ ಗ್ರಾಮೋದ್ಧಾರವಾಗ ಬೇಕಾಗಿದೆ. ಜಿಲ್ಲಾ ಕಲೆಕ್ಟರರೊಡನೆ ಖಾಸಲಾಗಿ ಪ್ಪ ಹಣವಲ್ಲಿ ಇನ್ನೂ ನಾಲ್ಕು ಲಕ್ಷ ರೂಪಾಯಿಗಳು ಉಳಿದಿವೆ. ಈ ಹಣವು ಗ್ರಾಮಗಳ ಬಗ್ಗೆ ಉಪಯೋಗಿಸಬೇಕಾಗಿರುವುದರಿಂದ ಗ್ರಾಮಗಳ ಬೇಡಿಕೆಗಳು ಶೀಘ್ರ ಬರಬೇಕಾಗಿದೆ ಎಂದರು. ಶ್ರೀ ಎ. ಜಿ. ಆಳ್ವರವರು ಧನ್ಯವಾದವನ್ನು ಕನ್ನಡಿಸಿದರು. ಶ್ರೀ ಯು. ಭಾಸ್ಕರ ಸೆಟ್ರು ಹೊರಲಾಪವರು ಮಾತನಾಡಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರು ಕೊನೆಯ ಮಾತುಗಳನ್ನಾಡುತ್ತಾ, ಉಡುಪಿ ಮುನಿಸಿಪಾಲಿಟಿಗೆ ನೇ ಸ್ವತಂತ್ರ ಕಟ್ಟಡವಿಲ್ಲದಿರುವಾಗ ಸಬ್ಬಿಯ ಪಂಚಾಯತ ಬೋರ್ಡು ಸ್ವತಂತ್ರ ಕಟ್ಟಡದಲ್ಲಿ ವಾಸ್ತವ್ಯ ಮಾಡಲಾರಂಭಿಸಿರುವುದು ಅಭಿನಂದನೀಯವೆಂದರು. ಆನಂತರ ಅಂಬ್ಲಾಡಿ ಶಾಲೆಯಲ್ಲಿ ಶ್ರೀ ಕೆ. ಶಂಕರರಾಯರು ಏರ್ಪಡಿಸಿದ ಭೋಜನ ಸತ್ಕಾರ ನಡೆಯಿತು.

ಕಟಪಾಡಿಯಲ್ಲಿ—ಮಂತ್ರಿಗಳು ಆಪ್ತರಾಷ್ಟ್ರ ಆಗಮಿಸಿ ಅಲ್ಲಿಯ ವಿದ್ಯುದ್ದೀಪಸಗಳನ್ನು ಶ್ರೀ. ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಉರಿಸಿದರು.

ಕಟಪಾಡಿ ಪಂಚಾಯತ ಬೋರ್ಡಿನ ಅಧ್ಯಕ್ಷ ಶ್ರೀ ಪೆಂಕಟ್ರಾಯ ನಾಯ್ಕರು ಮತ್ತು ಮಹಿಳಾ ಸಮಾಜದ ಅಧ್ಯಕ್ಷೆ ಶ್ರೀಮತಿ ಕುಸುಮಾ ನಾಯ್ಕರು ಮಂತ್ರಿಗಳಿಗೆ ಮಾನಪತ್ರಗಳನ್ನರ್ಪಿಸಿದರು. ಇಲೆಕ್ಟ್ರಿಕ್ ಇಂಜಿನಿಯರ್ ಶ್ರೀ. ಕೆ. ವಿ. ಶೆಣೈಯವರು ಬೆಳ್ತಿಯಲ್ಲಿ ಸರಕಾರದ ಕಡಯಿಂದ ಈ ತನಕ ಆದ ಇನ್ನೂಮುಂದೆ ಆಗಲಿರುವ ವಿದ್ಯುತ್‌ಕಾರ್ಯಕ್ರಮಗಳನ್ನು ವಿವರಿಸಿದರು. ಮಾನಪತ್ರಕ್ಕೆ ಉತ್ತರವಿಯುತ್ತಾ, ವಿದ್ಯುತ್ತನ್ನು ಬಲೇ ಮನೆ, ಆಂಗಡಿಗಳನ್ನು ಬೆಳಗಿಸುವುದಕ್ಕೆ ಮಾತ್ರ ಉಪಯೋಗಿಸದೆ ಗ್ರಾಮದಲ್ಲಿ ಕೃಷಿ ಕೈಗಾರಿಕೆ ಉದ್ಯಮಗಳಿಗೆ ಹೆಚ್ಚು ಹೆಚ್ಚಾಗಿ ಉಪಯೋಗಿಸಬೇಕೆಂದು ಕರೆಕೊಟ್ಟರು. ಶ್ರೀ. ಎ. ಜಿ. ಆಳ್ವರವರು ಮಂತ್ರಿಗಳ ಭಾಷಣವನ್ನು ಕನ್ನಡಿಸಿದರು. ಡಾ! ಕೆ. ಜಿ. ಕಿಣಿಯವರು ಧನ್ಯವಾದಗಳನ್ನರ್ಪಿಸಿದರು. ಬಳಿಕ ಮಂತ್ರಿಗಳು ಕಟಪಾಡಿ ಪಂಚಾಯತ ಬೋರ್ಡಿನ ಕಟ್ಟಿಡದ ಮತ್ತು ಪ್ರಸೂತಿಕ ಗೃಹದ ಶಂಕುಸ್ಥಾಪನೆಗಳನ್ನು ನೆರವೇರಿಸಿ ಮುಂದಕ್ಕೆ ಪ್ರಯಾಣ ಬೆಳೆಸಿದರು.

ಉಡುಪಿ

ಮಹಾಸಭೆ—

ಉಡುಪಿ ತಾಲೂಕು ಬೋರ್ಡು ಅಧ್ಯಾಪಕರೆ ಯೂನಿಯನ್ನಿನ ಮಹಾಸಭೆಯು ತಾ. 19ರಲ್ಲು ಮೊದರ್ನ ಡಾ! ಎ! ಶಾಲೆಯಲ್ಲಿ ಶ್ರೀ. ಎಚ್. ಸುಬ್ಬಣ್ಣ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ವರದಿ ಸ್ವೀಕಾರಾದಿ ನೆಲೆಲಿ ಅಧ್ಯಾಪಕರ ಕಷ್ಟ ನಷ್ಟಗಳನ್ನು ನಿವೇದಿಸುವರೆ ಜಿಲ್ಲಾ ಬೋರ್ಡು ಅಧ್ಯಕ್ಷರನ್ನು ಕಾಣುವರೆ ಯೂನಿಯನ್ ಅಧ್ಯಕ್ಷ, ಕಾರ್ಯದರ್ಶಿಗಳು ಡೆಪ್ಯೂಟೇಷನ್ ಹೋಗಬೇಕಾಗಿ ನಿರ್ಣಯಿಸಲಾಯಿತು. ಚಾಲ್ತಿ ವರ್ಷಕ್ಕೆ ಶ್ರೀಗಳಾದ ಎಚ್. ಸುಬ್ಬಣ್ಣ ಸೆಟ್ಟಿ, ಅಧ್ಯಕ್ಷ; ಕೆ. ಮುದ್ದಣ್ಣ ಸೆಟ್ಟಿ, ಉಪಾಧ್ಯಕ್ಷ; ಕೆ. ಭೋಜ ಸೆಟ್ಟಿ, ಕೋಶಾಧಿಕಾರಿ; ಎಚ್. ಪಿ ಕೆವ್ಲಾಯಿ, ಕಾರ್ಯದರ್ಶಿ; ಮತ್ತು ಐವರು ಜನ ಸದಸ್ಯರಿರುವ ಕಾರ್ಯ ನಿರ್ವಾಹಕ ಸಮಿತಿಯ ರಚನೆಯಾಯಿತು ಯೂನಿಯನ್ನಿನ ಇನ್ನಷ್ಟು ಬಲಪಡಿಸಬೇಕೆನ್ನುವ ಕುರಿತು ಜಾಪಣಗೆಳವಾಗಿ ಸಭಾಂತ್ಯವಾಯಿತು.

ಸತ್ಕಾರ ಕೂಟ:

ಸ್ಥಳೀಯ ಅಂಚೆ ಮತ್ತು ತಂತಿ ಇಲಾಖೆಯ ಪ್ರಧಾನ ಕಚೇರಿಯು ಪೋಸ್ಟುಮಾಸ್ತರ್ ಶ್ರೀ ಎಮ್. ನರಸಿಂಹರಾಯರು ರಜೆಯಲ್ಲಿ ಹೋದ ನಿಮಿತ್ತ ಅವರಿಗೆ, ಇತರಸ್ಥಾನಕ್ಕೆ ವರ್ಗಾಯಿಸಲ್ಪಟ್ಟುಇಲ್ಲಿಗೆಬಂದ ಶ್ರೀ ಶಿವರಾಮನ್ ನಾಯರರ ಅಧ್ಯಕ್ಷತೆಯಲ್ಲಿ ತಾ. 24 ರಲ್ಲು ಇಲಾಖಾ ನೌಕರರ ಕಡೆಯಿಂದ ವಿಜಾಯ ಸತ್ಕಾರಕೂಟವಿಯಲಾಯಿತು. ಶ್ರೀಗಳಾದ ಬಿ. ಬಾಲಕೃಷ್ಣ, ಕೆ. ಆನಂದ, ಕೆ. ಮಹಾಲಿಂಗ ಮತ್ತು ಲೇಕ್ ಅಧ್ಯಕ್ಷ ಸಾಮೆ

ಬೋಗೋರಿನಲ್ಲಿ ಕೊಲೊಂಬೊ ಪ್ರಧಾನರ ಸಮ್ಮೇಳನ

ಮುಂಬರುವ ಆಫ್ರೋ ಏಷ್ಯ ಪರಿಷತ್ತಿನ ಬಗ್ಗೆ ಅಭಿಪ್ರಾಯ ವಿನಿಮಯ

ಇಂಡೋನೇಶಿಯದ ರಾಜಧಾನಿಯಾದ ಜಕಾರ್ತದಿಂದ ೪೦ ಮೈಲು ದೂರದಲ್ಲಿರುವ ಬೋಗೋರಿನಲ್ಲಿ ಕೊಲೊಂಬೋ ರಾಷ್ಟ್ರಗಳ ಪ್ರಧಾನಿಗಳ ಸಮ್ಮೇಳನ ನೇರಿರುತ್ತದೆ. ಪ್ರಥಮ ಸಭೆಯು ದಿನಾಂಕ ೨೮ರಂದು ಇಂಡೋನೇಶಿಯದ ಪ್ರಧಾನಿ ಜೋಜೋರ ಅಧ್ಯಕ್ಷತೆಯಲ್ಲಿ ಜರಗಿತು. ಸಮ್ಮೇಳನದ ಕುರಿತು ಹೊರಡಿಸಲಾದ ಇಂಡೋನೇಶಿಯ ಸರಕಾರದ ಪ್ರಕಟಣೆಯು ಮುಂಬರುವ ವಿಶ್ವಾ—ಆಫ್ರಿಕ ಪ್ರಧಾನ ಮಂತ್ರಿಗಳ ಪರಿಷತ್ತಿನಲ್ಲಿ ಭಾಗವಹಿಸಲು ಚೀನ ಮತ್ತು ಜಪಾನುಗಳಿಗೆ ಆಮಂತ್ರಣ ಕೊಡಬೇಕೇ ಬೇಡವೇ ಎಂಬ ಪ್ರಶ್ನೆಯನ್ನು ಇಲ್ಲಿ ವಿಚಾರಿಸಲಾಗುವುದೆಂದು ಹೇಳುತ್ತದೆ.

ಆಮಂತ್ರಣ ಪಟ್ಟಿ

ಯಾವ ಯಾವ ರಾಷ್ಟ್ರಗಳಿಗೆ ಆಮಂತ್ರಣವನ್ನು ಕಳಿಸಬೇಕು ಎಂಬುದನ್ನು ನಿರ್ಧರಿಸುವುದೇ ಈಗಿನ ಸಮಾಲೋಚನೆಯ ಮಹತ್ವ ಪೂರ್ಣವಾದ ಕೆಲಸ ಎಲ್ಲಿ ರಾಷ್ಟ್ರಗಳಿಗೂ ಆಮಂತ್ರಣ ಕಳಿಸುವ ವಿಚಾರವನ್ನು ಜೋಜೋವ್ಯಕ್ತ ಪಡಿಸಿದ್ದರೂ ಅನೌಪಚಾರಿಕವಾಗಿನಡೆಸಿದ ಮಾತುಕತೆಗಳು ಇದು ಸರಿಯಲ್ಲವೆಂಬ ಅಭಿಪ್ರಾಯವನ್ನು ಹೆಚ್ಚಿಸಿರುತ್ತವೆ. ಪರಸ್ಪರ ವಿರುದ್ಧ ನಿಂತಿರುವ ರಷಿಯ—ಅಮೇರಿಕೆಗಳ ಗುಂಪಿನಲ್ಲಿ ಯಾವ ಬಣದವರ ಮನಸ್ಸನ್ನೂ ನೋಯಿಸದ ಹಾಗೆ ಮತ್ತು ವಿಶ್ವಶಾಂತಿಯ ಪ್ರಸ್ಥಾಪನೆಗೆ ನೆರವಾಗುವಂತೆ ವಿಶ್ವಾ—ಆಫ್ರಿಕ ರಾಷ್ಟ್ರಗಳ ಪರಿಷತ್ತು ಜಂಗಡಬೇಕಾಗಿರುವುದರಿಂದ, ಪಂಚ ಸೂತ್ರಗಳಲ್ಲಿ ವಿಶ್ವಾಸವುಳ್ಳವರನ್ನೆ ಆಮಂತ್ರಿಸುವ ಸಂಭವ ಹೆಚ್ಚು.

ಕಾಶ್ಮೀರ ಸಮಸ್ಯೆ

ಭಾರತದ ಹಿತದೃಷ್ಟಿಯಲ್ಲಿ ನೆಹರು ಮತ್ತು ಮಹಮದ್ ಅಲಿಗೆ ಹೊಡನೆ ಉಭಯ ರಾಷ್ಟ್ರಗಳ ಸಮಸ್ಯೆಗಳ ನಿವಾರಣೋದ್ದೇಶದಿಂದ ನಡೆಯುವ ಬೊಗೋರಿನ ಪ್ರಾಮುಖ್ಯವನ್ನು ಹೆಚ್ಚಿಸುತ್ತಿವೆ ಮಹನೀಯರಲ್ಲಿ ಕಾಶ್ಮೀರ ಪ್ರಶ್ನೆಯ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದು, ಸಂಯುಕ್ತ ರಾಷ್ಟ್ರ ಸಂಘದ ಭದ್ರತಾಮಂಡಳಿಕ್ಕೆ ದೂರನ್ನು ಹಿಂತೆಗೆ ಒಯ್ಯಬೇಕೆಂಬ ತಮ್ಮ ವಿಚಾರವನ್ನು ಸದ್ಯಕ್ಕೆ ತಡೆದು ಹಿಡಿದಿರುವರೆಂದು ತಿಳಿದು ಬರುತ್ತದೆ. ತಾವಿಬ್ಬರೂ ಒಟ್ಟಿಗೆ ಎಂದು ಚರ್ಚೆಯನ್ನು ಪ್ರಾರಂಭಿಸಬೇಕೆಂಬ ವಿಷಯದಲ್ಲಿ ಮಹಮ್ಮದಾಲಿಗಳು ನೆಹರುಗಳ ಸಲಹೆಯನ್ನು ಕೇಳಿದ್ದು, ಮುಂದಿನ ವಸಂತ ಋತುವಿನಲ್ಲಿ ಪ್ರಧಾನಿದ್ವಯದಲ್ಲಿ ನೇರವಾದ ಸಮಾಲೋಚನೆಗಳು ಜರಗುವ ಎಲ್ಲ ಲಕ್ಷಣಗಳೂ ಕಂಡು ಬರುತ್ತವೆ.

ಮದ್ರಾಸ ಹೈಕೋರ್ಟು ಜಡ್ಜಿ

ಶ್ರೀ ಸೋಮು ಸುಂದರಂ, ಅವರು ತಾ. 22 ರಲ್ಲು ಉಡುಪಿ ದಿ! ಮುನಿ ಕೋರ್ಟಿನ ಇನ್ಸ್‌ಪೆಕ್ಷನ್ ನಡೆಸಿದರು. ಈ ಸಂದರ್ಭದಲ್ಲಿ ಬಾರ್ ಎಸೋಸಿಯೇಶನ್ನಿನ ಕಡೆಯಿಂದ ಆವರ ಅಧ್ಯಕ್ಷ ಶ್ರೀ. ಕೆ. ಜಿ. ಬಲ್ಲಾಳರು ಮನವಿಯೊಂದನ್ನು ಒಪ್ಪಿಸಿ ಉಡುಪಿಯಲ್ಲಿ ಸಬ್ ಕೋರ್ಟು ಸ್ಥಾಪನೆಯ ಜರೂರಾತಿಯನ್ನು ಸಕಾರಣವಾಗಿ ತಿಳಿಸಿದರು. ಮಂಗಳೂರಿನ ಸಬ್ ಕೋರ್ಟುಗಳಲ್ಲಿ ಕುಂದಾಪುರ ತಿರುಜನನಿಗೆ ಅಂದಾಜನ್ನು ದಾವೆಗಳು ದಾಖಲಾಗುವುದಿದ್ದರೆ ಉಡುಪಿಯಲ್ಲಿ ಸಬ್ ಕೋರ್ಟು ಅಗತ್ಯವೂ ಸಹಜವಿದೆ. ಅಂತೂ ಮನವಿಯ ಬೇಡಿಕೆಗೆ ತನ್ನ ಸದಾನುಭೂತಿಯನ್ನು ವ್ಯಕ್ತ ಪಡಿಸಿದರು.

ಮಣಿಪಾಲ ಮೆಡಿಕಲ್ ಕಾಲೇಜಿಗೆ

ಸಂಜೆ ಮಾನ್ಯ ನ್ಯಾಯಾಧೀಶರು ಸಂದರ್ಶನವಿತ್ತಾಗ, ಡಾ! ಟಿ ಎಮ್. ಎ. ಪೈ ನೊವಲಾವರು ಅವರಿಗೆ ಸ್ವಾಗತವನ್ನು ನೀಡಿದರು. ಕಾಲೇಜು ಇತಿಹಾಸವನ್ನು ವೇಸ್ಟ್ ಮಡಿಸಿದರು. ಮಾನ್ಯ ಜೋನು ಸುಂದರಂ ಅವರು ಕಾಲೇಜಿನ ಪ್ರಗತಿಯನ್ನು ಕಂಡು ತಮ್ಮ ಸಮಾಧಾನವನ್ನು ವ್ಯಕ್ತಪಡಿಸಿದರು. ಮಪ್ರಾಸು ಯುನಿವರ್ಸಿಟಿಯವರು ಇಂತಹ ಸುಸಜ್ಜಿತ ಕಾಲೇಜನ್ನು ಪದೆಯುವ ಸುಯೋಗವನ್ನು ಕಳೆದುಕೊಂಡ ಬಗ್ಗೆ ವಿಷಾದ ಸೂಚಿಸಿದರು ಕಾಲೇಜಿಗೆ ಮನ್ನಣೆಯನ್ನು ಕೊಟ್ಟ ಕರ್ನಾಟಕ ವಿಶ್ವವಿದ್ಯಾಲಯವನ್ನು ಅಭಿನಂದಿಸಿದರು. ಶ್ರೀ ಟಿ. ಎ ಪೈ. ಎಂ. ಎಲ್. ಎ.ಗಳು ಆಧಾರ ಸೂಚಿಸಿದರು. ಮಾನ್ಯ ನ್ಯಾಯಾಧೀಶರು, ಅಂದು ಪೂರ್ವಾಹ್ನ ದಿನವಂಗತ ಸರೀಲ್ ಎಮ್ ವಿಲಿಯ ಕಾನುತರ ಭಾವಚಿತ್ರವನ್ನು ಜಿಲ್ಲಾ ಸೆಷನ್ಸ್‌ಜಡ್ಜಿ ನೊಂದಾವರವರು ಅನಾವರಣ ಗೊಳಿಸಿ ಸಭಾರಂಭವನ್ನಿಲ್ಲಿ ಮಾತನಾಡಿದ್ದರು. ಈ ಸಮಾರಂಭವನ್ನು ಹೈಕೋರ್ಟಿನ ರಜಾವಧಿಯಲ್ಲಿ ಶೀಗಳಾದ ಕೆ. ವೆ. ಬಲ್ಲಾಳ್, ಎಚ್. ಸುಂದರ ರಾವ್ ಇತರ ಘಣಗಳೊಂದಿಗೆ ಜರಗಿತು.

ಉಪಾಹಾರ ಸಮಾರಂಭ

ಸ್ಥಳೀಯ ವಕೀಲರಲ್ಲಿ ಬ್ಬರಾದ ಶ್ರೀ ವಿ. ಶೀನಪ್ಪ ಹೆಗ್ಡೆರು ತಮ್ಮ ಪುತ್ರ ಶ್ರೀ ವಿ. ಶ್ರೀಧರ ಹೆಗ್ಡೆ, ಆತರ ವಿವಾಹವು ಹೈನೇಸ್ ಡಿವಿಜನಲ್ ಎಂಜಿನೀಯರ್ ಶ್ರೀ ಎಸ್. ಯು. ಸೇವಿಯರ ಪುತ್ರಿ ಸಾ ಸುಮೋಚನೆ ಆವರೊಂದಿಗೆ ಮಂಗಳೂರಿನ ಜ್ಯೋತಿಷೋಕೇಸಿನಲ್ಲಿ ತಾ 23 ರಲ್ಲು ಏರ್ಪಡಿಸಿದ್ದ ಸಮಾರಂಭಕ್ಕೆ ಸಂಬಂಧಿಸಿದಂತೆ ಉಡುಪಿಯ ಗಣ್ಯ ಕಾಲೋಚಿತ ಮಾತುಗಳನ್ನಾಡಿದರು. ಧನ್ಯವಾದಾರ್ಪಣೆಯೊಂದಿಗೆ ಸಮಾರಂಭ ಮುಕ್ತಾಯವಾಯಿತು.

ಮದ್ರಾಸ ಹೈಕೋರ್ಟು ಜಡ್ಜಿ

ಶ್ರೀ ಸೋಮು ಸುಂದರಂ, ಅವರು ತಾ. 22 ರಲ್ಲು ಉಡುಪಿ ದಿ! ಮುನಿ ಕೋರ್ಟಿನ ಇನ್ಸ್‌ಪೆಕ್ಷನ್ ನಡೆಸಿದರು. ಈ ಸಂದರ್ಭದಲ್ಲಿ ಬಾರ್ ಎಸೋಸಿಯೇಶನ್ನಿನ ಕಡೆಯಿಂದ ಆವರ ಅಧ್ಯಕ್ಷ ಶ್ರೀ. ಕೆ. ಜಿ. ಬಲ್ಲಾಳರು ಮನವಿಯೊಂದನ್ನು ಒಪ್ಪಿಸಿ ಉಡುಪಿಯಲ್ಲಿ ಸಬ್ ಕೋರ್ಟು ಸ್ಥಾಪನೆಯ ಜರೂರಾತಿಯನ್ನು ಸಕಾರಣವಾಗಿ ತಿಳಿಸಿದರು. ಮಂಗಳೂರಿನ ಸಬ್ ಕೋರ್ಟುಗಳಲ್ಲಿ ಕುಂದಾಪುರ ತಿರುಜನನಿಗೆ ಅಂದಾಜನ್ನು ದಾವೆಗಳು ದಾಖಲಾಗುವುದಿದ್ದರೆ ಉಡುಪಿಯಲ್ಲಿ ಸಬ್ ಕೋರ್ಟು ಅಗತ್ಯವೂ ಸಹಜವಿದೆ. ಅಂತೂ ಮನವಿಯ ಬೇಡಿಕೆಗೆ ತನ್ನ ಸದಾನುಭೂತಿಯನ್ನು ವ್ಯಕ್ತ ಪಡಿಸಿದರು.

ಮಣಿಪಾಲ ಮೆಡಿಕಲ್ ಕಾಲೇಜಿಗೆ

ಸಂಜೆ ಮಾನ್ಯ ನ್ಯಾಯಾಧೀಶರು ಸಂದರ್ಶನವಿತ್ತಾಗ, ಡಾ! ಟಿ ಎಮ್. ಎ. ಪೈ ನೊವಲಾವರು ಅವರಿಗೆ ಸ್ವಾಗತವನ್ನು ನೀಡಿದರು. ಕಾಲೇಜು ಇತಿಹಾಸವನ್ನು ವೇಸ್ಟ್ ಮಡಿಸಿದರು. ಮಾನ್ಯ ಜೋನು ಸುಂದರಂ ಅವರು ಕಾಲೇಜಿನ ಪ್ರಗತಿಯನ್ನು ಕಂಡು ತಮ್ಮ ಸಮಾಧಾನವನ್ನು ವ್ಯಕ್ತಪಡಿಸಿದರು. ಮಪ್ರಾಸು ಯುನಿವರ್ಸಿಟಿಯವರು ಇಂತಹ ಸುಸಜ್ಜಿತ ಕಾಲೇಜನ್ನು ಪದೆಯುವ ಸುಯೋಗವನ್ನು ಕಳೆದುಕೊಂಡ ಬಗ್ಗೆ ವಿಷಾದ ಸೂಚಿಸಿದರು ಕಾಲೇಜಿಗೆ ಮನ್ನಣೆಯನ್ನು ಕೊಟ್ಟ ಕರ್ನಾಟಕ ವಿಶ್ವವಿದ್ಯಾಲಯವನ್ನು ಅಭಿನಂದಿಸಿದರು. ಶ್ರೀ ಟಿ. ಎ ಪೈ. ಎಂ. ಎಲ್. ಎ.ಗಳು ಆಧಾರ ಸೂಚಿಸಿದರು. ಮಾನ್ಯ ನ್ಯಾಯಾಧೀಶರು, ಅಂದು ಪೂರ್ವಾಹ್ನ ದಿನವಂಗತ ಸರೀಲ್ ಎಮ್ ವಿಲಿಯ ಕಾನುತರ ಭಾವಚಿತ್ರವನ್ನು ಜಿಲ್ಲಾ ಸೆಷನ್ಸ್‌ಜಡ್ಜಿ ನೊಂದಾವರವರು ಅನಾವರಣ ಗೊಳಿಸಿ ಸಭಾರಂಭವನ್ನಿಲ್ಲಿ ಮಾತನಾಡಿದ್ದರು. ಈ ಸಮಾರಂಭವನ್ನು ಹೈಕೋರ್ಟಿನ ರಜಾವಧಿಯಲ್ಲಿ ಶೀಗಳಾದ ಕೆ. ವೆ. ಬಲ್ಲಾಳ್, ಎಚ್. ಸುಂದರ ರಾವ್ ಇತರ ಘಣಗಳೊಂದಿಗೆ ಜರಗಿತು.

ಉಪಾಹಾರ ಸಮಾರಂಭ

ಸ್ಥಳೀಯ ವಕೀಲರಲ್ಲಿ ಬ್ಬರಾದ ಶ್ರೀ ವಿ. ಶೀನಪ್ಪ ಹೆಗ್ಡೆರು ತಮ್ಮ ಪುತ್ರ ಶ್ರೀ ವಿ. ಶ್ರೀಧರ ಹೆಗ್ಡೆ, ಆತರ ವಿವಾಹವು ಹೈನೇಸ್ ಡಿವಿಜನಲ್ ಎಂಜಿನೀಯರ್ ಶ್ರೀ ಎಸ್. ಯು. ಸೇವಿಯರ ಪುತ್ರಿ ಸಾ ಸುಮೋಚನೆ ಆವರೊಂದಿಗೆ ಮಂಗಳೂರಿನ ಜ್ಯೋತಿಷೋಕೇಸಿನಲ್ಲಿ ತಾ 23 ರಲ್ಲು ಏರ್ಪಡಿಸಿದ್ದ ಸಮಾರಂಭಕ್ಕೆ ಸಂಬಂಧಿಸಿದಂತೆ ಉಡುಪಿಯ ಗಣ್ಯ ಸಂಜೆ ತಮ್ಮ ನಿವಾಸದಲ್ಲಿ ಉಪ

ಕುಂಡಾಪುರ: ಈ ಕೇಂದ್ರದ ಅಧ್ಯಾಪಕರ ಕೂಟದ ದಿನವು ಈಚೆಗೆ ವಿವಿಧ ಕಾರ್ಯಕ್ರಮಗಳಿಂದ ಆಚರಿಸಲ್ಪಟ್ಟಿತು. ಅಂದು ಬೆಳಿಗ್ಗೆ ಶ್ರೀ ವೈ. ಮಂಜಯ್ಯ ಶೆಟ್ಟಿ, ಎಮ್. ಎಲ್. ಎ. ಅವರು ಧ್ವಜಾರೋಹಣ ನಡೆಸಿದರು. ಬಳಿಕ ಶ್ರೀ ಎಸ್. ರಘುರಾಮ ಶೆಟ್ಟರ ನಾಯಕತ್ವದಲ್ಲಿ ಪಂಥ್ಯಾಟಗಳು ಜರಗಿದವು. ಸಂಜೆ ಶ್ರೀ ಎಸ್. ಎಸ್. ಪರಮೇಶ್ವರಯ್ಯ ನವರ ನೇತೃತ್ವದಲ್ಲಿ ಕ್ರೀಡೋತ್ಸವ ಜರಗಿತು. ನಂತರ ಸೈಟ್ ಸೀಯಿಂಗ್ ಹಾಗು ಎ ಜಾಲೆಯಲ್ಲಿ ಜಿಲ್ಲಾ ಬೋರ್ಡು ಅಧ್ಯಕ್ಷ ಡಾ। ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಶ್ರೀ ಎಮ್. ಎಮ್. ಹೆಗ್ಡೆಯವರು ಅಧ್ಯಾಪಕರ ಕೇಂದ್ರದ ದಿನಾಚರಣೆಯ ಮಹತ್ವವನ್ನು ವಿವರಿಸಿದರು. ಶಾಲಾ ಸೀನಿಯರ್ ಇನ್ಸ್‌ಪೆಕ್ಟರ್ ಶ್ರೀ ನರಸಿಂಹಯ್ಯನವರು ಮಾತನಾಡಿದರು. ಅಧ್ಯಕ್ಷರ ಸಮಯೋಚಿತ ಭಾಷಣವಾಗಿ ಶ್ರೀ ಕೆ. ವೆಂಕಟ್ರಾಯ ಶೆಣೈಯವರಿಂದ ಧನ್ಯವಾದಾರ್ಪಣೆಯಾಯಿತು ರಾತ್ರಿ ಯಕ್ಷಗಾನ ಕಾಲಕ್ಷೇಪವೂ ನಡೆಯಿತು.

ಕುಂಬಳೆ—ಕಾಸರಗೋಡು ತಾಲೂಕು ಬೋರ್ಡು ವ್ಯಾಧಮಿಕ ಶಾಲಾ ಅಧ್ಯಾಪಕರ ಸಂಘದ ಕಾರ್ಯಕಾರೀ ಸಮಿತಿ ಸಭೆಯು ತಾ. 25ರಲ್ಲಿ ಉಮ್ಮನ ಹಾಗು ಎ ಶಾಲೆಯಲ್ಲಿ ಶ್ರೀ ಪಿ. ಶಿವರಾಮ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ತಾಲೂಕು ಸಮ್ಮೇಳನವನ್ನು ಕಾಂಞಾಂಗಾಡಿನಲ್ಲಿ ಜರಗಿಸ ಬೇಕೆಂದು ತೀರ್ಮಾನ ಮಾಯಿತು.

ನಾರಾಯಣ ಮಂಗಲದ ಆದ್ಯ ಮಹಿಳಾ ಯರೆಲ್ಲೊಬ್ಬರಾದ ಡಾ। ಪರಮೇಶ್ವರ ಭಟ್ಟರು ತಾ. 25ರಲ್ಲಿ ಹೃದಯ ಸ್ತಂಭನದಿಂದ ತನ್ನ 48ನೆ ವಯಸ್ಸಿನಲ್ಲಿ ದಿವಂಗತರಾದುದು ವಿಷಾಧಕರ.

ಕಾಸರಗೋಡು ಈಗ ಮೇಜರ್ ಪಂಚಾಯತು ಆಗಿರುವ ಕಾಸರಗೋಡನ್ನು ನಗರಸಭೆಯಾಗಿಸುವಲು ಸರಕಾರವು ನಿಶ್ಚಯಿಸಿದ್ದು, ಆ ಸಂಬಂಧವಾಗಿ ಅಧಿಕಾರಿಗಳು ಈಗಾಗಲೇ ಅಲ್ಲಿಗೆ ಬಂದು ಪೂರ್ವಭಾವಿ ಕಾರ್ಯಗಳನ್ನು ಮುಗಿಸಿರುತ್ತಾರೆ. ಮುಂದಿನ ಏಪ್ರಿಲ್ ತಿಂಗಳಾರಂಭದಿಂದ ಮುನಿಸಿಪಾಲಿಟಿಯು ಅಸ್ತಿತ್ವಕ್ಕೆ ಬರುವುದಾಗಿ ಹೇಳಲಾಗಿದೆ.

ಬೆಳ್ತಂಗಡಿ: ತಾ 19 ರಂದು ಶ್ರೀಗಳಾದ ಕೆ. ಆರ್. ಕಾರಂತ್ ಡಾ। ಸಂಜೀವನಾಥ ಕೆ. ರಾವ್ ಮೊದಲಾದವರು ಇಲ್ಲಿಗೆ ಆಗಮಿಸಿ ನೆರೆದ ಸಾರ್ವಜನಿಕ ಸಭೆಯಲ್ಲಿ ಪ್ರಬಲ ಸಮೂಹವಾದೀ ಪಕ್ಷದ ಧ್ಯೇಯಧೋರಣೆಗಳನ್ನು ನಿವರಿಸಿ ಪಕ್ಷಕ್ಕೆ ಬೆಂಬಲ ನೀಡ ಬೇಕೆಂದರು.

ಮುಂಡಾಜೆ ಯಲ್ಲಿಯೂ ಅದೇ ದಿವಸ ಸಾರ್ವಜನಿಕ ಸಭೆ ನೇರಿ ಶ್ರೀಗಳಾದ ಎನ್ ಅಧಿಕಾರಿ ಮತ್ತು ಕೆ. ಆರ್. ಕಾರಂತರು ಭಾಷಣವೀಯುತ್ತಾ ಸ್ವಜಾಸ್ಪಭ್ಯತ್ವದಲ್ಲಿ ಪ್ರತಿ ಪಕ್ಷದ ಅವಶ್ಯಕತೆಯನ್ನು ಒತ್ತಿಹೇಳಿದರು.

ಪುತ್ತೂರು: ಕರ್ನಾಟಕ ಸಂಘದ ಆಶ್ರಯದಲ್ಲಿ ತಾ 22 ರಲ್ಲು ಪ್ರಸಿದ್ಧ ಕನ್ನಡ ಕಾದಂಬರಿಕಾರರಾದ ಶ್ರೀ ವಿ. ಎಮ್. ಇನಾಂದಾರರು 'ಕನ್ನಡ ಸಾಹಿತ್ಯದಲ್ಲಿ ಆಧುನಿಕ ಪ್ರವೃತ್ತಿಗಳು' ಎಂಬ ವಿಚಾರವಾಗಿ ಭಾಷಣ ವಿತ್ತರು. ಶ್ರೀ ಕೆ. ಶಿವರಾಮ ಕಾರಂತರು ಭಾಷಣ ಕರ್ತರ ಪರಿಚಯಮಾಡಿಕೊಟ್ಟರು. ಶ್ರೀ ಎ. ಪಿ. ಸುಬ್ಬಯ್ಯನವರು ಧನ್ಯವಾದಗಳನ್ನು ಸಿಸಿದರು.

ನಿಡ್ಡೋಡಿ—ಶ್ರೀಸತ್ಯನಾರಾಯಣಹಾಗು ಎ ಜಾಲಾ ವರ್ಧಂತ್ಯುತ್ಸವವು ತಾ. 17ನೆ ದ. ಕ. ಜಿಲ್ಲಾ ಬೋರ್ಡು ಅಧ್ಯಕ್ಷ ಡಾ। ಕೆ. ಕೆ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮೆನೇಜರ್ ಶ್ರೀ ಎನ್. ಶಿವರಾಮ ಹೆಗ್ಡೆಯವರು ಸ್ವಾಗತ ಭಾಷಣ ಮಾಡಿದರು. ಶ್ರೀ ಕೆ. ತ್ರಿಯಂಬಕ ರಾಯರು ಸ್ವಸ್ತಿವಾಚನ ಮಾಡಿದರು. ಸಭಿಕರ ಪರವಾಗಿ ಶ್ರೀ. ಕೆ. ಕೆ. ರೈ, ವಿದ್ವಾನ್ ಮೊದಲಾದವರು ಮಾತನಾಡಿದರು. ಬಳಿಕ ಪುಕ್ಕಳ ಪನಿಧಿ ವಿನೋದಾವಳಿಗಳಾದುವು.

ಶಿವಳ್ಳಿ—ಇಲ್ಲಿಯ ಪಂಚಾಯತ ಬೋರ್ಡಿನ ಸಾಮಾನ್ಯ ಸಭೆಯು ತಾ. 20ರಲ್ಲಿ ಶ್ರೀ. ಎಸ್. ಎ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ ರಿಪೇರಿಯಲ್ಲಿ ನೀರಾಅಂಗದಿಯನ್ನು ಬೇಗನೆ ತೆರೆಯುವಂತೆ ಸರಕಾರವನ್ನು ಕೇಳಿಕೊಳ್ಳುವ, ಇತ್ಯಾದಿ ನಿರ್ಣಯಗಳಾದುವು.

ಬೈಂದೂರು—ತಾ. 22ರಲ್ಲಿ ಬೆಳಿಗ್ಗೆ ಜಿಲ್ಲಾ ಬೋರ್ಡು ಅಧ್ಯಕ್ಷ ಡಾ। ಕೆ. ಕೆ. ಹೆಗ್ಡೆಯವರು, ಪಡುವರಿ ಹೋಲಿಕ್ರೋಸ್ ಎಯೊಡೆಡ್ ಹಾಗು ಎ ಜಾಲೆಯಲ್ಲಿ ಉದ್ಘಾಟನಾಸಮಾರಂಭವೊಂದನ್ನು ನೆರವೇರಿಸಿದರು.

ಮೂಲ್ಕಿ:—ಮೂನ್ಯ ಮಂತ್ರಿಗಳಾದ ಶ್ರೀ. ಎಂ. ಭಕ್ತವತ್ಸಲಂ. ಇವರು ತಾ. 25 ರಂದು ಮೂಲ್ಕಿ ಜಾಲಾ ಸರಬರಾಯಿ ಸೊಸೈಟಿಯನ್ನು ಸಂದರ್ಶಿಸಿದರು ಅವರೊಂದಿಗೆ ಶ್ರೀ ಗಳಾದ. ಟಿ. ವಿ. ವೈ. ಎಂ. ಎಲ್. ಎ; ಜಿಲ್ಲಾಕಲೆಕ್ಟರ್, ಪ್ರೊಜಿಕ್ಟ್ ಎಕ್ಸಿಕ್ಯೂಟಿವ್ ಆಫೀಸರ್ ಮೊದಲಾದವರು ಆಗಮಿಸಿದ್ದರು. ಸೊಸೈಟಿಯ ಪರವಾಗಿ ಅರ್ಜಿಸಲಾದ ಪಾನಪತ್ರವನ್ನು ಸ್ವೀಕರಿಸಿನಂತರವೆ ಸೊಸೈಟಿಯ ಚಟುವಟಿಕೆ, ಕಾರ್ಯದಕ್ಷತೆಯನ್ನು ನೋಡಿ ಸಂತೋಷಗೊಂಡು ಸಂದರ್ಶಕರ ಪುಸ್ತಕದಲ್ಲಿಯೂ ಸೊಸೈಟಿಯಉಪಯುಕ್ತ ಕಾರ್ಯವನ್ನು ಶ್ಲಾಘಿಸಿ ಬರೆದಿರುತ್ತಾರೆ.

ಹವರಾಲು ಇತ್ತೀಚೆಗೆ ಕೇಂದ್ರ ಸರಕಾರದ ಧನಸಹಾಯದಿಂದ ಗ್ರಾಮಾಂತರಗಳಲ್ಲಿ ಹೊಸ ಶಾಲೆಗಳನ್ನು ತರೆಯಬೇಕೆಂಬ ಆದೇಶದಂತೆ ದ. ಕ. ಜಿಲ್ಲಾ ಬೋರ್ಡಿನ ಆಶ್ರಯದಲ್ಲಿ ತಾ. 27ರಲ್ಲಿ ಕಾವಡಿ ಗ್ರಾಮದ ಪಟೇಲ್ ಶ್ರೀ ನೂಜಪ್ಪ ಹೊಳ್ಳರ ಅಧ್ಯಕ್ಷತೆಯಲ್ಲಿ ಹೊಸ ಶಾಲೆಯೊಂದು ತೆರೆಯುವ ಸಮಾರಂಭ ಜರಗಿತು. ಶ್ರೀಗಳಾದ ಎ. ಸುಬ್ರಾಯ ಬಾಯರಿ, ಬಿ. ತೀನಪ್ಪ ಸೆಟ್ಟಿ, ಪಟೇಲ್ ರಾಮಣ್ಣ ಸಟ್ಟಿ ಮೊದಲಾದವರು ನೂತನ ಶಾಲೆಗೆ ಆಭ್ಯುದಯವನ್ನು ಕೋರಿ ಮಾತನಾಡಿದರು. ಶ್ರೀ ಎ. ಸೀತಾರಾಮ ಸೆಟ್ಟರು ವಂದನೆಗಳನ್ನರ್ಪಿಸಿದರು.

ಉಚ್ಚಿಲ—ಬಾರ್ಕೂರು ಹೋಬಳಿ ಪರಿಯಾಳ ಸಮಾಜ ಸುಧಾರಕ ಸಂಘದ ಮಹಾಸಭೆಯು ತಾ. 25ರಲ್ಲಿ ಸ್ಥಳೀಯ ಸರಸ್ವತಿ ಮಂದಿರದಲ್ಲಿ ಶ್ರೀ ಸುಬ್ಬ ಜಂಪ, ಹೆಜ್ಜಾಡಿ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘವನ್ನು ರಿಜಿಸ್ಟ್ರಿ ಮಾಡುವರೆ ತಯಾರಿಸಿದ ನಬಂಧನೆಗಳ ಪರಿಶೀಲನೆ, ತಿದ್ದುಪಡಿಗಳಾಗಿ ಆಪ.್ನ ಮಂಜೂರು ಮಾಡಲಾಯಿತು. ಸಂಘದ ನಿರ್ವಾಹಿಗೆ ಸಹಾಯನಿತ್ತವರಿಗೆ ಆಭಾರ ಸೂಚಿಸಲಾಯಿತು. ಬಳಿಕ ಹೊಸ ಕಾರ್ಯವಾಹೀ ಸಮಿತಿ ರಚನೆಯಾಗಿ ಶ್ರೀಗಳಾದ ಯು ಪಿ. ಸುವರ್ಣ, ಅಧ್ಯಕ್ಷ; ತೌಡಸಾಲಿಯಾನ್, ಉಪಾಧ್ಯಕ್ಷ; ಟಿ. ಟಿ. ಸಾಲಿಯಾನ್, ಕಾರ್ಯದರ್ಶಿ; ಗಿರಿಯಪ್ಪ ಸಾಲಿಯಾನ್, ಉಪಕಾರ್ಯದರ್ಶಿ; ಮಾಡಪ್ಪ ಬಂಗೇರ ಕೋಶಾಧಿಕಾರಿ; ರಾಮಪ್ಪ ನಾಲಿಯಾನ್, ಆಪ್ತ ಪರಿಶೋಧಕರಾಗಿ ಆರಿಸಲ್ಪಟ್ಟರು.

ಮಣಿಪಾರ—ತಾ. 24ರಲ್ಲಿ ಮಣಿಪಾಲ ಹೈಸ್ಕೂಲಿನಲ್ಲಿ ಉಡುಪಿ ಸರಕಾರಿ ನಿಕೆಂಡರಿ ಟ್ರೈನಿಂಗ್ ಶಾಲೆಯ ಅಧ್ಯಾಪಕ ವಿದ್ಯಾರ್ಥಿಯರ ಸಲುವಾಗಿ ಏರ್ಪಡಿಸಿದ ಸಿಟಿಜನ್‌ಶಿಪ್ ತರಬೇತಿ ಕ್ಲಾಸನ್ನು ಡಾ। ಟಿ. ಮಾಧವ ಪೈಗಳು ಉದ್ಘಾಟಿಸಿದರು.

ದ. ಕ. ಜಿಲ್ಲಾ ಬೋರ್ಡು ಅಧ್ಯಕ್ಷರಿಗೆ ಸತ್ಕಾರ ಕೂಟಗಳು: ತಾ 9 ರಲ್ಲು

ಕಾಸರಗೋಡಿನಲ್ಲಿ ಜಿಲ್ಲಾ ಬೋರ್ಡಿನ ಅಧ್ಯಕ್ಷ ಡಾ। ಕೆ. ಕೆ. ಹೆಗ್ಡೆ ಯವರಿಗೆ ಅಲ್ಲಿಯ ಬೋರ್ಡು ಹೈಸ್ಕೂಲು ಪರಿವಾರದಲ್ಲಿ ಸತ್ಕಾರ ಕೂಟವೊಂದು ಜರಗಿತು. ಶಾಲಾ ಹೆಡ್ಮಾಸ್ಟರ್ ಶ್ರೀ ವೆಂಕಟ್ರಮಣ ರಾಯರು ಸ್ವಾಗತ ಮಾತುಗಳನ್ನಾಡಿ, ಶಾಲಾ ವರದಿಯನ್ನು ಓದಿದರು. ಮಾನ್ಯ ಅತಿಥಿಗಳು ಬೋರ್ಡಿನ ದುಃಸ್ಥಿತಿಯನ್ನು ವಿವರಿಸಿ, ಸರಕಾರವುಬೋರ್ಡಿಗೊಡಿಸಿದ ನೆಸಪಕರಿಸಿದರೆ ಬೋರ್ಡು ಕೂಡಾ ಅಲೋಚಿಸಿ ಶಾಲೆಗೆ ಸಹಾಯ ಮಾಯುವುದೆಂದು ಹೇಳಿದರು. ಅದೇ ರೀತಿ ಸಂಜೆ ಬರ್ಮಾಶೆಲ್ ಕಂಪೆನಿಯ ಕಡೆಯಿಂದ ನೈವಸ್ಥೆಗೊಳಿಸಲಾದ 'ಡಿಸೇಲ್ ಪಂಪನ್ನು'ನ್ನು ಉದ್ಘಾಟಿಸಿದರು ಶ್ರೀ ಸಭೋತ್ತಮ ಕಾಮತರು. ಡಾ। ಹೆಗ್ಡೆಯವರಿಗೆ ಸುಪ್ಪಾತುರನ್ನಿತ್ತು ಗೌರವಿಸಿದರು.

ಕಾರ್ಕಳದಲ್ಲಿ ಡಾ। ಹೆಗ್ಡೆಯವರಿಗೆ ತಾ 10 ರಲ್ಲು ಹೈಸ್ಕೂಲು ಪರಿವಾರದಲ್ಲಿ ಸತ್ಕಾರ ಕೂಟ ನಡೆಯಿತು. ಹಾಜರಿದ್ದ ಸಭಿಕರಲ್ಲಿ ಪಲವು ಡಾಕ್ಟರರು ಶ್ರೀಹೆಗ್ಡೆಯವರನ್ನು ಅಭಿನಂದಿಸಿ ಕಾಲೋಚಿತ ಮಾತುಗಳನ್ನಾಡಿದರು.

ಪರ್ಕಳೆ ತಾ. 13—11—54 ರಲ್ಲು ಅಗ್ನಿಹಾವಳಿಗೊಳಗಾಗಿ ಸಂತ್ರಸ್ತರಾದವರ ಬಗ್ಗೆ ಧನಸಹಾಯ ನೀಡಿದವರು.

ರೂ. 20/- ರಂತೆ.

ಶ್ರೀಗಳಾದ ಬಿ. ಸುಬ್ರಾಬಲ ಹೆಗ್ಡೆ, ಪಶೇಲ್, ಬಡಗಬೆಟ್ಟು, ಬಿ. ಭುಜಂಗ ಹೆಗ್ಡೆ, ಬಡಗ ಬೆಟ್ಟು, ಯಸ್. ರಾಘವ ಹೆಗ್ಡೆ.

ರೂ. 15/-ರಂತೆ.

ಡಾ। ಗಿರಿಧರ ರಾವ್, ಬಿ. ರಂಗನಾಥ ಹೆಗ್ಡೆ, ಪಿ. ಬಾಬು ಸೆಟ್ಟಿ, ವಿ. ನಾರಾಯಣ ಸೆಟ್ಟಿ,

ರೂ. 10/-ರಂತೆ

ಬಿ. ಸುಬ್ಬಯ್ಯ ಹೆಗ್ಡೆ, ಕೀಳಂಜೆ. ಯಮ್. ಸಂಕಯ್ಯ ಸೆಟ್ಟಿ, ಅಧ್ಯಾಪಕ, ಹೆಗ್ಗ. H. ವಿಟ್ಟಲ ಸೆಟ್ಟಿ, ಅಧ್ಯಾಪಕ, ಹೆಗ್ಗ. ಕೆ. ರಾಘವ ಕೋಟ್ಯಾನ್, ಅಧ್ಯಾಪಕ, ಯಚ್. ಆರ್. ಹೆಗ್ಡೆ, ಹಿರೇಬೆಟ್ಟು. ಪಿ. ನಾರಾಯಣ ಉಪಾಧ್ಯ, "ವಿದ್ಯಾರ್ಥಿ ಭವನ," ಆಜ್ಜಿ ಪೂಜಾರಿ, ಪರ್ಕಳ. ಕೆ. ಆನಂದ ಸೆಟ್ಟಿ, ಪರ್ಕಳ. H. ಆಂಗರಸೆಟ್ಟಿ, ಹೆಗ್ಗ. H. ಪರಮೇಶ್ವರ ಭಟ್ಟ, ಹೆಗ್ಗ, ಬಸವ ಮಡಿವಾಳ, ಹೆಗ್ಗ. ಬೋಂಕು ಪೂಜಾರಿ, ಹೆಗ್ಗ, ಕಿಟ್ಟ ಪೂಜಾರಿ, ಹೆಗ್ಗ, ಸೋಮಪ ಪೂಜಾರಿ, ಹೆಗ್ಗ.

ಹೆಗ್ಗ ಗ್ರಾಮ ಸೇವಾ ಸಮಿತಿಯ ನತಿಯಿಂದ ಅಗ್ನಿಹಾವಳಿ ಗೊಳಗಾಗಿ ಸಂತ್ರಸ್ತರಾದ ನಾರಾಯಣ ಸೆಟ್ಟರ ಬಗ್ಗೆ ಸಂಗ್ರಹಿಸಲಾದ ರೂ. 260-0-0ನ್ನು ತಾ. 22-12-54 ರಲ್ಲಿ ಹೆಗ್ಗ ಹಳೆಮನೆ ಮುತ್ತಯ್ಯ ಸೆಟ್ಟಿ ಹಸ್ತದಿಂದ ಕೊಡಿಸಲಾಗಿದೆ ಎಂಬವಾಗಿಯೂ ಧನ ಸಹಾಯನಿತ್ತ ಮಹಾದಾನಿಯರಿಗೆಲ್ಲಾ ಗ್ರಾಮ ಸೇವಾ ಸಮಿತಿಯು ಹೃತ್ಪೂರ್ವಕ ಕೃತಜ್ಞತೆಯನ್ನರ್ಪಿಸುತ್ತದೆಂದು ಯೂ ಯಸ್. ರಾಘವ ಹೆಗ್ಡೆಗಳವರು ತಿಳಿಸುತ್ತಾರೆ.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

TENDER NOTICE

Sealed tenders are invited by the undersigned from the registered contractors up to 4 P. M. on 16—1—1955 for the work shown below (to be executed at the temple).

The tenders should be sent in sealed cover, accompanied by a chalan in token of having remitted the prescribed Earnest money deposit into the temple treasury. Intending tenderers can persue the estimate in the office of the undersigned during the office hours on any working day. Tenderers, or their authorised agents may be present in the office of the undersigned at 4-15 P. M. on 16—1—1955 when the tenders will be opened. The undersigned reserves to himself the right of rejecting any tender, without assigning reasons therefor.

Name of work	Amount of Estimate	Earnest money Deposit
Putting up a masonary parapet on the western side of the tank of Sri Ananthapadmanabha Temple, Perdoor, S. K.	Rs. 1,150 -	Rs. 30/.

N. B: The Earnest money deposit will be refunded only after satisfactory completion of the work.

Perdoor
26—12—1954.

K. B. Shetty,
Executive Officer.

ಟೆಂಡರ್ ನೋಟೀಸು

ಈ ಕೆಳಗೆ ನಮೂದಿಸಿದ ದೇವಸ್ಥಾನದ ಕಾಮಗಾರಿಕೆಯನ್ನು ಪೂರ್ತಿಸಲು ರಿಜಿಸ್ಟರ್ಡ್ ಕಂಟ್ರಾಕ್ಟುದಾರರಿಂದ ತಾ. 16-1-1955ನೆ ದಿನ ಸಂಜೆ 4 ಗಂಟೆಯ ತನಕ ಮೊಹರು ಮಾಡಲ್ಪಟ್ಟ ಟೆಂಡರುಗಳನ್ನು ಸ್ವೀಕರಿಸಲಾಗುವುದು.

ಕಾಮಗಾರಿಗೆಗೆ ನಿಬಂಧಕಪಟ್ಟ ನಂಚಕಾರ ಹಣವನ್ನು ದೇವಸ್ಥಾನದ ಖಜಾನೆಗೆ ಪಾವತಿ ಮಾಡಿದ ರಶೀದಿಯೊಂದಿಗೆ ಟೆಂಡರುಗಳನ್ನು ಬಂಯ ಮಾಡಿದ ಲಕೋಟೆಯಲ್ಲಿ ಕಳುಹಿಸತಕ್ಕದ್ದು. ಕಾಮಗಾರಿಕೆಯ ಅಂದಾಜು, ವಿವರ ಇತ್ಯಾದಿ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿದವರ ಆಫೀಸಿನಲ್ಲಿ ರಜಾದಿನ ವಿನಹಾ ಇತರ ದಿನಗಳ ಆಫೀಸು ಸಮಯದಲ್ಲಿ ಪರಿಶೀಲಿಸಬಹುದು. ಟೆಂಡರ್ ಹಾಕಿದವರಾಗಲೀ ಇಲ್ಲವೆ ಅವರ ಅಧಿಕೃತ ಏಜಂಟರಾಗಲೀ ತಾ. 16-1-1955ರಲ್ಲು ಸಾಯಂಕಾಲ ಗಂಟೆ 4ಕ್ಕೆ ಈ ಕೆಳಗೆ ಸಹಿ ಮಾಡಿದವರು ಟೆಂಡರುಗಳನ್ನು ಪರಿಶೀಲಿಸುವ ಕಾಲಕ್ಕೆ ಹಾಜರಿರಬಹುದು. ಯಾವ ಕಾರಣವನ್ನೂ ಕೊಡದೆ ಯಾವ ಟೆಂಡರನ್ನೂ ನಿರಾಕರಿಸುವ ಅಧಿಕಾರ ಈ ಕೆಳಗೆ ಸಹಿ ಮಾಡಿದವರ ಅಧಿಕಾರಕ್ಕೆ ಒಳಪಟ್ಟಿರುವುದು.

ಕಾಮಗಾರಿಕೆಯ ಹೆಸರು	ಅಂದಾಜು ಪೆಜ್ಜ	ನಂಚಕಾರ ಜೀನಣಾತಿ
ದ. ಕ. ಜಿಲ್ಲಾ ಪೆರ್ಡೂರು ಶ್ರೀ ಅನಂತಪದ್ಮನಾಭ ದೇವಸ್ಥಾನದ ಪಶ್ಚಿಮ ಭಾಗದಲ್ಲಿ ಹಾಕತಕ್ಕ ಕಲ್ಲು ಕೆಲಸದ ಕೈಪಿಡಿ ಗೋಡೆ.	ರೂ. 1,150/-	ರೂ. 30/-

ವಿ. ಸೂ: ತೃಪ್ತಿಕರವಾಪ ರೀತಿಯಲ್ಲಿ ಕಾಮಗಾರಿಕೆಯನ್ನು ಪೂರ್ಣಗೊಳಿಸಿದ ನಂತರವೇ ನಂಚಕಾರ ಜೀವಣಾತಿ ವಾಪಾಸು ಕೊಡಲಾಗುವುದು.

ಪೆರ್ಡೂರು
26-12-1954.

ಕೆ. ಬಿ. ಶೆಟ್ಟಿ,
ಎಕ್ಸಿಕ್ಯೂಟಿವ್ ಆಫೀಸರ್.

ಮಂಗಳೂರು

ರೋಟರಿ ಕ್ಲಬ್ಬಿನಲ್ಲಿ ಶ್ರೀ ಸದಾನಂದ ಹೆಗ್ಡೆಯವರ ಭಾಷಣ

ರಾಷ್ಟ್ರ ಸಂಘದ ಜನರಲ್ ಎಸೆಂಬ್ಲಿಗೆ ಭಾರತದ ಶಿಷ್ಟ ಮಂಡಲದ ಪ್ರತಿನಿಧಿಯಾಗಿ ಹೋಗಿ ಬಂದ ಶ್ರೀ ಕೆ. ಸದಾನಂದ ಹೆಗ್ಡೆ, ಎಮ್. ಎ. ಆರು ತಾ. 23ರಲ್ಲಿ ರಾತ್ರಿ ಮಂಗಳೂರು ರೋಟರಿ ಕ್ಲಬ್ಬಿನಲ್ಲಿ ಭಾಷಣ ಮಾಡುತ್ತಾ ಭಾರತವು ಯುಕ್ತ ರಾಷ್ಟ್ರ ಸಂಘದಲ್ಲಿ ಮಹತ್ವದ ಸ್ಥಾನ ಪಡೆದಿದೆ ಎಂದರು. ಆದರು ಪತ್ರಿಕೆಗಳು ಹೇಳಿದುದೇನೆಂದರೆ ಭಾರತ ಜಗತ್ತಿನಲ್ಲಿ ಏಷ್ಯಾದಲ್ಲಿ ಪ್ರಮುಖ ಪಾತ್ರ ವಹಿಸಲಿದೆ ಎಂದು ಎಲ್ಲರೂ ಈಗ ಮನಗಂಡಿದ್ದಾರೆ ಏಷ್ಯದ ಎರಡು ಪ್ರಮುಖ ರಾಷ್ಟ್ರಗಳಾದ ಚೀನ ಮತ್ತು ಭಾರತಗಳಲ್ಲಿ, ಚೀನವನ್ನು ಯುಕ್ತ ರಾಷ್ಟ್ರ ಸಂಘದಿಂದ ಹೊರಗಿರಿಸಲಾಗಿದೆ. ಹೀಗಾಗಿ ಏಷ್ಯದ ಯಾವ ಸಮಸ್ಯೆಯಿದ್ದರೂ ಅದನ್ನು ಭಾರತವೇ ಯುಕ್ತರಾಷ್ಟ್ರ ಸಂಘದಲ್ಲಿ ಎತ್ತಿ ಹಿಡಿಯುವಂತಾಗಿದೆ. ಕೊರಿಯಾದ ವಿವಾದ, ಇಂಡೋ ಚೀನದ ವಿಚಾರದಲ್ಲಿ ಜಿನೆವಾ ಒಪ್ಪಂದ ಇತ್ಯಾದಿಗಳಲ್ಲಿ ಕಮ್ಯೂನಿಸ್ಟ್ ಚೀನದೊಡನೆ ಸಂಪರ್ಕ ಬೆಳೆಸಬೇಕಾದಾಗ ಭಾರತದ ಮೂಲಕವೇ ಬೆಳೆಸಬೇಕಾಯಿತು. ಇವೆಲ್ಲ ಕಾರಣಗಳಿಂದಾಗಿ ಇಂದು ಅಮೇರಿಕ, ರಷ್ಯ, ಬ್ರಿಟನ್ ಈ ಮೂರು ರಾಷ್ಟ್ರಗಳ ಜತೆಗೆ ಭಾರತವು ನಾಲ್ಕನೆಯದಾಗಿದೆ. ಇಂದು ಪ್ರಾನ್ಸಿಗಿಂತಲೂ ಹೆಚ್ಚಿನ ಸ್ಥಾನವು ಭಾರತಕ್ಕಿದೆ. ಶ್ರೀ ಟೆನಗಲ್ ನರಸಿಂಗರಾವ್, ಶ್ರೀಮತಿ ವಿಜಯಲಕ್ಷ್ಮಿ ಮತ್ತು ಶ್ರೀ. ವಿ. ಕೆ. ಕೃಷ್ಣ ಮೆನೆನ್‌ರವರ ಶ್ರೇಷ್ಠವಾದ ಮುಂದಾಲೋಚನೆಯೂ ಕಾರಣವಾಗಿದೆ." ಶ್ರೀ ಮನೇಲ್ ಶ್ರೀನಿವಾಸ ನಾಯ್ಕರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಶ್ರೀ. ಕೆ. ವಿಶ್ವನಾಥ ಕಾಮತರು ಧನ್ಯವಾದಗಳನ್ನರ್ಪಿಸಿದರು.

ಹೈದರಾಬಾದು ಎಮ್. ಎಲ್. ಎ ಗಳೂ ಅಬಿಲ ಭಾರತ ಟ್ರೇಡ್ ಯೂನಿಯನ್ ಸಂಸ್ಥೆಯ ಸಹಾಯಕ ಕಾರ್ಯದರ್ಶಿಗಳೂ ಆದ ಶ್ರೀ ಎಮ್. ಮೊಯ್ದಿನ್, ಆರು ತಾ. 23ರಲ್ಲು ಸಂಜೆ ಮಂಗಳೂರಿಗೆ ಬಂದಾಗ ಆವರಿಗೆ ಸ್ವಾಗತವೀಯಲಾಯಿತು. ಬಳಿಕ ಕೇಂದ್ರ ಬೈಡಾಣಿನಲ್ಲಿ ನೇರಿದ ಸುಜೂರ ಸಭೆಯಲ್ಲಿ ಆವರು ಭಾಷಣ ಮಾಡುತ್ತಾ ಪಂಚ ವಾರ್ಷಿಕ ಯೋಜನೆಯನ್ನು ಕಾಂಗ್ರೆಸ್ ಸರಕಾರದ ಕೆಲವೊಂದು ಧೋರಣೆಗಳನ್ನು ಟೀಕಿಸಿ ಮಜೂರರು ಸಂಘಟಿತರಾಗಿ ಜನತಾ ರಾಜ್ಯ ಸ್ಥಾಪಿಸಲು ಸುಂದಾಗಬೇಕೆಂದು ಹೇಳಿದರು. ಅಂದಿನ ಸಭೆಯ ಅಧ್ಯಕ್ಷತೆಯನ್ನು ಶ್ರೀ ಎ. ಶಾಂತಾರಾಮ ಪೈಗಳು ವಹಿಸಿದ್ದರು.

ಮಂಗಳೂರು ನಗರ ಸಭೆಯು

ತಾ. 23ರಲ್ಲು ಜರಗಿ ವಸ್ತು ಪ್ರದರ್ಶನವನ್ನು ಪೂರ್ಣ ತಿಂಗಳಲ್ಲಿ ತೆರೆಯಬೇಕೆಂದು ನಿರ್ಧರಿಸಿತು.

ಕೆನರಾ ಹೈಸ್ಕೂಲು ದಿನಾಚರಣೆಯು

ತಾ 25 ರಲ್ಲು ಜಿಲ್ಲಾ ಬೋರ್ಡ್ ಅಧ್ಯಕ್ಷೆ ಡಾ! ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಸಮಿತಿ ಅಧ್ಯಕ್ಷೆ ಡಾ! ಬಿ. ಜಿ. ಸ್ವಭುಗಳು ಶಾಲಾ ಸ್ವಸ್ತಿವಾಚನ ಮಾಡಿದರು ಹೆಡ್ಮಾಸ್ಟರ್ ಶ್ರೀ ಜಿ. ವಾಸುದೇವ ಪೈಗಳು ವರದಿ ವಾಚನ ಮಾಡಿದರು. ಶ್ರೀಮತಿ ಕೆ.ಕೆ. ಹೆಗ್ಡೆಯವರು ಬಹುಮಾನ ವಿತರಣೆ ಮಾಡಿದರು.ಶಾಲಾ ಮೇನೇಜರ್ ಶ್ರೀ ಅಣ್ಣಾಪ್ಪ ಕಾಮತರು ಧನ್ಯವಾದಗಳನ್ನರ್ಪಿಸಿದರು.

ಪೋಷ್ಟಮೆನ್ ಮತ್ತು ಕೆಳತರಗತಿ ನೌಕರರ ಸಂಘದ ಮಹಾ ಸಭೆಯು

ತಾ 26 ರಲ್ಲು ಸಂಘದ ಅಧ್ಯಕ್ಷ ಶ್ರೀ ಬಿ. ಎಸ್. ಭಾಸ್ಕರ ರೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ಜಿಲ್ಲಾ ಪೋಸ್ಟಲ್ ಸುಪರಿಂಟೆಂಡೆಂಟ್ ಶ್ರೀ ಎ.ಕೆ. ಸರಸಿಂಹರಾಯರು ಧ್ವಜಾರೋಹಣ ಮಾಡಿದರು. ಪಾರ್ಸಿಕ ವರದಿವಾಚನ, ಲೆಬ್ಬಪತ್ರ ಪರಿಶೀಲನೆ, ಹೊಸ ವರ್ಷದ ಕಾರ್ಯಕಾರಿ ಸಮಿತಿಯ ರಚನೆಗಳಾದವು. ಇಲಾಖಾ ನೌಕರರ ಸಂಖ್ಯೆಯಲ್ಲಿ ಕಡಿತಮಾಡುವುದನ್ನು ನಿಷೇಧಿಸುವ, ರಾತ್ರಿ ಬಸ್ಸುಗಳಲ್ಲಿ ಕೊಡುತ್ತಿದ್ದ ಟಿಕೆಟ್ ಬೈಲ್ ಬತ್ತೆಯನ್ನು ಪುನಸ್ಥಾಪಿಸುವ ಬಗ್ಗೆ ಕೊಡಬಿದ್ದಲ್ಲಿ, ರಾತ್ರಿ ಬಸ್ಸುಗಳಲ್ಲಿ ನಿಲ್ಲಿಸಲಾಗುವುದೆಸ್ಸುಜ, ಸಮಯದ ರೀತಿಯ ಸಮವಸ್ತ್ರ ಒದಗಿಸಬೇಕೆನ್ನುವ, ಮೈಲು ಮತ್ತು ಇತರ ಬೇದಗಳಿಗೆ ಆದಿತ್ಯವಾರದ ಭತ್ತೆ ಕೊಡಬೇಕೆನ್ನುವ, ಅರ್ಜಿಗಳನ್ನು ಮುಖಾ ಪಾರ್ತೆ ಕೆಲಸದವರಾಗಿ ಉಳಿಯೋಗಿಸಬಾರದೆನ್ನುವ ಇತ್ಯಾದಿ ನಿರ್ಣಯಗಳಾದುವು.

ಮಹಾಸಭೆ ದ. ಕ. ಜಿಲ್ಲಾ ಆದಿವಾಸಿ ಬಪ ಯಾನೆ ಮಾದಿಗ ಸಮಾಜದ ಮಹಾ ಸಭೆಯು ತಾ. 23ರಲ್ಲು ಶ್ರೀ ಕೆ. ಅಣ್ಣಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಸಮಾಜದ ಸದಸ್ಯರೆಲ್ಲರೂ ಚರ್ಮಾಗ ಕೆಲಸದಿಂದಲೇ ಜೀವನ ಸಾಗಿಸುವುದರಿಂದ ತಮ್ಮ ಜೀವನೋಪಾಯಕ್ಕಾಗಿ ವೇಟೆಯ ಸಾಗದ ಬದಿಯಲ್ಲಿ ಸಾರ್ವ ಜನಿಕರಿಗೆ ಉಪದ್ರವವಾಗದಂತೆ ಕಸುಬು ನಡೆಸಲು ಅನುಮತಿ ಕೊಡುವಂತೆ ಜಿಲ್ಲಾ ಕಲೆಕ್ಟರ್, ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟ್ ಮತ್ತು ನಗರ ಸಭೆಯ ಅಧ್ಯಕ್ಷರನ್ನು ವಿನಂತಿಸಿಕೊಳ್ಳುವ ಇತ್ಯಾದಿ ನಿರ್ಣಯಗಳಾದುವು. ಮುಂದಿನ ವರ್ಷಕ್ಕೆ ಕಾರ್ಯಕಾರಿ ಸಮಿತಿ ಸದಸ್ಯರ ಚುನಾವಣೆಯೂ ನಡೆಯಿತು.

ಕೆಲವು ಉತ್ತಮ ಪುಸ್ತಕಗಳು.

ಬದುಕು ಬಂಗಾರ (ಕುಮಾರಸ್ವಾಮಿ)	1	8
ಯುಗವಾಣಿ (ಕು. ಶಿ. ಹರಿದಾಸಭಟ್)	0	8
ಭಂಟಿಮಾರಾ (,,)	2	0
ಏಕಿಯದ ಸಂಪತ್ತು (,,)	2	0
ಪ್ರಜಾಪ್ರಭುತ್ವವನ್ನು ಕುರಿತು (ನೆಹರೂ ಕಾರಂತ)	0	8
ಅಂತರಂಗದ ಕತೆಗಳು (ಸಂಕಲನ)	1	4
ಸ್ವಪ್ನಲೋಕ (ಕಾರ್ಕಿಕೋಮ)	0	8
ನೀತಿವಿನೋದ ಕತೆಗಳು	0	12
ಸೇನಾಪಥ (ಸೇಂಟ್ ಗೊಪಿರಾಜ್)	0	8
ಸರಸ್ವತಿ (ಡಾ! ಎಂ. ಮಾಧವಾಚಾರ್ಯ)	0	12
ಗೀತೆಯ ಕೈಗನ್ನಡಿ (ಚಿದಂಬರಯ್ಯ)	0	8
ಭಾರತದ ಕರ್ಣ (ಎಸ್. ಎಸ್. ಕಿರ್ಲೋ)	0	0
ಪ್ರಾಚೀನ ತುಳುನಾಡು (,,)	2	0
ಮೂರಲಿ (,,)	0	12
ಮಧುಪರ್ಕ (ಸಂಕಲನ)	3	0
ಕಾಸ್ಯಾನಾಸ್ವಾಜ್ಯ (,,)	1	8
ರಸಗಳ ಸಾಗಾಟ (ಕೆಳ್ಳ ಪೆಟ್ಟಿ)	0	10
ಕವಿತಾಕಾಮಿನಿ (ಎಸ್. ವೆಂಕಟರಾಜು)	2	0
ಲೆಕ್ಕಾದಗಳಿಗೆ	1	13
ಜೀವನ ಸಂಗ್ರಾಮ (ಪಿ ಶೇಷ ಶೆಟ್ಟಿ)	1	8
ದೇಶಭಕ್ತ (ಕೆ. ಕೆ. ಶೆಟ್ಟಿ)	1	4
ಪ್ರೇಮವಿಜಯ ,,)	1	0

ಪಾಟಿಟವು ಬೇಕು. ಕರ್ಚಗಳಿಗೂ ನಮ್ಮಲ್ಲಿ ಹೊರೆಯನ ಎಲ್ಲಾ ಕವಿಗಳ ಪುಸ್ತಕಗಳ ಕೆಟಲಾಗಿಗೂ ಬರೆದಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಈಚೆಗೆ ಚೀನಾ ಪ್ರವಾಸವನ್ನು ಕೈಕೊಂಡ ಪಂಡಿತ ನೆಹರೂವರು, ವಿಮಾನದ ಯಾನ ಲಾವಸ್ ಇವರ ರಾಜಕುಮಾರ ಸತ್ಕಾರ್ ವಸ್ತ್ರವೊಡನೆ ಸರಸ ಸಲ್ಲಾಪ ನಡಾಯುತ್ತಿರುವರು.

ಯೋಸ ಪುಸ್ತಕ!

ಶ್ರೀಮತಿ ಕೆ. ದೇವಕಿ ಎಂ. ಶೆಟ್ಟಿಯವರು ಬರೆದಿರುವ.
ವಿನೋದದೊಡನೆ ವಿಚಾರವನ್ನೂ ಪ್ರಚೋದಿಸುವ
ನಕ್ಕು ನಗಿಸುವ ಆರು ನಗೆನೋಟಗಳು—

ನಕ್ಕಲು ನಗಿಸಿದವು

ಯನುನನ್ನು ನೋಲಿಸಿದ ವೀರ ರಮಣಿ, ಹತ್ತು ಪುಸ್ತಕಗಳಿಂದ ಹತ್ತು ಜಾರಾ ಕದ್ದು ಪೋಣಿಸಿದ ಸಾಹಿತಿ ಇವರ ಚಿತ್ರವನ್ನೂ ಅಕ್ಕಸಕ್ಕರ್ಯವ ಮನೆಯವರ ಕಾಟ ಕೂಟದ ಮರ್ಮವನ್ನೂ, ನಿಶ್ಚೈಸಿದ್ದು 25 ಸಾವಿರ ವರವಕ್ಷಿಣೆ, ಸಿಕ್ಕಿದ್ದು ಬರೇ ವಧುವಕ್ಷಿಣೆ ಇದರ ಚಮತ್ಕಾರ ವೈಖರಿಯನ್ನೂ ತಿಳಿಯಬೇಕೇ-ಹಾಗಿನ್ನೆದೆ ಇಂದೇ ಪ್ರತಿಯೊಂದನ್ನು ತರಿಸಿಕೊಳ್ಳಿರಿ. ಬೆಲೆ: 0—1೦—0

ಕಿರಿಯರ ಪ್ರಪಂಚ, ಉಡುಪಿ. ನವಭಾರತ ಪುಸ್ತಕ ಭಂಡಾರ,ಉಡುಪಿ.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ನಾರಿ ಏಳು ದಿವ್ಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವ ದಿಲ್ಲ. ಗರ್ಭ ಇದ್ದವರು ಸೇವಿಸಿ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫—೮—೦ .... ಪೋಸ್ಟು ಖರ್ಚು ರೂ. ೦—೧೪—೦

—:ವಿಳಾಸ:—

ಹಾಲಪ್ಪಾ ಡಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಭಾಧಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ.8/-

Mrs. P. DEVEE, F. Ds. (N. J.) (ವಿ. ಪಿ. ಪಿ. ಪ್ರತ್ಯೇಕ)

CALCUTTA—40 ಖ್ಯಾತಿಸ್ಥರು: ರಹಾಕಂಪೆನಿ,ಮಂಗಳೂರು

ಅವ್ಯೂರ್ವ] ಗೀತಾ ಭಾಷ್ಯ, ಗೀತಾ ತಾತ್ಪರ್ಯ ಸಹಿತ [ಗ್ರಂಥ

ಶ್ರೀಮದ್ಭಗವದ್ಗೀತೆಯ ಕನ್ನಡ ಅನುವಾದ

ಭಾಗಗಳು ೧-೨-೩ ಬೆಲೆ ರೂ. ೧೫ ಅಂಚೆ ವೆಚ್ಚ ರೂ ೨-೮-೦ ಪ್ರತ್ಯೇಕ

ಶ್ರೀ ಮಧ್ವಾಚಾರ್ಯರ ಗ್ರಂಥಗಳಲ್ಲಿಲ್ಲ ಕನ್ನಡದಲ್ಲಿ ಅನುವಾದ ಮಾಡಿ ಪ್ರಸಿದ್ಧ ಪಡಿಸಿತ್ತಿರುವ ಉಡುಪಿಯ ಶ್ರೀ ಮದ್ವಮುನಿ ಸೇವಾ ಸಂಘದವರು ಪ್ರಕಟಿಸಿದ ೩೦ನೇ ಗ್ರಂಥವಿದು. ತೀರ್ಥರು ಮೂರನೆ ಶ್ರೀಮಜ್ಜಿತ್ಸುಖೋಮ್ರತೀರ್ಥರವರ ಕನ್ನಡ ಮತ್ತು ಡಾ. ಬಿ. ಎನ್. ಕೃಷ್ಣಮೂರ್ತಿ ಶರ್ಮಾ ಎಂ. ಎ. ಪಿ. ಎಚ್. ಡಿ. ಇವರ ಇಂಗ್ಲಿಷ ಪ್ರಸ್ತಾವನೆ ಮತ್ತು ಶ್ರೀ ನಾರಾಯಣ ತಂತ್ರಿಯವರ ಕನ್ನಡ ಅನುಕಾಂಡ. ಸಂಗ್ರಾಹ್ಯ ಗ್ರಂಥ ರೂ. 17—6—0 ಕಳಿಸಿ ಕೂಡಲೇ ತರಿಸಿಕೊಳ್ಳಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

BHUVANENDRA PRODUCTS LTD., KATAPADI, S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ಬರೆಯಿರಿ.—

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ. ಕ.

ಡಿಪೋ:- (1) ಉಡುಪಿ (2) ಮರಾತ ಗಲ್ಲಿ, ಹುಬ್ಬಳ್ಳಿ.

(೩ನೇ ಪುಟದಿಂದ)

ಕೊಳ್ಳುವರು. ಈಗಿರುವ ಪೆಪಲಿ, ಮುಂಬಯಿ, ಮದ್ರಾಸು ಮತ್ತು ಕಲ್ಕತ್ತೆಗಳಿಂದ ನಾಲ್ಕು ಪ್ರಮುಖ ಸ್ವಾಸ ಕೇಂದ್ರ ಕಾರ್ಯಾಲಯಗಳ ಹೊರತಾಗಿ ಮಧ್ಯ ಪ್ರದೇಶ, ವಿಂಧ್ಯ ಪ್ರದೇಶ, ಮಧ್ಯ ಭಾರತ ಮತ್ತು ರಾಜಸ್ತಾನಗಳಿಗೊಸ್ಕರ ನಾಗಪುರ ಅಥವಾ ಭೋಪಾಲಗಳಲ್ಲಿ ಐದನೆಯ ಕಾರ್ಯಾಲಯವನ್ನು ತೆರೆಯುವುದು ಸರಕಾರದ ಉದ್ದೇಶ.

ವರ್ಷಕ್ಕೆ ಸುಮಾರು ಮೂವತ್ತು ಸಾವಿರ ಮಂದಿ ವಿದೇಶೀಯರು ಇಲ್ಲಿಗೆ ಬಂದು ಕೆಲವು ಕೋಟಿ ರೂಪಾಯಿಗಳ ವ್ಯಾಪಾರವನ್ನು ಮಾಡಿ, ನಮ್ಮ ವಿದೇಶ ವಿನಿಮಯ ವ್ಯವಹಾರವು ಸುಧಾರಿಸಲ್ಪಡುವುದಕ್ಕೂ ಇಲ್ಲಿಯ ಸಂಪತ್ತು ಹೆಚ್ಚುವುದಕ್ಕೂ ಕಾರಣರಾಗಿರುವರೆಂದು ತಿಳಿದು ಬರುತ್ತದೆ. ಇದಲ್ಲದೆ, ನಮ್ಮ ಜನರಲ್ಲಿಯೇ ಸನಾತನಿಗಳಾದವರು ತೀರ್ಥಕ್ಷೇತ್ರಗಳ ಯಾತ್ರೆಯನ್ನು ಕೈಗೊಳ್ಳುವ ಮೂಲಕ ವಸ್ತು ತರುಣ-ತರುಣಿಯರು ಭಾರತದ ಸಾಂಸ್ಕೃತಿಕ ಪರಿಚಯವನ್ನು ಮಾಡಿಕೊಳ್ಳುವ ಹಾಗು ವಿಹಾರ ಕೇಂದ್ರಗಳಿಂದ ಆಹ್ಲಾದಗೊಳ್ಳುವ ಉದ್ದೇಶದಿಂದ ಮಾಡುವ ತಿರುಗಾಟದ ದೆಸೆಯಿಂದ ಸಾಕಷ್ಟು ಹೆಚ್ಚು ಆದಾಯವು ಸರಕಾರದ ಬೊಕ್ಕಸಕ್ಕೆ ಸೇರುತ್ತದೆ. ಆದುದರಿಂದ ಸರಕಾರದವರು ಪ್ರಾಕೃತ ಬಂಡವಾಳವು ಮುಳುಗಿಹೋಗುವ ಭಯವೇನೂ ಇಲ್ಲ-ಮೊನ್ನೆ ಜಪಾನು ಪರಿಷತ್ತಿನಲ್ಲಿ ಗೊತ್ತಾದಂತೆ, ಮಡಿಕೇರಿ, ಶ್ರವಣಬೆಳಗೊಳ, ಹಂಸೆ, ಹಳೇಬೀಡು, ಬೇಲೂರು, ಜೋಗದ ಜಲಪಾತ, ಮೈಸೂರು ಮತ್ತು ತಿರುಕೊಚ್ಚಿಯ ವನ್ಯ ಮೃಗ ಪ್ರದೇಶಗಳು, ಕುಲು ಕಣಿವೆ, ಅಜಂತ ಮತ್ತು ಎಲ್ಲೋರದ ಗುಹೆಗಳು, ಮಧುರೆ, ರಾಮೇಶ್ವರ, ಕಾಂಚಿ, ಮಹಾಬಲಿಪುರ, ಉದಯಪುರ, ಚಿತ್ತೂರು, ಜುನಾಗಡ, ಸೋಮನಾಥ, ಶಾಂತಿನಿಕೇತನ, ದಾರ್ಜಲಿಂಗ್ ಮತ್ತು ನೈನಿತಾಲ್ ಮುಂತಾದ ಆಂ ಕೇಂದ್ರಗಳಲ್ಲಿ ಪ್ರವಾಸಿಕರಿಗೆ ಒಳ್ಳೆಯ ಸೌಕರ್ಯ ಸಿಗುವಂತೆ ವ್ಯವಸ್ಥೆಯಾಗುತ್ತದೆ. ನಾವು ಇಪ್ಪಗಳಲ್ಲಿ ನೋಡಿರಬಹುದಾದ ಕೇಂದ್ರಗಳು ಕೈ ಬೆರಳಿಂದೆಣಿಸುವಷ್ಟೂ ಇರಲಿಕ್ಕಿಲ್ಲ. ಊರಿನ ಕೇಂದ್ರಗಳ ಮಹತ್ವವನ್ನು ತಿಳಿದ ಬಳಿಕ ನೆನೆ ನಾಡಿನ ಮಹತ್ವದ ಸ್ಥಳಗಳನ್ನು ನೋಡಬೇಕೆಂಬ ಕುತೂಹಲ ನಮ್ಮಲ್ಲಿ ಕೆರಳುವುದು ಸ್ವಾಭಾವಿಕ.

ವಿದೇಶೀಯರಿಗೆ ಹೇಗೋ ಹಾಗೆ ಭಾರತೀಯರಿಗೂ ಪ್ರವಾಸ ಸೌಕರ್ಯಗಳು ಚೆನ್ನಾಗಿ ದೊರೆತ ಪಕ್ಷದಲ್ಲಿ ಪ್ರವಾಸಹೊರಡುವವರಿಗೆ ಧೈರ್ಯ ಬರುತ್ತದೆ. ಉದಾಹರಣೆಗೆ, ಜೋಗದ ಜಲಪಾತವನ್ನು ಹುಣ್ಣಿಮೆಯ ರಾತ್ರಿಯಲ್ಲಿ ನೋಡಿ ಆನಂದಿಸಬಯಸುವವರಿಗೆ ಆಸ್ಥಳದಲ್ಲಿರಾತ್ರಿ ಉಳಕೊಳ್ಳುವುದಕ್ಕೆ ಯೋಗ್ಯ ವಸತಿ ಇರದಿದ್ದರೆ ಆಗುತ್ತದೆಯೆ? ಆದರೆ ಈಗ ಚಿಲ್ಲರುವ ನಾಲ್ಕಾರು ಕೋಣೆಗಳನ್ನು ಬಿಟ್ಟರೆ, ಬೇರೆ ಜಾಗವೇನೂ ಇಲ್ಲ; ಹೋಟೆಲುಗಳಿರುವುದು ಐವತ್ತೈಲು ದೂರದ ನಾಗರದ ಟ್ಲಿಹೀಗಿರುವಾಗ ಕ್ರಿಸ್ ಮಸ್ ರಜೆಯಲ್ಲಿ ತಿರುಗಾಡಲು ಹೊರಟ ೫೫ ವಿದ್ಯಾರ್ಥಿಗಳ ತಂಡ ರಾತ್ರಿಯನ್ನು ಊಟವಿಲ್ಲದೆ ಮರದಡಿಯಲ್ಲಿ ಮಲಗಿ ಕಳೆಯಬೇಕಾಗುತ್ತದೆ ಇಂಥ ಅನಾನುಕೂಲತೆಗಳನ್ನು ಹೋಗಲಾಡಿಸುವಕಡೆಗೆ ಸರಕಾರದವರು ತೀವ್ರ ಗಮನ ಕೊಡುತ್ತಿರುವರೆಂಬದು ಸಂತೋಷ ಇದಂತೆ ಸಚಿತ್ರ ವಿವರಣ ಪುಸ್ತಕಗಳನ್ನು ದೇಶಭಾಷೆಗಳಲ್ಲಿ ಪ್ರಕಟಿಸುವುದಕ್ಕೂ ಸರಕಾರ ಪ್ರಯತ್ನಿಸಬೇಕು — ಜೋಗದ ಜಲಪಾತದ ಚಾರಿತ್ರಿಕ ಅಂಶಗಳನ್ನು ತಿಳಿಸುವ ಜನರಾಗಲೀ ಪುಸ್ತಕಗಳಾಗಲೀ ಇಲ್ಲವೆ ಹೋದರೆ ಬೀಳುವ ನೀರಿನ ಚೆಲುವನ್ನು ಕಂಡಷ್ಟಕ್ಕೆ ಯಾರಿಗೂ ಪೂರ್ಣ ತೃಪ್ತಿ ಒದಗಲಾರದು. ಭವ್ಯಾವತಿಯ ಕಾರ್ಖಾನೆಯನ್ನು ಸಂದರ್ಶಿಸುವ ತಮಿಳರಿಗೆ ಹಿಂದಿಯಲ್ಲಿ ಕಾರ್ಯಕ್ರಮಾಪಗಳನ್ನು ವಿವರಿಸುವ ಮಾರ್ಗದರ್ಶಕನಿಂದ ಏನೂ ಪ್ರಯೋಜನ ಸಿಗದು. ಇಂಥ ನ್ಯೂನಾತಿರೇಕಗಳನ್ನು ಸರಿಪಡಿಸುವುದರ ಜೊತೆಗೆ ವಿದೇಶಿಗಳಿಂದ ಬರುವವರು ಆನುಸರಿಸಬೇಕಾದ ಶಾಸನಬದ್ಧ ವ್ಯವಹಾರಗಳ ಸಂಕೀರ್ಣತೆಯನ್ನು ಕಡಿಮೆಗೊಡುವುದೂ ಹಿತಕರ.

ಸ್ವೀಕಾರ-ವಿಮರ್ಶೆ

(ಏನುರ್ಕಿಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. --ಸಂ. ನ.)

ಇತಿ-ಶ್ರೀ—

ಬರೆದವರು: ನರಸರಾಜ ಹುಯಿಲಗೋಳ. ಪ್ರಕಾಶಕರು: ಪ್ರತಿಭಾ ಗ್ರಂಥಮಾಲೆ, ಧಾರವಾಡ. ಬೆಲೆ: ರೂ. ೧—೪—೦.

ಕಳಸಾಪೂರದ ಜಾಗಿರದಾರ ಕೃಷ್ಣರಾಯರ ಮನೆಗೆ ಸಾಮಾನ್ಯ ಸದ್ಗೃಹಸ್ಥ ಸಂಜೀವರಾಯರ ಮಗಳು ಲಕ್ಷ್ಮಿಯು ನಾರಾಯಣರಾಯನ ಸಧರ್ಮಾಗಿ ಬಂದಳು. ಹೀಗೆ ಬಡಮನೆಯೊಬ್ಬಳು ಶ್ರೀಮಂತರ ಸೊಸೆಯಾಗಿ ಸುಖಲಕ್ಷ್ಮಿಯಾಗುವುದಕ್ಕೆ ಶೀನಪ್ಪನವರ ಚಾತುರ್ಯವೇ ಕಾರಣ. ಅವರ ಹಿನ್ನೆಲೆ ಏನೆಂಬುದು ಲಕ್ಷ್ಮಿಗೆ ಕ್ರಮೇಣ ಮನಸಾರಿಕೆಯಾಗತೊಡಗಿತು. ಆವಳಿಗೆ ತನ್ನ ಪತಿ ಮತಿ ಭ್ರಾಂತನೆಂದೂ ಮೂರ್ಖನೆಂದೂ ತಿಳಿಯಿರಲಿಲ್ಲ, ಶೀನಪ್ಪನವರು ತನ್ನ ಸಹವಾಸವನ್ನು ಬಯಸುತ್ತಿರುವರೆಂದೂ ನೇರ ಮಾಯಿತು. ಪರಿಸ್ಥಿತಿ ಇಷ್ಟು ವಿಷಮವಿದ್ದರೂ ಆವಳು ನೆದ್ಗೃಹಿಣಿಗೆ ಉಚಿತವೆನಿಸಿದ ರೀತಿಯಲ್ಲಿ ಗಂಡನನ್ನು ಸೇವಿಸಿ, ಒಲಿಸಿಕೊಂಡಳು; ಆತನ ಹುಚ್ಚನ್ನು ದೂರಮಾಡಿದಳು; ಶೀನಪ್ಪನವರನ್ನು ತಿರಸ್ಕರಿಸಿದಳು. ಇದರಿಂದ ಆಪಾಯ ಮಾತ್ರ ಹೆಚ್ಚು ನಿಕಟವಾಯಿತು—ಕೃಷ್ಣರಾಯರ ನಿಧನದ ಬಳಿಕ ಅವರೆ ಮಕ್ಕಳು ತಂತ್ಯನಿಧನ ತಾಯಿ ಸುಬ್ಬಕ್ಕನವರ ಮುಂದೆಯೇ ಆಸ್ತಿಯನ್ನು ಪಂಚಿಕೊಳ್ಳಲು ಕಚ್ಚಾಡಿದರು. ನಾರಾಯಣರಾಯನಿಗೆ ಮೋಸವಾಗಬೇಕೆಂಬುತೀನಪ್ಪನವರು ಬಯಲತಂತ್ರಗಳನ್ನು ಹೂಡಿದರು. ಲಕ್ಷ್ಮಿ ಇವುಗಳನ್ನು ಪ್ರತಿಭಟಿಸಲು ಸಿದ್ಧಳಾಗಿ ತನ್ನ ಬಾಲ್ಯದ ಗೆಳತಿ ಶಾಂತಳ ಗಂಡ ವೆಂಕಟೇಶನನ್ನು ಆಸ್ತಿಯ ಕಾರುಭಾರು ನೋಡಿಕೊಳ್ಳಲು ನೇಮಿಸಿದಳು. ಆಗಲೆ ಆವಳಿಗೆ ಇನ್ನಷ್ಟು ಭಿಕರ ಆಪವಾದ ಇಪರಿಂದ ಬಂದೊದಗಿತು—ಶೀನಪ್ಪನವರ ಕುಟಿಲತೆಯಿಂದ ವೆಂಕಟೇಶನ ಮೆಯ ಮೇರೆ ಲಕ್ಷ್ಮಿಯು ಪ್ರಜ್ಞೆ ಇಲ್ಲದೆ ಬಿದ್ದಿರುವ ಆಸಹ್ಯ ದೃಶ್ಯವನ್ನು ಸುಬ್ಬಕ್ಕನೂ ಶಾಂತಳೂ ಎಲ್ಲರೂ ಕಾಣುವಂತಾಯಿತು. ಮಗಳು ಮನೆತನವ ಮರ್ಯಾದೆ ಕೆದಿಸಿದಳೆಂದು ತಂದೆ ಕುಪಿತಗೊಂಡರು—ತನ್ನವರಿಂದಲೇ ತಿರಸ್ಕೃತಳಾದ ಲಕ್ಷ್ಮಿ ಇವಕ್ಕೆ ಕಾರಣಭೂತರಾದ ಶೀನಪ್ಪನವರನ್ನು "ನಾನಾಗಿಯೇ ಬಂದಿದ್ದೇನೆ, ಆಪ್ಪಿಕೊಳ್ಳಿರಿ" ಎಂದು ಹೇಳುತ್ತಾ ತಿವಿದು ಕೊಂಪು, ತಾನೂ ಆತ್ಮ ಹತ್ಯೆ ಮಾಡಿಕೊಂಡಳು. ಇಷ್ಟು ಕತೆಯನ್ನು ಬಾಳ ಸ್ವಾರಸ್ಯಪಾದ ರೀತಿಯಲ್ಲಿ ಲೇಖಕರು ವಿವರಿಸಿದ್ದಾರೆ; ಆವರು ಹೆಣೆದ ಸಂಭಾಷಣೆ ಮರಾಠಿಗೆ ಒತ್ತುತ್ತಿದ್ದರೂ ಜಾಗಿರದಾರ ಕುಟುಂಬದ ವಾತಾವರಣಕ್ಕೆ ಅದು ಒಪ್ಪುತ್ತದೆ. ಆದು ಮರಾಠಿ ಮಾತಿನ ವೈಶಿಷ್ಟ್ಯದಂತೆ ಕಾಣುತ್ತದೆ. ಪಾತ್ರ ಚಿತ್ರಣಗಳು-ಆವರೆಲ್ಲೂ ಲಕ್ಷ್ಮಿಯದು-ಚೆನ್ನಾಗಿ ಬಂದಿವೆಯೆಂದು ಹೇಳಬಹುದು. ಆದರೆ, ಮಗಳ ವಿವರಣೆಯನ್ನು ಕೇಳಿ ಕೊಳ್ಳುವಷ್ಟು ತಂದೆ ಯಾಪಪನು ತಾಳ್ಮೆತೋರಿಸದಿರುವುದು ಮತ್ತು ಶೀನಪ್ಪನವರ ಮೇಲೆ ಮುಯ್ಯಿ ತೀರಿಸಲು ಲಕ್ಷ್ಮಿ ಕೆಟ ಬದ್ಧಳಾಗಿ ಕೊಲೆಗೈಯುವುದು ಅಷ್ಟು ಸಮಂಜಸವೆನಿಸುವುದಿಲ್ಲ. ಇವನ್ನು ಹೊರತು ಪಡಿಸಿದರೆ, ಕತೆಯ ವಸ್ತುವಿನಲ್ಲಿ ಹೊಸತನವೂ ಸೃಜಕಲಪದಲ್ಲಿ ಧೈರ್ಯಗೆಡದೆ ಒಳ್ಳೆಯದಕ್ಕಾಗಿ ಪ್ರಯತ್ನಿಸಬೇಕೆಂಬ ಬುದ್ಧಿವಾದವೂ ಕಾದಂಬರಿಯ ಬೆರೆಯನ್ನು ಹೆಚ್ಚಿಸುತ್ತವೆ.

ಕನ್ನಡ ಗೀತಾಂಜಲಿ (ಭಾಗ ೨)—

ಅನುವಾದಕರು: ನರೇಗಲ್ಲ ಪ್ರಲ್ಹಾದ ರಾಯರು. ಪ್ರಕಾಶಕರು: ಮಿಂಚಿನ ಬಳ್ಳಿ ಕಾರ್ಯಾಲಯ, ಧಾರವಾಡ. ಬೆಲೆ: ರೂ. ೧ ೦-೦.

ವಿಶ್ವಕವಿ ರವೀಂದ್ರರ "ಗೀತಾಂಜಲಿ" ನಿಜಾನಂದವನ್ನು ಅನುಭವಕ್ಕೆ ತಂದುಕೊಡುವ ಕಾವ್ಯಗಳ ಅಮೂಲ್ಯ ಸಂಗ್ರಹವೆಂದು ಘೋಷಿಸಿಕೊಂಡೇ ಕೊಡುತ್ತಿದೆ. ಭಾರತದ ಸಂಸ್ಕೃತಿಗೆ ತಕ್ಕುದಾದ ರೀತಿಯಲ್ಲಿ ಸೌಂದರ್ಯದಿಂದ ಕಲ್ಪನೆಯನ್ನು ಅಂತಃಕರಣದ ಶುದ್ಧಿಗೆ ಬೆಳಕಿನಂತೆ ಕವೀಂದ್ರ ರವೀಂದ್ರರು ಯಶಸ್ವಿಯಾಗಿ ಉಸಯೋಗಿಸಿ ಕೊಂಡರು. ಆವರ ಕವಿತೆಗಳ ಪ್ರತಿಯೊಂದು ಸಾಲು ಪೂರ್ಣಯನ್ನು ಸೂಸುತ್ತ ದೆಯಲ್ಲದೆ, ಸಾತ್ವಿಕ ಭಾವನಸರಾಷ್ಟ್ರೀಯತೆಯನ್ನೂ ವ್ಯಕ್ತಪಡಿಸುತ್ತದೆ. ಎಲ್ಲರೂ ಎಲ್ಲಕಾಲಕ್ಕೂ ತಾಳ, ರಾಗ ಹಾಗು ಲಯಬದ್ಧವಾಗಿ ಪಾಡಿಕೊಂಡು ದಿವ್ಯಸನ್ನಿಧಿಯ ಸಿಂಚ ಜೋಕದೆ ದರ್ಶನದಿಂದ ಪುಳಕಿತರಾಗಿ ಆತ್ಮೋಲ್ಲಾಸ ಪಡೆಯುವುದಕ್ಕೆ ಆವರ ಕವನಗಳಿಂದ ಬಹಳ ನೆರವು ಸಿಗುತ್ತದೆ. ಹೀಗೆ ಪ್ರಣಯಿಗಳಿಂದ ಹಿಡಿದು ಮುಮುಕ್ಷುಗಳ ವರೆಗೆ ಎಲ್ಲರೂ ಆಸ್ವಾದಿಸ ಬಹುದಾದ ಗೀತೆಗಳನ್ನು ರಚಿಸಿದ ರವೀಂದ್ರರ ಕೌಶಲಕ್ಕೆ ನಾವು ತಲೆದೂಗುವುದು ಸಹಜ--ಇದೇ ರೀತಿಯ ಮೆಚ್ಚಿಗೆಯನ್ನು ಕನ್ನಡದಲ್ಲಿ ಅನುವಾದಮಾಡಿದ ನರೇಗಲ್ಲರ ಇವ್ಯಪ್ರತಿಭೆಯ ಕುರಿತಾಗಿಯೂ ವ್ಯಕ್ತಪಡಿಸಬೇಕಾಗುತ್ತದೆ. ಏಕೆಂದರೆ,-'ಗೀತಾಂಜಲಿ'ಯ ಅನುವಾದವನ್ನು ಬೇರೆ ಭಾಷೆಗಳಲ್ಲಿ ಗದ್ಯರೂಪದ ಟ್ಲಿಯಲ್ಲಿ ಒಡಗಿಸಿಕೊಟ್ಟರೆವಾಗ, ಕನ್ನಡದಲ್ಲಿ ಕಾವ್ಯಾನುವಾದವನೇ ನರೇಗಲ್ಲರ ಪ್ರಯತ್ನದಿಂದ ದೊರಕರಿರುತ್ತದೆ. ಸ್ವತಂತ್ರ ಸೃಷ್ಟಿಗಿಂತಲೂ ಅನುವಾದ ಕಾರ್ಯ ಕಠಿಣವಾದುದೆಂದೂ ಆ

(೧೫ನೇ ಪುಟ ನೋಡಿರಿ)

ಕುಂದಾಪುರ ಡಿ. ಮುನ್ಸೀಫ್ ಕೋರ್ಟಿನಲ್ಲಿ

O. P. 50/54.

1. ಮುಕಾಂಬು-ಅಂಣಪ್ಪ ಬಳಿಗಾರನ ವಿಧವೆ.

2. ಮೈನರ್ ಮಹಾಬಲ 3. ಮೈನರ್ ನಾರಾಯಣ 4. ಮೈನರ್ ಮುಚ್ಚಿಂದ್ರ 5. ಮೈನರ್ ಸಂಜೀವ 6. ಮೈನರ್ ಸದಾನಂದ 7. ಮೈನರ್ ಮೋಪನ-ಸದ್ರಿ ಅಂಣಪ್ಪ ಬಳಿಗಾರನ ಮಕ್ಕಳು ಕ್ಷೇಪು ಚಿಂತಳು ತ್ಯಾ 1ನೇ ಆರ್ಜಿದಾರರು, ಕುಂದಾಪುರ ಕ್ಸಬಾಗ್ರಾಮ.

ಎದ್ರಿರು ಯಿಲ್ಲ.

ಆರ್ಜಿದಾರರ ಕಡೆಯಿಂದ ಈ ಮೂಲ್ಕ ಜಾಹೀರವಾಡಿಕೊಳ್ಳುವದೇನೆಂದ್ರೆ

1ನೇ ಆರ್ಜಿದಾರಳ ಗಂಡನ ೫೦೦ ನೇವರೇಗಿನ ಆರ್ಜಿದಾರರ ತಂದೆ ಮೃತ ಅಂಣಪ್ಪ ಬಳೆಗಾರನಿಗೆ ದಿ. ಟ್ರಾಂಪಿಕಲ್ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್, ನ್ಯೂಯಾರ್ಕಿಲ್ಲಿಯಿದ್ದಲ್ಲಿ ಪೊಲಿಸಿ ನಂಬ್ರ 16804 ಕ್ಕೆ ರೂ. 1000-0-0 ಪೊಲಿಸಿ ಬಾಬ್ತು ಸಾಧಾರಣ ರೂ 800-0-0 ಬರತಕ್ಕದ್ದನ್ನು ವಸೂಲುಮಾಡುವರಿ ತಮಗೆ ಸರ್ಟಿಫಿಕೇಟು ಕೊಡಿಸಬೇಕಾಗಿ ಆರ್ಜಿದಾರರು ಕೊಟ್ಟಿರ್ಜಿಯು ತಾರೀಕು 6—1—55ಕ್ಕೆ ತಸ್ದೀಗಯಿಟ್ಟಿದೆ. ಆ ಕಂಪನಿಯು ಯಾರಿವ್ವಾದರೂ ಆಕ್ಷೇಪವಿದ್ರೆ ಸದ್ರಿದಿನ್ನ ಪಗ್ಲು 11 ಗಂಟೆಗೆ ನೇಲ್ಕುಂಡಕೋರ್ಟಿನಮುಂದೆ ಸ್ವತಹಾ ವ ವಕೀಲರ ಮ್ಹಾರಾ ಹಾಜ್ರಾಗಿ ಜಾಹೀರ್ ಮಾಡಿಕೊಳ್ಳತಕ್ಕದ್ದು ತಪ್ಪಿದ್ರೆ ಸೈರಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ಈ ಮೂಲ್ಕ ತಿಳಿಯಪಡ್ಸಿಯದೆ.

M. Anthaya Shetty'
Advocate for Petitioners.
Kundapur Date 22—12—54.

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !

"ರಿಕರಿಂಗ್" ರೇವಣಾತಿ.

ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ನೇಕಡಾ 4½%.

ಬಡವ ಬಲ್ಲಿದನೆಂಬ ಭೇದವಿಲ್ಲದ ಪ್ರತಿಯೊಬ್ಬನಿಗೂ ! ಅನುಕೂಲವಾದ ಯೋಜನೆ.

ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ.

ದಿ ವಿಜಯ ಬೇಂಕ್ ಲಿಮಿಟೆಡ್.

In The Court of The District Munsif of Mangalore.

R. E. P. No. 237/1954.
(O. S. 39/1953 Udipi)

Between:

The Pangal Nayak Bank Ltd., Udipi. —Petitioner.

And

Irmady Raghurama Shetty. —Respondent.

NOTICE

To

Irmady Raghurama Shetty, nephew of I. Narayana Shetty, residing in C. S. Tauros Building, Kankanady, Mangalore. 2.

Please take notice that the above execution petition, filed by the Petitioner against you for sale of the movables(Gold bangles etc) as shown in the sale papers filed into court, now stands posted to 12-1-1955 for sale notice. Should you fail to appear on that date either in person or through a lawyer, the case will be heard in your absence.

(By order of the court)

Sd. U. Vishwanath,
B A., LL. B.,
Advocate for Petitioner.

Mangalore, Dated 20-12-54.

ಭಾರತದಲ್ಲಿ ಹತ್ತಿಯ ಅಭಿವೃದ್ಧಿ ಕಾರ್ಯ

(೨ನೇ ಪುಟದಿಂದ)

ಈಜಿಪ್ಟ್‌ನಲ್ಲಿ ಎಕರೆಗೆ ಸರಾಸರಿ ೭೦೯ ಪೌಂಡುಗಳೂ, ಸೂಡಾನ್‌ನಲ್ಲಿ ೩೨೦ ಪೌಂಡುಗಳೂ, ಅಮೆರಿಕಾದಲ್ಲಿ ೪೬೭ ಪೌಂಡುಗಳೂ, ಪಾಕಿಸ್ತಾನದಲ್ಲಿ ೧೫೭ ಪೌಂಡುಗಳೂ, ಬ್ರೆಜ್ಜಿಲ್‌ನಲ್ಲಿ ೧೭೦ ಪೌಂಡುಗಳು ಹತ್ತಿಯನ್ನು ಪ್ರತಿ ಎಕರೆಗೆ ಬೆಳೆದರೆ ನಮ್ಮ ದೇಶದಲ್ಲಿ ಸರಾಸರಿ ಪ್ರತಿ ಎಕರೆಗೂ ೮೦ ರಿಂದ ೧೮೦ ಪೌಂಡುಗಳ ವರೆಗೂ ಹತ್ತಿಯನ್ನು ಬೆಳೆಯಲಾಗುತ್ತಿದೆ ಸೀರಾವರಿ ಸಹಾಯಸಿಂದ ಉತ್ಪನ್ನವನ್ನು ಹೆಚ್ಚಿಸಬಹುದೆಂದು ಗೊತ್ತಾಗಿದೆ. ಮಧ್ಯ ಪ್ರದೇಶ, ಹೈದರಾಬಾದ್ ಮತ್ತು ಮುಂಬೈ ರಾಜ್ಯದ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಬೆಳೆಗಳ ಪರಿವರ್ತನ ಪದ್ಧತಿಯಲ್ಲಿ ಹತ್ತಿಯನ್ನು ಬೆಳೆಯುವುದಕ್ಕೆ ಪೂರ್ವದಲ್ಲಿ ಕಡಲೆ ಕಾಯಿಯನ್ನು ಬೆಳೆದಿದ್ದರಿಂದ ಹತ್ತಿಯ ಉತ್ಪನ್ನವು ಸಾರಕ್ಕೆ ೧೫೫ ರಿಂದ ೨೦೦ ವರೆಗೂ ಹೆಚ್ಚಾಗಿದೆ. ಹೀಗೆ ಉತ್ಪನ್ನವನ್ನು ಹೆಚ್ಚಿಸುವ ಬಗ್ಗೆ ಪರಿಶೀಲನೆಯನ್ನು ನಡೆಸಿದಂತೆ, ಸಸ್ಯಗಳಿಗೆ ಬರುವ ರೋಗಗಳನ್ನೂ ಅವುಗಳ ನಿರ್ಮೂಲಕ್ಕೆ ತಕ್ಕ ಪರಿಹಾರವನ್ನೂ ಕಂಡು ಹಿಡಿಯಲು ಅಧ್ಯಯನಗಳನ್ನು ನಡೆಸಲಾಯಿತು. ಅಧಿಕವಾಗಿ ಹತ್ತಿಯನ್ನು ಬೆಳೆಯುವ ಬಗ್ಗೆ ನಡೆಸಿದ ಸಂಶೋಧನೆಗಳ ಫಲಿತಾಂಶದಂತೆ ಕೇವಲ ಸೀರಾವರಿಯಾದ ಪ್ರದೇಶಗಳನ್ನುಳಿದು ಇತರ ಕಡೆಗಳಲ್ಲಿ ತೃಪ್ತಿಕರವಾಗಿ ಕಂಡುಬಂದಿಲ್ಲ.

ಬೆಳೆಗಾರರಿಗೆ, ವ್ಯಾಪಾರಸ್ಥರಿಗೆ ಮತ್ತು ಕೈಗಾರಿಕೆಗೆ ಹತ್ತಿಯ ಉತ್ಪನ್ನ, ಬೇಡಿಕೆ ಮತ್ತು ಹಂಚಿಕೆಯ ಬಗ್ಗೆ ನಂಬಲರ್ಹವಾದ ಅಂಕಿ ಸಂಖೆಗಳನ್ನು ಒದಗಿಸುವುದು ಅತ್ಯಂತ ಮುಖ್ಯವಾದ ವಿಷಯವಾಗಿದೆ. ಈ ಅಂಕಿ ಸಂಖ್ಯೆಗಳ ಶೇಖರಣೆಯನ್ನು ವಿಷಯದಲ್ಲಿ ಕೇಂದ್ರ ಹತ್ತಿ ಸಮಿತಿಯು ಆಸಕ್ತಿವಹಿಸಿ ಭಾರತೀಯ ಹತ್ತಿಯ ಬಗ್ಗೆ ಉಪಯುಕ್ತವಾದ ಪ್ರಕಟಣೆಗಳನ್ನು ಹೊರಡಿಸುತ್ತದೆ. ವಾರ್ಷಿಕ ಉತ್ಪನ್ನದ ಬಗ್ಗೆ ಸಮೀಕ್ಷೆಗಳನ್ನು ಪ್ರತಿ ವರ್ಷವೂ ಮುಂಬೈ ಮಧ್ಯ ಪ್ರದೇಶ ಮತ್ತು ಪಂಜಾಬ್ ರಾಜ್ಯಗಳಲ್ಲಿ ನಡೆಸಲಾಗುತ್ತಿದೆ.

ವ್ಯಾಧಮಿಕವಾಗಿ ಹತ್ತಿಯ ಮಾರಾಟದ ಅಭಿವೃದ್ಧಿಯ ಬಗ್ಗೆ ಗಮನ ಕೊಡಲಾಯಿತು. ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಹತ್ತಿ ಬೆಳೆಯುವ ಕ್ಷೇತ್ರಗಳಲ್ಲಿ ಪರಿಶೀಲನೆ ನಡೆಸಿ ಹತ್ತಿಯ ಬೆಳೆಯ ಬಗ್ಗೆ ಆರ್ಥಿಕ ಸಹಾಯ ಮತ್ತು ಮಾರಾಟದ ವಿಷಯಗಳಲ್ಲಿ ಅತ್ಯುಪಯುಕ್ತವಾದ ಅಂಶಗಳನ್ನು ಸಂಗ್ರಹಿಸಲಾಯಿತು. ಈ ಪರಿಶೀಲನೆಗಳ ಪರಿಣಾಮವಾಗಿ, ಮುಂಬೈ, ಮಧ್ಯ ಪ್ರದೇಶ, ಪಂಜಾಬ್, ಹೈದರಾಬಾದ್, ಬರೋಡಾ, ಇಂದೂರ್, ಮತ್ತಿತರ ರಾಜ್ಯಗಳಲ್ಲಿ ನಿಯಮ ಬದ್ಧವಾದ ಮಾರು ಕಟ್ಟೆಗಳ ಸ್ಥಾಪನೆಯ ವಿಷಯದಲ್ಲಿ ಶಾಸನಗಳನ್ನು ಮಾಡಲಾಯಿತು. ಉತ್ತಮ ವಿಧದ ಹತ್ತಿಯ ಪರಿಶುದ್ಧತೆಯನ್ನು ಉಳಿಸಿಕೊಂಡು ಹೋಗಲು ಅನುಕೂಲವಾಗುವಂತೆ ಅನೇಕ ರಾಜ್ಯಗಳಲ್ಲಿ ಅವಶ್ಯಕ ಶಾಸನಗಳನ್ನು ಜಾರಿಗೆ ತರಲಾಯಿತು. ೧೯೫೫ರಲ್ಲಿ ಹತ್ತಿಯ ಬೀಜ ಬಿಡಿಸುವಿಕೆ ಮತ್ತು ಅಡಕೆಗೆ ಕಾರ್ಖಾನೆಗಳ ಶಾಸನವು ಹತ್ತಿ ಬೆಳೆಯುವ ಎಲ್ಲಾ ರಾಜ್ಯಗಳಲ್ಲಿಯೂ ಜಾರಿಗೆ ಬಂದಿತು. ಆ ನೀತಿ ವ್ಯಾಪಾರವನ್ನು ಈ ಶಾಸನದ ಮೂಲಕ ತಡೆಗಟ್ಟಲಾಯಿತು

೧೯೫೬ರಲ್ಲಿ ರಾಷ್ಟ್ರಗಳ ವಿಭಜನಾ ನಂತರ ಮಧ್ಯಮ ಮತ್ತು ಉದ್ದನೆಯ ತಂತುವಿನ ಹತ್ತಿಯ ಸರಬರಾಜಿನ ವಿಷಯದಲ್ಲಿ ಧಕ್ಕೆಯುಂಟಾಯಿತು. ೧೦ ಲಕ್ಷ ಬೇಲ್‌ಗಳಷ್ಟು ಈ ತರಹದ ಹತ್ತಿಯನ್ನು ಬೆಳೆಯುತ್ತಿದ್ದ ಪಶ್ಚಿಮ ಪಾಕಿಸ್ತಾನ ಮತ್ತು ಸಿಂಧ್ ರಾಜ್ಯಗಳು ಪಾಕಿಸ್ತಾನಕ್ಕೆ ವರ್ಗಾಯಿಸಲ್ಪಟ್ಟವು. ಆದುದರಿಂದ ಅತ್ಯಧಿಕ ಪ್ರಮಾಣದಲ್ಲಿ ಅಮೇರಿಕಾ, ಪೂರ್ವ ಆಫ್ರಿಕ, ಸೂಡಾನ್ ಮತ್ತು ಈಜಿಪ್ಟ್‌ಗಳಿಂದ ಹತ್ತಿಯನ್ನು ಆಮದು ಮಾಡಿಕೊಳ್ಳಬೇಕಾಯಿತು. ಏಂದರೆ ಈ ಆಮದಿನಿಂದ ಭಾರತದ ವಿದೇಶಾಂಗ ವಿನಿಮಯಕ್ಕೆ ಭಾರಿ ತೊಂದರೆ ಸಂಭವಿಸಿತು. ಆದರಲ್ಲಿಯೂ ಭಾರತೀಯ ಹಣದ ಮೌಲ್ಯದ ಬೆಲೆ ಇಳಿದಾಗಲಿಂತೂ ಪರಿಸ್ಥಿತಿ ಕಷ್ಟವಾಯಿತು. ಆದುದರಿಂದ ೧೯೫೦ - ೫೧ರಿಂದ ಭಾರತ ಸರ್ಕಾರವು ರಾಜ್ಯ ಸರ್ಕಾರಗಳ ಸಹಾಯದಿಂದ "ಹೆಚ್ಚು ಹತ್ತಿ ಬೆಳೆಯಿರಿ" ಎಂಬ ಕಾರ್ಯಕ್ರಮವನ್ನು ಜಾರಿಗೆ ತಂದಿತು. ಯುದ್ಧಕಾಲದಲ್ಲಿ ಹಾಕಲಾಗಿದ್ದ ಹತ್ತಿಯ ಬೆಳೆಯ ಬಗ್ಗೆಯೂ ಪರೀಕ್ಷೆಗಳನ್ನು ತೆಗೆದು ಅನೇಕ ವಿಧಗಳಲ್ಲಿ ಕೇಂದ್ರ ಸರ್ಕಾರವು ಸಹಾಯ ಮಾಡಿತು. ಈ ರೀತಿಯ ಪ್ರಚಾರದ ಫಲಿತಾಂಶವನ್ನು ಈ ಕೆಳಗೆ ಕಂಡ ಸಿರೂಪಣೆಯಲ್ಲಿ ಕೊಟ್ಟಿದೆ:—

ವರ್ಷ	ಒಟ್ಟು ಬೆಳೆದ ಪ್ರದೇಶಗಳು (೦೦೦ ಎಕರೆಗಳಲ್ಲಿ)	ಒಟ್ಟು ಕಚ್ಚಾ ಹತ್ತಿಯ ಉತ್ಪನ್ನ (೦೦೦ ಬೇಲುಗಳಲ್ಲಿ)
1949—50	12,173	2,623
1950—51	14,536	2,910
1951—52	16,201	3,133
1952—53	15,693	3,131
1953—54	17,027	3,925

ಇತ್ತೀಚಿನ ವ್ಯಾಪಾರೀ ಅಂದಾಜುಗಳ ಪ್ರಕಾರ ೧೯೫೫—೫೬ರಲ್ಲಿ ೪೫ ಲಕ್ಷ ಬೇಲುಗಳಷ್ಟು ಹತ್ತಿಯನ್ನು ಬೆಳೆಯಲಾಗಿದೆ. ಈ ಅಂದಾಜು ಬೆಳೆಯು ಯೋಜನಾ ಆಯೋಗವು ಗುರಿಯಿಟ್ಟಿದ್ದ ೧೯೫೬—೫೭ರ ಅವಧಿಗೆ ಮುಂಚಿತವಾಗಿಯೇ ೧೯೫೫—೫೬ರಲ್ಲಿ, ಉತ್ಪನ್ನದ ಗುರಿಯನ್ನು ಮುಟ್ಟಿದೆ

ಅಮೆರಿಕನ್ ತರಹದ ಹತ್ತಿಯನ್ನು ೧೯೫೯—೬೦ರಲ್ಲಿ ಲಕ್ಷ೦,೦೦೦ ಎಕರೆಗಳಲ್ಲಿ ಬೆಳೆದದ್ದು ೧೯೫೫—೫೬ರಲ್ಲಿ ೫,೪೭,೦೦೦ ಎಕರೆಗಳಿಗೆ ಏರಿತು. ೧೯೫೯—೬೦ರಲ್ಲಿ ೩೪೫,೦೦೦ ಬೇಲುಗಳಷ್ಟು ಹತ್ತಿ ಬೆಳೆದದ್ದು ೧೯೫೫—೫೬ರಲ್ಲಿ ೯೨೦,೦೦೦ ಬೇಲುಗಳಿಗೆ ಏರಿತು. ಹೆಚ್ಚಿನ ಉತ್ಪನ್ನದ ಪರಿಣಾಮವಾಗಿ ಭಾರತಕ್ಕೆ ೧೯೫೫—೫೬ರಲ್ಲಿ ಆಮದಾದ ಹತ್ತಿಯ ಪ್ರಮಾಣವು ಇಳಿಯಿತು. ಹತ್ತಿಯ ಆವಶ್ಯಕತೆಯ ಇಳುವರಿಯ ನಿರೂಪಣೆ ಈ ರೀತಿ ಇದೆ: —

ಜನವರಿ 1ರಿಂದ ಡಿಸೆಂಬರ್ 31ರ ವರೆಗೆ	ಒಟ್ಟು ಕಚ್ಚಾ ಹತ್ತಿಯ ಉಪಯೋಗ 392 ಪೌಂಡು ಗಳ ಬೇಲುಗಳಲ್ಲಿ (೦೦೦ ಬೇಲುಗಳಲ್ಲಿ)
1949—50	923
1950—51	919
1951—52	1,227
1952—53	1,217
1953—54	750

ಭಾರತೀಯ ಗಿರಣಿಗಳಲ್ಲಿ ವಿದೇಶೀಯ ಮತ್ತು ಭಾರತೀಯ ಉಪಯೋಗದ ಪ್ರತಿ ಬಾಬುವ ಈ ಕೆಳಗೆ ಕಂಡ ನಿರೂಪಣೆಯಲ್ಲಿದೆ:—

ವರ್ಷ	ವಿದೇಶೀಯ ಹತ್ತಿ	ಭಾರತೀಯ ಹತ್ತಿ
1950—51	1,105	2,517
1951—52	1,084	2,987
1952—53	849	3,611

"ಹೆಚ್ಚು ಹತ್ತಿಯನ್ನು ಬೆಳೆಯಿರಿ" ಎಂಬ ಪ್ರಚಾರವ ಅಲ್ಪಾವಧಿ ಗುರಿಯನ್ನು ಪೂರ್ಣವಾಗಿ ಮುಟ್ಟಲಾಗಿದೆ. ತಲಾ ಒಬ್ಬರಿಗೆ ಹೆಚ್ಚಿನ ಬಟ್ಟೆಯನ್ನು ಒದಗಿಸುವುದಕ್ಕಾಗಿ ಹತ್ತಿಯ ಆಧಿಕೋತ್ಪನ್ನದ ದೀರ್ಘಾವಧಿಯ ಗುರಿಯನ್ನು ಮುಟ್ಟಲಾಗಿದೆ. ಪಂಜಾಬ್ ಉತ್ತರ ಪ್ರದೇಶ, ಮುಂಬೈ, ಹೈದರಾಬಾದ್ ಮತ್ತು ಮಧ್ಯ ಪ್ರದೇಶಗಳಲ್ಲಿನ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಪೂರೈಸಿದ ನಂತರ ಇನ್ನೂ ಹೆಚ್ಚಿನ ಉತ್ಪನ್ನವು ಸಾಧ್ಯವಾಗುವುದು. ಆತಿ ಉದ್ದ ತರಹದ ಹತ್ತಿಯನ್ನು ಬೆಳೆಯುವ ಬಗ್ಗೆ ರಾಷ್ಟ್ರೀಯ ಹತ್ತಿಯ ವೈಜ್ಞಾನಿಕರ ಸಂಶೋಧನೆಯು ಫಲಿತಾಂಶವನ್ನು ಕಾಯಬೇಕಾಗುವುದು. ಈ ವಿಷಯದಲ್ಲಿ ಕೇಂದ್ರ ಸರ್ಕಾರವೂ, ರಾಜ್ಯ ಸರ್ಕಾರಗಳೂ, ಕೇಂದ್ರ ಸಮಿತಿಯೂ ನೈಜ್ಞಾನಿಕರಿಗೆ ಸರ್ವವಿಧದಲ್ಲಿಯೂ ಸಹಾಯವನ್ನು ಕೊಡಲು ಏರ್ಪಾಡು ಮಾಡಿದ್ದಾರೆ ಇವರು ತಮ್ಮ ಅಂತಿಮ ಗುರಿಯನ್ನು ಮುಟ್ಟಲೆಂದು ನಾವೆಲ್ಲರೂ ಹಾರೈಸೋಣ! ಹೀಗೆ ಗುರಿ ಮುಟ್ಟಿ ಭಾರತವು ಉದ್ದನೆಯ ಹತ್ತಿಯ ವಿಷಯದಲ್ಲಿ ಸ್ವಯಂ ಪೂರ್ಣತೆಯನ್ನು ಪಡೆಯಲು ಸಹಾಯವಾಗಲಿ.

— ಕೆ. ಡಿ. ಸಹಾನಿ

ಮೂಲ್ಕಿ ಬ್ಯಾಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿವೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಆತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

ವಿವಿಧ ಪಾತ್ರೆಗಳು



ಯಾವಪ್ಪೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಬಿಂಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತಿವೆ.

ಕಲ್ಕಂಜೆ ವ್ಯಾಸಾಚಾರ್ಯರ
ಪಾತ್ರೆ ಭಂಡಾರ,
ರಥಬೀದಿ ಉಡುಪಿ.

ಯಂ. ಗಣಪಯ್ಯ ಎಂಡ್ ಸನ್ಸ್
ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು ಇವರ
ಅಶೋಕಾರಿಷ್ಟ ಮತ್ತು ನಾತ್ರೆ—ಮಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಅಕಾಲ ಬಹಿಷ್ಪೈ, ಋತುಸ್ರಾವವು ಜಾಸ್ತಿಯಾಗಿಯೂ, ಕಡಿಮೆಯಾಗಿಯೂ ಹೋಗುವುದು, ಬಿಳಿಸೆರಗು, ಸಂತಾನ ಹೀನತೆ, ರಕ್ತ ಹೀನತೆ ಮುಟುಕೂಲೆ, ಮೊಸಲಾಡ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು. ಒಂದಕ್ಕೆ 1c ರೂ. 3-8-0.
ಗರ್ಭ ರಕ್ಷಕ—ಗರ್ಭಿಣಿಯರಿಗೆ ಅತ್ಯಂತ ಫಲಕಾರಿಯಾದ ಔಷಧಿ. ಚಟಜೋಷ, ಗರ್ಭಪತನವಾಗುವಿಕೆ, ವಾಂತಿ, ಆರುಚಿ, ಅರಳ್ತೆ, ಮಲಬದ್ಧತೆ, ವಾಯು ಉಪದ್ರವ, ಕೈ ಕಾಲುಬಚ್ಚುವುದು ಇವುಗಳನ್ನೆಲ್ಲಾ ಹೋಗಲಾಡಿಸುವುದು. ಬಾಟ್ಲಿ 1ರ ರೂ. 3-8-0.
ಇವಲ್ಲದೆ ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆದಿರಿ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ, ರೋಗಕ್ಕೆ ತಕ್ಕ ಔಷಧಿಯನ್ನು ರವಾನಿಸಬಹುದು.



(ಎನೇ ಪುಟದಿಂದ)

ರಲ್ಲಿ ಸೇರಿಸಿದರೆ, ಉತ್ಪಾದಿತ ಸರಕುಗಳ ಯೋಗ್ಯತೆ ಕಡಿಮೆ ಯಾಗಬಹುದು; ಜನರಿಗೆ ಪ್ರಯೋಜನವಾಗಲೆಂದು, ಕೃಷಿ ಉತ್ಪನ್ನಗಳ ಬೆಲೆ ಇಳಿಯಗೊಟ್ಟರೆ, ರೈತರ ಉತ್ಸಾಹಭಂಗವಾಗಿ, ಅಧಿಕ ಉತ್ಪಾದನೆಯು ನಿಂತು ಹೋಗಬಹುದು

ಆದುದರಿಂದ ಶೀಘ್ರ ಫಲವನ್ನು ಪಡೆಯುವುದಕ್ಕೋಸ್ಕರ ಆವಸರಿಶುವುದಕ್ಕಿಂತಲೂ ಸಮತೂಕದ ದೃಷ್ಟಿಯಿಂದ ಸಮಸ್ಯೆಯ ವಿಶ್ಲೇಷಣೆಯನ್ನು ಮಾಡುವುದು ವಿಹಿತವೆಂದು ಹೇಳುವಪಥಾನದಲ್ಲಿ ತಪ್ಪಾದುದೇನೂ ಇಲ್ಲ. ಭಾರತ ಸರಕಾರವು ಇಷ್ಟರ ವರೆಗೆ ಅನುಸರಿಸಿಕೊಂಡು ಬಂದ, ಮತ್ತು ಮುಂದೆ ಅನುಸರಿಸಲು ಬಯಸುವ ಧೋರಣೆಯು ಸಮತೂಕವನ್ನು ಕಳೆದು ಕೊಂಡಿಲ್ಲ. ಇಲ್ಲಿ ನಾವು ಏಳು ವರ್ಷಗಳ ಆಲ್ಪಾವಧಿಯಲ್ಲಿ ಸಾಧಿಸಿದುದನ್ನು ಇಂದಿನ ರತಿಯದೊಜನಲ್ಲಿ—೧೯೫೫ರ ರತಿಯದೊಡನೆ ಅಥವಾ ಈಗಿನ ಚೀನ ದೊಡನೆ ಹೋಲಿಸಬೇಕು. ಆಗ ಅಲ್ಪಾವಧಿಯಲ್ಲಿ ನಾವು ಕೈಗೂಡಿಸಿದ ಕೆಲಸಗಳ ಬಗ್ಗೆ ಅಭಿಮಾನವಾಗುವುದು ನಿಶ್ಚಯ. ಚೀನಕ್ಕಿಂತಲೂ ಭಾರತವು ಕೈಗಾರಿಕೆಗಳಲ್ಲಿ ಬಹಳ ಮುಂದುವರಿದಿದೆ; ನಿರುದ್ಯೋಗದ ಸಮಸ್ಯೆ ಚೀನದಲ್ಲೂ ಮಾಯವಾಗಿಲ್ಲ—ಮುಂದಿನ ೫೫ ವರ್ಷಗಳಲ್ಲಿ ರಾಷ್ಟ್ರದ ಮಟ್ಟವನ್ನು ಗಣನೀಯವಾಗಿ ಏರಿಸಬೇಕೆಂಬ ಪ್ರಯತ್ನ ಅವರದು. ರತಿಯವಾದರೂ ೪೦ ವರ್ಷಗಳ ದೀರ್ಘ ಸಾಹಸದಿಂದ ಇಂದಿನ ಜೀವನ ಮಟ್ಟವನ್ನು ದೊರಕಿಸಿಕೊಂಡಿತು. ಭಾರತ ಸರಕಾರದವರು ಸಹ ದೀರ್ಘಾವಧಿಯ ಯೋಜನೆಗಳ ಮೂಲಕ ರಾಷ್ಟ್ರೀಯ ಸಂಪತ್ತನ್ನು ಹೆಚ್ಚಿಸಲು ನೋಡುತ್ತಿದ್ದು, ಮಾರ್ಗದಲ್ಲಿ ಬರಬಯುದಾದ ತೊಂದರೆಗಳು -ವ್ಯಾವಹಾರಿಕವಾಗಿರಲಿ, ತಾತ್ವಿಕವಾಗಿರಲಿ— ನಿವಾರಿಸ್ಸಲ್ಪಡುವಂತೆ ನೋಡಲು ಹಿಂಜರಿದಿಲ್ಲ. ಪ್ರಧಾನ ಮಂತ್ರಿಗಳಿಂದ ಮೊನ್ನೆತಾನೆ ಮಂಡಿಸಲಾದ ರಾಜ್ಯಾಂಗ ಘಟನೆಗೆ ತಿದ್ದುಪಡಿ ಮಾಡುವ ಸೂಚನೆಯೇ ಇದಕ್ಕೆ ನಿದರ್ಶನ.

ಭವಿಷ್ಯದ ಭಾರತದಲ್ಲಿ ಸಾರ್ವಜನಿಕ ರಂಗವು ಮಹತ್ವದ ಪಾತ್ರವನ್ನು ವಹಿಸುವುದು ಸ್ಪಷ್ಟವಾಗಿದೆಯಲ್ಲದೆ ಈಗಿನ ಬಂಧನದಿಂದ ಜನರಬಿಡುಗಡೆಯಾಗಬೇಕೆನ್ನುವ ತತ್ವವೂ ಮನ್ನಣೆಪಡೆದಿರುತ್ತದೆ. ಘಟನೆಗೆ ತಂದಿರುವತಿದ್ದುಪಡಿ ಇದನ್ನೆ ವ್ಯಕ್ತಗೊಳಿಸುತ್ತದೆ. ನ್ಯಾಯಾಲಯಗಳು ಸಾಮಾಜಿಕ ಪುರೋಗತಿಗೆ ಆತಂಕವನ್ನು ಮಾಡುವುದಕ್ಕೆ ಈ ತಿದ್ದುಪಡಿಗಳು ಇನ್ನು ಮುಂದೆ ಬಿಡುವುದಿಲ್ಲ. ನಿಶ್ಚಿತ ಸ್ವಪಾಣಕ್ಕಿಂತ ಹೆಚ್ಚಿದ್ದ ಭೂಮಿಯನ್ನು ಭೂಮಿಇಲ್ಲದ ರೈತರಿಗೆ ಹಂಚಲು ಸರಕಾರ ವಶಪಡಿಸಿಕೊಂಡರೆ, ಭೂಮಾಲಿಕನು ಇನ್ನು ನುಂದೆ ದೂರು ಕೊಳ್ಳಲಾರ; ತನಗೆ ಪರಿಹಾರವೇನಾದರೂ ದೊರೆತಿದ್ದರೆ, ಅದರ ಪ್ರಮಾಣ ಕಡಿಮೆಯಾಯಿತೆಂದು ಆಕ್ಷೇಪಿಸಲೂ ಸಾಧ್ಯನಿಲ್ಲ ಅವಶ್ಯಕತೆಗಿಂತ ಹೆಚ್ಚು ಇಟ್ಟುಕೊಳ್ಳುವುದೇ ತಪ್ಪು— ಎಂಬ ನೈತಿಕ ಭಾವನೆಯನ್ನು ಸಮಾಜವಾದದ ತತ್ವಗಳು ಪೋಷಿಸುತ್ತವೆ ಇದೇ ಈಗಿನ ಯುಗಧರ್ಮ. ಭಾರತ ಸರಕಾರ ಘಟನೆಗೆ ತಂದ ಈಗಿನ ತಿದ್ದುಪಡಿ ಮಸೂದೆಯಿಂದ ಮತ್ತು ಇಂಪೀರಿಯಲ್ ಬೇಂಕನ್ನು ಸಂಸ್ಥಾನಗಳ ಬೇಂಕನ್ನು ಪರಸ್ಪರ ವಿಲೀನಗೊಳಿಸಿ ಸರಕಾರದ ನಿಯಂತ್ರಣದಲ್ಲಿ ಕೊಸತೊಂದು ಸ್ಟೇಟ್ ಬೇಂಕನ್ನು ಸ್ಥಾಪಿಸಲು ನಿರ್ಧರಿಸಿದುದರಿಂದ ಪ್ರಗತಿಯ ಹೆಜ್ಜೆಗಳನ್ನು ದ್ರುತಗತಿಯಿಂದ ಇಡುವುದು ಸಾಧ್ಯವಾದೀತು.

ರಾಷ್ಟ್ರೀಕರಣಕ್ಕೆ ಮೇಲಿನ ಕ್ರಮಗಳಿಂದ ದೊರೆತ ನೆರವು ಅಗಾಧವಾಗಿದ್ದರೂ ಆರ್ಥಿಕ ಘೋರಣೆಯ ಚರ್ಚೆಯಲ್ಲಿ ಅವುಗಳ ಪ್ರಸ್ತಾಪನವನ್ನೆ ಪ್ರತಿಪಕ್ಷದವರು ಮಾಡದುದು ಶೋಚನೀಯ - ಯಾವ ಕೆಲಸಗಳನ್ನು ಸರಕಾರ ಮಾಡಲಿಲ್ಲವೆಂದು ತಾವು ಇಷ್ಟರ ವರೆಗೆ ದೂರುತ್ತಿದ್ದರೋ ಅದನ್ನು ಮಾಡಿದುದಕ್ಕೆ ಸರಕಾರವನ್ನು ಅವರು ಅಭಿನಂದಿಸಲಿಲ್ಲ. ಬಹುಶಃ ಇನ್ನು ಮುಂದೆ ಸರಕಾರದ ಮೇಲೆ ಪ್ರಯೋಗಿಸಲು ತಮಗೊಂದು ಆಕ್ಷೇಪ ಸ್ವರೂಪದ ಪ್ರಬಲಾಯುಧ ತಪ್ಪಿತೆಂದು ಅವರು ಎಣಿಸುತಿದ್ದಾರು! ಅದು ಹೇಗೆಯೇ ಇರಲಿ— ಸರಕಾರ ಕರ್ತವ್ಯ ಭಾವನೆಯಿಂದಲೇ ತನ್ನ ಕೆಲಸವನ್ನು ನಡೆಸುತ್ತಿದೆ; ಯಾರೂ ಹೊಗಳಲ್ಲಿಲ್ಲವೆಂದು ಅದು ಕಾರ್ಯಕ್ರಮವನ್ನು ಬಿಟ್ಟು ಕೊಡಲಾರದು ರಾಜಕೀಯ ಉದ್ದೇಶಗಳಲ್ಲ— ರಾಷ್ಟ್ರದ ಕಲ್ಯಾಣ ಸರಕಾರದ ಲಕ್ಷ್ಯವಾಗಿದ್ದರೆ ವಿರೋಧಪಕರ ಉಪೇಕ್ಷೆಯಿಂದ ಅದು ನೊಂದುಕೊಳ್ಳಬೇಕಾದ ಪ್ರಮೇಯವಿಲ್ಲ ಜನತೆಯು ವಿಶ್ವಾಸವನ್ನೇ ಅದು ಆಶ್ರಯಿಸುವುದು ಹಿತಕರ. ಅಭಿವೃದ್ಧಿ ಪ್ರಯತ್ನಗಳಲ್ಲಿ ಜನರು ತೋರಿಸುವ ಉತ್ಸಾಹವೂ ಸಂಪತ್ತನ್ನು ಹೆಚ್ಚಿಸುವುದಕ್ಕೆ ಸಿದ್ಧರಾಗಿ ಮಾಡುವ ತ್ಯಾಗವೂ ಎಷ್ಟು ಹೆಚ್ಚಾಯಿತೋ ಸರಕಾರದ ಕೆಲಸ ಆಷ್ಟರ ಮಟ್ಟಿಗೆ ಯಶಸ್ಸುಗಳಿಸುತ್ತದೆ. ಹಾಗೆ ಜನರ ಮನವೊಲಿಸುವುದು ತನ್ನಿಂದಾದೀತೇ, ಆ ಸಾಹಸ ನೆರವೇರೀತೇ ಎಂಬುದರ ಮೇಲೆ ಸರಕಾರದ ಪ್ರತಿಷ್ಠೆ ನಿಂತಿರುತ್ತದೆ. ಸರಕಾರ ನಡೆಸುವ ಕಾಂಗ್ರೆಸು ಪಕ್ಷ ವಿರೋಧಕರ ಪರಿಹಾಸ್ಯಕ್ಕೆ ಗುರಿಯಾಗದಂತೆ ವರ್ತಿಸುವ ಅವಶ್ಯಕತೆ ಇಲ್ಲಿ ಹೆಚ್ಚಾಗಿರುತ್ತದೆ.

—ಕಾರ್ತಿಕೇಯ.

(೧೦ನೇ ಪುಟದಿಂದ)

ಪ್ಪದೆ ಕಾನ್ಯದ ಅನುವಾದವು ಇನ್ನಷ್ಟು ತೊಡಕಿನದೆಂದೂ ನೆನೆದರೆ, ಎಲ್ಲ ಅಡಚಣೆಗಳನ್ನು ಪರಿಹರಿಸಿಕೊಂಡು ಮೂಲ ಬಂಗಾಲಿಗೆ ಸ್ವಲ್ಪವೂ ಅನ್ಯಾಯವಾಗದಂತೆ ಮತ್ತು ಕನ್ನಡದ ವೈಶಿಷ್ಟ್ಯಕ್ಕೆ ಭಂಗ ಒದಗದಂತೆ ಮಾಡಲ್ಪಟ್ಟ ಈ ಅನುವಾದ ಕನ್ನಡ ಸಾಹಿತ್ಯಕ್ಕೆ ಚಿರಸ್ಮರಣೀಯ ವಾದ ಕಾಣಿಕೆಎಂದು ತಿಳಿದು ಬರುವುದು. ನರೇಗಲ್ಲರಿಂದಲೇ ಅನುವಾದಿಸಲ್ಪಟ್ಟು ಮೊದಲೇ ಪ್ರಕಟಿಸಲಾಗಿರುವ ಪ್ರಸ್ತುತ ಭಾಗದಿಂದ ಮನತಣಿದವರಿಗೆ ಈ ದ್ವಿತೀಯ ಭಾಗವು ಸಂಪೂರ್ಣ ತೃಪ್ತಿಯನ್ನು ನೀಡುವುದು ನಿಶ್ಚಯ.

ನವ್ಯ ಸಾಹಿತ್ಯ ನಿರ್ಮಾಣ—

ಪ್ರಕಾಶಕರು: ಕಾವ್ಯಾಲಯ, ಮೈಸೂರು ಬೆಲೆ: ನಾಲ್ಕಾಣೆ.

ಅಖಿಲಭಾರತ ಆಕಾಶವಾಣಿಯ ಮೈಸೂರು ಕೇಂದ್ರವು ಕಳೆದ ಆಗೋಸ್ತು ಹದಿನೈದರಂದು ಏರ್ಪಡಿಸಿದ್ದ "ನವ್ಯ ಸಾಹಿತ್ಯ ನಿರ್ಮಾಣ" ಎಂಬ ಭಾಷಣ ಮಾಲೆಯಲ್ಲಿ ಶ್ರೀಗಳಾದ ಡಿ. ವಿ. ಗುಂಡಪ್ಪ, ಶಿವರಾಮ ಕಾರಂತ, ಅ. ನ. ಕೃಷ್ಣರಾಯ, ಸುಬ್ರಹ್ಮಣ್ಯ ವೆಂಕಟೇಶ ಅಯ್ಯಂಗಾರ್, ವಿ. ಸೀತಾರಾಮಯ್ಯ ಮತ್ತು ಕೆ. ವಿ. ಪುಟ್ಟಪ್ಪನವರು ಭಾಗವಹಿಸಿದ್ದರು. ಶ್ರೀ ಜೆ. ಪಿ. ರಾಜರತ್ನಂ ಕಾರ್ಯಕ್ರಮದ ನಿರ್ವೀಕ್ಷಣವನ್ನು ಕೈಗೊಂಡಿದ್ದರು. ಹೀಗೆ ಒಂದು ತಾಸಿನ ವರೆಗೆ ನಡೆದ ಭಾಷಣಗಳನ್ನು ಕಾವ್ಯಾಲಯದವರು ಈ ಸುಸ್ತಕ ರೂಪದಲ್ಲಿ ಪ್ರಕಾಶಿಸಿದ್ದು ಕನ್ನಡ ಸಾಹಿತ್ಯದ ನವ ನಿರ್ಮಾಣವನ್ನು ಕುರಿತು ಆಸಕ್ತಿ ತೋರಿಸುವವರಿಗೆ, "ಸಾರ್ಥಕವಾದ ಬದುಕಿಗೆ ಸಂಬಂಧಿಸಿದ ಸಾಹಿತ್ಯ"ವನ್ನು ಕುರಿತು ಉತ್ಸುಕತೆ ವ್ಯಕ್ತಪಡಿಸುವವರಿಗೆ ಇಲ್ಲಿ ಸಮಾಧಾನಕರವಾದ ಹಲವು ಅಭಿಪ್ರಾಯಗಳೂ ಸಲಹೆಗಳೂ ಸೂಚನೆಗಳೂ ಸಿಗುತ್ತವೆ. ಪುಸ್ತಕದ ಬೆಲೆ ಸಾಲ್ಕಾಣೆಯಾದರೂ ಇಲ್ಲಿನ ವಿಷಯ ಸಂಪತ್ತಿನ ಮೌಲ್ಯ ಇದಕ್ಕಿಂತ ಬಹಳ ಪಟ್ಟಿಜಿಯೆಂಬುದು ಒಮ್ಮೆ ಓದಿದರೆ, ಓದಿಕೊಂಡು ಭಾಷಣಕಾರರ ಮಾತುಗಳನ್ನು ಜೀರ್ಣಿಸಿಕೊಂಡರೆ ಖಚಿತವಾಗುತ್ತದೆ. "ರಾಷ್ಟ್ರ ಸ್ವಾತಂತ್ರ್ಯ ನುತ್ತ ಕಾವ್ಯ ಸೃಷ್ಟಿ"ಯ ಕುರಿತು ಮಾತನಾಡಿದ ಗುಂಡಪ್ಪನವರು "ಈಗ ಆಗಬೇಕಾದದ್ದು ಮನೋರಂಜನೆ ಮಾತ್ರವಲ್ಲ, ನವ ದೃಷ್ಟಿಯ ಒಂದು ಹೊಸ ವಿಶ್ವದರ್ಶನ, ಒಂದು ಹೊಸ ಜೀವಿತಾರ್ಥ ದೃಷ್ಟಿಕೋನ, ಒಂದು ಹೊಸ ಇತಿಹಾಸ ಸಮಸ್ಯೆಯಾದರ್ಶ—ಇದನ್ನು ದೊರಕಿಸಬಲ್ಲ ಉದ್ದಾರಕ ಕಾವ್ಯ" ಎಂದು ಹೇಳಿದರೆ "ಸಾಹಿತ್ಯ ಮತ್ತು ರೋಸಕಾಂತಿ"ಯ ಕುರಿತು ಮಾತನಾಡಿದ ವಿ. ಸೀ.ಯವರು "ದ್ವೇಷ ಬೇಡ ಎಂದ ದೇಶ ನಮ್ಮದು. ಇಂದಿನ ಆತಂಕಕಾರಿ ಆಗಬೇಕಾದಲ್ಲಿ ಪುನಃ: ಈ ಆದರ್ಶ, ಧರ್ಮ ಪಕ್ಷಪಾತ ಗಮ್ಮ ಕೃತಿಗಳಲ್ಲಿ ಬೆಳೆಯಬಲ್ಲವಾದರೆ ನಮ್ಮ ಧರ್ಮ ಸಂಪ್ರದಾಯ ಚರಿತಾರ್ಥವಾದೀತು" ಎಂದು ನುಡಿದರು. ಪುಟ್ಟಪ್ಪನವರು ಸಮಸ್ಯೆಯ, ಸಮೋದಯ ಮತ್ತು ಪೂರ್ಣ ದೃಷ್ಟಿಯನ್ನು ನವ್ಯ ಸಾಹಿತ್ಯದಲ್ಲಿ ಆಳವಡಿಸಿಕೊಳ್ಳುವ ದಿನ ಬಹಳ ದೂರವಿಲ್ಲ ಎಂದು ಸಾರಿದರು. ಮೇಲಿನವರ ಮಾತುಗಳೊಂದಿಗೆ ಕನ್ನಡದ ಬೆಳವಣಿಗೆಯನ್ನು ನೋಡಿದರೆ ಅಲ್ಲಿ ಅಭಿಪ್ರಾಯ ಭೇದ ಎದ್ದು ಕಾಣುತ್ತದೆ— ಕಾರಂತರು ಹೊಸಸಾಹಿತ್ಯದ ದೊಡಗಳು ನಮ್ಮಲ್ಲಿ ಸಾಕಷ್ಟು ಪ್ರಚಾರಕ್ಕೆ ಬಂದಿದ್ದರೂ ನಮ್ಮ ನೋಟದಲ್ಲಿ, ಅನುಭವದಲ್ಲಿ, ಬಾಳ್ವೆಯಲ್ಲಿ ನಾವು ಇದಿರಿಸುತ್ತಿರುವ ಸಂಘರ್ಷಣೆಯಲ್ಲಿ ಆ ಹೊಸತನ ಬೇರುಬಿಟ್ಟಿಲ್ಲ; ವಾಶ್ಚಾತ್ಯ ಕ್ರಮಗಳ ಮೇಲಿನ ಕೃತಕ ಅನುರಕ್ತಿಯೇ ಪ್ರೇರಕ ಶಕ್ತಿಯಾಗಿ ನಿಂತಂತೆ ಕಾಣುತ್ತದೆ ನಿಂದು ಆನಂತೋಷ ಗೊಂಡರೆ, ಇತರರದ ಇತರ ಭಾಷೆಗಳಲ್ಲಿ ನಿರ್ಮಾಣ ವಾಗುತ್ತಿರುವ ಕಾದಂಬರಿಗಳಿಗಿಂತ ಕನ್ನಡದ ಕಾದಂಬರಿಗಳು ಉತ್ಕೃಷ್ಟವಾಗಿರುವನಲ್ಲದೆ, ರಷ್ಯಾ, ಅಮೇರಿಕಾ, ಫ್ರಾನ್ಸ್, ಇಂಗ್ಲೆಂಡ್ ದೇಶಗಳ ಕಾದಂಬರಿಗಳೊಂದಿಗೆ ಧೈರ್ಯವಾಗಿ ಸ್ಪರ್ಧಿಸಲು ಸಿದ್ಧವಾಗಿವೆ" ಎಂದು ಆ. ನ. ಕೃ ಎಡೆಬಿಟ್ಟಿಕೊಳ್ಳುತ್ತಾರೆ. ಮಾಸ್ತಿಯವರ "ನೀರೋಗ ವಿಮರ್ಶೆ"ಯ ಬರೆಗಲ್ಲಿಗೆ ಮೇಲಿನವರೆಲ್ಲರು ಮಹಾಸೌಧವನ್ನೆ ನಿರ್ಮಿಸಿಬಿಟ್ಟರೆಂಬ ಪಕ್ಷದಲ್ಲಿ ನಾವು ಅಭಿಮಾನ ರೂಸ್ಯಾರಾಗುವುದೂ ದುರಭಿಮಾನಿಗಳಾಗುವುದೂ ಸರಿಯಲ್ಲ; ಆ ಭವಿಷ್ಯದ ಧನರಾಶಿಯಾಗುವುದೇ ಶ್ರೇಯಸ್ಕರ ಎಂದು ತಿಳಿಯುತ್ತದೆ. "ಜ್ಞಾಪಸಯೇ ನತು ಶಿಕ್ಷಯೇ" ಎಂಬ ದೇ ಮಾಸ್ತಿಯ ನತರ ನೀರೋಗ ವಿಮರ್ಶೆಯ ಸೂತ್ರ. "ಕವಿಯ ಭಾವಕ್ಕಿಯಲ್ಲಿ ರೂಪುಗೊಂಡಿತೇ? ಎಂದು ನೋಡಬೇಕೇ ಹೊರತು, ಅದರಲ್ಲಿ ತನ್ನ ಭಾವ ರೂಪುಗೊಂಡಿತೇ ಎಂದು ನೋಡಬಾರದು" ಎಂದವರು ವಿಮರ್ಶಕರಿಗೆ ಇಕ್ಕಿರುವ ಸಲಹೆ. ಒಟ್ಟಿನಲ್ಲಿ ಈ ಚಿಕ್ಕ ಪುಸ್ತಕ ಸಾಹಿತ್ಯಾಭ್ಯಾಸಿಗಳಿಗೆ ಪ್ರಿಯವಾದ ವಿಷಯಗಳನ್ನು ಸ್ಪಷ್ಟ ಹಾಗು ಸುಂದರವಾದ ರೀತಿಯಲ್ಲಿ ನಿರೂಪಿಸುತ್ತದೆ ಎಂದು ಹೇಳಬಹುದು.

ಕರ್ನಾಟಕದಲ್ಲೆಲ್ಲ ಜನಪ್ರಿಯವಾದ
ಅತಿ ಕಡಿಮೆ ಬೆಲೆಯ ಕೈ ಹೊತ್ತಿಗೆ—

ಗೀತೆಯ ಕೈಗನ್ನಡಿ

ಹೊಸಕೆರೆ ಚಿದಂಬರಯ್ಯನವರ
ಸರಳ ಕನ್ನಡ ಅರ್ಥಸಹಿತವಾದ
ಭಗವದ್ಗೀತೆ
ಬೆಲೆ: ೦-೮-೦
ನವಯುಗ ಪ್ರೆಸ್, ಉಡುಪಿ. ಅಥವಾ
ನವಭಾರತ ಬುಕ್ ಡಿಪೊ, ಉಡುಪಿ.

ನಿಮ್ಮಪ್ಪಕ್ಕೆ ನೀನೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ! ಶ್ರೀ. ಕೂರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

[ENGLISH MADE EASY]
ಯನ್ನು ಇಂದೇ ತರಿಸಿಕೊಳ್ಳಿರಿ.
ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ— ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)
ದೊರೆಯುವ ಸ್ಥಳಗಳು:-1) ನವಭಾರತ ಪುಸ್ತಕ ಭಂಡಾರ, ಉಡುಪಿ
2) ನವಯುಗ ಪ್ರೆಸ್, ಉಡುಪಿ, ದ ಕ

Edited, Printed & Published By K. H. Shetty at the Navayuga Press, Udipi, S. India